Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರವೇಶ ಕ್ರಮಾಂಕ Accession No. 5092 (1)
ದಿನಾಂಕ Date.......
(B)

ಮೈಸೂರು ವಿಧಾನಪರಿಷತ್ತಿನ ನಡೆವಳಿಕೆಗಳು

MYSORE LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

ಇಪ್ಪತ್ತೇಳನೆಯ ಅಧಿವೇಶನ

TWENTY-SEVENTH SESSION

೧ನೇ ಸೋಮವಾರ, ಸೆಪ್ಟೆಂಬರ್ ೧೯೬೯ [ಭಾದ್ರಪದ ೧೦, ೧೮೯೧ (ಶಕ)]

MONDAY, 1ST SEPTEMBER 1969 [BHADRAPADA 10, 1891 (SAKA)]

ಸಂಪುಟ ೪೨—ಕ್ರಮಾಂಕ ೮

Vol. XLII—No. 8

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ: ೨೫ ಪೈಸೆ

Paice : 25 Paise

Karnataka State Archives
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. (B) 5093
ದಿನಾಂಕ Date...............................

ಮೈಸೂರು ವಿಧಾನಪರಿಷತ್ತಿನ ನಡವಳಿಕೆಗಳು

MYSORE LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

ಇಪ್ಪತ್ತೇಳನೆಯ ಅಧಿವೇಶನ

TWENTY-SEVENTH SESSION

೨ನೇ ಮಂಗಳವಾರ, ಸೆಪ್ಟೆಂಬರ್ ೧೯೬೯ [ಭಾದ್ರಪದ ೧೧, ೧೮೯೧ (ಶಕ)]

TUESDAY, 2ND SEPTEMBER 1969 [BHADRAPADA 11, 1891 (SAKA)]

ಸಂಪುಟ ೪೨—ಕ್ರಮಾಂಕ ೯

Vol. XLII—No. 9

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

ಮೈಸೂರು ವಿಧಾನಪರಿಷತ್ತಿನ ನಡೆವಳಿಕೆಗಳು

MYSORE LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

ಇಪ್ಪತ್ತೇಳನೆಯ ಅಧಿವೇಶನ

TWENTY-SEVENTH SESSION

ಃನೇ ಬುಧವಾರ, ಸೆಪ್ಟೆಂಬರ್ ೧೯೬೯ [ಭಾದ್ರಪದ ೧೨, ೧೮೯೧ (ಶಕ)]

WEDNESDAY, 3RD SEPTEMBER 1969 [BHADRAPADA 12, 1891 (SAKA)]

ಸಂಪುಟ ೪೨—ಕ್ರಮಾಂಕ ೧೦

Vol. XLII—No. 10

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ: ೨೫ ಪೈಸೆ

Price : 25 Paise

ಮೈಸೂರು ವಿಧಾನಪರಿಷತ್ತಿನ ನಡೆವಳಿಕೆಗಳು

MYSORE LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

ಇಪ್ಪತ್ತೇಳನೆಯ ಅಧಿವೇಶನ

TWENTY-SEVENTH SESSION

ೞನೇ ಗುರುವಾರ, ಸೆಪ್ಟೆಂಬರ್ ೧೯೬೯ [ಭಾದ್ರಪದ ೧೩, ೧೮೯೧ (ಶಕ)]

THURSDAY, 4TH SEPTEMBER 1969 [BHADRAPADA 13, 1891 (SAKA])

ಸಂಪುಟ ೪೨—ಕ್ರಮಾಂಕ ೧೧

Vol. XLII—No. 11

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

ಮೈಸೂರು ವಿಧಾನಪರಿಷತ್ತಿನ ನಡೆವಳಿಕೆಗಳು

MYSORE LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

ಇಪ್ಪತ್ತೇಳನೆಯ ಅಧಿವೇಶನ

TWENTY-SEVENTH SESSION

೫ನೇ ಶುಕ್ರವಾರ, ಸೆಪ್ಟೆಂಬರ್ ೧೯೬೯ [ಭಾದ್ರಪದ ೧೪, ೧೮೯೧ (ಶಕ)]

FRIDAY, 5TH SEPTEMBER 1969 [BHADRAPADA 14, 1891 (SAKA)]

ಸಂಪುಟ ೪೨—ಕ್ರಮಾಂಕ ೧೨

Vol. XLII—No. 12

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ: ೨೫ ಪೈಸೆ

Price : 25 Paise

ಮೈಸೂರು ವಿಧಾನಪರಿಷತ್ತಿನ ನಡವಳಿಕೆಗಳು

MYSORE LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

ಇಪ್ಪತ್ತೇಳನೆಯ ಅಧಿವೇಶನ

TWENTY-SEVENTH SESSION

೮ನೇ ಸೋಮವಾರ, ಸೆಪ್ಟೆಂಬರ್ ೧೯೬೯ [ಭಾದ್ರಪದ ೧೬, ೧೮೯೧ (ಶಕ)]

MONDAY, 8TH SEPTEMBER 1969 [BHADRAPADA 16, 1891 (SAKA)]

ಸಂಪುಟ ೪೨—ಕ್ರಮಾಂಕ ೧೩

Vol. XLII—No. 13

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸ

Price : 25 Paise

ಮೈಸೂರು ವಿಧಾನಪರಿಷತ್ತಿನ ನಡವಳಿಕೆಗಳು
MYSORE LEGISLATIVE COUNCIL DEBATES

ಅಧಿಕೃತ ವರದಿ
OFFICIAL REPORT

ಇಪ್ಪತ್ತೇಳನೆಯ ಅಧಿವೇಶನ
TWENTY-SEVENTH SESSION

ಂ೦ನೇ ಬುಧವಾರ, ಸೆಪ್ಟೆಂಬರ್ ೧೯೬೯ [ಭಾದ್ರಪದ ೧೮, ೧೮೯೧ (ಶಕ)]

WEDNESDAY, 10TH SEPTEMBER 1969 [BHADRAPADA 18, 1891 (SAKA)]

ಸಂಪುಟ ೪೨—ಕ್ರಮಾಂಕ ೧೫

Vol. XLII—No. 15

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

16648
G.A.D. (Misc) No. 2768 Date 17/8/70

ಮೈಸೂರು ವಿಧಾನಪರಿಷತ್ತಿನ ನಡೆವಳಿಕೆಗಳು

MYSORE LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

ಇಪ್ಪತ್ತೇಳನೆಯ ಅಧಿವೇಶನ

TWENTY-SEVENTH SESSION

೯ನೇ ಮಂಗಳವಾರ, ಸೆಪ್ಟೆಂಬರ್ ೧೯೬೯ [ಭಾದ್ರಪದ ೧೭, ೧೮೯೧ (ಶಕ)]

TUESDAY, 9TH SEPTEMBER 1969 [BHADRAPADA 17, 1891 (SAKA)]

ಸಂಪುಟ ೪೨—ಕ್ರಮಾಂಕ ೧೪

Vol. XLII—No. 14

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

ಮೈಸೂರು ವಿಧಾನಪರಿಷತ್ತಿನ ನಡವಳಿಕೆಗಳು

MYSORE LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

ಇಪ್ಪತ್ತೇಳನೆಯ ಅಧಿವೇಶನ

TWENTY-SEVENTH SESSION

೧೧ನೇ ಗುರುವಾರ, ಸೆಪ್ಟೆಂಬರ್ ೧೯೬೯ [ಭಾದ್ರಪದ ೧೯, ೧೮೯೧ (ಶಕ)]

THURSDAY, 11TH SEPTEMBER 1969 [BHAORAPADA 19, 1891 (SAKA)]

ಸಂಪುಟ ೪೨—ಕ್ರಮಾಂಕ ೧೬

Vol. XLII—No. 16

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

CONTENTS

		Pages
1	Starred Questions and Answers ...	261—279
2	(i) Recuirtment to the posts of teachers by the D.E.O., Chitradurga ...	279—280
	(ii) Non Receipt of replies to Questions, etc, ...	280
	(iii) Business of the House ...	280
3	Non-Official Resolution :	
	re : Constitution of a Committee to assess the benefits made available, to Harijans and Girijans in the State Since Independance—(Debate not Concluded) ...	280—300

CONTENTS

		Pages
1	(i) Starred Questions and Answers ...	301—321
	(ii) Short Notice Question and Answer ...	321—324
	(iii) Non-furnishing of Replies to Questions, etc., by Government ...	324
	(iv) Supply of the Report of the Public Accounts Committee ...	325
2	Calling Attention to a matter of urgent Public Importance *re*: Closure of Government Silk Filature in Mysore District ...	326—331
3	Clarification upon the Statement of the Minister for Finance on the Award of the Fifth Finance Commission ...	331
4	Papers laid on the Table :—	
	(i) Mysore High Court (Amendment) Bill, 1969, as passed by the Legislative Assembly ... (ii) Mysore Appropriation (No. 4) Bill, 1969, as passed by the Legislative Assembly ...	331
5	Mysore Compulsory Primary Education (Amendment and Miscellaneons Provisions) Bill, 1969, as passed by the Legislative Assembly—(Passed) ...	332—346

CONTENTS

PAGES

1. Starred Questions and Answers ... 347—361

2. Calling Attention to a matter of urgent Public Importance *re*: Damages to the Madhvacharya idol at Hampi ... 361

3. Award of the Fifth Finance Commission ... 362—365

4. Thirty-fourth Report of the Business Advisory Committee—(Adopted) ... 365

5. Mysore Education Cess (Validation of Levy) 1969, as passed by the Legislative Assembly—(Passed) ... 365—3 2

6. Mysore Sales Tax (Amendment) Bill, 1969, as passed by the Legislative Assembly—(Passed) ... 373—379

7. Mysore Shops and Commercial Establishment (Amendment) Bill, 1969—(Passed) ... 379—381

8. Mysore Civil Courts (Amendment) Bill, 1969—(Passed)... 381—386

9. Mysore Sales Tax and Entertainments Tax (Amendment) Bill, 1969, as passed by the Legislative Assembly —(Passed) ... 386—387

10. Mysore Local Authorities (Disciplinary Proceedings against Employees) Bill, 1969, as passed by the Legislative Assembly—(Motion to consider—Debate not concluded) ... 387—388

CONTENTS

		Pages
1.	(i) Starred Questions and Answers ...	389—407
	(ii) Question for Answer on the day (but not taken up)	407
2.	Calling Attention to a Matter of Urgent Public Importance *re*: Hunger Strike by workers of Government Soap Factory	408—409
3.	Election of Members to Committees—(Results announced)	
	(i) Public Accounts Committee ...	409
	(ii) House Committee ...	409
	(iii) Subordinate Legislation Committee ...	409
4.	Mysore Local Authorities (Disciplinary Proceedings againist Employees) Bill, 1968, as passed by the Legislative Assembly—(Passed) ...	410—428

CONTENTS

		Pages
1.	Starred Questions and Answers ...	429—443
2.	(i) Petition *re*: Damages due to heavy rains in Virupakshapura ...	443—444
	(ii) Strike by the Untrained teachers in Chitradurga ...	444
	(iii) Strike by the Students of the Bangalore University	444
	(iv) Strike by the Doctors and Surgeons at the Wenlock Hospital, Mangalore ...	445
	(v) Priority to be given to discuss the Appropriation Bill ...	445—446
3.	Hyderabad Jagirs (Commutation) Regulation (Mysore Amendment) Bill, 1967, as passed by the Legislative Assembly—(Passed) ...	446—452
4.	Mysore Inams Abolition Laws (Amendment) Bill, 1968, as passed by the Legislative Assembly—(Passed) ...	452—461
5.	City of Bangalore Municipal Corporation (2nd Amendment) Bill 1969, as passed by the Legislative Assembly—(Passed) ...	461—471
6.	Mysore Appropriation (No. 4) Bill, 1969, as passed by the Legislative Assembly—(Motion to consider—Debate not concluded) ...	472

CONTENTS

PAGES

1 (i) Starred Questions and Answers ... 475—493

(ii) Short Notice Question and Answer ... 493—495

2 (i) Hunger Strike by the Students' Representative of the Bangalore University ... 495—496

(ii) Representation from the Assistant Teachers of Bijapur District whose services were broken since April, 1969 496

3 Papers laid on the Table—

(i) Mysore Appropriation (No. 5) Bill, 1969, as passed by the Legislative Assembly ...

(ii) Mysore Appropriation (No. 6) Bill, 1969, as passed by the Legislative Assembly ...

(iii) Report of the enquiry officer *re* : fire accident in Bhagawati Valley Forest Fire on 2nd March 1967

} 497

5 Non-Official of Resolution—

(i) *re* : Constitution of a Committee to assess the benefits made avail ble to Harijans and Girijans in the State since Independence—(Negatived) ... 497—500

(ii) *re* : Encouraging Theatre Art in the State and providing funds in the State Budget—(Debate not concluded) ... 500—516

CONTENTS

		Pages
1	Starred Questions and Answers ...	517—533
2	Supply of rice to the MICO Employees Consumers's Co-operative Society ...	533
3	Taking up the notice of adjournment motion *re*: the affairs of the Bangalore University ...	533—535
4	Papers laid on the Table— ...	
	Mysore Sales Tax (Second Amendment) Bill, 1969, as passed by the Legislative Assembly ...	535
5	Mysore Appropriation (No. 4) Bill, 1969, as passed by the Legislative Assembly—(Passed) ...	535-565
6	Mysore High Court (Amendment) Bill, 1969 as passed by the Legislative Assembly—(Passed) ...	565—566
7	Mysore Appropriation (No. 5) Bill, 1969 as passed by the Legislative Assembly—(Passed) ...	566—567
8	Mysore Appropriation (No. 6) Bill, 1969 as passed by the Legislative Assembly—(Passed) ...	568—569

CONTENTS

		PAGES
1	(i) Starred Questions and Answers ...	571—595
	(ii) Short Notice Questions and Answers ...	595—600
2	Notice of Adjournment motion *re*: Police Excesses at the Bangalore University Students—(Consent withheld)	600—609
3	Papers laid on the Table— ... (i) Annual Financial Statement of the M. S. E. B. for 1969-70 ... (ii) Notifications, Rules and Orders issued under certain Acts in force in the State ... (iii) Mysore Public Premises (Eviction of unauthorised occupants) (Amendment) Bill, 1969 as passed by the Legislative Assembly ...	610—613
4	Second Report of the Committee on Subordinate Legislation —(Presented) ...	613
5	Discussion on a matter of urgent Public Importance *re:* Affairs of the Bangalore University—(Debate not concluded) ...	612—647

CONTENTS

		PAGES
1	(i) Starred Questions and Answers ...	629—656
	(ii) Replies to Questions to be expedited by Government	656—657
	(iii) Debate on the Sharing of be Cauvery waters—(Permission for allowance) ...	657—658
	(iv) Police Excesses over the Students of the Bangalore University ...	658
2	Papers laid on the Table—	
	(i) Mysore Silkworm Cocoon (Regulation Production, Supply and Distribution) (Amendment) Bill, 1969 as passed by the Legislative Assembly ...	658
	(ii) First List of Unstarred Questions and Answers ...	659—703
3	Discussion on a matter of urgent Public Importance *re*: Affairs of the Bangalore University ...	704—734
4	Mysore Sales Tax (Second Amendment) Bill, 1969, as passed by the Legislative Assembly—(Passed) ...	735—739

ಮೈಸೂರು ವಿಧಾನ ಪರಿಷತ್ತು

MYSORE LEGISLATIVE COUNCIL

Monday, 1st September 1969.

The House met in the Council Chamber, Vidhana Soudha, Bangalore, at Thirty Minutes past Two of the Clock.

MR. DEPUTY CHAIRMAN [SRI M. MADAIAH] in the Chair.

STARRED QUESTIONS

(to which oral answers were given)

Utilisation of water of Honnamanahalla

30. SRI M. L. VASUDEVA MURTHY (Nominated).—

Will the Chief Minister be pleased to state:—

(*a*) whether any survey has been made of utilising the water of Honnamanahalla in Chickmagalur Taluk for irrigation purposes ;

(*b*) if so, whether they are aware that in the preliminary survey it has shown that waters from this halla could be utilised for providing water to the tanks of Dasarahally in Chickmagalur Taluk (a new construction), Ayanakere in Sakrepatna and Madagadakere in Birur besides drawing it to the river Veda thereby providing water to Vanivilas Sagar ;

(*c*) whether Government intend to take up this project to provide for irrigation facilities in this taluk ?

SRI VEERENDRA PATIL (Chief Minister).—

(*a*) No.

(*b*) and (*c*) Does not arise in view of reply to clause (*a*).

ಶ್ರೀ ಎಂ. ಎಲ್. ವಾಸುದೇವಮೂರ್ತಿ.—ಇನ್‌ವೆಸ್ಟಿಗೇಷನ್ ರಿಪೋರ್ಟ್ ಬಂದಮೇಲೆ ಈ ಪ್ರಾಜೆಕ್ಟನ್ನು ಕೈಗೊಳ್ಳುತ್ತೀರಾ ?

† ಶ್ರೀ ವೀರೇಂದ್ರಪಾಟೀಲ್.—ಇನ್‌ವೆಸ್ಟಿಗೇಷನ್ ರಿಪೋರ್ಟ್ ಬರಲಿ ಇದು ಬಾರದೇ ಯಾವುದನ್ನೂ ಪರಿಶೀಲನೆ ಮಾಡುವುದಕ್ಕಾಗುವುದಿಲ್ಲ.

---

† Indicates that the remarks or speeches have not been revised by the member concerned.

ಶ್ರೀ ಎಂ. ಎಲ್. ವಾಸುದೇವಮೂರ್ತಿ.—ಇನ್‌ವೆಸ್ಟಿಗೇಷನ್ ಜೊತೆಗೆ ಇದರಲ್ಲಿರುವ ನೀರು ಎಷ್ಟು ಮತ್ತು ಇನ್ನಿತರ ಅಸೆಸ್‌ಮೆಂಟ್‌ಗಳನ್ನೂ ನೋಡಿ ಮಾಡುತ್ತೀರಾ ?

ಶ್ರೀ ವೀರೇಂದ್ರಪಾಟೀಲ್.—ಇವೆಲ್ಲಾ ಇದರ ರಿಪೋರ್ಟಿನಲ್ಲೇ ಬರುತ್ತದೆ. ಇದರಲ್ಲಿ ಸರ್‌ಪ್ಲಸ್ ವಾಟರು ಎಷ್ಟು ಸಿಗುತ್ತದೆ ಮತ್ತು ಇನ್ನಿತರ ವಿವರಗಳೇನಿವೆ ಅವೆಲ್ಲಾ ಬಂದಮೇಲೆ ಪ್ರಾಜೆಕ್ಟ್ ರಿಪೋರ್ಟಿನ ಪ್ರಶ್ನೆ ಬರುತ್ತದೆ.

ಶ್ರೀ ಎಂ. ಎಲ್. ವಾಸುದೇವಮೂರ್ತಿ.—ರಿಪೋರ್ಟು ಬಂದನಂತರ ಈ ಪ್ರಾಜೆಕ್ಟ್ ಕೆಲಸ ಬೇಗನೆ ಕೈಗೊಳ್ಳುತ್ತೀರಾ ?

ಶ್ರೀ ವೀರೇಂದ್ರಪಾಟೀಲ್.—ಇದರಲ್ಲಿ ಪ್ರಾಜೆಕ್ಟ್ ರಿಪೋರ್ಟೇ ಬಂದಿಲ್ಲ. ಇವು ಯಾವುದೂ ಬಾರದೇ ನಾವು ಯಾವುದನ್ನೂ ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಹೇಳುವಹಾಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವ ಪ್ರಾಜೆಕ್ಟೂ ಇಲ್ಲ. ಪ್ರಾಜೆಕ್ಟ್ ರಿಪೋರ್ಟು ಬಂದಮೇಲೆ ಇದರಲ್ಲಿ ಸರ್‌ಪ್ಲಸು ವಾಟರು ಇದೆಯೇ ಇಲ್ಲವೇ ಈ ಪ್ರಾಜೆಕ್ ಫೀಸಿಬಲ್ ಅಲ್ಲವೇ ಎನ್ನುವುದನ್ನೆಲ್ಲಾ ನೋಡಿ ಸರಕಾರ ಸಹಾನುಭೂತಿಯಿಂದ ವಿಚಾರ ಮಾಡುತ್ತಾರೆ.

Land acquired for Military Department

41. Sri D. MUNICHINNAPPA (Elected by L.A.).—

Will the Minister for Revenue be pleased to state:—

(*a*) the extent of land acquired for Military Department in Bangalore South Taluk;

(*b*) the extent of land acquired in each village and Hobli;

(*c*) the amount of money per acre paid in each village for such land ;

(*d*) whether the Government is aware that the amount paid now is very low ?

Sri H. V. KOUJALGI (Minister for Revenue).—

(*a*) No land is acquired.

(*b*)
(*c*) } Do not arise in view of reply to clause (*a*).
(*d*)

ಮಾನ್ಯ ಸದಸ್ಯರು ಜಮೀನು ಅಕ್ವೈರು ಆಗಿದೆಯೇ ಎಂದು ಕೇಳಿದ್ದಾರೆ. ಇದು ಅಕ್ವೈರು ಮಾಡಿರುವ ಜಮೀನಲ್ಲ. ಇದರಲ್ಲಿ 1074 ಎಕರೆಯಷ್ಟು ಭೂಮಿಯನ್ನು ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಪ್ರಕಾರ ಅಕ್ವಿಸಿಸನ್ ಮಾಡಿದ್ದಾರೆ.

ಶ್ರೀ ಡಿ. ಮುನಿಚಿನ್ನಪ್ಪ.—ಇದರಲ್ಲಿ ಎಕರೆಗೆ ಏನು ರೇಟು ಕೊಡುತ್ತಿದ್ದಾರೆ ?

ಶ್ರೀ ಎಚ್. ವಿ. ಕೌಜಲಗಿ.—ಇಲ್ಲಿ ಕೊಟ್ಟಿರುವ ಪಟ್ಟಿ ಪ್ರಕಾರ ಡ್ರೈ ಲ್ಯಾಂಡ್‌ಗಾಗಿ ಎಕರೆಗೆ 150 ರೂಪಾಯಿಗಳು, ವೆಟ್ ಲ್ಯಾಂಡಿಗೆ 300 ರೂಪಾಯಿಗಳು ಮತ್ತು ಖರಾಬ್ ಲ್ಯಾಂಡಿಗೆ 25 ರೂಪಾಯಿಗಳು ಎಂದು ಹಿಂದೆ ಕೊಡಲಾಗಿತ್ತು. ಈಗ ಇದನ್ನು ಬದಲಾಯಿಸಿ ಡ್ರೈ ಲ್ಯಾಂಡಿಗೆ ಎಕರೆಗೆ 280 ರೂಪಾಯಿಗಳು, ವೆಟ್ ಲ್ಯಾಂಡಿಗೆ 500 ರೂಪಾಯಿಗಳು ಮತ್ತು ಗಾರ್ಡನ್ ಲ್ಯಾಂಡ್ ಇದ್ದರೆ 1,000 ರೂಪಾಯಿಗಳು ಮತ್ತು ಖರಾಬ್ ಲ್ಯಾಂಡ್ ಇದ್ದರೆ ಅದಕ್ಕೆ ಎಕರೆಗೆ 75 ರೂಪಾಯಿನಂತೆ ಕೊಡಬೇಕು ಎಂದು ಮಿಲಟರಿ ಇಲಾಖೆಯವರಿಗೆ ಬರೆಯಲಾಗಿದೆ. ಇದರ ಬಗ್ಗೆ ಇನ್ನೂ ನಿರ್ಣಯವಾಗಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಕಾರ್ಪೋರೇಷನ್ನಿನವರು ಹಾಗೂ ಟ್ರಸ್ಟ್ ಬೋರ್ಡಿನವರು ಭೂಮಿ ತೆಗೆದುಕೊಂಡರೆ ಅದಕ್ಕೆ 15-20 ಸಾವಿರದಷ್ಟು ಬೆಲೆ ಕೊಡುತ್ತಿದ್ದಾರೆ. ಆದರೆ ಇಲ್ಲಿ ಎಕರೆಗೆ 150 ರೂಪಾಯಿಗಳಂತೆ ಕೊಟ್ಟರೆ ಅನ್ಯಾಯವಾಗುವುದಿಲ್ಲವೇ ?

ಶ್ರೀ ಹೆಚ್. ವಿ. ಕೌಜಲಗಿ.—ಇದರ ಬಗ್ಗೆ ರಿಪೋರ್ಟು ಮೊದಲು ಮಾಡಿರಲಿಲ್ಲ, ಈಗ ರೂಲು (2)ರ ಪ್ರಕಾರ ಸರಕಾರ ಹಿಂದೆ ಕೊಟ್ಟಿರುವುದು ತಪ್ಪು ಎಂದು ವರದಿ ಮಾಡಲಾಗಿದೆ. ಇದರಲ್ಲಿ ಅವರ ಪರವಾಗಿ ಇಬ್ಬರು ಆರ್ಬಿಟ್ರೇಟರುಗಳಿರುತ್ತಾರೆ ನಮ್ಮ ಪರವಾಗಿ ಕೂಡ ಇಬ್ಬರು ಪ್ರತಿನಿಧಿಗಳಿರುತ್ತಾರೆ. ಇವರೆಲ್ಲರೂ ಸೇರಿ ಒಂದು ನಿರ್ಣಯ ಮಾಡಬೇಕಾಗಿದೆ. ಇನ್ನು ಯಾವ ನಿರ್ಣಯವೂ ಆಗಿಲ್ಲ.

ಶ್ರೀ ಡಿ. ಮುನಿಚಿನ್ನಪ್ಪ.—ಸ್ವಾಮಿ, ಈ ಹೊತ್ತು ಬೆಂಗಳೂರಿನ ಸುತ್ತಮುತ್ತ ಜಮೀನಿನಲ್ಲಿ ದ್ರಾಕ್ಷಿ ಬೆಳೆದರೆ 10-12 ಸಾವಿರ ರೂಪಾಯಿ ಉತ್ಪತ್ತಿ ಬರುತ್ತದೆ. ಅಂತಹ ಜಮೀನು ಅಕ್ವೈರ್ ಮಾಡಿಕೊಂಡು ಒಂದು ಎಕರೆಗೆ 100-120 ರೂಪಾಯಿ ಕಾಂಪನ್ಸೇಷನ್ ಕೊಡುವುದು ಬಹಳ ಕಡಿಮೆ. ಅದನ್ನೂ ಕೂಡ 10-12 ವರ್ಷಗಳಿಂದ ಕೊಟ್ಟಿಲ್ಲ. ಇದರಿಂದ ರೈತರಿಗೆ ತೊಂದರೆ ಯಾಗಿದೆ. ದಯವಿಟ್ಟು ಸರ್ಕಾರದವರು ಇದರ ಬಗ್ಗೆ ರೈತರಿಗೆ ಅನುಕೂಲವಾಗುವ ಹಾಗೆ ಸಹಾಯ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಇದಕ್ಕೆ ಒಂದು ಕಮಿಟಿ ಇದೆ. ಆ ಕಮಿಟಿ ಮುಂದೆ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಇಡುತ್ತೇನೆ.

ಶ್ರೀ ಜಿ. ವಿ. ಆಂಜನಪ್ಪ.—ಸ್ವಾಮಿ, 1,200 ಎಕರೆ ಜಮೀನನ್ನು ಡಿಫೆನ್ಸ್‌ನವರು ತೆಗೆದು ಕೊಂಡು ಕೆಲವು ವರ್ಷವಾದಮೇಲೆ ಅವರಿಗೆ ಎಷ್ಟುಬೇಕೋ ಅಷ್ಟನ್ನು ಇಟ್ಟುಕೊಂಡು ಬಾಕಿ ಜಮೀನು ಬೇಡ ಎಂದರೆ, ಆಗ ರೈತರಿಗೆ ತೊಂದರೆ ಆಗುವುದಿಲ್ಲವೇ, ಸ್ವಾಮಿ ?

ಶ್ರೀ ಹೆಚ್. ವಿ. ಕೌಜಲಗಿ.—1962ನೇ ಇಸವಿಯೊಳಗೆ ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಪ್ರಕಾರ ತೆಗೆದುಕೊಂಡಿದ್ದಾರೆ. ಆದರೆ 1968ನೇ ಇಸವಿಯಲ್ಲಿ ಇದನ್ನು ದುರಸ್ತು ಮಾಡಿ ಎಷ್ಟು ಬೇಕೋ ಅಷ್ಟನ್ನು ಕಬ್ಜ ತೆಗೆದುಕೊಂಡರು.

ಶ್ರೀ ಡಿ. ಮುನಿಚಿನ್ನಪ್ಪ.—ಸ್ವಾಮಿ, ಈಗ ಕಮಿಟಿ ಮಾಡಿದ್ದಾರೆ ಎಂದು ಹೇಳುತ್ತೀರಿ. ಆ ಕಮಿಟಿಯಲ್ಲಿ ರೈತರ ಸಂಬಂಧಪಟ್ಟವರು ಯಾರೂ ಇಲ್ಲ. ಆದುದರಿಂದ ಅವರಿಗೆ ಸಹಾಯ ಮಾಡಲು ರೈತರ ಸಂಬಂಧಪಟ್ಟವರನ್ನು ಯಾರನ್ನಾದರೂ ಹಾಕುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಡಿಫೆನ್ಸ್ ಆಫ್ ಇಂಡಿಯಾ ರೂಲ್ಸು ಪ್ರಕಾರ ರೈತರ ಪರವಾಗಿ ವಾದ ಮಾಡಲು ಆರ್ಬಿಟ್ರೇಟರ್ ಇರುತ್ತಾರೆ. ಅವರನ್ನು ಕಳುಹಿಸುತ್ತೇವೆ.

ಶ್ರೀ ಎಂ. ವಿ. ವೆಂಕಟಪ್ಪ.—ಸ್ವಾಮಿ, ಬೆಂಗಳೂರು ನಗರದಲ್ಲಿ ಅತಿ ಮುಖ್ಯವಾದ ಸ್ಥಳಗಳಲ್ಲಿ ಡಿಫೆನ್ಸ್‌ನವರಿಗೆ ಬೇಕಾದಷ್ಟು ಜಮೀನು ಕೊಟ್ಟುಬಿಟ್ಟಿದ್ದಾರೆ. ವಿಧಾನಸೌಧ, ಬಾಲುಬ್ರೂಯಿ ಸುತ್ತಲೂ ಇರುವ ಲ್ಯಾಂಡನ್ನು ಉಪಯೋಗಿಸಿಕೊಂಡು ಸರ್ವೆ ಸಾಮಾನ್ಯವಾಗಿ ಅವರಿಗೆ ಜಮೀ ನನ್ನು ಊರು ಆಚೆ ಏಕೆ ಕೊಡಬಾರದು ?

ಶ್ರೀ ಹೆಚ್. ವಿ. ಕೌಜಲಗಿ.—ಅವರಿಗೆ ಎಲ್ಲಿ ಬೇಕಾಗುತ್ತದೋ ಅಲ್ಲಿ ಕೊಡಬೇಕು. ನಾವು ಕೊಡಲಿಕ್ಕೆ ಆಗುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಸ್. ಚನ್ನಪ್ಪ.—ಸ್ವಾಮಿ, ಈ ಕಷ್ಟ ಕಾಲದಲ್ಲಿ ಅವರು ತೆಗೆದುಕೊಂಡಿರುವ ಜಮೀನಿಗೆ ಒಂದು ಎಕರೆಗೆ 100 ರೂಪಾಯಿ ಕೊಟ್ಟರೆ ತೊಂದರೆ ಆಗುವುದಿಲ್ಲವೇ ? ಅದು ಧರ್ಮವೇ ? ಆದುದರಿಂದ ಡಿಫೆನ್ಸ್‌ನವರಿಗೆ ಹೆಚ್ಚಿಗೆ ಏನಾದರೂ ಧನಸಹಾಯ ಕೊಡಲು ಬರೆಯುವುದಕ್ಕೆ ಆಗುವುದಿಲ್ಲವೇ ?

ಶ್ರೀ ಹೆಚ್. ವಿ. ಕೌಜಲಗಿ.—ಈಗಾಗಲೇ ಸರ್ಕಾರಕ್ಕೆ ಮನವಿ ಬಂದಿದೆ. ಡಿಫೆನ್ಸ್‌ನವರು ಮಾಡಿರತಕ್ಕಂಥ ಕಮಿಟಿಗೂ ರೆಪ್ರೆಸೆಂಟೇಷನ್ ಕೊಡಿ ಎಂದು ಹೇಳಿದ್ದೇವೆ. ಆ ಕಮಿಟಿಯಲ್ಲಿ ಈ ವಿಚಾರವನ್ನು ತೀರ್ಮಾನಮಾಡುತ್ತೇವೆ.

ಶ್ರೀ ಎಂ. ಎಲ್. ವಾಸುದೇವಮೂರ್ತಿ.—ತಮ್ಮ ಮುಂದೆ ಅಕ್ವಿಸಿಷನ್ ಮಾಡಿರುವ ಡ್ರೈ ಲ್ಯಾಂಡ್‌ಗೆ 250 ರೂಪಾಯಿ ಕಾಂಪನ್‌ಸೇಷನ್ ಕೊಡಬೇಕು ಎನ್ನುವ ಪ್ರಪೋಸಲ್ಸ್ ಇದೆ. ಅದೇ ದಾಮಾಷಾ ಪ್ರಕಾರ ಅವರನ್ನು ಕೊಡುವಂತೆ ಕೇಳಿಕೊಳ್ಳುವುದು ನ್ಯಾಯವಾಗಿರು ವುದಿಲ್ಲವೇ ?

ಶ್ರೀ ಹೆಚ್. ವಿ. ಕೌಜಲಗಿ.— ರಿಕ್ವಿಸಿಷನ್ ಆದ ಸಮಯದಲ್ಲಿ ಕ್ರಾಪ್ ಕಾಂಪನ್ಸೇಷನ ಅದನ್ನು ಮಾಲ್ಕಗೆ ಛಾರ್ಜು ಮಾಡುವುದಿಲ್ಲ. ಆದುದರಿಂದ ಡ್ರೈ ಲ್ಯಾಂಡ್ ಕಾಂಪನ್ಸೇಷನ್ನಿಗೂ ಲ್ಯಾಂಡ್ ಗ್ರಾಂಟಿಗೂ ಸಂಬಂಧವಿಲ್ಲ.

ಶ್ರೀ ಎಂ. ಎರ್. ವಾಸುದೇವಮೂರ್ತಿ.—ಸ್ವಾಮಿ, ಲ್ಯಾಂಡ್ ಗ್ರಾಂಟ್‌ನಲ್ಲೂ ಸಹ, ಮಾಲ್ಕಗೆ ಬೇರೆ ಛಾರ್ಜು ಮಾಡುತ್ತಿದ್ದಾರೆ. ಬೇರೆ ಲ್ಯಾಂಡ್‌ಗೆ ಕಾಂಪನ್ಸೇಷನ್ ಕೊಡುವಾಗ ಏನು ಮಾಲ್ಕಗೆ ಛಾರ್ಜು ಮಾಡುತ್ತಾರೆ ಅದೇ ದಾಮಾಷಾ ಪ್ರಕಾರ ಇಲ್ಲೂ ಛಾರ್ಜು ಮಾಡುವುದು ನ್ಯಾಯವಲ್ಲವೇ ? ಇದನ್ನು ಗಮನಿಸುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಮಾಲ್ಕ ಮಟ್ಟಿಗೆ ಕೊಟ್ಟುಬಿಡುತ್ತಾರೆ. ತಾಂತ್ರಿಕವಾಗಿ ಕಬ್ಜ ತೆಗೆದುಕೊಳ್ಳುತ್ತಾರೆ.

ಶ್ರೀ ಡಿ. ಮುನಿಚಿನ್ನಪ್ಪ.—ಕಾಂಪನ್ಸೇಷನ್‌ನನ್ನು ಎಷ್ಟು ದಿವಸವಾದರೂ ರೈತರಿಗೆ ಕೊಡುವುದಿಲ್ಲ. ನಿಮ್ಮ ಸ್ಪೆಷಲ್ ಸಬ್‌ಡಿವಿಷನ್ ಆಫೀಸಿನ ಅಧಿಕಾರಿಗಳಿಗೆ ಹೇಳಿ ಯಾರಿಗೆ ಹಣ ಕೊಡಬೇಕೋ ಅವರಿಗೆ ಜಾಗ್ರತೆ ಹಣ ಕೊಡಿಸುತ್ತೀರಾ ? ಎಷ್ಟು ದಿವಸದಲ್ಲಿ ಕೊಡುತ್ತೇವೆಂದು ಆಶ್ವಾಸನೆ ಕೊಡುತ್ತೀರಿ ?

ಶ್ರೀ ಹೆಚ್. ವಿ. ಕೌಜಲಗಿ.—ಹಿಂದಿನದು ಏನಾದರೂ ಬಾಕಿ ಇದ್ದರೆ ಅದಕ್ಕೆ ತೀವ್ರಗಮನ ಕೊಟ್ಟು ಸಂಬಂಧಪಟ್ಟ ಅಧಿಕಾರಿಗಳಿಗೆ ಜಾಗ್ರತೆ ಕೊಡುವಂತೆ ತಿಳಿಸುತ್ತೇನೆ.

ಶ್ರೀ ಎಸ್. ಪಿ. ರಾಜಣ್ಣ.—ಈಗ 1,700 ಚಿಲ್ಲರೆ ಎಕರೆ ತೆಗೆದುಕೊಂಡಿರುವುದನ್ನು ಉಪಯೋಗಮಾಡುತ್ತಿದ್ದಾರೋ ಅಥವಾ ಖಾಲಿ ಇದೆಯೋ ?

ಶ್ರೀ ಎಚ್. ವಿ. ಕೌಜಲಗಿ.—ಮಿಲಿಟರಿ ಖಾತೆಗೆ ತೆಗೆದುಕೊಂಡಮೇಲೆ ನಾವು ಕೇಳುವುದಕ್ಕೆ ಬರುವುದಿಲ್ಲ.

ಶ್ರೀ ಡಿ. ಮುನಿಚಿನ್ನಪ್ಪ.—ಎಷ್ಟು ದಿವಸಗಳಲ್ಲಿ ಹೆಚ್ಚುವರಿ ಹಣ ಬರುವಂತೆ ಮಾಡುತ್ತೀರಿ?

ಶ್ರೀ ಎಚ್. ವಿ. ಕೌಜಲಗಿ.—ಹಿಂದಿನ ಬಾಕಿ ಕೊಟ್ಟಿಲ್ಲ, ಬಹಳ ದಿವಸದ್ದಿದೆ ಎಂದು ಈಗ ತಿಳಿಸಿದ್ದಾರೆ. ಅದನ್ನು ಜಾಗ್ರತೆ ಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡ.—ಹೆಚ್ಚುವರಿ ದರವನ್ನು ಯಾವ ದಿವಸದಿಂದ ಭೂಮಿ ಸ್ವಾಧೀನ ದಲ್ಲಿದೆಯೋ ಆ ದಿವಸದಿಂದ ಕೊಡುವುದಕ್ಕೆ ಏರ್ಪಾಡುಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಸಮಿತಿಯವರು ಆ ವಿಚಾರವನ್ನು ಪರಿಶೀಲಿಸುವರು. ರೆಟ್ರಾಸ್‌ಪೆಕ್ಟಿವ್ ಎಫೆಕ್ಟ್ ಕೊಡುವುದಕ್ಕೆ ಅವಕಾಶವಿಲ್ಲವೆಂದು ಕಾಣುತ್ತದೆ.

ಶ್ರೀ ಎಸ್. ಪಿ. ರಾಜಣ್ಣ.—1,700 ಚಿಲ್ಲರೆ ಎಕರೆ ಫರ್ಟೈಲ್ ಲ್ಯಾಂಡ್ ಇದೆ. ಆದುದರಿಂದ ಉಪಯೋಗಮಾಡದಿದ್ದರೆ ವಾಪಸು ಕೇಳುವುದಕ್ಕೆ ಅನಾನುಕೂಲವೇನು ?

ಶ್ರೀ ಎಚ್. ವಿ. ಕೌಜಲಗಿ.—ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಪ್ರಕಾರ ಕೇಳುವುದಕೆ ಬರುವುದಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ರೆಟರಾಸ್‌ಪೆಕ್ಟಿವ್ ಎಫೆಕ್ಟ್ ಕೊಡುವುದಕ್ಕೆ ತೊಂದರೆಯೇನು ?

ಶ್ರೀ ಎಚ್. ವಿ. ಕೌಜಲಗಿ.—ಈಗ ಹೇಳಿರುವುದು ಟೆಂಟೇಟಿವ್ ದರ. ಈ ವಿಷಯ ಇನ್ನೂ ಸಮಿತಿಯ ಮುಂದಿದೆ.

Electrical Sub-Station near Hagaribommanahalli

73. K. CHANNABASAVANA GOWDA (Local Authorities' Constituency).—

Will the Chief Minister be pleased to state :—

(*a*) whether Government is aware that there is intermittant failure of power for IP sets, domestic lights, and floor mills in Mallapur

Taluk in Bellary District due to heavy load of the Lift Irrigation Scheme and for want of the Electrical sub-station nearby *viz.*, at Hagaribommanahalli ;

(*b*) when they would rectify these defects by constructing and completing the above sub-station ?

Sri VEERENDRA PATIL (Chief Minister).—

(*a*) Yes.

(*b*) The feasibility of establishing a sub-station at Hagaribommanahalli is being examined by the M.S.E.B.

ಶ್ರೀ ಕೆ. ಚನ್ನಬಸವನಗೌಡ.—ಮಲ್ಲಾಪುರ ತಾಲ್ಲೂಕಿನಲ್ಲಿ ನಾಲ್ಕು ಲಿಫ್ಟ್ ಇರಿಗೇಷನ ಸ್ಕೀಮ್ಸ್ ಇವೆ, ಒಂದೊಂದು ಕಡೆಗೆ 300-400 ಎಕರೆಗಳ ನಿಗದಿಯಾಗಿದೆ. ಆದರೆ ಪವರ್ ಸಾಲದೆ ರೈತರಿಗೆ ನಷ್ಟವಾಗುತ್ತಿರುವುದು ಗಮನಕ್ಕೆ ಬಂದಿದೆಯೇ ?

†ಶ್ರೀ ವೀರೇಂದ್ರ ಪಾಟೀಲ್.—ಅಲ್ಲಿ ಲೋಡ್ ಹೆಚ್ಚಾಗಿದೆಯೆಂದು ಅದರ ಸಲುವಾಗಿಯೇ ಅಲ್ಲಿ ಸಬ್‌ಸ್ಟೇಷನ್ ಮಾಡುವ ವಿಚಾರವನ್ನು ವಿದ್ಯುಚ್ಛಕ್ತಿ ಬೋರ್ಡಿನವರು ಪರಿಶೀಲಿಸುತ್ತಿದ್ದಾರೆ.

ಶ್ರೀ ಕೆ. ಚನ್ನಬಸವನಗೌಡ.—ಎಷ್ಟು ದಿವಸದಲ್ಲಿ ಅದಾಗಬಹುದು ? ಸಬ್‌ಸ್ಟೇಷನ್‌ಗೆ ಖರ್ಚು ಎಷ್ಟಾಗಬಹುದು ?

ಶ್ರೀ ವೀರೇಂದ್ರ ಪಾಟೀಲ್.—ಈ ದಿವಸ ಅದನ್ನು ಹೇಳುವುದಕ್ಕಾಗುವುದಿಲ್ಲ. ಆದರೆ ಲೋಡ್ ಹೆಚ್ಚಾಗಿರುವುದರಿಂದ ಸಬ್‌ಸ್ಟೇಷನ್ನಿನ ಅವಶ್ಯಕತೆಯಿದೆ ಎಂಬುದು ವಿದ್ಯುಚ್ಛಕ್ತಿ ಬೋರ್ಡಿಗೆ ಮನವರಿಕೆಯಾಗಿದೆ, ಅವರು ಅದಕ್ಕೆ ಬೇಕಾದ ಕ್ರಮ ಕೈಕೊಳ್ಳುತ್ತಿದ್ದಾರೆ.

ಶ್ರೀ ಬಿ. ಚನ್ನಬೈರೇಗೌಡ.—ಈ ರೀತಿ ಲೋಡ್ ಹೆಚ್ಚಾಗಿರುವ ಸಂದರ್ಭಗಳಲ್ಲಿ ಎಷ್ಟು ಕಡೆ ಸಬ್‌ಸ್ಟೇಷನ್‌ಗಳನ್ನು ಮಾಡಬೇಕೆಂದಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಲೋಡ್ ಹೆಚ್ಚಾಗಿರುವ ಕಡೆಯೆಲ್ಲಾ ಮಾಡಬೇಕಾಗಿಲ್ಲ, ಹೆಚು ಕೆಪ್ಯಾಸಿಟಿ ಇರುವ ಟ್ರಾನ್ಸ್‌ಫಾರ್ಮರುಗಳನ್ನು ಹಾಕಬೇಕಾಗುತ್ತದೆ, ಕೆಲವು ಕಡೆ ಸಬ್‌ಸ್ಟೇಷನ್ ಮಾಡಬೇಕಾಗುತ್ತದೆ, ಅವಶ್ಯಕವಾಗಿರುವ ಕಡೆ ಮಾಡುತ್ತಿದ್ದಾರೆ.

ಶ್ರೀ ಕೆ. ಚನ್ನಬಸವನಗೌಡ.—ಎಷ್ಟು ದಿವಸಗಳಿಂದ ಈ ಸಮಸ್ಯೆ ಸರಕಾರಿ ಮಟ್ಟದಲ್ಲಿ ಪೆಂಡಿಂಗ್ ಇದೆ ?

ಶ್ರೀ ವೀರೇಂದ್ರ ಪಾಟೀಲ್.—ಇದು ವಿದ್ಯುಚ್ಛಕ್ತಿ ಬೋರ್ಡ್ ಮುಂದಿದೆ, ಸರಕಾರದ ಮುಂದಿಲ್ಲ. ಬಹುಶಃ ಇಷ್ಟರಲ್ಲೇ ಮಾಡಬಹುದು.

ಶ್ರೀ ವಿ. ಎಸ್. ಹಿರೇಗೌಡರ್.—ಸಬ್‌ಸ್ಟೇಷನ್ ಇರುವ ಕಡೆ ಸಹ ದಿವಸಕ್ಕೆ ನಾಲ್ಕೈದು ಸಲ ಪವರ್ ಫೈಲ್ ಆಗುವುದು. ನಮ್ಮ ಸಂಪ್ರದಾಯದ ಪ್ರಕಾರ ರಾತ್ರಿ ಊಟಮಾಡುವಾಗ ದೀಪ ಹೋದರೆ ಉಪವಾಸವಿರಬೇಕಾಗುವುದು. ಹೀಗೆ ಎಷ್ಟೋ ಜನ ಉಪವಾಸಮಾಡಿದ್ದಾರೆ. ಆ ದೃಷ್ಟಿಯಿಂದ ಮೇಲಿಂದಮೇಲೆ ತಾಂತ್ರಿಕವಾಗಿ ಫೈಲ್ ಆಗದಹಾಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆ ವಿದ್ಯುಚ್ಛಕ್ತಿ ಬೋರ್ಡಿನವರು ವ್ಯವಸ್ಥೆಮಾಡುತ್ತಿದ್ದಾರೆ. ಇದು ಬಹಳ ದೊಡ್ಡ ಕೆಲಸ. ಹೇರಳವಾಗಿ ಇದಕ್ಕೆ ಹಣ ಖರ್ಚಾಗುವುದು. ಟ್ರಾನ್ಸ್‌ಮಿಷನ್ ಲೈನ್ ಹಾಕುತ್ತಿದ್ದಾರೆ, ಅದಕ್ಕೆ ಬೇಕಾದ ಎಕ್ವಿಪ್‌ಮೆಂಟ್ ತರಿಸುತ್ತಿದ್ದಾರೆ. ಬಹುಶಃ ಕೆಲವು ದಿವಸಗಳಲ್ಲಿ ಈಗಿರುವ ತೊಂದರೆ ನಿವಾರಣೆಯಾಗುವುದೆಂದು ನಾನು ಆಸೆ ಮಾಡುತ್ತೇನೆ.

ಶ್ರೀ ಕೆ. ಎಸ್. ಚನ್ನಪ್ಪ.—ಸಬ್‌ಸ್ಟೇಷನ್‌ಗೆ ಹೋಗುತಾತ್ತ ಇರತಕ್ಕ ಪವರಿಗಿಂತ ಹೆಚ್ಚು ಮೆಷಿನರಿಗಳು ಮತ್ತು ಪಂಪ್ ಸೆಟ್ಟುಗಳನ್ನು ಕೊಟ್ಟಿರುವುರಿಂದ ಈ ದುರವಸ್ಥೆಗೆ ಕಾರಣವಾಗಿದೆಯಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ಲೋಡ್ ಯಾವ ರೀತಿ ಬಿಲ್ಡ್ ಅಪ್ ಆಗುತ್ತದೆ ಎಂದು ಮೊದಲೇ ಅಸೆಸ್ ಮಾಡುವುದಕ್ಕೆ ಆಗುವುದಿಲ್ಲ. ಎಲ್ಲೆಲ್ಲಿ ಅವಶ್ಯಕತೆ ಇದೆ ಅಂತಹ ಕಡೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ಚನ್ನಬೈರೇಗೌಡ.—ಸಬ್‌ಸ್ಟೇಷನ್ ಹಾಕಬೇಕಾದರೆ ಲೋಡ್ ಕ್ಯಪಾಸಿಟಿ ನೋಡಿ ತಾನೆ ಹಾಕುವುದು? ಎಷ್ಟು ಬೇಕೋ ಅಷ್ಟು ಮಾತ್ರ ಕೊಡಬೇಕು, ಕ್ಯಪಾಸಿಟಿ ಮೀರಿ ಕೊಟ್ಟರೆ ಇತರ ಜನಗಳಿಗೆ ತೊಂದರೆಯಾಗುವುದಿಲ್ಲವೆ?

ಶ್ರೀ ವೀರೇಂದ್ರ ಪಾಟೀಲ್.—ಒಂದು ವೇಳೆ ಆ ರೀತಿ ಕೊಡದೇ ಹೋದ ಪಕ್ಷದಲ್ಲಿ ನಮಗೆ ಪವರ್ ಕೊಡುತ್ತಿಲ್ಲ ಅಂತ ಹೇಳಿ ಕೂಗು ಬರುತ್ತದೆ. ಇವೆರಡನ್ನೂ ಸಮನ್ವಯ ಮಾಡಿ ಸಮಾಧಾನಕರವಾಗಿ ಕೆಲಸ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಅದಷ್ಟು ತ್ವರಿತವಾಗಿ ಬೇಕಾಗಿರ ತಕ್ಕ ಟ್ರಾನ್ಸ್‌ಫಾರ್ಮರ್ ಮುಂತಾದುವುಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ಕೆ. ಚನ್ನಬಸವನಗೌಡ.—ಲಿಫ್ಟ್ ಇರಿಗೇಷನ್ ಅಲ್ಲದೆ ಬೇರೆಯವರಿಗೂ ಸಹ ಪವರ್ ಕೊಟ್ಟಿದ್ದಾರೆ ಇದರಿಂದ ಸಣ್ಣ ರೈತರಿಗೆ ತೊಂದರೆಯಾಗಿದೆ, ಒಂದು ವರ್ಷದಿಂದ ಹೇಳುತ್ತಾ ಇದ್ದೇವೆ. ಬೋರ್ಡಿನವರಿಗೇ ಬಿಟ್ಟರೆ ಅವರು ಖಂಡಿತವಾಗಿಯೂ ಮಾಡುವುದಿಲ್ಲ. ಅವರಲ್ಲಿ ದಕ್ಷತೆ ಇಲ್ಲ ಎಂದು ಕಂಡುಬಂದಿದೆ, ಸರ್ಕಾರದ ವತಿಯಿಂದ ಮಾಡಿಸಿದರೆ ಆಗುತ್ತದೆ. ಆದ್ದರಿಂದ ದಯ ವಿಟ್ಟು ಜಾಗ್ರತೆ ಈ ಕಾರ್ಯವನ್ನು ಮಾಡಿಸುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದಂತೆ ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲೆಲ್ಲಾ ಆದಷ್ಟು ತೀವ್ರ ಸಬ್‌ಸ್ಟೇಷನ್‌ಗಳನ್ನು ಹಾಕುವುದಕ್ಕೆ ಅಥವಾ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕುವುದಕ್ಕೆ ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಆದೇಶ ಕೊಡುತ್ತೇನೆ.

ಶ್ರೀ ಕೆ. ಟಿ. ಶಾಮಯ್ಯಗೌಡ.—ಎಲೆಕ್ಟ್ರಿಸಿಟಿ ಬೋರ್ಡಿನವರಿಂದ ಒಂದು ತಿಂಗಳಿಗೆ ಎಷ್ಟು ನಷ್ಟವಾಗುತ್ತದೆ ಎಂಬುದನ್ನು ರೆಕಾರ್ಡ್ ಮಾಡುವುದಕ್ಕೆ ಒಂದು ಸಾಧನವನ್ನು ಇಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಅದು ಎಷ್ಟುಮಟ್ಟಿಗೆ ಸಾಧ್ಯವಾಗುತ್ತದೆಯೋ ಗೊತ್ತಿಲ್ಲ. ಮಧ್ಯೆ ಮಧ್ಯೆ ಪವರ್ ಇಂಟರಪ್ಟ್ ಆಗುವುದರಿಂದ ಸರ್ಕಾರಕ್ಕೂ ಮತ್ತು ಬೋರ್ಡಿನವರಿಗೂ ಹಾನಿ ಆಗುತ್ತದೆ. ಅದನ್ನು ಸ್ಟ್ರೆಂಗ್ತನ್ ಮಾಡಬೇಕೆಂಬ ದೃಷ್ಟಿಯಿಂದ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ.

ಶ್ರೀ ಬಿ. ಚನ್ನಬೈರೇಗೌಡ.—ಮೊದಲು ಇದು ಸರ್ಕಾರದ ವಶದಲ್ಲಿದ್ದಾಗ ಇಷ್ಟು ತೊಂದರೆ ಗಳು ಆಗುತ್ತಾ ಇರಲಿಲ್ಲ, ಎಲೆಕ್ಟ್ರಿಸಿಟಿ ಬೋರ್ಡ್ ಆದಮೇಲೆ ಬಹಳ ಹೆಚ್ಚಾಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಬೋರ್ಡ್ ಆದಮೇಲೆ ಅದರ ಚಟುವಟಿಕೆಗಳೂ ಕೂಡ ಬಹಳ ಮಟ್ಟಿಗೆ ಹೆಚ್ಚಾಗಿದೆ. ಉದಾಹರಣೆಗೆ ಮೊದಲು ಕೇವಲ 11—12 ಸಾವಿರ ಪಂಪ್‌ಸೆಟ್ಟುಗಳಿಗೆ ಪವರ್ ಸಪ್ಲೈ ಆಗುತ್ತಾ ಇತ್ತು. ಇವತ್ತು 92—93 ಸಾವಿರ ಪಂಪ್ ಸೆಟ್ಟುಗಳು ಸರ್ವೀಸ್ ಆಗಿವೆ, ಅನೇಕ ಹಳ್ಳಿಗಳಿಗೆ ಮತ್ತು ಕೈಗಾರಿಕೆಗಳಿಗೆ ಪವರ್ ಸಪ್ಲೈ ಮಾಡುತ್ತಾ ಇದ್ದಾರೆ. ಹಾಗಿರುವಾಗ ಸಣ್ಣ ಪುಟ್ಟ ತೊಂದರೆಗಳಾಗುವುದು ಸ್ವಾಭಾವಿಕ, ಅದೂ ಕೂಡ ಆಗದಂತೆ ನೋಡಿಕೊಳ್ಳುವುದಕ್ಕೆ ಬೋರ್ಡಿನವರು ಪ್ರಯತ್ನ ಮಾಡುತ್ತಾ ಇದ್ದಾರೆ.

ಶ್ರೀ ಕೆ. ಎಸ್. ಚನ್ನಪ್ಪ.—ಬೋರ್ಡು ಪ್ರಾರಂಭವಾಗಿ ಸುಮಾರು 15 ವರ್ಷಗಳಾಗಬಹುದು. ಆದರೆ ಇತ್ತೀಚೆಗೆ 2 ವರ್ಷಗಳಿಂದ ಕರೆಂಟ್ ಸರಬರಾಯಿ ವಿಚಾರದಲ್ಲಿ ಹೆಚ್ಚಿನ ತೊಂದರೆಯಾಗು ತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಎರಡು ವರ್ಷಗಳ ಹಿಂದೆ ತೊಂದರೆ ಎಷ್ಟಿತ್ತು ಈಗ ಎಷ್ಟಿದೆ ಎಂಬುದು ಗೊತ್ತಿಲ್ಲದಿರುವ ಕಾರಣ ಇಂಥ ಜನರಲ್ ಪ್ರಶ್ನೆಗಳಿಗೆ ಉತ್ತರಹೇಳುವುದು ಬಹಳ ಕಷ್ಟ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಟ್ರಾನ್ಸ್‌ಫಾರ್ಮರ್ಸ್ ಸಿಕ್ಕದೆ ಈ ಎಲ್ಲಾ ತೊಂದರೆ ಗಳೂ ಉದ್ಭವಿಸಿವೆ. ನಮ್ಮಲ್ಲಿ ಹಾಲಿ ಸಿಕ್ ಲಿಸ್ಟಿನಲ್ಲಿ ಎಷ್ಟು ಟ್ರಾನ್ಸ್‌ಫಾರ್ಮರುಗಳಿರುತ್ತವೋ ಅವುಗಳನ್ನು ಪತ್ತೆಮಾಡಿ ಅವುಗಳನ್ನೆಲ್ಲಾ ರಿಪೇರಿ ಮಾಡಿಸಿ ಹಗರೀ ಬೊಮ್ಮನಹಳ್ಳಿ ರೈತರಿಗೂ ಸಾರ್ವಜನಿಕರಿಗೂ ಆಗುತ್ತಿರುವ ತೊಂದರೆಯನ್ನು ತಪ್ಪಿಸುವುದಕ್ಕೆ ಪ್ರಯತ್ನಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಈ ಎಲ್ಲಾ ವಿವರಗಳನ್ನೂ ಮಾನ್ಯ ಸದಸ್ಯರಿಗೆ ಒದಗಿಸಬೇಕಾ ಗಿದ್ದರೆ ಅವರು ಒಂದು ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿದ್ದರೆ ಉತ್ತರವನ್ನು ಒದಗಿಸಬಹುದಾ ಗಿತ್ತು.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಸಿಕ್ಕಾಗಿರತಕ್ಕವುಗಳನ್ನಾದರೂ ತರಿಸಿಕೊಂಡು ರಿಪೇರಿಮಾಡುವುದಕ್ಕೆ ಪ್ರಯತ್ನ ಮಾಡಲಾಗುತ್ತದೆಯೆ?

ಶ್ರೀ ವೀರೇಂದ್ರ ಪಾಟೀಲ್.—ಸರ್ಕಾರದವರು ಹೊರಗಡೆಯಿಂದ ತರಿಸಿರುವಂಥ ಹೆವಿ ಟ್ರಾನ್ಸ್‌ಫರ್ಮರುಗಳನ್ನು ಯಾರು ಸರಬರಾಯಿ ಮಾಡಿದ್ದಾರೋ ಅವರೇ ಅವುಗಳನ್ನು ರಿಪೇರಿ ಮಾಡಬೇಕು. ಇನ್ನು ಇಲ್ಲೇ ತಯಾರಿಸಿ ಸರಬರಾಯಿ ಮಾಡಿರತಕ್ಕ ಟ್ರಾನ್ಸ್‌ಫಾರ್ಮರುಗಳನ್ನು ಇಲ್ಲಿ ರಿಪೇರಿ ಮಾಡಿಸಲಾಗುತ್ತದೆ. ಆದರೆ ಈಗ ಸಣ್ಣ ಟ್ರಾನ್ಸ್‌ಫಾರ್ಮರುಗಳಿಗೇನೂ ಕೊರತೆಯಿಲ್ಲ. ಅವು ಸಿಕ್ಕುತ್ತವೆ.

ಶ್ರೀ ಬಿ. ಚನ್ನಬೈರೇಗೌಡ.—ಗಾಳಿಬಂದ ಕೂಡಲೆ ದೀಪಗಳು ಆರಿಹೋಗುತ್ತವೆ. ಅದನ್ನಾದರೂ ಸರಿಪಡಿಸುವುದಕ್ಕೆ ಪ್ರಯತ್ನಮಾಡಲಾಗುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅವರು ಎಲ್ಲಾ ಎಚ್ಚರಿಕೆಯನ್ನು ತೆಗೆದುಕೊಂಡಿದ್ದರೂ ಹಾಗೆ ವಿಪರೀತ ಗಾಳಿ ಬೀಸಿದರೆ ಸ್ವಲ್ಪ ಇಂಟರಪ್ಟ್ ಆಗೇ ಆಗುತ್ತದೆ.

Effect of Bank Nationalisation

83. Sri S. D. GAONKAR (Local Authorities' Constituency).—

Will the Minister for Finance, Planning and Youth Welfare be pleased to state :—

whether the Nationalisation of Banks by the Government of India has affected the Government's capacity to raise Loans from the Public and the Banks to meet the deficits in case of need ?

Sri VEERANDRA PATIL (Chief Minister) [On behelf of Sri Ramakrishna Hegde) Minister for Finance, Planning and Youth Welfare].—

No.

Sri S. D. GAONKAR.—Sir, may I know whether directives have been issued to all the Banks and financial institutions to subscribe to the loan floated by the State Government ?

† Sri VEERENDRA PATIL.—So far as loans floated by the State Government are concerned, we are getting all help from the State Bank of Inida, the State Bank of Mysore and all those nationalised Banks. There is no difficulty. In fact, I am happy to inform the House that our loan of 10 crores has been fully subscribed. I got the message just now. There is no difficulty in getting the loans subscribed by these Banks.

Sri K. SURYANARAYANA ADIGA.—Is only the State Bank of India and State Bank of Mysore that have subscribed or all the Banks which are functioning in the State ?

Sri VEERENDRA PATIL.—The Question relates to only nationalised Banks. I never said that other banks, which are not nationalised, are not helping the State. On the other hand, I am proud to say that all Banks functioning in the State, whether nationalised or not, they are helping the State Loan to be fully subsribed. We are grateful to these banks.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ರಾಷ್ಟ್ರೀಕರಣವಾದ ಬ್ಯಾಂಕುಗಳು ಎಷ್ಟು ಹಣ ಸಬ್‌ಸ್ಕ್ರೈಬ್ ಮಾಡಿವೆ ?

ಶ್ರೀ ವೀರೇಂದ್ರ ಪಾಟೀಲ್.—ಪುಲ್ಲ ಸಬ್‌ಸ್ಕ್ರೈಬ್ ಆಗಿದೆ ಎಂಬುದಾಗಿ ಈಗ ಬಂತು. ಅದರ ವಿವರಗಳು ಬರುವುದಕ್ಕೆ ಸಮಯವಾಗುತ್ತದೆ. ನಾಳೆ ವಿವರಗಳನ್ನು ಕೊಡುವುದಕ್ಕೆ ಸಾಧ್ಯವಾಗಬಹುದು. ಇವತ್ತು ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ಬ್ಯಾಂಕ್ ರಾಷ್ಟ್ರೀಕರಣವನ್ನು ಪೂರ್ಣಗೊಳಿಸುವ ಮುನ್ನ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಕೇಳಬೇಕೆಂದು ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಕಾಗದ ಬರೆದಿದ್ದಾರೆಯೇ ? ಅದರ ಸಾರಾಂಶವೇನು ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕಾಗಿ ನಮ್ಮ ಅಭಿಪ್ರಾಯವನ್ನು ಕೇಳಬೇಕೆಂದು ಹೇಳಲಿಲ್ಲ. ಬ್ಯಾಂಕ್ ರಾಷ್ಟ್ರೀಕರಣ ಮಾಡಿದ್ದನ್ನು ಸ್ವಾಗತಿಸಿದ್ದೇವೆ. ಹಿಂದೆ ಯಾವ ಪ್ರಮಾಣದಲ್ಲಿ ನಮ್ಮ ಯೋಜನೆಗಳಿಗೆ ಹಣ ಸಿಗುತ್ತಿತ್ತೋ ಅದಕ್ಕೂ ಹೆಚ್ಚಿನಮಟ್ಟಿಗೆ ಸಿಗಬಹುದೆಂದು ನಾವು ನಮ್ಮ ಆಶೆಯನ್ನು ವ್ಯಕ್ತಮಾಡಿದ್ದೇವೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಬ್ಯಾಂಕ್ ರಾಷ್ಟ್ರೀಕರಣವಾದಮೇಲೆ ಸ್ಥಳೀಯ ಸಂಸ್ಥೆಗಳಿಗೆ ಸಾಲ ಕೊಡುವ ಪರಿಸ್ಥಿತಿ ಬಂದಾಗ ಅವರು ಡಿಬೆಂಚರ್ ಅಥವಾ ಇನ್ನಾವುದಾದರೂ ಒಂದು ರೀತಿಯಲ್ಲಿ ಹಣ ಪಡೆಯುವುದರಲ್ಲಿ ಈಗ ಇನ್ನೂ ಹೆಚ್ಚಿನ ಸೌಲಭ್ಯ ಅವರಿಗೆ ದೊರೆಯುತ್ತದೆಯೇ ? ಹಿಂದೆ ಈ ಸೌಲಭ್ಯ ಉಪಯೋಗಿಸಿಕೊಂಡು ದಾವಣಗೆರೆ ನಗರಸಭೆಗೆ ಸಾಲ ಕೊಡದೇ ಇರಲು ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಸ್ಥಳೀಯ ಸಂಸ್ಥೆಗಳಿಗೆ ನೀರಿನ ಸರಬರಾಜು ಯೋಜನೆ ಹಾಗೂ ಅಂಡರ್‌ಗ್ರೌಂಡ್ ಡ್ರೈನೇಜ್ ಯೋಜನೆಗಳಿಗೆ ಹಣ ಸಹಾಯ ಲೈಫ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್ನಿನಿಂದ ಮುನಿಸಿಪಾಲಿಟಿಯವರು ಪಡೆಯುತ್ತಿದ್ದಾರೆ. ದಾವಣಗೆರೆ ನಗರಸಭೆಯವರು ಲೈಫ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್ನಿನಿಂದ ಸಾಲ ಪಡೆಯಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. ನಮ್ಮ ಯೋಜನೆಗಳು ಹೋದ ಹಾಗೆ ಸಹಾಯ ಮಾಡುತ್ತಾರೆ.

ಶ್ರೀ ಜಿ. ವಿ. ಆಂಜನಪ್ಪ.—ರಾಜ್ಯ ಸರ್ಕಾರದವರು ತರುವ 10 ಕೋಟಿ ರೂಪಾಯಿಗಳ ಸಾಲದಲ್ಲಿ ಬ್ಯಾಂಕುಗಳಿಂದ ಎಷ್ಟು, ಮತ್ತು ಸಾರ್ವಜನಿಕರಿಂದ ಎಷ್ಟು ಸಂದಾಯವಾಗಿದೆ ?

Sri VEERENDRA PATIL.—I got the message just now. ಅಂದರೆ ವಿವರಗಳು ಬಂದಿರಬಹುದು, ಅದಕ್ಕೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು. ಈ 10 ಕೋಟಿ ರೂಪಾಯಿಗಳ ಪೈಕಿ ರಾಷ್ಟ್ರೀಕರಣವಾಗಿರುವ ಮತ್ತು ರಾಷ್ಟ್ರೀಕರಣ ಮಾಡದೇ ಇರುವಂಥ ಬ್ಯಾಂಕುಗಳಿಂದ ಎಷ್ಟೆಷ್ಟು ಬಂದಿದೆ ಎಂಬುದನ್ನು ವಿವರಗಳನ್ನು ತರಿಸಿ ಹೇಳಬೇಕು.

ಶ್ರೀ ಎಂ. ವಿ. ವೆಂಕಟಪ್ಪ.—ಬ್ಯಾಂಕುಗಳ ರಾಷ್ಟ್ರೀಕರಣವಾಗುವಾಗ ನಮ್ಮ ಸರ್ಕಾರದ ಷೇರು ಬಂಡವಾಳವೂ ಇತ್ತು. ಅದರ ಬಗ್ಗೆ ಲಾಭ ಬರುವುದರಲ್ಲಿ ತೊಂದರೆ ಏನುಂಟು ?

ಶ್ರೀ ವೀರೇಂದ್ರಪಾಟೀಲ್.—ಬ್ಯಾಂಕ್ ರಾಷ್ಟ್ರೀಕರಣದಿಂದ ತೊಂದರೆಯಾಗಲಾರದು. ನಮಗೆ ಹೆಚ್ಚಿನ ಲಾಭವಾಗಬಹುದೆಂದು ಹೇಳಿದ್ದಾರೆ. ಒಂದು ವಿಚಾರ ನನ್ನ ಮನಸ್ಸಿಗೆ ಆಗಾಗ್ಗೆ ಬರುತ್ತಿತ್ತು. ಅದೇನೆಂದರೆ ನ್ಯಾಷನಲೈಜ್ ಆದ ತಕ್ಷಣ ನಮ್ಮ ಸರ್ಕಾರಕ್ಕೆ ಬಹಳ ಕಷ್ಟವಾಗುತ್ತದೆಂದು. ಬ್ಯಾಂಕಿನವರನ್ನು ಕರೆಸಿ ಕೇಳಿದ ತಕ್ಷಣ ನಿಮಗೆ ಎಷ್ಟು ದುಡ್ಡು ಬೇಕೋ ಅಷ್ಟೂ ಕೊಡುತ್ತೇವೆಂದು ಹೇಳುತ್ತಿದ್ದರು. ಇವೆಲ್ಲಾ ಮುಂದೆ ಡಿಲೇ ಆಗದ ಹಾಗೆ ನೋಡಿಕೊಳ್ಳಬೇಕೆಂದು ಪ್ರಧಾನಮಂತ್ರಿಗಳಿಗೆ ಅರಿಕೆಮಾಡಿಕೊಂಡಿದ್ದೇವೆ.

3–00 P.M.

ಶ್ರೀ ಎ. ಎಚ್. ಶಿವಾನಂದಸ್ವಾಮಿ.— ಈಗ ಸ್ಥಳೀಯ ಸಂಸ್ಥೆಗಳಿಗೆ ರೆಮ್ಯುನರೇಟಿವ್ ಕೆಲಸಗಳಾದ, ಸ್ಕೂಲ್ಸ್ ಬಿಲ್ಡಿಂಗ್ಸ್ ಮುಂತಾದ ಕಾರ್ಯಗಳಿಗೆ ಲಕ್ಷಾಂತರ ರೂಪಾಯಿ ಬೇಕಾಗುತ್ತದೆ. ಅದರ ಬಗ್ಗೆ ಸ್ಥಳೀಯ ಸಂಸ್ಥೆಗಳು ಈ ಡಿಬೆಂಚರ್ ಫ್ಲೋಟ್ ಮಾಡಿದರೆ, ಈ ನ್ಯಾಶನಲೈಸ್‌ಡ್ ಬ್ಯಾಂಕ್ಸ್ ಅದನ್ನು ಖರೀದಿ ಮಾಡುತ್ತದೆಯೇ ? ಮತ್ತು ಅದರ ಬಗ್ಗೆ ಕೇಂದ್ರ ಸರ್ಕಾರದವರೊಡನೆ ಸಮಾಲೋಚನೆ ಮಾಡಿದ್ದೀರಾ ಮತ್ತು ಮಾಡದಿದ್ದರೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.— ಆತರದ ಯಾವ ಪ್ರಶ್ನೆಯೂ ನಮ್ಮ ಮುಂದೆ ಇಲ್ಲ. ಡಿಬೆಂಚರ್ ಯಾವುದಾದರೂ ಸರ್ಕಾರದವರು ಫ್ಲೋಟ್ ಮಾಡಬೇಕಾದರೂ ಅದಕ್ಕೆ ಸರ್ಕಾರದವರ ಮಂಜೂರಾತಿ ಬೇಕು ಮತ್ತು ಬಹುಶಃ ರಿಸರ್ವ್ ಬ್ಯಾಂಕಿನವರಿಗೂ ಹೋಗಬೇಕಾಗುತ್ತದೆ. ಡಿಬೆಂಚರ್ ತನ್ನಷ್ಟಕ್ಕೆ ತಾನೇ ಫ್ಲೋಟ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಟಿ. ಶಾಮಯ್ಯ ಗೌಡ.—ಸರ್ಕಾರಕ್ಕೂ ರಿಸರ್ವ್ ಬ್ಯಾಂಕಿಗೂ ಸಂಬಂಧ ಇದೆ. ರಾಷ್ಟ್ರೀಕರಣವಾಗುವುದಕ್ಕಿಂತ ಮುಂಚೆ ಇಂಥ ಬ್ಯಾಂಕುಗಳ ಏನು ಸಹಾಯ ಇತ್ತು, ಮತ್ತು ಮುಂದೆ ರಾಷ್ಟ್ರೀಕರಣವಾದುದರಿಂದ ಏನು ಸಹಾಯ ನಿರೀಕ್ಷೆ ಮಾಡುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದೆ, ಆಶೆ ಪಡುತ್ತಿದ್ದೇವೆಂದು. ಹಿಂದೆಯೂ ಬಹಳ ಮಟ್ಟಿನ ಸಹಾಯ ಸಿಕ್ಕಿದೆ. ನಾವು ಕೇಳಿದಾಗ ಲೋನ್ ಸಬ್‌ಸ್ಕ್ರೈಬ್ ಮಾಡಿದ್ದಾರೆ; ಹೌಸಿಂಗ್ ಬೋರ್ಡಿನ ಡಿಬೆಂಚರಿಗೆ ಸಾಕಷ್ಟು ಸಾಲ ಕೊಟ್ಟಿದ್ದಾರೆ. ಎಲೆಕ್ಟ್ರಿಸಿಟಿಬೋರ್ಡಿಗೂ ಸಹಾಯ ಮಾಡಿದ್ದಾರೆ. ಹೀಗೆ ಇಲ್ಲಿಯವರೆಗೂ ಬಹಳ ಸಹಾಯ ಮಾಡಿದ್ದಾರೆ. ನ್ಯಾಶನಲೈಸ್ ಮಾಡಿದ ಮೇಲೆ ಇನ್ನೂ ಹೆಚ್ಚು ಅನುಕೂಲವಾಗಬೇಕೆಂಬ ಆಶೆ ಇಟ್ಟಿದ್ದೇವೆ.

ಶ್ರೀ ಜಿ. ವಿ. ಅಂಜನಪ್ಪ.—ನ್ಯಾಶನಲೈಸ್ ಆದ ಬ್ಯಾಂಕುಗಳು 14 ಇವೆ. ಅವುಗಳಲ್ಲಿ ಎರಡು ಬ್ಯಾಂಕುಗಳು ಮೈಸೂರು ಸಂಸ್ಥಾನದ್ದು ಇವೆ. ಇವೆರಡು ಬ್ಯಾಂಕುಗಳಲ್ಲಿರತಕ್ಕ ಡಿಪಾಸಿಟ್ಟು ಹಣವನ್ನು ರಾಜ್ಯಸರ್ಕಾರಕ್ಕೆ ಮೀಸಲಾಗಿಡುವಂತೆ ಕೇಂದ್ರಸರ್ಕಾರದವರಿಗೆ ಬರೆದು ಕೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ದೇಶದ ಹಿತದೃಷ್ಟಿಯಿಂದ ಆ ರೀತಿ ಮಾಡುವುದಕ್ಕಾಗುವುದಿಲ್ಲ. ನಮ್ಮಲ್ಲಿರುವಂತಹ ಡಿಪಾಸಿಟ್ಟು ನಮ್ಮಲ್ಲೇ ಖರ್ಚಾಗಬೇಕು, ಇತರ ರಾಜ್ಯದಲ್ಲಿರತಕ್ಕಂತಹ ಹಣ ಇತರ ರಾಜ್ಯಗಳಲ್ಲಿ ಖರ್ಚಾಗಬೇಕೆಂದು ಹೇಳುವುದು ಸರಿಯಲ್ಲ. ಬಹುಶಃ ಹೆಚ್ಚು ಡಿಪಾಸಿಟ್ ಹಣ ಇರುವಂತದ್ದು, ಕಲ್ಕತ್ತಾ, ಮದ್ರಾಸ್ ಮತ್ತು ಬಾಂಬೆಯಲ್ಲಿ. ಅಲ್ಲಿನ ಜನ ಅಲ್ಲಿ ಖರ್ಚು ಮಾಡಬೇಕೆಂದರೆ, ಉಳಿದ ಕಡೆಗಳಿಗೆ ದುಡ್ಡೇ ಸಿಗುವುದಿಲ್ಲ. ಆ ರೀತಿ ಒಂದು ಸಂಕುಚಿತ ಭಾವನೆ ಇಂದು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

Sri G. V. GOWDA.—The Hon. Chief Minister was pleased to say that the Mysore State Loan has been subscribed within 24 hours of its opening. Does it mean that the credit-worthiness of the State increased or is it partly due to the nationalisation scheme ?

Sri VEERENDRA PATIL.—It is not the first time that the State loan has been fully subscribed within 24 hours. On the previous occasions also, when the Government floated loans we got the same response not only from the Banks but also from others.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಬ್ಯಾಂಕ್ ರಾಷ್ಟ್ರೀಕರಣ ಉಪಯೋಗ ಪಡೆದು ಕಾವೇರಿ ಬೇಸಿನ್ ನೀರನ್ನು 1974ರ ಒಳಗೆ ಉಪಯೋಗಿಸುವುದಕ್ಕೆ ಸಹಾಯ ಆಗುವ ರೀತಿಯಲ್ಲಿ ಕೇಂದ್ರ ಸರ್ಕಾರದವರೊಡನೆ ವ್ಯವಹಾರ ಮಾಡುತ್ತೀರಾ ಮತ್ತು ಅದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅದರ ಬಗ್ಗೆಯೂ ವಿಚಾರ ಮಾಡುತ್ತಿದ್ದೇವೆ. ಇದರಿಂದ ನಮ್ಮ ಇರಿಗೇಶನ್ ಪ್ರೊಜೆಕ್ಟುಗಳಿಗೆ ಎಷ್ಟು ಮಟ್ಟಿನ ಸಹಾಯವಾಗುತ್ತದೆಂದು ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಅದನ್ನು ಇವತ್ತು ಹೇಳುವುದಕ್ಕಾಗುವುದಿಲ್ಲ. ನ್ಯಾಶನಲೈಸ್ ಆಗಿರುವುದರಿಂದ ಕೇಂದ್ರ ಸರ್ಕಾರದ ಧೋರಣೆ ಯಾವ ರೀತಿ ಬರುತ್ತದೆಂದು ನೋಡಬೇಕಾಗುತ್ತದೆ. ಬ್ಯಾಂಕಿನಿಂದ ಒಂದು ವೇಳೆ ಇರಿಗೇಶನ್ ಪ್ರೊಜೆಕ್ಟುಗಳಿಗೆ ಸಹಾಯ ಸಿಗುವ ಹಾಗಿದ್ದರೆ, ಅದನ್ನು ಪಡೆಯಲು ನಾವು ಹಿಂದೆ ಮುಂದೆ ನೋಡುವುದಿಲ್ಲ.

ಶ್ರೀ ಬಿ. ಚನ್ನಭೈರೇಗೌಡ.—24 ಗಂಟೆಯೊಳಗೆ ಡಿಬೆಂಚರ್ಸ್ ಭರ್ತಿಯಾಯಿತು ಎಂದು ಹೇಳಿದ್ದೀರಿ. ಅದು ನಮ್ಮ ಪಕ್ಷದ ರಾಷ್ಟ್ರಪತಿಯಾಗಿರುವುದರಿಂದ ತಾನೆ ಹಾಗೆ ಆಗಿರುವುದು ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಇದು ಅವಶ್ಯಕ ಇರಲಿಲ್ಲ ಎಂದು ಅನಿಸುತ್ತದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಚನ್ನಭೈರೇಗೌಡರು ರಾಷ್ಟ್ರಪತಿಗಳು ನಮ್ಮ ಪಕ್ಷದವರು ಎನ್ನು

(ಶ್ರೀ ವೀರೇಂದ್ರ ಪಾಟೀಲ್)

ವುದು ಸಮಂಜಸವಲ್ಲ. ರಾಷ್ಟ್ರಪತಿಗಳು ರಾಷ್ಟ್ರಕ್ಕೇ ಸಂಬಂಧಪಟ್ಟವರು. ಅವರು ಯಾವ ಪಕ್ಷಕ್ಕೂ ಸಂಬಂಧವಿಲ್ಲ. ರಾಷ್ಟ್ರಪತಿಗಳು 53 ಕೋಟಿ ಜನಗಳಿಗೂ ಸಂಬಂಧಪಟ್ಟವರು. ಅವರು ಒಂದು ಪಕ್ಷಕ್ಕೆ ರಾಷ್ಟ್ರಪತಿಗಳಲ್ಲ ಎಂದು ನಾವು ತಿಳಿದುಕೊಳ್ಳಬೇಕಾದ್ದು ಅವಶ್ಯಕ.

ಶ್ರೀ ಜಿ. ವಿ. ಅಂಜನಪ್ಪ.—ಈಗ ಈ ವಿಚಾರದಲ್ಲಿ ಸಂಕುಚಿತ ಮನೋಭಾವನೆಯನ್ನು ತೋರಿಸಬಾರದು ಎಂದು ಮಾನ್ಯ ಮುಖ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದರು. ಹಾಗಾದರೆ ಈಗ ಕೇಂದ್ರ ಸರ್ಕಾರದವರು 14 ಬಾಂಕುಗಳನ್ನೇನು ರಾಷ್ಟ್ರೀಕರಣ ಮಾಡಿದ್ದಾರೆ, ಅವುಗಳನ್ನು ರಾಷ್ಟ್ರೀಕರಣ ಮಾಡುವುದಕ್ಕಿಂತ ಮುಂಚೆ ಅವು ಆಯಾ ಪ್ರದೇಶದ ಜನಗಳಿಗೆ, ಕೈಗಾರಿಕೆಗೆ, ವ್ಯವಸಾಯಕ್ಕೆ, ಮುಂತಾದವುಗಳಿಗೆ ಹಣ ಸಹಾಯವನ್ನು ಮಾಡುತ್ತಿದ್ದವು. ಈ ದೃಷ್ಟಿಯಿಂದ ಈಗ ನಮ್ಮ ರಾಜ್ಯದಲ್ಲಿ ಸ್ಥಾಪಿತವಾಗಿರತಕ್ಕ ಬ್ಯಾಂಕುಗಳು ರಾಜ್ಯ ಸರ್ಕಾರದವರಿಗೆ ನೆರವು ನೀಡುವುದು, ಮತ್ತು ನಮ್ಮ ರಾಜ್ಯದ ಜನಗಳಿಗೆ ನೆರವು ನೀಡುವ ವಿಷಯದಲ್ಲಿ ತಾವು ಕೇಂದ್ರ ಸರ್ಕಾರಕ್ಕೇನಾದರೂ ಬರೆದು ಆ ಬ್ಯಾಂಕುಗಳು ಹಣ ಸಹಾಯವನ್ನು ಮಾಡುವಂತೆ ಅವರನ್ನು ಒತ್ತಾಯ ಮಾಡುತ್ತೀರಾ।

ಶ್ರೀ ವೀರೇಂದ್ರ ಪಾಟೀಲ್.—ಇದನ್ನು ನಾನು ಈಗಾಗಲೇ ಹೇಳಿದ್ದೇನೆ. ಎಲ್ಲಿ ಬ್ಯಾಂಕುಗಳು ಇವೆ ಅಲ್ಲಿನ ಜನಗಳಿಗೆ ಸಹಾಯ ಮಾಡುವುದಕ್ಕೆ ಆ ಬ್ಯಾಂಕುಗಳು ಹಿಂದೆ ಮುಂದೆ ನೋಡಬೇಕಾಗಿಲ್ಲ. ಮೊದಲು ಯಾವರೀತಿ ಕ್ರೆಡಿಟ್ ಪಾಲಿಸಿಯನ್ನು ಇಟ್ಟುಕೊಂಡಿದ್ದರೋ ಅದೇ ಪಾಲಿಸಿಯನ್ನು ಅವರು ಮುಂದುವರಿಸಿಕೊಂಡು ಹೋಗಬಹುದು. ಆದರೆ ಕೇಂದ್ರ ಸರ್ಕಾರದವರು ಈ ಬಗ್ಗೆ ಏನು ನಿರ್ಣಯ ಮಾಡುತ್ತಾರೋ ಅದು ನನಗೆ ಗೊತ್ತಿಲ್ಲ. ಈಗ ಯಾವ ಬ್ಯಾಂಕಿನಲ್ಲಿ ಎಷ್ಟು ಡಿಪಾಜಿಟ್ ಇದೆಯೋ ಅದನ್ನು ಆಯಾ ಸ್ಟೇಟಿಗೆ ಖರ್ಚು ಮಾಡಬೇಕೆಂದರೆ ಅನೇಕಕಡೆ ಜನಗಳಿಗೆ ದುಡ್ಡು ಸಿಕ್ಕದಂತಹ ಪರಿಸ್ಥಿತಿ ಬರುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ ಕಲ್ಕತ್ತಾ ನಗರದಲ್ಲಿ ಇಡೀ ರಾಷ್ಟ್ರದ ಡಿಪಾಜಿಟ್‌ನಲ್ಲಿ 30 ಪರ್ಸೆಂಟ್ ಡಿಪಾಜಿಟ್ ಕಲ್ಕತ್ತಾದ ಬ್ಯಾಂಕಿನಲ್ಲಿ ಇದೆ. ಅದನ್ನು ಅಲ್ಲಿಯೇ ಖರ್ಚು ಮಾಡಬೇಕು, ಬೇರೆ ಕಡೆಗೆ ಖರ್ಚು ಮಾಡಬಾರದು ಎನ್ನುವಂಥಾದ್ದು ಅಷ್ಟು ಸಮಂಜಸವಲ್ಲ.

Sri S. D. GAONKAR.—Prior to the nationalisation of these Banks, the Reserve Bank had put some restrictions on Governments for floating loans and carrying on other transactions. I would like to know whether those restrictions have been relaxed after nationalisation ?

Sri VEERENDRA PATIL.—I am not aware of those restrictions exactly. If the hon. Member puts a separate question, I will be in a position to furnish precise information.

ಶ್ರೀ ಜಿ. ವಿ. ಅಂಜನಪ್ಪ.—ಈಗ ರಾಷ್ಟ್ರೀಕರಣ ಮಾಡಿರತಕ್ಕ ಬ್ಯಾಂಕುಗಳಿಂದ ರಾಜ್ಯದ ಅವಶ್ಯಕವಾದ ಬೇಡಿಕೆಗಳನ್ನು ಈಡೇರಿಸುವುದಕ್ಕೆ ತಾವು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೀರಾ ?

ಶ್ರೀ ವೀರೇಂದ್ರಪಾಟೀಲ್.—ಕೇಂದ್ರ ಸರ್ಕಾರದವರು ಎಲ್ಲಾ ಬ್ಯಾಂಕುಗಳನ್ನೂ ಒಂದು ಪೂಲ್ ಮಾಡಿ ಒಂದು ಕಡೆ ಸೇರಿಸಿಲ್ಲ. ಪ್ರತಿಯೊಂದು ಬ್ಯಾಂಕನ್ನೂ ಒಂದು ಯೂನಿಟ್ ಎಂದು ಟ್ರೀಟ್ ಮಾಡಿದ್ದಾರೆ. ಆದ್ದರಿಂದ ಬ್ಯಾಂಕುಗಳಿಂದ ಹೆಚ್ಚಿನ ರೀತಿಯಲ್ಲಿ ಸಹಾಯ ಪಡೆಯುವುದಕ್ಕೆ ಅವಕಾಶ ಇದೆ.

Sri G. V. GOWDA.—Is it not a fact that the borrowing capacity of the State is limited as you cannot take the loans from all the Banks ?

Sri VEERENDRA PATIL.—I could not follow the question. I don't know whether the Hon. Member means that the borrowing capacity of the State is limited or that of the State Government is limited. If it is of the State Government, the Reserve Bank, after taking into consideration all aspects, fix the borrowing capacity and to that extent allow the State Government to float loan. According to that, we are floating loans. Even before nationalisation, that was the procedure that was being followed.

Sri JEEVARAJ HIRACHAND SHAH.—A large portion of these deposits have so far been utilised and only a little remains for further utilisation. So when the Government wants to raise loans, will it experience any new difficulties? To what extent will it affect the State Government while floating loans?

Sri VEERENDRA PATIL.—" Whatever money is in the banks," is meant for utilisation and has to be utilised in a proper way. The Hon. Member says that much of the money in the Banks has already been utilised and there is very little left in the Banks for further utilisation. I don't know from where and from what source he got that information.

ಶ್ರೀ ಜಿ. ವಿ. ಆಂಜನಪ್ಪ.—ಈ 14 ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಿದಮೇಲೆ ನಮ್ಮ ರಾಜ್ಯಕ್ಕೆ ಯಾವ ರೀತಿ ಸಹಾಯವಾಗುತ್ತದೆ ಎಂಬ ಬಗ್ಗೆ ಕೇಂದ್ರಸರ್ಕಾರದಿಂದ ಕ್ಲಾರಿಫಿಕೇಷನನ್ನು ಏನಾದರೂ ತರಿಸಿಕೊಂಡಿದ್ದೀರಾ?

ಶ್ರೀ ವೀರೇಂದ್ರಪಾಟೀಲ್.—ರಾಷ್ಟ್ರೀಕರಣವಾದಮೇಲೆ ನಮಗೆ ಏನಾದರೂ ಕಿರುಕುಳ ವಾಗಿದ್ದರೆ ಕೇಂದ್ರಸರ್ಕಾರದಿಂದ ಕ್ಲಾರಿಫಿಕೇಷನನ್ನು ತರಿಸಿಕೊಳ್ಳಬೇಕಾಗಿತ್ತು. ಆದರೆ ಬ್ಯಾಂಕ್‌ಗಳ ರಾಷ್ಟ್ರೀಕರಣವಾದಮೇಲೆ ಕೇಂದ್ರಸರ್ಕಾರದ ನೀತಿ, ಧ್ಯೇಯ ಮತ್ತು ಧೋರಣೆ ಏನು ಎಂಬುದು ನಮಗೆ ಗೊತ್ತಿಲ್ಲ. ಮತ್ತು ಕ್ಲಾರಿಫಿಕೇಷನನ್ನು ತರಿಸಿಕೊಳ್ಳುವ ಅವಶ್ಯಕತೆ ಇನ್ನೂ ಉದ್ಭವಿಸಿಲ್ಲ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಈಗ 14 ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಿರುವುದು ಮೊದಲನೆಯ ಹಂತ. ಮುಂದೆ ಇನ್ನೂ ಅನೇಕ ಬ್ಯಾಂಕ್‌ಗಳು ರಾಷ್ಟ್ರೀಕರಣ ವಾಗಬಹುದು. ಕಾವೇರಿ ಬೇಸಿನ್‌ನಲ್ಲಿರುವ ಯೋಜನೆಗಳನ್ನು ಕೈಕೊಳ್ಳಬೇಕಾದರೆ ಸರ್ಕಾರದ ಬಳಿ ಹಣವಿಲ್ಲದಿರುವ ಕಾರಣ ಆ ಭಾಗದ ಜನರ ಜಮೀನನ್ನು ರಾಷ್ಟ್ರೀಕರಣವಾಗಿಲ್ಲದ ಬ್ಯಾಂಕ್‌ಗಳಿಗೆ ಆಧಾರ ಮಾಡಿಸಿ ಹಣ ಪಡೆಯುವುದಕ್ಕೆ ಕ್ರಮ ಕೈಕೊಳ್ಳುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಕೆಲವು ಬ್ಯಾಂಕ್‌ಗಳು ರಾಷ್ಟ್ರೀಕರಣವಾಗಿಲ್ಲದಿದ್ದರೂ ಕೂಡ ಆ ಬ್ಯಾಂಕ್‌ನವರು ರಿಜರ್ವ್‌ಬ್ಯಾಂಕ್‌ನ ಆದೇಶ ಮೀರಿ ಯಾರಿಗೂ ಸಾಲ ಕೊಡುವುದಕ್ಕಾಗುವುದಿಲ್ಲ. ಈಗ ರಾಷ್ಟ್ರೀಕರಣವಾಗಿರುವ ಬ್ಯಾಂಕ್‌ಗಳಿಂದಲೂ ಕೂಡ ಇರಿಗೇಷನ್‌ಗೆ ಸಹಾಯ ಪಡೆಯಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಅವನ್ನು ಪರಿಶೀಲನೆ ಮಾಡುತ್ತಿದ್ದೇವೆ. ಈ ರಾಷ್ಟ್ರೀಕೃತ ಬ್ಯಾಂಕ್‌ಗಳ ಬಗ್ಗೆ ಕೇಂದ್ರಸರ್ಕಾರದ ಧೋರಣೆ ಏನು ಇದೆ ಎಂಬ ಬಗ್ಗೆ ಇವತ್ತೇ ಹೇಳುವುದಕ್ಕಾಗುವುದಿಲ್ಲ.

Acceptance of Administrative Reforms Commission Recommendation

96. Sri M. V. VENKATAPPA (Graduates' Constituency).—

Will the Chief Minister be pleased to state.—

(*a*) whether the Government have received any suggestions on Administrative Reforms either from the Administrative Reforms Commissioner from the Central Government for implementation in the State;

(*b*) if so, what are they;

(*c*) the recommendations that have been accepted by the State Government;

(*d*) the recommendations that have been rejected by the State Government;

(*e*) the recommendations that are still under consideration of the State Government?

Sri VEERENDRA PATIL (Chief Minister).—

(*a*), (*b*), (*c*), (*d*) and (*e*) No specific suggestions have been received. Only certain reports finalised by the Commission have been sent to the State Government. These reports are being studied. It will be some time before a decision on the action to be taken on these reports is taken.

ಶ್ರೀ ಎಂ. ವಿ. ವೆಂಕಟಪ್ಪ.—ಆಯೋಗದವರು ಅಂತಿಮಗೊಳಿಸಿದ ಕೆಲವು ವರದಿಗಳನ್ನು ಮಾತ್ರ ರಾಜ್ಯ ಸರ್ಕಾರದವರಿಗೆ ಕಳುಹಿಸಿಕೊಡಲಾಗಿದೆ ಎಂದು ಹೇಳಿದ್ದೀರಿ. ಯಾವ ಯಾವ ವಿಷಯದಲ್ಲಿ ವರದಿಗಳನ್ನು ಕಳುಹಿಸಿದ್ದಾರೆ ಎಂಬುದನ್ನು ಹೇಳುತ್ತೀರಾ ?

†Sri VEERENDRA PATIL.—Machinery of Government of India and its procedure of work ; personnel administration ; Center State relationship ; Problems of redressing citizens' grievances ; Machinery for planning and similar problems are concerend in these reports. ಈ ವರದಿಗಳು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟವುಗಳಾಗಿವೆ.

ಶ್ರೀ ಎಂ. ವಿ. ವೆಂಕಟಪ್ಪ.—ಲೋಕಪಾಲ ಮತ್ತು ಲೋಕಆಯುಕ್ತ ವಿಷಯದಲ್ಲಿ ಏನಾದರೂ ವರದಿಗಳು ಕೇಂದ್ರ ಸರ್ಕಾರದಿಂದ ಬಂದಿದೆಯೇ, ಬಂದಿದ್ದರೆ ನಮ್ಮ ಸರ್ಕಾರದವರು ಆ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಆ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ಕೆ. ಟಿ. ಶಾಮಯ್ಯಗೌಡ.—ಉತ್ತರದಲ್ಲಿ ವರದಿಗಳನ್ನು ಅಭ್ಯಸಿಸಲಾಗುತ್ತಿದೆ, ಈ ವರದಿಗಳ ಬಗ್ಗೆ ಕೈಕೊಳ್ಳುವ ಕ್ರಮಗಳ ವಿಚಾರದಲ್ಲಿ ನಿರ್ಧಾರ ಕೈಕೊಳ್ಳಲು ಇನ್ನೂ ಕೆಲವು ಸಮಯವಾಗುವುದು ಎಂದು ಹೇಳಿದ್ದೀರಿ. ಕೇಂದ್ರಸರ್ಕಾರದವರು ಈ ಬಗ್ಗೆ ಏನಾದರೂ ಅಭಿಪ್ರಾಯ ಕೇಳಿದ್ದಾರೆಯೇ ಮತ್ತು ಅವುಗಳನ್ನು ಇಂಪ್ಲಿಮೆಂಟ್ ಮಾಡಿ ಎಂದು ಹೇಳಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಆಡಳಿತ ಸುಧಾರಣಾ ಆಯೋಗದವರು ಕೇಂದ್ರಸರ್ಕಾರಕ್ಕೆ ವರದಿಗಳನ್ನು ಕಳಿಸುತ್ತಾರೆ. ಕೇಂದ್ರಸರ್ಕಾರದವರು ಆ ವರದಿಗಳನ್ನು ರಾಜ್ಯಸರ್ಕಾರಗಳಿಗೂ ಸಹ ಕಳಿಸುತ್ತಾರೆ. ಆ ವರದಿಗಳಲ್ಲಿ ನಮಗೆ ಸಂಬಂಧಪಟ್ಟಿರುವ ಸಲಹೆಗಳು ಏನಾದರೂ ಇದ್ದರೆ ಅವುಗಳನ್ನು ಪರಿಶೀಲನೆ ಮಾಡುತ್ತೇವೆ. ಈಗ ಪೇ ಕಮಿಷನ್ ಅವರು ಸಹ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಇವೆರಡನ್ನು ಸೇರಿಸಿ ಮುಂದಿನ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಆಡಳಿತ ಸುಧಾರಣಾ ಆಯೋಗದವರು ಅಭಿಪ್ರಾಯಪಟ್ಟಿರುವಂತೆ ಲೋಕಪಾಲ ಮತ್ತು ಲೋಕ ಆಯುಕ್ತ ಕೇಂದ್ರ ಸರ್ಕಾರದ ಪರಿಮಿತಿಯೊಳಗೇ ಬರುತ್ತವೋ ಅಥವಾ ರಾಜ್ಯಸರ್ಕಾರದ ಪರಿಮಿತಿಯೊಳಗೆ ಬರುತ್ತವೋ ?

ಶ್ರೀ ವೀರೇಂದ್ರ ಪಾಟೀಲ್.—ಆ ಬಗ್ಗೆ ವಿವರಗಳು ಈಗ ನನ್ನ ಮುಂದೆ ಇಲ್ಲ.

Sri G. V. GOWDA.—May I know what time the Government may require to study the suggestions and implement them which are useful in relation to the States ?

Sri VEERENDRA PATIL.—Most of the recommendations made pertain to the Government of India. If there are any suggestions that relate to the State Government, they are being studied and we have received another report from the Pay Commission. We are studying these suggestions and we have to take action only after making a detailed study.

ಶ್ರೀ ಎಂ. ವಿ. ವೆಂಕಟಪ್ಪ.—ರಿಪೋರ್ಟನಲ್ಲಿ ಮಂತ್ರಿಮಂಡಲದ ಗಾತ್ರದ ಬಗ್ಗೆ ಪ್ರಸ್ತಾಪ ಮಾಡುತ್ತಾ ರಾಜ್ಯ ಶಾಸನ ಸಭೆಗಳಲ್ಲಿರುವ ಸದಸ್ಯರ ಶೇಕಡಾ ಹನ್ನೊಂದರಷ್ಟು ಜನ ಮಂತ್ರಿ ಮಂಡಲದಲ್ಲಿರಬಹುದು ಎನ್ನುವ ಸೂಚನೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇದನ್ನು ನಾನು ಹೇಳುವುದು ಕಷ್ಟವಾಗುತ್ತದೆ. ಅವರು ಏನೇನು ರಿಪೋರ್ಟುಗಳನ್ನು ಕೊಟ್ಟಿದ್ದಾರೆ ಅವೆಲ್ಲಾ ಕೇಂದ್ರ ಸರಕಾರಕ್ಕೇ ಸಂಬಂಧ ಪಟ್ಟಂತಹವುಗಳು.

Mr. DEPUTY CHAIRMAN.—Sri Hiregouder may put the Question No. 137.

Kannada Pandit Examination

137. Sri V. S. HIRE GOUDAR (Local Authorities Constituency).—(On behalf of Sri Basavaraj Kattimani (Nominated).—

Will the Minister for Education be pleased to state :—

(a) whether it is a fact that Kannada Pandit examination is conducted once in two years ;

(b) if so, whether the Government has any idea of conducting this examination once in a year as in the case of other examinations to prevent the wastage of time as the failed candidates have to wait for two years to appear again for the examination ?

Sri N. M. KOTRABASAIAH SOGI (Deputy Minister for Education).—

(a) Yes.

(b) The matter is under consideration of the Government.

ಶ್ರೀ ವಿ. ಎಸ್. ಹಿರೇಗೌಡರ್.—ಎರಡು ವರ್ಷಕ್ಕೆ ಒಮ್ಮೆ ಪಂಡಿತ ಪರೀಕ್ಷೆ ಎಂದು ಮಾಡಿದರೆ ಇದರಿಂದ ಬಹಳ ಶಿಕ್ಷಕರಿಗೆ ತೊಂದರೆಯಾಗುತ್ತದೆ. ಇದಕ್ಕಾಗಿ ಪ್ರತಿ ವರ್ಷವೂ ನಡೆಸುವಂತೆ ಮಾಡಲು ಸರಕಾರ ಬೇಗನೆ ಏರ್ಪಾಟು ಮಾಡುತ್ತಾರೆಯೇ ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದನ್ನು ಉತ್ತರದಲ್ಲೇ ಹೇಳಲಾಗಿದೆ. ಇದು ಉಪಾಧ್ಯಾಯರುಗಳ ಸಂಖ್ಯೆಯಮೇಲೆ ಅವಲಂಬಿಸಿರುತ್ತದೆ. ಸಾಕಷ್ಟು ಸಂಖ್ಯೆಯಲ್ಲಿ ಉಪಾಧ್ಯಾಯರುಗಳು ಇದ್ದರೆ ಆಗ ಪ್ರತಿ ವರ್ಷ ಪರೀಕ್ಷೆಗಳನ್ನು ನಡೆಸುವುದನ್ನು ವಿಚಾರ ಮಾಡುತ್ತಾರೆ.

ಶ್ರೀ ಬಿ. ಚನ್ನಬೈರೇಗೌಡ.—ನಮ್ಮ ರಾಜ್ಯಕ್ಕೆ ಒಟ್ಟು ಇರುವ ಹೈಸ್ಕೂಲುಗಳಿಗೆ ಹಾಗೂ ಮಾಧ್ಯಮಿಕ ಶಾಲೆಗಳಿಗೆ ಎಷ್ಟು ಜನ ಕನ್ನಡ ಪಂಡಿತರುಗಳು ಬೇಕಾಗುತ್ತದೆ ಮತ್ತು ವರ್ಷದಲ್ಲಿ ಎಷ್ಟು ಜನ ಪಂಡಿತರು ಪರೀಕ್ಷೆಗಳಲ್ಲಿ ಪಾಸಾಗಿ ಬರುತ್ತಾರೆ, ಇದರ ವಿವರಗಳು ಇವೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿಯೂ ಇರುವ ಹೈಸ್ಕೂಲುಗಳಲ್ಲಿ ಕನ್ನಡ ಪಂಡಿತರುಗಳಿದ್ದಾರೆ. ಇದರಲ್ಲಿ ಅಂತಹ ಕೊರತೆ ಇಲ್ಲ. ಆದರೆ ಖಾಸಗಿ ಹೈಸ್ಕೂಲುಗಳಲ್ಲಿ ಕನ್ನಡ ಪಂಡಿತರುಗಳ ಕೊರತೆ ಇದೆ. ಇದನ್ನು ನಿವಾರಿಸುವುದಕ್ಕಾಗಿ ಮೈಸೂರಿನಲ್ಲಿ ಸರಕಾರದ ಒಂದು ಟ್ರೈನಿಂಗು ಕಾಲೇಜು ಇದೆ ಮತ್ತು ಖಾಸಗಿಯವರೂ ಕೆಲವು ಕಡೆ ಇಂತಹ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ವರ್ಷದಲ್ಲಿ ಪರೀಕ್ಷೆಗಳ ಮೂಲಕ ಸುಮಾರು 40–50 ಜನರು ಕನ್ನಡ ಪಂಡಿತರು ಪಾಸಾಗಿ ಬರುತ್ತಾರೆ.

ಶ್ರೀ ಬಿ. ಚನ್ನಬೈರೇಗೌಡ.—ನಮ್ಮ ಮೈಸೂರು ರಾಜ್ಯದಲ್ಲಿ ಸುಮಾರು 200 ಪಂಡಿತರ ಕೊರತೆ ಇದೆ ಎಂದು ನನಗೆ ತಿಳಿದಿದೆ. ಇನ್ನೂ ಜಾಸ್ತಿ ಇದೆಯೋ ಎಂದು ನನಗೆ ಗೊತ್ತಿಲ್ಲ. ಇವರ ಸಂಖ್ಯೆಯನ್ನು ಜಾಸ್ತಿ ಮಾಡಬೇಕಾದರೆ ಪ್ರತಿ ವರ್ಷವೂ ಇಂತಹ ಪಂಡಿತ ಪರೀಕ್ಷೆಗಳನ್ನು ಸರಕಾರ ನಡೆಸುವುದು ಒಳ್ಳೆಯದಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಹೈಸ್ಕೂಲುಗಳಲ್ಲಿ ಬಿ. ಎ. ಜೊತೆಗೆ ಕನ್ನಡ ಮೇಜರು ತೆಗೆದುಕೊಂಡು ಪಾಸು ಮಾಡಿರುವ ಗ್ರ್ಯಾಜುಯೇಟರುಗಳನ್ನು ನೇಮಕ ಮಾಡುತ್ತಿದ್ದಾರೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಹಾಗೂ ಕರ್ನಾಟಕ ಯೂನಿವರ್ಸಿಟಿಯಲ್ಲಿ ಕನ್ನಡ ಮೇಜರು ತೆಗೆದುಕೊಂಡು ಬಿ. ಎ. ಪಾಸು ಮಾಡಲು ಅನುಕೂಲ ಮಾಡಿದ್ದಾರೆ. ಇದರಿಂದ ಪಂಡಿತರುಗಳ ಕೊರತೆ ಅಷ್ಟು ಇದೆ ಎಂದು ನಮಗೆ ಕಾಣುತ್ತಿಲ್ಲ.

ಶ್ರೀ ವಿ. ವೆಂಕಟಪ್ಪ.—ಕನ್ನಡ ಪಂಡಿತರನ್ನಾಗಿ ಬಿ.ಎ. ಕನ್ನಡ ಪಾಸು ಮಾಡಿರುವವರನ್ನು ನೇಮಕ ಮಾಡುತ್ತಿರುವುದು ಸರಕಾರಕ್ಕೆ ಗೊತ್ತಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಬಿ.ಎ. ಮೇಜರಾಗಿ ತೆಗೆದುಕೊಂಡು ಪಾಸು ಮಾಡಿರುವವರನ್ನು ಪಂಡಿತನ್ನಾಗಿ ನೇಮಕ ಮಾಡುತ್ತಿದ್ದಾರೆ.

ಶ್ರೀ ವಿ. ವೆಂಕಟಪ್ಪ.—ಇವರನ್ನು ಪಂಡಿತರನ್ನಾಗಿ ಮಾಡಿದರೆ ಇವರಿಗೆ ಇರುವ ಸ್ಥಾನಮಾನ ಏನು ಎನ್ನುವುದನ್ನು ಪರಿಗಣನೆ ಮಾಡಿದ್ದೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಎಸ್. ಎಸ್. ಎಲ್. ಸಿ. ಮಾಡಿಕೊಂಡು ನಂತರ ಪಂಡಿತ ಪರೀಕ್ಷೆ ಮಾಡಿಕೊಳ್ಳುತ್ತಾರೆ. ಕೆಲವರು ಬಿ. ಎ. ಪಾಸು ಮಾಡುವಾಗ ಕನ್ನಡ ಮೇಜರಾಗಿ ತೆಗೆದುಕೊಂಡು ಪಾಸು ಮಾಡಿ ಬಂದವರನ್ನು ಹೈಸ್ಕೂಲುಗಳಲ್ಲಿ ಕನ್ನಡ ಪಂಡಿತ ಪರೀಕ್ಷೆ ಪಾಸು ಮಾಡಿಕೊಂಡು ಬರುತ್ತಾರೆ. ಇವರನ್ನು ಹೈಸ್ಕೂಲುಗಳಲ್ಲಿ ಗ್ರ್ಯಾಜುಯೇಟು ಟೀಚರುಗಳಾಗಿ ನೇಮಕ ಮಾಡುತ್ತಾರೆ.

ಶ್ರೀ ವಿ. ವೆಂಕಟಪ್ಪ.—ಪಂಡಿತರಾಗಿ ಬರಲು ಬಿ.ಎ. ಪಾಸು ಮಾಡಿದವರನ್ನೇ ಸರಕಾರ ಪ್ರೋತ್ಸಾಹ ಮಾಡಿ ಅವರನ್ನು ನೇಮಿಸಬೇಕು ಎಂದು ಮಾಡಿರುವುದು ಗೊತ್ತಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸಾಮಾನ್ಯವಾಗಿ ಕೆಲವು ಕಡೆ ಬಿ.ಎ. ಪಾಸಾದವರನ್ನೇ ನೇಮಕ ಮಾಡಿದರೂ ತಾತ್ಕಾಲಿಕವಾಗಿ ಕೆಲವು ಕಡೆ ಸ್ಕೂಲುಗಳಲ್ಲಿ ಇತರ ಪಂಡಿತರನ್ನೂ ನೇಮಕ ಮಾಡುತ್ತಾರೆ. ಇದನ್ನು ಇನ್ನೂ ಕೆಲವು ಕಾಲ ನೋಡಿ ಆ ನಂತರ ಪರಿಶೀಲನೆ ಮಾಡಬೇಕು.

ಶ್ರೀ ವಿ. ವೆಂಕಟಪ್ಪ.—ಸ್ವಾಮಿ, ಕೆಲಸಕ್ಕೆ ತೆಗೆದುಕೊಳ್ಳುವಾಗ ಕನ್ನಡ ಪಂಡಿತರುಗಳಿಗೆ ಹೆಚ್ಚಿಗೆ ಅವಕಾಶ ಕೊಡದೆ ಕನ್ನಡ ಮೇಜರ್ ಆಗಿ ತೆಗೆದುಕೊಂಡು ಬಿ.ಎ. ಮಾಡಿಕೊಂಡಿರುವವರಿಗೆ ಹೆಚ್ಚಿಗೆ ಪ್ರಾಶಸ್ತ್ಯ ಕೊಡುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸಾಮಾನ್ಯವಾಗಿ ಕನ್ನಡ ಪಂಡಿತರು ಮತ್ತು ಕನ್ನಡ ಮೇಜರ್ ಆಗಿ ತೆಗೆದುಕೊಂಡು ಬಿ.ಎ. ಆಗಿರುವವರು ಇಬ್ಬರೂ ಕೆಲಸಕ್ಕೆ ಅರ್ಜಿ ಹಾಕಿದಾಗ ಬಿ. ಎ. ಕನ್ನಡ ಮಾಡಿಕೊಂಡಿರುವವರಿಗೆ ಪ್ರಿಫರೆನ್ಸ್ ಕೊಡುತ್ತೇವೆ.

ಶ್ರೀ ಎಂ. ಜಿ. ಹಂದ್ರಾಳ್.—ಸ್ವಾಮಿ, ಕನ್ನಡದಲ್ಲಿ ಜಾಣ ಪರೀಕ್ಷೆಯನ್ನು ಪಾಸು ಮಾಡಿದಂಥವರು ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರುಗಳಾಗಿದ್ದಾರೆ. 1961 ರ ಹಿಂದೆ ಕನ್ನಡ ಜಾಣ ಪರೀಕ್ಷೆಯನ್ನು ಎಸ್. ಎಸ್. ಎಲ್. ಸಿ. ಗೆ ಸಮಾನವೆಂದು ಪರಿಗಣಿಸಲಾಗಿತ್ತು. ಅದೇ ರೀತಿ 1962 ರಲ್ಲೂ ಕನ್ನಡ ಜಾಣ ಪರೀಕ್ಷೆ ಪಾಸುಮಾಡಿಕೊಂಡಿರುವವರು ಇದೇ ಸವಲತ್ತು ಕೇಳಿದರೆ ಸರ್ಕಾರ ಪರಿಶೀಲಿಸುವುದೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಈಗ ಉದ್ಭವವಾಗುವುದಿಲ್ಲ ಎಂದು ನನಗೆ ಅನಿಸುತ್ತದೆ. ಕಾರಣ ಈಗ ಕನ್ನಡದ ಜಾಣ ಪರೀಕ್ಷೆ ಎಸ್. ಎಸ್. ಎಲ್. ಸಿ. ಗೆ ಸಮಾನವಲ್ಲ. 1962 ರ ಪೂರ್ವದಲ್ಲಿ ಕನ್ನಡ ಪಂಡಿತರ ಕೊರತೆ ಇದ್ದುದರಿಂದ ಪ್ರೈಮರಿ ಶಾಲೆಗಳಲ್ಲಿ ಕೆಲಸಕ್ಕೆ ತೆಗೆದುಕೊಳ್ಳಬೇಕಾಗಿರುವುದರಿಂದ ಕನ್ನಡದ ಜಾಣ ಪರೀಕ್ಷೆ ಪಾಸು ಆಗಿರುವವರನ್ನು ಎಸ್. ಎಸ್. ಎಲ್. ಸಿ. ಗೆ ಸಮಾನವೆಂದು ಪರಿಗಣನೆ ಮಾಡಲಾಗಿತ್ತು. ಅದರಂತೆ ಕನ್ನಡ ಟೀಚರ್ಸ್ ಆಗಿ ಅಪಾಯಿಂಟ್ ಮಾಡುತ್ತಿದ್ದರು. ಈಗ 1961ರಿಂದ ಈ ರೀತಿ ಮಾಡಬಾರದು ಎಂದು ಸರ್ಕಾರದ ಹುಕುಂ ಮಾಡಿದೆ. ಈ ರೂಲು ಪ್ರಕಾರ ಈಗ ಆಗುವುದಿಲ್ಲ.

ಶ್ರೀ ಎಸ್. ಪಿ. ರಾಜಣ್ಣ.—ಕನ್ನಡ ಪಂಡಿತ ಪರೀಕ್ಷೆ ಮತ್ತು ಮುನ್ಸಿ ಪರೀಕ್ಷೆಗಳನ್ನು ಎರಡು ವರ್ಷಕ್ಕೊಮ್ಮೆ ನಡೆಸುತ್ತಿದ್ದಾರೆ. ಇದು ಎಷ್ಟು ಸೆಂಟರುಗಳಲ್ಲಿ ನಡೆಯುತ್ತಾ ಇದೆ ಎನ್ನುವುದು ಗೊತ್ತಿದೆಯೇ ಮತ್ತು ಅದಕ್ಕೆ ಹೆಚ್ಚು ಹುಡುಗರು ಕೂತುಕೊಳ್ಳುತ್ತಿದ್ದಾರೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಆಗಲೇ ಉತ್ತರ ಹೇಳಿದ್ದೇನೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಸ್ವಾಮಿ, ಹಿಂದೆ ಕನ್ನಡವನ್ನು ಹೇಳಿಕೊಡುವುದಕ್ಕೆ ಕನ್ನಡ ಪಂಡಿತರುಗಳನ್ನು ನೇಮಕ ಮಾಡುತ್ತಿದ್ದರು. ಈಗ ಕನ್ನಡ ಪಂಡಿತರು ಇಲ್ಲವೇ ಇದ್ದರೂ ಪಾಠ ಹೇಳಿಕೊಟ್ಟರೆ ಸಾಕು ಅಲ್ಲವೇ ? ಇದಕ್ಕೆ ಸರ್ಕಾರದ ಧೋರಣೆ ಏನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಹಾಗೇನೂ ಇಲ್ಲ. ಅವರಿಗೆ ಯಾವ ಯಾವ ಕ್ವಾಲಿಫಿಕೇಷನ್ ಇರಬೇಕೋ ಅದು ಇದ್ದರೆ ಅವರು ಟೀಚ್ ಮಾಡುವುದಕ್ಕೆ ಅರ್ಹರಾಗಿರುತ್ತಾರೆ.

ಶ್ರೀ ಎಸ್. ಪಿ. ರಾಜಣ್ಣ.—ಕನ್ನಡ ಜಾಣ ಪರೀಕ್ಷೆ ಎಷ್ಟು ಸೆಂಟರುಗಳಲ್ಲಿ ನಡೆಯುತ್ತಾ ಇದೆ ಸ್ವಾಮಿ ?

Sri N. M. KOTRABASAIAH SOGI.—I want notice.

ಶ್ರೀ ವಿ. ಎಸ್. ಹಿರೇಗೌಡರ್.—ಸ್ವಾಮಿ, ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಅಂಡರ್ ಕನ್ಸಿಡರೇಷನ್ ಎಂದು ಹೇಳುತ್ತಾರೆ. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳಲ್ಲಿ ನಿವೇದನೆ ಮಾಡಿಕೊಳ್ಳುವುದು ಏನೆಂದರೆ ಕನ್ಸಿಡರೇಷನ್ ಎನ್ನುವುದಕ್ಕೆ ಒಂದು ಇತಿ ಮಿತಿ ಹಾಕಿ ಒಂದು ದಿವಸದಲ್ಲೋ ಅಥವಾ ಎರಡು ದಿವಸದಲ್ಲೋ ಆಗುವಂತೆ ಮಾಡುತ್ತೀರಾ ? ಅಥವಾ ನಮಗೆ ಸಮಾಧಾನವಾಗಲಿ ಎಂದು ಉತ್ತರ ಕೊಡುತ್ತಾರೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಯಾವುದಾದರೂ ಕಾಯಿದೆ ಕಾನೂನುಗಳನ್ನು ಮಾಡುವಾಗ ಸರ್ಕಾರದ ಆಡಳಿತದ ಇತಿಮಿತಿಗಳನ್ನೂ ಪರಿಶೀಲಿಸಿ, ಇದು ಸರ್ವದೃಷ್ಟಿಯಿಂದ ಯೋಗ್ಯವಾದದು ಎಂದು ಕಂಡುಬಂದರೆ ಅದಕ್ಕೆ ಒಪ್ಪಿಗೆ ಕೊಡುತ್ತಾರೆ.

Mr. DEPUTY CHAIRMAN.—Sri M. G. Handral may put question No. 143.

Increments to untrained Primary School Teachers

143. Sri M. G. HANDRAL (Teachers' Constituency) [on behalf of Sri Basavaraj Kattimani (Nominated)].—

Will the Minister for Education be pleased to state :—

(a) whether it is a fact that the increments of untrained primary school teachers were withheld from 23rd June 1961 ;

(b) whether it is a fact that the Government have issued an order in july 1969 revising the same to grant increments even to the untrained primary school teachers ;

(c) whether it has been mentioned in the said order that the arrears of increment for the period from 1961 to 1969 will not be paid ;

(d) whether it has come to the notice of the Government that by the said order there is a loss of Rs. 2,000 to 3,000 to each of the untrained teachers ;

(e) whether the Government consider sympathetically the question of granting increments to them from 1961 up-to-date and thereby prevent the said loss to the poor primary school Teachers ?

Sri N. M. KOTRABASAIAH SOGI (Deputy Minister for Education).—

(a) Yes.

(b) No.

(c) Does not arise.

(d) Does not arise.

(e) The matter is pending decision by the High Court. The granting or non-granting of increments to untrained teachers will depend upon the decision of High Court.

Mr. DEPUTY CHAIRMAN.—I want to bring to the notice of the Hon'ble Members that the matter is pending in the High Court.

Sri G. V. GOWDA.—We want only to know who has taken the matter to the High Court and for what reason we also want to know the facts of the case briefly.

† Sri N. M. KOTRABASAIAH SOGI.—Some of the teachers who felt aggrieved by the order of the Government have gone to the High Court and the matter is pending there.

Sri S. P. RAJANNA.—Are the Language Teachers being paid increment or is training insisted upon and if so, what is the training that is insisted upon ?

Sri N. M. KOTRABASAIAH SOGI.—That is a different question; I want notice for that.

ಶ್ರೀ ಎಂ. ಡಿ. ಹಂದ್ರಾಳ್.—ಉಳಿದ ಎಲ್ಲಾ ಇಲಾಖೆಗಳಲ್ಲೂ ಒಂದು ವರ್ಷ ಸೇವೆ ಮುಗಿದ ಮೇಲೆ ಇನ್‌ಕ್ರಿಮೆಂಟ್ ಸರಾಗವಾಗಿ ಸಿಕ್ಕುವುದು. ಅದೇ ಉಪಾಧ್ಯಾಯರಿಗೆ ಹಾಗೆ ಸಿಕ್ಕುತ್ತಿಲ್ಲ. ಅವರಿಗೆ ಟ್ರೈನಿಂಗ್ ಆದಮೇಲೆ ಇನ್‌ಕ್ರಿಮೆಂಟ್ ಕೊಡಬೇಕೆಂದು ನಿರ್ಬಂಧ ಮಾಡಿರುವುದು ಅನ್ಯಾಯ. ಒಂದೊಂದು ವೇಳೆ ಟ್ರೈನಿಂಗ್ ಆಗಲು 8 ವರ್ಷವಾಗಬಹುದು. ಆದುದರಿಂದ ಇದನ್ನು ಸರಿಪಡಿಸಲು ಸರಕಾರ ಪ್ರಯತ್ನ ಮಾಡುವುದೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೊಗಿ.—ನಮ್ಮ ಟೀಚಿಂಗ್ ಕ್ರಮದಲ್ಲಿ ಟ್ರೈನಿಂಗ್ ಆಗಬೇಕಾದ್ದು ಆವಶ್ಯಕವೆಂದಿರುವುದರಿಂದ ಜನರಲ್ ಕ್ವಾಲಿಫಿಕೇಷನ್ನನ್ನು ಅರ್ಹತೆಯೆಂದು ಹೇಳುವುದಕ್ಕಾಗುವುದಿಲ್ಲ. ಜೊತೆಗೆ ಟ್ರೈನಿಂಗೂ ಆಗಬೇಕಾದ ಅವಶ್ಯಕತೆಯಿದೆಯೆಂದು ಕಾಣುವುದು. ಮತ್ತು ಜನರಿಗೆ ಒಂದು ಇನ್‌ಸೆಂಟಿವ್ ಸಿಕ್ಕುವುದು. ಸದ್ಯಕ್ಕೆ ಈ ವಿಚಾರ ಹೈಕೋರ್ಟಿನಲ್ಲಿರುವುದರಿಂದ ಕೋರ್ಟಿನಲ್ಲಿ ತೀರ್ಮಾನವಾದ ಮೇಲೆ ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

Number of Polytechnics in the State

155. Smt. M. R. LAKSHAMMA (Graduates' Constituency).—

Will the Minister for Education be pleased to state :—

(a) the number of Polytechnics in the State ;

(b) the total number of students studying in the Polytechnics (figures for 1967-68, 1968-69, 1969-70 may kindly be furnished) ;

(*c*) whether the Union Education Minister has asked the Director of Technical Education to reorganise the Polytechnics Courses by introducing sandwich Courses and the two-year Diploma Courses for specialised skills besides the normal courses;

(*d*) if yes, which are the sandwich courses and the two-years diploma courses so introduced?

Sri N. M. KOTRABASAIAH SOGI (Deputy Minister for Education)

(*a*) 33.

(*b*) (i) 1967-68 ... 8,770
(ii) 1968-69 ... 6,966
(iii) 1969-70 ... 5,484

(*c*) Yes. But Government of India have not suggested two-year courses.

(*d*) Mining course in the School of Mines, K.G.F.

Smt. M. R. LAKSHAMMA.—What exactly is the connotation of 'sandwich course'?

†Sri N. M. KOTRABASAIAH SOGI.—We have not received any official communication or instruction from the Central Government in regard to this matter. By 'sandwich' I mean that any training that is given must be need-based and employment-oriented. Such training is being given at our mining school at Kolar.

ಶ್ರೀ ಕೆ. ಟಿ. ಶಾಮಯ್ಯ ಗೌಡ.—ವೆಜಿಟೇರಿಯನ್ ಮತ್ತು ನಾನ್‌ವೆಜಿಟೇರಿಯನ್ ಸ್ಯಾಂಡ್‌ವಿಚ್ ಎಂದು ಮಾತ್ರ ನಾನು ಕೇಳಿದ್ದೆ. ಇದು ಯಾವುದು?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—3 ವರ್ಷ ಟ್ರೈನಿಂಗ್ ಕೊಟ್ಟರೆ ಸಾಲದು ಎಂದು ಒಂದು ವರ್ಷ ಪ್ರಾಕ್ಟಿಕಲ್‌ಗೆ ಅವಕಾಶವಿರಬೇಕು, ಹಾಗೆ ಮಾಡಿದರೆ ಸರಿಯಾದ ಜ್ಞಾನ ಬರುವುದು, ಅದಕ್ಕೆ ಅವಕಾಶವಿರಬೇಕು ಎಂಬ ಉದ್ದೇಶದಿಂದ ಅಂಥ ಒಂದು ಕೋರ್ಸನ್ನು ಏರ್ಪಾಡು ಮಾಡಿದ್ದಾರೆ, ಅದಕ್ಕೆ ಸ್ಯಾಂಡ್‌ವಿಚ್ ಎಂದು ಹೇಳುವರು.

Smt. M. R. LAKSHAMMA.—Is it not possible for the Director of Technical Education to devise other sandwich courses also besides the one at the mining school as they will be useful?

Sri N. M. KOTRABASAIAH SOGI.—We have been thinking of it and are working at it also. But it needs some co-operation from industrial concerns in the locality to provide the necessary facilities.

3-30 P.M.

Smt. M. R. LAKSHAMMA.—Will Government think of conducting negotiations with the industrial concerns in the City both Central as well as State industrial concerns and see that an agreement is arrived at for the introduction of sandwich courses?

Sri N. M. KOTRABASAIAH SOGI.—It is not the question of agreement, but it depends upon the location of the industries and providing necessary work for the school children. Anyway Government is now

(SRI N. M KOTRABASAIAH SOGI)

thinking of starting some diversified course and sandwich courses at different places according to the availability of the co-operation from Industrial concerns, courses for tele-communication engineering at Gulbarga tele-communication engineering at the Polytechnic for women, Bangalore, automobile engineering at Bellary, printing technology Mysore.

ಶ್ರೀ ಕೆ. ಎಸ್. ಸೂರ್ಯನಾರಾಯಣ ಅಡಿಗ.—ಈ ಪಾಲಿಟೆಕ್ನಿಕ್‌ಗಳನ್ನು ಅಂತ್ಯಗೊಳಿಸಿ ಹೈಸ್ಕೂಲುಗಳಲ್ಲೇ ಕೆಲವು ಜನ ಇಂಜನಿಯರುಗಳನ್ನು ನೇಮಕ ಮಾಡಿ ಅಲ್ಲಿ ವಿದ್ಯಾರ್ಥಿಗಳಿಗೆ ಈ ಕ್ರಾಫ್ಟ್ಸ್ ಬಗ್ಗೆ ತರಬೇತಿ ಕೊಡುವಂತಹ ವ್ಯವಸ್ಥೆ ಮಾಡಿದರೆ ಅನುಕೂಲವಾಗುವುದಿಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದು ಮಾನ್ಯ ಸದಸ್ಯರ ಸಲಹೆ ಎಂದು ಹೇಳಬಹುದು.

Sri S. D. GAONKAR.—Will the Government think of starting a marine engineering course at Polytechnic, Karwar ?

Sri N. M. KOTRABASAIAH SOGI.—I have no information. If a separate question is put, I will get the information.

ಶ್ರೀ ಎಸ್. ಪಿ. ರಾಜಣ್ಣ.—ಈಗಾಗಲೇ ನಡೆಯುತ್ತಾ ಇರುವ ಟ್ರೈನಿಂಗ್ ಕೋರ್ಸಿಗೂ ಈ ಸ್ಯಾಂಡ್ವಿಚ್ ಕೋರ್ಸಿಗೂ ಏನಾದರೂ ವ್ಯತ್ಯಾಸ ಇದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದರಲ್ಲಿ ಪ್ರಾಕ್ಟಿಕಲ್ ವರ್ಕ್ ಇರುತ್ತದೆ. ಉದಾಹರಣೆಗೆ ಕೋಲಾರದ ಚಿನ್ನದ ಗಣಿಯಲ್ಲಿ ಭೂಮಿಯ ಒಳಗೆ ಕೆಲಸಗಾರರು ಹೇಗೆ ಕೆಲಸ ಮಾಡುತ್ತಾ ಇದ್ದಾರೆ, ಮಣ್ಣಿನ ಗುಣ ಏನು, ಕಲ್ಲಿನ ಗುಣ ಏನು ಅಂತ ಹೇಳಿ ಸ್ವತಃ ಕಣ್ಣಾರೆ ನೋಡಿ ಕೆಲಸ ಮಾಡಬೇಕು ಎಂಬ ಉದ್ದೇಶದಿಂದ ಈ ಟ್ರೈನಿಂಗನ್ನು ವ್ಯವಸ್ಥೆ ಮಾಡಿದ್ದಾರೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಪಾಲಿಟೆಕ್ನಿಕ್ ಎಲ್ಲೆಲ್ಲಿದೆಯೋ ಅಲ್ಲೆಲ್ಲಾ ಟೆಕ್ಸ್‌ಟೈಲ್ ಇಂಡಸ್ಟ್ರೀಸ್ ಇರುವ ಕಡೆ ಹೆಚ್ಚು ಜನ ಕೆಲಸಗಾರರು ಬೇಕಾಗುತ್ತದೆ. ಅಂತಹ ಕಡೆ ಟೆಕ್ಸ್‌ಟೈಲ್ ಇಂಜನಿಯರಿಂಗ್ ಕೋರ್ಸನ್ನು ಪ್ರಾರಂಭ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

Sri N. M. KOTRABASAIAH SOGI.—It is a good suggestion for consideration.

ಶ್ರೀ ಕೆ. ಟಿ. ಶಾಮಯ್ಯಗೌಡ.—ಈಗ ಪಾಲಿಟೆಕ್ನಿಕ್‌ಗಳಲ್ಲಿ ಓದಿ ಪಾಸ್ ಮಾಡಿದವರಿಗೆ ಶೇಕಡ 50 ಜನರಿಗೆ ಕೆಲಸವಿಲ್ಲದೆ ತಿರುಗುತ್ತಾ ಇದ್ದಾರೆ. ಆದ್ದರಿಂದ ಇನ್ನು ಮುಂದೆ ಪಾಲಿಟೆಕ್ನಿಕ್‌ಗೆ ಸೇರದ ಹಾಗೆ ಮಾಡಿ ಆ ಎಲ್ಲಾ ಸ್ಕೂಲುಗಳನ್ನೂ ಸ್ಯಾಂಡ್‌ವಿಚ್ ಸ್ಕೂಲ್‌ಗಳನ್ನಾಗಿ ಕನ್‌ವರ್ಟ್ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈ ಸ್ಯಾಂಡ್ವಿಚ್‌ಟ್ರೈನಿಂಗ್ ಕೋರ್ಸ್ ಅನ್ನುವುದು ಪ್ರತ್ಯೇಕವಾದ ಟ್ರೈನಿಂಗ್ ಕೋರ್ಸ್ ಅಲ್ಲ. ತಮಗೆಲ್ಲಾ ಗೊತ್ತಿರುವಹಾಗೆ ಪಾಲಿಟೆಕ್ನಿಕ್‌ನಲ್ಲಿ ಪಾಸ್ ಆದಕೂಡಲೇ ಪ್ರೈವೇಟ್ ಫ್ಯಾಕ್ಟರಿಗಳಲ್ಲಿ ಮತ್ತು ಗವರ್ನಮೆಂಟ್ ಫ್ಯಾಕ್ಟರಿಗಳಲ್ಲೂ ಕೂಡ ಪ್ರಾಕ್ಟಿಕಲ್ ಟ್ರೈನಿಂಗ್ ಅಂತ ಟ್ರೈನಿಂಗ್ ಕೊಡುತ್ತಾ ಇದ್ದರು. ಅದನ್ನು ತಪ್ಪಿಸುವುದಕ್ಕೆ ಇಂತಹ ಒಂದು ಟ್ರೈನಿಂಗ್ ಕೋರ್ಸ್ ಮಾಡಬೇಕೆಂಬ ಉದ್ದೇಶದಿಂದ ಕೇಂದ್ರ ಸರ್ಕಾರದವರು ಇದನ್ನು ಮಾಡಬೇಕೆಂದು ಒಂದು ಸೂಚನೆ ಮಾಡಿದ್ದರು. ಅಕ್ಯಾಡೆಮಿಕ್ ಟ್ರೈನಿಂಗ್ ಬೇಕಾಗಿಲ್ಲ ಅಂತ ಅಲ್ಲ. ಅಕ್ಯಾಡಮಿಕ್ ಮತ್ತು ಪ್ರಾಕ್ಟಿಕಲ್ ಟ್ರೈನಿಂಗ್ ಎರಡಕ್ಕೂ ಅವಕಾಶ ಎಲ್ಲೆಲ್ಲಿ ಸಾಧ್ಯವಿದೆ ಅಂತಹ ಕಡೆ ಇದನ್ನು ಮಾಡಬೇಕಾಗುತ್ತದೆ. ಇದನ್ನೆಲ್ಲಾ ಪರಿಶೀಲನೆ ಮಾಡಿ ಮಾಡಬೇಕು.

Smt. M. R. LAKSHAMMA.—Is it not desirable to introduce sand-which courses in cities like Bangalore where there is considerable intake of personnel in factories like HAL, HMT, BEL, etc. to which Government are giving facilities like water and electricity ?

Sri N. M. KOTRABASAIAH SOGI.—It is a valuable suggestion and it will be considered, but all depends upon the availability of facilities from the industries for the introduction of such course. It may be possible to start in a city like Bangalore, but we have to consider whether it would be possible everywhere. The hon. Member's suggestion would be given due consideration.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಸರ್ಕಾರದವರು ಪ್ರಚಾರ ಮಾಡುತ್ತಾ ಇರತಕ್ಕ ಹಸಿರು ಕ್ರಾಂತಿಗೆ ಸಹಾಯಕವಾಗಲು ವ್ಯವಸಾಯದ ಬಗ್ಗೆ ಇಂತಹ ಒಂದು ಕೋರ್ಸನ್ನು ಪ್ರಾರಂಭ ಮಾಡಿದರೆ ಬಹುಶಃ ಹಸಿರು ಕ್ರಾಂತಿ ಅಂತ ಹೇಳಿ ಬಾಯಲ್ಲಿ ಹೇಳುವುದಕ್ಕಿಂತ ಕಾರ್ಯತಃ ಮಾಡಿದಂತಾಗುತ್ತದೆಯಲ್ಲವೇ ?

Sri N. M. KOTRABASAIAH SOGI.—I do not think that comes under Technical Education or Polytechnics which we are now discussing.

ಶ್ರೀ ಕೆ. ಚನ್ನಬಸವನಗೌಡ.—ಪಾಲಿಟೆಕ್ನಿಕ್‌ಗಳಲ್ಲಿ ಪಾಸ್ ಆದವರು 4 ಸಾವಿರ ಜನ ಹುಡುಗರು ಇದ್ದಾರೆ ಎಂದು ತಿಳಿದುಬಂದಿದೆ, ಈ ಒಂದು ಕೋರ್ಸ್ ಪ್ರಾರಂಭ ಮಾಡುವುದರಿಂದ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗುತ್ತದೆಯೇ ಅಥವಾ ಕಡಿಮೆಯಾಗುತ್ತದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆಗಲೇ ಹೇಳಿದೆ, ಇದು ಒಂದು ಪ್ರತ್ಯೇಕವಾದ ಕೋರ್ಸ್ ಅಲ್ಲ. ಹುಡುಗರು ಬರೀ ಪುಸ್ತಕದ ವಿಷಯ ಓದುವುದು, ಕ್ಲಾಸ್‌ನಲ್ಲಿ ಎಕ್ಸ್‌ಪರಿಮೆಂಟ್ ಮಾಡುವುದು ಅಷ್ಟೆ ಅಲ್ಲ ಕೈಗಾರಿಕೆ ಇದ್ದಲ್ಲಿ ಸ್ವತಃ ತಾವೇ ಹೋಗಿ ಅಲ್ಲಿರತಕ್ಕ ಉಪಕರಣಗಳನ್ನು ಮುಟ್ಟಿ—ಹೌಸ್ ಸರ್ಜನ್‌ರು ಯಾವ ರೀತಿ ರೋಗಿಗಳನ್ನು ಪರೀಕ್ಷೆ ಮಾಡುತ್ತಾರೆಯೋ ಆ ರೀತಿ ಕೆಲಸ ಮಾಡಲು ಅನುಕೂಲವಾಗುವ ದೃಷ್ಟಿಯಿಂದ ಈ ಸ್ಯಾಂಡ್ವಿಚ್ ಕೋರ್ಸ್‌ನ್ನು ಇನ್‌ಟ್ರೊಡೂಸ್ ಮಾಡಿದ್ದಾರೆ.

Mr. DEPUTY CHAIRMAN.—Question Hour is over.

Recruitment to the posts of teachers by the DEO, Chitradurga

† ಶ್ರೀ ಜಿ. ವಿ. ಆಂಜನಪ್ಪ (ಪದವೀಧರರ ಕ್ಷೇತ್ರ).—ತಮ್ಮ ಮೂಲಕ ಸರ್ಕಾರದ ಗಮನಕ್ಕೆ ಒಂದು ಅತ್ಯಂತ ಗಹನವಾದ ಮತ್ತು ಪ್ರಾಮುಖ್ಯವಾದ ವಿಚಾರವನ್ನು ತರಲು ಇಚ್ಛಿಸುತ್ತೇನೆ. ಚಿತ್ರದುರ್ಗ ನಗರದಲ್ಲಿ 30ನೇ ತಾರೀಖಿನಿಂದ ಸುಮಾರು 4 ಜನ ಇಂಡೆಫನೆಟ್ ಹಂಗರ್ ಸ್ಟ್ರೈಕ್ ಮಾಡುತ್ತಾ ಇದ್ದಾರೆ. 1962—63ರಲ್ಲಿ ಎಸ್. ಎಸ್. ಎಲ್. ಸಿ. ಪಾಸ್ ಆಗಿ ಟಿ. ಸಿ. ಎಚ್. ಪಾಸು ಆದವರು ಮತ್ತು 1965ರಲ್ಲಿ ಡಿ ಎಲ್ ಆರ್ ಸಿ ಯಲ್ಲಿ ಇದ್ದವರು ಯಾರಿದ್ದಾರೆ ಅವರನ್ನು ಗಣನೆಗೆ ತೆಗೆದುಕೊಳ್ಳದೆ ಚಿತ್ರದುರ್ಗದ ಡಿ. ಇ. ಒ. ರವರು 1969ನೇ ಇಸವಿಯಲ್ಲಿ ಪಾಸ್ ಆದವರಿಗೆ ಕೆಲಸ ಕೊಟ್ಟು ಅನ್ಯಾಯ ಮಾಡಿದ್ದಾರೆ ಎಂದು ಅವರು ಇಂಡೆಫನೆಟ್ ಸ್ಟ್ರೈಕ್ ಮಾಡಿದ್ದಾರೆ. ಅವರನ್ನು ಅಲ್ಲಿ ಇಂಟರ್‌ವ್ಯೂಗೆ ಕರೆದು ಹೀಗೆಲ್ಲಾ ಅನ್ಯಾಯಗಳನ್ನು ಮಾಡುತ್ತಿದ್ದಾರೆ. ಅದು ಸರಿಯಾದ್ದಲ್ಲ. ಹಾಗೆ ಮಾಡತಕ್ಕದ್ದು ಉಚಿತವಾದುದಲ್ಲ; ಸರ್ಕಾರದವರು ಆ ಉಮೇದುವಾರರನ್ನು ಆರಿಸಿಕೊಳ್ಳುವುದರಲ್ಲಿ ಒಂದು ಅವರ ಮೆರಿಟ್‌ಮೇಲೆ ಇಲ್ಲವೇ ಅವರು ಡಿ. ಎಲ್. ಆರ್. ಸಿ. ನಲ್ಲಿ ಎಷ್ಟು ವರ್ಷಗಳಿಂದ ಆರಿಸಲ್ಪಟ್ಟಿದ್ದಾರೆ ಎಂಬುದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಮಾಡಲಿ. ಅದಕ್ಕೆ ನಾನು ವಿರೋಧಮಾಡುವುದಿಲ್ಲ. ಈ ವಿಚಾರದಲ್ಲಿ ನನಗೆ ಈಗತಾನೇ ಬಂದಿರತಕ್ಕ ಒಂದು ಟೆಲಿಗ್ರಾಮನ್ನು ಸಭಾಧ್ಯಕ್ಷರ ಮೂಲಕ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ (ವಿಧಾನಸಭಾಕ್ಷೇತ್ರ).—ಹೀಗೆ ಒಂದೊಂದೇ ಸಮಸ್ಯೆಯನ್ನು ಸರ್ಕಾರದವರ ಗಮನಕ್ಕೆ ತಂದು ಅದಕ್ಕೆ ಪರಿಹಾರ ಪಡೆಯಬೇಕೆಂದರೆ ಅದು ಸಾಧ್ಯವಿಲ್ಲ. ಇದಕ್ಕೆ ಒಂದೇ ಒಂದು ಸರಿಯಾದ ದಾರಿ ಈ ತೊಂದರೆಗಳನ್ನೆಲ್ಲಾ ನಿವಾರಣೆ ಮಾಡುವುದಕ್ಕೆ ಇರುವುದು ಎಂದರೆ ಡಿ.ಇ.ಒ. ಚಿತ್ರದುರ್ಗ ಅವರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗಮಾಡಿದರೆ ಎಲ್ಲವೂ ಸರಿಹೋಗುತ್ತದೆ. ಆದ್ದರಿಂದ ಅವರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗ ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಸರ್ಕಾರದವರು ಕೊಡತಕ್ಕ ಆಜ್ಞೆಗಳನ್ನೇ ಅವರು ತಿರಸ್ಕರಿಸುತ್ತಿದ್ದಾರೆ.

Sri V. S. HIREGOUDER (Local Authorities' Constituency).—Sir, on a Point of Order. The valuable time of the House is used for representations and making allegations against the administrative officers.

Sri G. V. ANJANAPPA.—I rise to a Point of Order on a Point of Order. This is a convention. This has been allowed from a very long time. We make such representations time and again.

Mr. DEPUTY CHAIRMAN.—There is no Point of Order. Anyway the telegram will be sent to Government.

Non-Receipt of replies to Questions, Etc.

ಶ್ರೀ ಬಿ. ಚನ್ನಬೈರೇ ಗೌಡ.—ನಾನು ಕಳುಹಿಸಿದ್ದ ಪ್ರಶ್ನೆಗಳಿಗೊಂದಕ್ಕೂ ಉತ್ತರವೇ ಇಲ್ಲ. ಅತ್ತಕಡೆಯ ಪಕ್ಷದವರು ಕಳುಹಿಸಿರತಕ್ಕ ಪ್ರಶ್ನೆಗಳಿಗೆಲ್ಲಾ ಸಲೀಸಾಗಿ ಉತ್ತರಗಳು ಬರುತ್ತವೆ ಅದೇರೀತಿ ನಮ್ಮ ಪ್ರಶ್ನೆಗಳಿಗೇಕೆ ಉತ್ತರಗಳನ್ನು ತರಿಸಬಾರದು ?

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ನಾನೂ ಕೂಡ ದಾವಣಗೆರೆ ಸಿದ್ದೇಶ್ವರ ಟೆಕ್ಸ್‌ಟೈಲ್ಸ್ ಬಗ್ಗೆ ಒಂದು ಅಡ್‌ಜರ್ನ್‌ಮೆಂಟ್ ನೋಟೀಸನ್ನು ಕಳುಹಿಸಿದ್ದೆ. ಅಲ್ಲಿ ಬಹಳ ಹಿಂಸಾಕೃತ್ಯಗಳು ನಡೆಯುತ್ತಿವೆ. ಇದು ಕಣ್ಣಿಲ್ಲದ ಸರ್ಕಾರ. ಇಂಥ ಕುರುಡು ಸರ್ಕಾರಕ್ಕೆ ನಾವು ಈ ವಿಚಾರಗಳನ್ನು ಯಾವರೀತಿ ತಿಳಿಸಬೇಕೆಂದೇ ತಿಳಿಯದಾಗಿದೆ. ಅದರ ವಿಚಾರವಲ್ಲಿ ಮಾನ್ಯ ಅಧ್ಯಕ್ಷರು ಬೇಗ ಉತ್ತರವನ್ನು ತರಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

Mr. DEPUTY CHAIRMAN.—I will look into them.

Business of the House

ಶ್ರೀ ಜಿ. ವಿ. ಗೌಡ.—ನಾನು 10-12 ದಿನಗಳ ಹಿಂದೆ ಒಂದು ಕಾಲ್‌ಅಟೆನ್‌ಷನ್ ನೋಟೀಸನ್ನು ಕಳುಹಿಸಿದ್ದೆ.

Mr. DEPUTY CHAIRMAN.—It will be taken up tomorrow.

Sri V. S. HIREGOUDER.—Sir, many of the hon. Members including myself are interested to know how long the Session of this House continues.

Sri P. M. NADGOUDA (Minister for Development).—For the present, the Session of the Assembly will continue up to 5th and the Council may go up to 8th unless otherwise decided by the business Advisory Committee.

Non-official Resolution *re* :—constitutions of a committee to asses the benefits made available to Harijans and Girijans in the State since independence.

(*Debate continued*)

ಶ್ರೀ ಡಿ. ಮುನಿಚಿನ್ನಪ್ಪ.—ಸ್ವಾಮಿ, ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಹಿಂದೆ ಶ್ರೀ ಸುಬ್ಬಯ್ಯನವರು ತಂದಿದ್ದ ನಿರ್ಣಯದಮೇಲೆ ಮಾತನಾಡುತ್ತಾ ಸರ್ಕಾರದವರು ಷೆಡ್ಯೂಲ್ಡ್‌ಕ್ಯಾಸ್ಟಿನವರಿಗೆ ಮತ್ತು ಷೆಡ್ಯೂಲ್ಡ್ ಪಂಗಡದವರ ಅಭಿವೃದ್ಧಿಗಾಗಿ ಗ್ರಾಂಟ್‌ರೂಪದಲ್ಲಿ ಕೊಟ್ಟಿರತಕ್ಕ ಹಣ

ಎಷ್ಟು ಎಂಬುದನ್ನು ತಿಳಿಸಬೇಕೆಂದು ಒಂದು ಪ್ರಶ್ನೆಯನ್ನು ಕೊಟ್ಟಿದುದಕ್ಕೆ ಅವರು ಉತ್ತರ ಒದಗಿಸಿದ್ದಾರೆ. ಅದರ ಪ್ರಕಾರ ಅವರು ಕೊಟ್ಟಿರತಕ್ಕ ಹಣ ಎಷ್ಟೆಂದರೆ 1966-67, 2ಕೋಟಿ 28 ಲಕ್ಷ ರೂಪಾಯಿ. 1967-68ಕ್ಕೆ 2ಕೋಟಿ 17 ಲಕ್ಷ ರೂಪಾಯಿ, 1968-69ಕ್ಕೆ 2 ಕೋಟಿ 30 ಲಕ್ಷ ರೂಪಾಯಿ. ನಾನು ಈ ಹಣದಲ್ಲಿ ಅಧಿಕಾರವರ್ಗದವರಿಗೆ ಎಷ್ಟು ಹಣ ಖರ್ಚಾಗಿದೆ ತಿಳಿಸಬೇಕೆಂದು ಕೇಳಿದ್ದರ ಬಗ್ಗೆ ಅವರು ಹೀಗೆ ಉತ್ತರಕೊಟ್ಟಿದ್ದಾರೆ-1966-67 ರಲ್ಲಿ ಶಿಬ್ಬಂದಿಗಾಗಿ ಖರ್ಚಾಗಿರತಕ್ಕ ಹಣ 12 ಲಕ್ಷ 71 ಸಾವಿರ, 1967-68ಕ್ಕೆ 11 ಲಕ್ಷ 19 ಸಾವಿರ ಮತ್ತು 1968-69ಕ್ಕೆ 13 ಲಕ್ಷ 43 ಸಾವಿರ ಎಂದು ತಿಳಿಸಿದ್ದಾರೆ. ಇನ್ನು ಜನಾಂಗಕ್ಕೆ ಅವರ ಅಭಿವೃದ್ಧಿಗೆ ಖರ್ಚುಮಾಡಿರುವ ಹಣವೆಷ್ಟು ಎಂದು ಕೇಳಿದ್ದಕ್ಕೆ ಅವರು ಹೀಗೆ ಉತ್ತರಕೊಟ್ಟಿದ್ದಾರೆ.—1966-67 ರಲ್ಲಿ 2 ಲಕ್ಷದ 99 ಸಾವಿರದ 300 ರೂಪಾಯಿಗಳು, 1967-68 ರಲ್ಲಿ 13 ಲಕ್ಷ ಮತ್ತು 1968-69 ರಲ್ಲಿ 97 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆಂದು ತಿಳಿಸಿದ್ದಾರೆ. ಆದರೆ ಈ ಜನಾಂಗಗಳ ಅಭಿವೃದ್ಧಿಗೆಂದು ತೆಗೆದಿಟ್ಟ ಹಣದಲ್ಲಿ ವರ್ಷಂಪ್ರತಿ ಸರ್ಕಾರದವರು ಶಿಬ್ಬಂದಿಯ ವೆಚ್ಚಕ್ಕಾಗಿ ಒಂದು ವರ್ಷ 12 ಲಕ್ಷ ರೂಪಾಯಿಗಳನ್ನೂ ಅದರ ಮಾರನೇಯ ವರ್ಷ 14 ಲಕ್ಷ ರೂಪಾಯಿಗಳನ್ನೂ ಮತ್ತು ಅನಂತರದ ವರ್ಷದಲ್ಲಿ 62 ಲಕ್ಷ ರೂಪಾಯಿಗಳನ್ನೂ ಖರ್ಚುಮಾಡಿದ್ದಾರೆ. ಇದು ಬಹಳ ಅನ್ಯಾಯ. ಇನ್ನಾದರೂ ಸರ್ಕಾರದವರು ಇಂಥ ವೆಚ್ಚವನ್ನು ಕಡಮೆ ಮಾಡಿ ಈ ಜನರನ್ನು ಉದ್ಧಾರಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಎಸ್. ಎಸ್. ಎಲ್. ಸಿ. ಮತ್ತು ಪಿ.ಯು. ಸಿ. ಪಾಸಾದವರಿಗೆ ಅಂದರೆ ಈ ಹರಿಜನಗಿರಿಜನರಿಗೆ ಸೋಷಿಯಲ್ ವೆಲ್‌ಫೇರ್ ಇಲಾಖೆಯವರು ನೌಕರಿಗಳನ್ನು ಕೊಡಿಸಬೇಕೆಂಬ ಒಂದು ಸರ್ಕಾರಿ ಆಜ್ಞೆ ಇದೆ. ಮಂತ್ರಿಗಳು ಹೇಳಲಿ ಇಲ್ಲಿಯವರೆಗೂ ಆ ಇಲಾಖೆಯ ಮೂಲಕ ಎಷ್ಟು ಜನರಿಗೆ ನೌಕರಿಯನ್ನು ಕೊಡಿಸಿದ್ದಾರೆ ಎನ್ನುವುದನ್ನು, ಯಾರಿಗೂ ಅನುಕೂಲವಾಗಿಲ್ಲ. ಆ ಸೋಷಿಯಲ್ ವೆಲ್‌ಫೇರ್ ಇಲಾಖೆಯಲ್ಲೇ ಬಹಳ ತಾರತಮ್ಯ ನಡೆಯುತ್ತಿದೆ. ಇವರು ಬಲಗೈನವರು, ಇವರು ಎಡಗೈನವರು, ಇವರು ಬೋವಿ ಜನಾಂಗ, ಇವರು ಕೊರಚರು ಎಂಬ ಭಿನ್ನ ಭೇದಗಳನ್ನು ಅಲ್ಲಿ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ನನ್ನ ಅಭಿಪ್ರಾಯ ಇಷ್ಟೇ. ಅಲ್ಲಿರುವ ತಾರತಮ್ಯವನ್ನು ನೀಗುವುದಕ್ಕೆ ತಾವು ಸಹಾಯಮಾಡಬೇಕೆಂದು ನಾನು ಬಹಳ ವಿನಯದಿಂದ ಪ್ರಾರ್ಥಿಸುತ್ತೇನೆ.

ಇನ್ನು ಸ್ಟೇಟ್ ಕಮಿಟಿಗಳನ್ನು ಮಾಡಬೇಕು. ಅದರಲ್ಲಿ ಬೇರೆ ಜನಾಂಗದವರನ್ನು ಸೇರಿಸಬೇಕೆಂದು ಈ ಸಭೆಯ ಕೆಲವು ಸದಸ್ಯರು ಹೇಳಿದ್ದಾರೆ. ನಾನು ಅದಕ್ಕೆ ವಿರೋಧ ಮಾಡುವುದಿಲ್ಲ. ಈ ಕಮಿಟಿಗಳನ್ನು ಅವರು ಆರು ತಿಂಗಳುಗಳಾದರೂ ಕರೆಯುತ್ತಾ ಇಲ್ಲ. ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ, ಈ ಕಮಿಟಿಗಳನ್ನು ಎರಡು ತಿಂಗಳುಗಳಿಗೊಂದುಸಾರಿಯಾದರೂ ಕರೆದು ಈ ವಿಚಾರವಾಗಿ ಕೂಲಂಕಷವಾಗಿ ಪರಿಶೀಲಿಸಿದರೆ ಒಳ್ಳೆಯದಾಗುತ್ತದೆ. ನಾನು ಚುನಾವಣೆಯಾಗಿ ಒಂದು ವರ್ಷ 4 ತಿಂಗಳುಗಳಾದರೂ ಮೈಸೂರು ಸ್ಟೇಟ್ ಕಮಿಟಿಯಲ್ಲಿ ನನ್ನನ್ನು ಸೇರಿಸಬೇಕೆಂದು ಅರ್ಜಿ ಕೊಟ್ಟಿದ್ದರೂ ಸುಮಾರು 6 ತಿಂಗಳುಗಳಿಂದಲೂ ನನ್ನನ್ನು ಆ ಕಮಿಟಿಗೆ ಸೇರಿಸಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಉಪಸಭಾಪತಿಯವರು:—ಅದನ್ನು ಸರ್ಕಾರದವರು ಮಾಡಿದ್ದು.

ಶ್ರೀ ಡಿ. ಮುನಿಚಿನ್ನಪ್ಪ.—ಸರ್ಕಾರದ ಮುಖಾಂತರ ಅದೆಲ್ಲಾ ನಡೆಯಿತು ಅಂದರೆ ಹೇಗೆ ? ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಇಲ್ಲವೇ ? ಸರ್ಕಾರವೇ ಬೇರೆಯೇ ? ಈ ಡಿಪಾರ್ಟ್‌ಮೆಂಟ್ ಬೇರೆಯೇ ?

ಉಪಸಭಾಪತಿಯವರು.—ಸದಸ್ಯರುಗಳಿಗೆ ನೇರವಾಗಿ ಮಂತ್ರಿಗಳನ್ನುದ್ದೇಶಿಸಿ ಮಾತನಾಡ ಕೂಡದು. ಚೇರಿಗೆ ಅಡ್ರೆಸ್‌ಮಾಡಬೇಕು.

ಶ್ರೀ ಡಿ. ಮುನಿಚಿನ್ನಪ್ಪ.—ತಮ್ಮ ಮುಖಾಂತರ ಅವರಿಗೆ ಉತ್ತರ ನಾನು ಕೊಡಬೇಕಾಗುತ್ತದೆ, ಇಲ್ಲದೇ ಹೋದರೆ ನಾನು ಇಲ್ಲಿ ಹೆಚ್ಚುಕಡಿಮೆ ಮಾತನಾಡಿದರೆ ಅದು ಸರಿಹೋಗುವುದಿಲ್ಲ.

ಈಗ ಅವರಿಗೆ ಕೊಟ್ಟಿರುವ ಸವಲತ್ತುಗಳು ಎಷ್ಟರಮಟ್ಟಿಗೆ ಉಪಯೋಗವಾಗಿದೆ ಎಂದು ತಮ್ಮ ಮುಖಾಂತರ ಅವರು ಕೇಳಿದ್ದಕ್ಕೆ ಉತ್ತರ ಹೇಳಿದೆ. ಬಹು ಮುಖ್ಯವಾಗಿ ಷೆಡ್ಯೂಲ್ಡ್ ಕ್ಯಾಸ್ಟ್ ಜನರು ಮುಂದುವರಿಯುವುದಕ್ಕೆ ಸರ್ಕಾರದವರು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ಅವರಿಗೆ ಕೆಲಸಕಾರ್ಯಗಳನ್ನು ಕೊಡಿಸುವುದಕ್ಕೆ ಬಹಳ ಮುತುವರ್ಜಿ ವಹಿಸಬೇಕು. ಹಿಂದೆ ಸ್ಕಾಲರ್‌ಸಿಪ್ ಕಮಿಟಿಗಳನ್ನು ಮಾಡಿದ್ದರು. ಆ ಕಮಿಟಿಗಳನ್ನು ಯಾವಾಗ ಅಬಾಲಿಷ್ ಮಾಡಿದರೋ ಗೊತ್ತಿಲ್ಲ. ನಾವು ಕಮಿಟಿಯಲ್ಲಿದ್ದೆವು. ಇಂತಹ ಕಮಿಟಿಗಳನ್ನು ಮುಂದೆ ಮಾಡುತ್ತೇವೆಂಬ ಬಗ್ಗೆ ಒಂದು ಮಾಹಿತಿಯೂ ಇಲ್ಲ. ಈ ರೀತಿ ಮಾಡಿದರೆ ಹೇಗೆ ಆ ಜನಾಂಗ ಅಭಿವೃದ್ಧಿ

(ಶ್ರೀ ಡಿ. ಮುನಿಚಿನ್ನಪ್ಪ)

ಯಾಗುತ್ತದೆ. ಮತ್ತೆ ಈಗ ಕೊಡುತ್ತಿರುವ ಸ್ಕಾಲರ್‌ಷಿಪ್‌ಗಳು ಬಹಳ ಕಡಿಮೆ. ಹುಡುಗರು ಓದುವುದಕ್ಕೆ ಸರ್ಕಾರದವರು ಹಣಸಹಾಯ ಮಾಡಿದರೆ ಸಾಕು. ಆಗ ಅವರು ಸ್ಕೂಲ್ ಪುಸ್ತಕಗಳನ್ನು ತೆಗೆದುಕೊಂಡು ಮುಂದುವರೆಯುತ್ತಾರೆ. ಇತ್ತಕಡೆ ಸರ್ಕಾರದವರು ಹೆಚ್ಚಿನ ನಿಗಾ ಕೊಡಬೇಕು. ಎಲ್ಲವನ್ನೂ ಅಧಿಕಾರಿಗಳಿಗೆ ಬಿಡಬೇಡಿ. ಜವಾಬ್ದಾರೀ ಮನುಷ್ಯರಿಗೆ ಜವಾಬ್ದಾರಿ ಕೆಲಸಗಳನ್ನು ಕೊಟ್ಟರೆ ಒಳ್ಳೆಯದು. ಎರಡು ತಿಂಗಳಿಗೊಂದುಸಾರಿಯಾದರೂ ಆ ಕಮಿಟಿಯನ್ನು ಸೇರಿಸಿದರೆ ಒಳ್ಳೆಯದೆಂದು ನಾನು ಅಶಿಕೆಮಾಡುತ್ತೇನೆ. ಸ್ಕಾಲರ್‌ಷಿಪ್ ಮತ್ತು ಉದ್ಯೋಗಗಳನ್ನು ಅವರಿಗೆ ಕೊಡಬೇಕು. ಹುಡುಗರಿಗೆ ಉದ್ಯೋಗ ಸಿಕ್ಕಿದರೆ ಆಗ ಅವರ ಮನೆಯವರೆಲ್ಲಾ ಜೀವನ ಮಾಡುತ್ತಾರೆ.

ಇನ್ನೊಂದು ವಿಚಾರ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಎಂದು ಮಾಡಿದ್ದೀರಿ. ಅದರಲ್ಲಿ ಪ್ರತಿಯೊಂದು ಇಲಾಖೆಗೂ ಅಲ್ಲಿಂದ ಕಳುಹಿಸುವ ಹೆಸರುಗಳನ್ನು ಕಳುಹಿಸುವಾಗ ಷೆಡ್ಯೂಲ್‌ಕ್ಯಾಸ್ಟ್ ನವರಿಗೆ ಕಾನೂನು ಪ್ರಕಾರ ಕೊಟ್ಟೇ ಕೊಡಬೇಕು ಅವರಿಗೆ ಮೊದಲಿನಿಂದ ನೌಕರಿ ಕೊಟ್ಟಿಲ್ಲ. ಆದುದರಿಂದ ಈಗ ಅವರಿಗೆ ಎರಡು—ಮೂರು ಸ್ಥಾನಗಳನ್ನು ಜಾಸ್ತಿ ಕೊಟ್ಟರೆ ಒಳ್ಳೆಯದು. ದುಡ್ಡು ಕೊಟ್ಟರೆ ಅವರು ತಿಂದು ಹಾಕುತ್ತಾರೆ, ಜಮೀನು ಕೊಟ್ಟರೆ ಮಾರುತ್ತಾರೆ. ಇವುಗಳ ಬಗ್ಗೆ ಸರ್ಕಾರ ಗಮನ ಕೊಟ್ಟರೆ ಅವರು ಆ ರೀತಿಯಲ್ಲಿ ಕಳೆಯುವುದಕ್ಕೆ ಅಸ್ಪದವಿರುವುದಿಲ್ಲ. ಅದಕ್ಕಾಗಿ ಸರ್ಕಾರದವರು ಹೆಚ್ಚಿಗೆ ಮುತುವರ್ಜಿ ವಹಿಸಬೇಕು.

ಇನ್ನು ಅಕ್ವಿಸಿಷನ್ ಡಿಕಾರ್ಡ್ಸ್ ಬಗ್ಗೆ ಹೇಳುವುದಾದರೆ, ಅದು 10—12 ವರ್ಷಗಳಿಂದ ಪೆಂಡಿಂಗ್‌ನಲ್ಲಿವೆ. ಅವು ಏಕೆ ಆ ರೀತಿ ಇರಬೇಕು ? ಅವನ್ನು ಸರ್ಕಾರದವರು ಜಾಗ್ರತೆಯಾಗಿ ವಿಲೇವಾರಿ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜಿ. ವಿ. ಗೌಡ (ವಿಧಾನ ಸಭಾಕ್ಷೇತ್ರ).—ಸಭಾಪತಿಗಳೇ, ಮಾನ್ಯ ಮಿತ್ರರು ತಂದಿರ ತಕ್ಕ, ನಿರ್ಣಯ ಆಳವಾಗಿ ಪರಿಶೀಲನೆಮಾಡಲು ಮತ್ತು ಅಂಗೀಕರಿಸಲು ಯೋಗ್ಯವಾಗಿದೆಯೆಂದು ನಾನು ಅಭಿಪ್ರಾಯಪಡುತ್ತೇನೆ. ಸ್ವಾತಂತ್ರ್ಯ ಬಂದಮೇಲೆ ಹರಿಜನ ಮತ್ತು ಗಿರಿಜನರೋದ್ಧಾರ ಮಾಡುತ್ತೇವೆಂದು ಆಗಾಗ್ಗೆ ಬಂದಂಥ ಸರ್ಕಾರಗಳು ಹೇಳಿಕೊಂಡು ಬಂದಿವೆ. ಎಷ್ಟು ಪ್ರಮಾಣದಲ್ಲಿ ಅವರ ಉದ್ಧಾರವಾಗಿದೆ ಎನ್ನುವುದನ್ನು ಸ್ವಲ್ಪ ತಿಳಿಯಬೇಕು. ರಾಜ್ಯಾಂಗದಲ್ಲಿರತಕ್ಕ ಆದೇಶ ಗಳನ್ನು ಸಂಪೂರ್ಣವಾಗಿ, ಪರಿಣಾಮಕಾರಿಯಾಗಿ ಜಾರಿಗೆ ತಂದಿಲ್ಲವೆಂದು ನಾನು ವಿಷಾದದಿಂದ ಹೇಳುತ್ತೇನೆ. ಹರಿಜನರ ಮತ್ತು ಗಿರಿಜನರ ಹಾಗೂ ಎಲ್ಲಾ ಪಕ್ಷಗಳ ಅಭಿವೃದ್ಧಿ ಕಾರ್ಯಕ್ರಮ ಗಳನ್ನು ರಾಜ್ಯ ಸರ್ಕಾರದವರು ತೆಗೆದುಕೊಳ್ಳಬೇಕೆಂಬ ಆದೇಶವಿದ್ದರೂ ಇವತ್ತಿನದಿವಸ ಸಾಮಾಜಿಕ ವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಜನಾಂಗದವರು ಯಾರು ಎಂಬುದಾಗಿ ನಿಜವಾಗಿ ವಿಚಾರ ಮಾಡುವುದರಲ್ಲಿ ಸರಕಾರ ವಿಫಲತೆಗೊಂಡಿದೆಯೆಂದು ಹೇಳಿದರೆ ಎಷ್ಟು ವಿಷಾದಕರವಾದ ಸಂಗತಿ ? 1,200 ರೂಪಾಯಿಗಳಿಗಿಂತ ಆದಾಯ ಕಡಿಮೆ ಇರುವವರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರೆಂದು ಹೇಳಿ ಜನರ ಕಣ್ಣಿಗೆ ಮಣ್ಣು ಎರಚಿದ್ದಾರೆ. 1,200 ರೂಪಾಯಿಗಳಿಗಿಂತ ಹೆಚ್ಚಿಗೆ ಸಂಬಳ ಪಡೆಯುವವರಿದ್ದಾರೋ ಅವರನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮುಂದು ವರಿದವರೆಂದು ಪರಿಗಣಿಸುತ್ತಿದ್ದಾರೆ. ಇದು ಅಸಂಬದ್ಧವಾದ ತತ್ವವೆಂದು ನಾನು ಅಭಿಪ್ರಾಯ ಪಡಬೇಕಾಗಿದೆ. ಈ ವಿಷಯದಲ್ಲಿ ಹಿಂದೆ ಮುಖ್ಯಮಂತ್ರಿಯಾಗಿದ್ದ ಮಾನ್ಯ ಶ್ರೀ ನಿಜಲಿಂಗಪ್ಪನವರು ಒಂದು ಅಪಘಾತಮಾಡಿದ್ದಾರೆ.

ಉಪಸಭಾಪತಿಯವರು.—ಸರ್ಕಾರದವರು ಎಂಬುದಾಗಿ ಹೇಳಿ, ವ್ಯಕ್ತಿತ್ವವಾಗಿ ಹೇಳ ಬಾರದು. ಪರ್ಸನಲ್ ಅಲಿಗೇಷನ್ಸ್ ಮಾಡಕೂಡದು.

ಶ್ರೀ ಜಿ. ವಿ. ಗೌಡ.—ಅವರ ಸರ್ಕಾರದಲ್ಲಿ ಆಗಿರುವುದನ್ನು ಹೇಳಿದೆ. ಸಾಮಾಜಿಕವಾಗಿ ಶೈಕ್ಷಣಿಕವಾಗಿ ಯಾರು ಹಿಂದುಳಿದಿದ್ದಾರೆಯೋ ಅವರಿಗೆ, ಹರಿಜನರ ಮತ್ತು ಗಿರಿಜನರ ಸರ್ವತೋ ಮುಖವಾದ ಅಭಿವೃದ್ಧಿಗೆಸಾಕಷ್ಟು ಪ್ರಯತ್ನಮಾಡಬೇಕೆಂಬ ಆದೇಶ ಶಾಸನಕಾಂಗದಲ್ಲಿದ್ದುದು ಉಲ್ಲಂಘನೆಯಾಗಿದೆ. ಈಗ ಹರಿಜನ-ಗಿರಿಜನರಿಗೆ ಇವರು ಎಷ್ಟರಮಟ್ಟಿಗೆ ಸಹಾಯ ಮಾಡುತ್ತಿ ದ್ದಾರೆಂಬುದು ಮುಖ್ಯ. ಇದೇ ಈ ನಿರ್ಣಯದ ತಿರುಳು. ಒಂದೇಸಾರಿ ಎಲ್ಲಾ ರಂಗದಲ್ಲಿಯೂ ಪ್ರಗತಿಮಾಡುತ್ತೇವೆಂದು ಹೇಳುವುದು ಕಷ್ಟ. ಸಾಧ್ಯವಾದಮಟ್ಟಿಗೆ ಆ ಜನಾಂಗದ ಪ್ರಗತಿಯನ್ನು ನಾವು ಮಾಡಬೇಕು ಎನ್ನುವ ವಿಚಾರ ಮಾಡುವುದು ಯೋಗ್ಯವಾಗಿದೆ. ಶಿಕ್ಷಣದ ಮುಖಾಂತರ ಸ್ವಲ್ಪಮಟ್ಟಿಗೆ ಸುಧಾರಣೆ ಮಾಡಬಹುದೆಂದು ಸರ್ಕಾರದ ಅಭಿಪ್ರಾಯವಾಗಿದೆಯೆಂದು ನಾನು

ತಿಳಿದಿದ್ದೇನೆ. ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡುವುದು ಮುಖ್ಯ. ಸಣ್ಣ ಸಣ್ಣ ಮಕ್ಕಳನ್ನು ಹರಿಜನರು ಶಾಲೆಗೆ ಕಳುಹಿಸುವುದು ಕಷ್ಟ. ದನಕಾಯುವುದಕ್ಕೆ ಕಳುಹಿಸಿದರೆ 5-6 ರೂಪಾಯಿಗಳ ವರಮಾನ ಬರುತ್ತದೆ. ಯಾತಕ್ಕೆಂದರೆ ಕೂಲಿ ಮಾಡುವವರು ಯಾವಾಗಲೂ ಅವರ ಮಕ್ಕಳು ಸಂಪಾದನೆ ಮಾಡುವುದಕ್ಕೆ ಆಶೆ ಪಡುತ್ತಾರೆ. ಆದರೂ ಸಣ್ಣ ಸಣ್ಣ ಮಕ್ಕಳನ್ನು ಶಾಲೆಗೆ ಕಳುಹಿಸ ಬೇಕೆಂದು ಅವರಿಗೆ ಬಹಳ ಕಷ್ಟವಾಗುತ್ತದೆ. ಫೀಸ್ 5 ರೂಪಾಯಿಗಳನ್ನು ಕೊಟ್ಟು ಶಾಲೆಗೆ ಅವರ ಮಕ್ಕಳನ್ನು ಕಳುಹಿಸಿ ಎಂದರೆ ಅವರಿಗೆ ಕಷ್ಟವಾಗುತ್ತದೆ. ಆದ್ದರಿಂದ ಅವರು ವಿದ್ಯೆ ಕಲಿಯ ಬೇಕಾದರೆ ಅವರಿಗೆ ಸರ್ಕಾರದವರು ಒಂದು ಇನ್‌ಸೆಂಟಿವ್ ಕ್ರಿಯೇಟ್ ಮಾಡಬೇಕೆಂದು ನಾನು ಅಭಿಪ್ರಾಯಪಡುತ್ತೇನೆ.

ಇನ್ನು ಸುಮಾರು 17-18 ವರ್ಷಗಳಿಂದಲೂ ನಾನು ಹರಿಜನ ಗಿರಿಜನರಿಗೆ ಅನೇಕ ಸೌಕರ್ಯ ಗಳನ್ನು ಮಾಡುತ್ತಿದ್ದೇನೆ. ಆದರೂ ಅವರ ವಿದ್ಯಾಪ್ರಗತಿ ಸಾಕಷ್ಟು ಆಗಿಲ್ಲವೆಂದು ನಾನು ವಿಷಾದ ದಿಂದ ಹೇಳಬೇಕಾಗಿದೆ. ಸಾಧ್ಯವಾದಷ್ಟುಮಟ್ಟಿಗೆ ಅವರ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ಧನಸಹಾಯವನ್ನು ಮಾಡುವುದು ಬಹಳ ಅವಶ್ಯಕ. ಇವತ್ತಿನದಿವಸ ತಾವು ಹಾಸ್ಟಲು ವಿದ್ಯಾರ್ಥಿ ಗಳಿಗೆ ಏನು 25 ರೂಪಾಯಿಗಳಷ್ಟು ವಿದ್ಯಾರ್ಥಿವೇತನವೆಂದು ಕೊಡುತ್ತಿದ್ದೀರೋ ಅದು ಸಾಲದು. ಸರ್ಕಾರದಿಂದ ನಡೆಸತಕ್ಕ ಹಾಸ್ಟಲುಗಳಲ್ಲಿ 40-50 ರೂಪಾಯಿಗಳನ್ನು ಖರ್ಚುಮಾಡುತ್ತಾರೆ. ಖಾಸಗೀಯವರು ಅನೇಕರು ವಿದ್ಯಾರ್ಥಿನಿಲಯಗಳನ್ನು ಸ್ಥಾಪನಮಾಡಿ ನಡೆಸುತ್ತಿದ್ದಾರೆ. ಆದ್ದರಿಂದ ನೀವು ಅವರಿಗೆ ಕೇವಲ 25 ರೂಪಾಯಿಗಳನ್ನು ಕೊಟ್ಟರೆ ಬಹಳ ಕಷ್ಟವಾಗುತ್ತದೆ. ನಾನು ಮೂರು ಹಾಸ್ಟಲುಗಳನ್ನು ನಡೆಸುತ್ತಿದ್ದೇನೆ. ವರ್ಷಕ್ಕೆ 3 ಸಾವಿರ ರೂಪಾಯಿಗಳನ್ನು ನಾನು ನನ್ನ ಕೈಯಿಂದ ಖರ್ಚುಮಾಡುತ್ತಿದ್ದೇನೆ. ಹಣವಂತರು ಇದನ್ನು ಕೊಡುವುದಿಲ್ಲ, ಬಡವರಿಂದ ಇದನ್ನು ಕೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಸರ್ಕಾರದವರು ಹೆಚ್ಚು ಸಹಾಯ ಮಾಡಬೇಕು. 25 ರೂಪಾಯಿಗಳಿರುವುದನ್ನು 30-35 ರೂಪಾಯಿಗಳಿಗೆ ಮಾಡಿದರೆ ಖರ್ಚನ್ನು ಒಂದು ವೇಳೆ ಸರಿದೂಗಿಸಬಹುದು. ಬೋರ್ಡಿಂಗ್ ಗ್ರಾಂಟು ಎಂಬುದಾಗಿ ಹರಿಜನ ವಿದ್ಯಾರ್ಥಿ ನಿಲಯಗಳಲ್ಲಿ ಕೆಲವು ಕಡೆಗಳಲ್ಲಿ ಸೋಷಿಯಲ್ ಡಿಪಾರ್ಟ್‌ಮೆಂಟಿನವರು ಕೊಡುತ್ತಿದ್ದಾರೆ. ಬಾಕಿ ಕಡೆಗಳಲ್ಲಿ ಹಾಸ್ಟಲುಗಳು ನಡೆಯುತ್ತಿದ್ದರೂ ಅವರಿಗೆ ಬಾಡಿಗೆ ಕೊಡುವುದಕ್ಕಾಗುವುದಿಲ್ಲ. 20ರಿಂದ 30 ಮಕ್ಕಳು ಇದ್ದರೆ ಅಡಿಗೆಯವರು ಜಾಸ್ತಿ ಬೇಕಾಗುತ್ತಾರೆ. ಎಸ್ಟ್ಯಾಬ್ಲಿಷ್‌ಮೆಂಟ್ ಚಾರ್ಜಸ್ ವರ್ಷಕ್ಕೆ ಒಂದು ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಅವರಿಗೆ ಹಣ ಜಾಸ್ತಿ ಕೊಟ್ಟರೆ, ಅಡಿಗೆಯವನಿಗೆ ಮತ್ತು ಮನೆ ಬಾಡಿಗೆಗೆ ಕೊಡುವುದಕ್ಕೆ ಬಹಳ ಅನುಕೂಲವಾಗುತ್ತದೆ. ಆ ರೀತಿ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಎಲ್ಲೆಲ್ಲಿ ಸ್ಕೂಲುಗಳ ವ್ಯವಸ್ಥೆ ಇವೆಯೋ ಅಲ್ಲಿ ಗ್ರಾಮದ ಹುಡುಗರಿಗೆ ಇಂತಹ ಅನುಕೂಲಗಳನ್ನು ಮಾಡಿಕೊಡಲು ಆದೇಶವಿಲ್ಲವೆಂದು ಹೇಳುತ್ತಾರೆ.

ಉಪಸಭಾಪತಿಯವರು.—ಅದನ್ನು ಈಗ ರಿಲ್ಯಾಕ್ಸ್‌ಮಾಡಿದ್ದಾರೆ. Now the House will adjourn for half-an-hour.

The House rose for Tea at Four of the Clock and reassembled at Thirty Minutes past Four of the Clock.

[Mr. Deputy Chairman in the Chair]

ಶ್ರೀ ಜಿ. ವಿ. ಗೌಡ.—ಸರ್ಕಾರದವರು ಸರಿಯಾದ ಉಪಾಧ್ಯಾಯರನ್ನು ನೇಮಿಸುವುದಿಲ್ಲ. ಸರಿಯಾಗಿ ನೇಮಿಸಿದರೂ ಅವರು ಸರಿಯಾಗಿ ಕೆಲಸ ಮಾಡುವುದಿಲ್ಲ. ಇದರಿಂದ ಅವರು ಉದ್ಧಾರ ವಾಗುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಅವರು ಪಕ್ಕದಲ್ಲಿರತಕ್ಕ ಶಾಲೆಗಳಿಗೆ ಹೋಗಿ ಸೇರು ತ್ತಾರೆ. ಅಂಥವರಿಗೆ ನಿಜವಾಗಿಯೂ ನ್ಯಾಯ ಸಿಗುವಂತೆ ಮಾಡಬೇಕು. ಆ ದೃಷ್ಟಿಯಿಂದ ಹರಿಜನರ ಮಕ್ಕಳಿಗೆ ಅವರು ಯಾವ ಶಾಲೆಯಲ್ಲಿ ಸೇರಿದರೂ, ಅವರಿಗೆ ಹಾಸ್ಟೆಲ್ ಫೆಸಿಲಿಟಿ ಕೊಡು ವುದು ಸೂಕ್ತವೆಂದು ನಾನು ಹೇಳುತ್ತೇನೆ ಮತ್ತು ಹರಿಜನರಿಗೆ ಮನೆಗಳನ್ನು ಕಟ್ಟಿಕೊಡುವುದು ಸೂಕ್ತ. ಇವತ್ತು ಅನೇಕರಿಗೆ ಆ ಸೌಲಭ್ಯವನ್ನು ಕೊಟ್ಟಿದ್ದರೂ, ಕೂಡ ಅದನ್ನು ಸರಿಯಾಗಿ ಉಪಯೋಗಿಸಲಿಲ್ಲ; ಮತ್ತು ಮನೆಗಳನ್ನು ಕೊಟ್ಟಿಲ್ಲ. ಸರ್ಕಾರಿ ಕಾರ್ಡುಗಳ 200 ರೂಪಾಯಿಯ ಸಾಮಾನುಗಳನ್ನು ಕೊಡಬೇಕೆಂದು ನಿಮ್ನವರ್ಗದವರು ಬರೆದಿದ್ದಾರೆ. ಅದು ಅಲ್ಲೇ ಉಳಿದಿದೆ. ಅದನ್ನು ಮಧ್ಯಮ ವರ್ಗದವರೇ ಉಪಯೋಗಿಸಿಕೊಂಡಿದ್ದಾರೆ. ಇಂಥ ಪರಿಸ್ಥಿತಿ ಬಹಳ ಕಡೆಗಳಲ್ಲಿ ಇದೆ. ಮನೆಗಳನ್ನು ಕಟ್ಟುವುದಕ್ಕೆ ಇವತ್ತಿನ ದಿವಸ ಜಮೀನನ್ನು ವಶಪಡಿಸಿಕೊಂಡಿದ್ದಾರೆ. ಇವತ್ತಿನ

(ಶ್ರೀ ಜಿ. ವಿ. ಗೌಡ)

ದಿವಸ ಬಿಲ್ಡಿಂಗ್ಸ್ ಸೊಸೈಟಿ ಮಾಡಿಕೊಂಡು ಹಣವನ್ನು ಕೊಟ್ಟಿದ್ದಾರೆ. ಆದರೆ ಅದು ಬಹಳ ಕಡಿಮೆ ಯಾಗಿದೆ. ನಮ್ಮ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಒಂದು ಸೊಸೈಟಿಯಲ್ಲಿ ಸಾವಿರಾರು ಜನರು ಮೆಂಬರಾಗಿದ್ದಾರೆ. ಆದರೆ ಕೊಟ್ಟಿದ್ದು ಕೇವಲ 150 ಜನರಿಗೆ ಮಾತ್ರ. ಇವತ್ತು ಮನೆಗಳನ್ನು ಕಟ್ಟು ವುದಕ್ಕೆ ಅವರಿಗೆ ಹಣವನ್ನು ಕೊಟ್ಟರೆ ಅವರು ದುರುಪಯೋಗಪಡಿಸುವ ಸಂದರ್ಭ ಕೂಡ ಇದೆ. ಆದ್ದರಿಂದ ಹೌಸಿಂಗ್ ಬೋರ್ಡು ವತಿಯಿಂದ ಲೋ ಇನ್‌ಕಂ ಗ್ರೂಪಿನ ಮನೆಗಳನ್ನು ಕಟ್ಟಿಸಿ, ಅವರ ಹಣವನ್ನು 20—25 ವರ್ಷಗಳ ಕಂತಿನಲ್ಲಿ ವಾಪಸ್ಸು ಪಡೆಯುವಂತೆ ಮಾಡಬೇಕು. ಅದನ್ನು ಬಿಟ್ಟು ಎಷ್ಟು ಸಾಲ ಕೊಟ್ಟರೂ ಅದರಿಂದ ಅಷ್ಟು ಪ್ರಯೋಜನವಾಗುವುದಿಲ್ಲ. ಆ ಮನೆ ಗಳನ್ನು ಆಧಾರವಾಗಿಟ್ಟುಕೊಂಡು ಅವರಿಂದ ಕಂತು ಕಂತಿನಲ್ಲಿ ಸಾಲವನ್ನು ವಾಪಸ್ಸು ಪಡೆಯುವಂತೆ ಸರ್ಕಾರದವರು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಈ ಒಂದು ವಿಷಯವನ್ನು ಅವರು ಮನಗಾಣಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ 32 ಗ್ರಾಮಗಳಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಜಮೀನು ಅಕ್ವೈರ್ ಆಗಿದೆ. ಅದನ್ನು ಸ್ವಾಧೀನ ಮಾಡಿಕೊಂಡಿದ್ದಾರೆ. ಆದರೆ ಆ ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗು ತ್ತಿಲ್ಲ. ಆದ್ದರಿಂದ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಆ ಜಾಗಗಳಲ್ಲಿ ಸಣ್ಣ ಸಣ್ಣ ಮನೆ ಗಳನ್ನು ಕಟ್ಟಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಹಿಂದುಳಿದ ವರ್ಗದವರಿಗೆ, ನಿಮ್ನವರ್ಗದವರಿಗೆ ಬಹಳ ಅನ್ಯಾಯವಾಗುತ್ತಿದೆ. ಅನ ಟಚ್ ಬಿಲಿಟಿ ಆಕ್ಟ್ ಏನೋ ಇದೆ. ಆದರೆ ಅದನ್ನು ಕಾರ್ಯತಃ ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ತಂದಿದ್ದಾರೆ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ಪ್ರತ್ಯೇಕವಾಗಿ ಹರಿಜನ ಗಿರಿ ಜನರನ್ನು ಇಡತಕ್ಕದ್ದು, ಅವರಿಗೆ ಪ್ರತ್ಯೇಕವಾದ ಬಾವಿಗಳನ್ನು ತೆಗೆಸತಕ್ಕದ್ದು ಏನಿದೆ ಅದು ಅದಷ್ಟು ಬೇಗ ನಿಲ್ಲಬೇಕು. ಸಾರ್ವಜನಿಕರ ಬಾವಿಗಳಲ್ಲೇ ನಿಮ್ನವರ್ಗದವರು ನೀರನ್ನು ಉಪಯೋಗಿಸತಕ್ಕಂಥ ವ್ಯವಸ್ಥೆಯಾಗಬೇಕು. ಈಗ ಕೆಲವು ಕಡೆ ನಾನ್ ಡಿನಾಮಿನೇಷನ್ ಹಾಸ್ಟಲ್ ಅನ್ನು ಸರ್ಕಾರದವರು ಮಾಡಿದ್ದಾರೆ. ಕ್ರಮೇಣ ಅದು ಬರುತ್ತದೆ. ನಾನು 3 ಹಾಸ್ಟಲುಗಳನ್ನು ನಡೆಸುತ್ತಿದ್ದೇನೆ. ಆದರೆ ನಾನ್ ಡಿನಾಮಿನೇಷನ್ ಹಾಸ್ಟಲ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಕ್ರಮೇಣ ಅದು ಆಗಬಹುದು ಎಂದು ಕಾಣುತ್ತದೆ. ಸಾರ್ವಜನಿಕ ವಿದ್ಯಾರ್ಥಿ ನಿಲಯಗಳಲ್ಲಾಗಲೀ, ಕಾಲೇಜು ಹಾಸ್ಟಲ್‌ಗಳಲ್ಲಿಯಾಗಲೀ ಎಲ್ಲೆಲ್ಲಿ ನಿಮ್ನ ವರ್ಗದ ವಿದ್ಯಾರ್ಥಿಗಳು ಇದ್ದಾರೆಯೋ ಅವರಿಗೆ ತಮ್ಮ ಇಲಾಖೆಯ ಮುಖಾಂತರ ಟ್ಯೂಷನ್ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಸರ್ಕಾರದವರು ನಿಮ್ನವರ್ಗದವರ ಅಭಿವೃದ್ಧಿಗಾಗಿ ಏನು ಹಣವನ್ನು ಖರ್ಚು ಮಾಡುತ್ತಾರೆಯೋ ಅದು ಸದುಪಯೋಗವಾಗಬೇಕು. ಈಗ ನಿಮ್ನ ವರ್ಗದ ವಿದ್ಯಾರ್ಥಿಗಳಿಗೆ ಐ. ಎ. ಎಸ್. ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಸರ್ಕಾರದವರು ತರಬೇತಿ ಯನ್ನು ಕೊಡುತ್ತಿದ್ದಾರೆ. ಈಗ ಎಷ್ಟು ಜನ ನಿಮ್ನವರ್ಗದ ವಿದ್ಯಾರ್ಥಿಗಳು ಐ. ಎ. ಎಸ್. ಪರೀಕ್ಷೆ ಯನ್ನು ಪಾಸು ಮಾಡಿದ್ದಾರೆ? ಹಿಂದುಳಿದ ವರ್ಗದವರು, ನಿಮ್ನವರ್ಗದವರು ಯಾರೂ ಐ.ಎ.ಎಸ್. ಪರೀಕ್ಷೆಯನ್ನು ಪಾಸು ಮಾಡಿದ್ದು ನನಗೆ ಕಾಣಲಿಲ್ಲ. ಆದ್ದರಿಂದ ನಿಮ್ನವರ್ಗದ ಜನಾಂಗದವರಿಗೆ ಹೆಚ್ಚು ಪ್ರಮಾಣದಲ್ಲಿ ಉತ್ತೇಜನ ಸಿಕ್ಕಬೇಕು. ಅರ್ಹತೆ ಇರತಕ್ಕಂಥ ಹರಿಜನ ಗಿರಿಜನರಿಗೆ ಶೇಕಡಾ 18 ಪರ್ಸೆಂಟ್ ಸ್ಥಾನ ಸರ್ಕಾರದ ನೌಕರಿಯಲ್ಲಿ ಸಿಕ್ಕುವಂತಾಗಬೇಕು. ಮಹಾರಾಜ ಯೂನಿವರ್ಸಿಟಿ ಕಾಲೇಜು ಮತ್ತು ಹಾಸ್ಟಲಿನಲ್ಲಿ ಈ ವರ್ಗದ ವಿದ್ಯಾರ್ಥಿಗಳಿಗೆ ಒಂದು ರಿಜರ್ವೇಷನ್ ಇಡತಕ್ಕಂಥ ವ್ಯವಸ್ಥೆಯಾಗಬೇಕು. ಸರ್ಕಾರಿ ಮೆಡಿಕಲ್ ಕಾಲೇಜ್, ಖಾಸಗೀ ಮೆಡಿಕಲ್ ಕಾಲೇಜ್‌ಗಳಲ್ಲಿ ರಾಜ್ಯಾಂಗದ ಪ್ರಕಾರ 18 ಪರ್ಸೆಂಟ್ ಪ್ರವೇಶ ಸಿಕ್ಕುವಂಥಾ ವ್ಯವಸ್ಥೆ ಆಗಬೇಕು. ಅಂಥಾ ಒಂದು ಆದೇಶವನ್ನು ಸರ್ಕಾರದವರು ಹೊರಡಿಸಬೇಕು ಎಂದು ನಾನು ಸಲಹೆಮಾಡುತ್ತೇನೆ. ಗಿರಿಜನರು ಹಿಂದುಳಿದ ಮತ್ತು ಏನೂ ತಿಳಿಯದೇ ಇರುವ ಜನ. ಅವರಿಗೆ ಸರ್ಕಾರದವರು ಏನು ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆಯೋ ಅವು ದುರುಪಯೋಗವಾಗುತ್ತಿವೆ. ನಮ್ಮ ತಾಲ್ಲೂಕಿನಲ್ಲಿ ಪೊನ್ನಾಚಿ ಎನ್ನುವ ಊರಿನಲ್ಲಿ ಗಿರಿಜನರು ಇದ್ದಾರೆ. ಅಲ್ಲಿಗೆ ಸರ್ಕಾರ ರೆಸಿಡೆನ್ಸಿಯಲ್ ಸ್ಕೂಲ್ ಸ್ಥಾಪನೆ ಮಾಡುವುದಕ್ಕೆ ಮಂಜೂರು ಮಾಡಿದೆ. ಅಲ್ಲಿ ಹಾಸ್ಟಲು ಮತ್ತು ಸ್ಕೂಲನ್ನು ಕಟ್ಟಿಸಲು ಅಂದಾಜು ಮಾಡಿದ್ದರೂ ಕೂಡ ಅಲ್ಲಿರತಕ್ಕ ಬಿ.ಡಿ.ಓ. ಅವರು ಕೊಟ್ಟಿಗೆ ಮನೆಯಲ್ಲಿ ಸ್ಕೂಲು ಮತ್ತು ಹಾಸ್ಟಲನ್ನು ಮಾಡಿ ಅಲ್ಲಿ ವಿದ್ಯಾರ್ಥಿಗಳು ಇಲ್ಲದೇ ಇದ್ದರೂ ಕೂಡ ಅಡಿಗೆಯವರನ್ನೂ, ಮತ್ತು ಉಪಾಧ್ಯಾಯರುಗಳನ್ನೂ ನೇಮಿಸಿಕೊಂಡು 5—6 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದರಿಂದಾಗಿ ಆ ಭಾಗದ ಗಿರಿಜನರ ಮಕ್ಕಳಿಗೆ ಅನ್ಯಾಯ ವಾಗುತ್ತಿದೆ. ಆದ್ದರಿಂದ

ಇದನ್ನು ಆದಷ್ಟು ಜಾಗ್ರತೆ ಸೋಷಿಯಲ್ ವೆಲ್‌ಫೇರ್ ಆಫೀಸರು ಏನಿದ್ದಾರೆ ಅವರು ಇದನ್ನು ಸೂಪರ್‌ವೈಜ್ ಮಾಡಬೇಕು. ಜಿಲ್ಲಾ ಸೋಷಿಯಲ್ ವೆಲ್‌ಫೇರ್ ಆಫೀಸರಿಗೆ ಜೀಪು ಕೊಟ್ಟಿದ್ದಾರೆ ಅವರು ಒಂದು ತಿಂಗಳಿಗೆ ಒಂದು ಸಾರಿಯಾದರೂ ರೆಸಿಡೆನ್ಸಿಯಲ್ ಹಾಸ್ಟಲುಗಳನ್ನು ಸೂಪರ್‌ವೈಜ್ ಮಾಡಬೇಕು. ಆ ರೀತಿ ಅವರು ಸೂಪರ್‌ವೈಜ್ ಮಾಡುವುದಾದರೆ ಅದು ಒಂದು ವ್ಯವಸ್ಥೆಗೆ ಬರಬಹುದು. ಸಾಮಾನ್ಯವಾಗಿ 19 ಜಿಲ್ಲೆಗಳಲ್ಲಿಯೂ 19 ಜನ ವೆಲ್‌ಫೇರ್ ಆಫೀಸರು ಇದ್ದಾರೆ. ಅವರು ಜೀಪುಗಳಲ್ಲಿ ಒಂದು ತಿಂಗಳಿಗೆ ಒಂದು ಸಾರಿಯಾದರೂ ಈ ರೆಸಿಡೆನ್ಸಿಯಲ್ ಹಾಸ್ಟಲನ್ನು ಸೂಪರ್‌ವೈಜ್ ಮಾಡಿ ಅವುಗಳ ಮೇಲ್ವಿಚಾರಣೆಯನ್ನು ನೋಡುವುದಾದರೆ ಅವುಗಳ ವ್ಯವಸ್ಥೆ ಸ್ವಲ್ಪಮಟ್ಟಿಗೆ ಉತ್ತಮವಾಗಬಹುದು. ಆದುದರಿಂದ ಅಂಥಾ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಪೊನ್ನಾಜಿಯಲ್ಲಿ ಗಿರಿಜನರ ಬ್ಲಾಕುಗಳು ಆಗಬೇಕು. ಅಲ್ಲಿ ಸುಮಾರು 300 ಕುಟುಂಬಗಳು ಗಿರಿಜನರ ವರ್ಗದವರಿಗೆ ಸೇರಿದಂಥವುಗಳು ಇವೆ. ಅವರಿಗೆ ಸರ್ಕಾರದವರು ಕೆಲವು ಜಮೀನು ಕೊಟ್ಟಿದ್ದಾರೆ. ಆದರೆ ಅವರಿಗೆ ಸರ್ಕಾರದಿಂದ ದೊರೆಯಬೇಕಾದ ಇತರೇ ಸೌಲಭ್ಯಗಳು ಸಿಕ್ಕಿಲ್ಲ. ಇದು ಶೋಚನೀಯ. ಆದ್ದರಿಂದ ಎಲ್ಲೆಲ್ಲಿ ಗಿರಿಜನರು ವಾಸಮಾಡುತ್ತಿದ್ದಾರೆಯೋ ಅಲ್ಲೆಲ್ಲಾ ಅವರಿಗೆ ಸರ್ಕಾರದಿಂದ ದೊರೆಯಬೇಕಾದ ಸೌಲಭ್ಯಗಳನ್ನು ಒದಗಿಸುವಂಥಾ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ. ನಿಜವಾಗಿಯೂ ನಿಮ್ನವರ್ಗದವರು ಮತ್ತು ಇತರ ಹಿಂದುಳಿದ ವರ್ಗದವರು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿದ್ದಾರೆ. ಅವರ ಸುಧಾರಣೆಯಾಗಬೇಕು. ಅವರಿಗೆ ನ್ಯಾಯ ಸಿಕ್ಕಬೇಕು. ಅಂಥಾ ಒಂದು ಕೆಲಸವನ್ನು ಸರ್ಕಾರದವರು ಮಾಡಬೇಕೆಂದು ನಾನು ಸೂಚಿಸುತ್ತೇನೆ. ಕೆಲವು ಕಡೆ ಇತರ ಹಿಂದುಳಿದ ವರ್ಗದವರಾದ ಕೊರಮರು, ಕೊರಚರು, ಕಾಡುಕುರುಬರು ಮುಂತಾದವರು ತುಂಬಾ ಶೋಚನೀಯ ಪರಿಸ್ಥಿತಿಯಲ್ಲಿದ್ದಾರೆ. ಅವರ ಸುಧಾರಣೆಯ ವಿಚಾರದಲ್ಲಿಯೂ ಸಹ ಸರ್ಕಾರದವರು ಆಸಕ್ತಿವಹಿಸಬೇಕು. ಯಾರಿಗೆ ವಾರ್ಷಿಕ ಆದಾಯ 1,200 ರೂಪಾಯಿಗಳಿಗಿಂತ ಜಾಸ್ತಿಯಾಗಿದೆಯೋ ಅಂಥವರಿಗೆ ಹಿಂದುಳಿದ ವರ್ಗದವರಿಗೆ ಸರ್ಕಾರದವರು ಏನು ಸೌಲಭ್ಯವನ್ನು ಕೊಡುತ್ತಿದ್ದಾರೆಯೋ ಅದು ಸಿಕ್ಕುವುದಿಲ್ಲ ಎನ್ನುವಂಥಾ ಒಂದು ಆದೇಶವನ್ನು ಸರ್ಕಾರದವರು ಕೊಟ್ಟಿದ್ದಾರೆಂದು ಗೊತ್ತಾಗಿದೆ. ಅದು ಸರಿಯಲ್ಲ. ತೀರಾ ಹಿಂದುಳಿದ ಜನಾಂಗದವರು ಇತರರ ಸಮಾನಕ್ಕೆ ಬರಲು ಸಾಧ್ಯವಾಗುವಂತೆ ಸರ್ಕಾರದವರು ಅವರಿಗೆ ಸಹಾಯ ಸೌಲಭ್ಯಗಳನ್ನು ಒದಗಿಸಬೇಕು ಎಂದು ನಾನು ಹೇಳುತ್ತೇನೆ. ಒಟ್ಟಿನಲ್ಲಿ ಈ ನಿರ್ಣಯದಲ್ಲಿ ಹೇಳಿರುವ ಪ್ರಕಾರ ರಾಜ್ಯದಲ್ಲಿರುವ ಹರಿಜನ ಮತ್ತು ಗಿರಿಜನರಿಗೆ ಒದಗಿಸಲಾದ ಸೌಲಭ್ಯಗಳು ಯಾವರೀತಿಯಲ್ಲಿ ಉಪಯೋಗಿಸಲ್ಪಟ್ಟಿವೆ ಎಂಬುದನ್ನು ಪರಿಶೀಲಿಸಿ ವರದಿಯೊಂದನ್ನು ಒಪ್ಪಿಸುವ ಸಲುವಾಗಿ ಶಾಸಕರು ಮತ್ತು ಸಾರ್ವಜನಿಕರ ಕಾರ್ಯದಲ್ಲಿ ನಿರತರಾಗಿರುವವರ ನ್ನೊಳಗೊಂಡ ರಾಜ್ಯ ಮಟ್ಟದ ಸಮಿತಿಯೊಂದನ್ನು ರಚಿಸಬೇಕೆಂದು ಏನು ಹೇಳಿದ್ದಾರೆ ಅದರ ಪ್ರಕಾರ ಒಂದು ಸಮಿತಿಯನ್ನು ರಚನೆ ಮಾಡಿ ಆ ಸಮಿತಿಯು ಜನತೆಯ ಸರ್ವತೋಮುಖವಾದ ಅಭಿವೃದ್ಧಿಗೆ ತಕ್ಕ ಸಲಹೆಯನ್ನು ಕೊಡುವಂತಹ ಕೆಲಸವನ್ನು ಮಾಡಲಿ ಎಂದು ನಾನು ಸೂಚಿಸುತ್ತೇನೆ.

ಇನ್ನು ಕಾರ್ಮಿಕರು ಏನಿದ್ದಾರೆ ಅವರಿಗೆ ಸಾಕಷ್ಟು ರಕ್ಷಣೆ ಇಲ್ಲ ಎಂದು ನಾನು ಹೇಳ ಬೇಕಾಗಿದೆ. ನಾನು ತಮಗೆ ಒಂದು ನಿದರ್ಶನವನ್ನು ಕೊಡುತ್ತೇನೆ. ಕೊಳ್ಳೇಗಾಲದಲ್ಲಿ ಸರ್ಕಾರದ ಒಂದು ರೇಷ್ಮೆ ಕಾರ್ಖಾನೆ ಇದೆ. ಈಗ 6 ತಿಂಗಳಿಂದ ಅದನ್ನು ನಿಲ್ಲಿಸಿದ್ದಾರೆ. ಇದರಿಂದಾಗಿ ಆ ಕಾರ್ಖಾನೆಯಲ್ಲಿದ್ದ ಒಂದು ಸಾವಿರ ಜನ ಹರಿಜನ ಕಾರ್ಮಿಕರಿಗೆ ತೊಂದರೆ ಯಾಗಿದೆ. ಎಷ್ಟೋಸಾರಿ ಕಾರ್ಮಿಕರು ಆಡಳಿತವರ್ಗದವರಿಗೆ ಸರ್ಕಾರದವರಿಗೆ ಮನವಿಯನ್ನು ಕೊಟ್ಟಾಗ ಮುಚ್ಚಿದ್ದ ಫಿಲೇಚರುಗಳನ್ನು ತೆಗೆದಿದ್ದಾರೆ. ಆದರೆ ಈ ಫಿಲೇಚರಿನ ಕಾರ್ಮಿಕರು ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದರೂ ಕೂಡ ಮುಚ್ಚಿರುವ ಈ ಕೊಳ್ಳೇಗಾಲದ ಫಿಲೇಚರನ್ನು ತೆಗೆದಿಲ್ಲ. ಆ ಫಿಲೇಚರಿನ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಆಡಳಿತವರ್ಗದವರ ಮುಂದಿಟ್ಟಿ ದ್ದಾರೆ. ಹಾಗೆಯೇ ಆ ಕಾರ್ಖಾನೆಯನ್ನು ತೆಗೆಯಬೇಕಾದರೆ ಆಡಳಿತವರ್ಗದವರು ಕಾರ್ಮಿಕರಿಗೆ ಕೆಲವು ಶರತ್ತುಗಳನ್ನು ಹಾಕಿದ್ದಾರೆ. ಅದು ಏನೆಂದರೆ ಆ ಫಿಲೇಚರಿನಲ್ಲಿ ಕೆಲಸಮಾಡತಕ್ಕ ಕಾರ್ಮಿಕರನ್ನು ಯಾರನ್ನಾದರೂ ಕೆಲಸದಿಂದ ತೆಗೆದುಹಾಕಿದರೆ ಕಾರ್ಮಿಕರು ಪ್ರತಿಭಟನೆ ಮಾಡ ಬಾರದು. ಮಂಜೂರಾಗಿರತಕ್ಕ ಡಿ.ಎ. ಅನ್ನು ಕೇಳಬಾರದು ಇತ್ಯಾದಿ ಕೆಲವು ಷರತ್ತುಗಳನ್ನು ಆಡಳಿತವರ್ಗದವರು ಹಾಕಿದ್ದಾರೆ. ಅಲ್ಲಿರತಕ್ಕ ಕಾರ್ಮಿಕರಿಗೆ ಬಹಳ ಅನ್ಯಾಯವಾಗಿದೆ. ಇದರಿಂದಾಗಿ ಅವರು ಉಪವಾಸ ಮಾಡುತ್ತಿದ್ದಾರೆ. ಒಂದು ಸಾವಿರ ಜನ ಹರಿಜನ ಕಾರ್ಮಿಕರು ಕೆಲಸಮಾಡುತ್ತಿರುವ ಈ ಫಿಲೇಚರಿನಲ್ಲಿ ಕಾರ್ಮಿಕರಿಗೆ ಏನು ಅನ್ಯಾಯ ಮಾಡಿದ್ದಾರೆ ಅದು

(ಶ್ರೀ ಜಿ. ವಿ. ಗೌಡ)

ಅನ್ಯಾಯದ ಪರಮಾವಧಿ ಎಂದು ಹೇಳಿದರೆ ತಪ್ಪಾಗಲಾರದು. ಆದಷ್ಟು ಜಾಗ್ರತೆ ಆಡಳಿತವರ್ಗದವರು ಆ ಕಾರ್ಮಿಕರ ಬೇಡಿಕೆಗಳನ್ನು ಪೂರೈಸಿ ಅವರು ಸರಿಯಾಗಿ ಕೆಲಸ ಮಾಡುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ. ಈ ಫಿರ್ಯಾದು ವಿಚಾರದಲ್ಲಿ, ಕಾರ್ಮಿಕರ ವಿಚಾರದಲ್ಲಿ ಸರ್ಕಾರ ಕಾರ್ಮಿಕರ ವಿರೋಧ ನೀತಿಯನ್ನು ಅನುಸರಿಸುತ್ತಿರುವುದು ಸರಿಯಲ್ಲ. ಕಾರ್ಮಿಕರು ತಮಗೆ ಮಂಜೂರಾಗಿರತಕ್ಕ ಡಿ. ಎ. ಅನ್ನು ಕೇಳಬಾರದು, ಅದನ್ನು ಕೇಳಿದರೆ ಅವರನ್ನು ಕೆಲಸದಿಂದ ತೆಗೆಯುತ್ತೇವೆ ಎಂದು ಹೇಳಿದರೆ ಇದು ಕಾರ್ಮಿಕರನ್ನು ಶೋಷಣೆ ಮಾಡತಕ್ಕಂಥ ಕೆಲಸ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಈ ವರ್ಗಗಳ ಕೋಮಿನವರು ಎಲ್ಲೆಲ್ಲಿ ಇದ್ದಾರೋ ಅವರಿಗೆಲ್ಲಾ ಆದಷ್ಟು ರಕ್ಷಣೆ ಕೊಡಬೇಕಾದುದು ಸಮಾಜ ಕಲ್ಯಾಣ ಇಲಾಖೆಯ ಮುಖ್ಯ ಕರ್ತವ್ಯವೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸದಸ್ಯರು ಈ ಬಗ್ಗೆ ಏನು ನಿರ್ಣಯ ತಂದಿದ್ದಾರೆ ಅದು ಸರ್ಕಾರದವರು ಪರಿಶೀಲನೆ ಮಾಡುವುದಕ್ಕೆ ಮತ್ತು ಒಪ್ಪಿಕೊಳ್ಳುವುದಕ್ಕೆ ಯೋಗ್ಯವಾಗಿದೆ ಎಂದು ನಾನು ಹೇಳುತ್ತೇನೆ. ಆದ್ದರಿಂದ ಸರ್ಕಾರದವರು ಈ ನಿರ್ಣಯವನ್ನು ಒಪ್ಪಿಕೊಂಡು ಒಂದು ಸಮಿತಿಯನ್ನು ರಚನೆ ಮಾಡಿ, ಆ ಸಮಿತಿಯ ಮುಖಾಂತರ ಎಷ್ಟರಮಟ್ಟಿಗೆ ಈ ವರ್ಗಗಳ ಸುಧಾರಣೆಯಾಗಿದೆ ಮತ್ತು ಮಾಡಬೇಕಾಗಿದೆ ಎಂಬುದನ್ನು ಕಂಡುಹಿಡಿಯಲು ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಇಷ್ಟು ಮಾತನ್ನು ಹೇಳಿ ಈ ನಿರ್ಣಯವನ್ನು ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ವಿ. ಆಂಜನಪ್ಪ.—ಸನ್ಮಾನ್ಯ ಸಭಾಪತಿಗಳೇ, "ಭಾರತ ಸ್ವತಂತ್ರವಾದಂದಿನಿಂದ ರಾಜ್ಯದಲ್ಲಿ ಹರಿಜನ ಮತ್ತು ಗಿರಿಜನರಿಗೆ ಒದಗಿಸಲಾದ ಸೌಲಭ್ಯಗಳು ಯಾವ ರೀತಿಯಲ್ಲಿ ಉಪಯೋಗಿಸಲ್ಪಟ್ಟಿವೆ ಎಂಬುದನ್ನು ಪರಿಶೀಲಿಸಿ ವರದಿಯೊಂದನ್ನು ಒಪ್ಪಿಸುವ ಸಲುವಾಗಿ ಶಾಸಕರು ಮತ್ತು ಸಾರ್ವಜನಿಕ ಕಾರ್ಯದಲ್ಲಿ ನಿರತರಾಗಿರುವವರನ್ನೊಳಗೊಂಡಂತೆ ಇರುವ ರಾಜ್ಯ ಮಟ್ಟದ ಸಮಿತಿಯೊಂದನ್ನು ರಚಿಸಬೇಕೆಂದು" ಮಾನ್ಯ ಸದಸ್ಯರು ತಂದಿರತಕ್ಕ ನಿರ್ಣಯವನ್ನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ. ಈಗಾಗಲೇ ಹಿರಿಯ ಮತ್ತು ಕಿರಿಯ ಸದಸ್ಯರು ಈ ನಿರ್ಣಯದಮೇಲೆ ಮಾತನಾಡಿ ಹರಿಜನ ಮತ್ತು ಗಿರಿಜನರು ರಾಜ್ಯಮಟ್ಟದಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ಯಾವ ರೀತಿ ಹಿಂದುಳಿದಿದ್ದಾರೆಂಬುದನ್ನು ಹೇಳಿದ್ದಾರೆ. ಇವರ ಏಳಿಗೆಗಾಗಿ ಸ್ವಾತಂತ್ರ್ಯ ಬಂದನಂತರ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದ್ದೇವೆ. ಆದರೆ ಆ ಹಣ ಎಷ್ಟರ ಮಟ್ಟಿಗೆ ಇವರಿಗಾಗಿ ಉಪಯೋಗವಾಗಿದೆ, ಮತ್ತು ಎಷ್ಟು ಜನ ಪ್ರಗತಿ ಹೊಂದಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಇದು ಉತ್ಪ್ರೇಕ್ಷೆಯಲ್ಲ. ಕೋಟಿಗಟ್ಟಲೆ ಹಣವನ್ನು ವೆಚ್ಚ ಮಾಡಿದ್ದರೂ ಕೂಡ ಇವರ ಉದ್ಧಾರವಾಗಿಲ್ಲ. ಇವರಿಗಾಗಿ ಖರ್ಚು ಮಾಡಿದ ಹಣವೆಲ್ಲಾ ನೀರಿನಲ್ಲಿ ಹೋಮ ಮಾಡಿದಂತಾಗಿದೆ. ಹೆಚ್ಚಿನ ಹಣ ಮಧ್ಯವರ್ತಿಗಳ ಅಥವಾ ದಳ್ಳಾಳಿಗಳ ಕೈಸೇರಿದೆ ಎಂದು ಹೇಳಬಹುದು. ಇವರಿಗಾಗಿ ಇಟ್ಟಿದ್ದ ಹಣದಿಂದ ಕೆಲವೇ ಜನ ಹರಿಜನ ಮತ್ತು ಗಿರಿಜನರು ಮುಂದುವರೆದಿದ್ದರೆ ಪುಡಾರಿಗಳು ಬಹಳ ಮಂದಿ ಈ ಹಣದಿಂದ ಮುಂದುವರೆದಿದ್ದಾರೆ. ಇವರ ಸ್ಥಾನಮಾನಗಳು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹೆಚ್ಚಬೇಕು ಎಂದು ಬಹಳ ಜನ ಹೇಳುತ್ತಿದ್ದಾರೆ. ಆದರೆ ಇವರ ಏಳಿಗೆಯ ಬಗ್ಗೆ ಮಾತನಾಡುವ ಜನ ಇವರನ್ನು ಸರಿಸಮಾನವಾಗಿ ಕಾಣುತ್ತಿದ್ದಾರೆಯೇ ಎನ್ನುವುದನ್ನು ನಮ್ಮ ಹೃದಯದಿಂದ ಪ್ರಶ್ನೆ ಮಾಡಿಕೊಂಡು ನೋಡಬೇಕಾಗಿದೆ. ನನ್ನಮಟ್ಟಿಗೆ ಹೇಳುವುದಾದರೆ ಇವರ ಬಗ್ಗೆ ನನ್ನ ಮನಸ್ಸಿನಲ್ಲಿ ಭೇದಭಾವನೆ ಇಲ್ಲದಿದ್ದರೂ ಕೂಡ ನಮ್ಮ ಹಳ್ಳಿಯಲ್ಲಿ ನಾವು ಅವಿಭಕ್ತ ಕುಟುಂಬದವರಾಗಿರುವುದರಿಂದ ಇವರಿಗೆ ನಮ್ಮ ಮನೆಯಲ್ಲಿ ಊಟ ಹಾಕುವ ಸ್ಥಿತಿಯಲ್ಲಿ ನಾನು ಇಲ್ಲ. ಪರಿಸ್ಥಿತಿ ಆ ರೀತಿ ಇದೆ ಇದಕ್ಕೆ ಯಾರು ಹೊಣೆ? ಇದಕ್ಕೆ ಸನ್ನಿವೇಶ ಒಂದು ಕಾರಣವಾದರೆ ಮತ್ತೊಂದು ಕಾರಣ ಇವರ ಬಗ್ಗೆ ಸತತವಾಗಿ ಶ್ರದ್ಧೆಯಿಂದ ನಾವುಗಳು ಕೆಲಸ ಮಾಡುತ್ತಿಲ್ಲ. ಮೈಸೂರು ರಾಜ್ಯವನ್ನೇ ತೆಗೆದುಕೊಂಡರೆ ಎರಡು ಕೋಟಿ ರೂಪಾಯಿಗಳನ್ನು ಪ್ರತಿವರ್ಷ ಇವರ ಉದ್ಧಾರಕ್ಕಾಗಿ ಬಡ್ಜೆಟ್‌ನಲ್ಲಿ ಮಂಡಿಸುತ್ತಿದ್ದೇವೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ನಾನು 7 ವರ್ಷಗಳಿಂದ ಸದಸ್ಯನಾಗಿದ್ದೇನೆ. ಆ ಒಂದು ಅನುಭವದಿಂದ ಹೇಳುವುದಾದರೆ, ಇವರ ಏಳಿಗೆಗಾಗಿ ಕೋಟಿಗಟ್ಟಲೆ ಹಣವನ್ನು ಆಯವ್ಯಯದಲ್ಲಿ ಮಂಡಿಸಿದ್ದರೂ ಕೂಡ ಅದರಲ್ಲಿ ಖರ್ಚಾಗುತ್ತಿರುವುದು ಲಕ್ಷಗಟ್ಟಲೆ ಮಾತ್ರ. ಪ್ಲಾನ್ ಸ್ಕೀಮ್ ಮತ್ತು ನಾನ್ ಪ್ಲಾನ್ ಸ್ಕೀಮ್‌ಗಳಲ್ಲಿ ಅನೇಕ ಯೋಜನೆಗಳನ್ನು ಇವರ ಏಳಿಗೆಗಾಗಿ ಕೈಗೊಂಡರೂ ಕೂಡ ಆ ಯೋಜನೆಗಳಿಗಾಗಿ ಖರ್ಚು ಮಾಡತಕ್ಕಂಥ ಹಣ ಬಹಳ ಕಡಿಮೆ ಎಂದು ಹೇಳಬಹುದು. ಬಡ್ಜೆಟ್‌ನಲ್ಲಿ ಎಷ್ಟು ಹಣವನ್ನು ಇವರಿಗಾಗಿ ಪ್ರೊವೈಡ್ ಮಾಡುತ್ತೇವೋ ಅಷ್ಟನ್ನು ಖರ್ಚು ಮಾಡು

ತ್ತಿಲ್ಲ. ಕೇವಲ ಹೆಸರಿನಲ್ಲಿ ಇವರ ಉದ್ಧಾರವಾಗಬೇಕಾಗಿದೆಯೇ ವಿನಃ ಇವರ ಬಗ್ಗೆ ಕಾರ್ಯತಃ ಶ್ರದ್ಧೆಯ ಪ್ರಯತ್ನ ನಡೆದಿಲ್ಲ ಎಂದು ಹೇಳಬೇಕಾಗಿದೆ. ನನ್ನ ಒಂದು ಅನುಭವದಿಂದ ಹೇಳ ಬೇಕಾದರೆ, ಇವರುಗಳಿಗೆ ಮನೆಕಟ್ಟಿಕೊಳ್ಳಲು, ಎತ್ತು ಕೊಳ್ಳಲು ಹಂಚು ಮತ್ತು ಗರಿಗಳನ್ನು ಕೊಳ್ಳಲು 200 ರಿಂದ 500 ರೂಪಾಯಿಗಳವರೆಗೆ ಸಾಲ ಕೊಡುತ್ತಿದ್ದೇವೆ. ಮತ್ತು ಸರ್ಕಾರ ದವರೇ ಮನೆಗಳನ್ನು ಕಟ್ಟಿಸಿಕೊಡುತ್ತಿದ್ದಾರೆ. ಆದರೆ ಈ ಮನೆಗಳಲ್ಲಿ ಬೇರೆಯವರು ವಾಸ ಮಾಡುತ್ತಿದ್ದಾರೆ. ಇತರೇ ಅನುಕೂಲಗಳು ಆ ಮನೆಯಲ್ಲಿ ಇಲ್ಲದಿರುವುದರಿಂದ ಇವರು ಅಲ್ಲಿಗೆ ಹೋಗುವುದಕ್ಕೆ ಇಷ್ಟಪಡುತ್ತಿಲ್ಲ. ಲಕ್ಷಗಟ್ಟಲೆ ಎಕರೆಯಷ್ಟು ಜಮೀನನ್ನು ಇವರಿಗಾಗಿ ಹಂಚ ಲಾಗಿದೆ. ಆದರೆ ಆ ಜಮೀನುಗಳು ಈಗ ಅವರ ಸ್ವಾಧೀನದಲ್ಲಿ ಇಲ್ಲ. ಇವರುಗಳು ಸಾಮಾಜಿಕ ವಾಗಿ ಮತ್ತು ಆರ್ಥಿಕವಾಗಿ ಮುಂದುವರೆಯಬೇಕೆಂದು ಹೇಳುವುದಾದರೆ, ಇವರಿಗೆ ಬರೀ ಜಮೀನನ್ನು ಕೊಟ್ಟರೆ ಸಾಲದು, ಜಮೀನನ್ನು ಮಾಡಲು ಬೇಕಾದ ಎತ್ತುಗಳು, ಗಾಡಿ, ಗೊಬ್ಬರ ಮುಂತಾದವನ್ನು ಸಹ ಒದಗಿಸಿಕೊಡಬೇಕು. ಈ ಸಹಾಯ ಕೊಡದಿದ್ದರೆ ಅವರಿಗೆ ಕೊಟ್ಟ ಜಮೀನನ್ನು ಅವರು ಬೇರೆಯವರಿಗೆ ಮಾರಿಬಿಡುತ್ತಾರೆ. ಆದಕಾರಣ ಅವರಿಗೆ ಕೊಟ್ಟ ಜಮೀನು ಗಳನ್ನು ಅಬಾದು ಮಾಡಲು ಧನಸಹಾಯ ಕೊಡದಿದ್ದರೆ ಜಮೀನು ಕೊಟ್ಟರೂ ಕೂಡ ಏನೂ ಪ್ರಯೋಜನವಾಗುವುದಿಲ್ಲ. ಅನೇಕ ಕಾನೂನುಗಳನ್ನು ಇವರ ಏಳಿಗೆಯಾಗಬೇಕೆಂದು ಮಾಡಿದ್ದೇವೆ. ಆದರೆ ಅದು ಇನ್ನೂ ಜಾರಿಯಲ್ಲಿ ಹಳ್ಳಿಗಳ ಕಡೆ ಬಂದಿಲ್ಲ. ಎಲ್ಲರೂ ಒಂದೇ ಬಾವಿಯಲ್ಲಿ ನೀರನ್ನು ಸೇದಬಹುದು ಎಂದು ಸರ್ಕಾರದ ಕಾನೂನು ಇದ್ದರೂ ಕೂಡ ಕೆಲವು ಹಳ್ಳಿಗಳಲ್ಲಿ ಸುವರ್ಣೀಯರು ಸೇದುವ ಬಾವಿಗಳಲ್ಲಿ ಇವರುಗಳು ಸೇದುವುದಕ್ಕೆ ಬಿಡುತ್ತಿಲ್ಲ. ದೇವಸ್ಥಾನಗಳಿಗೆ ಹೋಗುವುದಕ್ಕೆ ಬಿಡುತ್ತಿಲ್ಲ. ಕೆಲವು ಉನ್ನತ ಅಧಿಕಾರಿಗಳು ಹಿಂದುಳಿದ ಜನಾಂಗದವರು ಆಗಿದ್ದರೆ ಅವರನ್ನು ಸಹ ದೇವಸ್ಥಾನಗಳಿಗೆ ಹೋಗುವುದಕ್ಕೆ ಕೆಲವು ಕಡೆ ಬಿಡುತ್ತಿಲ್ಲ. ಈ ಒಂದು ಸಾಮಾಜಿಕ ಅನ್ಯಾಯ ನಮ್ಮ ಸಮಾಜದಲ್ಲಿ ಇನ್ನೂ ಇದೆ. ಇವರು ಮುಂದುವರೆಯಬೇಕೆಂಬುದಾಗಿ ಸರ್ಕಾರ ದವರು ಅನೇಕ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಇವರಿಗಾಗಿ ಮೊದಮೊದಲು ಹಾಸ್ಟೆಲ್ ಗಳನ್ನು ಕಟ್ಟಿಸಿಕೊಟ್ಟರು ಮತ್ತು ಇವರುಗಳು ಸವರ್ಣೀಯರ ಜೊತೆಯಲ್ಲಿ ವಾಸವಾಗಿರುವಂತೆ ಮಾಡಲು ಒಂದೇ ಕಡೆ ಮನೆಗಳನ್ನು ಇವರಿಗಾಗಿ ಕಟ್ಟಿಸಿಕೊಡುತ್ತಿದ್ದಾರೆ. ಹಿಂದಿನ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ಹರಿಜನರ ಮಕ್ಕಳಿಗೇ ಪ್ರತ್ಯೇಕವಾದ ಹಾಸ್ಟಲ್‌ಗಳು ಇರುವುದು ಬೇಡ ಸವರ್ಣೀಯರ ಜೊತೆಗೆ ಇವರೂ ಸಹ ಒಟ್ಟಿಗೆ ಇರಲಿ ಎಂಬತಕ್ಕಂಥ ಯೋಜನೆಯನ್ನು ಜಾರಿಗೆ ತಂದರು. ಸರ್ಕಾರದವರು ಎಷ್ಟೇ ಯೋಜನೆಗಳನ್ನು ಕೈಗೊಂಡರೂ ಕೂಡ ಇವರುಗಳು ಇನ್ನೂ ಹರಿಜನರಾಗಿಯೇ ಉಳಿದಿದ್ದಾರೆ. ಯೋಜನೆಗಳು ಆಗಾಗ್ಗೆ ಬದಲಾವಣೆಯಾಗುತ್ತಿರುವುದರಿಂದ ಇವರ ಏಳಿಗೆ ಬಗ್ಗೆ ಒಂದು ಸರಿಯಾದ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ಆಗುತ್ತಿಲ್ಲ. ಸರ್ಕಾರದವರು ಇತ್ತೀಚೆಗೆ ಹರಿಜನರ ಉದ್ಧಾರಕ್ಕಾಗಿ ಕೆಲವು ಕಡೆ ಹರಿಜನ ಅಧಿಕಾರಿಗಳನ್ನೇ ನೇಮಕ ಮಾಡುತ್ತಿದ್ದಾರೆ. ಈ ರೀತಿ ನೇಮಕ ಮಾಡುವುದು ಒಳ್ಳೆಯದಲ್ಲ. ಏಕೆಂದರೆ ಆ ಅಧಿಕಾರಿ ಗಳು ತಮ್ಮ ಕೋಮಿನವರು ಮಾತ್ರ ಮುಂದುವರೆಯುವುದಕ್ಕೆ ಪ್ರಯತ್ನ ಪಡುತ್ತಾರೆ. ಈಗ ಹರಿಜನರಲ್ಲಿಯೇ ಅನೇಕ ಕೋಮುಗಳು ಇರುವುದರಿಂದ ಎಲ್ಲರ ಏಳಿಗೆಯೂ ಸಹ ಸಮಾನವಾಗಿ ಆಗ ಬೇಕಾದರೆ ಸವರ್ಣೀಯ ಅಧಿಕಾರಿಗಳಿಂದ ಮಾತ್ರ ಸಾಧ್ಯ ಎಂದು ಹೇಳುತ್ತೇನೆ. ಹರಿಜನರಿಗೆ ಸಿಗತಕ್ಕಂಥ ಸೌಲಭ್ಯಗಳು ತಮಗೂ ಸಿಗಬೇಕೆಂದು ಬೋವಿ ಜನಾಂಗದವರು ಇವತ್ತು ಕೇಳು ತ್ತಿದ್ದಾರೆ. ಇವರಂತೆಯೇ ಕೊರಚ, ಲಂಬಾಣಿ ಮುಂತಾದ ಹಿಂದುಳಿದ ವರ್ಗಗಳವರೂ ಸಹ ಕೇಳುತ್ತಿದ್ದಾರೆ. ಆದ್ದರಿಂದ ಸವರ್ಣೀಯ ಅಧಿಕಾರಿಗಳನ್ನು ನೇಮಕ ಮಾಡುವುದು ಒಳ್ಳೆಯದು. ಇವತ್ತಿನದಿವಸ ಕೋಟಿಗಟ್ಟಲೆ ಹಣವನ್ನು ಇವರ ಉದ್ಧಾರಕ್ಕಾಗಿ ವ್ಯಯ ಮಾಡುತ್ತಿದ್ದಾರೂ ಕೂಡ ಸರಿಯಾಗಿ ಖರ್ಚಾಗದೆ ಅಪವ್ಯಯವಾಗುತ್ತಿದೆ, ದುರ್ವಿನಿಯೋಗವಾಗುತ್ತಿದೆ ಎಂದು ಹೇಳಬಹುದು.

5-00 P.M.

ಮತ್ತೆ ನಮ್ಮ ರಾಜ್ಯ ಸರ್ಕಾರದ ಅದಕ್ಷತೆಯಿಂದ ಭಾರಿಯಾಗಿ ಕೈಗೊಂಡ ಅನೇಕ ಯೋಜನೆ ಗಳು ಇನ್ನೂ ಕಾರ್ಯರೂಪಕ್ಕೇ ಬರುತ್ತಿಲ್ಲ. ಯೋಜನೆಗಳೇ ಹೀಗಾದರೆ ಇದರಿಂದ ನಮ್ಮ ಹಳ್ಳಿ ಯವರಿಗೆ ಹೇಗೆ ಅನುಕೂಲ ಮಾಡಿಕೊಡಬಹುದು? ನಮ್ಮ ಹಳ್ಳಿಗಳಲ್ಲಿ ಕೆಲವು ಕಡೆ ಬಹಳ ಹಿಂದುಳಿದ ವರ್ಗದ ಜನ ಎಂದರೆ ಲಂಬಾಣಿಗಳು ಎನ್ನುವವರು ಇದ್ದಾರೆ. ಇವರನ್ನು ಉತ್ತಮ ಪಡಿಸಲು ಏನೇನೋ ಮಾಡುತ್ತಿದ್ದಾರೆ. ಆದರೆ ಅವರು ಇನ್ನೂ ಹಾಗೇ ಇದ್ದಾರೆ. ನಮ್ಮ ಜಿಲ್ಲೆ ಯಲ್ಲಿದ್ದ ಸೋಷಿಯಲ್ ವೆಲ್‌ಫೇರು ಅಧಿಕಾರಿಗಳು ಇಂದು ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿ ದ್ದಾರೆ. ಇವರು ಸ್ವಾತಂತ್ರ್ಯ ಬಂದಮೇಲೆ ಯಾವ ರೀತಿ ಇದ್ದರೋ ಇಂದೂ ಕೂಡ ಅವರು ಅದೇ

(ಶ್ರೀ ಜಿ. ವಿ. ಆಂಜನಪ್ಪ)

ರೀತಿಯಲ್ಲೇ ಇದ್ದಾರೆ. ಇವರಲ್ಲಿ ಯಾವ ಬದಲಾವಣೆ ಕೂಡ ಆಗಿಲ್ಲ. ಈ ರೀತಿ ಎಷ್ಟೋ ಕಡೆಗಳಲ್ಲಿ ಇದೆ. ಇದಕ್ಕಾಗಿ ಸರಕಾರ ಕೋಟಿಗಟ್ಟಲೆ ಹಣವನ್ನೇತಕ್ಕೆ ವಿನಿಯೋಗ ಮಾಡಬೇಕು ಎಂದು ಕೇಳ ಬೇಕಾಗಿದೆ. ಸರಕಾರ ಕೊಟ್ಟಂಥ ಹಣವನ್ನು ಕಾಯಾ ವಾಚಾ ಮನಸಾ ಸದ್ವಿನಿಯೋಗವಾಗುವ ಹಾಗೆ ಖರ್ಚು ಮಾಡಬೇಕು. ಆದರೆ ಇದರಲ್ಲಿ ಕೆಲವರು ಪುಡಾರಿಗಳು ಸೇರಿಕೊಂಡು ಸರಕಾರದ ಹಣವನ್ನು ದುರುಪಯೋಗ ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಮಾನ್ಯ ಸದಸ್ಯರಾದ ಶ್ರೀಮಾನ್ ಸುಬ್ಬಯ್ಯನವರು ಇಲ್ಲಿ ತಂದಿರುವ ನಿರ್ಣಯ ಸಮಯೋಚಿತವಾಗಿದೆ ಮತ್ತು ಅರ್ಥ ಗರ್ಭಿತವಾಗಿದೆ. ಆದರೆ ಸರಕಾರ ಮುಂದೆ ಇಂತಹ ಒಂದು ಕಮಿಟಿಯನ್ನು ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ. ನಮ್ಮ ಮುಂದಿನ ಆಗುಹೋಗುಗಳು ಹೇಗಿರುತ್ತೋ ಹೇಳುವುದಕ್ಕಾಗುವುದಿಲ್ಲ. ಇದುವರೆಗೆ ಸರಕಾರ ಕೊಟ್ಟಿರುವ ಹಣ ಸರಿಯಾಗಿ ಸದ್ವಿನಿಯೋಗ ವಾಗಿದೆಯೇ ಇಲ್ಲವೇ ಎನ್ನುವುದನ್ನು ನೋಡಲು ಮಾತ್ರ ಶಾಸಕರ ಒಂದು ಕಮಿಟಿ ಮಾಡಬೇಕೆಂದು ನಿರ್ಣಯ ತಂದಿದ್ದಾರೆ. ಇದರಿಂದ ಹಿಂದೆ ಏನಾಗಿದೆ ಎನ್ನುವುದನ್ನು ತಿಳಿಯಲು ಒಂದು ಅವಕಾಶ ಸಿಗುತ್ತದೆ. ಆದುದರಿಂದ ಇಂತಹ ಒಂದು ಕಮಿಟಿ ಮಾಡುವುದಗತ್ಯ ಎಂದು ಹೇಳಬಯಸುತ್ತೇನೆ. ಮತ್ತು ಮಾನ್ಯ ಸಚಿವರು ಇಂತಹ ಒಂದು ಕಮಿಟಿ ಮಾಡಬೇಕೆಂದು ಕೇಳುತ್ತೇನೆ. ಹರಿಜನರ ಅಭಿವೃದ್ಧಿಗಾಗಿ ಹರಿಜನರಿಂದಲೇ ಕೂಡಿದ ಒಂದು ಕಮಿಟಿ ಮಾಡಬೇಕೆಂದು ಮಾಡಿದರೆ ಇದರಿಂದ ಖಂಡಿತ ಹರಿಜನರ ಉದ್ಧಾರವಾಗುವುದಿಲ್ಲ ಮತ್ತು ಹರಿನಜರ ಕಲ್ಯಾಣವಾಗುವುದಿಲ್ಲ. ಹರಿಜನರ ಸಮಿತಿ ಎಂದು ಮಾಡಿದರೆ ಇದರಲ್ಲಿ ಪುಡಾರಿಗಳು ಸೇರಿಕೊಂಡು ಹರಿಜನ ಹಾಗೂ ಗಿರಿಜನರನ್ನು ತುಳಿದುಬಿಡುತ್ತಾರೆ. ಇದನ್ನು ನಾನು ಖಂಡಿತ ವಿರೋಧ ಮಾಡುತ್ತೇನೆ. ಹರಿಜನರಲ್ಲದವರನ್ನು ಇಂತಹ ಕಮಿಟಿಯಲ್ಲಿ ನೇಮಕ ಮಾಡಿದರೆ ಆಗ ಏನಾದರೂ ಒಂದು ರೀತಿಯಲ್ಲಿ ಹರಿಜನರಿಗೆ ಅನುಕೂಲಗಳಾಗಬಹುದು. ಒಂದೇ ಕೋಮಿನವರು ಕಮಿಟಿಯಲ್ಲಿ ಇರಬೇಕೆಂದು ಮಾಡಿದರೆ ಇದರಲ್ಲಿ ಗುಂಪುಗಳಾಗಿ ಒಬ್ಬರಿಗೊಬ್ಬರು ಜಗಳವಾಡಿಕೊಂಡು ಇಲ್ಲದ ಗೊಂದಲಗಳಿಗೆ ಕಾರಣವಾಗು ತ್ತದೆ. ಆದುದರಿಂದ ಹರಿಜನರೊಡನೆ ಸವರ್ಣ ಹಿಂದೂಗಳನ್ನೂ ಇಂತಹ ಕಮಿಟಿಯಲ್ಲಿ ಸೇರಿಸಿದರೆ ಚೆನ್ನಾಗಿರುತ್ತದೆ. ಇದಕ್ಕಾಗಿ ಇಲ್ಲಿ ಸೂಚಿಸಿರುವಂತೆ ಶಾಸಕರ ಒಂದು ಕಮಿಟಿ ಮಾಡಬೇಕೆಂದು ಸರಕಾರದವರಲ್ಲಿ ಕೇಳಿಕೊಂಡು ಮಾನ್ಯ ಸದಸ್ಯರು ತಂದಿರುವ ಈ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವೈ. ಎಸ್. ಪಾಟೀಲ್ (ಪದವೀಧರರ ಕ್ಷೇತ್ರ).—ಮಾನ್ಯ ಸಭಾಪತಿಗಳೇ ಭಾರತದ ಸ್ವಾತಂತ್ರ್ಯವಾದಂದಿದಿಂದ ರಾಜ್ಯದಲ್ಲಿ ಹರಿಜನ ಮತ್ತು ಗಿರಿಜನರಿಗೆ ಒದಗಿಸರಾದ ಸೌಲಭ್ಯ ಯಾವ ರೀತಿ ಉಪಯೋಗಿಸಲ್ಪಟ್ಟಿವೆ ಎನ್ನುವುದನ್ನು ವಿಚಾರಿಸಲು ರಾಜ್ಯ ಮಟ್ಟದ ಸಮಿತಿ ರಚಿಸ ಬೇಕೆಂದು ಗೊತ್ತುವಳಿ ತಂದಿರುವುದಕ್ಕೆ ನನ್ನ ಪೂರ್ಣ ಬೆಂಬಲ ಇದೆ. ಹಿಂದಿನ ಪರಿಶೀಲನೆ ಮಾಡಿ ದಾಗ್ಗೇನೇ ಮುಂದಿನ ಉಪಾಯ ಸೂಚಿಸಲು ಹೆಚ್ಚು ಅನುಕೂಲವಾತ್ತದೆ.

ಆಡಳಿತದ ಪಕ್ಷದಲ್ಲಿ ಮನಸ್ಸಿನಲ್ಲಿ ಹರಿಜನರ ಉದ್ಧಾರ ಮಾಡಬೇಕೆಂದು ಕಳಕಳಿ ಇಲ್ಲ ಎಂದು ಹೇಳುವುದಿಲ್ಲ. ಆದರೆ ಅವನ್ನು ಕೃತಿಯಲ್ಲಿ ತರುವಲ್ಲಿ ಸರಕಾರದ ಹಾಗೂ ಆಡಳಿತ ಪಕ್ಷ ವಿಫಲ ವಾಗಿದೆ.

ಸರಕಾರಕ್ಕೆ ಹರಿಜನ ಉದ್ಧಾರದಲ್ಲಿ ಆಸಕ್ತಿ ಹಾಗೂ ಕಳಕಳಿ ಇಲ್ಲ ಎನ್ನುವುದಕ್ಕೆ ನಾನು ಇಲ್ಲಿ ಒಂದು ಉದಾಹರಣೆ ಕೊಡಬಯಸುತ್ತೇನೆ. ಧಾರವಾಡ ಜಿಲ್ಲೆಯ ನಾಲ್ಕನೇ ಪಂಚವಾರ್ಷಿಕ ಯೋಜನೆ ಕರಡನ್ನು ತಯಾರಿಸಿ ಧಾರವಾಡ ಜಿಲ್ಲೆ ಅಭಿವೃದ್ಧಿ ಮಂಡಲದಲ್ಲಿ ಚರ್ಚೆಗೆ ಇಡಲಾಗಿತ್ತು. ಅದರಲ್ಲಿ ಹರಿಜನರ ಕಾಲೋನಿ ಸಲುವಾಗಿ ಕೆಲವೊಂದು ಸಹಸ್ರ ರೂಪಾಯಿ ಮೀಸಲಾಗಿ ಇರಿಸಲ್ಪ ಟ್ಟಿತ್ತು. ಅದರಲ್ಲಿಯ ವಿವರ ಹೇಳಬೇಕೆಂದರೆ ಊರ ಹೊರಗೆ ಒಂದು ಪ್ಲಾಟು ಹಿಡಿದು ಅಲ್ಲಿ ಹರಿಜನರಿಗೆ ವಸತಿ ಗೃಹಗಳು ಹರಿಜನರಿಗೆ ಒಂದು ಕುಡಿಯುವ ನೀರಿನ ಬಾವಿ. ಹರಿಜನರಿಗೆ ಒಂದು ದವಾಖಾನೆ, ಹರಜನರ ಮಕ್ಕಳಿಗಾಗಿ ಒಂದು ಶಾಲೆ, ಹರಿಜನರ ಕೆಲಸಕ್ಕೆ ಒಂದು ಕಮ್ಯುನಿಟಿ ಹಾಲ್, ಹೀಗೆ ಹರಿಜನರಿಗೆ ಪ್ರತ್ಯೇಕವೇ ಮಾಡಿ ಅವರನ್ನು ಪ್ರತ್ಯೇಕ ಇಟ್ಟರೆ ಅವರು ಜನತೆಯ ಸಂಗಡ ಯಾವ ದಿನ ಒಂದಾಗಬೇಕು ಮತ್ತು ಪ್ರತ್ಯೇಕತಾ ನೀತಿಯನ್ನು ನಾವು ಅನು ಸರಿಸಿದರೆ ಹರಿಜನರ ಉದ್ಧಾರವಾದರೂ ಶಕ್ಯವೇ.

ಈಗ ಧಾರವಾಡ ಮುನಿಸಿಪಲ್ ಕ್ಷೇತ್ರದಲ್ಲಿ ಹರಿಜನರು ವಾಸಿಸತಕ್ಕ ಸ್ಥಳದ ಬಗ್ಗೆ ಹೇಳ ಬೇಕಾದರೆ ಧಾರವಾಡದಲ್ಲಿ ಹರಿಜನರಿಗಾಗಿ ಮುನಿಸಿಪಾಲಿಟಿಯವರು 8-10 ವಸತಿ ಗೃಹಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ. ಆ ವಸತಿ ಗೃಹಗಳಿರುವ ಸ್ಥಳ ನೋಡಿದರೆ ಓಕರಿಕೆ ಹಾಕಲಿಕ್ಕೆ ಸಹ ಬರು

ವಂತಹುದು. ಸುತ್ತಲೂ ಪಾಯಾಖಾನೆಗಳಿವೆ. ಎಡಬಲದಲ್ಲಿ ಮುನಿಸಿಪಾಲಟಿಯವರು ಊರ ಕಸ ತಂದು ಚೆಲ್ಲುವ ಸ್ಥಳ ಹತ್ತಿರದಲ್ಲಿಯೂ ಶೆರೆ ಸಿಳಿಗಳ ಅಂಗಡಿಗಳು. ಉತ್ತಮ ಗಟಾರಗಳಿಲ್ಲ, ಅಯೋಗ್ಯ ವಾತಾವರಣ.

ಇದು ನಾವು ಹರಿಜನರಿಗಾಗಿ ಮಾಡುತ್ತಿರುವ ಹಿತಸೌಕರ್ಯಗಳ ಉದಾಹರಣೆ.

ಜನ ಇದಕ್ಕೆ ಹೊಸ ಹೊಲಗೇರಿ ಅನ್ನುತ್ತಿದ್ದಾರೆ. ಮೊದಲು ಹರಿಜನ ಇರುತ್ತಿದ್ದುದು ಹಳೇ ಹೊಲಗೇರಿ. ಈಗ ಸದ್ಯಕ್ಕೆ ಅವರ ಮನೆಗಳಿರುವುದು ಹೊಸ ಹೊಲಗೇರಿ.

ಧಾರವಾಡದಲ್ಲಿರುವ ಹರಿಜನ ಹಾಸ್ಟೆಲ್‌ನ ಪರಿಸ್ಥಿತಿ ನೋಡಿದರೆ—ಸರಕಾರಕ್ಕೂ ಹಾಗೂ ಮ್ಯಾನೇಜರ್‌ಗೂ ಜಗಳ, ವಿದ್ಯಾರ್ಥಿಗಳು ಊಟವಿಲ್ಲದೆ, ಅಭ್ಯಾಸವಿಲ್ಲದೆ ತಿರುಗುತ್ತಿದ್ದಾರೆ.

ಧಾರವಾಡದಲ್ಲಿರುವ ವನಿತಾ ಸೇವಾ ಸಮಾಜ ಎಂಬ ಸಂಸ್ಥೆಯಲ್ಲಿ ಮೈಸೂರು ಸ್ಟೇಟ್ ವೆಲ್‌ಫೇರ್ ಬೋರ್ಡ್‌ದಿಂದ ಪ್ರತಿವರ್ಷ ನಾಲ್ಕು ಸಾವಿರ ರೂಪಾಯಿ ಮಿಕ್ಕ ಗ್ರ್ಯಾಂಟ್ ಪಡೆಯುತ್ತಿರುವ ಮಹಿಳಾ ಕಲ್ಯಾಣ ಕೇಂದ್ರ ಮತ್ತು ಸೋಷಿಯಲ್ ವೆಲ್‌ಫೇರ್ ಬೋರ್ಡ್, ಡೆಲ್ಲಿ, ಭಾರತ ಸರಕಾರದಿಂದ ಪ್ರತಿವರ್ಷವೂ ಆರು ಸಾವಿರ ರೂಪಾಯಿ, ಮಿಕ್ಕ ಗ್ರ್ಯಾಂಟ್ ಪಡೆಯುತ್ತಿರುವ ವೆಲ್‌ಫೇರ್ ಬೋರ್ಡು ಹಾಸ್ಟಲ್ ಇವೆ. ಈ ಹಾಸ್ಟಲುಗಳಲ್ಲಿ ಅನೇಕ ಹರಿಜನ ಹಾಗೂ ಗಿರಿಜನ ಮಹಿಳೆಯರೂ ಇದ್ದಾರೆ. ಇಲ್ಲಿರತಕ್ಕ ಮಹಿಳೆಯರು ಇಂದು ಊಟವಿಲ್ಲದೆ, ಬಟ್ಟೆಗಳಿಲ್ಲದೆ ತಿರುಗುತ್ತಿರುವರು. ಧಾರವಾಡ ಬಸ್‌ನಿಲ್ದಾಣ ಹಾಗೂ ಮಾರ್ಕೆಟ'ನಲ್ಲಿ ಭಿಕ್ಷೆಗಾಗಿ ಅಲೆದಾಡುತ್ತಿರುವರು. ಸರಕಾರ ಇವರಿಗಾಗಿ ಕೊಡುತ್ತಿರುವ ಹಣ ದುರುಪಯೋಗ ಹಾಗೂ ನಿರುಪಯೋಗ ಆಗುತ್ತಿದೆ. ನಿಜವಾಗಿ ಇದು ನಾಚಿಕೆಗೇಡು ವಿಷಯವಾಗಿದೆ.

ಗಿರಿಜನರ ಮೇಲೆ ಆಗುತ್ತಿರುವ ಅನ್ಯಾಯದ ಕತೆ ಹೇಳಬೇಕೆಂದರೆ ಮೊನ್ನೆ ಮೊನ್ನೆ 2-3 ತಿಂಗಳ ಹಿಂದೆ ಧಾರವಾಡ ಜಿಲ್ಲಾ ಗದಗ ತಾಲ್ಲೂಕಿನಲ್ಲಿ ಸಂಭವಿಸಿದ ಪ್ರಸಂಗ—ಗದುಗಿನ ಸುತ್ತಲೂ ಇರುವ ಲವಾಣಿ ತಂಡದ ಮೇಲೆ ಗದುಗಿನ ತಾಲ್ಲೂಕು ಪೋಲೀಸ್ ಅಧಿಕಾರಿಗಳೊಬ್ಬರು ಹಲ್ಲೆ ಮಾಡಿ ಅಲ್ಲಿ ವಾಸಿಸಿದ್ದ ವಿವಾಹಿತ ಲವಾಣಿ ಮಹಿಳೆಯೊಬ್ಬಳನ್ನು ದುರುದ್ದೇಶದಿಂದ ಅವಳ ಮನೆಯಿಂದ ಹೊರಗೆಳೆದು ತಂದ ಒಬ್ಬ ಕ್ರಿಶ್ಚಿಯನ್ ಯುವಕನಿಗೆ ದುಷ್ಕೃತ್ಯದ ಸಲುವಾಗಿ ತಂದು ಕೊಟ್ಟರು. ಈ ವಿಷಯ ಪೋಲೀಸ್ ಕಛೇರಿಗೆ ಕಂಪ್ಲೇಂಟ್ ಮಾಡಿದರೆ ಕೇಳುವವರಿದ್ದಿಲ್ಲ. ಸಂಬಂಧಿಸಿದ ಮ್ಯಾಜಿಸ್ಟ್ರೇಟ್ ಅವರಿಗೆ ಕಂಪ್ಲೇಂಟ್ ಕೊಟ್ಟು ಅವರಮೇಲೆ ಮೊಕದ್ದಮೆ ಗದುಗಿನ ನ್ಯಾಯಾಲಯದಲ್ಲಿದೆ.

ಬಡ ಗಿರಿಜನರಮೇಲೆ ಸರಕಾರೀ ಅಧಿಕಾರಿಗಳು ಅತ್ಯಾಚಾರ ನಡೆಸಿದರೆ, ಅವರನ್ನು ಇನ್ನಾರು ರಕ್ಷಿಸಬೇಕು. ಸರಕಾರ ಕೂಡಲೆ ಸಂಬಂಧಿಸಿದವರ ಮೇಲೆ ಯೋಗ್ಯ ಕ್ರಮ ಕೈಗೊಳ್ಳಬೇಕು.

ಕಳೆದ ವರ್ಷ ಬರಗಾಲ ಪೀಡಿತ ಪ್ರದೇಶದಲ್ಲಿ ಗೋಧಿ ಹಂಚುವವರಿಂದ ಅನೇಕ ಬಡ ಹರಿಜನರನ್ನು ಕನ್‌ವರ್ಟ್ ಮಾಡಲು ಅನೇಕ ಕ್ರಿಶ್ಚನ್ ಪಾದ್ರಿಗಳು ಪ್ರಯತ್ನಿಸಿದ್ದಾರೆ.

ರಾಣಿಬೆನ್ನೂರ ತಾಲ್ಲೂಕದ ಹಳ್ಳಿಯೊಂದರಲ್ಲಿ ದಾಸ್ ಎಂಬ ಒಂದು ಮತದ ಜನರು ಇದ್ದಾರೆ. ಇವರು ಹರಿಜನ ಗುಂಪಿಗೆ ಸೇರಿದವರು, ತುಂಬಾ ಬಡವರು. ಸಮೀಪದ ಮೋಟೆಬೆನ್ನೂರದಲ್ಲಿರುವ ಚರ್ಚ್‌ನ ಪಾದ್ರಿಗಳು ಇವರನ್ನು ಕನ್‌ವರ್ಟ್ ಮಾಡುವ ಸಲುವಾಗಿ ಅನೇಕ ತರಹದ ಪ್ರಯೋಗ ನಡೆಸಿದ್ದಾರೆ. ತಮ್ಮಲ್ಲಿರುವ ತರುಣ ಹೆಣ್ಣು ಮಕ್ಕಳನ್ನು ಪ್ರತಿ ರವಿವಾರಕ್ಕೊಮ್ಮೆ ಆ ಹಳ್ಳಿಗೆ ಕರೆದುಕೊಂಡು ಹೋಗಿ ಅವರನ್ನು ದುಷ್ಕೃತ್ಯಕ್ಕೆ ಹಚ್ಚಲು ಸಹ ಇವರು ಹಿಂದು ಮುಂದು ನೋಡುತ್ತಿಲ್ಲ. ಅಲ್ಲಿ ಈ ದಾಸ ಜನರಿಗೆ ಕೆನಡಿ ಕಮ್ಯುನಿಟಿ ಹಾಲ್ ಎಂಬ ಒಂದು ಸಣ್ಣ ಗುಡಿಸಲು ಕಟ್ಟಿಸಿ ಕೊಟ್ಟಿದ್ದಾರೆ. ಈ ಬಡ ಜನರಿಗೆ ಆಶೆ ಆಮಿಷೆ ತೋರಿಸಿ ಇವರನ್ನೆಲ್ಲಾ ಅವರ ಬಡತನದ ದುರ್ಲಾಭ ಪಡೆದುಕೊಂಡು ಅವರನ್ನು ಕ್ರಿಶ್ಚಿಯನ್ನರಾಗಿ ಪರಿವರ್ತಿಸಲು ತುಂಬಾ ಶ್ರಮಪಡುತ್ತಿದ್ದಾರೆ. ಸರ್ಕಾರೂ ಇತ್ತ ಕಡೆಗೆ ಲಕ್ಷ ಕೊಟ್ಟು ಇವರನ್ನು ದಂಡಿಸಬೇಕು.

ಇಂತಹ ಪ್ರಸಂಗಗಳನ್ನು ನೋಡಿದರೆ ಸರಕಾರವು ಹರಿಜನ ಗಿರಿಜನರ ಉದ್ಧಾರ ಮಾಡಲು ತುಂಬಾ ಅಲಕ್ಷ್ಯ ಮಾಡುತ್ತಿದೆ ಎನ್ನುವುದು ಸಿದ್ಧವಾಗುತ್ತಿದೆ.

ಸರಕಾರ ಇನ್ನಾದರೂ ದಕ್ಷತೆ ವಹಿಸಿ ಹರಿಜನ ಗಿರಿಜನರಿಗೆ ತಾವು ಸೌಕರ್ಯ ಸೌಲಭ್ಯ ತಲುಪುವಂತೆ ನೋಡಬೇಕು ಮತ್ತು ಅವರ ಉದ್ಧಾರಕ್ಕೆ ಮನಃಪೂರ್ವಕವಾಗಿ ಶ್ರಮಿಸಬೇಕು. ಹರಿಜನ, ಗಿರಿಜನ ಉದ್ಧಾರ ಮಾಡುವಲ್ಲಿ ಅಡತಡೆ ತರುವವರಿಗೆ ಶಿಕ್ಷಿಸಬೇಕು. ಹರಿಜನ ಗಿರಿಜನರ ಬಡತನದ ದುರುಪಯೋಗ ಪಡೆದು ಅವರನ್ನು ಪರ ಮತಕ್ಕೆ ಪರಿವರ್ತಿಸುವವರಿಗೆ ಉಗ್ರ ಶಿಕ್ಷೆ ವಿಧಿಸಬೇಕು. ಸರಕಾರ ಬಹಳ ದಕ್ಷತೆಯಿಂದ ಈ ಕಾರ್ಯ ಮಾಡಬೇಕೆಂದು ನನ್ನ ಪ್ರಾರ್ಥನೆ.

Sri JIVRAJ HIRACHAND SHAH (Legislative Assembly Constituency).—Sir, there is a prima facie case in this Resolution which has to be supported, but since Government are considering to appoint such a Committee, at this juncture it is no use pressing it here. We can only suggest to the Government what are the measures that should be adopted. In that light, I wish to make some suggestions. We have gone through three five-year plans in this country, but we do not know the exact extent of progress made in the amelioration of the conditions of Scheduled Castes educationally, economically and socially. The population of Scheduled Castes in the State is 31,72,232 according to the Census Report, but we do not know the percentage of literacy achieved, how many of them have become S. S. L. C. s and how many of them have become Graduates, what is the progress made in the social structure of this community and whether they have come up to the level of Savarn Hindus. All these aspects of these people have to be gone through in detail and in the light of that the Government should take steps. While constituting this Committee all these aspects should be gone into by this Committee and the report of this Committee should be placed before this House.

† ಶ್ರೀ ಬಿ. ಚನ್ನಬೈರೇಗೌಡ.—ಮಾನ್ಯ ಸಭಾಪತಿಯವರೇ, ಈಗ ತಂದಿರುವ ನಿರ್ಣಯದ ಮೂಲೋದ್ದೇಶ ಕಳೆದ 22 ವರ್ಷಗಳಿಂದ ನಮ್ಮ ದೇಶದಲ್ಲಿ ಹರಿಜನರು ಮತ್ತು ಹಿಂದುಳಿದವರಿಗೆ ಹಣ ಖರ್ಚಾಗಿರುವುದು ಎಷ್ಟುಮಟ್ಟಿಗೆ ಆಗಿದೆ, ಅದರಲ್ಲಿ ದುರುಪಯೋಗವೆಷ್ಟಾಗಿದೆ ಎಂಬುದನ್ನು ಕಂಡುಹಿಡಿಯಲು ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಬೇಕೆಂಬುದು. ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಸರಕಾರ ಮತ್ತು ಅಧಿಕಾರಿಗಳಿಂದ ಎಲ್ಲಿ ತಪ್ಪಾಗಿದೆ ಎಂಬುದನ್ನು ಹೇಳುತ್ತೇನೆ.

ಹರಿಜನರ ಉದ್ಧಾರದ ಹೆಸರಿನಲ್ಲಿ ಸ್ವರಾಜ್ಯ ಬಂದಮೇಲೆ ಭಾರತ ಮತ್ತು ರಾಜ್ಯ ಸರಕಾರಗಳು ಸೇರಿ ಸುಮಾರು 50 ಕೋಟಿ ರೂಪಾಯಿಗಳನ್ನು ಖರ್ಚುಮಾಡಿವೆ; ಪ್ಲಾನ್ ಸ್ಕೀಂ, ನಾನ್-ಪ್ಲಾನ್ ಸ್ಕೀಂ, ಸ್ಟೇಟ್ ಬಜೆಟ್ಟಿನಲ್ಲಿ ಪ್ರತಿ ವರ್ಷ ಒದಗಿಸುವುದು ಎಲ್ಲಾ ಸೇರಿ ಸುಮಾರು 50 ಕೋಟಿ ಖರ್ಚಾಗಿದೆ. ಅದರ ವಿಲೇವಾರಿ ಎಷ್ಟರಮಟ್ಟಿಗೆ ಆಗಿದೆ, ಎಷ್ಟುಮಟ್ಟಿಗೆ ಅಭಿವೃದ್ಧಿಯಾಗಿದೆ, ಹರಿಜನರ ಉದ್ಧಾರ ಹೇಗಾಗಿದೆ ಎಂದು ಸ್ವಲ್ಪ ವಿಚಾರಮಾಡಿದರೆ, ಹಿಂದೆ ಮಹಾರಾಜರ ಸರಕಾರವಿದ್ದಾಗ 60-70 ವರ್ಷಗಳಿಂದ ಹರಿಜನರ ಉದ್ಧಾರಮಾಡಬೇಕೆಂದು ಹಿಂದಿದ್ದ ಬೇಜವಾಬ್ದಾರಿ ಸರಕಾರ ದೇಶದ ಆದಾಯ ಮೂರೂವರೆ ಕೋಟಿ ಇದ್ದಾಗ ಹರಿಜನರಲ್ಲಿ ಎಷ್ಟೋ ಮಂದಿ ವಿದ್ಯಾವಂತರಾಗಿದ್ದುದು, ಕೆಲವರು ಅಧಿಕಾರಿಗಳಾಗಿದ್ದುದು ಕಂಡುಬರುವುವು. ಕಾಂಗ್ರೆಸ್ ಸರಕಾರ ಬಂದಮೇಲೆ ಎಷ್ಟು ಮಂದಿ ಹರಿಜನರು ಮುಂದೆ ಬಂದಿದ್ದಾರೆ, ಎಷ್ಟು ಜನ ಅವರಲ್ಲಿ ಮಹಡಿ ಮನೆ ಕಟ್ಟಿದ್ದಾರೆ, ಅಧಿಕಾರಿಯಾಗಿದ್ದಾರೆ, ಎರಡು ಸಾವಿರ ರೂಪಾಯಿಗಳವರೆಗೆ ಸಂಬಳ ತೆಗೆದುಕೊಂಡಿರುವವರು ಯಾರಿದ್ದಾರೆ ಎಂದು ನೋಡಿದರೆ ಒಂದೆರಡು ಮಂದಿ ಸಿಕ್ಕಬಹುದೇ ಹೊರತು ಹತ್ತಾರು ಮಂದಿ ಇಲ್ಲ. ಇದಕ್ಕೆ ಕಾರಣ ಈ ಸರಕಾರ ಹರಿಜನರ ಹೆಸರಿನಲ್ಲಿ ಅವರ ಉದ್ಧಾರಮಾಡುವುದಾಗಿ ಹೇಳಿ ಎಷ್ಟೋ ಹಣ ಖರ್ಚುಮಾಡುತ್ತಿದ್ದರೂ ಅವರ ಸದುಪಯೋಗವಾಗಿಲ್ಲದಿರುವುದು. ಹರಿಜನರ ಓಟಿಲ್ಲದಿದ್ದರೆ ಕಾಂಗ್ರೆಸ್ ಸರಕಾರಕ್ಕೆ ಅಧಿಕಾರವೇ ಇಲ್ಲ. ಯಾವ ಚುನಾವಣೆಯಲ್ಲಾಗಲಿ ಹರಿಜನರ ಬೆಂಬಲವಿಲ್ಲದೇಹೋದರೆ ಕೇಂದ್ರ ಸರಕಾರದಿಂದ ಹಿಡಿದು ರಾಜ್ಯ ಸರಕಾರದವರಿಗೆ ಅಧಿಕಾರವೇ ಇಲ್ಲ. ಇದನ್ನು ಮನಸ್ಸಿನಲ್ಲಿಟ್ಟು ಕೋಟಿಗಟ್ಟಲೆ ಖರ್ಚುಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಒಂದು ಉದಾಹರಣೆ ಕೊಡುತ್ತೇನೆ. ಸುಮಾರು 30 ವರ್ಷಗಳ ಹಿಂದೆ ಜಪಾನಿನಲ್ಲಿ ಅನೇಕರು ನಾಲ್ಕೂವರೆ ಅಡಿಗಳಿಗಿಂತ ಎತ್ತರವಾಗಿರಲಿಲ್ಲ, ಅದರಿಂದ ಅವರಿಗೆ ಚಿಂತೆಯಾಯಿತು, ಅದಕ್ಕಾಗಿ ಅಲ್ಲಿನ ತಜ್ಞರು ಒಂದು ಪ್ಲಾನ್ ಮಾಡಿದರು, ಉದ್ದ ಇರುವವರು ಕುಳ್ಳರನ್ನು ಮದುವೆಯಾಗಬೇಕು, ಕುಳ್ಳಗಿರುವವರು ಉದ್ದ ಇರುವವರನ್ನು ಮದುವೆಯಾಗಬೇಕು ಎಂದು ಗೊತ್ತುಪಡಿಸಿದರು, ನಂತರ 20 ವರ್ಷಗಳಲ್ಲಿ ಅಲ್ಲಿನ ಜನರು ಐದೂಮುಕ್ಕಾಲು ಅಡಿಗಳಿಗೆ ಕಡಮೆ ಇಲ್ಲದಂತೆ ಬೆಳೆದರು. ಹೀಗಿರುವಾಗ ನಮ್ಮ ದೇಶದವರು ಹರಿಜನರ ಅಭಿವೃದ್ಧಿಗಾಗಿ

ಸೂಕ್ತ ಕ್ರಮ ತೆಗೆದುಕೊಳ್ಳದಿರುವುದು ನಾಚಿಕೆಗೇಡು. 22 ವರ್ಷಗಳಲ್ಲಿ ಎಷ್ಟು ಅವರ ಅಭಿವೃದ್ಧಿಗೆ ನೆರವಾಗಿದ್ದೀರಿ ? ಈಗ ಎಲ್ಲಾ ತಾಲ್ಲೂಕುಗಳಲ್ಲೂ ಹೆಡ್‌ಕ್ವಾರ್ಟರುಗಳಲ್ಲಿ ಹಾಸ್ಟಲುಗಳನ್ನು ತೆರೆದಿದ್ದಾರೆ, ವ್ಯವಸ್ಥೆ ಸರಿಯಾಗಿಲ್ಲ. ಅಂತೂ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ, 20 ವರ್ಷಗಳಲ್ಲಿ ಹರಿಜನರು ವಿದ್ಯಾವಂತರಾಗಬಹುದು. ಉಚಿತ ಹಾಸ್ಟೆಲುಗಳನ್ನು ತೆರೆದಿದ್ದರೂ ಅಲ್ಲಿರುವ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಮನಸ್ಸಿಲ್ಲ. ಸೊಸೈಟಿ, ಮುನಿಸಿಪಾಲಿಟಿ, ಜನರಲ್ ಎಲೆಕ್ಷನ್ಸ್ ಮುಂತಾದವುಗಳಿಗೆ ಸಂಬಂಧಪಟ್ಟ ಚುನಾವಣೆಗಳಲ್ಲಿ ಓಟುಗಳಿಸಲು ಬೇಕಾದ್ದನ್ನು ಮಾಡಿರುವರೇ ಹೊರತು ನಿಜವಾದ ಮನಸ್ಸಿನಿಂದ ಹರಿಜನರ ಉದ್ಧಾರಕ್ಕಾಗಿ ಸೂಕ್ತ ಕ್ರಮ ಕೈಕೊಳ್ಳುತ್ತಿಲ್ಲ. ಯೋಚನೆ ಬೇಕಾದಷ್ಟು ಮಾಡಿದ್ದಾರೆ. ಹರಿಜನರ ಬಗ್ಗೆ ನೇಮಿಸಲ್ಪಟ್ಟ ಕೆಲವರು ಹರಿಜನ ಅಧಿಕಾರಿಗಳು ಉದ್ಧಾರವಾದರು ಅಷ್ಟೇ ಹೊರತು ಅವರು ಹರಿಜನರ ಅಭಿವೃದ್ಧಿಗಾಗಿ ಸಾಕಷ್ಟು ಕೆಲಸಮಾಡಲಿಲ್ಲ. ಇದಾಗಬಾರದು, ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಬೇರೆ ಜನರನ್ನು ಆಫೀಸರಾಗಿ ನೇಮಕಮಾಡಿದರೆ ಅನುಕೂಲವಾಗಬಹುದು. ಹರಿಜನರೇ ಅಧಿಕಾರಿಗಳಾದರೆ ಅನುಕೂಲವಾಗುವುದಿಲ್ಲ. ಹಾಸ್ಟೆಲುಗಳಲ್ಲಿ ತೊಂದರೆ ಬಹಳವಾಗಿದೆ. ಆದುದರಿಂದ ಹರಿಜನರಲ್ಲಿ ವಿದ್ಯಾವಂತರು ಹೆಚ್ಚಾಗುವಂತೆ ಮಾಡಿ ಅವರಿಗೆ ಸೇಕಡ 18 ಉದ್ಯೋಗಗಳನ್ನು ಮೀಸಲಿಡುವುದನ್ನು ಸೇಕಡ 30ಕ್ಕೆ ಹೆಚ್ಚಿಸಿ ಕಾರ್ಖಾನೆಗಳಲ್ಲಿ ಮತ್ತಿತರ ಕಡೆಗಳಲ್ಲಿ ಹರಿಜನರು ಮುಂದೆ ಬರುವವರೆಗೆ ಹತ್ತು ವರ್ಷಗಳವರೆಗಾದರೂ ದಕ್ಷತೆಯಿಂದ ಅವರಿಗಾಗಿ ಕೆಲಸಮಾಡಬೇಕು. ಈಗ ಹಾಸ್ಟಲುಗಳಲ್ಲಿ ಹರಿಜನರೇ ಅಡಿಗೆ ಕೆಲಸ ಮತ್ತು ವಾರ್ಡನ್ ಕೆಲಸ ವಹಿಸಿಕೊಂಡಿದ್ದಾರೆ, ಅದಕ್ಕೆ ಬದಲಾಗಿ ಬೇರೆ ಉತ್ತಮ ವರ್ಗದವರನ್ನು, ಸತ್ಯವಂತರನ್ನು ಹಾಕಿದರೆ ಹರಿಜನರು ಉದ್ಧಾರವಾಗಬಹುದು, ಹರಿಜನರ ಉದ್ಧಾರಮಾಡಬೇಕೆಂಬ ಆಸಕ್ತಿಯಿರುವವರನ್ನು ಅಲ್ಲಿಗೆ ಹಾಕುವುದು ಉತ್ತಮ, ಅಂಥವರನ್ನು ಆರಿಸಿ ಸೂಪರ್‌ವೈಜರುಗಳಾಗಿ ಹಾಕಬೇಕು. ಸುಮ್ಮನೆ ಹೆಂಚುಗಳು ಕೊಟ್ಟರೆ ಉದ್ಧಾರವಾಗುವುದಿಲ್ಲ, ಯಾವುದೂ ಅವರಿಗೆ ಮುಟ್ಟುವುದಿಲ್ಲ. ಸರಕಾರಿ ಯೋಜನೆ ಪ್ರಕಾರ 2 ಸಾವಿರ ರೂಪಾಯಿಗಳನ್ನು ಮರಕೊಳ್ಳಲು ಕೊಡುವರು. ಮೊನ್ನೆ ಹೀಗೆ ಹರಿಜನರಿಗೆ ಕೊಟ್ಟಿರುವುದನ್ನು ದುರುಪಯೋಗಮಾಡಿಕೊಂಡು ಸಾಗಿಸುತ್ತಿದ್ದ 6 ಲಾರಿಗಳನ್ನು ಟಿಂಬರ್ ಸಮೇತ ಹಿಡಿದಿರುವುದಾಗಿ ಫಾರೆಸ್ಟ್ ಇಲಾಖೆ ಮಂತ್ರಿಗಳು ಹೇಳಿದರು. ಇದಕ್ಕೆ ಅವಕಾಶ ಕೊಡಬಾರದು. ಇದಕ್ಕೆ ಕೊಡುವ ಹಣವನ್ನು ವಿದ್ಯಾ ಬುದ್ಧಿ ಬೆಳೆಸಲು, ನೌಕರಿ ಒದಗಿಸಲು ಖರ್ಚುಮಾಡುವುದು ಸೂಕ್ತ. ಹಾಗೆ ಮಾಡಿದರೆ ಅವರು ಉದ್ಧಾರವಾಗುವರು. ಒಂದು ಪ್ಲಾನ್ ಪ್ರಕಾರ ಈ ಬಗ್ಗೆ ಕಾರ್ಯಕ್ರಮ ಕೈಕೊಳ್ಳಬೇಕು. ಈ ನಿರ್ಣಯವನ್ನು ಒಪ್ಪಿ ಒಂದು ತಜ್ಞರ ಸಮಿತಿ ಮಾಡಿ ದುರ್ವಿನಿಯೋಗವಾಗಿರುವುದನ್ನು ಪತ್ತೆಮಾಡಿ ಅದಕ್ಕೆ ಯಾರು ಜವಾಬ್ದಾರರು ಎಂಬುವನ್ನು ಗೊತ್ತುಮಾಡಬೇಕು, ಅವರಮೇಲೆ ಕ್ರಮ ತೆಗೆದುಕೊಳ್ಳಬೇಕು. ಅವರಿಂದ ದುರುಪಯೋಗ ಮಾಡಿರುವ ಹಣ ವಸೂಲುಮಾಡಬೇಕು. ತಪ್ಪುಮಾಡುವವರಿಗೆ ಶಿಕ್ಷೆ ಮಾಡಿದರೆ ವೀಕರ್ ಸೆಕ್ಷನ್ನಿಗೆ ಅನುಕೂಲವಾಗುವುದು, ಹಾಗೆ ಮಾಡಬೇಕು ಎಂದು ಹೇಳಿ ಈ ನಿರ್ಣಯವನ್ನು ಸ್ವಾಗತಿಸಿ ಒಪ್ಪಿಕೊಳ್ಳಬೇಕು, ತಜ್ಞರ ಸಮಿತಿ ಮಾಡಬೇಕು ಎಂದು ವಿನಂತಿ ಮಾಡುತ್ತೇನೆ.

5-30 P.M.

† ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಮಾನ್ಯ ಸಭಾಪತಿಗಳೇ, ಗೆಳೆಯ ಸುಬ್ಬಯ್ಯನವರು ಬಹಳ ಒಳ್ಳೆಯ ಒಂದು ಸೂಕ್ತ ನಿರ್ಣಯವನ್ನು ಈ ಸದನದ ಮುಂದೆ ಇಟ್ಟಿದ್ದಾರೆ. ನಮಗೆಲ್ಲಾ ಗೊತ್ತಿರುವ ಹಾಗೆ ಈಗ 22 ವರ್ಷಗಳಿಂದ ಈ ರಾಜ್ಯದಲ್ಲಿ ಹರಿಜನರ ಮತ್ತು ಗಿರಿಜನರಿಗೆ ಒದಗಿಸಿದ ಸೌಲಭ್ಯಗಳು ಯಾವ ರೀತಿ ಉಪಯೋಗಿಸಲ್ಪಟ್ಟಿವೆ ಎಂಬ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿ, ಅದು ಸರಿಯಾಗಿ ಕಾರ್ಯಗತವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡುವುದಕ್ಕೆ ಮತ್ತು ಈಗಿರುವ ಸಂಸ್ಥೆಗಳನ್ನು ಸರಿಪಡಿಸಿ ಮುಂದೆ ಈ ಬಗ್ಗೆ ಸರಿಯಾದ ವ್ಯವಸ್ಥಿತವಾದ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುವುದಕ್ಕೆ ಸಹಾಯಕವಾಗುವ ರೀತಿಯಲ್ಲಿ ರಾಜ್ಯ ಮಟ್ಟದ ಒಂದು ಸಮಿತಿಯನ್ನು ರಚನೆ ಮಾಡಬೇಕೆಂದು ನಿರ್ಣಯ ತಂದಿದ್ದಾರೆ, ಇದನ್ನು ನಾನು ಸ್ವಾಗತಿಸುತ್ತೇನೆ. ಹರಿಜನ ಮತ್ತು ಗಿರಿಜನರ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಮತ್ತು ಅವರಿಗೆ ಒದಗಿಸಿರತಕ್ಕ ಸೌಲಭ್ಯಗಳು ನೇರವಾಗಿ ಅವರಿಗೆ ಮುಟ್ಟುವ ಹಾಗೆ ಮಾಡುವುದಕ್ಕೆ ಸಾಮಾನ್ಯವಾಗಿ ನಮ್ಮ ಒಂದು ದೃಷ್ಟಿಕೋಣ ಬದಲಾಗಬೇಕು. ಈಗ ಕಾನೂನನ್ನು ಮಾಡಿದ್ದೇವೆ, ದೇವಸ್ಥಾನಗಳಿಗೆ, ಸಾರ್ವಜನಿಕ ಸ್ಥಳಗಳಿಗೆ ಮತ್ತು ನೀರನ್ನು ತೆಗೆದುಕೊಳ್ಳುವುದಕ್ಕೆ ಬಾವಿಗಳನ್ನು ಉಪಯೋಗಮಾಡುವುದಕ್ಕೆ ಅಲ್ಲದೇ ಹೋಟೇಲುಗಳಿಗೆ ಹರಿಜನರು ಪ್ರವೇಶ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ,

(ಶ್ರೀ ಎ. ಹೆಚ್. ಶಿವಾನಂದಸ್ವಾಮಿ)

ಯಾರಾದರೂ ಅದಕ್ಕೆ ವಿರೋಧ ಮಾಡಿದರೆ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬ ಒಂದು ಕಾನೂನನ್ನೂ ಕೂಡ ನಾವು ಮಾಡಿದ್ದೇವೆ. 22 ವರ್ಷಗಳಾದಮೇಲೂ ಇದು ಎಷ್ಟು ಮಟ್ಟಿಗೆ ಜಾರಿಯಲ್ಲಿದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಏಕೆಂದರೆ ನಮ್ಮ ಈ ರಾಜ್ಯಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ನಾವೆಲ್ಲಾ ಇನ್ನೂ ಶಾಲಾ ಕಾಲೇಜುಗಳಲ್ಲಿ ಓದುತ್ತಿದ್ದಾಗಲೇ ಹೊಟೇಲುಗಳಿಗೆ, ದೇವಸ್ಥಾನಗಳಿಗೆ ಹರಿಜನರಿಗೆ ಪ್ರವೇಶ ಕೊಡಬೇಕೆಂದು ಜನ ಒತ್ತಾಯ ಮಾಡಿದಾಗ ಅವರೊಡನೆ ಸಹಕರಿಸಿ ನಮ್ಮೊಡನೆ ಸಹಭಾಗಿಗಳಾಗುವುದಕ್ಕೆ ಅವಕಾಶ ಮಾಡಿಕೊಟ್ಟೆವು. ಇವತ್ತು ಹಳ್ಳಿಗಳಲ್ಲಿ ಹೋದರೆ ಹರಿಜನರ ಬಾವಿ, ಲಂಬಾಣಿಗರ ಬಾವಿ ಮತ್ತು ಇತರೆಯವರ ಬಾವಿ ಅಂತ ಹೇಳಿ ಪ್ರತ್ಯೇಕವಾಗಿ ಇರುವುದನ್ನು ನಾವು ನೋಡುತ್ತಾ ಇದ್ದೇವೆ. ಈ ರೀತಿ ಸರ್ಕಾರದವರು ಮಂಜೂರು ಮಾಡುತ್ತಾ ಇರುವುದನ್ನು ತಕ್ಷಣ ನಿಲ್ಲಿಸಬೇಕು. ಏಕೆಂದರೆ ನಾವೇನೇ ಒಂದು ಹೊಸ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತಾ ಇದ್ದೇವೆ. ಹರಿಜನರ ಕಾಲೋನಿ, ಇತರೇಯವರ ಕಾಲೋನಿ ಅಂತ ಹೇಳಿ ಕಾಲೋನೈಸ್ ಮಾಡುವುದನ್ನು ತೆಗೆದು ಹಾಕಬೇಕು. ಎಲ್ಲಿ ಸವರ್ಣೀಯ ಹಿಂದೂಗಳಿದ್ದಾರೆ ಅವರ ಮಧ್ಯದಲ್ಲೇ ಇವರ ಮನೆಗಳನ್ನು ಕಟ್ಟಿಸುವುದರ ಮೂಲಕ ಈ ಕಾಲೋನೈಸ್ ಮಾಡುವುದನ್ನು ತಪ್ಪಿಸಿದ ಹೊರತು ಖಂಡಿತವಾಗಿಯೂ ಅವರ ಉದ್ಧಾರವಾಗುವುದಿಲ್ಲ. ಏಕೆಂದರೆ ಹಿಂದಿನಿಂದ ಅನೂಚಾನವಾಗಿ ಬೆಳೆದು ಬಂದಂತಹ ಕೆಲವು ಪದ್ಧತಿಗಳು, ಕೆಲವು ನಿಯಮಗಳು ಇವೆ. ಕೆಲವು ವಿಚಿತ್ರವಾದ ಆಚರಣೆಗಳನ್ನು ಆಚರಿಸುತ್ತಾ ಇದ್ದಾರೆ. ಇನ್ನೊಂದು ಕಡೆ ಕಾಲೋನಿ ಮಾಡಿ ಅವು ಹಾಗೆಯೇ ಮುಂದುವರಿದು ಬೇರೆಯವರೊಡನೆ ಸಂಪರ್ಕ ಹೆಚ್ಚಾಗಿ ಬೆಳೆಯದೆ ಅವರು ತಮ್ಮನ್ನು ತಿದ್ದಿಕೊಳ್ಳುವುದಕ್ಕೆ, ಬದಲಾವಣೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಹೆಚ್ಚು ಕ್ರಾಂತಿಗೆ ಅವಕಾಶವಾಗುತ್ತಿಲ್ಲ. ಆದ್ದರಿಂದ ಕಾಲೋನಿ ಮಾಡತಕ್ಕ ವ್ಯವಸ್ಥೆಯನ್ನು ಕೂಡಲೇ ತೆಗೆದುಹಾಕಬೇಕು. ಅವರಿಗೆ ಮನೆಗಳನ್ನು ಕಟ್ಟಬೇಕಾದರೆ, ಸೈಟ್‌ಗಳನ್ನು ಕೊಡಬೇಕಾದರೆ ಸವರ್ಣೀಯರಿಗೆ ಕೊಡತಕ್ಕ ಸೈಟುಗಳ ಮಧ್ಯೆ ಜಾಗಗಳನ್ನು ಬಿಟ್ಟುಕೊಡಬೇಕು. ದಾವಣಗೆರೆಯಲ್ಲಿ ಆ ರೀತಿ ಮಾಡಿದ್ದೆವು. ಹೊಸದಾಗಿ ಸೈಟ್‌ಗಳನ್ನು ಮಾಡತಕ್ಕ ಸಂದರ್ಭದಲ್ಲಿ ಆ ರೀತಿ ಮಾಡಿದರೆ ಅವರಲ್ಲಿರತಕ್ಕ ಒಂದು ಪ್ರತ್ಯೇಕತಾ ಭಾವನೆ ಹೊರಟುಹೋಗುತ್ತದೆ. ಅದೇ ರೀತಿ ಹಾಸ್ಟೆಲುಗಳಲ್ಲೂ ಸಹ ಎಲ್ಲ ಹುಡುಗರ ಜೊತೆಯಲ್ಲೂ ಅವರು ಬೆರೆತು ಇರುವಂತಹ ವ್ಯವಸ್ಥೆ ಮಾಡಬೇಕು. ಯಾರು ಅದಕ್ಕೆ ಒಪ್ಪಿಕೊಳ್ಳುತ್ತಾರೆಯೋ ಅವರಿಗೆ ಸರ್ಕಾರದವರು ಗ್ರ್ಯಾಂಟು ವಗೈರೆ ಕೊಡಬೇಕು. ಆ ರೀತಿ ಮಾಡಿದರೆ ಖಂಡಿತವಾಗಿಯೂ ಒಳ್ಳೆಯದಾಗುತ್ತದೆ. ವಿದ್ಯಾರ್ಥಿಗಳಲ್ಲಿ ಎಲ್ಲ ವಯಸ್ಸಿನ ಮಕ್ಕಳಲ್ಲೂ ಸಹ ನಾವೆಲ್ಲಾ ಒಂದು ಎಂಬ ಭಾವನೆ ಬರುವಂತೆ ಮಾಡಲು ಹೆಚ್ಚಿನ ನಿಗಾ ಕೊಡಬೇಕು. ಅಲ್ಲದೆ ಈಗ ಬಹಳ ದಿನಗಳಿಂದಲೂ ಹರಿಜನ ಗಿರಿಜನಗಳಿಗೆ ಸರ್ಕಾರದವರು ಭೂಮಿಯನ್ನು ಹಂಚುತ್ತಿದ್ದಾರೆ. ಆದರೆ ಈ ದಿವಸ ಅವರಲ್ಲಿ ಯಾರೊಬ್ಬರೂ ಆ ಭೂಮಿಗಳನ್ನು ಇಟ್ಟುಕೊಂಡಿಲ್ಲ. ಇನ್ನು ಮುಂದಕ್ಕಾದರೂ ಹೀಗೆ ಅವರು ಕೊಡತಕ್ಕ ಜಮೀನುಗಳನ್ನು ಪರಭಾರೆ ಮಾಡುವುದಕ್ಕೆ ಅವಕಾಶವಿಲ್ಲದಂತೆ ಒಂದು ನಿರ್ಬಂಧವನ್ನು ವಿಧಿಸಿ ಹಾಲಿ ಅರಣ್ಯದಲ್ಲಿ ಎಲ್ಲೆಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಇದೆಯೋ ಅದನ್ನು ಈ ವರ್ಗದ ಜನರಿಗೆ ಹಂಚಬೇಕೆಂದು ಸಲಹೆ ಮಾಡುತ್ತೇನೆ. ಇವರ ಅಭಿವೃದ್ಧಿಯ ಬಗ್ಗೆ ಹೀಗೆ ಸರ್ಕಾರದವರು ಇನ್ನೂ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಅವಕಾಶವಿದೆ. ಸರ್ಕಾರದವರು ಈ ಜನಾಂಗಗಳ ಬಗ್ಗೆ ಒಂದು ಹೆಚ್ಚಿನ ಅನುಕಂಪವನ್ನಿಟ್ಟುಕೊಂಡು ಹೆಚ್ಚಿಗೆ ನಿಗಾವಹಿಸಿ ಕೆಲಸಮಾಡಬೇಕು. ಈ ನಿರ್ಣಯದಲ್ಲಿ ಸೂಚಿತವಾಗಿರುವಂತೆ ರಾಜ್ಯಮಟ್ಟದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದರೆ ಸರ್ಕಾರದವರು ಮುಂದೆ ತಪ್ಪುನೆಪ್ಪುಗಳನ್ನು ಸರಿಪಡಿಸಿಕೊಂಡು ಈ ಜನಾಂಗದವರ ಏಳಿಗೆಗೆ ದುಡಿಯುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ, ಇಲ್ಲಿಯವರೆಗೂ ನಾವು ಈ ಹರಿಜನ ಗಿರಿಜನ ಬಗ್ಗೆ ಬಹಳ ಕಡಿಮೆ ಕೆಲಸಮಾಡಿದ್ದೇವೆ. ಆ ಬೆಟ್ಟಗುಡ್ಡಗಳಲ್ಲಿ ವಾಸಮಾಡತಕ್ಕ ಜನರು ಬಯಲು ದೇಶಗಳಿಗಿನ್ನೂ ಬಂದು ವಾಸಮಾಡುವುದಕ್ಕೆ ಸಾಧ್ಯವಾಗಿಲ್ಲ. ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ಈ ಬಗ್ಗೆ ಒಂದು ಕಾರ್ಯಕ್ರಮವನ್ನು ಅಳವಡಿಸಿ ಆ ಜನರನ್ನು ಇತರ ಹಿಂದುಗಳಮಟ್ಟಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಂಡು ನಾನು ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಕಟ್ಟೀಮನಿ (ನಾಮನಿರ್ದೇಶ ಹೊಂದಿದವರು).—ಮಾನ್ಯ ಸಭಾಪತಿಯವರೆ ಈ ನಿರ್ಣಯವನ್ನು ನಾನು ಸ್ವಾಗತಿಸುತ್ತೇನೆ. ಹರಿಜನ ಗಿರಿಜನರ ಪರಿಸ್ಥಿತಿಯ ಬಗ್ಗೆ ವಿಚಾರಣೆ ಮಾಡಿ ಸರ್ಕಾರಕ್ಕೆ ಒಂದು ವರದಿಯನ್ನು ಒಪ್ಪಿಸಲು ಒಂದು ರಾಜ್ಯಮಟ್ಟದ ಸಮಿತಿ ಅವಶ್ಯಕವಿದೆ. ಸರ್ಕಾರದವರೂ ಕೂಡ ಇಂಥ ಒಂದು ಸಮಿತಿಯನ್ನು ನೇಮಕಮಾಡಲಾಗುತ್ತದೆ ಎಂಬುದಾಗಿ

ಈಗಾಗಲೇ ಹೇಳಿದ್ದಾರೆ. ಅದೂ ಸರಿ. ಆದರೆ ನಮಗೆಲ್ಲರಿಗೂ ಗೊತ್ತಿರುವ ಹಾಗೆ ಸರ್ಕಾರದವರು ಈಗಾಗಲೇ ಅನೇಕ ಸಮಿತಿಗಳನ್ನು ನೇಮಕ ಮಾಡಿದ್ದಾರೆ. ಆ ಅನೇಕ ಸಮಿತಿಗಳಲ್ಲಿ ಅನೇಕ ಸದಸ್ಯರುಗಳೂ ಇದ್ದಾರೆ. ಈಗ ನೇಮಕ ಮಾಡಲು ಹೇಳಿರತಕ್ಕ ಈ ಒಂದು ಸಮಿತಿ ದೇಶವೆಲ್ಲೆಲ್ಲಾ ಸಂಚಾರಮಾಡಿ ಎರಡು ಮೂರು ವರ್ಷಗಳ ತರುವಾಯ ಸರ್ಕಾರಕ್ಕೆ ಒಂದು ವರದಿಯನ್ನು ಒಪ್ಪಿಸಬೇಕಾದರೆ ಲಕ್ಷಾಂತರ ರೂಪಾಯಿಗಳು ಖರ್ಚಾಗುತ್ತವೆ. ಆದಾಗ್ಯೂ ಸಮಿತಿಯೇನೊ ಅಗತ್ಯ. ಆದರೆ ಈ ಸಮಿತಿಗೆ ಹೆಚ್ಚು ಜನರನ್ನು ಸೇರಿಸದೆ ವಿಧಾನಪರಿಷತ್ತಿನಿಂದ ಇಬ್ಬರು ಸದಸ್ಯರು, ವಿಧಾನಸಭೆಯಿಂದ ಇಬ್ಬರು ಸದಸ್ಯರು ಮತ್ತು ಸಾರ್ವಜನಿಕರ ಪರವಾಗಿ ಇಬ್ಬರು ಸದಸ್ಯರು, ಹೀಗೆ ಒಟ್ಟು ಆರು ಜನರಿರತಕ್ಕ ಒಂದು ಸಮಿತಿಯನ್ನು ನೇಮಕ ಮಾಡಿದರೆ ಸಾಕೆಂದು ನನಗನಿಸುತ್ತಿದೆ.

ಹರಿಜನರ ಗಿರಿಜನ ಪರಿಸ್ಥಿತಿ ಹಿಂದೆ 20–25 ವರ್ಷಗಳ ಕೆಳಗೆ ಹೇಗಿತ್ತೋ ಈಗಲೂ ಹಾಗೇ ಇದೆ ಎಂಬುದನ್ನು ನಾನು ಒಪ್ಪಲಾರೆ. ಸರ್ಕಾರದವರು ಇವರ ಏಳಿಗೆಗಾಗಿ ಸುಮಾರು 50–60 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಆದಾಗ್ಯೂ ಈ ಜನರು ಅದೇ ಪರಿಸ್ಥಿತಿಯಲ್ಲಿದ್ದಾರೆಂದರೆ ಅದನ್ನು ನಂಬುವುದಕ್ಕಾಗುವುದಿಲ್ಲ. ಕಾಂಗ್ರೆಸ್ಸಿನವರು ಇವರ ಓಟನ್ನು ಹಾಕಿಸಿಕೊಳ್ಳಲು ಇವರ ಪರವಾಗಿ ಹೀಗೆಲ್ಲಾ ಮಾತನಾಡುತ್ತಿದ್ದಾರೆಂಬುದಾಗಿ ಕೆಲವು ನನ್ನ ಸ್ನೇಹಿತರು ಹೇಳಿದರು. ಈ ಅಪಾದನೆ ನ್ಯಾಯವಾದುದಲ್ಲ. ಈ ವಿಷಯಕ್ಕೆ ಈ ದಿನ ಈ ಸಭೆಯ ಅಧ್ಯಕ್ಷಸ್ಥಾನದಲ್ಲಿ ತಾವು ಕುಳಿತಿರುವುದೇ ಸಾಕ್ಷಿ.

ಮಹಾತ್ಮಾ ಗಾಂಧಿಯವರು ಈ ವರ್ತುಳದಲ್ಲಿ ಬಹಳ ಸೇವೆಯನ್ನು ಸಲ್ಲಿಸಿದ್ದಾರೆ. ಅದಕ್ಕೆ ಹಿಂದೆ ಈ ಹರಿಜನ ಗಿರಿಜನರೇನಿದ್ದಾರೆ ಇವರಿಗೂ ದನಕರುಗಳಿಗೂ ಏನೂ ವ್ಯತ್ಯಾಸವೇ ಇರಲಿಲ್ಲ. "ನೆಲನೊಂದೆ, ಹೊಲಗೇರಿ—ಶಿವಾಲಯಕ್ಕೆ ಜಲವೊಂದೆ, ಶೌಚಾಚಮನಕ್ಕೆ ಕುಲವೊಂದೆ, ತನ್ನತಾನರಿದವಂಗೆ......" ಎಂಬುದಾಗಿ ಬಸವಣ್ಣನವರು ಇಲ್ಲಿಗೆ 800 ವರ್ಷಗಳ ಕೆಳಗೇ ಹೇಳಿದ್ದರೂ ಕೂಡ ಹೊಲಗೇರಿ ಹೊಲಗೇರಿಯೇ ಆಗಿತ್ತು. ಇವರ ಪರಿಸ್ಥಿತಿಯಲ್ಲಿ ಅಷ್ಟೇನೂ ಸುಧಾರಣೆಯಾಗಿರಲಿಲ್ಲ. ಮಹಾತ್ಮಾ ಗಾಂಧಿಯವರು ತಮ್ಮ ತನುಮನಧನಗಳನ್ನೆಲ್ಲಾ ಈ ಸುಧಾರಣೆಗೆ ಅರ್ಪಿಸಿ ಈ ಜನಾಂಗವನ್ನು ಉದ್ಧಾರಮಾಡಿದ್ದಾರೆ. ಅಂದಾಗ ಇವರನ್ನು ಈ ದಿವಸ ಸವರ್ಣೀಯರ ಮಟ್ಟಕ್ಕೆ ತಂದವರು ಕಾಂಗ್ರೆಸ್ಸಿನವರು. ಇವರು ಅಧಿಕಾರಕ್ಕೆ ಬಂದು 22ವರ್ಷಗಳ ಮೇಲಾಯಿತು. ಇನ್ನೂ ಹರಿಜನರ ಸ್ಥಿತಿ ಉತ್ತಮವಾಗಿಲ್ಲ ಮೊದಲಿದ್ದಹಾಗೇ ಇದೆ ಎಂದರೆ ಅದನ್ನು ನಾನು ಒಪ್ಪುವುದಿಲ್ಲ. ಇವರಲ್ಲಿ ಎಷ್ಟೋ ಸುಧಾರಣೆಯಾಗಿದೆ. ಇವರು ವಿಧಾನಸಭೆ ಮತ್ತು ಪರಿಷತ್ತುಗಳಲ್ಲಿ ಉಪಾಧ್ಯಕ್ಷರುಗಳಾಗಿದ್ದಾರೆ......

Mr. Vice-Chairman [Sri A. H. Shivanandaswamy] in the Chair.

ಶ್ರೀ ಎ. ಕೆ. ಸುಬ್ಬಯ್ಯ (ಪದವೀಧರರ ಕ್ಷೇತ್ರ).—ಈಗ ಈ ಸಭೆಯ ಉಪಾಧ್ಯಕ್ಷರಾಗಿರತಕ್ಕವರು ದೇಶಕ್ಕೆ ಸ್ವರಾಜ್ಯ ಬಂದಮೇಲೆ ಉಪಾಧ್ಯಕ್ಷರಾಗಿರತಕ್ಕವರೋ ?

ಶ್ರೀ ಬಸವರಾಜ ಕಟ್ಟೀಮನಿ.—ಏನೂ ಆಗಿಲ್ಲ ಎನ್ನುವುದು ಅನ್ಯಾಯವಲ್ಲವೇ ? ಯಾವುದು ಆಗಿಲ್ಲವೋ ಅದನ್ನು ಆಗಿಲ್ಲ ಎನ್ನೋಣ. ಅದನ್ನು ಬಿಟ್ಟು ಏನೂ ಆಗಿಲ್ಲವೆಂದರೆ ಅದನ್ನು ನಾನು ಒಪ್ಪುವುದಿಲ್ಲ. ಇನ್ನೂ ಬೇಕಾಗಿದ್ದರೆ ಸಾಕಷ್ಟು ಆಗಿಲ್ಲವೆನ್ನಲಿ, ಅದಕ್ಕೂ ನಾನು ಒಪ್ಪುತ್ತೇನೆ. ಆದರೆ ನಾನು ಅನ್ಯಾಯವನ್ನು ಇಲ್ಲಿ ನುಡಿಯುವುದಕ್ಕೆ ತಯಾರಿಲ್ಲ. ನನಗೂ ಗೊತ್ತಿದೆ, ಈ ದಿವಸ ಕೂಡ ಆ ಹರಿಜನ ಗಿರಿಜನರ ಪರಿಸ್ಥಿತಿ ಕಷ್ಟದಲ್ಲೇ ಇದೆ. ಅದು ನಿಜ. ಸತ್ಯವಾದ ಸಂಗತಿ. ಅದಕ್ಕೆ ಮುಖ್ಯ ಕಾರಣ ಅಸ್ಪೃಶ್ಯತೆ ಎನ್ನುವುದು ನಮ್ಮ ಹಿಂದೂ ದೇಶದಲ್ಲಿ ಅದೊಂದು ಉದರವ್ಯಾಧಿ ಇದ್ದಹಾಗೆ. ಹೊಟ್ಟೆಯಮೇಲೆ ಮುಲಾಮನ್ನ ಹಚ್ಚಿದರೆ ಅಥವಾ ಹೊಟ್ಟೆಗೆ ಔಷಧಿಯನ್ನು ಕೊಟ್ಟರೆ ಆ ರೋಗ ಹೋಗುವುದಿಲ್ಲ. ಆ ಹೊಟ್ಟೆಯ ವ್ರಣಕ್ಕೆ ಶಸ್ತ್ರ ಚಿಕಿತ್ಸೆಯೇ ಆಗಬೇಕು. ಆಗಲೇ ಅದು ಹೋಗುವುದು. ಅನಂತರ ಆ ಹರಿಜನ ಗಿರಿಜನರು ನಮ್ಮ ಮಟ್ಟಕ್ಕೆ ಬರಬಹುದು. ನಾವು ಇವರ ಬಗ್ಗೆ ಮಾಡುತ್ತ ಹೋಗುವುದೆಲ್ಲಾ ಒಂದು ಸಾಮಾನ್ಯ ಸುಧಾರಣೆ ಮಾತ್ರ. ಇಷ್ಟರಿಂದ ಅವರ ಉದ್ಧಾರ ಸಾಧ್ಯವಿಲ್ಲ. ಅವರ ಉದ್ಧಾರವಾಗಬೇಕಾಗಿದ್ದರೆ ಆ ಶಸ್ತ್ರ ಚಿಕಿತ್ಸೆ ಆಗಲೇಬೇಕು. ಅಂದರೆ ರಕ್ತಕ್ರಾಂತಿಯಲ್ಲ. ನಿಜವಾದ ಸಮಾಜವಾದವನ್ನು ಜಾರಿಗೆ ತಂದದ್ದೇ ಆದರೆ ಅದು ಸಾಧ್ಯವಾಗುತ್ತದೆ. ಆದರೆ ಈ ದಿವಸ ನಮ್ಮಲ್ಲಿ ಸಮಾಜವಾದ ಜಾರಿಯಲ್ಲಿಲ್ಲವೇ ? ಎಂದು ಕೇಳಬಹುದು. ಆದರೆ ಅನೇಕರಿಗೆ ನಿಜವಾದ ಸಮಾಜವಾದವೆಂದರೇನೆಂಬುದೇ ಗೊತ್ತಿದ್ದ ಹಾಗೆ ಕಾಣುವುದಿಲ್ಲ. ಈಗ ಇರುವುದು ಸೋಗಿನ ಸಮಾಜವಾದ. ನಿಜವಾದ ಸಮಾಜವಾದವೆಂದರೆ ಜಾತಿಗಳಿಗೆ ಕೊಡಲಿಯ ಪೆಟ್ಟು; ವರ್ಗಗಳಿಗೆ ಕೊಡಲಿಯ ಪೆಟ್ಟು. ಅಂಥ ನಿಜವಾದ

(ಶ್ರೀ ಬಸವರಾಜ ಕಟ್ಟೀಮನಿ)

ಸಮಾಜವಾದ ಜಾರಿಗೆ ಬಂದಾಗ ಮಾತ್ರ ಹರಿಜನ ಗಿರಿಜನರು ತಮ್ಮಷ್ಟಕ್ಕೆ ತಾವೇ ಮೇಲಕ್ಕೆ ಬರುತ್ತಾರೆ. ಈ ತರದ ನಿಜವಾದ ಸಮಾಜವಾದ ಬಂದಾಗ ಅಸ್ಪೃಶ್ಯತೆ ಅಳಿದು ಹೋಗುತ್ತದೆ. ಆಗ ಹರಿಜನರ ಗಿರಿಜನರ ಸಮಸ್ಯೆ ತಾನೇ ಪರಿಹಾರವಾಗುತ್ತದೆ. ಅದು ಬರತಕ್ಕ ಕಾಲ ಬರುತ್ತಾ ಇದೆ. ಬಹಳ ಸಮೀಪಕ್ಕೆ ಬರುತ್ತಾ ಇದೆ. ಇನ್ನು 8-10 ವರ್ಷಗಳೊಳಗೆ ಈ ಸಮಾಜವಾದ ನಿಜವಾದ ಸಮಾಜವಾದ ಆಗುತ್ತದೆ. ಅದುವರೆಗೂ ನಾವು ಹೀಗೆಯೇ ಹರಿಜನರ ಹಾಗೂ ಗಿರಿಜನರ ಬಗ್ಗೆ ಅವರ ಅಭಿವೃದ್ಧಿಗಾಗಿ ನಮ್ಮಿಂದ ಸಾಧ್ಯವಾದಷ್ಟು ಪ್ರಯತ್ನಗಳನ್ನು ಮಾಡುತ್ತಾ ಹೋಗೋಣ. ಅದಿಲ್ಲದಿದ್ದರೆ ಮುಂದೆ ಅಧೋಪತನಕ್ಕೆ ಕಾರಣವಾದೀತು.

ಒಂದು ಮೂಲ ಅಂಶ ಅಂದರೆ ವರ್ಣಾಶ್ರಮ ಧರ್ಮ. ಇದು ಹುಟ್ಟಿದಂದಿನಿಂದ ಭಾರತದ ಜನಗಳು ಪ್ರಗತಿಯಾಗುವುದಕ್ಕೆ ಅಸಾಧ್ಯವಾಗಿದೆ. ನಿಜವಾದ ಸಮಾಜವಾದ ಬಂದಾಗ ಈ ಪ್ರತಿಗಾಮಿ ಧರ್ಮ ಹೊಳೆಯ ಪ್ರವಾಹಕ್ಕೆ ಸಿಕ್ಕಿ ಹರಿದುಹೋಗುತ್ತದೆ. ನಮ್ಮ ಸರ್ಕಾರದವರು ಹರಿಜನರ ಮತ್ತು ಗಿರಿಜನರಿಗಾಗಿ ಅತ್ಯಂತ ಪವಿತ್ರವಾದ ಹೃದಯದಿಂದ ಏನೇನು ಕಾರ್ಯಗಳನ್ನು ಮಾಡಬೇಕೋ ಅವನ್ನು ಮಾಡಬೇಕು.

ಆದರೆ ಹರಿಜನರ ಮತ್ತು ಗಿರಿಜನರ ಹೆಸರಿನಲ್ಲಿ ನರಿಜನರು ಎಂಬುದಾಗಿ ಕೆಲವರು ಇದ್ದಾರೆ. ಹರಿಜನರಿಗೆ ಮತ್ತು ಗಿರಿಜನರಿಗೆ ಸರ್ಕಾರ ಕೊಡತಕ್ಕ ಹಣವನ್ನು ನಡುವೆ ಇರತಕ್ಕ ಈ ನರಿಜನರು ತಿಂದು ಸರ್ಕಾರಕ್ಕೆ ಅಪಕೀರ್ತಿ ತರುತ್ತಾರೆ. ಅದರಿಂದ ಸರ್ಕಾರ ಆಡಳಿತ ನಡೆಸುವುದು ಬಹಳ ಕಷ್ಟವಾಗುತ್ತದೆ. ಆಡಳಿತ ನಮ್ಮ ಕೈಯಲ್ಲಿದ್ದರೂ ಕೂಡ ಅದನ್ನು ನಡೆಸುವುದು ಬಹಳ ಕಷ್ಟವಾಗುತ್ತದೆಂದು ನನ್ನ ಭಾವನೆ. ಈ ನರಿಜನರು ನಿರ್ಮೂಲವಾಗದೆ ಹರಿಜನರ ಹಾಗೂ ಗಿರಿಜನರ ಉದ್ಧಾರವಿಲ್ಲ. ನಮ್ಮ ಉದ್ಧಾರವೂ ಇಲ್ಲ. ಯಾರ ಉದ್ಧಾರವೂ ಇಲ್ಲ. ಹೀಗೆ ನಮ್ಮ ದೇಶದ ಪರಿಸ್ಥಿತಿ ಇದೆ. ಆದ್ದರಿಂದ ಸರ್ಕಾರದವರು ಈ ವಿಚಾರವನ್ನು ಸರಿಯಾಗಿ ಆಲೋಚನೆ ಮಾಡಿ ಮುಂದೆ ನೇಮಿಸತಕ್ಕ ಸಮಿತಿಯಲ್ಲಿ ಹರಿಜನರನ್ನು ದಯವಿಟ್ಟು ಸೇರಿಸದೆ ಸರಿಯಾದವರನ್ನು ಸೇರಿಸಿ ಹರಿಜನರನ್ನು ಮುಂದಕ್ಕೆ ತರಬೇಕೆಂದು ನಾನು ಆಶಿಸುತ್ತೇನೆ.

† ಶ್ರೀ ಅಕ್ಬರ್ ಸೇಟ್ ಎ. ಖಯೂಂ (ನಾಮನಿರ್ದೇಶ ಹೊಂದಿದವರು).—ಸಭಾಪತಿಗಳೇ, ಮಾನ್ಯ ಶ್ರೀ ಎ. ಕೆ. ಸುಬ್ಬಯ್ಯನವರು ತಂದಿರತಕ್ಕ ನಿರ್ಣಯಕ್ಕೆ ಬೆಂಬಲಕೊಡುತ್ತಾ ಹರಿಜನರಿಗೆ ಕೊಟ್ಟಂಥ ಪರಿಹಾರ ಎಷ್ಟರಮಟ್ಟಿಗೆ ಉಪಯೋಗವಾಗಿದೆ ಎನ್ನುವ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತಿದ್ದೇನೆ.

ಸ್ವಾತಂತ್ರ್ಯ ಬಂದಮೇಲೆ ಹರಿಜನರಲ್ಲಿ ಎಷ್ಟು ಜನರು ಅಧಿಕಾರಿಗಳಾದರು, ಎಷ್ಟರಮಟ್ಟಿಗೆ ಅವರಿಗೆ ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆಂದು ಮಾನ್ಯ ಶ್ರೀ ಚನ್ನಬೈರೇಗೌಡರು ಕೇಳಿದರು. ನಾಡಿಗೆ ಸ್ವಾತಂತ್ರ್ಯ ಬಂದಮೇಲೆ ಎಷ್ಟು ಮಂದಿ ಹರಿಜನ ಗಿರಿಜನರಿಗೆ ಸೌಲಭ್ಯ ಒದಗುತ್ತಿದೆ ಯೆಂಬುದನ್ನು ಬಡ್ಜೆಟ್ಟಿನಲ್ಲಿ ನೋಡಿದರೆ ಗೊತ್ತಾಗುತ್ತದೆ. ಅದು ಕೆಲಮಟ್ಟಿಗೆ ಉಪಯೋಗ ಆಗಲಿಕ್ಕಿಲ್ಲ. ಆದರೂ ಅದರಿಂದ ಹೆಚ್ಚುಹೆಚ್ಚು ಉಪಯೋಗವಾಗಿ, ಹರಿಜನರು ಮತ್ತು ಗಿರಿಜನರು ಮೇಲಿಂದಮೇಲಕ್ಕೆ ಬರುತ್ತಾ ಇದ್ದಾರೆ. ಈಗ ನಮ್ಮ ಭಾಗದಲ್ಲಿ ನೋಡಿದರೆ, ಎಷ್ಟೋ ಕಡೆ ಹರಿಜನರಿಗಾಗಿ ಮನೆಗಳನ್ನು ಮತ್ತು ಬಾವಿಗಳನ್ನು ಕಟ್ಟುತ್ತಾ ಇದ್ದಾರೆ. ನಾನು ಈ ವಿಚಾರದಲ್ಲಿ ಮಂತ್ರಿಗಳಿಗೆ ಒಂದು ಸೂಚನೆ ಮಾಡುತ್ತೇನೆ. ಅವರಿಗೆ ಪ್ರತ್ಯೇಕವಾಗಿ ಸಹಾಯಮಾಡುವುದಕ್ಕಿಂತಲೂ ತಾವೇ ಒಂದು ಸ್ಕೀಂ ತಯಾರುಮಾಡಿ ತಾಲ್ಲೂಕು ಕಡೆಗಳಿಂದ ಸ್ವಲ್ಪ ಹಣವನ್ನು ತೆಗೆದುಕೊಂಡು, ಪಿ. ಡಬ್ಲ್ಯು. ಡಿ. ಮತ್ತು ಹೌಸಿಂಗ್ ಬೋರ್ಡ್‌ನಿಂದ ಸ್ವಲ್ಪ ಹಣವನ್ನು ತೆಗೆದುಕೊಂಡು ಅವರಿಗೆ ಮನೆ ಮತ್ತು ಬಾವಿಗಳನ್ನು ಮಾಡಿಕೊಡಬೇಕು. ಏಕೆಂದರೆ ಮಾನ್ಯ ಶ್ರೀ ಬಸವರಾಜ್ ಕಟ್ಟೀಮನಿಯವರು ಹೇಳಿದಹಾಗೆ ಕೆಲವು ಮಂದಿ ಆ ಹಣವನ್ನು ದುರುಪಯೋಗ ಮಾಡುತ್ತಿದ್ದಾರೆ. ನಮಗೂ ಇದು ಗೊತ್ತಿದೆ. ಆದಕಾರಣ ಇದರ ಬಗ್ಗೆ ಈಗ ಏನು ಒಂದು ಸ್ಕೀಮನ್ನು ಸರ್ಕಾರದವರು ಮಾಡಬೇಕೆಂದಿದ್ದಾರೆ ಅದನ್ನು ಉಪಯೋಗವಾಗುವಂತೆ ಮಾಡಬೇಕೆಂದು ನನ್ನ ಸೂಚನೆ.

ಇನ್ನೊಂದು ವಿಷಯ. ಸ್ಕಾಲರ್‌ಷಿಪ್ ಮತ್ತು ಫ್ರೀಷಿಪ್ ಎಂಬುದಾಗಿ ಸಹಾಯ ಮಾಡುತ್ತಿದ್ದಾರೆ. ಅದಕ್ಕಾಗಿ ಈ ವರ್ಷ ಸರ್ಕಾರದವರು ಹಣವನ್ನು ಮಂಜೂರು ಮಾಡಿದ್ದಾರೆ. ನಮ್ಮ ಕಡೆ ವಿಧ್ಯಾರ್ಥಿಗಳು ಫಾರಂ ತೆಗೆದುಕೊಂಡು ಸಿಗ್ನೇಚರ್ ಮಾಡಿ ಮತ್ತೆ ಅದನ್ನು ಕೊಡುವುದಕ್ಕೆ ಬಹಳ ತೊಂದರೆಯಾಗುತ್ತದೆ. ಅದಕ್ಕಾಗಿ ಸ್ಕಾಲರ್‌ಷಿಪ್ಪನ್ನು ಒಂದು ವರ್ಷಕ್ಕೆಂದು ಮಾಡಿರು

ವುದು ಸರಿ ಇಲ್ಲ. ಅವರು ಪಾಸಾಗಿದ್ದರೆ ಅದನ್ನು ಅವರಿಗೆ ಕಂಟಿನ್ಯೂ ಮಾಡಬೇಕು. ಏಕೆಂದರೆ, ಎಷ್ಟೋ ಹುಡುಗರು ತಮ್ಮ ಶಾಲೆಗಳನ್ನು ಬಿಟ್ಟು ಎಂ. ಎಲ್. ಎ. ಮತ್ತು ಎಂ. ಎಲ್. ಸಿ. ಮನೆಗಳಿಗೆ ತಿರುಗಾಡುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ಆದ್ದರಿಂದ ಅಧಿಕಾರಿಗಳ ಕಡೆಯಿಂದ ಸರ್ಟಿಫಿಕೇಟ್ ಕೊಟ್ಟರೆ ಅಂತಹವರಿಗೆ ಸ್ಕಾಲರ್‌ಷಿಪ್ಪನ್ನು ಕಂಟಿನ್ಯೂ ಮಾಡಬೇಕು. ಭಾರತದಲ್ಲಿ ಸ್ವಾತಂತ್ರ್ಯ ಬಂದಂದಿನಿಂದ ರಾಜ್ಯದ ಹರಿಜನರಿಗೆ, ಗಿರಿಜನರಿಗೆ ಸೌಲಭ್ಯಗಳನ್ನು ಯಾವರೀತಿ ಕೊಟ್ಟಿದ್ದಾರೆಂಬುದನ್ನು ಪರಿಶೀಲನೆಮಾಡುವುದಕ್ಕೋಸ್ಕರ ಒಂದು ಕಮಿಟಿ ಮಾಡಬೇಕೆಂದು ಸರ್ಕಾರದವರು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಅದಕ್ಕೆ ನಾನು ಪೂರ್ಣ ಬೆಂಬಲವನ್ನು ಕೊಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಕೆ. ಶಿವರುದ್ರಪ್ಪ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಮಾನ್ಯ ಸಭಾಧ್ಯಕ್ಷರೇ, ಈ ಸಭೆಯ ಸದಸ್ಯರಾದಂಥ ಶ್ರೀಮಾನ್ ಎ. ಕೆ. ಸುಬ್ಬಯ್ಯನವರು ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಈಚೆಗೆ ರಾಜ್ಯದಲ್ಲಿ ಹರಿಜನರಿಗೆ ಹಾಗೂ ಗಿರಿಜನರಿಗೆ ಒದಗಿಸಿರತಕ್ಕ ಸೌಲಭ್ಯಗಳನ್ನು ಸರ್ಕಾರದವರು ಕೊಡುವುದರಲ್ಲಿ ಎಷ್ಟರಮಟ್ಟಿಗೆ ಅವು ಅವರಿಗೆ ಲಭ್ಯವಾಗಿದೆ ಎನ್ನುವ ವಿಚಾರದಲ್ಲಿ ಪರಿಶೀಲನೆ ಮಾಡಲು ಒಂದು ಸಮಿತಿಯನ್ನು ರಾಜ್ಯ ಸರ್ಕಾರದವರು ಶಾಸಕರನ್ನೊಳಗೊಂಡಂತೆ ಮಾಡಬೇಕೆಂದು ಒಂದು ನಿರ್ಣಯವನ್ನು ತಂದಿದ್ದಾರೆ. ಈ ನಿರ್ಣಯವನ್ನು ಮಂಡಿಸುವಾಗ ಈ ಶಾಖೆಯ ಮಂತ್ರಿಗಳು ಶ್ರೀಮಾನ್ ಪಾಟೀಲರು ಈಗಾಗಲೇ ಸರ್ಕಾರದವರು ಆ ದಿಶೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡುವುದಕ್ಕೆ ಯೋಚನೆ ಮಾಡಿದ್ದಾರೆಂದು ಹೇಳಿದ್ದಾರೆ. ಅಂದಮೇಲೆ ಈ ಸಭೆಯವರ ಅಭಿಪ್ರಾಯವನ್ನು ಈಗಾಗಲೇ ಸರ್ಕಾರದವರು ಮನಗಂಡಿದ್ದಾರೆ. ಆ ದಿಶೆಯಲ್ಲಿ ಅವರು ಕಾರ್ಯೋನ್ಮುಖರಾಗಿದ್ದಾರೆಂದು ಕೇಳಿ ನನಗೆ ಸಂತೋಷವಾಗುತ್ತಿದೆ. ಆದರೆ ಅವರಿಗೆ ಒದಗಿಸಿರತಕ್ಕ ಸೌಲಭ್ಯಗಳನ್ನು ಅವರು ಎಷ್ಟರಮಟ್ಟಿಗೆ ಉಪಯೋಗಿಸಿದ್ದಾರೆ ಎನ್ನುವ ವಿಚಾರಗಳು ಮಾತ್ರ ಈ ನಿರ್ಣಯದಲ್ಲಿ ಸೀಮಿತವಾಗಿವೆ. ಹರಿಜನೋದ್ಧಾರವೆಂದು ಹೇಳುತ್ತಾರೆ. ಇದಾಗದ ಹೊರತು ದೇಶದ ಕಲ್ಯಾಣವಾಗುವುದಿಲ್ಲ. ಇದು ನಿರ್ವಿವಾದವಾದ ವಿಚಾರ. ಯಾವ ದೇಶದಲ್ಲಿಯೇ ಆಗಲೀ ಯಾವುದಾದರೂ ಒಂದು ಸಂಸಾರವನ್ನು ತೆಗೆದುಕೊಂಡರೆ ಅಲ್ಲಿ ಒಬ್ಬ ಕುಂಟ, ಒಬ್ಬ ಹೆಳವ, ಇನ್ನೊಬ್ಬ ಒಳ್ಳೆಯವ ಇರುತ್ತಾನೆ. ಪ್ರತಿಯೊಬ್ಬ ಮನುಷ್ಯ ದೃಢಕಾಯನಾಗಿದ್ದು ಅವನು ತನ್ನ ಕಾಲಿನಮೇಲೆ ತಾನು ನಿಂತುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಸಂಸಾರ ಸುಗಮವಾಗುವುದಿಲ್ಲ. ಹಾಗೆಯೇ ದೇಶದಲ್ಲಿ ಇಂತಹ ಜನರ ಉದ್ಧಾರವಾಗದ ಹೊರತು ದೇಶದ ಕಲ್ಯಾಣವಾಗುವುದಿಲ್ಲವೆಂಬುದು ನಿಜ.

6–00 P.M.

ನಮಗೆ ಸ್ವಾತಂತ್ರ್ಯ ಬಂದೀಚೆಗೆ ಈ ದಿಶೆಯಲ್ಲಿ ಸರ್ಕಾರದವರಾಗಲಿ, ಸಾರ್ವಜನಿಕರಾಗಲಿ; ಯಾವ ದೃಷ್ಟಿಯಿಂದ ಕಾರ್ಯೋನ್ಮುಖರಾಗಿದ್ದಾರೆಂಬುದನ್ನು ನೋಡುವುದು ಉಚಿತ. ನಾನು ತಿಳಿದುಕೊಂಡಿರುವ ಹಾಗೆ, ಬಹಳಮಟ್ಟಿಗೆ ಅವರಿಗೆ ಅನ್ಯಾಯವಾಗಿರುವುದು ನಿಜ. ಇವತ್ತು ಹರಿಜನ ಗಿರಿಜನರಿಗೆ ಮಾತ್ರ ಈ ಸೌಲಭ್ಯಗಳು ಸೀಮಿತವಾಗದೆ, ಪ್ರತಿ ಜನಾಂಗದಲ್ಲೂ ಈ ಡೌನ್ ಟ್ರೋಡನ್ ಜನ ಏನಿದ್ದಾರೆ, ಅವರ ಏಳಿಗೆಯಾಗಬೇಕು. ಇವತ್ತು ಈ ಜಾತಿಯ ಒಂದು ವಿಶೇಷತೆ ಏನೆಂದರೆ, ಇವರನ್ನು ಮುಟ್ಟಬಾರದು, ಇವರು ಅಸ್ಪೃಶ್ಯರು ಎಂಬ ಭಾವನೆ ನಮ್ಮ ಉಳಿದ ಜನಾಂಗದವರಲ್ಲಿ ಇದೆ. ಅದನ್ನು ಹೋಗಲಾಡಿಸಬೇಕು. ನಾವು ಈ ದೃಷ್ಟಿಯಲ್ಲಿ ಎಷ್ಟನ್ನು ಸಾಧಿಸಿದ್ದೇವೆಂದರೆ, ಅದು ಬಹಳ ಕಡಿಮೆ. ಇವರ ಉದ್ಧಾರವಾಗಬೇಕು, ಆಗ ಇವೆಲ್ಲಾ ಮಾಯವಾಗುತ್ತದೆ. ಇವತ್ತು ಎಲ್ಲಿ ಒಬ್ಬ ಪರಾವಲಂಬಿಯಾಗದೆ, ತನ್ನ ಕಾಲಮೇಲೆ ನಿಲ್ಲುತ್ತಾನೋ, ಅವನಿಗೆ ಸಮಾಜದಲ್ಲಿ ಗೌರವ ಇದೆ, ಮರ್ಯಾದೆ ಇದೆ. ಆದರೆ, ಅದು ಎಲ್ಲಿ, ಯಾರಲ್ಲಿ ಇಲ್ಲವೋ, ಅವನಿಗೆ ಇದು ಯಾವುದೂ ದೊರೆಯಲಾರದು. ಇದರಿಂದ ಒಂದು ಮುಖ್ಯವಾದ ಅಂಶ ನಾವು ತಿಳಿದುಕೊಳ್ಳಬಹುದೇನೆಂದರೆ, ಯಾವ ಜನಾಂಗದ ಆರ್ಥಿಕಸ್ಥಿತಿ ಸುಧಾರಿಸುವುದಿಲ್ಲವೋ, ಆಗ ಆ ಜನಾಂಗಕ್ಕೆ ಸಿಗಬೇಕಾದಷ್ಟು ಗೌರವ ಸಿಗಲಾರದು ಮತ್ತು ಅದು ಮುಂದೆ ಬರಲಾರದು. ಆದ್ದರಿಂದ ನಾವು ಇವರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಇವತ್ತು ಹರಿಜನ ಮತ್ತು ಗಿರಿಜನರಿಗೆ ಎಷ್ಟು ಸೌಲಭ್ಯಗಳನ್ನು ನಾವು ಒದಗಿಸಬೇಕೋ, ಅಷ್ಟು ನಾವು ಒದಗಿಸುತ್ತಿಲ್ಲವೆಂದು ನಾನಾದರೂ ಹೇಳಬಯಸುತ್ತೇನೆ. ಬಹುಜನರು ಇವರು ಮುಂದೆ ಬರಬೇಕೆನ್ನುವ ಘೋಷಣೆಗಳನ್ನು ಮಾಡುತ್ತಾರೆ, ಭಾಷಣಗಳನ್ನು ಮಾಡುತ್ತಾರೆ, ಆದರೆ ಹಾಗೆ ಮಾಡಿದರೆ ಸಾಲದು. ನಾವು ನಿಜವಾಗಿಯೂ ಹೇಗೆ ಸಹಾಯ ಮಾಡಬೇಕೆಂಬುದನ್ನು ಸ್ವಲ್ಪ ಯೋಚನೆಮಾಡಬೇಕು. ನಮ್ಮ ತಪ್ಪುಗಳನ್ನು ನಾವು ತಿದ್ದಿಕೊಳ್ಳಬೇಕು. ಸರ್ಕಾರದವರು ಸ್ವಾತಂತ್ರ್ಯ ಬಂದೀಚೆಗೆ ಹಲವಾರು

(ಶ್ರೀ ಎಚ್. ಕೆ. ಶಿವರುದ್ರಪ್ಪ)

ಕಾರ್ಯಕ್ರಮಗಳನ್ನು ಹಾಕಿಕೊಂಡು ಬಂದಿದ್ದಾರೆ. ಇನ್ನೂ ಹಲವು ವರ್ಷಗಳಲ್ಲಿ ಅವರ ಅಭಿವೃದ್ಧಿ ಇನ್ನೂ ಉತ್ತಮವಾಗಬಹುದು. ಒಂದು ದಿನ ಬೆಳಗಾದರೆ, ನಾವು ಇದರ ಅಭಿವೃದ್ಧಿಯನ್ನು ನಿರೀಕ್ಷಿಸುವುದಕ್ಕೆ ಸಾಧ್ಯವಿಲ್ಲ. ಕಾಲಕ್ರಮೇಣ ಇವು ಪರಿಹೋಗಬಹುದೆಂದು ನನ್ನ ಅಭಿಪ್ರಾಯ. ಆದ್ದರಿಂದ ಘರ್ಷಣೆಗಳಿಗೆ ಅವಕಾಶ ಕೊಡದೆ ಸೌಹಾರ್ದ ಮನೋಭಾವದಿಂದ ಇವೆಲ್ಲಾ ಆಗಬೇಕು. ಇವತ್ತು ಎರಡೂ ಕೈ ಸೇರಿದರೆ ಚಪ್ಪಾಳೆಯಾಗುತ್ತದೆಯಷ್ಟೇ. ಶ್ರೀಮಾನ್ ಸುಬ್ಬಯ್ಯನವರು ತಂದಿರತಕ್ಕ ನಿರ್ಣಯದಲ್ಲಿ ಒಂದು ಕಮಿಟಿ ಇವನ್ನೆಲ್ಲಾ ಪರಿಶೀಲನೆ ಮಾಡುವುದಕ್ಕೋಸ್ಕರ ಮಾಡಬೇಕೆಂದು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಯವರು, ಅದನ್ನು ಮಾಡುತ್ತಿದ್ದೇವೆ ಎಂದು ಹೇಳುವುದರಿಂದ, ಈ ನಿರ್ಣಯದ ಅವಶ್ಯಕತೆ ಇಲ್ಲವೆಂದು ಕಾಣುತ್ತದೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಪಿ. ರಾಜಣ್ಣ (ಉಪಾಧ್ಯಾಯರ ಕ್ಷೇತ್ರ).—ಮಾನ್ಯ ಸಭಾಪತಿಯವರೇ, ಈ ರೆಸೊಲ್ಯೂಷನ್ ಏನು ಇಲ್ಲಿ ತಂದಿದ್ದಾರೆ, ಅದು ಕೊಂಚ ಅರ್ಥವತ್ತಾಗಿ ಇದೆ. ಸರ್ಕಾರದವರು ಈಗಾಗಲೇ ಸಮಿತಿ ನೇಮಕ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಆದ್ದರಿಂದ ಇದಕ್ಕೆ ನಾನು ಸಪೋರ್ಟು ಮಾಡುವುದು ಅಥವಾ ಅಪೋಸು ಮಾಡುವ ಅವಶ್ಯಕತೆ ಇಲ್ಲವೆಂದೆನಿಸುತ್ತದೆ. ಸರ್ಕಾರಕ್ಕೆ ಇದರ ಅರ್ಥವಾಗಿದೆ ಎಂದು ತಿಳಿದಿದೆ. ಮೊಟ್ಟಮೊದಲನೆಯದಾಗಿ ನಾವು ಹರಿಜನ ಗಿರಿಜನ ಎಂಬ ಭಾಗ ಮಾಡಿರುವುದೇ ಇವರು ಬೇರೆ ಇರುವುದಕ್ಕೆ ಒಂದು ಕಾರಣ. ಒಟ್ಟಿನಲ್ಲಿ ನಮ್ಮ ಸಮಾಜದ ಎಲ್ಲಾ ಜಾತಿಯವರು ಅವರೊಡನೆ ಮಿಳಿತವಾಗುವುದಿಲ್ಲವೆಂದು ನಾನು ಮನಗಂಡಿದ್ದೇನೆ. ಈಗ ಬೇಕಾದ ಅನುಕೂಲಗಳನ್ನು ಅವರಿಗೆ ಮಾಡಿಕೊಟ್ಟಿದ್ದಾರೆ. ಆದರೆ, ಅದು ಎಲ್ಲರಿಗೂ ಸರಿಯಾಗಿ ತಲಪಲಿಲ್ಲವೆಂಬುದೇ ಪ್ರತಿಯೊಬ್ಬರಿಗೂ ಇರುವಂತಹ ವ್ಯಥೆ ಹಾಗೂ ಕಳವಳ. ಬಹಳ ಜನರು ಹೇಳುತ್ತಿದ್ದಾರೆ, ಸಿಟಿಯಲ್ಲಿ ಜನರೆಲ್ಲಾ ಅವರನ್ನು ಕೀಳುಮಟ್ಟದಲ್ಲಿ ನೋಡುತ್ತಿಲ್ಲವೆಂದು. ತಕ್ಕಮಟ್ಟಿಗೆ ಅದು ನಿಜ; ಇದ್ದಿರಬಹುದು. ನನಗೆ ತಿಳಿದಮಟ್ಟಿಗೆ ರಾಜಾಜಿನಗರದ ಪಕ್ಕದ ಒಂದು ಹಳ್ಳಿಯಲ್ಲಿ ಅನ್‌ಟಚೇಬಿಲಿಟಿ ಈಗಲೂ ನಡೆಯುತ್ತಿದೆ. ಒಬ್ಬ ಹರಿಜನ ಉಪಾಧ್ಯಾಯನನ್ನು ಅಲ್ಲಿ ಹಾಕಿದಾಗ ಆತನಿಗೆ ಅಲ್ಲಿ ನೀರು, ವಸತಿ ಯಾವುದೂ ಸಿಗದೆ, ಅವನು ಎಲ್ಲದಕ್ಕೂ ಸೈಕಲ್ಲಲ್ಲಿ ಪೇಟೆಗೆ ಬರಬೇಕಿತ್ತು. ಅದು ನನಗೆ ಗೊತ್ತಿದೆ. ಇನ್ನು ದೇವಸ್ಥಾನಗಳಿಗೆ ಹೋಗುವುದಕ್ಕೆ ಆಸ್ಪದ ಕೊಡಬೇಕೆಂದು ಕಾನೂನು ಮಾಡಿದ್ದಾರೆ, ರೂಲ್ಸ್ ಮಾಡಿದ್ದಾರೆ. ಆದರೆ ಅದು ಎಷ್ಟುಮಟ್ಟಿಗೆ ಸಾಧ್ಯವಿದೆ ಎಂಬುದನ್ನು ಯೋಚನೆ ಮಾಡಬೇಕು. ಇದೇ ಬೆಂಗಳೂರಿನಲ್ಲಿ ಒಂದು ಕಡೆ ಒಂದು ದೇವಸ್ಥಾನವಿದೆ. ಅಲ್ಲಿ ಹರಿಜನರು ಒಳಗೆ ಬರಬಹುದು ಎಂದು ಹೇಳಿದರೂ, ಹರಿಜನರೇ ಬರುವುದಿಲ್ಲ. ಆ ರೀತಿಯ ಒಂದು ಮನೋಭಾವ ಅವರಲ್ಲಿ ಬೆಳೆದು ಬಂದಿದೆ. ಅವರನ್ನು ಬೇರೆಯೇ ಇಟ್ಟಿದುದರಿಂದ ಈರೀತಿಯಾಗುತ್ತದೆ. ಆದ್ದರಿಂದ ಅವರನ್ನು ಎಲ್ಲಾ ಜನಾಂಗದವರ ಮಧ್ಯೆ ಸೇರುವಂತೆ ಮಾಡಬೇಕು. ಇನ್ನೊಂದು ಉದಾಹರಣೆ ಹೇಳುತ್ತೇನೆ. ಬೆಂಗಳೂರಿನ ಹತ್ತಿರದ ಒಂದು ಹಳ್ಳಿಯಲ್ಲಿ ಕೆಲವರು ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದರು. ಅಲ್ಲಿ ಸ್ಯಾನಿಟೇಶನ್ ಎಲ್ಲಾ ಇಲ್ಲವೆಂದು ಹಿಂದಿನ ಕಾಲದ ಸರ್ಕಾರದವರು, ಮಿರ್ಜಾ ಇಸ್ಮಾಯಿಲ್ ರವರು ಎಲ್ಲಾ ನೋಡಿ ಏನಾದರೂ ಮಾಡಿ ಅದನ್ನು ಬದಲಾವಣೆ ಮಾಡಬೇಕೆಂದು ಹೇಳಿದರು. ಆಗ ಅಲ್ಲಿಯ ಒಬ್ಬ ಫಿಲಾಂತ್ರೊಫಿಸ್ಟ್ 10 ಸಾವಿರ ರೂಪಾಯಿ ಕೊಟ್ಟರು. ಅದಕ್ಕೆ ಸ್ವಲ್ಪ ಸರ್ಕಾರದವರೂ ಸೇರಿಸಿ ಕ್ವಾರ್ಟರ್ಸ್, 35 ಸಂಸಾರಗಳಿಗೆ ಬೇಕಾಗುವಷ್ಟು ಕಟ್ಟಬೇಕೆಂದು ಮಾಡಿದರು. ಮತ್ತು ಅದನ್ನು ಕಾರ್ಪೊರೇಷನಿಗೆ ಎಂಟ್ರಸ್ಟ್ ಮಾಡಿದರು. ಹಾಗೆ ಕಟ್ಟಿದ ಆದಮೇಲೆ, ಅದನ್ನು ಅಲ್ಲಿದ್ದವರಿಗೆ ಕೊಡುವುದೋ, ಬಿಡುವುದೋ ಎಂದು ನೋಡಿ, ಕಾರ್ಪೊರೇಷನ್ ಕಂಟ್ರೋಲಿನಲ್ಲಿ ಇಡಬೇಕೆಂಬ ಅಭಿಪ್ರಾಯಪಟ್ಟರು. ಆಗ ಅಲ್ಲಿನ ಊರಿನ ಮುಖಂಡರೂ ಸೇರಿ, ಈಗಾಗಲೇ ಅವರು ಕಷ್ಟದಲ್ಲಿದ್ದಾರೆ, ಆದ್ದರಿಂದ ಪೂರ್ತಿಯಾಗಿ ಓನರ್‌ಷಿಪ್ ಕೊಟ್ಟುಬಿಟ್ಟರೆ, ಅವರು ಮಾರಿಬಿಡಬಹುದೆಂದು ತಿಳಿದು, ಅವರಿಗೆ ವರ್ಷಕ್ಕೆ ಒಂದು ರೂಪಾಯಿಯಂತೆ ಲೀಸಿಗೆ ಕೊಡಬೇಕೆಂದು ತೀರ್ಮಾನ ಮಾಡಿದರು. 20 ವರ್ಷ ಹಾಗೆ ನಡೆಯಿತು. ನಂತರ ಇದ್ದಕ್ಕಿದ್ದ ಹಾಗೆ, ಕಾರ್ಪೊರೇಷನ್‌ನಲ್ಲಿ ಒಂದು ರಿಸೊಲ್ಯೂಷನ್ ಮಾಡಿದರೆ, ಅವರಿಂದ ತಿಂಗಳಿಗೆ ಮೂರು ರೂಪಾಯಿಯಂತೆ ವಸೂಲು ಮಾಡಬೇಕೆಂದು. ಹಿಂದೆ ವರ್ಷಕ್ಕೆ ಒಂದು ರೂಪಾಯಿ ಇದ್ದುದನ್ನು ಒಂದು ತಿಂಗಳಿಗೆ 3 ರೂಪಾಯಿ ಮಾಡಿದ್ದೀರಿ, ಇದರಿಂದಾಗಿ ಒಂದು ವರ್ಷಕ್ಕೆ 36 ರೂಪಾಯಿಗಳನ್ನು ಕೊಡಬೇಕಾಗುತ್ತದೆ. 36 ರೂಪಾಯಿಗಳನ್ನು ಕೊಡಬೇಕು ಎಂದರೆ ಶಕ್ತಿ ಇಲ್ಲ ಎಂದು ಅವರು ಹೇಳಿದರು. ಕೊನೆಗೆ ಅದನ್ನು ಸರ್ಕಾರದಿಂದ ಪುನಃ ಕಾರ್ಪೊರೇಷನ್ನಿಗೆ ಕಳುಹಿಸಿ ಎಲ್ಲಾ

ಮಿನ್ ಮಾಡಿ ಪುಟ್ ಅಪ್ ದಿ ಕೇಸ್ ಎಂದು ಹೇಳಿದರು. ಅದನ್ನು ಅವರು ಪುಟ್ ಅಪ್ ಮಾಡಿದರೋ ಏನೋ ಗೊತ್ತಿಲ್ಲ. ಆಮೇಲೆ 1 ತಿಂಗಳಿಗೆ 10 ರೂಪಾಯಿಗಳನ್ನು ಕೊಡಬೇಕೆಂದು ಬಂತು. ಇದರ ಬಗ್ಗೆ ಅಡ್ಮಿನಿಸ್ಟ್ರೇಟರು ಮತ್ತು ಕಮೀಷನರನ್ನು ನೋಡಿ ಎಂದು ಸರ್ಕಾರದಿಂದ ಇನ್‌ಸ್ಟ್ರಕ್ಷನ್ ಬಂತು. ನಂತರ ನಾನು ಕಷ್ಟಪಟ್ಟು ಟೈಮ್ ಕೊಟ್ಟು ಹೋಗಿ ಅಡ್ಮಿನಿಸ್ಟ್ರೇಟರನ್ನು ನೋಡಿದೆ. ನಾನು ಅವರನ್ನು ನೋಡುವುದಕ್ಕೆ ಹೋದಾಗ, ಹರಿಜನರ ಅಹವಾಲನ್ನು ತೆಗೆದುಕೊಂಡು ಹೋದಾಗ ಅಡ್ಮಿನಿಸ್ಟ್ರೇಟರು ನಾನು ಹರಿಜನ ಸಂಗಡದವನು ಎಂದು ತಿಳಿದುಕೊಂಡು ಸೌಜನ್ಯವನ್ನು ತೋರಿಸಿ ಮಾತನಾಡಿಸಿ ಷೇಕ್ ಹ್ಯಾಂಡ್ ಕೊಡುವುದಕ್ಕೆ ಹಿಂದುಮುಂದು ನೋಡಿ ನಮಸ್ಕಾರ ಎಂದು ಹೇಳಿ ಕುಳಿತುಕೊಳ್ಳಿ ಎಂದು ಸೀಟು ತೋರಿಸಿದರು. ಒಬ್ಬರು ಅಡ್ಮಿನಿಸ್ಟ್ರೇಟರು ಈ ರೀತಿ ಮಾಡಿದರೆ ಹರಿಜನೋದ್ಧಾರವಾಗುತ್ತದೆಯೇ ? ಈ ದೃಷ್ಟಿಯಿಂದ ಈ ನಿರ್ಣಯದಲ್ಲಿ ಹೇಳಿರುವ ಹಾಗೆ ಒಂದು ಸಮಿತಿಯನ್ನು ನೇಮಕ ಮಾಡಬೇಕು ರಾಜ್ಯದಲ್ಲಿರುವ ಹರಿಜನ ಗಿರಿಜನರಿಗೆ ಒದಗಿಸ ಲಾದ ಸೌಲಭ್ಯಗಳು ಅವರಿಗೆ ಸರಿಯಾದ ರೀತಿಯಲ್ಲಿ ಉಪಯೋಗಿಸಲ್ಪಟ್ಟಿವೆಯೇ, ನಿಜವಾಗಿಯೂ ಸರ್ಕಾರದಿಂದ ಅವರಿಗೋಸ್ಕರ ಖರ್ಚಾಗತಕ್ಕಂಥ ಹಣ ಸದ್ವಿನಿಯೋಗವಾಗುತ್ತಿದೆಯೇ ಇಲ್ಲವೇ ಎಂಬುದನ್ನು ನೋಡಬೇಕಾದ್ದು ಪ್ರತಿಯೊಬ್ಬರ ಕರ್ತವ್ಯ. ಆದ್ದರಿಂದ ಸೋಷಿಯಲ್‌ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಮಾಡತಕ್ಕ ಕೆಲಸಕಾರ್ಯಗಳು ಸರಿಯಾಗಿ ನಡೆಯುವಂತೆ ಒಂದು ತಹ ಬಂದಿಗೆ ತಂದು ಈ ನಿರ್ಣಯದ ಪ್ರಕಾರ ಒಂದು ಸಮಿತಿಯನ್ನು ರಚನೆ ಮಾಡಿ ಆ ಸಮಿತಿಯು ಹಿಂದುಳಿದ ವರ್ಗದವರ, ಹರಿಜನ ಗಿರಿಜನರ ಸರ್ವತೋಮುಖವಾದ ಅಭಿವೃದ್ಧಿಗೆ ತಕ್ಕ ಸಲಹೆಯನ್ನು ಕೊಡುವಂತಹ ಕೆಲಸವನ್ನು ಮಾಡಲಿ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಲ್. ಪಾಟೀಲ್ (ಸಮಾಜಕಲ್ಯಾಣ ಶಾಖೆಯ ಮಂತ್ರಿಗಳು) ಮಾನ್ಯ ಸಭಾ ಪತಿಗಳೇ, ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಎ. ಕೆ. ಸುಬ್ಬಯ್ಯನವರು ಈ ನಿರ್ಣಯವನ್ನು ಸಭೆಯಮುಂದೆ ತಂದಾಗ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಂಡೆ. ಆಗ ಸರ್ಕಾರದ ಪರಿಯಿಂದ ಈ ಬಗ್ಗೆ ಲೆಜಿಸ್ಲೇಟರುಗಳನ್ನೊಳ ಗೊಂಡಂಥ ಒಂದು ಕಮಿಟಿಯನ್ನು ಮಾಡುತ್ತೇವೆ ಎನ್ನುವಂಥಾ ಅಭಿಪ್ರಾಯವನ್ನು ನಾನು ವ್ಯಕ್ತ ಮಾಡಿದ್ದೇನೆ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಎ. ಕೆ. ಸುಬ್ಬಯ್ಯನವರು ಈ ತರಹ ಎಂದರೆ ಈ ನಿರ್ಣಯದಲ್ಲಿ ಹೇಳಿರುವಹಾಗೆ ಲೆಜಿಸ್ಲೇಟರುಗಳನ್ನೊಳಗೊಂಡಂಥಾ ಒಂದು ಕಮಿಟಿ ಯನ್ನು ಸರ್ಕಾರದವರು ನೇಮಕ ಮಾಡುತ್ತಾರೆಯೋ ಇಲ್ಲವೋ ಎನ್ನುವಂಥಾ ಸಂಶಯವನ್ನು ವ್ಯಕ್ತಮಾಡಿದರು. ಸರ್ಕಾರದ ಪರಿಯಿಂದ ನಿಶ್ಚಯವಾಗಿ ಈ ಬಗ್ಗೆ ಒಂದು ಸ್ಟೇಟ್ ಲೆವೆಲ್ ಲೆಜಿಸ್ಲೇಟುರುಗಳ ಕಮಿಟಿಯನ್ನು ನಾವು ಮಾಡುತ್ತೇವೆ. ಅದೂ ಬಹಳ ಶೀಘ್ರದಲ್ಲಿಯೇ ಅದನ್ನು ಮಾಡುತ್ತೇವೆ ಎಂದು ನಾನು ತಮಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನನ್ನ ಮಾನ್ಯ ಮಿತ್ರರಾದ ಈ ಮನೆಯ ಬಹಳ ಮಂದಿ ಮಾನ್ಯ ಸದಸ್ಯರು ಮಹಾತ್ಮಾಜಿಯವರ ಸಲುವಾಗಿ ಸ್ವಾತಂತ್ರ್ಯ ಬಂದ ನಂತರ ಅದಂತಹ ಸಂಗತಿಗಳನ್ನು ಮಾತನಾಡಿದರು. ಮಹಾತ್ಮ ಗಾಂಧೀಜಿಯವರು ನಮ್ಮ ದೇಶದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದ್ದಾರೆ. ನಮ್ಮ ದೇಶದಲ್ಲಿ ವಿರೋಧಪಕ್ಷದ ಲ್ಲಾಗಲೀ, ಕಾಂಗ್ರೆಸ್ ಪಕ್ಷದಲ್ಲಾಗಲೀ, ಮಹಾತ್ಮ ಗಾಂಧೀಜಿಯವರಂತಹ ವ್ಯಕ್ತಿಗಳು ಮತ್ತೆ ಯಾರಾದರೂ ಇದ್ದಿದ್ದರೆ ಅವರು ನಿಜವಾಗಿಯೂ ಮಹಾತ್ಮಜಿಯವರೇ ಆಗುತ್ತಿದ್ದರು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ.—ಹಾಗೆಂದರೆ ಅವರ ಹಾಗೆ ಯಾರು ನಡೆದುಕೊಳ್ಳಲಿಲ್ಲ ಎಂದು ಅರ್ಥವೇ ? ಈಗ ಸುಮಾರು 28 ವರ್ಷಗಳ ಹಿಂದೆ ನಾನು ಮತ್ತು ನಮ್ಮ ಅಣ್ಣ ಒಬ್ಬರು ಹರಿಜನರ ಹಾಸ್ಟಿಲಿಗೆ ಸೇರಿ ಅವರ ಮಧ್ಯದಲ್ಲಿ ಸುಮಾರು 1½ ವರ್ಷ ಕಾಲ ಇದ್ದು ಓದಿ, ಮಲಗುವುದು ಅವರ ಜೊತೆಯಲ್ಲಿ ಊಟಮಾಡುವುದು ಪ್ರತಿಯೊಂದೂ ನಾವು ಮಾಡಿದ್ದೇವೆ.

ಶ್ರೀ ಬಿ. ಎಲ್. ಪಾಟೀಲ್.—ಮಹಾತ್ಮ ಗಾಂಧೀಜಿಯವರು ಬೇರೆ ಬೇರೆ ಎಲ್ಲಾ ವಿಚಾರ ಗಳನ್ನೂ ಅಮಲಿನಲ್ಲಿ ತರುವಂತಹ ವ್ಯಕ್ತಿ ಯಾರೂ ಇಲ್ಲ ಎಂದು ನಾನು ಹೇಳಿದ್ದು ನಾನು ಸಾವಿರಾರು ಜನರನ್ನು ನೋಡಿದ್ದೇನೆ. ಒಬ್ಬೊಬ್ಬರು ಒಂದೊಂದು ರೀತಿಯಿಂದ ಮಹಾತ್ಮ ಗಾಂಧೀಜಿಯವರ ವಿಚಾರಗಳನ್ನು, ತತ್ವಗಳನ್ನು, ಗುಣಗಳನ್ನು ತೆಗೆದುಕೊಂಡು ಅದರಂತೆ ನಡೆಯುತ್ತಾ ಇರಬಹುದು. ಆದರೆ ಮಹಾತ್ಮಾಜಿಯವರ ಎಲ್ಲಾ ತತ್ವಗಳನ್ನು ಅನುಸರಿಸಿಕೊಂಡು ಅವರ ಎಲ್ಲಾ ಗುಣವನ್ನು ತುಂಬುವಂತಹ ವ್ಯಕ್ತಿ ನಮ್ಮ ದೇಶದಲ್ಲಿ ಕಾಂಗ್ರೆಸ್ ಪಕ್ಷವಲ್ಲಾಗಲೀ, ವಿರೋಧಪಕ್ಷವಲ್ಲಾಗಲೀ ಇಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಮ್ಮ ದೇಶದಲ್ಲಿ ಎಲ್ಲಾ ಜನರು ಸಾಧ್ಯವಾದ ಮಟ್ಟಿಗೆ ಮಹಾತ್ಮಾಜಿಯವರ ತತ್ವಗಳನ್ನು ಅನುಷ್ಠಾನಕ್ಕೆ ತಂದು, ಅವರು ಹೇಳಿದಂತೆ, ಅವರು

(ಶ್ರೀ ವಿ. ಎಲ್. ಪಾಟೀಲ್)

ನಡೆದಂತೆ ಅವುಗಳನ್ನು ಆಚರಣೆಗೆ ತರುವಂಥಾದ್ದು ನಮ್ಮೆಲ್ಲರ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ನಮಗೆ ಸ್ವಾತಂತ್ರ್ಯ ಬಂದನಂತರ ಆದಂತಹ ವಿಚಾರಗಳನ್ನೆಲ್ಲಾ ನಮ್ಮ ಮಿತ್ರರು ಹೇಳಿದ್ದಾರೆ. ನಮಗೆ ಸ್ವಾತಂತ್ರ್ಯ ಬರುವುದಕ್ಕೆ ಪೂರ್ವದಲ್ಲಿ ನಮ್ಮ ದೇಶದಲ್ಲಿ ಯಾವ ತರಹ ಸ್ವಾತಂತ್ರ್ಯ ಇತ್ತು ಎನ್ನುವುದರ ಕಡೆಗೆ ಸ್ವಲ್ಪ ಗಮನ ಕೊಟ್ಟರೆ ನೂರಾರು ವರ್ಷಗಳಿಂದ ಆಂಗ್ಲರು ನಮ್ಮನ್ನು ಗುಲಾಮಗಿರಿಯಲ್ಲಿಟ್ಟಿದ್ದರು. ಇದು ಎಲ್ಲರಿಗೂ ಗೊತ್ತಿದೆ. ನಾವು ಸ್ವಾತಂತ್ರ್ಯ ತೆಗೆದುಕೊಳ್ಳುವ ಕಾಲಕ್ಕೆ, ನಮಗೆ ಸ್ವಾತಂತ್ರ್ಯ ದೊರಕುವ ಕಾಲಕ್ಕೆ ನಮ್ಮ ದೇಶದೊಳಗೆ ಎಂತೆಂಥ ಘಟನೆಗಳು, ಕೃತ್ಯಗಳು ಯಾವ ತರಹ ನಡೆದವು ಎಂದು ನೆನಪು ಮಾಡಿಕೊಂಡರೆ ನಮ್ಮ ಹೃದಯ ತುಂಬಿ ಬರುತ್ತದೆ. ನಾವು ಸ್ವಾತಂತ್ರ್ಯವನ್ನು ತೆಗೆದುಕೊಂಡನಂತರ ನಮ್ಮ ದೇಶದ ಪರಿಸ್ಥಿತಿ ಹೇಗಿತ್ತು ಎಂದರೆ ನಮ್ಮ ದೇಶದಲ್ಲಿ ಎತ್ತ ಕಡೆ ನೋಡಿದರೂ ಸಮಾಜದಲ್ಲಿ ಒಳ್ಳೆಯ ಶಿಕ್ಷಣ ಇರಲಿಲ್ಲ, ಆರ್ಥಿಕಮಟ್ಟ ಚೆನ್ನಾಗಿರಲಿಲ್ಲ, ಎಲ್ಲಿ ನೋಡಿದರೂ ದಾರಿದ್ರ್ಯ ಇತ್ತು ಎನ್ನುವಂಥಾದ್ದನ್ನು ನಾವು ನೋಡಿದ್ದೇವೆ. ನಮಗೆ ಸ್ವಾತಂತ್ರ್ಯ ದೊರಕಿದಾಗ ನಮ್ಮ ದೇಶದೊಳಗಿನ ನಾಯಕರಲ್ಲಿ ಮುಖ್ಯವಾಗಿ ಎರಡು ವಿಚಾರಗಳು ಇದ್ದುವು. ನಮ್ಮ ಜನರನ್ನು ಗುಲಾಮಗಿರಿಯಿಂದ ಮುಕ್ತ ಮಾಡಬೇಕೆಂಬುದು ಒಂದು. ಎರಡನೆಯದು ನಮ್ಮ ದೇಶದೊಳಗಿನ ಜನರ ಸ್ಥಿತಿಗತಿಗಳನ್ನು ಸುಧಾರಣೆ ಮಾಡಬೇಕೆಂಬುದು. ನಮ್ಮ ದೇಶದ ಜನರನ್ನು ಗುಲಾಮಗಿರಿಯಿಂದ ಮುಕ್ತ ಮಾಡಿದ ನಂತರ ದೇಶದಲ್ಲಿ ಜನರ ಸ್ಥಿತಿಗತಿಗಳನ್ನು ಸುಧಾರಿಸುವ ಸಲುವಾಗಿ ನಮ್ಮ ನಾಯಕರು ಬೇರೆ ಬೇರೆ ಯೋಜನೆಗಳನ್ನು ಹಾಕಿಕೊಂಡು ಈಗಾಗಲೇ ಮೂರು ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತ ಮಾಡಿದರು. ಇದನ್ನು ಮಾಡುವಾಗ ದೇಶದಲ್ಲಿ ಶೇಕಡ 80ರಷ್ಟು ಇರುವ ಅಜ್ಞಾನಿಗಳ ದರಿದ್ರವನ್ನು ಹೋಗಲಾಡಿಸಿ ಅವರ ಆರೋಗ್ಯ ಮಟ್ಟವನ್ನು ಮತ್ತು ಆರ್ಥಿಕ ಮಟ್ಟವನ್ನು ಹೆಚ್ಚಿಸಬೇಕೆಂಬ ವಿಚಾರವಿತ್ತು. ಸ್ವಾತಂತ್ರ್ಯ ಬಂದನಂತರ ಈ 22 ವರ್ಷಗಳಲ್ಲಿ ಅನೇಕ ಶಾಲಾ ಕಟ್ಟಡಗಳು ಆಗಿವೆ. ಹೈಸ್ಕೂಲ್ ಮತ್ತು ಕಾಲೇಜ್‌ಗಳು ಪ್ರಾರಂಭವಾಗಿದೆ. ಮೊದಲು ಇಷ್ಟೊಂದು ಶಾಲೆಗಳು ಮತ್ತು ಕಾಲೇಜುಗಳು ಇರಲಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಇಷ್ಟೊಂದು ಶಾಲಾಕಾಲೇಜುಗಳನ್ನು ಹರಿಜನ ಗಿರಿಜನರಿಗಾಗಿ ಮಾತ್ರ ತೆರೆಯಲಿಲ್ಲ, ದೇಶದಲ್ಲಿರತಕ್ಕಂಥ ಶೇಕಡ 80 ಭಾಗದ ಬಡ ಜನರು ಏನಿದ್ದಾರೆ, ಅವರೆಲ್ಲರಿಗೂ ಅನುಕೂಲವಾಗಲಿ ಎಂದು ಇವುಗಳನ್ನು ತೆರೆಯಲಾಯಿತು. ಬೇರೆ ಜನಾಂಗದವರಿಗೆ ಕೊಡುವಂತಹ ಸೌಲಭ್ಯಗಳಿಗಿಂತ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಹರಿಜನ ಗಿರಿಜನರಿಗೆ ಕೊಡದಿದ್ದರೆ ಇವರನ್ನು ಇನ್ನಿತರ ವರ್ಗದವರ ಸಾಲಿಗೆ ತರುವುದು ಕಷ್ಟವಾಗುತ್ತದೆ ಎಂದು ತಿಳಿದುಕೊಂಡು ಇವರಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಕೊಡುತ್ತಿರುವುದನ್ನು ತಾವು ನೋಡುತ್ತಿದ್ದೀರಿ. ಸಮಾಜ ಕಲ್ಯಾಣ ಇಲಾಖೆಯ ಮೂಲಕ ಇವರಿಗೆ ಸ್ಕಾಲರ್‌ಷಿಪ್ ಮತ್ತು ಇನ್ನಿತರ ಅನುಕೂಲಗಳನ್ನು ಒದಗಿಸುತ್ತಿರುವುದನ್ನು ತಾವು ನೋಡುತ್ತಿದ್ದೀರಿ. ಕಳೆದ 22 ವರ್ಷಗಳಲ್ಲಿ ದೊಡ್ಡ ದೊಡ್ಡ ಪವರ್ ಪ್ರಾಜೆಕ್ಟ್‌ಗಳು ಆಗಿವೆ. ದೊಡ್ಡ ದೊಡ್ಡ ಕೆರೆಕಾಲುವೆಗಳು ಆಗಿವೆ. ಅನೇಕ ಕಾರ್ಖಾನೆಗಳು ಪ್ರಾರಂಭವಾಗಿವೆ. ನೀರಾವರಿಯ ಅನುಕೂಲವೂ ಸಹ ಜಾಸ್ತಿಯಾಗಿದೆ.

ಶ್ರೀ ಬಿ. ಚೆನ್ನಬೈರೇಗೌಡ.—ಸ್ವಾತಂತ್ರ್ಯಪೂರ್ವದಲ್ಲಿ ನೀರಾವರಿಯ ಅನುಕೂಲ ನಮ್ಮ ರಾಜ್ಯದಲ್ಲಿ ಏಳೂವರೆ ಪರ್‌ಸೆಂಟ್ ಇತ್ತು, ಅದನ್ನು ಒಂಭತ್ತೂವರೆ ಪರ್‌ಸೆಂಟ್‌ಗೆ ಹೆಚ್ಚಿಸಿದ್ದೀರಿ. ಅಂದರೆ ಎರಡು ಪರ್‌ಸೆಂಟ್ ಮಾತ್ರ ಮುಂದೆ ಹೋಗಿದ್ದೀರಿ. ವಿದ್ಯಾಪ್ರಗತಿ ಸ್ವಾತಂತ್ರ್ಯತಾನಂತರ 9 ಪರ್‌ಸೆಂಟ್ ಮಾತ್ರ ಜಾಸ್ತಿಯಾಗಿದೆ. ಕಳೆದ 22 ವರ್ಷಗಳಿಂದ ಈ ಸರ್ಕಾರದವರು ಏನು ಮಹಾಕಾರ್ಯಸಾಧನೆ ಮಾಡಿದ್ದಾರೆಂದು ಕೇಳುತ್ತೇನೆ?

ಶ್ರೀ ವಿ. ಎಲ್. ಪಾಟೀಲ್.—ಸರ್ಕಾರದ ಪಾಲಿಸಿ ಏನಿದೆ ಎಂಬುದನ್ನು ನಾನು ಹೇಳುತ್ತಿದ್ದೇನೆ. ಒಂದು ರಾಜ್ಯದ ಆರ್ಥಿಕಮಟ್ಟವನ್ನು ಹೆಚ್ಚಿಸುವಾಗ, ಪ್ರತಿಯೊಂದು ತಾಲ್ಲೂಕ್‌ನಲ್ಲಿ, ಪ್ರತಿಯೊಂದು ಹಳ್ಳಿಯಲ್ಲಿ ಒಂದೇ ಸಮನಾಗಿ ಆರ್ಥಿಕ ಮಟ್ಟವನ್ನು ಹೆಚ್ಚಿಸುವುದಕ್ಕೆ ಆಗುವುದಿಲ್ಲ. ಇನ್ನಿತರ ರಾಜ್ಯಗಳಲ್ಲಿ ಇವರ ವಿಚಾರದಲ್ಲಿ ಏನು ಪ್ರಗತಿಯಾಗಿದೆ ಎಂಬುದನ್ನು ಹೇಳುವುದು ಕಷ್ಟವಾಗುತ್ತದೆ. ಈಗ ಮಾನ್ಯ ಸದಸ್ಯರು ಹೇಳಿದಂಥ ವಿಚಾರಗಳನ್ನು ನೋಟ್ ಮಾಡಿಕೊಳ್ಳಲಾಗಿದೆ. ಮತ್ತು ಆ ಬಗ್ಗೆ ಸುಧಾರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಯಾವ ಭಾಗದಲ್ಲಿಯಾದರೂ ಹರಿಜನ ಮತ್ತು ಗಿರಿಜನರಿಗೆ ಏನಾದರು ತೊಂದರೆಗಳು ಇದ್ದರೆ ಅದನ್ನು ಸರ್ಕಾರದ ಗಮನಕ್ಕೆ ಮಾನ್ಯ ಸದಸ್ಯರು ತಂದರೆ ಆ ತೊಂದರೆಗಳನ್ನು ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ. ರಾಜಗೋಪಾಲ್.—ಸರ್ಕಾರದವರು ಯಾವ ಸಾಧನೆಗಳನ್ನು ಮಾಡಲಿಲ್ಲ ಎಂದು ನಾವು ಹೇಳಲಿಲ್ಲ. ಇದುವರೆಗೆ ಸರ್ಕಾರದವರು ಹರಿಜನ ಗಿರಿಜನರ ಬಗ್ಗೆ ಕೈಕೊಂಡ ಯೋಜನೆಗಳು ಯಾವ ಪ್ರತಿಫಲವನ್ನು ಕೊಟ್ಟಿಲ್ಲ, ಆ ಕಾರಣದಿಂದ ಒಂದು ಕಮಿಟಿಯನ್ನು ಮಾಡಿ ಎಂದು ಕೇಳಿದ್ದೇವೆ. ತಾವು ಸುಮ್ಮನೆ ಜನರಲ್ ಆಗಿ ಹೇಳಿಕೊಂಡು ಹೋದರೆ ಏನು ಉಪಯೋಗವಾದೀತು.

ಶ್ರೀ ವಿ. ಎಲ್. ಪಾಟೀಲ್.—ಕಮಿಟಿ ವಿಚಾರವನ್ನು ಆಮೇಲೆ ಹೇಳುತ್ತೇನೆ. ಹರಿಜನ ಮತ್ತು ಗಿರಿಜನರ ಆರ್ಥಿಕ ಮಟ್ಟವನ್ನು ಹೆಚ್ಚಿಸುವ ಸಲುವಾಗಿ ಸರ್ಕಾರದವರು ಅನೇಕ ಕಾರ್ಯಗಳನ್ನು ಮಾಡುತ್ತಿದ್ದಾರೆ. ಅನೇಕ ಪಂಚವಾರ್ಷಿಕ ಯೋಜನೆಗಳನ್ನು ಕೈಗೊಂಡಿದ್ದೇವೆ. ವಕ್ಕಲುತನ ಮುಂದುವರೆದರೆ ಕಾರ್ಖಾನೆಗಳು ಮುಂದುವರೆಯುವುದಕ್ಕೆ ಸಾಧ್ಯ ಎಂಬುದನ್ನು ತಿಳಿದುಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಅನೇಕ ನೀರಾವರಿ ಯೋಜನೆಗಳನ್ನು ಕೈಗೊಂಡಿದ್ದೇವೆ. ವಿದ್ಯುಚ್ಛಕ್ತಿ ಯೋಜನೆಗಳನ್ನು ಮತ್ತು ಡ್ಯಾಮ್‌ಗಳನ್ನು ಕಟ್ಟಿ ಮುಗಿಸಿದ್ದೇವೆ. ಈ ದೇಶದ ಪ್ರತಿಯೊಂದು ವರ್ಗದವರಿಗೂ ಕೂಡ ಅನುಕೂಲವಾಗಲೀ ಎಂದು ನಾವು ಯೋಜನೆಗಳನ್ನು ಕೈಕೊಳ್ಳುತ್ತಿದ್ದೇವೆ. ಒಂದು ಇರಿಗೇಷನ್ ಪ್ರಾಜೆಕ್ಟನ್ನು ಕಟ್ಟಿದರೆ ಅದರಿಂದ ರೈತರಿಗೆ ಮಾತ್ರ ಅನುಕೂಲವಾಗುವುದಿಲ್ಲ. ಕೂಲಿಗಾರರಿಗೂ ಸಹ ಅನುಕೂಲವಾಗುತ್ತದೆ. ಒಂದು ಯೋಜನೆಯನ್ನು ಕೈಕೊಂಡರೆ ಅದರಿಂದ ಕೆಳಗಿನ ವರ್ಗದಿಂದ ಹಿಡಿದು ಮೇಲಿನ ವರ್ಗದವರೆಗೆ ಅನುಕೂಲವಾಗುತ್ತದೆಂದು ಸ್ಪಷ್ಟವಾಗಿ ಹೇಳುತ್ತೇನೆ. ಎಲ್ಲರಿಗೂ ಒದಗಿಸಿಕೊಡುವ ಸೌಲಭ್ಯಗಳ ಜೊತೆಗೆ ಹಿಂದುಳಿದವರಿಗೆ ವಿಶೇಷವಾದ ಸೌಲಭ್ಯಗಳನ್ನು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಒದಗಿಸಿಕೊಡುತ್ತಿದ್ದೇವೆ. ವಿಶೇಷವಾದ ಸೌಲಭ್ಯಗಳನ್ನು ಹರಿಜನ ಗಿರಿಜನರಿಗೆ ಒದಗಿಸುವ ಉದ್ದೇಶವೇನೆಂದರೆ, ಇವರನ್ನು ಇತರ ವರ್ಗದವರ ಮಟ್ಟಕ್ಕೆ ತರಬೇಕೆಂಬ ಕಾರಣದಿಂದ. ಇವರ ಆರ್ಥಿಕ ಮಟ್ಟ ಹೆಚ್ಚಬೇಕು, ಶಿಕ್ಷಣದ ಮಟ್ಟ ಹೆಚ್ಚಬೇಕೆಂದು ಪ್ರತ್ಯೇಕ ಸೌಲಭ್ಯಗಳನ್ನು ಒದಗಿಸುತ್ತಿದ್ದೇವೆ. ಈಗಾಗಲೇ ಮೂರು ಪಂಚವಾರ್ಷಿಕ ಯೋಜನೆಗಳು ಮುಗಿದಿವೆ. ಈ ಪಂಚವಾರ್ಷಿಕ ಯೋಜನೆಗಳನ್ನು ಕೈಕೊಳ್ಳುವ ಉದ್ದೇಶವೆಂದರೆ ಎಲ್ಲಾ ವರ್ಗದ ಜನರಿಗೂ ಸಹ ಅನುಕೂಲವಾಗಲೀ ಎಂಬ ಕಾರಣದಿಂದ. ಮಾನ್ಯ ಸದಸ್ಯರು ಮಾತನಾಡುವಾಗ, ಹರಿಜನ ಗಿರಿಜನರ ಬಗ್ಗೆ ಒದಗಿಸಿರುವ ಹಣ ಯೋಗ್ಯರೀತಿಯಿಂದ ಉಪಯೋಗವಾಗುತ್ತಿಲ್ಲ ಎಂಬ ಆಪಾದನೆಯನ್ನು ಮಾಡಿದರು. ಇವರಿಗಾಗಿ ಒದಗಿಸಿರುವ ಹಣ ಮಿಸ್-ಯೂಸ್ ಆಗುತ್ತಿದೆ, ಲ್ಯಾಪ್ಸ್ ಆಗುತ್ತಿದೆ ಎಂದು ಹೇಳಿದರು. ಈ ಮಾತನ್ನು ಅಲ್ಲಗಳೆಯುವುದು ಕಷ್ಟವಾಗುತ್ತದೆ. ಕರಪ್ಷನ್ ಮಿಸ್ ಯೂಸ್ ಕಳೆದ 15-20 ವರ್ಷಗಳಿಂದಲೂ ಕೂಡ ಆಗುತ್ತಿದೆ ಎಂಬುದನ್ನು ಹೇಳುತ್ತೇನೆ. ಇದು ಜಗತ್ತಿನ ಎಲ್ಲಾ ಕಡೆಯೂ ಇದೆ ಎಂದು ಹೇಳಬಹುದು. ಇದು ಮನುಷ್ಯನ ಸ್ವಭಾವ, ಧರ್ಮ ಎಂದು ಹೇಳಬಹುದು. ಮನುಷ್ಯ ಹುಟ್ಟಿದ ದಿವಸದಿಂದಲೂ ಕೂಡ ಇದು ಇದೆ. ಇದನ್ನು ಸಾಧ್ಯವಾದಮಟ್ಟಿಗೂ ಕೂಡ ಕಡಿಮೆಮಾಡಬೇಕು ಎಂಬ ಬಗ್ಗೆ ಪ್ರತಿಯೊಬ್ಬರೂ ಕೂಡ ಪ್ರಯತ್ನ ಮಾಡಬೇಕಾಗಿದೆ.

ಶ್ರೀ ಡಿ. ರಾಜಗೋಪಾಲ್.—ಕಾಂಗ್ರೆಸ್‌ನವರಲ್ಲಿಯೂ ಸಹ ಇದೆಯೇ ?

ಶ್ರೀ ವಿ. ಎಲ್. ಪಾಟೀಲ್.—ಮನುಷ್ಯರು ಇರುವ ಕಡೆಗಳಲ್ಲಿ ಇದು ಇರುತ್ತದೆ. ಮಿಸ್ ಯೂಸ್, ಕರಪ್ಷನ್ ಮತ್ತು ಲ್ಯಾಪ್ಸ್ ಆಗುವುದು ಏಕೆ, ಅದರ ಬಗ್ಗೆ ನನ್ನ ಅಂತಃಕರಣದಲ್ಲಿ ವಿಚಾರ, ಮಾಡಿ ನೋಡಿದೆ. ಮತ್ತು ಸ್ವಲ್ಪ ಯೋಚನೆ ಮಾಡಿ ನೋಡಿದೆ.

6-30 P.M.

ಇಂತಹ ತಪ್ಪುಗಳು ಸರಕಾರದಲ್ಲೇ ಆಗುತ್ತಿವೆ ಎನ್ನುವ ವಿಚಾರಗಳೂ ಸರಕಾರದ ಗಮನಕ್ಕೆ ಬಂದಿತ್ತು. ಇದರ ಜೊತೆಗೆ ಸುಮಾರು ಇಪ್ಪತ್ತೆರಡು ವರ್ಷಗಳಿಂದಲೂ ಇದರ ಗುರಿ ಏನು ಎನ್ನುವ ಪ್ರಶ್ನೆ ಅಧಿಕಾರದಲ್ಲಿರುವವರಲ್ಲಿ ಹಾಗೂ ಆಡಳಿತ ಯಂತ್ರದಲ್ಲಿ ಕಾಡುತ್ತಿದೆ. ಇದಕ್ಕಾಗಿ ಒಂದು ಸಮಿತಿಯನ್ನು ಮಾಡಬೇಕೆಂದಿದ್ದೇವೆ. ಇದರಲ್ಲಿ ಸದಸ್ಯರು, ತಾಲ್ಲೂಕು ಬೋರ್ಡುಗಳಲ್ಲಿರುವ ಸದಸ್ಯರು ಹಾಗೂ ಅಸೆಂಬ್ಲಿ ಮೆಂಬರುಗಳು ಮತ್ತು ಕೌನ್ಸಿಲ್ ಮೆಂಬರುಗಳು ಇವೆಲ್ಲರೂ ಇರುತ್ತಾರೆ. ಸರಕಾರದ ಲಕ್ಷವೂ ಕೂಡ ಸಾಧ್ಯವಾದಮಟ್ಟಿಗೂ ಅಪರಾಧಗಳನ್ನು ಕಡಿಮೆಮಾಡಬೇಕು ಎನ್ನುವುದೇ ಆಗಿದೆ ಮತ್ತು ಇವರನ್ನು ಯಾವ ರೀತಿ ಸುಧಾರಣೆ ಮಾಡಲು ಸಾಧ್ಯ ಎನ್ನುವುದನ್ನು ಯೋಚನೆ ಮಾಡುತ್ತಿದ್ದೇವೆ. ಇದಕ್ಕಾಗಿ ಇನ್ನು ಸ್ವಲ್ಪ ಕಾಲದಲ್ಲೇ ಇಂತಹ ಒಂದು ಕಮಿಟಿ ಸರಕಾರದವರೇ ಮಾಡಲು ಮುಂದೆ ಬಂದಿದ್ದಾರೆ. ಇದರಲ್ಲಿ ಅಸೆಂಬ್ಲಿಯ ಹಾಗೂ ಕೌನ್ಸಿಲ್‌ನ ಸದಸ್ಯರುಗಳೂ ಇರಲು ಅವಕಾಶ ಮಾಡಲಾಗುತ್ತದೆ. ಮತ್ತು ಸಮಾಜದಲ್ಲಿರುವ ಇತರ ಪ್ರತಿಷ್ಠಿತ

(ಶ್ರೀ ಡಿ. ರಾಜಗೋಪಾಲ್)

ಜನರೂ ಇರುತ್ತಾರೆ. ಪ್ರಜಾಪ್ರಭುತ್ವದಲ್ಲಿ ಇಂತಹ ಎಲ್ಲ ಜನರ ಪ್ರತಿನಿಧಿಗಳೂ ಇರುವುದರಿಂದ ಸರಕಾರ ಇವರ ಬಗ್ಗೆ ಸಂಪೂರ್ಣವಾಗಿ ವಿಚಾರ ಮಾಡಲು ಅವಕಾಶವಾಗುತ್ತದೆ. ಆದುದರಿಂದ ಮಾನ್ಯ ಸದಸ್ಯರು ಇಲ್ಲಿ ತಂದಿರುವ ರೆಸಲ್ಯೂಷನ್‌ನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ.—ಈ ಕಮಿಟಿಯಲ್ಲಿ ಹರಿಜನರೂ ಇರುತ್ತಾರೋ ?

ಶ್ರೀ ವಿ. ಎನ್. ಪಾಟೀಲ್.—ಈಗಾಗಲೆ ಸ್ಟೇಟು ಲೆವಲ್ ಕಮಿಟಿಯೊಳಗೆ ಹರಿಜನರು ಹಾಗೂ ಅವರ ಪರವಾಗಿ ಆಸಕ್ತಿಯುಳ್ಳವರೂ ಇರುತ್ತಾರೆ. ಕೇವಲ ಹರಿಜನರನ್ನೇ ಇಡುತ್ತಿಲ್ಲ. ಯಾರಿಗೆ ಹೆಚ್ಚು ಆಸಕ್ತಿ ಇದೆ ಅಂತಹವರೆಲ್ಲರೂ ಇರುತ್ತಾರೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಕಮಿಟಿಯೊಳಗೆ ಸುಮಾರು ಎಷ್ಟು ಮಂದಿ ಇರಬಹುದು ?

ಶ್ರೀ ವಿ. ಎನ್. ಪಾಟೀಲ್.—ಸುಮಾರು 10-12 ಜನರು ಇರಬಹುದು. ಕಮಿಟಿ ಮಾಡಿದ ಮೇಲೆ ಇದರ ವಿವರಗಳು ಗೊತ್ತಾಗುತ್ತದೆ. ಈಗ ಕರಾರುವಾಕ್ಕಾಗಿ ಹೇಳಲು ಕಷ್ಟ.

ಉಪಸಭಾಪತಿಯವರು.—ಸಭೆ ಈಗ ಎದ್ದು ನಾಳೆ 2-30 ಗಂಟೆಗೆ ಮತ್ತೆ ಸೇರುತ್ತದೆ.

The House adjourned Thirty-five Minutes pa t Six of the Clock to meet again at Thirty Minutes past Two of the Clock on Tuesday, the 2nd September 1969.

WD 13591—GPB—600—13-3-1970

ಮೈಸೂರು ವಿಧಾನ ಪರಿಷತ್ತು

MYSORE LEGISLATIVE COUNCIL

Monday, the 2nd September 1969

The House met in the Council Chamber, Vidhana Soudha, Bangalore, at Thirty Minutes past Two of the Clock.

MR. DEPUTY CHAIRMAN (SRI M. MADIAH) in the Chair.

STARRED QUESTIONS

(to which oral answers were given)

Scrapping of the Foodgrain Control Orders

9. Sri A. K. SUBBAIAH (Graduates' Constituency).—

Will the Minister for Food and Civil Supplies be pleased to state :—

(*a*) whether there is any likelihood of scrapping of all the foodgrain control orders as reported in the Press ;

(*b*) if so, the other arrangement, the Government has thought of, to collect foodgrains for the purpose of maintaining buffer stock ?

Sri B. VITHALDAS SHETTY (Minister of State for Food and Civil Supplies).—

(*a*) Government have not yet taken a final decision in regard to the food Policy for the crop year 1969-70.

(*b*) Does not arise in view of reply to clause (*a*) above.

ಶ್ರೀ ಎ. ಕೆ. ಸುಬ್ಬಯ್ಯ.—ಸ್ವಾಮಿ, ಕೇಂದ್ರ ಸರ್ಕಾರದವರು ಕೈಗೊಂಡ ಆಹಾರ ನೀತಿ ಹಿನ್ನಲೆಯಲ್ಲಿ, ರಾಜ್ಯ ಸರ್ಕಾರದ ಆಹಾರ ನೀತಿಯಲ್ಲಿ ಏನಾದರೂ ಮೂಲಭೂತವಾದ ಬದಲಾವಣೆ ಮಾಡುವುದಕ್ಕೆ ಸರ್ಕಾರ ವಿಚಾರಣೆಮಾಡುತ್ತಿದೆಯೆ ?

† ಶ್ರೀ ಬಿ. ವಿಠ್ಠಲದಾಸಶೆಟ್ಟಿ.—ಸರ್ಕಾರ ಈಗಿನ ಪ್ರಕೃತ ಪರಿಸ್ಥಿತಿಯಲ್ಲಿ ಏನು ಬದಲಾವಣೆ ಮಾಡುವುದಕ್ಕೆ ಸಾಧ್ಯ ಉಂಟು ಎನ್ನುವುದನ್ನು ಪರಿಶೀಲಿಸುತ್ತಾ ಇದೆ.

---

† Indicates that the remarks or speeches have not been revised by the member concerned

Sri G. V. GOWDA.—Is it not a fact that many food control orders are found to be defective orders by the several Courts ?

Sri B. VITTALDAS SHETTY.—Not many, a few of these orders were chal enged in t e High Court and they are being examined.

Sri A. K. SUBBAIAH.—May I know whether the Government has decided to purchase such of the foodgrains which are voluntarily sold to the Government at the minimum support price ?

Sri B. VITTALDAS SHETTY.—By the end of this month or during the first week of next month, we will be deciding the policy of the Government regarding food procurement.

Sri A. K. SUBBAIAH.—May I know whether it is a fact that the High Court has held that the levy order is invalid ?

Sri B. VITTALDAS SHETTY.—No. It is not the position. The High Court has held that the price must be fixed, taking into consideration the market value at the time. That aspect also is being examined.

ಶ್ರೀ ಜಿ. ವಿ. ಆಂಜನಪ್ಪ.—ಸ್ವಾಮಿ, ಆಹಾರಧಾನ್ಯಗಳ ಹತೋಟಿಗೆ ಸಂಬಂಧಿಸಿದ ಎಲ್ಲ ಆದೇಶಗಳನ್ನೂ ತರುವ ಬದಲು ಸರ್ಕಾರದವರೇ ಓಪನ್ ಮಾರ್ಕೆಟ್‌ನಿಂದ ಆಹಾರ ಧಾನ್ಯಗಳನ್ನು ಕೊಂಡುಕೊಳ್ಳುವುದಕ್ಕೆ ಏಕೆ ಕಾರ್ಯಕ್ರಮ ಕೈಗೊಳ್ಳಬಾರದು ?

ಶ್ರೀ ಬಿ. ವಿಠ್ಠಲದಾಸಶೆಟ್ಟಿ.—ಈ ವಿಚಾರದಲ್ಲಿ ಮಾನ್ಯ ಸದಸ್ಯರು ಹೇಳಿದಂಥ ಸೂಚನೆಯನ್ನು ಸರ್ಕಾರ ಪರಿಶೀಲಿಸುತ್ತಾ ಇದೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಆಹಾರಧಾನ್ಯಗಳ ಕೊರತೆ ಸ್ವಲ್ಪ ಭಾಗ ಇದ್ದು ಸರಕಾರ ವಿಧಿಸಿರುವ ನಿಯಂತ್ರಣ ಆಜ್ಞೆ ಪರಿಣಾಮವಾಗಿ ಕೃತಕ ಅಭಾವವುಂಟಾಗಿದೆ ಎಂಬುದು ಗಮನಕ್ಕೆ ಬಂದಿದೆಯೇ

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಆಹಾರ ಅಭಾವ ಬಹಳ ಕಡಮೆ ಇದೆ ಎಂಬುದನ್ನು ಒಪ್ಪಿಕೊಳ್ಳಬಹುದು. ಆದರೆ ಮಾರ್ಕೆಟ್ ಧಾರಣೆಯನ್ನು ಹತೋಟಿಯಲ್ಲಿಡುವ ಉದ್ದೇಶದಿಂದ ನಾವು ರೇಷನ್ ಪದ್ಧತಿ ಮತ್ತು ಪ್ರೊಕ್ಯೂರ್‌ಮೆಂಟ್ ವಿಚಾರ ಪರಿಶೀಲಿಸಬೇಕಾಗಿದೆ.

ಶ್ರೀ ಕೆ. ಟಿ. ಶಾಮಯ್ಯಗೌಡ.—ಬೆಳೆಯುವ ಖರ್ಚನ್ನು ಗಮನಿಸಿ ಆಹಾರ ಪದಾರ್ಥಗಳ ಬೆಲೆ ನಿಗದಿಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ತಮ್ಮ ಸೂಚನೆಯನ್ನು ಸರಕಾರದ ಧೋರಣೆಯನ್ನು ಪರಿಶೀಲಿಸುವಾಗ ಗಮನಿಸಲಾಗುವುದು.

ಶ್ರೀ ಜಿ. ವಿ. ಗೌಡ.—ಈಗ ಆಹಾರ ನೀತಿ ಬೆಳೆಯುವವರ ಮತ್ತು ಉಪಯೋಗ ಮಾಡುವವರ ಇಬ್ಬರ ಹಿತವನ್ನೂ ರಕ್ಷಿಸುವುದಿಲ್ಲವೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ವಿಠ್ಠಲದಾಸ ಶೆಟ್ಟಿ.—ಅದನ್ನು ಸರಕಾರ ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಜಿ. ವಿ. ಆಂಜನಪ್ಪ.—ಈಗೇನು ದೊಡ್ಡ ಸಿಬ್ಬಂದಿ ಇದೆ ಅದಕ್ಕೆ ಲಕ್ಷಗಟ್ಟಲೆ ಖರ್ಚುಮಾಡುವುದಕ್ಕೆ ಬದಲಾಗಿ ಆಹಾರಧಾನ್ಯಗಳ ಮಾರಾಟ ಮುಂತಾದ ಕೆಲಸವನ್ನು ಫುಡ್ ಕಾರ್ಪೊರೇಷನ್ನಿಗೇಕೆ ವಹಿಸಬಾರದು ?

ಶ್ರೀ ಬಿ. ವಿಠ್ಠಲದಾಸಶೆಟ್ಟಿ.—ಈಗ ಇರುವ ಬಹಳಷ್ಟು ಜನರನ್ನು ಸುಮಾರು 800 ಜನರನ್ನು ಈ ಖಾತೆಯಿಂದ ಇಲ್ಲಿ ಅಗತ್ಯವಿಲ್ಲವೆಂದು ಬೇರೆ ಖಾತೆಗಳಿಗೆ ವರ್ಗಮಾಡಲಾಗಿದೆ. ಮತ್ತು ಹಲವರಿಗೆ ಕೆಲಸವಿಲ್ಲದೆ ಹೋಗುವ ಪರಿಸ್ಥಿತಿ ಇದೆ. ಇದು ಒಂದು ದೊಡ್ಡ ಗೊಂದಲವಾಗಿದೆ. ಮಾನ್ಯ ಸದಸ್ಯರು ಸಹಕರಿಸಿದರೆ ಅವರಿಗೆ ಒಂದು ಕಡೆ ಕೆಲಸ ಕೊಟ್ಟು ಆಹಾರ ಇಲಾಖೆಯಲ್ಲಿ ಸಿಬ್ಬಂದಿ ಕಡಮೆಮಾಡಬಹುದು. ಇಲ್ಲದಿದ್ದರೆ ಕಷ್ಟ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಲೆವಿ ಮೂಲಕ ಧಾನ್ಯವನ್ನು ರೈತರಿಂದ ವಸೂಲು ಮಾಡುವುದಕ್ಕೆ ಬದಲಾಗಿ ಓಪನ್ ಮಾರ್ಕೆಟ್ಟಿನಲ್ಲಿ ಕೊಳ್ಳಲು ಸರಕಾರಕ್ಕೆ ತೊಂದರೆಯೇನು ?

ಶ್ರೀ ಬಿ. ವಿಠ್ಠಲದಾಸ್ ಶೆಟ್ಟಿ.—ಓಪನ್ ಮಾರ್ಕೆಟ್ಟಿನಲ್ಲಿ ಪಡೆಯುವುದಕ್ಕೆ ತೊಂದರೆಯಿಲ್ಲ. ಹಾಗೆ ಪಡೆದ ದವಸಧಾನ್ಯವನ್ನು ಬಳಕೆದಾರರಿಗೆ ಸ್ವಲ್ಪ ಹೆಚ್ಚು ದರದಲ್ಲಿ ಕೊಡಬೇಕಾಗುವುದು. ಈಗ ಬೆಂಗಳೂರು, ಕೆ. ಜಿ. ಎಫ್. ಮುಂತಾದ ಸಿಟಿಗಳಲ್ಲಿ ಬಡವರು, ಕೂಲಿಯವರು ಗೊಂದಲ ಮಾಡುವುದು ಜಾಸ್ತಿಯಾಗಿದೆ.

ಶ್ರೀ ಕೆ. ಟಿ. ಶಾಮಯ್ಯಗೌಡ.—ಸೆಪ್ಟೆಂಬರ್—ಅಕ್ಟೋಬರ್ ವೇಳೆಗೆ ಬತ್ತ ಬರುವುದು. ಸರಕಾರದವರು ಇನ್ನೂ ತೀರ್ಮಾನಮಾಡದಿದ್ದರೆ ಕೊಂಡು ಹಂಚಲು ತೊಂದರೆಯಾಗುವುದಿಲ್ಲವೇ ? ಬೆಳೆ ಬರುವುದರೊಳಗಾಗಿ ಸರಕಾರ ಒಂದು ತೀರ್ಮಾನ ಮಾಡದಿದ್ದರೆ ತೊಂದರೆಯಾಗುವುದಿಲ್ಲವೇ ?

ಶ್ರೀ ಬಿ. ವಿಠ್ಠಲದಾಸಶೆಟ್ಟಿ.—ಈಗ ಫುಡ್ ಕಾರ್ಪೊರೇಷನ್ನಿಗೆ ವಹಿಸಬೇಕೇ ಸರಕಾರವೇ ನಡೆಸಬೇಕೇ ಎಂಬುದು ಸರಕಾರದ ಮುಂದಿದೆ. ಕೋ-ಆಪರೇಟಿವ್ಸ್ ಈಗ ಆಹಾರಧಾನ್ಯಗಳನ್ನು ಸಂಗ್ರಹಿಸುತ್ತಿವೆ. ಅವು ಸರಕಾರದ ಒಂದು ಭಾಗ ಅವುಗಳನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ನಾವು ಯಾವ ಧೋರಣೆ ಅನುಸರಿಸಿದರೂ ರೈತರಿಗೇನೂ ತೊಂದರೆಯಿಲ್ಲ. ಈ ವಿಚಾರದಲ್ಲಿ ಯಾವ ಧೋರಣೆ ಅನುಸರಿಸಬೇಕೆಂಬುದು ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟ ವಿಷಯವಾಗಿದೆ. ಕೇಂದ್ರ ಸರಕಾರ 27ನೆಯ ತಾರೀಖು ಆಹಾರ ಮಂತ್ರಿಗಳ ಮತ್ತು ಮುಖ್ಯ ಮಂತ್ರಿಗಳ ಸಮ್ಮೇಳನ ಕರೆದಿದೆ. ಆ ನಂತರ ಸರಕಾರದ ಧೋರಣೆ ಒಂದೆರಡು ವಾರಗಳಲ್ಲಿ ಬಹಿರಂಗವಾಗುವುದು.

ಶ್ರೀ ಜಿ. ವಿ. ಗೌಡ.—ಸರ್ಕಾರ ಪ್ರೈಸನ್ನು ಸಬ್ಸಿಡೈಸ್ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಿ. ವಿಠ್ಠಲದಾಸ್ ಶೆಟ್ಟಿ.—ಆ ರೀತಿ ಸರಕಾರದ ಕಡೆಯಿಂದ ಸಬ್ಸಿಡೈಸ್ ಮಾಡುವಂತಹ ಆಲೋಚನೆ ಇಲ್ಲ, ಅಭಾವ ಬಹಳಷ್ಟು ಇರುವುದರಿಂದ ಅದು ಅಸಾಧ್ಯ ಎಂದು ಹೇಳಲಿಕ್ಕೆ ವಿಷಾದ ಪಡುತ್ತೇನೆ.

ಶ್ರೀ ಜಿ. ವಿ. ಅಂಜನಪ್ಪ.—ಈಗಿರತಕ್ಕ ಸರ್ಕಾರದ ಆಹಾರಧಾನ್ಯದ ಎತ್ತುವಳಿ ಕ್ರಮದ ಲೋಪದೋಷದಿಂದ ರೈತರಿಗೆ ಅನ್ಯಾಯವಾಗುವುದು ಅಷ್ಟೇ ಅಲ್ಲ ಅನೇಕ ಸಂದರ್ಭಗಳಲ್ಲಿ ಆ ರೀತಿ ಎತ್ತುವಳಿ ಮಾಡಿದ ದವಸಧಾನ್ಯ ಲೋಪವಾಗಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಅಲ್ಲಲ್ಲಿ ಕೆಲವು ಸರ್ಕಾರದ ಗಮನಕ್ಕೆ ಬಂದಿದೆ. ಅದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಸರ್ಕಾರದವರು ರೈತನ ಹತ್ತಿರ ಕೊಂಡುಕೊಂಡು ಬಳಕೆದಾರರಿಗೆ ಸರಬರಾಯಿ ಮಾಡುತ್ತಾ ಇರುವಾಗ ಎಷ್ಟು ಲಾಭಾಂಶ ಪಡೆಯುತ್ತಾ ಇದ್ದಾರೆ ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಪ್ರತ್ಯೇಕ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ರೈತನಿಗೆ ಕಡಿಮೆ ಬೆಲೆ ಕೊಟ್ಟು ಬಳಕೆದಾರರಿಗೆ ಜಾಸ್ತಿ ಬೆಲೆಗೆ ಮಾರಾಟ ಮಾಡುತ್ತಾ ಇದ್ದರೂ ಕೂಡ ಖರ್ಚುವೆಚ್ಚಗಳು ನೌಕರ ಮಾನೇರ ಸಂಬಳಸಾರಿಗೆ ಬಹಳಷ್ಟು ತೆರುತ್ತಾಇರುವುದು ಸರ್ಕಾರ ಮನಗಂಡಿದೆಯೇ ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಇಲ್ಲ. ಸರ್ಕಾರದವರು ಇದನ್ನು ಬಹಳಷ್ಟು ಪರಿಶೀಲನೆ ಮಾಡಿದ್ದಾರೆ. ಫುಡ್ ಡಿಪಾರ್ಟ್‌ಮೆಂಟ್ ನೋ ಪ್ರಾಫಿಟ್ ನೋ ಲಾಸ್ ಆಧಾರದಮೇಲೆ ನಡೆಯುತ್ತಾ ಇರುವುದರಿಂದ ಎಷ್ಟು ಬೇಕೋ ಅಷ್ಟನ್ನು ಮಾತ್ರ ಹಿಡಿದುಕೊಂಡು ಬಾಕಿದನ್ನು ಬಳಕೆದಾರನಿಗೆ ಕೊಡುತ್ತೇವೆ.

ಶ್ರೀ ಕೆ. ಎಸ್. ಚನ್ನಪ್ಪ.—ಮಿಲ್ಲಿಗೆ ಬರತಕ್ಕ ಬತ್ತದ ಮೂಟೆಗಳನ್ನು ಪೋಲೀಸನವರು ಹೋಗಿ ಚಿಂತಾಮಣಿಯಲ್ಲಿ ನಿನ್ನೆ ಭಾನುವಾರದ ದಿವಸ ಅಟ್ಯಾಚ್‌ಮೆಂಟ್ ಮಾಡಿರುವುದು ಗೊತ್ತೇ ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಇಲ್ಲಿಯತನಕ ನಮ್ಮ ಅವಗಾಹನೆಗೆ ಬಂದಿಲ್ಲ. ಪೋಲೀಸ್‌ನವರು ಹಿಡಿದಿದ್ದರೆ ಅದನ್ನು ಸರ್ಕಾರದವರ ಅವಗಾಹನೆಗೆ ತಂದರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ. ಎಸ್. ಚನ್ನಪ್ಪ.—300 ಬತ್ತದ ಮೂಟೆಗಳನ್ನು ಅಟ್ಯಾಚ್‌ಮೆಂಟ್ ಮಾಡಿದ್ದಾರೆ ಅದನ್ನು ಪರಿಶೀಲಿಸುತ್ತೀರಾ ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಫುಡ್‌ಸೆಲ್‌ನವರೇನಾದರೂ ಮಾಡಿದ್ದರೂ ಮಾಡಿರಬಹುದು. ಕಾನೂನು ಬಾಹಿರವಾಗಿದ್ದರೇ ಆ ರೀತಿ ಮಾಡುವುದು, ಇಲ್ಲದೇ ಇದ್ದರೆ ಮಾಡುವುದಿಲ್ಲ. ಡಿಕ್ಲರೇಷನ್ ವಗೈರೆ ಇಲ್ಲದೇ ಆ ರೀತಿ ಮಾಡಿರಬಹುದು, ಅದು ಅಲ್ಲ ಅಂತ ಹೇಳಿ ತಾವು ತಿಳಿಸುವುದಾದರೆ ನಾನು ಪರಿಶೀಲಿಸುತ್ತೇನೆ.

ಶ್ರೀ ಎಂ. ಎಲ್. ವಾಸುದೇವಮೂರ್ತಿ.—ನೋ ಪ್ರಾಫಿಟ್ ನೋ ಲಾಸ್ ಮೇಲೆ ನಡೆ ಸುತ್ತೇವೆ ಎಂದು ಹೇಳಿದಿರಿ, ಆದರೂ ಕೂಡ ಫುಡ್ ಡಿಪಾರ್ಟ್‌ಮೆಂಟಿನಿಂದ ಸರ್ಕಾರಕ್ಕೆ ನಷ್ಟ ವಾಗುತ್ತಾ ಇಲ್ಲವೇ ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಯಾವುದೇ ಲುಕ್ಸಾನೂ ಇಲ್ಲ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಈ ಆಹಾರ ಧಾನ್ಯಗಳ ಹತ್ತೋಟಿಯಿಂದ ಕೆಲವು ಧಾನ್ಯಗಳನ್ನು ಸಂಗ್ರಹ ಮಾಡಿ ಅದು ಉಪಯೋಗಕ್ಕೆ ಅನರ್ಹ ಎಂದು ಹೇಳಿದಮೇಲೂ ಸಹ ಅದನ್ನು ಕಡಿಮೆ ದರದಲ್ಲಿ ಮಾರಾಟ ಮಾಡಿ ಲಕ್ಷಾಂತರ ರೂಪಾಯಿ ಸರ್ಕಾರಕ್ಕೆ ಲುಕ್ಸಾನಾಗಿರು ವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಯಾವ ಆಹಾರ ಧಾನ್ಯ ಕೆಟ್ಟುಹೋಗಿದೆ. ಅದನ್ನು ಉಪಯೋಗ ಮಾಡಲ್ಲಿಕ್ಕೆ ಸಾಧ್ಯವಿಲ್ಲ ಎಂದು ಕಂಡುಬಂದಿದೆ ಅಂತಹ ಆಹಾರಧಾನ್ಯಗಳನ್ನು ಕ್ಯಾಟಲ್‌ಫೀಡ್‌ಗಾಗಿ ಕೊಟ್ಟು ಬಾಕಿ ಉಳಿದದ್ದನ್ನು ಆಕ್ಷನ್ ಮಾಡಿ ಅದನ್ನು ಉಪಯೋಗ ಮಾಡಲೇ ಕೂಡದು ಎಂದು ಆಜ್ಞೆ ಮಾಡಿದ್ದೇವೆ. ವಿಶೇಷವಾಗೇನೂ ನಷ್ಟವಾಗಿಲ್ಲ. ಅದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಇಷ್ಟೇ ನಷ್ಟವಾಗಿದೆ ಅಂತ ತಿಳಿಸುತ್ತೇನೆ.

ಶ್ರೀ ಎಚ್. ಶಿವಾನಂದಸ್ವಾಮಿ.—ತಾವು ಕೊಟ್ಟಂಥ ಧಾನ್ಯಗಳನ್ನು ಪೇಟೆಯಲ್ಲಿ ಮಾರಾಟ ಮಾಡುತ್ತಿರುವುದಾದರೂ ತಮ್ಮ ಗಮನಕ್ಕೆ ಬಂದಿದೆಯೇ? ತಮ್ಮ ಸೊಸೈಟಿಗಳಿಗೆ ತೆಗೆದು ಕೊಂಡು ಹೋಗಿ ಪುನಃ ಮಿಕ್ಸ್ ಮಾಡಿ ಮಾರಾಟವಾಡುತ್ತಿರುವುದು ಗೊತ್ತೇ ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ನಮ್ಮ ಗಮನಕ್ಕೆ ಬರಲಿಲ್ಲ. ದಯವಿಟ್ಟು ಎಲ್ಲಿ ಆ ರೀತಿ ಆಗಿದೆ ಎಂಬುದನ್ನು ತಿಳಿಸಿ, 24 ಗಂಟೆಯೊಳಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ತಾವೇನು ಮನುಷ್ಯರಿಗೆ ಉಪಯೋಗ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬ ಆಹಾರಧಾನ್ಯಗಳನ್ನು ಅಂದರೆ ಕೆಟ್ಟುಹೋದ ಧಾನ್ಯಗಳನ್ನು ಹೊರಗಡೆಯವರಿಗೆ ಕೊಡಲಾಯಿತೆಂದು ಹೇಳುತ್ತಿದ್ದೀರೋ ಅದು ಒಂದು ಕಾಳು ಹೊರಕ್ಕೆ ಹೋಗಲಿಲ್ಲ. ಅದೆಲ್ಲಾ ಇಲ್ಲೇ ಮಾರಾಟವಾಗುತ್ತಿದೆ. ಅದನ್ನಾದರೂ ತನಿಖೆಮಾಡುವಂತೆ ಆಜ್ಞೆಮಾಡುತ್ತೀರಾ ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಆ ವಿಚಾರ ನಮ್ಮ ಗಮನಕ್ಕೆ ಇಲ್ಲಿಯವರೆಗೂ ಬಂದಿಲ್ಲ. ನಾವು ಹಾಗೆ ಕೆಟ್ಟುಹೋಗಿದ್ದಂಥ ಆಹಾರ ಸಾಮಗ್ರಿಗಳನ್ನು ಕೇರಳದವರಿಗೆ ಇನ್ನೂ ಬೇರೆ ಬೇರೆ ರಾಜ್ಯ ಗಳವರಿಗೆ ಜಾನುವಾರುಗಳಿಗೆ ಉಪಯೋಗಮಾಡಲು ಮಾರಾಟ ಮಾಡಿದ್ದೇವೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ತಾವು ಹಾಗೆ ಮಾರಾಟ ಮಾಡಿದ ಒಂದು ಕಾಳೂ ಹೊರಗಡೆಗೆ ಹೋಗಿಲ್ಲ. ಅದನ್ನು ಇಲ್ಲೇ ಒಳ್ಳೆಯ ಧಾನ್ಯದಲ್ಲಿ ಮಿಕ್ಸ್‌ಮಾಡಿ ಮಾರಾಟ ಮಾಡುತ್ತಿದ್ದಾರೆ. ಅದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri B. VITHALDAS SETTY.—If you can give me specific complaint where exactly it is done, I can take action.

ಶ್ರೀ ಎ. ಎಚ್. ಶಿವಾನಂದ ಸ್ವಾಮಿ.—ತಾವು ಮಾರಾಟಮಾಡಿದಂಥ ಧಾನ್ಯದಲ್ಲಿ ಒಂದು ಕಾಳೂ ಹೊರಗಡೆಗೆ ಹೋಗಲಿಲ್ಲ ಎಂಬುದಾಗಿ ನಾನು ತಮಗೆ ಸ್ಪೇರ್ ಮಾಡಿ ಹೇಳುತ್ತೇನೆ. ಇಂಥ ಮಾರಾಟಗಾರರಮೇಲೆ ನಿಗಾ ಇಟ್ಟು ಅವರು ಮಾರಾಟ ಮಾಡದಂತೆ ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವಿಠ್ಠಲದಾಸ ಶೆಟ್ಟಿ.—ತಾವು ನಾವು ಮಾರಾಟ ಮಾಡಿದ ಧಾನ್ಯದಲ್ಲಿ ಒಂದು ಕಾಳು ಇಲ್ಲಿ ಮಿಕ್ಸಾಗಿದೆ ಎಂಬುವನ್ನು ತೋರಿಸಿಕೊಟ್ಟರೆ ನಾನು ಕ್ರಮಕ್ಕೈಗೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಸರ್ಕಾರದವರು ಹೀಗೆ ಅನುಚಿತವಾದ ಮನುಷ್ಯನ ಉಪಯೋಗಕ್ಕೆ ಬಾರದ ಧಾನ್ಯಗಳನ್ನು ಮಾರಾಟ ಮಾಡುವಾಗ ನನಗೆ ಒಂದು ಸೂಚನೆಯನ್ನು ಕೊಡುವುದಾದರೆ ನಾನು ಅಂಥ ಕೇಸುಗಳನ್ನು ತಮ್ಮ ಗಮನಕ್ಕೆ ತರುತ್ತೇನೆ.

Sri B. VITHALDAS SETTY.—I will certainly enlighten the hon. Member whenever it is done.

ಶ್ರೀ ಕೆ. ಟಿ. ರಾಮಯ್ಯ ಗೌಡ.—ಸರ್ಕಾರದವರು ಆಹಾರಧಾನ್ಯಗಳನ್ನು ಸಂಗ್ರಹಣೆ ಮಾಡತಕ್ಕ ದರಕ್ಕೂ ಮತ್ತು ಅದನ್ನು ಬಳಕೆದಾರರಿಗೆ ಮಾರಾಟ ಮಾಡತಕ್ಕ ಧಾರಣೆಗೂ ಬಹಳ

ಏರುಪೇರಿದೆ. ಅವರೆ ಕೆಲವು ಕಡೆ ಬೆಳೆಯುತಕ್ಕವರೂ ತಪ್ಪು ನಡವಳಿಕೆಗಳನ್ನು ಮಾಡುತ್ತಾರೆ. ಕಾಳನ್ನು ಸರಿಯಾಗಿ ತೂರುವುದಿಲ್ಲ, ಒಣಗಿಸುವುದಿಲ್ಲ. ಹೀಗೆಲ್ಲಾ ಮಾಡುತ್ತಾರೆ. ಇದರಿಂದ ಇಲಾಖೆಗೂ ನಷ್ಟ ಇದಕ್ಕೆ ಬದಲಾಗಿ ಫುಡ್ ಕಾರ್ಪೊರೇಷನ್ನಿನವರಿಗೆ ಇದನ್ನು ಏಕೆ ವಹಿಸಬಾರದು ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಮೊದಲು ಇದನ್ನು ಅವರಿಗೆ ಕೊಡಲಾಗಿತ್ತು. ಆಗ ಅವರು ಸರಿಯಾಗಿ ನಡೆಸಲಿಲ್ಲ. ಅದಕ್ಕಾಗಿ ಮತ್ತೆ ಸರ್ಕಾರದವರು ಇದಕ್ಕೆ ಕೈಹಾಕಬೇಕಾಯಿತು. ಮೇಲಾಗಿ ಫುಡ್‌ಕಾರ್ಪೊರೇಷನ್ನಿನವರು ಧಾನ್ಯಗಳ ವ್ಯಾಪಾರವನ್ನು ವರ್ತಕರ ಮೂಲಕ ಮಾಡುತ್ತಾರೆ. ನಾವು ನಮ್ಮದೇ ಆದ ಸೊಸೈಟಿಗಳ ಮೂಲಕ ಮಾಡುತ್ತಿದ್ದೇವೆ ಇಲ್ಲಿ ಏನಾದರೂ ತಪ್ಪುಗಳನ್ನು ಮಾಡಿದರೆ ನಮ್ಮ ಅಧಿಕಾರಿಗಳಿರುತ್ತಾರೆ. ಅವರ ಮೂಲಕ ಸೂಕ್ತ ಕ್ರಮ ಕೈಗೊಳ್ಳಲು ನಮಗೊಂದು ಅವಕಾಶವಿರುತ್ತದೆ. ಹಿಂದೆ ಇದೇ ಫುಡ್‌ಕಾರ್ಪೊರೇಷನ್ ಅಷ್ಟು ಪರಿಣಾಮಕಾರಿಯಾಗಿ ಕೆಲಸಮಾಡಲಿಲ್ಲ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಈ ಇಲಾಖೆಯ ಮೂಲಕ ಬಡಬಗ್ಗರಿಗೆ ಬಟ್ಟೆ ಮತ್ತು ಔಷಧಿಗಳನ್ನೂ ಹಂಚುವುದಕ್ಕೆ ವ್ಯವಸ್ಥೆಮಾಡುತ್ತೀರಾ ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಅದನ್ನು ಮುಂದೆ ನೋಡೋಣ. ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಲಕ್ಷಾಂತರ ಬಡವರ ಮಕ್ಕಳು ಅದರಲ್ಲಿಯೂ ಹರಿಜನ ಮಕ್ಕಳು ಅನೇಕರು ಬೆತ್ತಲೆಯಲ್ಲಿ ಇದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೌಪೀನ ಹಾಕಿಕೊಳ್ಳುವ ಸ್ಥಿತಿಯಲ್ಲಿ ಕೂಡ ಇಲ್ಲ. ಅಂತಹವರಿಗೆ ಏನು ಮಾಡುತ್ತೀರಿ ?

ಶ್ರೀ ಬಿ. ವಿಠ್ಠಲದಾಸಶೆಟ್ಟಿ.—ಇದು ಆರ್ಥಿಕ ಪ್ರಶ್ನೆ. ಸರ್ಕಾರ ಧರ್ಮಾರ್ಥವಾಗಿ ಹಂಚುವ ಪರಿಸ್ಥಿತಿಯಲ್ಲಿಲ್ಲ. ಕೆಲವು ಕ್ವಾಲಿಟಿ ಬಟ್ಟೆಗಳನ್ನು ಕಂಟ್ರೋಲ್ ಮಾಡಿದ್ದೇವೆ. ಅದು ಬೇಕಾದಷ್ಟು ಸಿಗುತ್ತದೆ. ಅದರ ದರ ಬೇಕಾದಷ್ಟು ಜಾಸ್ತಿ ಇದೆ. ಅದನ್ನು ಅವರು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನೀವೂ ನಾವೂ ಒಡಗೂಡಿಕೊಂಡು ಅವರಿಗೆ ಸಹಾಯಮಾಡೋಣ.

ಶ್ರೀ ಕೆ. ಚನ್ನಬಸವನಗೌಡ.—ಈಗ ಕನ್‌ಸ್ಯೂಮರ್ಸ್ ಪ್ರೈಸ್ ಏನಿದೆಯೋ ಅದು ಒಂದು ಕ್ವಿಂಟಾಲಿಗೆ 65 ರೂಪಾಯಿಗಳಿಗಿಂತ ಜಾಸ್ತಿ ಆಗಬಾರದೆಂದು ಒಂದು ನಿರ್ಣಯ ಮಾಡುತ್ತೀರಾ ? ಸುಮಾರು 25 ರೂಪಾಯಿಗಳು ಇನ್‌ಸಿಡೆಂಟಲ್ ಚಾರ್ಜಸ್ ಬರುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೋ ?

ಶ್ರೀ ಬಿ. ವಿಠ್ಠಲದಾಸಶೆಟ್ಟಿ.—ಮಾನ್ಯ ಸದಸ್ಯರಿಗೆ ಕಾಸ್ಟಿಂಗ್ ಷೀಟ್ ಕೊಡುತ್ತೇವೆ. ಇನ್ನೇನಾದರೂ ಮಾನ್ಯ ಸದಸ್ಯರು ಸಲಹೆ ಕೊಟ್ಟರೆ ಅದನ್ನು ಪರಿಶೀಲಿಸುತ್ತೇವೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ದಾವಣಗೆರೆ ತಾಲ್ಲೂಕಿನಲ್ಲಿ ಆಹಾರಧಾನ್ಯಗಳನ್ನು ಪ್ರೊಕ್ಯೂರ್ ಮಾಡಿ ಕೇವಲ ಒಂದು ರೂಪಾಯಿ ಲಾಭದಲ್ಲಿ ಅವರು ಹೇಳಿದ ಸ್ಥಳಕ್ಕೆ ಮುಟ್ಟಿಸುವುದಾದರೆ ಅಂತಹ ಸಂಸ್ಥೆ ಅಥವಾ ವ್ಯಕ್ತಿಗೆ ಅದನ್ನು ವಹಿಸುತ್ತೀರಾ ?

ಶ್ರೀ ಬಿ. ವಿಠ್ಠಲದಾಸಶೆಟ್ಟಿ.—ಜನತೆಯ ಹಿತರಕ್ಷಣೆಯನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು. ಬರೀ ಲಾಭದೃಷ್ಟಿಯಲ್ಲಿ ಮಾಡುವುದಕ್ಕಾಗುವುದಿಲ್ಲ. ಕೆಲವು ವಿಚಾರಗಳಲ್ಲಿ ಕೆಲವರು ವೈಯುಕ್ತಕವಾಗಿ ಸ್ವಲ್ಪ ಲಾಭ ತೋರಿಸಿ ಮಾಡುವುದಕ್ಕೆ ಸಾಧ್ಯವಿದೆ. ಆದ್ದರಿಂದ ಇಂಥಾದ್ದನ್ನು ಬೇರೆ ವ್ಯಕ್ತಿಗೆ ಕೊಡಬೇಕೋ ಅಥವಾ ಸರ್ಕಾರವೇ ಮಾಡಬೇಕೊ ಎನ್ನುವುದು ತಮಗೇ ಗೊತ್ತಿದೆ. ಅದರ ಬಗ್ಗೆ ನೇರವಾದ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

Banasandra-Hassan-Mangalore Iron Ore Road

31. SRI M. L. VASUDEVA MURTHY (Nominated).—

Will the Minister for Public Works be pleased to state:—

will the Minister for Public Works refer to the observations made by the Public Accounts Committee of this Assembly in paras 282, 283

(SRI M. L. VASUDEVA MURTHY)

of their fourth Report (March 1969) and state what action Government have taken on these observations, *viz.*,

(i) Iron Ore trade being a Government of India monopoly, the full cost incurred in making this road fit for Ore Transport should be the responsibility of the Central Government has it been made known to them ;

(ii) since variations and alterations on forming this road were at the instance of the Central Government how did the State Government proceed with the execution of the work without taking a firm commitment from the Central Government ;

(iii) the Central Government have not paid anything except a nominal sum of Rs. 44 lakhs against a spending of Rs. 450 lakhs, how the State Government proposes to collect the balance amount due ?

Sri BASAVARAJ MAGAVI (Deputy Minister for Public Works).—

(i) No; however, this will be examined.

(ii) The work was proceeded with on the basis of the discussions the Union Ministers and the Government of India Officers had with the representatives of the State Government, in view of the urgency expressed by them.

(iii) The Government of India have agreed to pay Rs. 79.00 lakhs *i.e.*, 50 per cent of the original estimate of Rs. 158.00 lakhs. The matter of obtaining further Central grant, is being pursued with Government of India.

ಶ್ರೀ ಎಂ. ಎಲ್. ವಾಸುದೇವಮೂರ್ತಿ.—ಇಂಡಿಯಾ ಸರ್ಕಾರದಿಂದ ಆದೇಶ ಬಂತು. ಅದಕ್ಕೋಸ್ಕರ ಈ ಕಾಮಗಾರಿಯನ್ನು ತೆಗೆದುಕೊಂಡಿದೆ ಎಂದು ಹೇಳಿದೆ. ಐರನ್ ಓರ್ ಟ್ರೇಡ್ ಎಂಬುದು ಇಂಡಿಯಾ ಸರ್ಕಾರದ ಮನಾಪಲಿಯಾಗಿರುವುದರಿಂದ ಅದಕ್ಕಾಗಿ ಜಾಸ್ತಿ ಖರ್ಚುಮಾಡಿದ್ದರೆ, ಆ ಪೂರ ಹಣವನ್ನು ಇಂಡಿಯಾ ಸರ್ಕಾರದಿಂದ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ ?

† ಶ್ರೀ ಬಸವರಾಜ ಮಾಗಾವಿ.—ಸಂಪೂರ್ಣವಾಗಿ 450 ಲಕ್ಷ ರೂಪಾಯಿಗಳನ್ನು ಅವರೇ ಕೊಡಬೇಕೆಂದು ಒತ್ತಾಯಪಡಿಸಿದ್ದೇವೆ. ಇವತ್ತಿನಮಟ್ಟಿಗೆ ಅರ್ಧವಾದರೂ ಅವರು ಕೊಟ್ಟಿದ್ದರೆ ನಮಗೆ ಅನುಕೂಲವಾಗುತ್ತಿತ್ತು. ಇದುವರೆಗೆ ಕೇಂದ್ರಸರ್ಕಾರದವರು ಕುಂಟುನೆಪಗಳನ್ನು ಮುಂದೆ ಮಾಡಿ ಆ ಹಣವನ್ನು ಕೊಡುತ್ತಾ ಇಲ್ಲ. ನಾವೂ ಪ್ರಯತ್ನಮಾಡುತ್ತಿದ್ದೇವೆ. ಮೇಲಿಂದ ಮೇಲೆ ಅವರಿಗೆ ಕಾಗದಗಳನ್ನು ಬರೆಯುತ್ತಿದ್ದೇವೆ. ಲೋಕೋಪಯೋಗಿ ಸಚಿವರು ಮತ್ತು ಮುಖ್ಯಮಂತ್ರಿಗಳೂ ಸಹ ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯಮಾಡುತ್ತಿದ್ದಾರೆ.

ಶ್ರೀ ಪಿ. ವಿ. ಆಂಜನಪ್ಪ.—ಇದು ಯಾವ ರೋಡಿಗೆ ಸಂಬಂಧಪಟ್ಟದು ?

ಶ್ರೀ ಬಸವರಾಜ ಮಾಗಾವಿ.—ಓರ್ ಕ್ಯಾರಿಯಿಂಗ್ ರೋಡಿಗೆ.

ಶ್ರೀ ಪಿ. ವಿ. ಆಂಜನಪ್ಪ.—ಕೇಂದ್ರ ಸರ್ಕಾರದವರು ಹಣ ಕೊಡುತ್ತೇವೆಂದು ಲಿಖಿತ ಮೂಲಕ ಭರವಸೆ ಕೊಟ್ಟಿದ್ದಾರೆಯೇ ? ಯಾವ ಭರವಸೆಯಮೇಲೆ ಇದನ್ನು ಪ್ರಾರಂಭ ಮಾಡಿದ್ದೀರಿ ?

ಶ್ರೀ ಬ ವರಾಜ ಮಾಗಾವಿ.—ಬರವಣಿಗೆ ಅಷ್ಟೇ ಅಲ್ಲ, ಅನೇಕ ಸಲ ಕೇಂದ್ರದ ಮಂತ್ರಿಯವರು ಇಲ್ಲಿ ಬಂದಾಗ ಒಪ್ಪಿಕೊಂಡಿದ್ದಾರೆ, ಮತ್ತು ಅವರ ಅಧಿಕಾರಿಗಳು ಬಂದಾಗ ಕೂಡ ಇನ್‌ಸ್ಪೆಕ್ಟ್ ಮಾಡಿ ಅಪ್‌ಗ್ರೇಡ್ ಮಾಡಬೇಕೆಂದು ಹೇಳಿದ್ದಾರೆ. ಈ ದಿಸೆಯಲ್ಲಿ ನಮಗೂ ಅವರಿಗೂ ಅನೇಕ ಕರೆಸ್ಪಾಂಡೆನ್ಸ್ ನಡೆದಿದೆ ಮತ್ತು ಮೀಟಿಂಗ್ ಮಿನಿಟ್ಸ್ ಇದೆ.

ಶ್ರೀ ಜಿ. ವಿ. ಆಂಜನಪ್ಪ.—ಇದು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಬಂದಿತ್ತು. ಕೇಂದ್ರದವರು ನೀವೇ ಮಾಡಿ ಎಂದು ಹೇಳಿದ್ದು ನಿಜವೇ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರು ಹೇಳುವುದನ್ನು ನಾನೂ ನೋಡಿದ್ದೇನೆ. ಅವರು ಡಿಸ್ಕಷನ್ ಮಾಡಿದ್ದ ಮಿನಿಟ್ಸ್ ಕಳುಹಿಸಿಬಿಟ್ಟು ಕನ್‌ಫರ್ಮ್ ಮಾಡಿದ್ದಾರೆ. ಆಮೇಲೆ ಟಿ. ಟಿ. ಕೃಷ್ಣಮಾಚಾರಿಯವರ ಕಾಲದಲ್ಲಿ ಒರಿಜಿನಲ್ ಎಸ್ಟಿಮೇಟಿನ 50 ಭಾಗ ಕಾಸ್ಟ್ ಕೊಡುತ್ತೇವೆ ಎಂದು ಹೇಳಿದ್ದಾರೆ. ಅದರ ಕೆಲವು ಭಾಗವನ್ನು ಕೊಟ್ಟಿದ್ದಾರೆ.

ಶ್ರೀ ಜಿ. ವಿ. ಆಂಜನಪ್ಪ.—ಈಗ ಇದಕ್ಕೆ 450 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಲ್ಲ. ಅವರಿಗೆ ಒಪ್ಪಿಗೆಯಾದಮೇಲೆ ಏಕೆ ಅದನ್ನು ವಸೂಲು ಮಾಡುತ್ತಾ ಇಲ್ಲ.

ಶ್ರೀ ಬಸವರಾಜ ಮಾಗಾವಿ.—158 ಲಕ್ಷ ಎಸ್ಟಿಮೇಟ್ ಇತ್ತು. ಆಮೇಲೆ ಕೇಂದ್ರ ಸರ್ಕಾರದ ಶ್ರೀ ಸೇನ್ ಎಂಬ ಪ್ಲಾನಿಂಗ್ ಆಫೀಸರ್ ಬಂದು ಇಡೀ ರಸ್ತೆಯನ್ನು ಇನ್‌ಸ್ಪೆಕ್ಟ್ ಮಾಡಿ ಅದನ್ನು ಐ ಆರ್ ಸ್ಟಾಂಡರ್ಡಿಗೆ ಏರಿಸಬೇಕೆಂದು ಹೇಳಿ, ನಾವು ಮತ್ತೊಂದು ಎಸ್ಟಿಮೇಟ್ ಸಬ್‌ಮಿಟ್ ಮಾಡಿದ್ದೇವೆ; ಅದು 429 ಲಕ್ಷದ್ದು. ಇಷ್ಟೊಂದು ಹಣ ವ್ಯಯಮಾಡಬೇಕಾಗಿದೆ ಎಂಬ ಒಂದು ಕುಂಟುನೆಪ ಹೇಳುತ್ತಾರೆಯೇ ವಿನಃ ಬೇರೇನೂ ಇಲ್ಲ. ಅದಕ್ಕೆ ಅನೇಕ ರೀತಿಯ ಮಾಹಿತಿ ನಮ್ಮಲ್ಲಿ ಇದೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಕುಂಟು ನೆಪವೆಂದು ಹೇಳಿದ್ದೀರಿ. ಮೈಸೂರು ರಾಜ್ಯಕ್ಕೆ ಪದೇ ಪದೇ ಎಲ್ಲಾ ದೃಷ್ಟಿಯಿಂದಲೂ ಕೇಂದ್ರ ಸರ್ಕಾರದವರು ತಾತ್ಸಾರ ಮನೋಭಾವ ತಳೆದಿರುವುದು ಏತಕ್ಕೋಸ್ಕರ?

ಶ್ರೀ ಬಸವರಾಜ ಮಾಗಾವಿ.—ತಾತ್ಸಾರ ಮನೋಭಾವ ಮೈಸೂರು ರಾಜ್ಯಕ್ಕೆ ಅಷ್ಟೇ ಅಲ್ಲ. ಇನ್ನಿತರ ರಾಜ್ಯಗಳಿಗೂ ಅವರ ಆರ್ಥಿಕ ಸ್ಥಿತಿ ಚೆನ್ನಾಗಿರದೆ ಇರುವುದರಿಂದ ಹೇಳುತ್ತಾರೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಕೇಂದ್ರ ಸರ್ಕಾರದವರು ಹಣ ಕೊಡದೆ ಹೋದರೆ ರಸ್ತೆಯನ್ನು ನಿಲ್ಲಿಸುತ್ತೀರಾ? ಆದ್ದರಿಂದ ಅದರ ಮೈಂಟೆನೆನ್ಸ್ ಸರಿಯಾಗಿ ಮಾಡುವುದರ ಜೊತೆಗೆ, ಅವರಿಂದ ಹಣ ವಸೂಲು ಮಾಡುವುದಕ್ಕೆ ಸಿಂಡಿಕೇಟ್‌ನಿಂದ, ಇಂಡಿಕೇಟ್ ಗುಂಪಿಗೆ ಹೋಗಿ ತೆಗೆದುಕೊಳ್ಳುತ್ತೀರಾ?

ಶ್ರೀ ಬಸವರಾಜ ಮಾಗಾವಿ.—ಸಿಂಡಿಕೇಟ್ ಇಂಡಿಕೇಟ್ ವಿಚಾರ ನನಗೆ ಗೊತ್ತಿಲ್ಲ. ರಸ್ತೆ ನಮ್ಮ ರಾಜ್ಯದಲ್ಲಿ ಇರುವುದರಿಂದ ಅದನ್ನು ಸುವ್ಯವಸ್ಥೆಯಲ್ಲಿ ಇಡುವುದು ರಾಜ್ಯಸರ್ಕಾರದ ಕರ್ತವ್ಯ. ಆ ಹಣ ನಾವು ಏನಾದರೂ ಮಾಡಿ ತರುತ್ತೇವೆ. ಈ ದಿಸೆಯಲ್ಲಿ ನಾವು ಪ್ರಯತ್ನ ಮಾಡುತ್ತೇವೆ.

Unnecessary spending on Upper Krishna Project

33. Sri M. L. VASUDEVA MURTHY (Nominated).—

Will the Chief Minister be pleased to state :—

(*a*) whether there has been unnecessary spending of about Rs. 1.81 lakhs due to the lack of a definite decision to locate the Dam of Upper Krishna Project ;

(*b*) whether the delay and increase in cost in the execution of this project is due to indecision by the Government for location of the Dam ?

Sri VEERENDRA PATIL (Chief Minister).—

(*a*) The expenditure cannot be called unnecessary.

(*b*) No.

ಶ್ರೀ ಎಂ. ಪಿ. ವಾಸುದೇವಮೂರ್ತಿ.—ಈ ಸ್ಥಳಾಂತರವಾಗುವುದಕ್ಕೆ ಏನು ಕಾರಣ, ಟೆಕ್ನಿಕಲ್ ಅಭಿಪ್ರಾಯದ ಪ್ರಕಾರವೇ, ಅಥವಾ ಇಂಡಿಯಾ ಸರ್ಕಾರದ ಆದೇಶವೇ ?

† ಶ್ರೀ ವೀರೇಂದ್ರ ಪಾಟೀಲ್.—ಆದೇಶದ ಪ್ರಶ್ನೆ ಬರುವುದಿಲ್ಲ. ಟೆಕ್ನಿಕಲ್ ಒಪಿನೀಯನ್ ಪ್ರಕಾರ ಮಾಡಿದ್ದಾರೆ.

Sri G. V. GOWDA.—Is it not a fact that some times the location of the project will have to be changed on account of the opinion of the Technical Committee ;

Sri VEERENDRA PATIL.—Some times, it becomes necessary. If we do not get good foundation, we have to change the site.

Smt. M. R. LAKSHAMMA.—Is it not desirable to obtain technical opinion before this location is decided upon ?

Sri VEERENDRA PATIL.—How can we take opinion before we start excavation ? Before taking up any project, we do investigation also, but no investigation can be hundred per cent perfect because they will take trial bores here and there ; and during the excavation if some fault is found or soft soil is met or some other difficulty arises, it becomes necessary to change the site. Moreover this Upper Krishna Project involves a huge cost of more than Rs. 100 crores and we cannot take any such risk at the time of excavating the foundation.

3-00 P.M.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಸ್ವಾಮಿ ಈ ಯೋಜನೆಯ ಒರಿಜಿನಲ್ ಎಸ್ಟಿಮೇಟ್ ಎಷ್ಟು ? ಈಗ ಈ ಯೋಜನೆಗೆ ಸಂಬಂಧಪಟ್ಟಹಾಗೆ ಸಣ್ಣ ಸಣ್ಣ ಕೆಲಸಗಳನ್ನು ತೆಗೆದುಕೊಳ್ಳುತ್ತಿದ್ದೀರಿ. ಆದ್ದರಿಂದ ಈ ಯೋಜನೆಯನ್ನು ಒರಿಜಿನಲ್ ಎಸ್ಟಿಮೇಟ್ ಪ್ರಕಾರ ಮಾಡುತ್ತೀರೋ ಅಥವಾ ಅದನ್ನು ರಿವೈಜ್ ಮಾಡುತ್ತೀರೋ ?

ಶ್ರೀ ವೀರೇಂದ್ರ ಪಾಟೀಲ್.—ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಕೆಲಸ ಈಗ ಪ್ರಾರಂಭವಾಗಿದೆ. ಆದರೆ ಇದು ಬಹಳ ವೇಗದಿಂದ ನಡೆಯುತ್ತಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಈಗಾಗಲೇ ನಮ್ಮ ಇಂಜಿನಿಯರು ಈ ಪ್ರಾಜೆಕ್ಟಿನಿಂದ ಹೆಚ್ಚು ನೀರು ಉಪಯೋಗವಾಗುವಂತೆ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಈ ಯೋಜನೆಯ ಮೊದಲನೆಯ ಸ್ಟೇಜು ಎರಡನೆಯ ಸ್ಟೇಜು ಲೆಕ್ಕಹಾಕಿದರೆ ಈ ಪ್ರಾಜೆಕ್ಟಿಗೆ 143 ಕೋಟಿ ರೂಪಾಯಿಗಳು ಬೇಕಾಗುತ್ತದೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಈ ಯೋಜನೆಯನ್ನು ಕಾರ್ಯಗತ ಮಾಡುವುದರಲ್ಲಿ ವಿಳಂಬವಾಗುವುದರಿಂದ ಒರಿಜಿನಲ್ ಎಸ್ಟಿಮೇಟನ್ನು ರಿವೈಜ್ ಮಾಡಬೇಕಾಗುತ್ತದೆಯಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಇದು ಸ್ವಲ್ಪ ಡಿಲೇ ಆಗಿದೆ. ಇದರ ಕೆಲಸವನ್ನು ಪ್ರಾರಂಭ ಮಾಡಿ ಮತ್ತೆ ನಿಲ್ಲಿಸಿ ಇದನ್ನು ಕಾರ್ಯಗತ ಮಾಡುವುದರಲ್ಲಿ ಸ್ವಲ್ಪ ಡಿಲೇ ಆಗುತ್ತದೆ. ಆದ್ದರಿಂದ ಇದರ ಎಸ್ಟಿಮೇಟನ್ನು ರಿವೈಜ್ ಮಾಡಬೇಕಾಗುತ್ತದೆ. ಇದರ ಜೊತೆಗೆ ಈ ಪ್ರಾಜೆಕ್ಟಿನ ಸ್ಕೋಪನ್ನು ಹೆಚ್ಚು ಮಾಡುವುದರಿಂದ ಈ ಪ್ರಾಜೆಕ್ಟಿನ ಕಾಸ್ಟ್ ಸ್ವಲ್ಪ ಹೆಚ್ಚಾಗಬಹುದು

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಈ ಪ್ರಾಜೆಕ್ಟಿಗೆ ಅನ್ಯಾಯವಾಗಿ ಖರ್ಚು ಮಾಡುವ ಪ್ರಶ್ನೆ ಇಲ್ಲ ಎಂದು ತಾವು ಹೇಳಿದ್ದೀರಿ. ಈ ಯೋಜನೆಗೆ ರಾಜಕೀಯ ಒತ್ತಡ ಜಾಸ್ತಿಯಾಗಿದೆ ಎಂದು ನಾನು ಹೇಳುತ್ತೇನೆ. ಈ ಬಗ್ಗೆ ಅಭಿಪ್ರಾಯವೇನು ?

ಶ್ರೀ ವೀರೇಂದ್ರ ಪಾಟೀಲ್.—ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟುವಾಗ ರಾಜಕೀಯ ಪ್ರವೇಶ ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಯಾವ ಪ್ರಾಜೆಕ್ಟೂ ಆಗುವುದಿಲ್ಲ. ರಾಜಕೀಯ ಪ್ರಶ್ನೆ ಇದರಲ್ಲಿ ಇಲ್ಲ.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಈಗ ಒಂದು ದೊಡ್ಡ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಪ್ರಾಜೆಕ್ಟನ್ನು ಕಟ್ಟುವಾಗ ಎಲ್ಲಾ ಪರಿಣತರು ಅದನ್ನು ಕೂಲಂಕಷವಾಗಿ ನೋಡಿ ವಿಚಾರ ಮಾಡಿ ಈ ಯೋಜನೆಯ ಬಗ್ಗೆ ಒಂದು ಇತ್ಯರ್ಥಕ್ಕೆ ಬಂದಿದ್ದಾರೆ. ಈ ರೀತಿ ತೀರ್ಮಾನ ಮಾಡಿದಮೇಲೆ ಮತ್ತೆ ಪ್ರಾಜೆಕ್ಟಿನ ಸ್ಥಳವನ್ನು ಬದಲಾವಣೆ ಮಾಡಿರುವ ಯಾವುದಾದರೂ ಬೇರೆ ಒಂದು ಉದಾಹರಣೆಯನ್ನು ಕೊಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅನೇಕ ಕಡೆ ಎಕ್ಸಕವೇಷನ್ ಆದಮೇಲೆ ಸರಿಯಾದ ಫೌಂಡೇಷನ್ ಸಿಕ್ಕದೆ ಸ್ಥಳಬದಲಾವಣೆಯಾಗಿದೆ. ಇದು ಸರಿಯಾದ ಸ್ಥಳ ಎಂದು ತಿಳಿದುಕೊಳ್ಳದೆ ದೊಡ್ಡ ಪ್ರಾಜೆಕ್ಟನ್ನು ಕಟ್ಟುವುದಕ್ಕಾಗುವುದಿಲ್ಲ. ನೂರಾರು ಕೋಟಿ ರೂಪಾಯಿಗಳ ಪ್ರಾಜೆಕ್ಟನ್ನು ಕಟ್ಟುವಾಗ ನಾವು ಎಲ್ಲಾ ರೀತಿಯಿಂದಲೂ ವಿಚಾರ ಮಾಡಬೇಕಾಗುತ್ತದೆ. ಪ್ರಾಜೆಕ್ಟಿನ ಸ್ಕೋಪನ್ನು ಬದಲಾವಣೆ ಮಾಡುವುದರಿಂದ ಹೆಚ್ಚಿನ ರೀತಿಯ ಅನುಕೂಲವಾಗಬಹುದು. ಸ್ಟೋರೇಜ್ ಆಫ್ ವಾಟರ್ ಸ್ಥಳದ ಪರಿಸ್ಥಿತಿ ಇವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಪ್ರಾಜೆಕ್ಟನ್ನು ಕಟ್ಟಬೇಕಾಗುತ್ತದೆ. ಈ ದೃಷ್ಟಿಯಿಂದ ಒಳ್ಳೆಯ ಸ್ಥಳ ಸಿಕ್ಕುತ್ತದೆ ಎಂದಾಗ ಆ ಸ್ಥಳವನ್ನು ಬದಲಾವಣೆ ಮಾಡುವುದಕ್ಕೆ ಅಡ್ಡಿ ಇರುವುದಿಲ್ಲ.

ಶ್ರೀ ಜಿ. ವಿ. ಆಂಜನಪ್ಪ.—ಈಗ ಈ ಯೋಜನೆಗೆ ಸಂಬಂಧಪಟ್ಟಹಾಗೆ 1.81 ಲಕ್ಷ ರೂಪಾಯಿಗಳು ಏನು ಖರ್ಚಾಗಿದೆ ಇದು ಇನ್‌ವೆಸ್ಟಿಗೇಷನ್ನಿಗಾಗಿ ಖರ್ಚಾಗಿದೆಯೇ ಅಥವಾ ಬೇರೆ ಕೆಲಸಕ್ಕೆ ಈ ಹಣವನ್ನು ಉಪಯೋಗಿಸಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ವಿಶೇಷವಾಗಿ ಎಕ್ಸ್‌ಕವೇಷನ್ನಿಗೆ ಈ ಹಣ ಖರ್ಚಾಗಿದೆ.

Advertisement for the posts of Principal and Lecturers of Davanagere School of Arts

69. Sri M. G. HANDRAL (Teachers' Constituency).—

Will the Minister for Education be pleased to state :—

(*a*) when the posts of Principal and Lecturers of Davanagere School of Arts will be advertised and suitably filled up ;

(*b*) the number of students admitted for each course this year ?

Sri N. M. KOTRABASIAH SOGI (Deputy Minister for Education).—

(*a*) As soon as the Cadre and Recruitment Rules under consideration are finalised.

(*b*) 14 students have been admitted to the I year Diploma Course in the School of Arts and Crafts, Davanagere, during this year.

ಶ್ರೀ ಎಂ. ಜಿ. ಹಂದ್ರಾಳ್.—ಸ್ವಾಮಿ, ದಾವಣಗೆರೆಯ ಕಲಾಶಾಲೆಗೆ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೂ ಸಹ ಈ ಕಲಾ ಶಾಲೆಗೆ ಟೆಂಪರರಿಯಾಗಿ ಪ್ರಿನ್ಸಿಪಾಲ್ ಮತ್ತು ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಈ ಕಲಾಶಾಲೆಯು ಹೆಚ್ಚು ಪ್ರಗತಿಹೊಂದುವುದಕ್ಕೆ ಅವಕಾಶವಿಲ್ಲದಂತಾಗಿದೆ. ಹೋದ ವರ್ಷ ಕೂಡ ನಾನು ಈ ಹುದ್ದೆಗಳನ್ನು ರೆಗ್ಯುಲರೈಜ್ ಮಾಡಿ ಖಾಯಂ ಆಗಿ ನೇಮಕ ಮಾಡುವ ವಿಷಯದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆನು. ಆ ಬಗ್ಗೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಆಗಬೇಕು ಅದನ್ನು ಫೈನಲ್ ಮಾಡಿದಮೇಲೆ ಈ ಕೆಲಸವನ್ನು ಮಾಡುತ್ತೇವೆ ಎಂದು ಹೇಳಿದ್ದರು ಈಗಲೂ ಅದೇ ಉತ್ತರ ಇದೆ. ಆ ನೇಮಕಗಳಿಗೆ ಸಂಬಂಧಪಟ್ಟ ಕೇಡರ್ ಅಂಡ್ ರೆಕ್ರೂಟ್ ಮೆಂಟ್ ರೂಲ್ಸ್ ಫೈನಲ್ ಮಾಡುವುದಕ್ಕೆ ಇನ್ನೂ ಎಷ್ಟು ಕಾಲ ಬೇಕು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದನ್ನು ಆದಷ್ಟು ತೀವ್ರವಾಗಿ ಮಾಡುತ್ತೇವೆ. ಈಗಾಗಲೇ ಆ ವಿಚಾರದಲ್ಲಿ ಫೈನಲ್ ಸ್ಟೇಜಿನಲ್ಲಿ ಇದ್ದೇವೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಈ ಕಲಾಶಾಲೆಯನ್ನು ಅಭಿವೃದ್ಧಿಗೊಳಿಸಿ ಒಂದು ಸರಿಯಾದ ರೀತಿಯಲ್ಲಿ ನಡೆಸಬೇಕು ಮತ್ತು ಒಳ್ಳೆಯ ಪರಿಣಿತರನ್ನು ನೇಮಕ ಮಾಡಬೇಕು ಎಂಬ ಬಗ್ಗೆ ಸರ್ಕಾರದ ಉದ್ದೇಶ ಇಲ್ಲವೆಂದು ನನ್ನ ಭಾವನೆ. ಏಕೆಂದರೆ ನಾನು ಸಹ 3 ವರ್ಷದಿಂದ ಅನೇಕ ಪತ್ರಗಳನ್ನು ಈ ಬಗ್ಗೆ ಸರ್ಕಾರಕ್ಕೆ ಬರೆದಿದ್ದೇನೆ. ಇಲ್ಲಿ ಲಕ್ಷಾಂತರ ರೂಪಾಯಿಗಳು ಅಪವ್ಯಯವಾಗಿದೆ. ಇದೇ ವಿಚಾರದಲ್ಲಿ ಒಬ್ಬ ಉಪಾಧ್ಯಾಯರು ರಾಜೀನಾಮೆ ಕೊಟ್ಟಿದ್ದಾರೆ. ಅದರ ಬಗ್ಗೆ ತನಿಖೆ ಮಾಡಿಲ್ಲ. ಈಗ ಅಲ್ಲಿರತಕ್ಕಂಥ ಪ್ರಿನ್ಸಿಪಾಲರನ್ನು ಇನ್ನು ಎಷ್ಟು ಕಾಲ ಉಳಿಸಿ ಕೊಂಡು ಬರಬೇಕೆಂದಿದ್ದೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಹಣದ ಅಪವ್ಯಯವಾಗಿದೆ ಎಂಬ ಬಗ್ಗೆ ಸ್ಪೆಸಿಫಿಕ್ ಆದ ಇನ್ಸ್‌ಟೆನ್ಸ್ ಸರ್ಕಾರದ ಗಮನಕ್ಕೆ ಬಂದಿಲ್ಲ. ಅಲ್ಲಿರುವ ಕಲಾ ಶಾಲೆಯನ್ನು ಎಲ್ಲಾ ರೀತಿ ಯಿಂದಲೂ ಅಭಿವೃದ್ಧಿಪಡಿಸಬೇಕೆಂಬುದೇ ಸರ್ಕಾರದ ಆಶಯವಾಗಿದೆ. ಈಗ ಇರುವುದು ತಾತ್ಪೂರ್ವಿಕವಾದ ವ್ಯವಸ್ಥೆ ಮಾತ್ರ, ಆದಷ್ಟು ತೀವ್ರದಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಅಂತಿಮಗೊಳಿಸಿ ಸ್ಟಾಫನ್ನು ನೇಮಕ ಮಾಡುವುದಕ್ಕೆ ವಿಚಾರ ಮಾಡಿದ್ದೇವೆ. ಇದು ವಿಶೇಷ ಕಲಾಶಾಲೆಯಾಗಿರುವುದರಿಂದ ಮತ್ತು ಜನರ ಆಕರ್ಷಣೆ ಕಡಿಮೆ ಇರುವುದರಿಂದ ಈ ಶಾಲೆ ಯನ್ನು ಇನ್ನೂ ಚೆನ್ನಾಗಿ ಅಭಿವೃದ್ಧಿಪಡಿಸಬೇಕು, ಉದ್ಧಾರ ಮಾಡಬೇಕು ಎಂಬ ಬಗ್ಗೆ ಸರ್ಕಾರದ ಆಸಕ್ತಿ ಇದೆ. ಮತ್ತು ಅದರಂತೆ ಮಾಡುತ್ತಿದ್ದೇವೆ.

ಶ್ರೀ ಎಸ್. ಪಿ. ರಾಜಣ್ಣ.—ಇಲ್ಲಿ 54 ಜನ ವಿದ್ಯಾರ್ಥಿಗಳು ಇದ್ದಾರೆಂದು ಹೇಳಿದ್ದೀರಿ. ಉಪಾಧ್ಯಾಯರುಗಳು ಎಷ್ಟು ಜನ ಇದ್ದಾರೆ ಮತ್ತು ಈಗ ಇರುವ ತಾತ್ಕಾಲಿಕ ವ್ಯವಸ್ಥೆ ಇನ್ನೂ ಎಷ್ಟು ಕಾಲ ಇರುತ್ತದೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಕೇಡರ್ ಅಂಡ್ ರೆಕ್ರೂಟ್ ರೂಲ್ಸ್ ಬಗ್ಗೆ ಕೆಲವು ಮಾಡರೇಷನ್ ಮಾಡಬೇಕಾಗಿ ಬಂತು. ಆದಕಾರಣ ತಡವಾಯಿತು. ಇನ್ನು ಕ್ಷಿಪ್ರದಲ್ಲಿಯೇ ಈ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಜಾರಿಗೆ ತರಲು 7—8 ವರ್ಷಗಳನ್ನು ತೆಗೆದುಕೊಂಡಿರಿ. ಈ ವಿಚಾರ ದಲ್ಲಿಯೂ ಕೂಡ ಅದೇ ರೀತಿ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂಥಾದ್ದು ಏನೂ ಇಲ್ಲ. ಇನ್ನು 2–3 ತಿಂಗಳಲ್ಲಿಯೇ ನೇಮಕ ಮಾಡುತ್ತೇವೆ.

ಶ್ರೀ ಎಸ್. ಪಿ. ರಾಜಣ್ಣ.—ಅಲ್ಲಿ ಈಗ ಎಷ್ಟು ಮಂದಿ ಉಪಾಧ್ಯಾಯರುಗಳು ಇದ್ದಾರೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಆ ಬಗ್ಗೆ ಇನ್‌ಫರ್‌ಮೇಷನ್ ಇಲ್ಲ. ಪ್ರತ್ಯೇಕ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಈ ಕಲಾಶಾಲೆಯ ಸ್ಟೋರ್ಸ್‌ನ್ನು ನೋಡಿಕೊಳ್ಳುತ್ತಿದ್ದ ಒಬ್ಬರಿಂದ ಲಕ್ಷಾಂತರ ರೂಪಾಯಿಗಳ ಅಪವ್ಯಯವಾಗಿದ್ದರೂ ಕೂಡ ಆ ಬಗ್ಗೆ ಡಿ. ಟಿ. ಇ. ಅವರು ತನಿಖೆ ನಡೆಸದೆ ಅವರಿಗೇ ಮತ್ತೆ ಎಕ್ಸ್‌ಟೆನ್‌ಷನ್ ಕೊಟ್ಟು ಇರಿಸಿಕೊಂಡಿರುವುದರ ಉದ್ದೇಶವಾದರೂ ಕೂಡ ಏನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂತಹ ಯಾವ ವಿಷಯವೂ ಕೂಡ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಎಸ್. ಚನ್ನಪ್ಪ.—ಕಲೆ ಅಂದರೆ ಅದರಲ್ಲಿ ಯಾವ ಯಾವ ವಿದ್ಯೆಗಳು ಬರುತ್ತವೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಲ್ಲಿ ಮುಖ್ಯವಾಗಿ ಚಿತ್ರ ಕಲೆ ಇದೆ. ಡ್ರಾಯಿಂಗ್ ಇದೆ. ಕಮರ್ಷಿಯಲ್ ಆರ್ಟ್ಸ್ ಇದೆ. ಮಾಡಲಿಂಗ್ ಇದೆ, ಕ್ಲೇ–ಮಾಡಲಿಂಗ್ ಇದೆ. ಇವುಗಳ ಜೊತೆಗೆ ಇನ್ನು ಮುಂದೆ ಶಿಲ್ಪ ಕಲೆಯನ್ನು ಸಹ ಅಭಿವೃದ್ಧಿಪಡಿಸಬೇಕೆಂಬ ವಿಚಾರ ಇದೆ. ಇವುಗಳ ಜೊತೆಗೆ ಇತರ ಕಲೆಗಳನ್ನು ಸಹ ಅಭಿವೃದ್ಧಿಪಡಿಸಬೇಕೆಂಬ ಅಭಿಪ್ರಾಯ ಇದೆ.

ಶ್ರೀ ವಿ. ಎಸ್. ಹಿರೇಗೌಡರ್.—ಇಲ್ಲಿ ಡಿಪ್ಲೊಮಾ ಪಾಸಾಗಿಲ್ಲದವರನ್ನು ನೇಮಕಮಾಡಿ ದರೆ ಇದು ಸರಿಯಾದ ಶಿಕ್ಷಣಕ್ಕೆ ಮಾರ್ಗವಾಗುವುದಿಲ್ಲ ಅಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದು ತಾತ್ಕಾಲಿಕವಾದ ಕ್ರಮ. ಮುಂದೆ ಕೇಡರು ಹಾಗೂ ರೆಕ್ರೂಟುಮೆಂಟು ರೂಲ್ಸ್ ಆದಮೇಲೆ ಸರಿಯಾದ ಏರ್ಪಾಡು ಮಾಡಲಾಗುತ್ತದೆ.

ಶ್ರೀ ವೈ. ಎಸ್. ಪಾಟೀಲ್.—ಈಗ ಇಲ್ಲಿನ ಪ್ರಿನ್ಸಿಪಾಲರಿಗೆ ಕ್ವಾಲಿಫಿಕೇಷನ್ ಏನು ಇರಬೇಕೆಂದು ಮಾಡಿದ್ದೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇವೆಲ್ಲಾ ಕೇಡರು ಹಾಗೂ ರೆಕ್ರೂಟುಮೆಂಟು ರೂಲ್ಸ್ ಬಂದಮೇಲೆ ಗೊತ್ತಾಗುತ್ತದೆ.

ಶ್ರೀ ಎಲ್. ಎಸ್. ವೆಂಕಾಜಿರಾವ್.—ಕೇಡರು ರೂಲ್ಸ್ ಇನ್ನೆಷ್ಟು ತಿಂಗಳಲ್ಲಿ ಆಗಬಹುದು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇನ್ನೆರಡು ಮೂರು ತಿಂಗಳಲ್ಲಿ ಆಗಬಹುದು.

ಶ್ರೀ ಎಸ್. ಸಿ. ಕುಬಸದ್—ನಾನ್ ಕ್ವಾಲಿಫೈಡ್ ಎಂದು ಇಲ್ಲಿ ನೇಮಕ ಮಾಡಿ ಮುಂದೆ ಕ್ವಾಲಿಫೈಡ್ ಆಗಿರುವವರನ್ನು ನೇಮಿಸಿದರೆ ಅವರಿಂದ ಮುಂದೆ ರಿಟ್ ಇತ್ಯಾದಿಗಳು ಕೋರ್ಟಿನಲ್ಲಿ ಫೈಲಾದರೆ ಇಲ್ಲದ ಗೊಂದಲಗಳಿಗೆ ಅವಕಾಶವಾಗುವುದಿಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗಿರತಕ್ಕವರು ಬೇರೆ ಒಂದು ಡಿಪಾರ್ಟ್‌ಮೆಂಟಿನಿಂದ ಡೆಪ್ಯುಟೇಷನ್‌ಮೇಲೆ ಬಂದಿದ್ದಾರೆ. ಪರ್ಮನೆಂಟು ನೇಮಕ ಮಾಡಿದಮೇಲೆ ಇವರು ವಾಪಸು ತಮ್ಮ ಇಲಾಖೆಗೆ ಹೋಗುತ್ತಾರೆ. ಇದರಲ್ಲೇನೂ ಕಷ್ಟವಾಗುವುದಿಲ್ಲ. ಇದು ಬರೀ ತಾತ್ಪೂರ್ವಕವಾದ ಕ್ರಮ. ಮುಂದೆ ಅವರು ಅವರ ಒರಿಜಿನಲ್ ಪೋಸ್ಟಿಗೆ ಹೋಗುತ್ತಾರೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಸರಕಾರದ ಗಮನಕ್ಕೆ ನಾನು ಇಲ್ಲಿ ತರುತ್ತಿದ್ದೇನೆ. ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್ ಅವರು ಇಲ್ಲಿನ ಲೆಕ್ಕ ಪತ್ರಗಳನ್ನು ತೆಗೆದುಕೊಂಡು ಬಂದು ಮತ್ತು ತನಿಖೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಇತ್ತು. ಇದರ ಬಗ್ಗೆ ಈಗಲಾದರೂ ಸರಕಾರ ಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಹೇಳುವ ಆರೋಪಗಳು ನಿಜವಾಗಿದ್ದರೆ ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಬಸವರಾಜ ಕಟ್ಟೀಮನಿ.—ನಾನು ಈ ಕಲಾಶಾಲೆಗೆ ಹೋಗಿ ನೋಡಿದ್ದೇನೆ. ಇಲ್ಲಿ ಹಣದ ಅಪವ್ಯಯವಾಗಿದೆ. ಇದರ ಬಗ್ಗೆ ಕಳೆದ ಅಧಿವೇಶನದಲ್ಲಿ ನಾನೂ ಕೂಡ ಒಂದು ಪ್ರಶ್ನೆ ಕಳುಹಿಸಿದ್ದೆ. ಇದುವರೆಗೆ ಏನಾಯಿತು ಎನ್ನುವುದೇ ನನಗೆ ತಿಳಿಯಲಿಲ್ಲ. ಇಲ್ಲಿ ದುರುಪಯೋಗವಾದ ಹಣವನ್ನು ಈಗಿರುವ ಶಿಕ್ಷಕರಿಂದ ಅವರ ಸಂಬಳದಲ್ಲಿ ವಸೂಲು ಮಾಡಲಾಗುತ್ತದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇಂತಹ ಪ್ರಶ್ನೆ ಇದರಲ್ಲಿ ಬರುವುದಿಲ್ಲ. ಇಲ್ಲಿ ಶಿಕ್ಷಕರ ಅನುಕೂಲಕ್ಕಾಗಿ ಇವರನ್ನು ನೇಮಿಸಿರುವುದರಿಂದ ಇವರು ಕೆಲಸ ಮಾಡಿದ ದಿನಗಳಿಗೆ ಸಂಬಳ ಕೊಡಲೇಬೇಕಾಗುತ್ತದೆ.

Loss of Stamps in State Huzur Treasury

111. Sri CHANNAIAH WADEYAR (Local Authorities' Constituency).—

Will the Minister for Finance, Planning and Youth Welfare be pleased to state :—

(a) whether there was a loss of stamps worth about Rs. 2,000 in the State Huzur Treasury in 1968 ;

(b) if so, the steps taken by the Government to recover the loss from the concerned and to fix the responsibility ?

Sri RAMAKRISHNA HEGDE (Minister for Finance, Planning and Youth Welfare).—

(a) Yes. There was a loss of stamps worth Rs 2,672.

(b) A complaint has been lodged with the Police by the Treasury Officer and Police are investigating. As regards the recovery of loss, a departmental enquiry against the Treasury Officer and others has been ordered.

ಶ್ರೀ ಚನ್ನಯ್ಯ ಒಡೆಯರ್.—ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಿದೆ ಎಂದು ಹೇಳಿದಿರಿ. ಇದರಲ್ಲಿ ತಪ್ಪು ಮಾಡಿದವರಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡುವ ಅಧಿಕಾರಿಗಳು ಮೊದಲು ಡೈರೆಕ್ಟರ್ ಆಫ್ ಟ್ರೆಷರಿ ಎನ್ನುವ ಅಧಿಕಾರಿಗಳು ಮಾಡಬೇಕೆಂದು ಮಾಡಿತ್ತು. ಆದರೆ ಅವರನ್ನು ಗುಲ್ಬರ್ಗಾಕ್ಕೆ ಡೆಪ್ಯೂಟೀ ಕಮೀಷನರಾಗಿ ವರ್ಗ ಮಾಡಿರುವುದರಿಂದ ಬೇರೊಬ್ಬರನ್ನು ನೇಮಕ ಮಾಡಬೇಕಾಯಿತು. ಇಲ್ಲಿರುವ ಸೀಎಯು ಡೈರೆಕ್ಟರನ್ನು ನೇಮಕ ಮಾಡಲು ಅವರೂ ಒಬ್ಬರು ವಿಟ್‌ನೆಸ್ ಆದುದರಿಂದ ಫೈನಾನ್ಸ್ ಇಲಾಖೆಯ ಡೆಪ್ಯುಟಿ ಸೆಕ್ರೆಟರಿಗಳನ್ನು ಎನ್‌ಕ್ವೈರಿ ಆಫೀಸರಾಗಿ ನೇಮಕ ಮಾಡಲಾಗಿದೆ.

ಶ್ರೀ ಜಿ. ವಿ. ಅಂಜನಪ್ಪ.—2,672 ರೂಪಾಯಿ ಬೆಲೆಯ ಸ್ಟಾಂಪುಗಳು ಯಾವಾಗ ಮಾಯ ವಾಯಿತು ಎನ್ನುವುದು ಬೆಳಕಿಗೆ ಬಂತು ಮತ್ತು ಇಷ್ಟು ಅಪವ್ಯಯ ಮಾಡಿದವರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ನಡೆದದ್ದು ಕಳೆದ ವರ್ಷದ ಏಪ್ರಿಲ್ ತಿಂಗಳಲ್ಲಿ. ಇದರ ಬಗ್ಗೆ ಪೋಲೀಸಿನವರಿಗೂ ಕಂಪ್ಲೇಂಟು ಕೊಡಲಾಗಿದೆ ಮತ್ತು ಡಿಪಾರ್ಟ್‌ಮೆಂಟು ಎನ್‌ಕ್ವೈರಿ ಕೂಡ ಮಾಡಲಾಗುತ್ತಿದೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಲಾಸ್ ಎಂದರೆ ಯಾವ ರೀತಿಯಾದುದು ?

ಶ್ರೀ ರಾಮಕೃಷ್ಣ ಹೆಗಡೆ.—ಸ್ಟಾಂಪು ಪೇಪರುಗಳು ಇರಲಿಲ್ಲ ಎಂದು.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಡೇಟ್ ಸ್ಟಾಂಪು ಇಂತಹ ಸ್ಟಾಂಪು ಪೇಪರುಮೇಲೆ ಹಾಕುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.— ಅದು ತಮಗೇ ಗೊತ್ತಿರಬಹುದು. ಪೋಲೀಸಿನವರಿಗೆ ಇದರ ಬಗ್ಗೆ ಕಂಪ್ಲೇಂಟು ಕೊಡಲಾಗಿದೆ. ಅವರು ವಿಚಾರಣೆ ಮಾಡುತ್ತಿದ್ದಾರೆ.

ಶ್ರೀ ಜಿ. ವಿ. ಅಂಜನಪ್ಪ.—ಪೋಲೀಸಿನವರಿಗೆ ಕಂಪ್ಲೇಂಟುಗಳು ಕೊಟ್ಟದ್ದು ಯಾವಾಗ ?

ಶ್ರೀ ರಾಮಕೃಷ್ಣ ಹೆಗಡೆ.—ಇದರ ದೂರು ಬಂದ ತಕ್ಷಣ ಪೋಲೀಸಿನವರಿಗೂ ತಿಳಿಸಲಾಗಿದೆ.

ಶ್ರೀ ಜಿ. ವಿ. ಅಂಜನಪ್ಪ.—ದೂರು ಬಂತು ಎಂದು ಕಳೆದ ಒಂದೂವರೆ ವರ್ಷಗಳಾದರೂ ಇದುವರೆಗೆ ಯಾವ ಕಾರ್ಯಕ್ರಮವೂ ತೆಗೆದುಕೊಂಡಂತೆ ಕಾಣುತ್ತಿಲ್ಲ. ಏಪ್ರಿಲ್ ತಿಂಗಳಿಂದ ಸೆಪ್ಟಂಬರು ತಿಂಗಳವರೆಗೆ ಎಂದರೆ ಒಂದು ವರ್ಷ ಮೂರು ತಿಂಗಳಾಗುತ್ತೆ. ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ.—ಪೋಲೀಸಿನವರಿಗೆ ಕಂಪ್ಲೇಂಟು ಕೊಡಲಾಗಿದೆ, ಅದರಮೇಲೆ ಅವರು ಇನ್ನೂ ಆಕ್ಷನ್ ತೆಗೆದುಕೊಳ್ಳುವುದರ ಬಗ್ಗೆ ವಿಚಾರ ಮಾಡುತ್ತಿದ್ದಾರೆ.

Mr. DEPUTY CHAIRMAN.—If the matter is seized by the court, upplementary will not arise.

Sri G. V. ANJANAPPA.—The Hon. Minister is not aware whether the complaint has been registered and charge-sheet has been filed. Otherwise, let him tell the House on what date the complaint has been resgistered and charge-sheet has been filed.

Sri RAMAKRISHNA HEGDE.—A complaint has been filed but I do not know on what date it was filed.

Sri G. V. ANJANAPPA.—Only complaint has been filed and that does not amount to *sub-judice*. If only the charge sheet has been filed in the court, it becomes *sub-judice*.

Sri RAMAKRISHNA HEGDE.—The case has been registered by the police.

Sri C. S. BALAKRISHNA GOWDA.—Is the Hon. Minister aware whether the police have filed any charge-sheet in the court?

Sri RAMAKRISHNA HEGDE.—Charge-sheet has not been filed.

Sri G. V. ANJANAPPA.—May I know whether the police investigation has been completed and whether charge-sheet has been filed in the court?

Sri RAMAKRISHNA HEGDE.—Police investigation is still in progress, and the man who is suspected in this respect is absconding.

ಶ್ರೀ ಬಿ. ಚನ್ನಬೈರೇಗೌಡ.—ಸ್ವಾಮಿ, ಮಾನ್ಯ ಮಂತ್ರಿಗಳು ಉತ್ತರ ಹೇಳುವುದನ್ನು ನೋಡಿದರೆ ಒಂದು ಲಕ್ಷ ರೂಪಾಯಿ ಕಳವಾದರೂ ಕೂಡ ಲಘುವಾಗಿ ಉತ್ತರ ಕೊಟ್ಟು ಬಿಡುತ್ತಾರೆ. ಛಾರ್ಜ ಷೀಟ್ ಹಾಕಿದ್ದಾರೋ ಇಲ್ಲವೋ ಗೊತ್ತಿಲ್ಲ ಒಂದು ವರ್ಷ 4 ತಿಂಗಳು ಆದರೂ ಏನೂ ಆಕ್ಷನ್ ತೆಗೆದುಕೊಂಡಿಲ್ಲ. ಸರ್ಕಾರದ ಹುಜೂರು ಟ್ರಜರಿಯಲ್ಲೇ ಹೀಗಾದರೆ ಜನಗಳಿಗೆ ಸರ್ಕಾರದಮೇಲೆ ಹೇಗೆ ನಂಬಿಕೆ ಬರುತ್ತದೆ? ಇಷ್ಟೊಂದು ಲಘುವಾಗಿ ಉತ್ತರ ಕೊಡುವುದು ಸರಿಯಲ್ಲ.

ಉಪಸಭಾಪತಿಯವರು.—ಈಗ ಇರುವ ಪ್ರಶ್ನೆಗೆ ಸಂಬಂಧಪಟ್ಟಂತೆ ಸಪ್ಲಿಮೆಂಟರಿ ಹಾಕಿ.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಇದು ಒಂದು ವರ್ಷವಾಗಿರುವುದರಿಂದ ಈ ವಿಷಯದಲ್ಲಿ ಮೇಲ್ಮನೆಗೆ ಒಂದು ಆಶ್ವಾಸನೆಯನ್ನು ಸಚಿವರು ಕೊಡಬೇಕು. ಆದಷ್ಟು ಜಾಗ್ರತೆ ಪೋಲೀಸಿನವರು ಕೋರ್ಟ್‌ನಲ್ಲಿ ಕೇಸು ಹಾಕಿ ಅವರನ್ನು ಶಿಕ್ಷೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ಎನ್ನುವ ಆಶ್ವಾಸನೆ ಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಪ್ರಯತ್ನ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಕೆ. ಎಸ್. ಚನ್ನಪ್ಪ.—ಕಳುವಾದ ದಿವಸ ಎಫ್. ಐ. ಆರ್. ಕೋರ್ಟಿಗೆ ಕಳುಹಿಸುತ್ತಾರೆಯೇ?

ಶ್ರೀ ರಾಮಕೃಷ್ಣ ಹೆಗಡೆ.—ಹೌದು.

ಶ್ರೀ ಜಿ. ವಿ. ಅಂಜನಪ್ಪ.—ಮಾನ್ಯ ಸಚಿವರು ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ನಡೆಯುತ್ತಿದೆಯೆಂದು ಹೇಳಿದರು. ಯಾರ ಮೇಲೆ ಆಕ್‌ಷನ್ ತೆಗೆದುಕೊಳ್ಳಬೇಕೆಂದು ಆದೇಶ ಕೊಡಲಾಗಿದೆ?

ಶ್ರೀ ರಾಮಕೃಷ್ಣ ಹೆಗಡೆ.—3 ಮಂದಿಮೇಲೆ, ಟ್ರೆಷರರ್, ಷರಾಫ್, ಟ್ರೆಜರಿ ಆಫೀಸರು.

ಶ್ರೀ ಜಿ. ವಿ. ಅಂಜನಪ್ಪ.—ಆ 3 ಮಂದಿ ಎಷ್ಟು ವರ್ಷಗಳಿಂದ ಒಂದೇ ಜಾಗದಲ್ಲಿದ್ದಾರೆ?

ಶ್ರೀ ರಾಮಕೃಷ್ಣ ಹೆಗಡೆ.—ಗೊತ್ತಿಲ್ಲ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಜಿಲ್ಲಾ ಖಜಾನೆ ಮತ್ತು ತಾಲ್ಲೂಕು ಖಜಾನೆಗಳಲ್ಲಿ ಎಲ್ಲಾದರೂ ಈ ರೀತಿಯಾಗಿದೆಯೇ? ಏಕೆಂದರೆ ಅಲ್ಲಿ ಸ್ಟ್ಯಾಂಪು ಸಿಕ್ಕುವುದಿಲ್ಲ, ಒಂದಕ್ಕೆ ಒಂದೂವರೆಯಷ್ಟು ಬೆಲೆಗೆ ಮಾರುತ್ತಿದ್ದಾರೆ. ಆದುದರಿಂದ ಹೀಗೇನಾದರೂ ಆಗಿದೆಯೇ ಎಂದು ತನಿಖೆ ಮಾಡಿದ್ದೀರಾ?

ಶ್ರೀ ರಾಮಕೃಷ್ಣ ಹೆಗಡೆ.— ಇಲ್ಲ, ಅಂಥ ದೂರು ಬಂದಿಲ್ಲ.

ಶ್ರೀ ಜಿ. ವಿ. ಅಂಜನಪ್ಪ.—ಈ 3 ಜನರು ಮೊದಲನೆಯ ಬಾರಿ ಹೀಗೆ ಮಾಡಿರುವರೇ ಅಥವ ಹಿಂದೆಯೂ ಆ ರೀತಿ ಕಳವು ಮಾಡಿರುವರೇ?

ಶ್ರೀ ರಾಮಕೃಷ್ಣ ಹೆಗಡೆ.— ಅದು ನಮಗೆ ಗೊತ್ತಿಲ್ಲ.

ಶ್ರೀ ಜಿ. ವಿ. ಅಂಜನಪ್ಪ.—ಯಾರೂ ದಿನವಹಿ ಸೂಪರ್‌ವೈಜ್ ಮಾಡುತ್ತಿರಲಿಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ಸ್ಟ್ಯಾಂಪ್‌ವೆಂಡರ್ ಹೆಸರಿನಲ್ಲಿ ಖರ್ಚು ಹಾಕಿ ಫೋರ್ಜರಿ ಮಾಡಿರುವುದು ಗಮನಕ್ಕೆ ಬಂದಿದೆ. ಹಣ ಕ್ರೆಡಿಟ್ ಆಗಿಲ್ಲ. ಆದುದರಿಂದ ತನಿಖೆ ಮಾಡಿದ ಬಳಿಕ ಗೊತ್ತಾಗಬೇಕು, ಪ್ರತಿನಿತ್ಯ ಗೊತ್ತಾಗುವುದಿಲ್ಲ.

ಶ್ರೀ ಚೆನ್ನಯ್ಯ ಒಡೆಯರ್.—ಪೋಲೀಸರು ತನಿಖೆ ಮಾಡಲು ನಿಧಾನವಾಗಿರುವುದಕ್ಕೆ ಕಾರಣ ವೇನು ?

ಶ್ರೀ ರಾಮಕೃಷ್ಣ ಹೆಗಡೆ.—ಕೆಲವು ಕೇಸುಗಳಲ್ಲಿ ಸ್ವಲ್ಪ ದಿವಸವಾಗುವುದು.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಯಾರು ತಪ್ಪು ಮಾಡಿರುವರೋ ಅವರು ರಿಟೈರ್ ಆಗಲು ಎಷ್ಟು ಸಮಯವಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ಕೇಸು ನಡೆಯುವಾಗ ಪ್ರಿಪರೇಟರಿ ಟು ರಿಟೈರ್‌ಮೆಂಟ್ ರಜಾಕ್ಕೆ ಬರೆದುಕೊಂಡಿದ್ದಾರೆ, ಪ್ರೊವಿಷನಲ್ ಪೆನ್‌ಷನ್ ಕೊಡಲಾಗಿದೆ, ಪೂರ್ತಿಯಾಗಿ ಕೊಟ್ಟಿಲ್ಲ.

Publication of Rules under the Mysore Police Act

136. Sri M. G. HANDRAL (Teachers' Constituency).—

Will the Chief Minister be pleased to state :—

(*a*) whether the Mysore Police Act has come into force, if so, from which date ;

(*b*) whether the Government is aware that the Rules under the Mysore Police Act have not yet been published and implemented ;

(*c*) if so, whether the Government intends to take immediate steps in the matter ?

Sri VEERENDRA PATIL (Chief Minister).—

(*a*) The Mysore Police Act, 1963 (Mysore Act No. IV of 1964) has come into force from 2nd April 1965.

(*b*) Rules under the said Act which are essential for administration of the Police Department, except the following, have been issued :

(i) The Mysore State Reserve Police (Services) Rules and
(ii) The Mysore Village Police Rules.

(*c*) All necessary steps to finalise the two remaining rules are being taken.

ಶ್ರೀ ಎಂ. ಜಿ. ಹಂದ್ರಾಳ್.—ಹುಬ್ಬಳ್ಳಿ ಧಾರವಾಡ ಮುಂತಾದ ದೊಡ್ಡ ನಗರಗಳಲ್ಲಿ ಹೈವೇಯಲ್ಲಿ ವಾಹನಗಳನ್ನು ಜೋರಾಗಿ ಓಡಿಸುವುದರಿಂದ ಅಕ್ಸಿಡೆಂಟುಗಳಾಗುತ್ತಿವೆ, ಸ್ಪೆಷಲ್ ಚೆಕ್ ಮಾಡಲು ವ್ಯವಸ್ಥೆಯಿರುವಂತೆ ಕಾಣಲಿಲ್ಲ. ಅಲ್ಲದೆ ಸೈಕಲ್‌ಮೇಲೆ ಡಬ್ಬಲ್ ಮತ್ತು ಟ್ರಿಬ್ಬಲ್ ರೈಡಿಂಗ್ ಮಾಡುವುದು, ಲೈಟಿಲ್ಲದೆ ವಾಹನಗಳನ್ನು ನಡೆಸುವುದು, ಇದೆಲ್ಲಾ ಹೆಚ್ಚಾಗಿದೆ. ಆದುದರಿಂದ ಪೋಲೀಸು ರೂಲ್ಸ್ ಎನ್‌ಫೋರ್ಸ್ ಮಾಡಲು ಏರ್ಪಾಡು ಮಾಡುತ್ತೀರಾ ?

†ಶ್ರೀ ವೀರೇಂದ್ರ ಪಾಟೀಲ್.—ಈಗ ಪೋಲೀಸು ಶಾಸನದಮೇರೆಗೆ, ಪೋಲೀಸು ಇಲಾಖೆಯ ಆಡಳಿತ ನಿರ್ವಹಿಸುವುದಕ್ಕೆ ಅತ್ಯಾವಶ್ಯಕವಾದ ನಿಯಮಗಳನ್ನು ಹೊರಡಿಸಲಾಗಿದೆ, ಇನ್ನೂ ಎರಡರ ವಿಚಾರದಲ್ಲಿ ಇನ್ನೂ ನಿಯಮಗಳನ್ನು ಹೊರಡಿಸಬೇಕಾಗಿದೆ. ಅವು ಯಾವುವು ಎಂದರೆ (1) ಮೈಸೂರು ಸ್ಟೇಟ್ ರಿಸರ್ವ್ ಪೋಲೀಸ್ (ಸರ್ವಿಸ್) ರೂಲ್ಸ್, (2) ಮೈಸೂರು ವಿಲೇಜ್ ಪೋಲೀಸ್ ರೂಲ್ಸ್. ನಿಯಮಗಳ ಪ್ರಕಾರ ಕೆಲಸ ನಡೆಯುತ್ತಿದೆ.

ಶ್ರೀ ಎಸ್. ಸಿ. ಕುಬಸದ್.—ಇತ್ತೀಚೆಗೆ ಸೈಕಲ್ ಲೈಟ್ ಇಲ್ಲದೇ ರೈಡ್ ಮಾಡಿದರೆ ತಡೆಯುವುದು ಅಥವಾ ಟ್ರಿಪಲ್ ರೈಡ್ ಮಾಡುವುದನ್ನು ತಡೆಗಟ್ಟುವುದು ಯಾವುದೂ ಮಾಡುತ್ತಿಲ್ಲ, ರೂಲ್ಸನ್ನೇನಾದರೂ ಸರ್ಕಾರದವರು ರಿಲ್ಯಾಕ್ಸ್ ಮಾಡಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಕಾನೂನಿಗೆ ವಿರುದ್ಧವಾಗಿ ಯಾವುದಾದರೂ ನಡೆಯುತ್ತಾ ಇದ್ದರೆ ಅಧಿಕಾರಿಗಳು ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎಸ್. ಸಿ. ಕುಬಸದ್. —ಅಂತಹ ಸಂದರ್ಭಗಳಲ್ಲಿ ಅವರಮೇಲೆ ಖಟ್ಲೆ ಮಾಡುತ್ತಾ ಇದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಟ್ರಾಫಿಕ್ ರೂಲ್ಸ್ ಪ್ರಕಾರ ಇದೆಲ್ಲಾ ಬರುತ್ತದೆ. ಈ ಎಲ್ಲಾ ವಿಷಯಗಳೂ ಸರ್ಕಾರದ ಹತ್ತಿರ ಬರಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಹಳ್ಳಿಯ ಪಟೇಲರಿಗೆ ಈ ಪೋಲೀಸ್ ಅಧಿಕಾರ ವಹಿಸಿ ಕೊಡತಕ್ಕ ಪರಿಸ್ಥಿತಿ ಇದೆಯಲ್ಲಾ ಇದರಿಂದ ಅಲ್ಲಿ ಬಹಳ ದೊಡ್ಡ ಅನ್ಯಾಯ ನಡೆಯುತ್ತಾ ಇದೆ ಅನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಅಂಥಾದ್ದನ್ನು ಪರಿಶೀಲನೆ ಮಾಡಿ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅನ್ಯಾಯ ನಡೆಯುತ್ತಾ ಇರುವುದಕ್ಕೆ ಕ್ರಮ ತೆಗೆದುಕೊಳ್ಳಬಹುದು, ಅವರನ್ನು ತೆಗೆದುಹಾಕಬಹುದು, ಅಥವಾ ಮತ್ತೇನಾದರೂ ಮಾಡಬಹುದು. ಅದರೆ ಅನ್ಯಾಯ ನಡೆಯುತ್ತದೆ ಎಂದು ಮೊದಲೇ ಊಹೆ ಮಾಡಿಕೊಂಡು ಏನೂ ಮಾಡುವುದಕ್ಕಾಗುವುದಿಲ್ಲ.

Smt. M. R. LAKSHAMMA.—Is it not increasingly felt that the Rules pertaining to an Act should be laid along with the main Act before the Legislature so as to facilitate the implementation of the Act and the Rules simultaneously ?

Sri VEERENDRA PATIL.—We invariably do that. Whenever a Bill is passed we simultaneously draft the rules also, but in certain cases the concurrence of the Government of India is also necessary and in certain other cases some other provision for some other Acts has to be made in order to finalise those Rules. For these reasons there will be some sort of delay in finalising the Rules.

ಶ್ರೀ ಕೆ. ಎಸ್. ಚನ್ನಪ್ಪ.—ನಮ್ಮ ಪಕ್ಕದ ರಾಜ್ಯದಲ್ಲಿ ಪಟೇಲರಿಗೆ ಪವರ್ಸ್ ಕೊಟ್ಟಿದ್ದಾರೆ, ಅಲ್ಲಿ ಸುಸೂತ್ರವಾಗಿ, ಬಿಗಿಯಾಗಿ ಹಳ್ಳಿಯಲ್ಲಿ ಕೆಲಸ ನಡೆಯುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಹಳ್ಳಿಯ ಪಟೇಲರಿಗೆ ಈ ರೀತಿಯಿಂದ ಹೆಚ್ಚಿನದೇನಾದರೂ ಕೆಲಸ ವಹಿಸಿದರೆ ಅವರು ಮಾಡುತ್ತಾರೆ. ಆದರೆ ನಾವು ಅವರಿಗೆ ಕೊಟ್ಟಿರುವ ಅಧಿಕಾರ ಬಹಳ ಕಡಿಮೆ. ಇದರ ಸಲುವಾಗಿ ಪ್ರತ್ಯೇಕವಾಗಿ ಒಬ್ಬರು ಇರಬೇಕೆಂದರೆ ಬಹಳ ಖರ್ಚಾಗುತ್ತದೆ. ಯಾರಾದರೂ ಅಧಿಕಾರ ಕೊಟ್ಟಿದ್ದು ದುರುಪಯೋಗ ಮಾಡಿಕೊಂಡಾಗ ಅವನಮೇಲೆ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಕಾದಷ್ಟು ಅವಕಾಶವಿರುತ್ತದೆ.

ಶ್ರೀ ಜಿ. ವಿ. ಆಂಜನಪ್ಪ.—ಮೈಸೂರು ವಿಲೇಜ್ ಪೋಲೀಸ್ ರೂಲ್ಸ್ ಇನ್ನೂವರೆಗೂ ಆಗದೇ ಇರುವುದರಿಂದ ಮೈಸೂರು ಸಂಸ್ಥಾನದಲ್ಲಿ ಪೋಲೀಸ್ ಪಟೇಲರ ನೇಮಕವಾಗಿಲ್ಲ ಎಂದು ಭಾವನೆ ಮಾಡೋಣವೇ ?

ಶ್ರೀ ವೀರೇಂದ್ರ ಪಾಟೀಲ್.—ಹೌದು. ಅದರಲ್ಲಿ ರೆವಿನ್ಯೂ ಪಟೇಲರಿಗೇ ಕೆಲವು ಅಧಿಕಾರಗಳನ್ನು ಕೊಡಬೇಕೆಂದು ಇದೆ, ಅದರ ಜೊತೆಗೆ ಲ್ಯಾಂಡ್ ರೆವಿನ್ಯೂ ಬಿಲ್ಲಿನಲ್ಲೂ ಕೂಡ ರೆವಿನ್ಯೂ ಪಟೇಲರಿಗೆ ಕೆಲವು ಅಧಿಕಾರಗಳನ್ನು ಕೊಡುವುದು ಇದೆ. ಅದಕ್ಕಾಗಿ ಒಂದು ಅಮೆಂಡಿಂಗ್ ಬಿಲ್ ಬರುತ್ತದೆ, ಅದನ್ನು ಇಷ್ಟರಲ್ಲೇ ಪಾಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಟಿ. ಶಾಮಯ್ಯಗೌಡ.—ಖೂನಿ ಆದರೆ ಡೆತ್ ಸೆಂಟೆನ್ಸ್, ಲೈಫ್ ಸೆಂಟೆನ್ಸ್ ಕೊಡುತ್ತಾರೆ. ಮರ್ಡರ್‌ಗೆ ಹತ್ತರಷ್ಟು ಮೀರಿ ಬಸ್ ಆಕ್ಸಿಡೆಂಟ್ಸ್ ಆಗುತ್ತವೆ. ಪೋಲೀಸ್ ಟ್ರಾಫಿಕ್ ರೂಲ್ಸ್ ಎನ್‌ಫೋರ್ಸ್ ಮಾಡದೆ ಟ್ರಾಫಿಕ್ ಇರ್ರೆಗ್ಯೂಲರ್ ಆಗಿ ನಡೆಯುತ್ತಾ ಇರುವುದೇ ಇದಕ್ಕೆ ಕಾರಣ ಅಂತ ಗೊತ್ತೇ ?

ಶ್ರೀ ವೀರೇಂದ್ರ ಪಾಟೀಲ್.—ಇದಕ್ಕೆ ಆಗಲೇ ಉತ್ತರ ಹೇಳಿದ್ದೇನೆ.

Annual Planning of the State

156. Smt. M. R. LAKSHAMMA (Graduates' Constituency).—

Will the Minister for Finance, Planning and Youth Welfare be pleased to state :—

(*a*) the outcome of the recent talks of the State Ministry with the Deputy Chairman, Planning Commission ;

(*b*) whether there has been a second look at the Plan of the State ;

(*c*) if so, the estimates of State's annual plan for the year 1969-70 ?

Sri RAMAKRISHNA HEGDE (Minister for Finance, Planning and Youth Welfare).—

(*a*) The discussions with the Deputy Chairman, Planning Commission were informal and related mainly to strengthening the Planning and Evaluation machinery so as to ensure better implementation of the Plan Schemes.

(*b*) Does not arise.

(*c*) Does not arise.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಉತ್ತರ ಹೇಳಿರುವುದು ಚರ್ಚೆ ಔಪಚಾರಿಕವಾದದ್ದು ಎಂದು ಇದೆ, ಔಪಚಾರಿಕವಾಗಿದ್ದ ಪಕ್ಷದಲ್ಲಿ ಯೋಜನೆಗಳನ್ನು ಉತ್ತಮ ರೀತಿಯಲ್ಲಿ ಕಾರ್ಯಗತವಾಗುವುದನ್ನು ಧೃಡಪಡಿಸಿಕೊಳ್ಳುವುದರ ಜೊತೆಯಲ್ಲಿ ಕೆಲವು ವಿಷಯಗಳನ್ನು ಚರ್ಚೆ ಮಾಡಲಾಯಿತು ಎಂದು ತಿಳಿದುಕೊಳ್ಳೋಣವೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಔಪಚಾರಿಕವಲ್ಲ. ಕನ್ನಡದಲ್ಲಿ ತಪ್ಪಾಗಿದೆ. ಇದು ಅನೌಪಚಾರಿಕ ಅಂತ ಇರಬೇಕು.

3–30 P.M.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಇದೇ ಸಂದರ್ಭದಲ್ಲಿ ಆ ಪ್ಲಾನಿಂಗ್ ಸಮಿತಿಯವರಿಗೆ ಸಂಬಂಧಪಟ್ಟ ಹಾಗೆ ಆ ಪಾಂಡೆ ಸಮಿತಿಯವರು ಮೈಸೂರು ರಾಜ್ಯದಲ್ಲಿ ಕೈಗಾರಿಕಾಭಿವೃದ್ಧಿ ಸಾಕಷ್ಟು ಸಾಗಿದೆ. ಆದ್ದರಿಂದ ಇಲ್ಲಿ ಕೈಗಾರಿಕೆಗಳನ್ನು ಪ್ರಾರಂಭಮಾಡತಕ್ಕ ಅಗತ್ಯವಿಲ್ಲ, ಎಂದು ಹೇಳಿದ ವಿಷಯಗಳನ್ನು ಚರ್ಚೆಮಾಡಲಾಯಿತೇ ?

ಶ್ರೀ ರಾಮಕೃಷ್ಣ ಹೆಗಡೆ.—ಆ ಪಾಂಡೆ ಸಮಿತಿಯನ್ನು ಅಲ್ಲಿ ಚರ್ಚೆಮಾಡತಕ್ಕ ಅಗತ್ಯವಿರಲಿಲ್ಲ. According to certain norms prepared by the Committee, Mysore State comes under the category of industrially advanced States. This matter

can be disputed or discussed only in a higher forum like the National Development Council, which we are going to do. On this occasion, we did not discuss anything about the Pande Commission Report.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಮೈಸೂರು ರಾಜ್ಯದ ಒಬ್ಬ ಮನುಷ್ಯನ ಸರಾಸರಿ ಉತ್ಪತ್ತಿ ಇಂಡಿಯಾದೇಶದ ಸರಾಸರಿ ಉತ್ಪತ್ತಿಗಿಂತ ಹೆಚ್ಚಾಗಿರುವುದರಿಂದ ನಮ್ಮ ರಾಜ್ಯಕ್ಕೆ ಬರಬೇಕಾದ ಪಂಚವಾರ್ಷಿಕ ಯೋಜನೆಯ ಹಣ ಖೋತಾ ಆಯಿತೇ ?

ಶ್ರೀ ರಾಮಕೃಷ್ಣ ಹೆಗಡೆ.—ನಾವು ಹಿಂದೆ ಈ ವಿಷಯವನ್ನು ಚರ್ಚೆಮಾಡಿದಾಗ ಆಲ್ ಇಂಡಿಯಾ ಪರ್ ಕ್ಯಾಪಿಟಾ ಇನ್‌ಕಂ 420 ಇತ್ತು. ಆಗ ನಮ್ಮ ಮೈಸೂರಿನ ಪರ್ ಕ್ಯಾಪಿಟಾ ಇನ್‌ಕಂ 421 ಇತ್ತು. ಸೆಂಟ್ರಲ್ ಅಸಿಸ್ಟೆನ್ಸನ್ನು ರಾಜ್ಯಗಳಿಗೆ ಹಂಚತಕ್ಕ ಬಗ್ಗೆ ನೂರಕ್ಕೆ ಹತ್ತರಂತೆ ಯಾವ ಯಾವ ರಾಜ್ಯಗಳು ಬ್ಯಾಕ್‌ವರ್ಡ್ ಆಗಿವೆಯೋ ಅವುಗಳಿಗೆ ಕೊಡಬೇಕೆಂದೂ ಅವರು ಹೇಳಿದರು. ಅದಕ್ಕೆ ನಾವು ಒಪ್ಪಿಲ್ಲ. 1965–66 ರಿಂದ ಅಪ್‌ಟು ಡೇಟ್ ವರೆಗೆ ನ್ಯಾಷನಲ್ ಸರ್ವೆ ಆಫ್ ಇಂಡಿಯಾ ಅವರು ಪರ್ ಕ್ಯಾಪಿಟಾ ಇನ್‌ಕಂ ತಯಾರಿಸಿಲ್ಲ. ಅಲ್ಲಿಗೆ ನಮ್ಮ ಅಧಿಕಾರಿಗಳನ್ನು ಕಳುಹಿಸಿ ಚರ್ಚೆಮಾಡುತ್ತಿದ್ದೇನೆ. ಅದಿನ್ನೂ ತೀರ್ಮಾನವಾಗಿಲ್ಲ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಸರಾಸರಿ ಒಬ್ಬನ ಉತ್ಪತ್ತಿಯನ್ನು ನಿಗದಿ ಮಾಡತಕ್ಕ ಕಾಲದಲ್ಲಿ ಅಗ್ರಿಕಲ್ಚರಲ್ ಲೇಬರರ್ಸನ್ನು ಲೆಕ್ಕಕ್ಕೆ ತೆಗೆದುಕೊಂಡಿದ್ದಾರೋ ಅಥವಾ ಬರಿ ನಗರದಲ್ಲಿರತಕ್ಕ ಜನರನ್ನು ಲೆಕ್ಕಕ್ಕೆ ತೆಗೆದುಕೊಂಡಿದ್ದಾರೋ ?

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಕೆಲವು ನಿಬಂಧನೆಗಳಿವೆ. ಅದರ ಪ್ರಕಾರ ಅದನ್ನು ನಿರ್ಣಯ ಮಾಡಲಾಗುತ್ತದೆ.

Sri G. V. GOWDA.—May I know the Annual Plan outlay for Mysore State for 1969–70 and what would be the Central assistance ?

Sri RAMAKRISHNA HEGDE.—The final size of the Annual Plan for 1969–70 has been fixed by the Planning Commission at 50.50 crores of rupees, out of which Rs. 30 crores 60 lakhs will be the Central assistance.

ಶ್ರೀ ಜಿ. ವಿ. ಅಂಜನಪ್ಪ.—ಆ ಫೈನಾನ್ಸ್ ಕಮಿಷನ್ನಿನವರ ವರದಿಯ ಪ್ರಕಾರ ನಮ್ಮ ರಾಜ್ಯಕ್ಕೆ ಬರತಕ್ಕ ಕೇಂದ್ರದ ಧನಸಹಾಯ ಕಡಿಮೆಯಾದರೂ ಸರ್ಕಾರದವರು 1969-70 ಕ್ಕೆ ನಿಗದಿಮಾಡಿರತಕ್ಕ ಪಂಚವಾರ್ಷಿಕಯೋಜನೆಯನ್ನು ನಡೆಸೇನಡೆಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈ ವರ್ಷಕ್ಕೆ ನಿಗದಿಯಾಗಿರತಕ್ಕ ಯೋಜನಾಕಾರ್ಯಗಳನ್ನು ನಡೆಸಲೇಬೇಕೆಂಬ ತೀರ್ಮಾನವನ್ನು ಮಾಡಿದ್ದೇವೆ.

Sri G. V. GOWDA.—May I know what are the ways by which the deficit of Rs. 20 crores will be augmented, and how does the Central assistance compare with other States like Kerala, Maharashtra and Madras ?

Sri RAMAKRISHNA HEGDE.—This time, the Central assistance was not on an *ad hoc* basis. The Central assistance was determined on certain formula accepted by the National Development Council—I should say accepted by majority. Actually, Mysore did not accept the formula worked out by the Planning Commission. It may not be quite correct to say "accepted by majority" because vote was not taken. They say it is on the basis of consensus. Central assistance was determined on the basis of the following formula :—

10 per cent of the total assistance will be distributed on the basis of backwardness as determined by per capita income;
10 per cent on the basis of incomplete projects and similar certain other criteria is also taken.

(SRI RAMAKRISHNA HEGDE)

Sir, I can give the details, but it is a long thing. There is no question of comparison with other States, because it was not given on *ad hoc* basis.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ರಾಜ್ಯಾಭಿವೃದ್ಧಿಯು ಯುಕ್ತರೀತಿಯಲ್ಲಿ ಮುಂದುವರಿಯಲು ವರ್ಷೇ ವರ್ಷೇ ಹೀಗೆ ಹಣ ಕಡಿಮೆಯಾಗುತ್ತಾ ಹೋದರೆ ಮುಂದೇನು ಮಾರ್ಗ ? ಹಿಂದೆ ಯಾವುದೋ ಕಾರಣವನ್ನು ಇಟ್ಟುಕೊಂಡು ನಮಗೆ ದೊರೆಯಬೇಕಾದ ಸೆಂಟ್ರಲ್ ಅಸಿಸ್ಟೆನ್ಸನ್ನು ಕಡಮೆ ಮಾಡಿದರು. ಈಗ ಕಡಮೆಯಾಗಿರುವುದಕ್ಕೆ ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ.—ನಾನಾಗಲೇ ಹೇಳಿದ ಕಾರಣಗಳಿಂದ ಅವರು ಅಸಿಸ್ಟೆನ್ಸನ್ನು ಕಡಮೆ ಮಾಡಿದ್ದಾರೆ. ರಾಜ್ಯಗಳಿಗೆ ಇನ್‌ಕಂಟ್ಯಾಕ್ಸ್ ಬಾಬಿನಿಂದ ನಮಗೆ ದೊರೆಯಬೇಕಾದ ಸಹಾಯದ್ರವ್ಯದ ಬಗ್ಗೆ ಅವರು ರಾಜ್ಯದಲ್ಲಿರತಕ್ಕ ಪ್ರಜಾಸಂಖ್ಯೆಯ ಆಧಾರದ ಮೇಲೆ ಹಂಚಬೇಕೆಂದು ಒಂದು ನಿಲುವನ್ನು ತೆಗೆದುಕೊಂಡಿದ್ದಾರೆ. ಇನ್ನು ಸೆಂಟ್ರಲ್ ಅಸಿಸ್ಟೆನ್ಸ್ ಕೊಡತಕ್ಕ ವಿಚಾರದಲ್ಲಿ ರಾಜ್ಯಗಳ ಬ್ಯಾಕ್‌ವರ್ಡ್‌ನೆಸ್ ನೋಡಿ ಕೊಡಬೇಕೆಂದು ಹೇಳುತ್ತಿದ್ದಾರೆ. ಹೀಗೆ ಈ ಎರಡೂ ನಿಲುವುಗಳು ನಮಗೆ ಅನಾನುಕೂಲವಾಗಿದೆ.

Smt. M. R. LAKSHAMMA.—May I know whether the per capita income is calculated on the basis of central industries which are located here, the advantages of which do not flow to the Mysoreans in the main ?

Sri RAMAKRISHNA HEGDE.—Actually, if you see from that angle, Central industries are not too many here.

Sri G. V. GOWDA.—Is it not a fact that the criteria envisaged has not been followed by the Fifth Finance Commission ?

Sri RAMAKRISHNA HEGDE.—The other day, I submitted to the House that in my humble opinion the Fifth Finance Commission has exceeded its jurisdiction.

Sri G. V. GOWDA.—Since the constitutional provision has been violated, is it not open to the State Government to go to the Supreme Court ?

Sri RAMAKRISHNA HEGDE.—We have taken up this question with the Prime Minister already. We shall consider the question at the proper time.

Smt. M. R. LAKSHAMMA.—Is it not a fact that according to the latest survey in Mysore there are a large number of people whose income is just Re. 1 per day and below ?

Sri RAMAKRISHNA HEGDE.—May be, but that is not relevant.

Smt. M. R. LAKSHAMMA.—Should not that criteria be taken into consideration by the Fifth Finance Commission ?

Sri RAMAKRISHNA HEGDE.—We have actually opposed the idea of per capita income altogether. We have told the Finance Commission that the idea of distributing funds on per capita income is totally wrong and it does not come under the purview of the Finance Commission. The Finance Commission has to recommend to the Government of India in regard to actual deficit or surplus in the revenue accounts of various

State Governments according to their own projection for a period of five years, and also to determine the principles on which the devolution of taxes should take place.

ಶ್ರೀ ಬಿ. ಚನ್ನಬೈರೇಗೌಡ.—ಮಂತ್ರಿಗಳು ಪ್ರೈಮ್‌ಮಿನಿಸ್ಟರ್ ಅವರಿಗೆ ಬರದಿದ್ದೇವೆ ಎಂದು ಹೇಳಿದರು. ಈಗ ಪ್ರೈಮ್‌ಮಿನಿಸ್ಟರ್ ಅವರು ನಿಮ್ಮ ಪಕ್ಷದವರಲ್ಲ. ಈಗ ಅದರ ಬಗ್ಗೆ ನ್ಯಾಯ ದೊರಕದಿದ್ದರೆ ಹೇಗೆ ಮುಂದೆ ನ್ಯಾಯ ಪಡೆಯುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ಪ್ರೈಮ್‌ಮಿನಿಸ್ಟರ್ ಅವರು ಯಾವ ಪಕ್ಷದವರು ಯಾವ ಪಕ್ಷದವರಲ್ಲವೆಂದು ಹೇಳುವ ಸಂಬಂಧವಿಲ್ಲ. ಅವರು ಕಾಂಗ್ರೆಸ್ ಪಕ್ಷದವರು ಈಗ. ನಾಳೆ ಬೇರೆ ಪಕ್ಷದವರಾಗಿದ್ದು ಪ್ರೈಮ್‌ಮಿನಿಸ್ಟರ್ ಆಗಬಹುದು. ಆದರೆ ಕಾಂಗ್ರೆಸ್ ಪಕ್ಷ ಇದ್ದೇ ಇರುತ್ತದೆ. ಆಗ ಸೆಂಟ್ರಲ್ ಗೌರ್ನಮೆಂಟ್ ಇದೆ, ಇಲ್ಲವೆಂದು ಹೇಳುವ ಹಾಗೆ ಇಲ್ಲ.

Sri G. V. GOWDA.—Is it not a fact that the State Government over-estimated its revenue receipts ?

Sri RAMAKRISHNA HEGDE.—No, Sir. Actually our projection was very objective and realistic and Mysore Government was complimented on that. We did not furnish either under-estimated or over-estimated figures.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಪರ್ ಕ್ಯಾಪಿಟಾ ಇನ್‌ಕಂ ಲೆಕ್ಕ ಹಾಕಬೇಕಾದರೆ ಮದ್ಯಪಾನ ಮಾರಾಟದಿಂದ ಹಣ ಎಷ್ಟು ಬರುತ್ತದೆಂಬುದನ್ನು ತಿಳಿದು ಎಸ್ಟಿಮೇಟ್ ಮಾಡಿದ್ದೀರಾ !

ಶ್ರೀ ರಾಮಕೃಷ್ಣ ಹೆಗಡೆ.—ಅದು ಬರುವುದಿಲ್ಲ. ಪರ್ ಕ್ಯಾಪಿಟಾ ಇನ್‌ಕಂನ್ನು ಟೋಟಲ್ ನ್ಯಾಷನಲ್ ಪ್ರೊಡಕ್ಷನ್‌ಮೇಲೆ ಲೆಕ್ಕ ಹಾಕುತ್ತೇವೆ.

Increasing Crimes in Rural Areas by Liberalisation of Prohibition Policy

202. **Sri C. BANDI GOWDA** (Teachers' Constituency).—

Will the Minister for Finance, Planning and Youth Welfare be pleased to state :—

(*a*) whether there has been an increase in the number of Crimes in the Rural areas of the State after the recent liberalisation of its prohibition policy by the State Government ;

(*b*) if so, the measures that have been contemplated by the Government to check the incidence of crimes ?

Sri RAMAKRISHNA HEGDE (Minister for Finance, Planning and Youth Welfare).

(*a*) No.

(*b*) Does not arise in view of reply to (*a*) above.

ಶ್ರೀ ಸಿ. ಬಂಡೀಗೌಡ.—(ಅ)ಗೆ ಉತ್ತರವಾಗಿ ಪಾನನಿರೋಧವನ್ನು ಸಡಿಲಿಸಿದಮೇಲೆ ಅಪರಾಧಗಳ ಸಂಖ್ಯೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿಲ್ಲವೆಂದು ಹೇಳಿದೆ. ಕಳೆದ ಮೂರು ವರ್ಷಗಳಲ್ಲಿ ಎಷ್ಟಿತ್ತೆಂಬುದನ್ನು ತಿಳಿಸಲು ಸಾಧ್ಯವೇ ?

ಶ್ರೀ ರಾಮಕೃಷ್ಣ ಹೆಗಡೆ.—ಸಾಧ್ಯ. ಅಂಕಿ ಅಂಶಗಳು ಈ ರೀತಿ ಇವೆ.

				ಮರ್ಡರ್ ಡಾಕಾಯತಿ ರಾಬರಿ ಸೇರಿಸಿ ಆದಂಥ ಅಪರಾಧಗಳು	ಮರ್ಡರ್ಸ್
1-1-66	ರಿಂದ	31-12-66	ವರೆಗೆ	26,572	732
1-1-67	ರಿಂದ	31-12-67	ವರೆಗೆ	25,957	665
1-1-68	ರಿಂದ	31-12-68	ವರೆಗೆ	27,870	732
1-1-69	ರಿಂದ	31-7-69	ವರೆಗೆ	14,687	461

ಶ್ರೀ ಸಿ. ಬಂದೀಗೌಡ.—ಪಾನನಿರೋಧ ಸಡಿಲಮಾಡಿದ್ದು ಯಾವಾಗ ?

ಶ್ರೀ ರಾಮಕೃಷ್ಣ ಹೆಗಡೆ.—ಪಾನನಿರೋಧ ಸಡಿಲಿಸಿದ್ದು 1968 ನೇ ಜನವರಿಯಿಂದ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಈಗ ತಾವು ಅಪರಾಧಗಳ ಸಂಖ್ಯೆಯನ್ನು ಕೊಟ್ಟಿದ್ದೀರಿ. ಅವು ಪೋಲೀಸ್ ಸ್ಟೇಷನ್ನಿನಲ್ಲಿ ರಿಜಿಸ್ಟರ್ ಆಗಿರತಕ್ಕದ್ದೋ ಅಥವಾ ಅದರಲ್ಲಿ ಪೋಲಿಸ್ ಸ್ಟೇಷನ್ನಿನಲ್ಲಿ ಬಂದು ತೀರ್ಮಾನವಾಗಿರುವುದು ಸೇರಿದೆಯೋ ?

ಶ್ರೀ ರಾಮಕೃಷ್ಣ ಹೆಗಡೆ.—ಪೋಲೀಸ್ ಸ್ಟೇಷನ್ನಿನಲ್ಲಿ ರಿಜಿಸ್ಟರ್ ಆಗಿರುವುದು.

ಶ್ರೀ ಎ. ಎಚ್. ಶಿವಾನಂದಸ್ವಾಮಿ.— ಕಂಪ್ಲೇಂಟ್ ಕೊಟ್ಟಿದ್ದು ಸಿಗಲಿಲ್ಲವೆಂದು ಬಿಟ್ಟಿರುವುದು, ಇದು ಸರಿಯಿಲ್ಲವೆಂದು ಹೇಳಿರುವುದು—ಅವೂ ಸೇರಿವೆಯೋ ?

ಶ್ರೀ ರಾಮಕೃಷ್ಣ ಹೆಗಡೆ.—ರಿಜಿಸ್ಟರ್ ಆಗಿರುವುದನ್ನು ಕೊಟ್ಟಿದೆ.

ಶ್ರೀ ವಿ. ಎಸ್. ಹಿರೇಗೌಡರ್.—ಗ್ರಾಮಾಂತರ ಪ್ರದೇಶಗಳಲ್ಲಿ ಪಾನ ಪ್ರತಿಬಂಧ ಶಿಥಿಲತೆಯಾದಮೇಲೆ ಕೆಲವರು ಒರಟಾಗಿ ಮಾತನಾಡುವುದು, ಅವಮಾನ ಮಾಡುವುದು, ಅನೇಕರ ಮನೆಗಳನ್ನು ಸುಲಿಗೆ ಮಾಡುವುದು ಆಗುತ್ತಿರುವಾಗ, ಸರ್ಕಾರದವರು ಅಪ್ರತ್ಯಕ್ಷವಾಗಿ ಆ ರೀತಿ ಅವಮಾನಕ್ಕೆ ಕಾರಣವಾದಂಥ ನಡವಳಿಕೆಗಳನ್ನು ಪ್ರತಿಬಂಧನ ಮಾಡುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅಂತಹ ದೂರುಗಳು ಪಾನನಿರೋಧ ಜಾರಿಯಲ್ಲಿ ಇದ್ದಾಗೂ ಬರುತ್ತಿತ್ತು. ಈಗ ಇನ್ನೂ ಹೆಚ್ಚಾಗಿವೆ.

ಶ್ರೀ ಕೆ. ಎಸ್. ಚನ್ನಪ್ಪ.—ಪಾನ ನಿರೋಧ ಜಾರಿಯಾದಮೇಲೆ ಜನ ಕಳ್ಳ ಭಟ್ಟಿ ಸಾರಾಯಿ ಕುಡಿದು ಉತ್ತಮರಾಗಿದ್ದಾರೆಂದು ತಮ್ಮ ಅಭಿಪ್ರಾಯವೇ ?

ಶ್ರೀ ರಾಮಕೃಷ್ಣ ಹೆಗಡೆ.—ಅವರ ಅಭಿಪ್ರಾಯ ಅವರಿಗೇ ಸರಿಯಾಗಿರಬಹುದು.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಪಾನ ನಿರೋಧವನ್ನು ತೆಗೆದು ಹಾಕಿದಮೇಲೆ ಕೆಲವರು ಅಲ್ಲಲ್ಲಿ ಮದ್ಯಪಾನದ ಅಂಗಡಿಗಳನ್ನು ಇಟ್ಟಿದ್ದಾರೆ. ಅವನ್ನು ಬಹಳ ಮುಖ್ಯವಾದ ಸ್ಥಳಗಳಲ್ಲಿ ಇಟ್ಟಿರುವುದರಿಂದ ಬಹಳ ಅನ್ಯಾಯವಾಗಿದೆ. ಪ್ರಾಧಾನ್ಯತೆ ಇಲ್ಲದೇ ಇರುವ ಕಡೆಗಳಿಗೆ ವರ್ಗ ಮಾಡಬೇಕೆಂದು ದೂರು ಕೊಟ್ಟರೆ, ತಕ್ಕ ಕ್ರಮವನ್ನು ತೆಗೆದುಕೊಂಡಿಲ್ಲ. ಇದರಿಂದ ನ್ಯಾಷನಲ್ ಹೈವೇ ರೋಡ್‌ಗಳಲ್ಲಿ ಬಹಳ ಗಲಾಟೆಯಾಗುತ್ತಿದೆ. ಜನ ಹೆದರಿ ಬೇರೆ ಕಡೆ ಹೋಗುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿವೆಯೋ ?

ಶ್ರೀ ರಾಮಕೃಷ್ಣ ಹೆಗಡೆ.—ಎಕ್ಸೈಜು ರೂಲ್ಸ್‌ನಲ್ಲಿ ಅದರ ಬಗ್ಗೆ ಕೆಲವೊಂದು ರಿಸ್ಟ್ರಿಕ್‌ಷನ್ಸ್ ಇವೆ. ಸ್ಕೂಲುಗಳು, ಆಸ್ಪತ್ರೆಗಳು, ದೇವಸ್ಥಾನಗಳು, ಮಸೀದಿಗಳು, ಚರ್ಚುಗಳು—ಇಂತಹ ಕಡೆಗಳಲ್ಲಿ ಎಲ್ಲಿಯೂ ಸಾರಾಯಿ ಅಂಗಡಿಗಳನ್ನು ತೆರೆಯಬಾರದು ಎಂದು ಇದೆ. ಅಂಥಾದ್ದು ಏನಾದರೂ ನಡೆದಿದ್ದರೆ, ಅದನ್ನು ನನ್ನ ಲಕ್ಷ್ಯಕ್ಕೆ ಮಾನ್ಯ ಸದಸ್ಯರು ತಂದರೆ ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಎಸ್. ಬಾಲಕೃಷ್ಣ ಗೌಡ.—ದೇವಸ್ಥಾನಗಳ ಹತ್ತಿರ ಅಂತಹ ಅಂಗಡಿಗಳನ್ನು ತಗೆಯಬಾರದೆಂದು ಮಾನ್ಯ ಮಂತ್ರಿಗಳು ಹೇಳಿದರು. ಮಹದೇಶ್ವರ ಬೆಟ್ಟದ ಹತ್ತಿರ 7 ವರ್ಷಗಳಿಂದಲೂ ಇರಲಿಲ್ಲ. ಈಗ ಹೊಸ ಕಾನೂನು ಜಾರಿಗೆ ಬಂದಮೇಲೆ ಅಂಥಾದ್ದಕ್ಕೆ ಅಲ್ಲಿ ಅವಕಾಶ ಕೊಟ್ಟಿದ್ದಾರೆ. ದಯವಿಟ್ಟು ಈಗ ಅಲ್ಲಿರುವ ಸಾರಾಯಿ ಅಂಗಡಿ ಮತ್ತು ಸೇಂದಿ ಅಂಗಡಿಗಳನ್ನು ತೆಗೆಸುವುದಕ್ಕಾಗುವುದಿಲ್ಲವೇ ?

Sri RAMAKRISHNA HEGDE.—The Hon. Member has made a request and it will be considered.

SHORT NOTICE QUSTIONS AND ANSWERS

Mass Demonstration by Ryota Sangha of Challakere

5. Sri G. V. ANJANAPPA (Graduates' Constituency).—

Will the Minister for Revenue be pleased to state :—

(a) whether the Ryota Sangha of Challakere taluk resorted to mass demonstration and hunger strike on 18th August 1969 before the taluk office ;

(b) whether they presented a representation to the Chief Minister through the Tahsildar ;

(c) if so, what are their demands ;

(d) the number of ryots that participated in hunger strike ;

(e) the steps taken by the Government in that behalf ?

Sri H. V. KOUJALGI (Minister for Revenue).—

(a) Yes.

(b) Yes.

(c) (1) Cancelling the increased rate on electricity,

(2) Abolition of Land Revenue and water rate and

(3) Declaration of Challakere taluk as a famine area.

(d) About 60.

(e) The demands (1) and (2) pertain to Statewide issues and the rates have been fixed by competent authorities. The relevant rules in each case, provide for remedies in cases of individual hardship if any due to erroneous application of the rules. As regards scarcity conditions 25 soil conservation works and 11 other works already started are in progress. Two new works also have been started. About five inches of widespread rainfall is reported during last week. There is therefore no need to declare the taluk as famine or Scarcity area.

ಶ್ರೀ ಜಿ. ವಿ. ಅಂಜನಪ್ಪ.—ವಿದ್ಯುತ್ ದರವನ್ನು ಇಳಿಸುವುದು, ಭೂಕಂದಾಯ ರದ್ದುಪಡಿಸುವುದು. ಈ ವಿಚಾರದಲ್ಲಿ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದ್ದಾರೆ.

ಶ್ರೀ ಎಚ್. ವಿ. ಕೌಜಲಗಿ.—ಎಲೆಕ್ಟ್ರಿಸಿಟಿ ದರ ಹೆಚ್ಚಾಗಿದೆ. ಅದು ಆ ಬೋರ್ಡಿಗೆ ಸಂಬಂಧ ಪಟ್ಟದ್ದು. ಅದನ್ನು ಹೆಚ್ಚು ಮಾಡುವುದು, ಕಡಿಮೆ ಮಾಡುವುದು ಅದರ ಬಗ್ಗೆ ಒಂದು ಟ್ಯಾರಿಫ್ ಕಮಿಟಿ ಇದೆ. ಅವರು ಹೇಳಿದಂತೆ ಮಾಡುತ್ತಾರೆ. ಎಷ್ಟು ಖರ್ಚಾಗುತ್ತದೆ ಮತ್ತು ಎಷ್ಟು ಉತ್ಪನ್ನ ಬರುತ್ತದೆಂಬುದನ್ನು ಅವರು ನೋಡುತ್ತಾರೆ. ಲ್ಯಾಂಡ್ ರೆವೆನ್ಯೂ ಅಬಾಲಿಷ್ ಮಾಡುವುದಿಲ್ಲವೆಂದು ಸರ್ಕಾರದವರು ನಿರ್ಣಯ ಮಾಡಿದ್ದಾರೆ. ಅದನ್ನು ಅಬಾಲಿಷನ್ ಮಾಡುವುದು ಸರ್ಕಾರದ ಧೋರಣೆಯಲ್ಲ.

ಶ್ರೀ ಜಿ. ವಿ. ಆಂಜನಪ್ಪ.—ತಾವು ಉತ್ತರದಲ್ಲಿ ನಿಯಮಗಳ ತಪ್ಪು ಪ್ರಯೋಗದಿಂದಾಗಿ ವೈಯಕ್ತಿಕ ಪ್ರಕರಣಗಳಲ್ಲಿ ತೊಂದರೆಯೇನಾದರೂ ಆಗಿದ್ದಲ್ಲಿ ಅಂಥ ಪ್ರಕರಣಗಳಲ್ಲಿ ಪರಿಹಾರ ನೀಡುವುದಕ್ಕೆ ಸಂಬಂಧಪಟ್ಟ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಎಂದು ಹೇಳಿದ್ದಾರೆ. ಚಳ್ಳಕೆರೆ ತಾಲ್ಲೂಕಿನಲ್ಲಿರತಕ್ಕ ಎರಡು ಸಾವಿರ ಜನರು ಧರಣಿ ಮುಷ್ಕರ ಹೂಡಿ, ಮೆರವಣಿಗೆ ಎಲ್ಲಾ ಮಾಡಿದ್ದಾರೆ. ಆದ್ದರಿಂದ ಕಂದಾಯ ರದ್ದು ಪಡಿಸಬೇಕು, ಹೆಚ್ಚಿಸಿದ ವಿದ್ಯುಚ್ಛಕ್ತಿ ದರ ಕಡಿಮೆ ಮಾಡಬೇಕೆಂಬುದನ್ನು ಸರ್ಕಾರದವರು ಏಕೆ ವಿಚಾರಿಸಿಲ್ಲ ?

ಶ್ರೀ ಎಚ್. ವಿ. ಕೌಜಲಗಿ.—ಕಂದಾಯ ರದ್ದುಪಡಿಸುವುದಿಲ್ಲ. ಸರ್ಕಾರದ ಧೋರಣೆಯನ್ನು ಈ ವಿಚಾರದಲ್ಲಿ ಅನೇಕ ಸಲ ಹೇಳಿದ್ದೇನೆ. ಎಲೆಕ್ಟ್ರಿಸಿಟಿ ದರ ಹೆಚ್ಚಿಸಿದುದರ ಬಗ್ಗೆ ಅವರಿಗೆ ಏನಾದರೂ ಮಾಡಬೇಕೆಂದರೆ, ಅವರು ಅದಕ್ಕೆ ಸಂಬಂಧಪಟ್ಟವರಲ್ಲಿ ಅರಿಕೆ ಮಾಡಿಕೊಳ್ಳಬಹುದು. ಇದನ್ನು ಸಾರ್ವಜನಿಕವಾಗಿ ಹೇಳಲಾಗುವುದಿಲ್ಲ.

ಶ್ರೀ ಜಿ. ವಿ. ಆಂಜನಪ್ಪ.—ಇದರ ಸಮಸ್ಯೆ ಇಡೀ ರಾಜ್ಯದಲ್ಲಿದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಅದು ಆ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟದ್ದು.

ಶ್ರೀ ಜಿ. ವಿ. ಆಂಜನಪ್ಪ.—ಸರ್ಕಾರದವರು ಅದನ್ನು ಪರಿಶೀಲನೆ ಮಾಡುತ್ತೀರಾ !

ಶ್ರೀ ಎಚ್. ವಿ. ಕೌಜಲಗಿ.—ಅದು ಎಲೆಕ್ಟ್ರಿಸಿಟಿ ಬೋರ್ಡಿಗೆ ಸಂಬಂಧಪಟ್ಟದ್ದು.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಅದು ಎಲೆಕ್ಟ್ರಿಸಿಟಿ ಬೋರ್ಡು ಆಗಿದ್ದರೂ, ಸರ್ಕಾರಿ ಮಟ್ಟಕ್ಕೆ ಬಂದಿದೆ. ಇವತ್ತು ಕೈಗಾರಿಕೆಗಳಿಗೆ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿ ಕೊಟ್ಟಿದ್ದೀರಿ. ಪಂಪ್‌ಸೆಟ್ಟುಗಳಿಗೆ ಬಹಳ ಹೆಚ್ಚಿನ ದರದಲ್ಲಿ ಅಂದರೆ, ಒಂದಕ್ಕೆ ಎರಡರಷ್ಟು ಕೊಡಬೇಕೆಂದು ಹೇಳಿದ್ದೀರಿ. ಮನೆಯಲ್ಲಿ ಮೋಟರು ಇಲ್ಲದೆ ಹೋದರೆ 65-70 ರೂಪಾಯಿ ಬಿಲ್ ಕಳಿಸುತ್ತಿದ್ದಾರೆ, ತಾವು ಏನಾದರೂ ಇದನ್ನು ಸರಿಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅವರು ಒಂದು ಕ್ರಮಕ್ಕೆ ಒಳಪಟ್ಟು ಧಾರಣೆಯನ್ನು ಫಿಕ್ಸ್ ಮಾಡಿದ್ದಾರೆ. ಅದಕ್ಕೆ ಒಂದು ಸ್ಟಾಚ್ಯುಟರಿ ಬೋರ್ಡು ಇದೆ, ಅದು ವಿಚಾರ ಮಾಡುತ್ತದೆ.

ಶ್ರೀ ಎಸ್. ಸಿ. ಕುಬಸದ.—ಟ್ಯಾರಿಫ್‌ನ್ನು ಏನಾದರೂ ಕಡಿಮೆ ಮಾಡಿದರೆ, ರೈತರ, ಸಂರಕ್ಷಣೆ ಮಾಡಿದಂತಾಗುತ್ತದೆ. ಅದಕ್ಕೆ ಸರ್ಕಾರದವರು ಸಬ್ಸಿಡಿ ಕೊಟ್ಟು ಸಹಾಯ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅದಕ್ಕೆ ಟಾರಿಫ್ ಬೋರ್ಡು ಏನು ನಿರ್ಣಯ ಕೊಡುತ್ತದೆ ಎಂದು ನೋಡಿಕೊಂಡು ಆಮೇಲೆ ವಿಚಾರ ಮಾಡಬಹುದು.

ಶ್ರೀ ಎಸ್. ಚನ್ನಪ್ಪ.—ಈ ಪಂಪ್‌ಸೆಟ್ ಕಥೆಯಲ್ಲಿ ದೇಶಾದ್ಯಂತ ಆಂದೋಳನ ನಡೆಯುತ್ತಿದೆ. ತಾವು ಹೇಳಿದ್ದೀರಿ ಅದಕ್ಕೆ ಒಂದು ಕಮಿಟಿ ಇದೆಯೆಂದು. ಆದರೆ, ತಾವು ಈ ಮಿನಿಮಂ ರೇಟ್ ವಿಚಾರದಲ್ಲಿ, ಡಿಪಾಜಿಟ್ ವಿಚಾರದಲ್ಲಿ, ಒಂದು ಕಮಿಟಿ ಮಾಡಿ ಪರಿಶೀಲಿಸುತ್ತೀರಾ !

ಶ್ರೀ ಎಚ್. ವಿ. ಕೌಜಲಗಿ.—ಸಾರ್ವಜನಿಕರಿಂದ ದೂರುಗಳು ಬಂದಿವೆ. ಅವುಗಳನ್ನು ಎಲೆಕ್ಟ್ರಿಸಿಟಿ ಬೋರ್ಡಿನವರು ವಿಚಾರ ಮಾಡುತ್ತಾರೆ ; ಅವರು ಏನೂ ನಿರ್ಣಯ ತೆಗೆದುಕೊಂಡಿಲ್ಲ.

ಶ್ರೀ ಜಿ. ವಿ. ಆಂಜನಪ್ಪ.—ಚಳ್ಳಕೆರೆ ತಾಲ್ಲೂಕನ್ನು ಕ್ಷಾಮ ಪ್ರದೇಶವೆಂದು ಸಾರಲು ಸಾಧ್ಯವಿಲ್ಲವೆಂದು ಹೇಳಿದ್ದೀರಿ. ತಾವು ಖಚಿತವಾಗಿ ಹೇಳುತ್ತೀರಾ, ಅಥವಾ ಮಳೆಗಾಲ ಆರಂಭ ವಾದಮೇಲೆ ಸ್ವಲ್ಪ ನೀರಾಗಿದೆ ಎಂದು ಹೇಳುತ್ತೀರಾ !

ಶ್ರೀ ಎಚ್. ವಿ. ಕೌಜಲಗಿ.—ಸರ್ಕಾರದ ಲೆಕ್ಕದ ಪ್ರಕಾರ 26ನೇ ಆಗಸ್ಟ್‌ನಂತರ ಅಲ್ಲಿ 5 ಇಂಚು ಮಳೆಯಾಗಿದೆ ಎಂದು ಇದೆ.

ಶ್ರೀ ಜಿ. ವಿ. ಆಂಜನಪ್ಪ.—ಚಳ್ಳಕೆರೆ ತಾಲೂಕು ಮೈಸೂರು ದೇಶದಲ್ಲಿ ಅತೀ ಕಡಿಮೆ ಮಳೆ ಯಾಗತಕ್ಕ ಪ್ರದೇಶ. ಅನೇಕ ಕಡೆಗಳಲ್ಲಿ, ಅನೇಕ ತಾಲೂಕುಗಳನ್ನು ಕ್ಷಾಮ ಪ್ರದೇಶವೆಂದು ಸಾರಿದರೂ, ಇದನ್ನು ಕ್ಷಾಮ ಪ್ರದೇಶವೆಂದು ಸಾರಲು ಸರ್ಕಾರಕ್ಕೆ ಏನು ಅಡ್ಡಿ ಆತಂಕಗಳು ಇವೆ ?

ಶ್ರೀ ಎಚ್. ವಿ. ಕೌಜಲಗಿ.—ಕ್ಷಾಮ ಪ್ರದೇಶವೆಂದು ಸಾರಬೇಕಾದರೆ ಕೆಲವು ನಿರ್ದಿಷ್ಟವಾದ ನಿಯಮಗಳು ಇವೆ. ಅಲ್ಲಿ ರೈತರಿಗೆ ಬತ್ತಲಕ್ಕೆ, ದನಗಳಿಗೆ ತಿನ್ನುವುದಕ್ಕೆ ಕುಡಿಯುವುದಕ್ಕೆ ಎಲ್ಲಾ ನೀರು ಸಿಗಬೇಕು. ಆ ದೃಷ್ಟಿಯನ್ನು ನೋಡಿಕೊಂಡು ಅದನ್ನು ಕ್ಷಾಮ ಪ್ರದೇಶವೆಂದು ಸಾರಲು ಸಾಕಷ್ಟು ಆಧಾರಗಳು ಇಲ್ಲ.

ಶ್ರೀ ಜಿ. ವಿ. ಆಂಜನಪ್ಪ.—ಚಳ್ಳಕೆರೆ ತಾಲೂಕಿನಲ್ಲಿ ಮುಂಗಾರು ಬೆಳೆಯೆಲ್ಲಾ ಒಣಗಿ ಹೋಗಿದೆ. ಮಳೆ ಬರುವುದಕ್ಕೆ ಮುಂಚೆ ಅವೆಲ್ಲಾ ಹಾಳಾಗಿ ಹೋಗಿದೆ. ಈಗ ಬರತಕ್ಕ ಮಳೆ ಯಿಂದ ಕುಡಿಯುವುದಕ್ಕೆ ಆಹಾರ ಬೆಳೆಯುವುದಕ್ಕೆ ಸಾಧ್ಯವಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಹಾಗೇನೂ ಇಲ್ಲ. ಕೆಲವು ರಾಗಿ, ನವಣೆ ಬೆಳೆಯುವುದಕ್ಕೆ ಸಾಧ್ಯವಿದೆ.

ಶ್ರೀ ಜಿ. ವಿ. ಆಂಜನಪ್ಪ.—ಸ್ವಾಮಿ, ಅಲ್ಲಿ ರಾಗಿ ಬೆಳೆಯುವುದಿಲ್ಲ ಎಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಅಲ್ಲಿ ನವಣೆ, ಸಜ್ಜೆ, ಹಾರ್ಸ್‌ಗ್ರಾಮ್ ಬೆಳೆಯುವುದಕ್ಕೆ ಸಾಧ್ಯವಿದೆ ಎಂದು ಅಲ್ಲಿ ಹೇಳುತ್ತಾರೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಚಳ್ಳಕೆರೆ ತಾಲೂಕಿನಲ್ಲಿ ವಿದ್ಯುಚ್ಛಕ್ತಿ ದರ ಹೆಚ್ಚಿಸಿರುದರ ಬಗ್ಗೆ ಚಳವಳಿ ಮಾಡಿದ್ದಾರೆ. ಈ ಮೋಟರ್ ಹಾಕಿದುದಕ್ಕೆ ಟಾರೀಫ್‌ನವರು ಏನು ಒಂದು ನಿಯಮ ಹಾಕಿದ್ದಾರೆ, ಅದು ವಿವೇಚನೆ ಇಲ್ಲದೆ ಮಾಡಿರತಕ್ಕ ನಿಯಮವಾಗಿದೆ. ಮೀಟರ್ ಇಲ್ಲದಿರುವುದರಿಂದ ಅವರು ಹೇಳಿದಷ್ಟು ಕೊಡಬೇಕಾಗುತ್ತದೆ. ಈ ಎಲ್ಲಾ ಪರಿಸ್ಥಿತಿ ಇರುವುದ ರಿಂದ ಡಿಪಾಸಿಟ್ ಬಗ್ಗೆ ಎಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಿ ರೈತರಿಗೆ ಸಹಾಯವಾಗುವಂತೆ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಪರಿಸ್ಥಿತಿ ಏನು ಇದೆ, ಅದನ್ನು ಬೋರ್ಡಿನವರು ವಿಚಾರ ಮಾಡುತ್ತಾರೆ.

ಶ್ರೀ ಜಿ. ವಿ. ಆಂಜನಪ್ಪ.—ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಿದವರು ಸುಮಾರು 60 ಜನರೆಂದು ಹೇಳಿದ್ದೀರಿ. ನನಗೆ ಅದು ಗೊತ್ತಿದೆ, ಅಲ್ಲಿ ಸುಮಾರು 315 ಜನರು ಭಾಗವಹಿಸಿ ದ್ದಾರೆ. ಅದನ್ನು ಮಂತ್ರಿಯವರು ಸರಿಯಾಗಿ ಹೇಳಿಲ್ಲ.

ಶ್ರೀ ಎಚ್. ವಿ. ಕೌಜಲಗಿ.—ಸರ್ಕಾರಿ ಲೆಕ್ಕದ ಪ್ರಕಾರ ಭಾಗವಹಿದವರು 60 ಮಂದಿ ಮಾತ್ರ.

ಶ್ರೀ ಜಿ. ವಿ. ಆಂಜನಪ್ಪ.—ಮಾನ್ಯ ಮುಖ್ಯಮಂತ್ರಿಯವರಿಗೆ ಕೊಟ್ಟಿರತಕ್ಕಂತಹ ಮನವಿ ಮಾನ್ಯ ಸಚಿವರ ಮುಂದಿದೆಯೇ ? ಅದರಲ್ಲಿ 315 ಮಂದಿ ರುಜು ಹಾಕಿದವರಿಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ.—315 ಮಂದಿ ರುಜು ಹಾಕುವವರು ಬೇರೆ, ಉಪವಾಸ ಮಾಡ ತಕ್ಕಂತವರು ಬೇರೆ. ಉಪವಾಸ ಮಾಡಿದವರು 60 ಮಂದಿ ಮಾತ್ರ.

ಶ್ರೀ ಜಿ. ವಿ. ಆಂಜನಪ್ಪ.—ರುಜು ಮಾಡತಕ್ಕವರು ನಾವು, ಉಪವಾಸ ಮಾಡಿರತಕ್ಕವರು ನಾವು, ನಮಗೆ ಗೊತ್ತಿದೆ.

Sri H. V. KOUJALGI.—The replies are based on the information that we have got from the local officers. The report of the local officers say that only 60 people have taken part in this. If more than that have taken part, that may be true. But at the time the Thasildar has taken note of it, there were only about 60.

Sri G. V. ANJANAPPA.—Let the Hon. Minister read the petition, Sir.

Mr. DEPUTY CHAIRMAN.—I have given an opportunity to the hon. Member to put a supplementary. He is persisting in his own way. The question Hour is over. The House will now rise for Tea and re-assemble at 4-30.

The House adjourned for Tea at Four of the Clock and re-assembled at Thirty-seven Minutes past Four of the Clock.

[MR. DEPUTY CHAIRMAN in the Chair]

Non-Furnishing Replies to Questions etc., by Government

ಶ್ರೀ ವೈ. ಎಸ್. ಪಾಟೀಲ್.—ಸ್ವಾಮಿ ಹುಬ್ಬಳ್ಳಿ ಹತ್ತಿರ ಇರುವ ಹಂಪಿಯಲ್ಲಿ ಶ್ರೀ ಮಧ್ವಾಚಾರ್ಯರ ವಿಗ್ರಹವನ್ನು ನಾಶ ಮಾಡಿರುವ ಬಗ್ಗೆ ಒಂದು ಗಮನ ಸೆಳೆಯುವ ಸೂಚನೆಯನ್ನು ನಾನು ತಮಗೆ ಕಳುಹಿಸಿದ್ದೆ. ಅದಕ್ಕೆ ಉತ್ತರ ಬರಲಿಲ್ಲ.

ಉಪಸಭಾಪತಿಯವರು.—ನಾನು ಅದನ್ನು ನೋಡುತ್ತೇನೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ನಾನು ಕಳುಹಿಸಿದ ಕೆಲವು ಪ್ರಶ್ನೆಗಳಿಗೆ ಇನ್ನೂ ಉತ್ತರ ಬಂದಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಆ ಪ್ರಶ್ನೆಗಳಿಗೆ ಉತ್ತರವನ್ನು ತರಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬಂದೀಗೌಡ.—ನಾನು 15 ಪ್ರಶ್ನೆಗಳನ್ನು ಕಳುಹಿಸಿದ್ದೆ. ಆ ಪೈಕಿ ಎರಡು ಪ್ರಶ್ನೆಗಳಿಗೆ ಮಾತ್ರ ಉತ್ತರ ಬಂದಿದೆ. ಆದ್ದರಿಂದ ಕೂಡಲೇ ಅವುಗಳಿಗೆ ಉತ್ತರ ಬರುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ನನ್ನ ಪ್ರಶ್ನೆಗಳಿಗೂ ಇನ್ನೂ ಉತ್ತರ ಬಂದಿಲ್ಲ.

Mr. DEPUTY CHAIRMAN.—I will contact the Leader of the House and request him to send answers to as many questions as possible.

ಶ್ರೀ ಜಿ. ವಿ. ಆಂಜನಪ್ಪ.—ನಾವು ಹೇಳಬೇಕಾದ್ದನ್ನೆಲ್ಲಾ ಹೇಳಿದ್ದೇವೆ. ಆದರಿಂದ ಏನು ಪ್ರಯೋಜನ ಆಗಲಿಲ್ಲ. ಸರ್ಕಾರದ ನೀತಿಯನ್ನು ಪ್ರತಿಭಟಿಸಿ ಈ ಸಭೆಯನ್ನು ಒಂದು ದಿವಸ ಮುಂದಕ್ಕೆ ಹಾಕಿದರೆ ಆಗ ಸರಿಯಾಗಿ ಪ್ರಶ್ನೆಗಳಿಗೆ ಉತ್ತರ ಬರುತ್ತವೆ.

ಉಪಸಭಾಪತಿಯವರು.—ಈ ಬಗ್ಗೆ ಸಭಾನಾಯಕರನ್ನು ನಾನು ಕನ್ಸಲ್ಟ್ ಮಾಡಿ ಆದಷ್ಟು ಜಾಗ್ರತೆ ಉತ್ತರ ಬರುವಂತೆ ಪ್ರಯತ್ನ ಮಾಡುತ್ತೇನೆ.

Sri V. S. HIREGOUDER.—Sir, I have sent a short-notice question, which is of great importance, relating to the DCC Bank at Dharwar which has not distributed the sanctioned loan for supply of manure up to this date. I have been receiving trunk calls from TDB Members, and Society Members. I want the Government to furnish reply to this House and also take action on that. Will the Chair be pleased to arrange to get the reply from the Government?

Mr. DEPUTY CHAIRMAN.—That short-notice question has been forwarded to the Government.

Supply of report of the Public Accounts Committee

ಶ್ರೀ ಎಸ್. ಪಿ. ರಾಜಣ್ಣ.—ಸ್ವಾಮಿ, ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಯನ್ನು ಈ ಸಭೆಯಲ್ಲಿ ಮಂಡಿಸಿ ಒಂದು ವಾರ ಆಯಿತು. ಆದರೆ ಅದರ ಕಾಪಿಗಳು ಇನ್ನೂ ನಮಗೆ ಬರಲಿಲ್ಲ. ಅದನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡಬೇಕಾಗಿ ನಾನು ತಮ್ಮನ್ನು ಪ್ರಾರ್ಥಿಸುತ್ತೇನೆ.

Mr. DEPUTY CHAIRMAN.—It is learnt that it is in print and as soon as it is received, copies will be supplied to hon. Members.

ಶ್ರೀ ವೈ. ಎಸ್. ಪಾಟೀಲ್.—ಸ್ವಾಮಿ, ಧಾರವಾಡದ ವಿದ್ಯಾಧಿಕಾರಿಗಳು ಅಲ್ಲಿಯ ಉಪಾಧ್ಯಾಯರುಗಳಿಂದ ಹಣವನ್ನು ವಸೂಲಿ ಮಾಡಿ ತಮ್ಮ ಹೆಸರಿನಲ್ಲಿ ಬ್ಯಾಂಕ್‌ನಲ್ಲಿ ಇಟ್ಟಿದ್ದಾರೆ. ಅವರು ಇಷ್ಟರಲ್ಲಿಯೇ ವರ್ಗವಾಗುವುದರಲ್ಲಿ ಇದ್ದಾರೆ. ಆ ವಿಚಾರದಲ್ಲಿ ನಾನು ಒಂದು ಷಾರ್ಟ್ ನೋಟೀಸ್ ಕೊಶ್ಚನ್ ಕಳಿಸಿದ್ದೆ. ನಾನು ಕಳಿಸಿ 8-10 ದಿವಸಗಳಾಗಿದ್ದರೂ ಕೂಡ ಇನ್ನೂ ಉತ್ತರ ಬಂದಿಲ್ಲ. ತಾವು ದಯವಿಟ್ಟು ಸರ್ಕಾರದಿಂದ ಉತ್ತರ ತರಿಸಬೇಕು.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಸ್ವಾಮಿ, ನಾನೂ ಸಹ ಸಿದ್ಧೇಶ್ವರ ಮಿಲ್ಲಿನ ಬಗ್ಗೆ ಒಂದು ಷಾರ್ಟ್ ನೋಟೀಸ್ ಕೊಶ್ಚನ್ ಕಳಿಸಿದ್ದೆ. ಈ ಕೊಶ್ಚನ್ ಬಗ್ಗೆ ತಮ್ಮ ಆಫೀಸಿನಿಂದ ಉತ್ತರ ಬಂದಿದೆ. ಸರ್ಕಾರದವರು ಜಾಗ್ರತೆ ಉತ್ತರ ಕಳಿಸುತ್ತಿಲ್ಲ. ಹಿಂದೆ ಕೂಡ ಇದೇ ರೀತಿ ಮಾಡಿದ್ದಾರೆ. ತಾವು ಸರ್ಕಾರದವರಿಗೆ ಸರಿಯಾಗಿ ತಿಳಿಸಬೇಕು. ಆ ಮಿಲ್‌ನ ನೌಕರರು ಉಪವಾಸ ಮಾಡುತ್ತಿದ್ದಾರೆ. ನಾನು ಏನು ಪ್ರಶ್ನೆ ಕಳಿಸಿದ್ದೆ ಎಂಬುದನ್ನು ಬೇಕಾದರೆ ಓದುತ್ತೇನೆ.

ಉಪಸಭಾಪತಿಯವರು.—ತಾವು ಓದಬೇಕಾಗಿಲ್ಲ. ತಾವು ನನ್ನ ಛೇಂಬರ್‌ಗೆ ಬಂದು ಮಾತನಾಡಿ. ನಾನು ಪರ್ಸ್ಯೂ ಮಾಡುತ್ತೇನೆ. ಇಲ್ಲಿ ಸರ್ಕಾರದ ಮೇಲೆ ಈ ತರಹ ಆಲಿಗೇಷನ್ ಮಾಡಬಾರದು.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಸರ್ಕಾರದವರು ಉದ್ದೇಶಪೂರ್ವಕವಾಗಿ ಉತ್ತರ ಕೊಡುತ್ತಿಲ್ಲ. ನಾವು ಗಹನವಾದ ವಿಷಯಗಳ ಬಗ್ಗೆ ಪ್ರಶ್ನೆ ಕಳಿಸಿದರೂ ಕೂಡ ಸರ್ಕಾರದವರು ಜಾಗ್ರತೆ ಉತ್ತರ ಕೊಡುತ್ತಿಲ್ಲ.

ಉಪಸಭಾಪತಿಯವರು.—ಉದ್ದೇಶಪೂರ್ವಕವಾಗಿ ಉತ್ತರ ಕೊಡುತ್ತಿಲ್ಲ ಎಂದು ಹೇಳುವುದು ಸರಿಯಲ್ಲ ಆದಷ್ಟು ಜಾಗ್ರತೆ ಸರ್ಕಾರದವರು ಉತ್ತರ ಕಳಿಸುವಂತೆ ನಾವು ನೋಡಿಕೊಳ್ಳುತ್ತಿದ್ದೇವೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ (ವಿದ್ಯಾಶಾಖೆಯ ಉಪಮಂತ್ರಿಗಳು).—ಉದ್ದೇಶಪೂರ್ವಕವಾಗಿ ಉತ್ತರ ಕೊಡದೆ ಬಚ್ಚಿಡಬೇಕೆಂಬ ಅಭಿಪ್ರಾಯ ಸರ್ಕಾರಕ್ಕೆ ಇಲ್ಲ. ಮತ್ತು ಆ ರೀತಿ ಮಾಡುತ್ತಿಲ್ಲ. ಕೆಲವು ವಿಚಾರಗಳನ್ನು ಅನೇಕ ಇಲಾಖೆಗಳಿಂದ ತರಿಸಿಕೊಳ್ಳಬೇಕಾಗಿರುವುದರಿಂದ ಸ್ವಲ್ಪ ತಡವಾಗುತ್ತದೆ. ಅನಿವಾರ್ಯವಿಂದ ತಡವಾಗುತ್ತದೆಯೇ ಹೊರತು, ಪ್ರಶ್ನೆಗಳನ್ನು ಬಚ್ಚಿಡುವುದರಿಂದ ಸರ್ಕಾರಕ್ಕೆ ಯಾವ ಒಂದು ಉದ್ದೇಶವೂ ಸಾಧನೆಯಾದಂತೆ ಆಗುವುದಿಲ್ಲ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ನಾನು ಮಂತ್ರಿಗಳಮೇಲೆ ತಪ್ಪನ್ನು ಹೊರಿಸುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಮೇಲಿನ ತಪ್ಪನ್ನು ಮುಚ್ಚಿಕೊಳ್ಳಲು ನಿಧಾನವಾಗಿ ಉತ್ತರ ಕಳಿಸುತ್ತಿದ್ದಾರೆ. ನನ್ನ ಆಲಿಗೇಷನ್ ಏನಿದ್ದರೂ ಕೂಡ ಅಧಿಕಾರಿಗಳಮೇಲೆ ಜಾಗ್ರತೆ ಉತ್ತರ ಕಳಿಸಿದರೆ ತಮ್ಮ ಹುಳುಕು ಹೊರಬೀಳುತ್ತದೆಂದು ಅವರು ಕಳಿಸುತ್ತಿಲ್ಲ. ತಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಉತ್ತರ ಕಳಿಸಲು ಮೂರು ದಿನ ಸಮಯ ಕೊಡಬೇಕು. ಅವರು ಅಷ್ಟರಲ್ಲಿ ಕಳಿಸದಿದ್ದರೆ ಅವರಮೇಲೆ ಕ್ರಮ ಕೈಕೊಳ್ಳಬೇಕು. ಸರ್ಕಾರದ ಮಿಷಿನರಿ ಸರಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಈಗ ಸಿದ್ಧೇಶ್ವರ ಮಿಲ್ ನೌಕರರು ಉಪವಾಸ ಮಾಡುತ್ತಿದ್ದಾರೆ. ಆ ಬಗ್ಗೆ ನಾನು ಪಶ್ನೆ ಕಳಿಸಿದ್ದೇನೆ. ಅವರು ಉಪವಾಸ ಮುಗಿಸಿದಮೇಲೆ ಸರ್ಕಾರದಿಂದ ಉತ್ತರ ಬಂದರೆ ಏನು ಪ್ರಯೋಜನವಾಗುತ್ತದೆ?

ಉಪಸಭಾಪತಿಯವರು.—ನಾನು ಸಭಾನಾಯಕರೊಡನೆ ಚರ್ಚೆ ಮಾಡಿ, ಆದಷ್ಟು ಜಾಗ್ರತೆ ಉತ್ತರ ಕಳಿಸುವಂತೆ ಹೇಳುತ್ತೇನೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ನನ್ನ ಹಿಂದಿನ ಎಲ್ಲಾ ಪ್ರಶ್ನೆಗಳಿಗೂ ಕೂಡ ಜಾಗ್ರತೆ ಉತ್ತರ ಬರುವಂತೆ ತಾವು ಏರ್ಪಾಡು ಮಾಡಬೇಕು.

Calling Attention to a Matter of Urgent Public Importance under Rule 62 *re*: Closure of Government Silk Filatures in Mysore District

SRI G. V. GOWDA (Legislative Assembly Constituency).—I call the attention of the Minister for Agriculture to the situation arising out of the closure of the Government Silk Filature in Mysore District.

SRI B. RACHAIAH (Minister for Agriculture).—The State owned Silk Filatures have been incurring very heavy losses since long. Government have been making every effort to minimise losses but the losses are continuing. The Cost of production has always been higher than the sale price for various reasons, one of which has been constant increase in the emoluments of the workers due to revision of D.A. from time to time and on account of providing facilities to the workers according to various labour laws. The prices of cocoons have also been fluctuating very violently. To increase production and to bring down cost of production, incentive bonus schemes were also introduced. With all this it has not been possible to bring down the cost of production without sacrificng quality of silk. Efforts were also made to obtain subsidy from the Government of India to neutralise these losses; but the Government of India has negatived the request of the State Government. Further the cocoon rates at the end of February 1969 ranged between Rs. 6.90 to Rs. 9 02 per Kg. Arrivals into the Cocoon Markets were comparatively low and there was keen competition among the private reelers to purchase cocoons. Faced with this situation and to bring down the losses the General Managers of the Government Silk Filature Units were instructed to purchase cocoons so as to limit the cost of cocoons in a Kg. of raw silk produced to Rs. 100. As the cocoon rates prevailing in the cocoon markets were higher, they suspended purchases and the filature units were closed.

After negotiation with labour leaders in several units the terms agreed to by each unit were referred to the Board of Management for Government Sericulture Industrial Concerns. The Board in their meeting held on 23rd April 1969 approved certain terms for restarting of the Filature Units. These terms were handed over to the representatives of the Labour Unions of the Filature Units. All unions except the Union of the Government Silk Filature, Kollegal, accepted these terms. A statement indicating the terms accepted by the several labour unions except the Labour Union of the Government Silk Filatures, Kollegal, is enclosed herein.

The cocoon supply position at Kanakapura was comparatively better and the Filature at Kanakapura was restarted on 14th June 1969. The Mamballi Unit was restarted on 21st June 1969. The Filature units at Santhemarahalli and Chamarajanagar were restarted on 27th June 1969. During June 1969, however, the flow of cocoons into the markets was not appreciable and for cocoons of average 18 Renditta the rate prevailing was between Rs. 9 to Rs. 9-50 per Kg. In the cocoon market there was very keen competition for the available cocoons. In

view of this high cost and paucity of cocoons, the T. Narasipur and Mysore Units were not restarted during June 1969. However, after building a stock of about 21,000 Kgs. of cocoons, the T. Narasipur and Mysore Units were restarted on 18th and 24th July 1969 respectively.

Due to failure of rains all over the Mysore District during July and first fortnight of August, mulberry crops failed and the inflow of cocoons further deteriorated and the rate all of a sudden went up to Rs. 10 to Rs. 10.50 per Kg. Purchase of cocoons at this high rate and working the units would result in heavy losses to the Filatures. The cocoon stock position very much depleted and cocoons were not available even at these high rates. With the poor inflow of cocoons and abnormal rates the work in the Filature Units was arranged for 4 days and declared lay off for 3 days in a week from 3rd Week of August 1969. As the inflow of cocoons further dwindled down below 500 Kgs. The Filatures are now working only for 2 days in a week and the employees are paid lay off compensation.

As regards the Kollegal Unit the Labour Union has not accepted the terms and conditions set out for restarting and on the other hand they have started agitation. The conciliation initiated by the Labour Department also failed. On account of the unreasonable stand taken by the labourers of the Factory, action has been taken to issue termination notices to the individual workers of this unit as per rules.

Statement showing the terms offered to the Labour Unions of the Silk Filatures for reopening them

1. To give an increased production of 500 gms. of 20/22 donier raw silk per basin per day;

2. To assure that the quality of silk will not deteriorate and quality would be maintained in spite of increased production;

3. For the removal of inefficient labour on account of age irregular attendance and bad conduct and according to the list to be prepared;

4. To withdraw all pending disputes;

5. Not to press for payment of enhanced Dearness Allowance which has been sanctioned with effect from 1st April 1969 for a period of two years;

6. To make it a point to call for works Committees to discuss day-to-day problems.

7. To help the management to reduce the labour strength to 2.2 per basin from the present level as far as possible;

8. To depute labour representative for the purchase of cocoons;

9. To prepare profit and loss account and the Balance sheets for each unit separately;

(SRI B. RACHAIAH)

10. Not to raise any demand or disputes in any form for a period of two years from 1st April 1969 or till the formation of Silk Industries Corporation whichever is earlier ;

11. The work of individual workers may be reviewed at the end of 3 months and General Manager may notify those who give less production than the minimum fixed to take action and also to take suitable steps against habitual absentees as per standing orders ;

12. Casual labour to be appointed in future may be paid the minimum wages fixed in the Minimum Wages Act.

SRI G. V. GOWDA.—I venture to submit that it is strange and surprising that the management should place demands and not the workers. One of the demands is withdrawal of pending disputes. Why should the workers agree for the disputes being withdrawn ? Let them be referred to the tribunal and the finding of the tribunal be binding. Is it not anti-trade unionism ?

The second condition that the management have put is not to press for the payment of enhanced D. A. sanction with effect from 1st April 1969. Not only the amount is not paid but the workers should not ask for it ? If the Government is not willing, let it be referred to the tribunal and let the decision of the tribunal be binding. While other workers in the industrial establishment are claiming and are paid, why should these workers not get ? If the Government finds that unreasonable demand is made, let it be referred to the tribunal.

The third condition that is put is regarding inefficiency. If any worker if found inefficient, let him be removed. The management is at liberty to remove any worker who is inefficient. For the sake of a few inefficient workers you have closed the factory rendering thousands of Harijan workers jobless.

They have undertaken to fasting for the last 7 days. Therefore these demands put forth by the management are most unreasonable. You must take steps to increase production of first class cocoons and insist on good production without affecting quality of silk. The management does not do it. For the fault of the management, you are penalising the workers. This is not justifiable. Therefore I am submitting that the Minister must make up his mind. I am for getting good production and the factory should not run into loss. But for doing that there are other ways. Why should this factory incur loss after integration only and not before integration ? The Minister must probe into this. For the sake of somebody you should not penalise the workers. I request with all sincerity to do justice to the workers, open the silk filatures, insist on good production and remove all those who are inefficient.

SRI B. RACHAIAH.—Sir, the Hon. Members are aware that prior to 1963 whenever the Government revised D. A. and other emoluments

to the Government servants, it was not made applicable to the Filature Units. It was only from 1963 when I took over silk filature industry that I personally pleaded with other colleagues to extend the benefits to the filature units also. After having introduced these benefits to these people, it is unfortunate that the workers have not realised their responsibility in giving increased production commensurate with the expenditure. Secondly, with regard to the removal of inefficient labourers, the Hon. Member Sri G. V. Gowda suggested that he has no objection to remove inefficient workers. Whenever the management tried to weed out inefficient workers, and undesirable workers, all the workers used to join and they have never allowed the management to remove the inefficient workers. That is the information I have ascertained from the management. With regard to the withdrawal of disputes, when the workers want to restart the factory, this factory cannot afford to spend money on litigation and other expenses. It is only when the filatures was in trouble, all of us during 1956, pleaded with the then Government to take private companies and run the industry just to help the labourers as well as the farmers who depended on sericulture industry. Under the Act the labour disputes for flimsy reasons have been going on in an increased manner than in other filature units. In six units they have accepted these conditions and that has not been accepted by the Kollegal filatures. Apart from this, there are other obligatory duties on the part of the management and the management has also accepted those things. But for some political intervention I think the workers would have accepted the conditions by this time and restarted this industry. It is unfortunate that nearly 700 workers are paid lay-off charges and have not been able to come back to the factory to work on account of some political leaders intervening and forcing them not to accept these conditions.

ಶ್ರೀ ವಿ. ವೆಂಕಟಪ್ಪ.—ಈಗ ರೇಷ್ಮೆಗೂಡಿನ ಮಾರಾಟ ಹೆಚ್ಚಾಗುತ್ತಿದ್ದರೂ ಇದರ ಬಗ್ಗೆ ಖಾಸಗೀ ವರ್ತಕರೂ ಕಂಪ್ಲೀಟು ಮಾಡುತ್ತಿದ್ದಾರೆ. ಆದರೆ ಇದರಲ್ಲಿ ಹೆಚ್ಚಾಗಿ ಗೂಡುಗಳನ್ನು ತೆಗೆದುಕೊಂಡರೂ ಇಲ್ಲಿ ನಷ್ಟ ಬರದೇ ನಷ್ಟ ಏತಕ್ಕಾಗಿ ಆಗುತ್ತಿದೆ ?

ಶ್ರೀ ಬಿ. ರಾಚಯ್ಯ.—ಸರಕಾರ ಕೊಳ್ಳುವ ರೇಟಿಗೂ ಪ್ರೈವೇಟು ವರ್ತಕರು ಕೊಳ್ಳುವ ರೇಟಿಗೂ ಬಹಳ ವ್ಯತ್ಯಾಸವಿರುತ್ತದೆ. ಪ್ರೈವೇಟು ಡೀಲರುಗಳು ಗೂಡನ್ನು ತೆಗೆಯುವಾಗ ಒಳ್ಳೆಯ ತಳಿಗಳನ್ನು ನೋಡಿ ಹರಾಜಿನಲ್ಲಿ ಹೆಚ್ಚು ಬೆಲೆಗೆ ಕೂಗುತ್ತಾರೆ. ಹಾಗೆ ಕೂಗಿದರೂ ಪ್ರೈವೇಟು ಡೀಲರುಗಳು ತಮ್ಮ ವೆಚ್ಚದಲ್ಲಿ ಕಡಿಮೆ ಮಾಡಿಕೊಳ್ಳುತ್ತಾರೆ. ಸರಕಾರ ಇಷ್ಟು ಬೆಲೆ ಕೊಟ್ಟು ಕಡಿಮೆಯಲ್ಲಿ ಮಾರಲು ಆಗುವುದಿಲ್ಲ. ಪ್ರೈವೇಟು ಡೀಲರುಗಳು ಕೆಲಸಕ್ಕೆ ಅವರ ಜನರನ್ನೇ ಇಟ್ಟುಕೊಂಡಿರುತ್ತಾರೆ ಅವರೇ ಎಲ್ಲವನ್ನೂ ನೋಡಿಕೊಳ್ಳುತ್ತಾರೆ ಆದರೆ ಸರಕಾರದಲ್ಲಿ ಕೆಲಸಗಾರರೇ ಎಲ್ಲ ಮಾಡಬೇಕು. ಇವರಿಗೆ ಹೆಚ್ಚು ರೇಟು ಕೊಡರಾಗುವುದಿಲ್ಲ. ಆದರೆ ಪ್ರೈವೇಟು ಡೀಲರುಗಳು ಅವರೇ ಸೂಪರ್‌ವೈಸು ಮಾಡಿಕೊಂಡು ಮ್ಯಾನೇಜು ಮಾಡುತ್ತಿರುವುದರಿಂದ ಅವರು ಕೊಡತಕ್ಕ ಚಾರ್ಜುಗಳು ನಾವು ಕೊಡುವುದರಲ್ಲಿ ಅರ್ಧದಷ್ಟೂ ಆಗುವುದಿಲ್ಲ. ಇದರಿಂದ ವ್ಯತ್ಯಾಸವಾಗುತ್ತದೆ.

5–00 P.M.

ಇದರಿಂದ ಪ್ರೈವೇಟ್ ರೀಲರ್‌ಗಳು ವಿಲೇಜ್ ರೆಪ್ರೆಸೆಂಟೆಟೀವ್ಸ್ ಕಳುಹಿಸಿ 1–1½ ರೂಪಾಯಿ ಹೆಚ್ಚು ಮಾಡಿ ಕೂಗಿಸುತ್ತಾರೆ. ಅವರು ಇಟ್ಟುಕೊಂಡಿರುವ ಎಸ್ಟಾಬ್ಲಿಷ್‌ಮೆಂಟಿಗೆ ನಮ್ಮಷ್ಟು ಹಣ ಕೊಡುವುದಿಲ್ಲ. ಮತ್ತು ನಮ್ಮಷ್ಟು ಸೌಲಭ್ಯಗಳನ್ನೂ ಕೊಡುವುದಿಲ್ಲ. ನಮ್ಮಲ್ಲಿ

(ಶ್ರೀ ಬಿ. ರಾಚಯ್ಯ)

ಒಬ್ಬ ವರ್ಕರಿಗೆ 4½ಯಿಂದ 5½ ರೂಪಾಯಿ ತನಕ ಕೂಲಿ ಕೊಡುತ್ತೇವೆ. ಪ್ರೈವೇಟ್ ರೀಲರ್ಸ್‌ನವರು ಒಬ್ಬ ವರ್ಕರ್‌ಗೆ 2½ ರೂಪಾಯಿ ಕೊಡುತ್ತಾರೆ. ಈ 22½ ರೂಪಾಯಿ ವ್ಯತ್ಯಾಸ ಏನು ಇದೆಯೋ ಅಷ್ಟಕ್ಕೆ ಪ್ರೈವೇಟ್ ರೀಲರ್ಸ್‌ಗಳು ಹೋಗಿ ಹೆಚ್ಚು ಮಾಡಿ ಕೂಗಿ ತೆಗೆದುಕೊಳ್ಳುತ್ತಾರೆ. ಅದೇ ಮಟ್ಟದಲ್ಲಿ ನಾವೂ ಏರಿಸಿಬಿಟ್ಟು ಅಷ್ಟು ಬೆಲೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

Sri M. LINGANNA.—Sir, I want to know whether conditions are put by the union. While reading the statement the Minister said, certain conditions are laid down in the schedule appended. They should have been furnished to the House. I also want to know the minimum production fixed per worker in the Government Filature both prior to the new condition, and as per the new condition, and what is the minimum expected in the private filature.

Sri B. RACHAIAH.—Sir, the conditions are :

1 To give an increased production of 500 gms. of 20/22 denier raw silk per basin per day ;

2 To assure that the quality of silk will not deteriorate and quality would be maintained in spite of increased production ;

3 For the removal of ineffiicent labour on account of age, irregular attendance and bad conduct and according to the list to be prepared ;

4 To withdraw all pending disputes ;

5 Not to press for payment of enhanced dearness allowance which has been sanctioned with effect from 1st April 1969 for a period of two years ;

6 To make it a point to call for Works Committees to discuss day-to-day problems ;

7 To help the management to reduce the labour strength to 2.2 per basin from the present level as far as possible ;

8 To depute labour representative for the purchase of cocoons ;

9 To prepare profit and loss account and the balance sheets for each unit separately ;

10 Not to raise any demand or dispute in any form for a period of two years from 1st April 1969 or till the formation of Silk Industries Corporation whichever is earlier ;

11 The work of individual workers may be reviewed at the end of 3 months and General Manager may notify those who give less production than the minimum fixed to take action and also to take suitable steps against habitual absentees as per standing orders ;

12 Casual labour to be appointed in future may be paid the minimum wages fixed in the Minimum Wages Act.

Both the labour union and the management have agreed to these conditions and in six of the seven units they have come back to work,

The original production prior to these conditions was about 13 ounces of silk per worker. Now we have increased it only by 100 grams. In private filatures each worker is expected to give nearly 700 to 1000 grams whereas we expect only up to 500 grams. In some of the units they are already giving more than 700 grams and if they produce more than the minimum fixed they will get individual incentive bonus. In that way good workers have been encouraged by introducing individual incentive bonus. Those people who are evading to give the minimum prescribed have to be served with notice for termination of their services. Apart from these 12 conditions, the Government have told the units that if they do not want to give increased production, Government is agreeable to give the minimum wages prescribed by the labour authority for the production which they used to give originally. Even for that they are not agreeable. Therefore, there is no other go but to give notices after 45 days of lay-off to the workers who have not agreed to these conditions.

Clarifications on the Statement of the Minister for Finance on the Award of the Fifth Finance Commission

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಸ್ವಾಮಿ, ಮಾನ್ಯ ಅರ್ಥಸಚಿವರು ಒಂದು ಸ್ಟೇಟ್‌ಮೆಂಟನ್ನು ಮಾಡಿದರು. ಅದರ ಮೇಲೆ ನಾನೂ ಮತ್ತು ಶ್ರೀ ಸುಬ್ಬೈದ್‌ರವರೂ ಒಂದು ಕ್ಲಾರಿಫಿಕೇಷನ್ ಕೇಳ ಬೇಕಾಗಿರುವ ಸಮಯದಲ್ಲಿ ಅದು ಆ ಸ್ಟೇಜಿನಲ್ಲೇ ನಿಂತು ಹೋಯಿತು. ಸೋಮವಾರ ದಿವಸ ಕೇಳಬೇಕೆಂದು ಇದ್ದೆ. ಅಷ್ಟು ಹೊತ್ತಿನಲ್ಲಿ ಅವರು ಎದ್ದು ಹೋಗಿದ್ದರು. ಆದ್ದರಿಂದ ನಾಳೆ ದಿವಸ ವಾದರೂ ಈ ಕ್ಲಾರಿಫಿಕೇಷನನ್ನು ಕೇಳುವ ಹಾಗೆ ಮಾಡಿಕೊಡಬೇಕು ಎಂದು ಹೇಳುತ್ತೇನೆ.

MR. DEPUTY CHAIRMAN.—Perhaps tomorrow that will be taken up.

ಶ್ರೀ ಜಿ. ವಿ. ಗೌಡ.—ಸ್ವಾಮಿ, ಸರ್ಕಾರ ಫೈನಾನ್ಸ್ ಕಮೀಷನ್ ಮುಂದೆ ಏನು ರೆಪ್ರಸೆಂಟೇಷನ್ ಕೊಟ್ಟಿದೆ, ಏನೇನು ಮೆಟೀರಿಯಲ್ಸ್ ಕೊಟ್ಟಿದೆ, ಫೈನಾನ್ಸ್ ಕಮಿಟಿ ಮುಂದೆ ಸರಿಯಾದ ರೆವಿನ್ಯೂ ಅಕೌಂಟ್ಸ್ ಮತ್ತು ನಮ್ಮ ಎಸ್ಟಿಮೇಟ್ಸ್ ಇಟ್ಟಿದ್ದಾರೆಯೇ ? ಸರಿಯಾದ ನ್ಯಾಯ ನಮಗೆ ದೊರಕಲಿಲ್ಲ ಎನ್ನುವ ಆಪಾದನೆ ಅವರ ಮೇಲೆ ಮಾಡುತ್ತಾ ಇರುವುದರಿಂದ ಅವರಿಗೆ ಏನೇನು ಮೆಟೀರಿಯಲ್ಸ್ ಒದಗಿಸಿಕೊಟ್ಟಿದ್ದಾರೆಯೋ ಅದನ್ನು ನಮಗೂ ಕೊಡುವುದಾದರೆ ನಮಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅನುಕೂಲವಾಗುತ್ತದೆ. ಆ ಮೆಟೀರಿಯಲ್ಸನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಉಪಸಭಾಪತಿಯವರು.—ಈ ವಿಚಾರವನ್ನು ಮಾನ್ಯ ಹಣಕಾಸಿನ ಮಂತ್ರಿಗಳ ಗಮನಕ್ಕೆ ತರುತ್ತೇನೆ.

Papers liad on the Table

SECRETARY.—As required by Rule 100 of the Rules of Procedure, I lay on the Table the following Bills:—

(1) The Mysore High Court (Amendment) Bill, 1969, as passed by the Legislative Assembly.

(2) The Mysore Appropriation (No. 4) Bill, 1969, as passed by the Legislative Assembly.

Mysore Compulsory Primary Education (Amendment and Miscellaneous Provisions) Bill, 1969 as passed by the Legislative Assembly.

Motion to consider—(Debate continued).

† ಶ್ರೀ ಕೆ. ಸೂರ್ಯನಾರಾಯಣ ಅಡಿಗ (ವಿಧಾನಸಭಾಕ್ಷೇತ್ರ).—ಮಾನ್ಯ ಸಭಾಪತಿಯವರೇ, ಮೈಸೂರು ರಾಜ್ಯದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ (ತಿದ್ದುಪಡಿ ಹಾಗೂ ಇತರ ಅವಕಾಶಗಳ) ವಿಧೇಯಕ, 1969, ಇದು ಈ ಮನೆಯ ಮಂಜೂರಾತಿಗಾಗಿ ಈ ಸಭೆಯ ಮುಂದೆ ಚರ್ಚೆಗೆ ತಂದಿದ್ದಾರೆ. ಇದರ ಉದ್ದೇಶ ಎರಡು ಇವೆ. ಮೊದಲನೆಯದಾಗಿ ಹಿಂದೆ ಮದ್ರಾಸ್ ಅಧೀನಕ್ಕೆ ಒಳಪಟ್ಟಂತಿರುವ ಶಾಲೆಗಳನ್ನು ಎಂದರೆ ಮುನಿಸಿಪಲ್ ಶಾಲೆಗಳನ್ನೂ ಹಾಗೂ ಪಂಚಾಯಿತ್ ಅಧೀನಕ್ಕೆ ಒಳಪಟ್ಟಂತಿರುವ ಶಾಲೆಗಳನ್ನೂ, ಮತ್ತು ಹಿಂದೆ ಮುಂಬೈ ಆಡಳಿತದಲ್ಲಿ ಇದ್ದಂಥ ಈಗ ಮೈಸೂರಿಗೆ ಬಂದಿರುವ ಪ್ರದೇಶದಲ್ಲಿ ಇದ್ದಂಥ ಸ್ಕೂಲ್‌ಬೋರ್ಡುಗಳು ನಡೆಸುತ್ತಾ ಇದ್ದಂಥ ಶಾಲೆಗಳನ್ನೂ ವಶಪಡಿಸಿಕೊಂಡು ನಡೆಸುವ ಅಧಿಕಾರವನ್ನು ಸರ್ಕಾರ ಆರ್ಡಿನೆನ್ಸ್ ಮೂಲಕ ಪಡೆದುಕೊಂಡಿದೆ. ಅದನ್ನು ಮಂಜೂರು ಮಾಡುವುದಕ್ಕಾಗಿ ಈ ಮಸೂದೆ ಬಂದಿದೆ.

(MR. VICE-CHAIRMAN [(SRI S. C. KUBSAD) in the Chair]

ಎರಡನೆಯದಾಗಿ ಇದರ ಜೊತೆಗೆ ಒಂದು ಸೆಸ್ ಕೂಡ ತಂದಿದ್ದಾರೆ. ಅದನ್ನು ಕೆಲವು ಟ್ಯಾಕ್ಸ್‌ಗಳ ಮೇಲೆ ಹಾಕಿ ಹಣವನ್ನು ದೊರಕಿಸಿಕೊಂಡು ಹೆಚ್ಚಿನ ವಿದ್ಯಾ ಸವಲತ್ತುಗಳನ್ನು ಒದಗಿಸಿಕೊಡಲು ವಿನಿಯೋಗಿಸಬೇಕೆಂದು ಈ ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ. ಸರ್ಕಾರ ಎಲ್ಲಾ ಶಾಲೆಗಳನ್ನೂ ತನ್ನ ಅಧಿಕಾರದ ಮೂಲಕವೇ ನಡೆಸುವುದು ಒಳ್ಳೆಯದೋ ಅಥವಾ ಸ್ಕೂಲ್ ಬೋರ್ಡ್‌ಗೆ ಒಳಪಟ್ಟಂತೆ ಇರುವ ಶಾಲೆಗಳನ್ನು ಸ್ಥಳೀಯ ಸಂಸ್ಥೆಗಳ ಮೂಲಕ ನಡೆಸುವುದು ಒಳ್ಳೆಯದೋ ಅಥವಾ ಸರ್ಕಾರವೇ ನಡೆಸಬೇಕೋ ಅಥವಾ ಖಾಸಗೀ ಸಂಸ್ಥೆಗಳು ನಡೆಸಬೇಕೋ ಈ ವಿಚಾರಗಳನ್ನು ಈವಾಗ ಹೇಳುತ್ತೇವೆ.

ಖಾಸಗಿ ಶಾಲೆಗಳು ಸರಕಾರಿ ಶಾಲೆಗಳಿಗಿಂತ ಉತ್ತಮವಾಗಿ ನಡೆಯುತ್ತಿವೆ, ಹೆಚ್ಚಿನ ಮಂದಿ ಆದಷ್ಟು ಪ್ರಯತ್ನಪಟ್ಟು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೇ ಕಳಿಸುತ್ತಿದ್ದಾರೆ. ಫೀಜು ಹೆಚ್ಚಾದರೂ ಕೂಡ ಅದನ್ನು ಕೊಟ್ಟು ಖಾಸಗಿ ಶಾಲೆಗಳಿಗೆ ಅನೇಕರು ಮಕ್ಕಳನ್ನು ಹಾಕುತ್ತಿದ್ದಾರೆ. ಏಕೆಂದರೆ ಅಲ್ಲಿ ಕೊಡುವ ವಿದ್ಯಾಮಟ್ಟ ಹೆಚ್ಚಾಗಿದೆ, ಉತ್ತಮವಾಗಿದೆ. ಹಾಗಿರುವಾಗ ಸರಕಾರ ಶಾಲೆಗಳಲ್ಲೂ ಕೂಡ ಏಕೆ ಆ ಮಟ್ಟದಲ್ಲಿ ವಿದ್ಯಾ ಪ್ರಸಾರ ಮಾಡಬಾರದು ಎಂಬುದನ್ನು ಸರಕಾರಿ ಆದಷ್ಟು ತೀವ್ರವಾಗಿ ವಿಚಾರಮಾಡಬೇಕು. ಸರಕಾರ ಯಾವುದನ್ನು ವಶಪಡಿಸಿಕೊಳ್ಳಲಿ, ಅಪವಾದ ಬರುತ್ತಿದೆ, ಈಗತಾನೇ ಕೆಲವರು ಹೇಳಿದಹಾಗೆ ಸಿಲ್ಕ್ ಫಿಲೇಚರ್ ಮತ್ತು ಸಾರಿಗೆ ಬಸ್ಸುಗಳ ವಿಚಾರದಲ್ಲಿ ಈಗಾಗಲೇ ಹಾಗಾಗಿದೆ. ಆದುದರಿಂದ ಶಾಲೆಗಳನ್ನು ಜಾಗರೂಕತೆಯಿಂದ ವಶಪಡಿಸಿಕೊಳ್ಳಬೇಕು. ಮುನಿಸಿಪಲ್ ಶಾಲೆಗಳನ್ನು ಕೆಲವು ಪ್ರದೇಶಗಳಲ್ಲಿ ಸರಕಾರದ ಅಧೀನಕ್ಕೆ ಒಪ್ಪಿಸುವ ಸಂದರ್ಭವಿದೆ. ಮದ್ರಾಸು ಪ್ರದೇಶದಲ್ಲಿ ನಗರಸಭೆಗಳು ಶಾಲೆಗಳನ್ನು ನಡೆಸುತ್ತಿದ್ದುವು, ಮಂಗಳೂರಿನಲ್ಲಿ ನಗರಸಭೆಯ ಅಧೀನದಲ್ಲಿದ್ದುವು. ಅಲ್ಲಿ ಪ್ರತ್ಯೇಕ ಪುಸ್ತಕಗಳನ್ನು ನಿಗದಿಮಾಡುವ ಅಧಿಕಾರ ನಗರಸಭೆಗಿತ್ತು. ನಗರಸಭೆಗಳ ಪ್ರಥಮ ಕರ್ತವ್ಯ ಪ್ರಾಥಮಿಕ ಶಿಕ್ಷಣ ಕೊಡುವುದಾಗಿತ್ತು. ಸ್ವರಾಜ್ಯ, ಸ್ವಾತಂತ್ರ್ಯ ಬಂದಮೇಲೆ ಹಿಂದೆ ಪ್ರಾಥಮಿಕ ಶಾಲೆಗಳನ್ನು ನಡೆಸುವುದು ನಗರಸಭೆಗಳ ಆದ್ಯ ಕರ್ತವ್ಯವಾಗಿತ್ತು, ಇಂದು ಆ ಜವಾಬ್ದಾರಿ ಸರಕಾರಕ್ಕೆ ಸೇರಿದೆ. ಉತ್ತಮವಾದ ಶಿಕ್ಷಣವನ್ನು ಸಾರ್ವತ್ರಿಕವಾಗಿ ಕೊಡಬೇಕೆಂಬುದು ಸರಕಾರದ ಧೋರಣೆಯಾಗಿದೆ. ಖಾಸಗಿ ಸಂಸ್ಥೆಗಳು ಈ ದಿವಸ ಶಾಲೆಗಳನ್ನು ನಡೆಸುತ್ತಿವೆ. ಅವುಗಳಿಗೆ ಸರಕಾರದ ಪೂರ್ಣ ಗ್ರಾಂಟಿದೆ. ಮದ್ರಾಸ್ ಪ್ರಾಂತ್ಯದ ನಗರಸಭೆಗಳು ನಡೆಸುತ್ತಿದ್ದ ಶಾಲೆಗಳಿಗೆ ಸರಕಾರ ಪೂರ್ಣ ಗ್ರಾಂಟನ್ನು ಕೊಡುತ್ತಿರಲಿಲ್ಲ. ಏಕೆಂದರೆ ಮದ್ರಾಸ್ ಎಲಿಮೆಂಟರಿ ಎಜುಕೇಷನ್ ಆಕ್ಟ್ ಪ್ರಕಾರ ಇಷ್ಟೇ ಕೊಡಬೇಕೆಂದು ಗೊತ್ತುಮಾಡಲಾಗಿತ್ತು, ಅದರ ಪ್ರಕಾರ ಕೊಡುತ್ತಿದ್ದರು. ಮತ್ತು ಸೇಕಡ ಎರಡರಷ್ಟು ಪ್ರಾಪರ್ಟಿ ಟ್ಯಾಕ್ಸ್ ಮತ್ತು ಎಜುಕೇಷನ್ ಸೆಸ್ ಹಾಕುತ್ತಿದ್ದರು. ಹಿಂದೆ ಮದ್ರಾಸ್ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣ ಕೊಡುತ್ತಿದ್ದವರು ತಾವು ಆ ಶಾಲೆಗಳನ್ನು ನಡೆಸು

ವುದಕ್ಕಾಗುವುದಿಲ್ಲ, ಸರಕಾರದವರೇ ನಡೆಸಲಿ ಎಂದು ಹೇಳಿದರು. ಕಾರಣ ಹಣ ಇಲ್ಲದೆ ಎಲ್ಲಿಂದ
ತರಬೇಕೆಂಬುದು ತೋಚದೆ ಹಾಗೆ ಮಾಡಬೇಕಾಯಿತು. ನನ್ನ ಅನುಭವದ ಪ್ರಕಾರ ಮಂಗಳೂರು
ನಗರಸಭೆಗೆ ಸೇರಿದಂತೆ 22 ಪ್ರಾಥಮಿಕ ಶಾಲೆಗಳಿವೆ, ಅವುಗಳಲ್ಲಿ ಕಾನ್‌ವೆಂಟುಗಳಿಗಿಂತ
ಚೆನ್ನಾಗಿ ಪಾಠ ಹೇಳಿಕೊಡುತ್ತಿದ್ದರು. ಮುನಿಸಿಪಲ್ ಶಾಲೆಗಳ ಮಟ್ಟ ಉತ್ತಮವಾಗಿತ್ತು.
ಸರಕಾರಕ್ಕೆ ಅವು ಬಂದಮೇಲೆ ಏನಾಗುವುದೋ ಗೊತ್ತಿಲ್ಲ. ಆದುದರಿಂದ ಸರಕಾರದವರು ಕೇವಲ
ಶಾಲೆಗಳ ಸಂಖ್ಯೆಯನ್ನು ಏರಿಸಿದರೆ ಸಾಲದು ಅವುಗಳ ಶಿಕ್ಷಣಮಟ್ಟವನ್ನು ಉತ್ತಮಗೊಳಿಸಬೇಕು,
ಕಾನ್‌ವೆಂಟ್ ಶಾಲೆಗಳಿಗೆ ಕೆಲವರು ಮಕ್ಕಳನ್ನು ಕಳಿಸುವುದನ್ನು ಕಡಮೆಮಾಡುವುದಕ್ಕಾದರೂ
ಹಾಗೆ ಮಾಡಬೇಕು ಎಂದು ಅರಿಕೆಮಾಡುತ್ತೇನೆ.

ಬಾಂಬೆ ಪ್ರದೇಶದಲ್ಲಿ ಶಾಲಾಬೋರ್ಡುಗಳು ನಡೆಸುತ್ತಿದ್ದ ಶಾಲೆಗಳನ್ನು ಸರಕಾರ ಸ್ವಾಧೀನ
ಪಡಿಸಿಕೊಂಡಿದೆ. ಮದ್ರಾಸು ಭಾಗದಲ್ಲಿ ಪಂಚಾಯಿತಿ ಮತ್ತು ಮುನಿಸಿಪಾಲಿಟಿಗಳು ನಡೆಸು
ತ್ತಿರುವ ಶಾಲೆಗಳನ್ನು ಸರಕಾರದವರು ತೆಗೆದುಕೊಳ್ಳುವರೇ, ಅವನ್ನು ಯಾರು ವಹಿಸಿಕೊಳ್ಳಬೇಕು
ಎಂಬುದು ಇನ್ನೂ ತೀರ್ಮಾನವಾಗಿಲ್ಲ. ಪ್ರಕೃತದಲ್ಲಿ ಅವುಗಳನ್ನು ವಿದ್ಯಾಧಿಕಾರಿಗಳ ಅಧೀನಕ್ಕೆ
ಬಿಟ್ಟಿದ್ದಾರೆ. ಶಾಲೆಗಳನ್ನು ಇನ್‌ಸ್ಪೆಕ್ಟ್ ಮಾಡುವ ಜಿಲ್ಲಾ ವಿದ್ಯಾಧಿಕಾರಿಗಳು ಶಾಲೆ ನಡೆಸುವು
ದೆಂದರೆ ಶಿಕ್ಷಣಮಟ್ಟ ಯಾವರೀತಿ ಆಗಬಹುದು ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಪರೀಕ್ಷೆಮಾಡಿ
ಪ್ರೈಮರಿ ಶಾಲೆಗಳ ಮಟ್ಟ ಯಾವರೀತಿ ಇರಬೇಕು ಎಂದು ನೋಡಿ, ಸರಿಯಾಗಿಲ್ಲದಿದ್ದರೆ ಫುಲಪ್
ಮಾಡಿ ಸಲಹೆ ಕೊಡುವ ಅಧಿಕಾರಿ ಬೇರೆ ಇರಬೇಕು. ಹಾಗಿಲ್ಲದೆ ವಿದ್ಯಾಧಿಕಾರಿ ಎರಡನ್ನೂ
ನಡೆಸುವುದಾದರೆ ಶಾಲೆಯ ಮಟ್ಟ ಹೀನಸ್ಥಿತಿಗೆ ಬರುವುದರಲ್ಲಿ ಸಂಶಯವಿಲ್ಲ. ಆದುದರಿಂದ
ಸರಕಾರ ಇದರ ಕಡೆ ಗಮನಹರಿಸಬೇಕು. ಬೇರೆ ಎರಡು ಬಿಲ್ ಮಾಡಬೇಕು ಅಥವಾ ಶಾಲೆ
ನಡೆಸುವುದಕ್ಕೆ ಬೇರೆ ಏರ್ಪಾಡು ಮಾಡಬೇಕು.

ಈ ಸಂದರ್ಭದಲ್ಲಿ ಒಂದು ಸಲಹೆ ಕೊಡುತ್ತೇನೆ. ಜಿಲ್ಲಾ ಮಟ್ಟದಲ್ಲಿ ಒಂದು ಜಿಲ್ಲಾ
ಪರಿಷತ್ತು ಆಗುವುದು. ಪಂಚಾಯ್ತಿ ರಾಜ್ಯದ ಬಿಲ್ಲು ಬಂದಾಗ ಅದಕ್ಕೆ ಅವಕಾಶ ದೊರೆಯುವುದು
ತಾಲ್ಲೂಕು ಬೋರ್ಡಿಗೆ. ಆದುದರಿಂದ ಅವುಗಳಿಗೇಕೆ ವಿದ್ಯಾಸಂಸ್ಥೆಗಳನ್ನು ನಡೆಸುವ ಕೆಲಸವನ್ನು
ವಹಿಸಬಾರದು ? ಇದನ್ನು ಸರಕಾರ ಇನ್ನೊಮ್ಮೆ ವಿಮರ್ಶೆಮಾಡಬೇಕು. ಏಕೆಂದರೆ ಸ್ವಾತಂತ್ರ್ಯ
ಪೂರ್ವದಲ್ಲಿ ಜಿಲ್ಲಾಬೋರ್ಡು ಮತ್ತು ತಾಲ್ಲೂಕು ಬೋರ್ಡುಗಳಿದ್ದುವು. ಅವುಗಳಿಗೆ ಎಲಿಮೆಂಟರಿ,
ಪ್ರಾಥಮಿಕ ಮತ್ತು ಹೈಸ್ಕೂಲುಗಳನ್ನು ಉತ್ತಮ ರೀತಿಯಲ್ಲಿ ನಡೆಸುವ ಅನುಭವವಿದೆ. ಅಲ್ಲಿರುವ
ವರೆಲ್ಲಾ ಜನರ ಪ್ರತಿನಿಧಿಗಳು, ಈ ಸಂಸ್ಥೆಗಳಲ್ಲಿರುವವರಿಗೆ ಅನುಭವವಿರುವುದು. ಅವುಗಳಿಗೆ
ಈ ಮಸೂದೆಯಲ್ಲಿ ಅಧಿಕಾರ ಕೊಟ್ಟರೆ ಅವು ಉತ್ತಮ ರೀತಿಯಲ್ಲಿ ಶಾಲೆಗಳನ್ನು ನಡೆಸುವುದಕ್ಕೆ
ಸಾಧ್ಯವಾಗಬಹುದು. ಪಂಚಾಯಿತಿ ರಾಜ್ಯದ ಬಿಲ್ಲನ್ನು ಸರಕಾರ ಅಥವಾ ಶಾಸನ ಸಭೆ ಒಪ್ಪಿ
ಜಿಲ್ಲಾ ಪರಿಷತ್ತು ರಚನೆಯಾದರೆ ಅದಕ್ಕೆ ಕೆಲವು ಶಾಲೆಗಳನ್ನು ನಡೆಸಲು ವಹಿಸಬಹುದು.
ತಾಲ್ಲೂಕುಬೋರ್ಡುಗಳಮೇಲೆ ವಿಶ್ವಾಸವಿಲ್ಲದಿದ್ದರೆ ಜಿಲ್ಲಾ ಪರಿಷತ್ತಿಗಾದರೂ ಆಯಾ ಜಿಲ್ಲೆ
ಯಲ್ಲಿರುವ ಪ್ರಾಥಮಿಕ ಶಾಲೆಗಳನ್ನು ನಡೆಸುವ ಅಧಿಕಾರ ಕೊಟ್ಟರೆ ವಿದ್ಯಾಭ್ಯಾಸವನ್ನು ಉತ್ತಮ
ರೀತಿಯಲ್ಲಿಡುವುದಕ್ಕೆ ಅವಕಾಶವಾಗಬಹುದು.

ಇನ್ನೊಂದು ವಿಚಾರ ಸೆಸ್ಸನ್ನು ಕುರಿತು ನಮೂದಾಗಿದೆ. ಲ್ಯಾಂಡ್ ರೆವಿನ್ಯೂಮೇಲೆ ಸೆಸ್
ಇದೆ. ಇದಲ್ಲದೆ ವಾಹನಗಳು ಮತ್ತು ಪ್ರಾಣಿಗಳಮೇಲೆ ಸಹ ಹಾಕಿದ್ದಾರೆ. ಲ್ಯಾಂಡ್ ರೆವಿನ್ಯೂ
ಮತ್ತು ಮುನಿಸಿಪಾಲಿಟಿಗಳಿಗೆ ಸೇರಿದ ಕಟ್ಟಡಗಳಮೇಲೆ ಸೆಸ್ ಹಾಕಿದ್ದರೆ ಚೆನ್ನಾಗಿತ್ತು. ವಾಹನ
ಗಳು ಮತ್ತು ಪ್ರಾಣಿಗಳಮೇಲೆ ದೊಡ್ಡ ಮೊತ್ತ ಬರುವುದಿಲ್ಲ, ಮೋಟಾರುವಾಹನಗಳಮೇಲೆ
ಸೆಸ್ ಹಾಕುವುದಿಲ್ಲ, ಸೈಕಲ್‌ಮೇಲೆ ತೆರಿಗೆ ಇದೆ, ಸೈಕಲ್ ಟ್ಯಾಕ್ಸ್ ರದ್ದಾಗುವುದಿದೆ. ಹಸು,
ಎಮ್ಮೆ, ನಾಯಿಗಳು ಮುಂತಾದುವುಗಳಮೇಲೆ ತೆರಿಗೆ ಹಾಕಿದರೆ ಎಷ್ಟು ಬರಬಹುದು.

ಕೇವಲ ನಾಯಿಗಳಮೇಲೆ ಹಾಕುವಂತಹ ಟ್ಯಾಕ್ಸನ್ನು ಕೈ ಬಿಡಬಹುದಾಗಿತ್ತು ಎಂದು ಅನಿ
ಸುತ್ತದೆ. ಮಾನ್ಯ ಸ್ನೇಹಿತರು ಕೆಲವರು ಸೆಸ್ ತೆಗೆದುಕೊಂಡದ್ದರಿಂದ ಜನರಿಗೆ ಅದರ ಪ್ರಯೋಜನ
ಸಿಕ್ಕುವುದಿಲ್ಲ ಎಂದು ಹೇಳಿದರು ಅದನ್ನು ನಾನು ಒಪ್ಪುವುದಿಲ್ಲ. ನಮ್ಮ ದೇಶದಲ್ಲಿ ಒಂದು ನಿರ್ದಿಷ್ಟ
ವಾದ ವರ್ಷದಲ್ಲಿ ಆದಂತಹ ವಿದ್ಯಾಪ್ರಸಾರವಾಗಲಿ, ವಿದ್ಯಾ ಸಂಸ್ಥೆಗಳ ಹೆಚ್ಚಳವಾಗಲಿ ವಿದ್ಯಾ
ಕ್ಷೇತ್ರದಲ್ಲಿ ಪ್ರಪಂಚದ ಯಾವುದೇ ರಾಜ್ಯದಲ್ಲೂ ಕೂಡ ಆಗಿಲ್ಲ ಎಂದು ಧೈರ್ಯವಾಗಿ ಹೇಳಬಲ್ಲೆ.
ಇಂಗ್ಲೆಂಡಿನ ಒಂದು ಉದಾಹರಣೆಯನ್ನು ತೆಗೆದುಕೊಂಡರೆ 1913 ರಿಂದ 65ನೇ ಇಸವಿಯವರೆಗೂ
ಎಂದರೆ 40 ವರ್ಷಗಳ ಅವಧಿಯಲ್ಲಿ ಎಷ್ಟು ಅವರು ಸಾಧನೆ ಮಾಡಿದ್ದಾರೋ ಅಷ್ಟನ್ನು ನಮ್ಮ
ದೇಶದಲ್ಲಿ 15 ವರ್ಷಗಳಲ್ಲಿ ಸಾಧಿಸಲಾಗಿದೆ ಎಂದು ಹೆಮ್ಮೆಯಿಂದ ಹೇಳಬಹುದಾಗಿದೆ. ಅದೇ ರೀತಿ

(ಶ್ರೀ ಕೆ. ಸೂರ್ಯನಾರಾಯಣ ಅಡಿಗ)

ವ್ಯವಸಾಯದ ಕ್ಷೇತ್ರದಲ್ಲೂ ಕೂಡ ಬಹಳ ಹೆಚ್ಚಿನ ಪ್ರಮಾಣದ ಕೆಲಸವಾಗಿದೆ ಎಂದು ಸಮಾಧಾನ ಮಾಡಿಕೊಳ್ಳಬಹುದಾಗಿದೆ. ಹಾಗಿದ್ದರೂ ಕೂಡ ಶ್ರೀಮಾನ್ ಚನ್ನಬೈರೇಗೌಡರು ಸೆಸ್‌ನಿಂದ ಪ್ರಯೋಜನವಾಗಿಲ್ಲ, ಮಕ್ಕಳು ಶಾಲೆಗೆ ಹೋಗುವುದಿಲ್ಲ ಎಂದರೆ ಅವರ ಗ್ರಾಮದಲ್ಲಿ ಆ ರೀತಿ ಇರಬಹುದು, ಆ ವಿಚಾರ ನಾನು ಹೇಳುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಶೇಕಡ 93 ಮಂದಿ ಮಕ್ಕಳು ಸರ್ಕಾರ ಕೈಕೊಂಡ ಕಾರ್ಯಕ್ರಮದಿಂದ ಶಾಲೆಗಳಿಗೆ ಹೋಗುತ್ತಾ ಇದ್ದಾರೆ ಎಂದು ಹೇಳಬಯಸುತ್ತೇನೆ. ಆದ್ದರಿಂದ ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಲಿಕ್ಕೆ ಎಷ್ಟೇ ಹಣ ಬೇಕೆಂದರೂ ನಾವು ಕೊಡಲಿಕ್ಕೆ ಹಿಂಜರಿಯಬಾರದು. ಹೆಚ್ಚು ಶಾಲೆಗಳನ್ನು ಮಾಡಿ, ಹೆಚ್ಚು ಜನ ಉಪಾಧ್ಯಾಯರನ್ನು ನೇಮಕ ಮಾಡಿ ಮಕ್ಕಳನ್ನೂ ಇನ್ನೂ ಹೆಚ್ಚು ವಿದ್ಯಾವಂತರನ್ನಾಗಿ ಮಾಡಿದರೆ ಸುಖೀ ರಾಜ್ಯ ಇನ್ನು ಕೆಲವೇ ವರ್ಷಗಳಲ್ಲಿ ಬಾರದೇ ಇರದು ಎಂದು ನನಗೆ ಅನಿಸುತ್ತದೆ.

ಈ ವಿಧೇಯಕಕ್ಕೆ ನನ್ನ ಸಂಪೂರ್ಣ ಬೆಂಬಲ ಇದೆ, ಆದರೆ ಇದರಲ್ಲಿ ಉಪಯೋಗ ಮಾಡತಕ್ಕ ಪದಗಳ ಬಗ್ಗೆ ನನ್ನ ಒಂದು ಸೂಚನೆ ಇದೆ. ಹೈದ್ರಾಬಾದು ಪ್ರದೇಶ, ಬೊಂಬಾಯಿ ಪ್ರದೇಶ, ಮದ್ರಾಸ್ ಪ್ರದೇಶ ಅಂತ ಹೇಳಿ ಏಕೆ ಪದ ಪ್ರಯೋಗ ಮಾಡುತ್ತಾರೋ ಅರ್ಥವಾಗುವುದಿಲ್ಲ. ಹಾಗೆ ಮಾಡದೇ ಜಿಲ್ಲೆಗಳ ಹೆಸರನ್ನು ಹಾಕಿದರೆ ಚೆನ್ನಾಗಿರುತ್ತದೆ. ಇನ್ನು ಮುಂದೆ ಆ ರೀತಿ ಮಾಡಬೇಕೆಂದು ಹೇಳಿ ಈ ವಿಧೇಯಕಕ್ಕೆ ನನ್ನ ಸಂಪೂರ್ಣ ಬೆಂಬಲ ಕೊಡುತ್ತೇನೆ.

Mr. VICE-CHAIRMAN.—Is it the pleasure of the House to extend the time for this Bill by 10 minutes ?

HON-MEMBERS.—The time may be extended by half-an hour, Sir as some of us are willing to participate in the debate.

Mr. VICE-CHAIRMAN.—Time is extended by half-an-hour.

5-30 P.M.

ಶ್ರೀ ಕೆ. ಚನ್ನಬಸವನಗೌಡ (ಸ್ಥಳೀಯ ಸಂಸ್ಥೆ).—ಅಧ್ಯಕ್ಷರೇ, ನಾನು ಮೈಸೂರು ಕಡ್ಡಾಯ ಪ್ರಾಥಮಿಕ ಶಿಕ್ಷಣದ ತಿದ್ದುಪಡಿ ಮಸೂದೆಯನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ನಾನು ನಮ್ಮ ಜಿಲ್ಲೆಯಲ್ಲಿರತಕ್ಕ ಶಾಲೆಗಳ ಬಗ್ಗೆ ಇದೇ ಸಭೆಯಲ್ಲಿ ಅನೇಕಾವರ್ತಿ ಹೇಳಿದ್ದೇನೆ. ನಮ್ಮ ಜಿಲ್ಲೆಯಲ್ಲಿ ನಾಲ್ಕು ರೀತಿಯ ಪ್ರಾಥಮಿಕ ಶಿಕ್ಷಣ ಶಾಲೆಗಳಿವೆ. ಡಿಸ್ಟ್ರಿಕ್ಟ್ ಬೋರ್ಡ್ ಪ್ರಾಥಮಿಕ ಶಾಲೆಗಳು ಸರ್ಕಾರಿ ಪ್ರಾಥಮಿಕ ಶಾಲೆಗಳು, ಮುನಿಸಿಪಲ್ ಪ್ರಾಥಮಿಕ ಶಾಲೆಗಳು, ಲೇಬರ್ ಪ್ರಾಥಮಿಕ ಶಾಲೆಗಳು ಮತ್ತು ಎಯಿಡೆಡ್ ಪ್ರಾಥಮಿಕ ಶಾಲೆಗಳು ಹೀಗೆ ನಾನಾ ರೀತಿಯ ಪ್ರಾಥಮಿಕ ಶಾಲೆಗಳಿವೆ. ಅವುಗಳ ಆಡಳಿತವನ್ನೆಲ್ಲಾ ಒಂದು ಚೌಕಟ್ಟಿನೊಳಗೆ ಬರುವಂತೆ ಒಂದು ಯೂನಿಫಾರಂ ಆಕ್ಟನ್ನು ಜಾರಿಗೆ ತರಬೇಕೆಂದು ಹೇಳುತ್ತಲೇ ಇದ್ದೇವೆ. ಆದರೆ ಈಗ ಸರ್ಕಾರದವರು ತಂದಿರತಕ್ಕ ತಿದ್ದುಪಡಿಯ ವ್ಯಾಪ್ತಿಯಲ್ಲಿ ನಮ್ಮ ಜಿಲ್ಲೆಯಲ್ಲಿರತಕ್ಕ ಜಿಲ್ಲಾ ಬೋರ್ಡ್ ಪ್ರಾಥಮಿಕ ಶಾಲೆಗಳು ಬರುವುದಿಲ್ಲವೆಂದು ನನಗೆ ಕಂಡುಬರುತ್ತಿದೆ. ನಾನಾಗಲೇ ಹೇಳಿದಹಾಗೆ ನಮ್ಮಲ್ಲಿ ನಾಲ್ಕಾರು ನಮೂನೆಯ ಪ್ರಾಥಮಿಕ ಶಾಲೆಗಳಿರುತ್ತವೆ. ನಮ್ಮಲ್ಲಿದ್ದ ಡೀಫಂಕ್ಟ್ ಜಿಲ್ಲಾ ಬೋರ್ಡುಗಳೆಲ್ಲಾ ಅಡ್ಮಿನಿಸ್ಟ್ರೇಟಿವ್ ಆಫೀಸರರ ಆಡಳಿತೆಯಲ್ಲಿವೆ, ಅವರ ಆಡಳಿತದಲ್ಲಿದ್ದ ಶಾಲೆಗಳೆಲ್ಲಾ ಈಗ ಸರ್ಕಾರದವರ ವಶವಾಗುತ್ತವೆ. ಆ ಎಲ್ಲಾ ಶಾಲೆಗಳನ್ನೂ ಈ ಒಂದು ಆಕ್ಟಿನೊಳಗೇ ಬರುವಂತೆ ಮಾಡಿದ್ದರೆ ಚೆನ್ನಾಗಿತ್ತು. ಈಗ ಆರೀತಿ ಮಾಡದಿರುವುದಕ್ಕಾಗಿ ನಾನು ನನ್ನ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ಇನ್ನು ಈ ಮಸೂದೆಯಲ್ಲಿ ಹೇಳಿರುವಂತೆ ಇನ್ನು ಮುಂದಕ್ಕೆ ಈ ಸ್ಥಳೀಯ ಸಂಸ್ಥೆಗಳ ಮುನಿಸಿಪಾಲಟಿ ಆಡಳಿತೆಯಲ್ಲಿದ್ದ ಎಲ್ಲ ಶಾಲೆಗಳೂ ಮತ್ತು ಶಾಲೆಗಳಿಗೆ ಸಂಬಂಧಪಟ್ಟ ಎಲ್ಲಾ ಆಸ್ತಿಪಾಸ್ತಿಗಳೂ ಸರ್ಕಾರಕ್ಕೆ ಸೇರುತ್ತವೆ. ಅಲ್ಲಿ ಕೆಲಸ ಮಾಡುತ್ತಿದ್ದ ಉಪಾಧ್ಯಾಯರುಗಳೂ ಕೂಡ ಸರ್ಕಾರದ ಚೌಕಟ್ಟಿನಲ್ಲಿ ಬರುತ್ತಾರೆ. ಅಲ್ಲಿ ಉಳಿಯುವುದಕ್ಕೆ ಇಷ್ಟವಿಲ್ಲದವರಿಗೆ ಬೇರೆ ಕಡೆಗೆ ಹೋಗುವುದಕ್ಕೂ ಒಂದು ಅವಕಾಶವನ್ನು ಕಲ್ಪಿಸಿದ್ದಾರೆ. ಹೀಗೆ ಮಾಡಿರತಕ್ಕದ್ದು ಒಳ್ಳೆಯದು. ಇದೇ ರೀತಿ ಎಲ್ಲಾ ಪ್ರಾಥಮಿಕ ಶಾಲೆಗಳ ಆಡಳಿತವನ್ನೂ ಮತ್ತು ಆ ಜಿಲ್ಲಾ ಬೋರ್ಡುಗಳ ಆಡಳಿತದಲ್ಲಿದ್ದ ಶಾಲೆಗಳ ಆಡಳಿತವನ್ನೂ ಸಹಾ ಸರ್ಕಾರದವರೇ ತೀವ್ರ ವಹಿಸಿಕೊಳ್ಳಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ರಾಜಗೋಪಾಲ್.—ನಮ್ಮಲ್ಲಿ ಲೋಕಲ್ ಆಕ್ಟುಗಳ ಪ್ರಕಾರ ಈಗ ಎಜುಕೇಷನ್ ಸೆಸ್ ಎಂದು ವಸೂಲ್ಮಾಡುತ್ತಿದ್ದಾರೆ. ಮುಂದಕ್ಕೆ ಈ ಸೆಸ್ಸನ್ನು ವಜಾ ಮಾಡಿ ಇದನ್ನು ಬೇರೆ ಒಂದು ರೂಪದಲ್ಲಿ ವಸೂಲ್ಮಾಡುತ್ತಾರೆಯೋ!

Sri N. M. KOTRABASAIAH SOGI.—I have made it clear more than once that this becomes uniform system of levying Cess. Cess goes along with the tax. We are not levying any new tax. It is being levied on such items on which the local authorities were levying tax. ಹಳೇ ಮೈಸೂರು ಭಾಗದಲ್ಲಿ ಹಿಂದೆ ಒಂದು ರೂಪಾಯಿಗೆ 9 ಪೈಸೆ ಮತ್ತು 12 ಪೈಸೆಗಳ ಪ್ರಕಾರ ಕೆಲವು ತೆರಿಗೆಗಳನ್ನೂ ಮತ್ತು ಎಜುಕೇಷನ್ ಸೆಸ್ಸನ್ನೂ ವಸೂಲ್ಮಾಡಲಾಗುತ್ತಿತ್ತು. ಆದರೆ ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ಇವನ್ನು ವಸೂಲ್ಮಾಡಲಾಗುತ್ತಿತ್ತು. ಹಿಂದೆ ಇದ್ದ ಸೆಸ್ಸುಗಳನ್ನೆಲ್ಲಾ ವಜಾ ಮಾಡಿ ಇನ್ನು ಮುಂದೆ ಸ್ಥಳೀಯ ಸಂಸ್ಥೆಯವರು ಯಾವ ಯಾವ ವಸ್ತುಗಳಮೇಲೆ ತೆರಿಗೆಯನ್ನು ಹಾಕಬಹುದೋ ಅಂಥ ಪದಾರ್ಥಗಳಮೇಲೆ ಈ ಎಜುಕೇಷನ್ ಸೆಸ್ಸನ್ನು ವಸೂಲ್ಮಾಡ ಬೇಕಾಗುತ್ತದೆ. ಅಂಥ ಸೆಸ್ಸು ಒಂದು ರೂಪಾಯಿಗೆ 5 ಪೈಸೆಗಳಿರುತ್ತದೆ. ಇದರ ಬಗ್ಗೆ ಹಿಂದೆ ಇದ್ದ ಆಕ್ಟುಗಳೆಲ್ಲ ರಿಪೀಲಾಗುತ್ತವೆ.

ಶ್ರೀ ಡಿ. ರಾಜಗೋಪಾಲ್.—ಹಿಂದೆ ಇದ್ದ ಬೆಂಗಳೂರು ಮುನಿಸಿಪಲ್ ಆಕ್ಟು ಏನೂ ಬದಲಾವಣೆಯಾಗಿಲ್ಲ.

Sri N. M. KOTRABASAIAH SOGI.—This prevails over all systems of taxes.

ಶ್ರೀ ಎ. ಕೆ. ಸುಬ್ಬಯ್ಯ (ಪದವೀಧರರ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ನಮ್ಮ ಸದನದ ಮುಂದೆ ತಂದಿರತಕ್ಕ ತಿದ್ದುಪಡಿ ಮಸೂದೆಯ ಬಗ್ಗೆ ನಾಲ್ಕು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. In the proposed amendment of section 2 (iii) the following sub-clause is proposed to be inserted:

> " (aa) for the City of Hubli–Dharwar the Municipal Corporation of the City of Hubli-Dharwar ;"

ಎಂದು ಇದೆ. ಇಲ್ಲಿ ಹೇಳಿರುವಂತೆ ಬೆಂಗಳೂರು ನಗರ ಕಾರ್ಪೊರೇಷನ್ನಿಗೇನು ಸೌಲಭ್ಯಗಳನ್ನು ಒದಗಿಸಲಾಗಿದೆಯೋ ಅವುಗಳನ್ನು ಆ ಹುಬ್ಬಳ್ಳಿ—ಧಾರ್ವಾಡ ಕಾರ್ಪೊರೇಷನ್ನಿಗೂ ಒದಗಿಸ ಬೇಕೆಂದು ಹೇಳುತ್ತೇನೆ.

ನಮ್ಮ ರಾಜ್ಯದಲ್ಲಿ ಈ ದಿವಸ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಹಾಗೂ ಕಡ್ಡಾಯವಾಗಿ ಕೊಡಲಾಗುತ್ತಿದೆ. ಅದರಲ್ಲೂ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಿದಮೇಲೆ ಈ ಪ್ರಾಥಮಿಕ ಶಿಕ್ಷಣದ ಬಗ್ಗೆ ಯಾವ ರೂಪದಲ್ಲೇ ಆಗಲಿ ಅಂದರೆ ವಿದ್ಯಾರ್ಥಿಗಳ ಮೇಲಾಗಲೀ ಅಥವಾ ಅವರ ತಂದೆ ತಾಯಿಗಳ ಮೇಲಾಗಲಿ ಒಂದು ಆರ್ಥಿಕ ಒತ್ತಡವನ್ನು ತರಬಾರದು. ನಮ್ಮ ರಾಜ್ಯಾಂಗದಲ್ಲಿ ಹೇಳಿರತಕ್ಕ ಡೈರೆಕ್ಟೀವ್ ಪ್ರಿನ್ಸಿಪಲ್‌ಗಳ ಪ್ರಕಾರ ನಾವು ವಿದ್ಯಾಭ್ಯಾಸದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿಲ್ಲ. ನಮಗೆ ಸ್ವರಾಜ್ಯ ಬಂದು ಇಲ್ಲಿಗೆ 22 ವರ್ಷಗಳಾಯಿತು. ಇಲ್ಲಿ ಈ ಶಿಕ್ಷಣ ಶುಲ್ಕವನ್ನು ಒಂದಲ್ಲಾ ಒಂದು ರೀತಿಯಲ್ಲಿ ವಸೂಲ್ಮಾಡುತ್ತಲೇ ಇದ್ದಾರೆ. ಒಂದು ಕಡೆ ಸರ್ಕಾರದವರು ಹೀಗೆ ಹಣವನ್ನು ಸಂಪಾದನೆ ಮಾಡುತ್ತಿದ್ದರೆ ಇನ್ನೊಂದು ಕಡೆ ಆ ಖಾಸಗೀ ಶಾಲೆಗಳವರು ನಾನಾ ರೀತಿಯಲ್ಲಿ ಮಕ್ಕಳಿಂದ ಹಣವನ್ನು ಸುಲಿಗೆ ಮಾಡುತ್ತಿದ್ದಾರೆ. ಆದಾಗ್ಯೂ ಬಾಯಲ್ಲಿ ಸರ್ಕಾರದವರು ಮಕ್ಕಳಿಗೆ ಇಲ್ಲಿ ಫ್ರೀ ಎಜುಕೇಷನ್ ಕೊಡುತ್ತಿದ್ದೇವೆಂದು ಹೇಳಿಕೊಳ್ಳುತ್ತಿದ್ದಾರೆ. ಫ್ರೀ ಎಜುಕೇಷನ್ ಕೊಡುತ್ತೇವೆಂದಮೇಲೆ ಜನರಿಂದ ಯಾವುದೇ ರೂಪದಲ್ಲಾಗಲೀ ದುಡ್ಡನ್ನು ವಸೂಲ್ಮಾಡಬಾರದು. ಈಗಾಗಲೇ ರಾಜ್ಯದಲ್ಲಿರತಕ್ಕ ರೈತನಮೇಲೆ ಬಹಳ ಭಾರವಾದ ಕಂದಾಯದ ಹೊರೆ ಬಿದ್ದಿದೆ ಎನ್ನುತ್ತಿರುವಾಗ ಮತ್ತು ಆ ಹೊರೆಯನ್ನೇ ಆ ರೈತನು ಹೊರಲಾರ ಎಂಬ ಕೂಗೆದ್ದಿರುವಾಗ ಇನ್ನು ಆ ರೈತನಮೇಲೆ ರೂಪಾಯಿಗೆ 5 ಪೈಸೆ ವಿದ್ಯಾ ತೆರಿಗೆಯನ್ನು ಕೊಡು ಎಂದು ಕೇಳುವುದು ಯಾವ ಧರ್ಮ? ಇದರಿಂದ ಫ್ರೀ ಎಜುಕೇಷನ್ ಎಂಬ ವಾದಕ್ಕೆ ಅಪಚಾರ ಮಾಡಿದಂತಾಗುತ್ತದೆ. ಈ ಮೂಲಕ ಸರ್ಕಾರದವರು ಜನರಮೇಲೆ ನೇರವಾಗಿ ತೆರಿಗೆಯನ್ನು ವಸೂಲ್ಮಾಡದಿದ್ದರೂ ಅಪ್ರತ್ಯಕ್ಷವಾಗಿ ವಿದ್ಯಾ ಶುಲ್ಕವನ್ನು ವಸೂಲ್ಮಾಡಿದಂತೆಯೇ ಆಯಿತು. ಇದು ಸರಿಯಲ್ಲ. ಆದರೆ ನಾವು ಈ ರಾಜ್ಯದಲ್ಲಿ ವಿದ್ಯಾಪ್ರಗತಿಯನ್ನು ಸಾಧಿಸಿದ್ದಂತೆ

(ಶ್ರೀ ಎ. ಕೆ. ಸುಬ್ಬಯ್ಯ)

ಇನ್ನು ಬೇರಾವ ರಾಜ್ಯದಲ್ಲೂ ಸಾಧಿಸಿಲ್ಲ ಎಂಬುದಾಗಿ ಶ್ರೀ ಅಡಿಗಾರವರು ಹೇಳಿದರು. ಬಹುಶಃ ಅವರು ದಕ್ಷಿಣ ಕನ್ನಡ ಜಿಲ್ಲೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹಾಗೆ ಹೇಳಿರಬಹುದು. ಆದರೆ ಅವರು ಹೇಳಿದುದಕ್ಕೆ ಆಧಾರ ಯಾವುದು ಎಂಬುದನ್ನು ಅವರು ತಿಳಿಸಲಿಲ್ಲ. ಆದರೆ ನಮ್ಮಲ್ಲಿ ಈ ದಿವಸ ಇರತಕ್ಕ ವಿದ್ಯಾ ಮಟ್ಟ ಎಂಥದ್ದು ಎಂದರೆ ಗ್ರಾಜುಯೇಟುಗಳಿಗೆ ಕನ್ನಡ ಸರಿಯಾಗಿ ಬರುವುದಿಲ್ಲ. ಇಂಗ್ಲೀಷೂ ಕೂಡ ಅವರಿಗೆ ಸರಿಯಾಗಿ ಬರುವುದಿಲ್ಲ. ಹೀಗಿದ್ದಾಗ್ಯೂ ನಾವು ನಮ್ಮ ಬೆನ್ನನ್ನು ಚಪ್ಪರಿಸಿಕೊಳ್ಳುವುದನ್ನು ಮಾತ್ರ ಬಿಡುವಹಾಗಿಲ್ಲ. ಕೆಲವರು ಡಿಗ್ರಿ ಪರೀಕ್ಷೆಯಲ್ಲಿ ಪಾಸಾಗಿರಬಹುದು. ಆದರೆ ವಿದ್ಯೆ ಈಗಿನ ಕಾಲಕ್ಕೆ ತಕ್ಕಂತೆ ಮಕ್ಕಳಿಗೆ ದೇಶದಲ್ಲಿ ದೊರಕುತ್ತಾ ಇಲ್ಲ. ಆದ್ದರಿಂದ ನಾವು ವಿದ್ಯೆಯಲ್ಲಿ ಮುಂದುವರಿದಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. ಇನ್ನೂ ವಿದ್ಯಾ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆಯಾಗಬೇಕಾಗಿದೆ. ಇದರ ಬಗ್ಗೆ ಸರ್ಕಾರದವರು ಹೆಚ್ಚು ಗಮನ ತೆಗೆದುಕೊಳ್ಳುತ್ತಾರೆಂದು ಆಸೆಪಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಎಸ್. ಹಿರೇಗೌಡರ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಸನ್ಮಾನ್ಯ ಸಭಾಪತಿಗಳೇ, ಮೈಸೂರು ಕಂಪಲ್ಸರಿ ಪ್ರೈಮರಿ ಎಜುಕೇಷನ್ ಬಿಲ್ಲನ್ನು ನಾನು ತುಂಬಾ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಮತ್ತು ಸಮರ್ಥಿಸುತ್ತೇನೆ. ಏಕೆಂದರೆ, 1956ರಲ್ಲಿ ನವ ಮೈಸೂರು ರಾಜ್ಯ ನಿರ್ಮಾಣವಾದನಂತರ ಉತ್ತರ ಕರ್ಣಾಟಕ ಭಾಗ ಅಥವಾ ಬೆಳಗಾಂ ಭಾಗದಲ್ಲಿರತಕ್ಕ ಪ್ರಾಥಮಿಕ ಶಿಕ್ಷಣವು ಸ್ಥಾನಿಕ ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡ್ ಅವರ ಆಡಳಿತದಲ್ಲಿತ್ತು. ಅದು ಎಷ್ಟೋ ಸುವ್ಯವಸ್ಥೆಯಾಗಿ ನಡೆಯುತ್ತಿದ್ದರೂ ಕೂಡ, ಒಂದು ರಾಜ್ಯದ ಒಂದು ಭಾಗದಲ್ಲಿ ಒಂದು ಪದ್ಧತಿ, ಇನ್ನೊಂದು ಭಾಗದಲ್ಲಿ ಮತ್ತೊಂದು ಪದ್ಧತಿ, ಮತ್ತೊಂದು ಕಾನೂನು—ಹೀಗೆ ಇರತಕ್ಕ ವ್ಯತ್ಯಾಸವನ್ನು ಹೋಗಲಾಡಿಸಲು 1960 ರಲ್ಲಿ ಪಾಸಾದ ಮೈಸೂರು ಕಂಪಲ್ಸರಿ ಪ್ರೈಮರಿ ಸ್ಕೂಲ್ಸ್ ಆಕ್ಟನ್ನು ಕೂಡಲೇ ಇಲ್ಲಿಯೂ ಅನ್ವಯಿಸಿದ್ದರೆ ಇಷ್ಟು ಹೊತ್ತಿಗೆ ಇನ್ನೂ ಬಹಳ ಹೆಚ್ಚು ಪ್ರಗತಿಯನ್ನು ಸಾಧಿಸುವುದಕ್ಕೆ ಅವಕಾಶವಾಗುತ್ತಿತ್ತು. ಆದರೂ ಸಹ ಮಾನ್ಯ ವಿದ್ಯಾಸಚಿವರು ಅದಷ್ಟು ತೀವ್ರದಲ್ಲಿ ಮುತುವರ್ಜಿ ವಹಿಸಿ ಈಗಲಾದರೂ ಸಮಸ್ತ ನವ ಮೈಸೂರು ರಾಜ್ಯದಲ್ಲಿ ಒಂದೇ ರೀತಿಯ ಪ್ರಾಥಮಿಕ ಶಿಕ್ಷಣ ಇರಬೇಕೆಂದು ಕಾರ್ಯಾರಂಭ ಮಾಡಿರುವುದು ಬಹಳ ಸ್ತುತ್ಯಾರ್ಹವಾದುದು. ಅದರಲ್ಲಿಯೂ ಈ ಬಗ್ಗೆ ಒಂದು ವಿಶೇಷ ಆಜ್ಞೆಯನ್ನು ಹೊರಡಿಸಿ ನಂತರ ಕಾನೂನು ರೂಪದಲ್ಲಿ ನಮ್ಮ ಮುಂದೆ ಈಗ ಇಟ್ಟಿದ್ದಾರೆ. ಅದಕ್ಕಾಗಿ ವಿದ್ಯಾ ಸಚಿವರಿಗೆ ಮತ್ತು ವಿದ್ಯಾ ಇಲಾಖೆಯವರಿಗೆ ನಾನು ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈಗ ಯಾವುದೇ ಒಂದು ಹೊಸ ಕಾಯಿದೆಯನ್ನು ಅನ್ವಯಿಸುವಾಗ ಈಗಿರತಕ್ಕ ಆಯಾ ಪ್ರದೇಶಗಳ ಸ್ಥಿತಿಗತಿಗಳಲ್ಲಿ ಮತ್ತು ಅಲ್ಲಿನ ಆಡಳಿತದಲ್ಲಿರುವ ನೌಕರರ ಆಗುಹೋಗುಗಳಲ್ಲಿ ವಿಶೇಷ ಪರಿಣಾಮವಾಗುವ ಸಂಭವವೂ ಇದೆ. ಅದನ್ನು ಭಾಷಾವಾರು ರಾಜ್ಯಗಳ ವಿಭಜನೆಯಾದಾಗ ಕಂಡಿದ್ದೇವೆ. ಈಗ ಏಕರೂಪತಾ ಕಾನೂನು ಆಗುವಾಗ ಮತ್ತೆ ಆಗಬಹುದು. ಉದಾಹರಣೆಗೆ ಹೇಳುವುದಾದರೆ ಉತ್ತರ ಕರ್ಣಾಟಕದಲ್ಲಿ ಪ್ರೈಮರಿ ಶಿಕ್ಷಣ ಕಾಯಿದೆ ಪ್ರಕಾರ ಅಲ್ಲಿ ಉಪಾಧ್ಯಾಯರು ನೇಮಕವಾಗಬೇಕಾಗಿದ್ದರೆ ಅವರಿಗೆ ಎಸ್.ಎಸ್.ಎಲ್.ಸಿ. ಕನಿಷ್ಠ ಅರ್ಹತೆ ಇರಬೇಕೆಂದು ನಿಯಮ ಇರಲಿಲ್ಲ. ಆದ್ದರಿಂದ ಕನ್ನಡ ಫೈನಲ್ ಪರೀಕ್ಷೆಯಾದ ಕೂಡಲೇ ಅಥವಾ ಎರಡು ವರ್ಷಗಳ ತರಬೇತಿ ಪಡೆದಿರುವವರು ಅಲ್ಲಿ ಮಾಸ್ತರ್ ಆಗಿದ್ದರು. ಅಂತಹ ಕೆಲವರು ಈಗ ಹೆಡ್‌ಮಾಸ್ತರ್ ಆಗಿದ್ದಾರೆ. ಅದರಂತೆ ತಾಲ್ಲೂಕು ಶಾಲಾ ಮಾಸ್ತರರು ಇಡೀ ತಾಲ್ಲೂಕಿನ ಶಿಕ್ಷಣ ಜವಾಬ್ದಾರಿಯನ್ನು ಪಡೆದಿದ್ದರು. ಈ ದೃಷ್ಟಿಯಿಂದ ವಿಚಾರ ಮಾಡುವುದಾದರೆ ಹೊಸ ಮೈಸೂರು ರಾಜ್ಯದ ಉಳಿದ ಭಾಗಗಳಲ್ಲಿ ಎಸ್ ಎಸ್.ಎಲ್.ಸಿ. ಕನಿಷ್ಠ ಅರ್ಹತೆ ಇರಬೇಕು ಎಂದು ನಿಯಮ ಇದೆ. ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ 1967ರಲ್ಲಿ ಜಾರಿಗೆ ತರಲಾಯಿತು. ಅದರ ಪ್ರಕಾರ ಹಲವಾರು ವರ್ಷಗಳವರೆಗೆ ಶಾಲೆಗಳಲ್ಲಿ ಅನುಭವ ಪಡೆದಿರುವಂಥ ಮಾಸ್ತರರೂ ಕೂಡ ಆಡಳಿತದಲ್ಲಿ ಡೆಪ್ಯುಟಿ ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್ ಆಗಬಹುದಾಗಿದೆ. ಆದ್ದರಿಂದ ಉತ್ತರ ಕರ್ನಾಟಕ ಅಥವಾ ಬೆಳಗಾಂ ವಿಭಾಗದಲ್ಲಿ ಈಗಿರತಕ್ಕ ಉಪಾಧ್ಯಾಯರು ಅಂತಹ ಶಿಕ್ಷಣ ಕ್ಷೇತ್ರದಲ್ಲಿ ಉಳಿಯಲಾರರು ಎಂಬ ವ್ಯಸನಕರವಾದ ಸ್ಥಿತಿ ಇದೆ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಾ ನಾನು ಒಂದು ಮಾತನ್ನು ಹೇಳುತ್ತೇನೆ. ಇವತ್ತು ಕನಿಷ್ಠ ಪಕ್ಷ 10 ರಿಂದ 15 ವರ್ಷಗಳವರೆಗೆ ಹೆಡ್‌ಮಾಸ್ತರ್ ಆಗಿರುವವರು, ತಾಲ್ಲೂಕ್ ಮಾಸ್ತರ್ ಆಗಿರುವವರು ಎಸ್.ಎಸ್.ಎಲ್.ಸಿ. ಅಥವಾ ಪದವೀಧರರಾಗಿರಬೇಕು ಎಂಬುದಾಗಿ ಹೇಳಿದ್ದನ್ನು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಅನ್ವಯಿಸದೆ ವಿನಾಯಿತಿ ಕೊಡಬೇಕು. ಅವರ ಶಿಕ್ಷಣ ಕುಶಲತೆಯನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿದೆ. ಹೆಡ್‌ಮಾಸ್ತರ್ ಅಥವಾ ಡೆಪ್ಯುಟಿ ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್ ಎಂದು ಕೆಲಸ ಕೊಡುವಾಗ ಈ ಒಳ್ಳೆಯ ವಿಚಾರವನ್ನು ಕೂಲಂಕಷ

ವಾಗಿ ವಿಚಾರಿಸಬೇಕು. ಅವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು, ಏಕೆ ಕೊಡಬೇಕೆಂದರೆ, ಸಾರ್ವಜನಿಕ ಕ್ಷೇತ್ರದಲ್ಲಿ ಸೇವೆ ಮಾಡುವ ನಾವು ಪ್ರತಿಯೊಂದು ಮೀಟಿಂಗಿಗೆ ಹೋದರೆ ದಿನಭತ್ಯ ಹಾಗೂ ಪ್ರವಾಸಭತ್ಯ ತೆಗೆದುಕೊಳ್ಳುತ್ತೇವೆ. ಅಲ್ಲಿ ತಾಲ್ಲೂಕು ಶಾಲಾ ಮಾಸ್ಟರ್ ಏನಿದ್ದಾರೆ ಅವರು ಮುಂಬೈ ಪ್ರಾಥಮಿಕ ಶಿಕ್ಷಣ ಕಾನೂನು ಅಮಲಿನಲ್ಲಿ ಬಂದಾಗಿನಿಂದ ಇವತ್ತಿನವರೆಗೂ ಉಮೇದುವಾರರಾಗಿ ಆಡಳಿತದಲ್ಲಿ ಪಗಾರ ಹಂಚುವುದು, ಲೆಕ್ಕ ಪತ್ರ ಇಡುವುದು ಮುಂತಾದ ನಮ್ಮ ಡೆಪ್ಯುಟಿ ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್ ಮಾಡುತ್ತಿರುವ ಎಲ್ಲಾ ಕಾರ್ಯಗಳನ್ನೂ ಮಾಡುತ್ತಾ ಬಂದಿದ್ದಾರೆ. ಆದರೆ ಅಲ್ಲಿ ತಾಲ್ಲೂಕು ಶಾಲಾ ಮಾಸ್ಟರ್ ಆಗುವವರು ಮುಫತ್ತಾಗಿ ಗೌರವ ವೇತನವಿಲ್ಲದೆ ಕೆಲಸಮಾಡುವುದರಿಂದ ಅದನ್ನು ಇಲ್ಲಿ ಗಮನಿಸದೇ ಹೋದರೆ ನಮ್ಮಲ್ಲಿ ಕಾರ್ಯ ಗೌರವ ಇದೆಯೆಂದು ನಾನು ತಿಳಿಯುವುದಿಲ್ಲ. ಆದ್ದರಿಂದ ಅಲ್ಲಿನ ಹೆಡ್‌ಮಾಸ್ಟರಿಗೆ ಮತ್ತು ತಾಲ್ಲೂಕು ಶಾಲಾ ಮಾಸ್ಟರಿಗೆ ವಿಶೇಷ ವಿನಾಯತಿ ಕೊಡಬೇಕು. ಅವರ ಸ್ಥಾನಮಾನ ಉಳಿಸಿಕೊಂಡು ಅವರು ಈಗ ಗೌರವ ವೇತನ ಇಲ್ಲದೆ ಮುಫತ್ತಾಗಿ ಕಾರ್ಯಮಾಡಿರುವುದರಿಂದ ಅಂತಹವರಿಗೆ ಏನಾದರೂ ಒಂದು ವಿನಾಯತಿ ತೋರಿಸಬೇಕು.

ಇನ್ನು ಎರಡನೆಯದಾಗಿ ಹೇಳುವುದೇನೆಂದರೆ, ನಾನು ಹೇಳಿದ್ದನ್ನೇ ಪುನರೋಕ್ತಿ ಮಾಡುವುದಿಲ್ಲ. ಆದರೆ ಕೆಲವು ಸದಸ್ಯರು ಮಾತನಾಡುತ್ತಾ 'ಫ್ರೀ ಎಜುಕೇಷನ್' ಎಂದು ಹೇಳಿ ಸೆಸ್ಸನ್ನು ವಸೂಲುಮಾಡುವುದು ಅಷ್ಟೊಂದು ಸರಿಯಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಫ್ರೀ ಎಜುಕೇಷನ್ನಿನಲ್ಲಿ ಉಪಾಧ್ಯಾಯರು ಫ್ರೀಯಾಗಿ ಪೂರ್ತಿ ಆನರರಿಯಾಗಿ ಕೆಲಸಮಾಡುವ ಜನರೇ ಮುಂದೆ ಬಂದರೆ ಆಗ ಅದು ನಿಜವಾಗಿ ಫ್ರೀಯಾಗಬಹುದು. ಫ್ರೀ ಎಜುಕೇಷನ್ ಎಂದರೆ ಬಡ ಬಾಲಕರಿಂದ ವಸೂಲುಮಾಡತಕ್ಕ ಫೀಯನ್ನು ವಿನಾಯತಿ ಕೊಟ್ಟು ಸರ್ಕಾರದವರು ಪುಕ್ಕಟೆ ಶಿಕ್ಷಣ ಕೊಟ್ಟರೆ ಅದು ಫ್ರೀ ಎಜುಕೇಷನ್ ಆಗುತ್ತದೆ ಎಂದು ನನ್ನ ತಿಳುವಳಿಕೆ. ಸರ್ಕಾರದವರು ಈ ಕರ ವಸೂಲುಮಾಡದೆ ಶಿಕ್ಷಣ ಕೊಡುವುದರಿಂದ ಇನ್ನು ಆ ಶಿಕ್ಷಣ ಎಲ್ಲಿಗೆ ಹೋಗುತ್ತದೋ ಏನೋ ಹೇಳುವುದಕ್ಕಾಗುವುದಿಲ್ಲ. ಈಗ ಸರ್ಕಾರದವರು ಶಿಕ್ಷಣ ಕ್ಷೇತ್ರದಲ್ಲಿ ಅಪಾರವಾಗಿ ಹೆಚ್ಚಿನ ಹಣ ಅಂದರೆ, ನನ್ನ ತಿಳುವಳಿಕೆಮಟ್ಟಿಗೆ ಹೇಳುವುದಾದರೆ, ಇವತ್ತು ಸೇಕಡ 34 ಅಥವಾ 38 ರಷ್ಟು ಆದಾಯ ಖರ್ಚುಮಾಡುತ್ತಿದ್ದಾರೆ. ನಾನು ಇದು ಅತ್ಯಂತ ಹೆಚ್ಚು ಎಂಬುದಾಗಿ ಬಡ್ಜೆಟ್ ಭಾಷಣ ಮಾಡುವಾಗ ಹೇಳಿದ್ದೇನೆ. ಪಶು ಸಮಾನರಾಗಿ ಹುಟ್ಟಿದಂತಹವರಾಗಿರುವ ನಮ್ಮ ಮಕ್ಕಳನ್ನು ನಾಗರೀಕರನ್ನಾಗಿ ಪರಿವರ್ತಿಸುವ ಕಾರ್ಯ ಗುರುತರವಾದದ್ದು. ಅಲ್ಲಿನ ಉಪಾಧ್ಯಾಯರು ಹೆಚ್ಚಿನ ಸಮಾಜಸೇವೆಯನ್ನು ಮಾಡಬೇಕಾಗಿದೆ. ಮಣ್ಣಿನಿಂದ ಮೂರ್ತಿ ಮಾಡುವಹಾಗೆ ಹೆಚ್ಚು ಕಷ್ಟಪಟ್ಟು ಕೆಲಸಮಾಡಬೇಕಾಗಿರುತ್ತದೆ. ಅದರಲ್ಲಿ ಹೆಚ್ಚಿನ ಮಹತ್ವವಿದೆಯೆಂದು ನಾನು ಒತ್ತಿ ಹೇಳುತ್ತೇನೆ. ಆದ್ದರಿಂದ ಮತ್ತೊಮ್ಮೆ ಉತ್ತರ ಕರ್ಣಾಟಕದ ಶಿಕ್ಷಕರಿಗೆ ಹೆಚ್ಚಿನ ವಿನಾಯತಿಯನ್ನು ಕೊಟ್ಟು ಅವರ ಸ್ಥಾನಮಾನಗಳನ್ನು ಉತ್ತಮ ದರ್ಜೆಯಲ್ಲಿ ಕಾಪಾಡಿಕೊಂಡು ಬರಬೇಕೆಂದು ನಾನು ಹೇಳುತ್ತೇನೆ. ಈಗ ಹೊಸ ಕಾಯಿದೆಯನ್ನು ಕಾರ್ಯರೂಪಕ್ಕೆ ತರುವ ಕಾಲಕ್ಕೆ ಏನಾದರೂ ತೊಂದರೆಗಳು ಬಂದರೆ, ಸಾರ್ವಜನಿಕ ಮುಖಂಡರನ್ನೂ, ಇತರ ಪ್ರಮುಖರನ್ನೂ ಸೇರಿಸಿ ಒಂದು ಕಮಿಟಿಯನ್ನು ಮಾಡಿ, ಈ ಪ್ರಾಥಮಿಕ ಶಿಕ್ಷಣ ಇಡೀ ದೇಶದಲ್ಲಿ ಸರಳವಾಗಿ ಮತ್ತು ಸುಗಮವಾಗಿ ನಡೆಯಬೇಕೆಂಬುದಾಗಿ ಹೇಳಿ, ಆ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದು ನನ್ನ ಮಾತನ್ನು ಮುಗಿಸುತ್ತೇನೆ.

Sri JEEVARAJ HIRACHAND SHAH. (Legislative Assembly Constituency)—Mr. Chairman Sir, This is a Bill which is brought forward to bring about uniformity of administration and to replace the ordinance. In that light, I wholeheartedly support it. But while supporting, I wish to say that while uniformity is to be welcomed, there should be no harassment for the poorer sections—the farmers and labourers. Generally, the farmers and labourers utilise the services of their children on the fields, in order to enhance their family income. If you make it compulsory for those children to bring to school, it means a great inconvenience and loss to the parents. Therefore, I would suggest that in order to suit their programme of work, you may change the hours of schooling for them in the rural areas, so that during the day they may work, with their parents and after their day's work, they can also attend the school.

(SRI JEEVARAJ HIRACHAND SHAH)

Sir, I congratulate the Government for omitting private institutions. Some time back, there was a rumour that all private institutions should be included. But we knew that there would be many difficulties for including private institutions. So the Government have wisely omitted private institutions. For That I congratulate the Government, because private institutions generally are started with some objects and ideals in order to promote cultural development of their areas. Therefore, such private institutions must be given full scope.

Again, Sir, I cannot understand the cess that is sought to be levied on animals and bullock-carts. I feel that this cess may be omitted, because farmers and poor people should not feel that what was given by one hand is taken away by the other hand, by asking the poor people to pay this cess. From that point of view, I would appeal to Government to drop this kind of a cess.

But, as this measure seeks to bring about uniformity in administration, I congratulate the Government for bringing this Bill.

I also thank the Chair for giving me an opportunity to speak on this occasion.

† SRI G. V. GOWDA.—Sir, I welcome this measure and I congratulate the Government for bringing it. My Hon'ble Friend Sri Adiga was pleased to observe that Mysore State has progressed very well in education. It may be so in South Kanara and even there, it may be quantitatively, not qualitatively. My opinion is, education in Mysore has been deteriorating and quality is very much at a discount. There is no proper supervision in rural parts, For four or five classes, there will be only one teacher. There are many untrained teachers working in primary schools. Government has not taken steps to reduce the number of untrained teachers. Such being the case, how can we say that education has progressed in Mysore State?

Sir, we have been urging upon the Government to bring about uniformity in the matter of grant-in-aid and other matters throughout the State. That has not been done. Though several years have elapsed since integration, There is no uniformity in grant-in-aid, and in several other matters pertaining to elementary education. I do not understand why this sort of an amendment should be brought to the Education Act, and why a comprehensive Bill could not have been brought once for all, dealing with all matters pertaining to education? That has not been done. In fact, I go further and question the propriety of the Government in issuing an ordinance in this matter. What was the urgent necessity for having this ordinance issued? In fact, the right vested in the Government under the Constitution has been misused, because they want to take away school boards by one stroke of the pen. All these school boards could have been taken over. There need not have been

legislation for that. Why should they resort to an ordinance for that purpose? In Kollegal after it joined Mysore, there were about 150 primary schools managed by the erstwhile district boards. But Government by a stroke of an order, took over all the schools. The same thing could have been done here. Where was the need for legislation? The original Act does not speak anything about taking over. The amendment says, take over all these schools! This is not correct legislation.

So far as the levy of cess is concerned, it does affact the common man and Government should have thought well before it thought of this idea. It not only seeks to levy tax on land revenue, but also cess on tax levied by the local authorities. I do not know how far it will be justified. Because local authorities have to discharge certain functions and they are authorised to levy certain taxes and carry out the purposes and functions entrusted to them. This is an additional burden on the taxpayer. We can levy cess on land revenue and not on tax. Sir, the Government are seeking to levy tax on liquor. I do not know how far it would be justifiable and whether it would stand the test of law. It has been held recently by the High Court that cess on liquor is illegal. They could have levied this cess on land revenue. It affects the common man. Therefore, Sir, let the Government strive hard to improve the quality of primary education. Simply marking attendance in the register would not improve education. What is the actual percentage of population actually educated? There are so many matters pertaining to primary education and Government has got to see that quality is improved as quickly as possible. In the rural areas, we cannot see the sight of these poor children. Even the Care articles that are given are misappropriated in schools. Unless Government takes steps to see that good education is imparted, the money spent on that department will not have been usefully spent.

Therefore, Sir, I oppose so far as the levy of the cess is concerned, because I understand that, that the Bangalore City Municipal Corporation are levying various casses.

SRI N. M. KOTRABASAIAH SOGI.—It is levying education cess under this Act only. There is no seperate cess under the Corporation Act.

SRI G. V. GOWDA.—With these observations I thank the Chair for giving me an opportunity.

6-00 P.M.

ಶ್ರೀ ಬಸವರಾಜಕಟ್ಟಿಮನಿ (ನಾಮನಿರ್ದೇಶ ಹೊಂದಿದವರು).—ಮಾನ್ಯ ಸಭಾಪತಿಯವರೇ, ಈಗ ಈ ಸಭೆಯಮುಂದೆ ತಂದಿರತಕ್ಕ ಕಡ್ಡಾಯ ಶಿಕ್ಷಣದ ತಿದ್ದುಪಡಿ ವಿಧೇಯಕವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಎರಡು ಮೂರು ಮಹತ್ವದ ಅಂಶಗಳನ್ನು ಹೇಳ ಬಯಸುತ್ತೇನೆ. ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳ ಸಾವಿರಾರು ಶಿಕ್ಷಕರ 12 ವರ್ಷಗಳ ಕನಸು ಈಗ ನನಸಾಗಿದೆ. 12 ವರ್ಷಗಳ ಹಿಂದೆ ನಮ್ಮ ವಿಶಾಲ ರಾಜ್ಯ ನಿರ್ಮಾಣವಾಯಿತು. ಆದರೂ ಕೂಡ ಉತ್ತರ ಕರ್ನಾಟಕದ ಪ್ರಾಥಮಿಕಶಾಲೆಯ ಶಿಕ್ಷಕರು ಸರ್ಕಾರಿ ನೌಕರರೆಂದು ಆಗಿರಲಿಲ್ಲ. ಈ ಹಿಂದೆ ಇದ್ದಂತಹ ಶಿಕ್ಷಣ ಸಚಿವರು ಉತ್ತರ ಕರ್ನಾಟಕದವರೇ ಆಗಿದ್ದರೂ ಕೂಡ

(ಶ್ರೀ ಬಸವರಾಜ ಕಟ್ಟೀಮನಿ)

ಉತ್ತರ ಕರ್ನಾಟಕದ ಪ್ರಾಥಮಿಕ ಶಾಲೆಗಳ ಶಿಕ್ಷಕರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಅವರ ಸಮಸ್ಯೆಗಳನ್ನು ಪರಿಹರಿಸಲಿಲ್ಲ. ಇಂದಿನ ವಿದ್ಯಾಸಚಿವರು ಅತ್ಯಂತ ನ್ಯಾಯವಾದ ನಿಲುವೆಯನ್ನು ತಳೆದು ದಿಟ್ಟತನದಿಂದ ಈ ಸಮಸ್ಯೆಯನ್ನು ಬಗೆಹರಿಸಿ ಉತ್ತರ ಕರ್ನಾಟಕದ ಶಿಕ್ಷಕರನ್ನು ಸರ್ಕಾರಿ ನೌಕರರನ್ನಾಗಿ ಮಾಡಿದ್ದಾರೆ. ಆದ್ದರಿಂದ ಆ ಎಲ್ಲಾ ಶಿಕ್ಷಕರ ಹೆಂಡರುಮಕ್ಕಳು ಮಾನ್ಯ ವಿದ್ಯಾ ಮಂತ್ರಿಗಳನ್ನ ಹಾಡಿ ಹರಸುತ್ತಿದ್ದಾರೆ. ಆದರೆ ಇದೇ ಸಂದರ್ಭದಲ್ಲಿ ಈ ಶಿಕ್ಷಕರ ಮನಸ್ಸಿನಲ್ಲಿ ಮೂಡಿರುವ ಒಂದು ಸಮಸ್ಯೆಯನ್ನೂ ಒಂದು ಸಂಶಯವನ್ನೂ ನಾನು ಹೇಳಬಯಸುತ್ತೇನೆ. ಈ ಶಿಕ್ಷಕರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿದಮೇಲೆ ಅದಕ್ಕೆ ಸಂಬಂಧಪಟ್ಟ ಹಾಗೆ ಬೇರೆ ಯಾವುದಾದರೂ ಒಂದು ಕಾನೂನು ತಂದು ಆ ಶಿಕ್ಷಕರನ್ನು ಪುನಃ ಜಿಲ್ಲಾ ಪರಿಷತ್ತಿಗೋ ಅಥವಾ ತಾಲ್ಲೂಕು ಬೋರ್ಡುಗಳಿಗೋ ಸೇರಿಸುತ್ತಾರೆಯೋ ಏನೋ ಎನ್ನುವ ಭಯ ಅವರಲ್ಲಿ ಇದೆ. ಇದೇ ವಿಚಾರವನ್ನು ಶ್ರೀಮಾನ್ ಸೂರ್ಯನಾರಾಯಣ ಅಡಿಗ ಅವರೂ ಕೂಡ ಸ್ಪಷ್ಟಪಡಿಸಿದ್ದಾರೆ. ಮಂಗಳೂರು ಜಿಲ್ಲೆಯ ಪರಿಸ್ಥಿತಿ ಒಂದು ರೀತಿ ಇದೆ. ಆದ್ದರಿಂದ ಅಲ್ಲಿ ನಗರಸಭೆಯವರಾಗಲೀ ಜಿಲ್ಲಾ ಪರಿಷತ್ತಿನವರಾಗಲೀ, ತಾಲ್ಲೂಕು ಬೋರ್ಡಿನವರಾಗಲೀ ಪ್ರಾಥಮಿಕ ಶಾಲೆಗಳನ್ನು ನಡೆಸುವುದಾದರೆ ಅವು ಅದರಲ್ಲಿ ಇರಬಹುದು. ದಕ್ಷಿಣಕನ್ನಡ ಜಿಲ್ಲೆಯವರು ಅತ್ಯಂತ ಬುದ್ಧಿವಂತರು. ಆದ್ದರಿಂದ ಅವರ ಪರಿಸ್ಥಿತಿಯೇ ಬೇರೆ ಇದೆ. ಉತ್ತರ ಕರ್ನಾಟಕದವರ ಪರಿಸ್ಥಿತಿಯೇ ಬೇರೆ ಇದೆ. ಹಳೆಯ ಮೈಸೂರಿನ ಪ್ರಾಥಮಿಕ ಶಾಲೆಗಳ ಶಿಕ್ಷಕರು ನೇರವಾಗಿ ಸರ್ಕಾರದವರ ಆಡಳಿತದಲ್ಲಿದ್ದಾರೆ. ಆದ್ದರಿಂದ ಈಗತಾನೆ ಸರ್ಕಾರಿ ನೌಕರರಾಗಿರುವ ಬಡ ಪ್ರಾಥಮಿಕ ಶಿಕ್ಷಕರನ್ನು ಜಿಲ್ಲಾಪರಿಷತ್ತಿಗಾಗಲೀ, ತಾಲ್ಲೂಕು ಬೋರ್ಡಿಗಾಗಲೀ ಅಥವಾ ಮತ್ತೆ ಯಾವುದೇ ಬೋರ್ಡಿಗೆ ಸೇರಿಸದೆ ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಈ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಸರ್ಕಾರದವರೇ ನೇರವಾಗಿ ತಮ್ಮ ಆಡಳಿತದಲ್ಲಿ ಇಟ್ಟುಕೊಳ್ಳಬೇಕೆಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಉತ್ತರ ಕರ್ನಾಟಕದ ಖಾಸಗೀ ಪ್ರಾಥಮಿಕ ಶಾಲೆಗಳನ್ನು ಸರ್ಕಾರದವರು ವಹಿಸಿಕೊಂಡಿಲ್ಲ. ಅವು ಇನ್ನೂ ಖಾಸಗಿ ಶಾಲೆಗಳಾಗಿಯೇ ಇವೆ. ಇದು ಬಹಳ ಶೋಚನೀಯವಾದ ವಿಚಾರ. ಆದ್ದರಿಂದ ಆ ಖಾಸಗೀ ಪ್ರಾಥಮಿಕ ಶಾಲೆಗಳನ್ನು ಸರ್ಕಾರದವರು ತೆಗೆದುಕೊಳ್ಳುವ ಯೋಚನೆ ಮಾಡಬೇಕು. ಮತ್ತು ಉತ್ತರ ಕರ್ನಾಟಕದ ತಾಲ್ಲೂಕ್ ಶಾಲಾ ಮಾಸ್ತರುಗಳನ್ನು ಅವರ ಅನುಭವ ಮತ್ತು ಅರ್ಹತೆ ಇವುಗಳ ಆಧಾರದಮೇಲೆ ಅವರನ್ನು ಇನ್‌ಸ್ಪೆಕ್ಟರ್ ಮಾಡಬೇಕಾಗುತ್ತದೆ. ಆ ಪ್ರದೇಶದ ಪ್ರಾಥಮಿಕಶಾಲಾ ಶಿಕ್ಷಕರಿಗೆ ವಿಶ್ರಾಂತಿ ವೇತನ ಸಿಕ್ಕುವುದು ಬಹಳ ತಡವಾಗುತ್ತಿದೆ. ಸಾವಿರಾರು ಜನ ಬಡ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಅವರು ನಿವೃತ್ತರಾದಮೇಲೆ 4 ವರ್ಷ ಆದರೂ ಕೂಡ ವಿಶ್ರಾಂತಿ ವೇತನ ಸಿಕ್ಕದೆ ಅವ್ಯವಸ್ಥೆಯಾಗಿದೆ. ಅವರು ತೊಂದರೆಗೆ ಒಳಗಾಗಿದ್ದಾರೆ. ಆದ್ದರಿಂದ ಅವರು ನಿವೃತ್ತಿ ಆದ ತಕ್ಷಣ ಅವರಿಗೆ ವಿಶ್ರಾಂತಿ ವೇತನ ಸಿಕ್ಕುವಹಾಗೆ ಸರ್ಕಾರದವರು ಕ್ರಮ ಕೈಗೊಳ್ಳಬೇಕು ಎಂದು ನಾನು ಕೇಳುತ್ತೇನೆ.

ಉತ್ತರ ಕರ್ನಾಟಕದ ವಿದ್ಯಾ ಇಲಾಖೆಯಲ್ಲಿದ್ದ ಎರಡು ಸಾವಿರ ನಾನ್‌ಗೆಜೆಟೆಡ್ ನೌಕರರುಗಳ ಸೇವೆ ಮತ್ತು ಬಡ್ತಿ ಮುಂತಾದ ವಿಚಾರಗಳಲ್ಲಿ ಕೆಲವೊಂದು ತೊಂದರೆಗಳು ಬರುವಹಾಗೆ ಕಾಣುತ್ತದೆ. ಮತ್ತು ಸಾವಿರಾರು ಜನ ಕಾರಕೂನರಿಗೆ ಅವರ ಬಡ್ತಿ ವಿಚಾರದಲ್ಲಿ ಅನುಮಾನ ಬರುತ್ತದೆ. ಆದ್ದರಿಂದ ಅವರಿಗೆ ಅವರ ಸೇವೆ ಮತ್ತು ಬಡ್ತಿ ವಿಚಾರದಲ್ಲಿ ಯಾವ ಸಂಶಯಗಳು ಬಾರದಹಾಗೆ ಮಾನ್ಯ ವಿದ್ಯಾಮಂತ್ರಿಗಳು ಕ್ರಮತೆಗೆದುಕೊಳ್ಳಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† SRI D. RAJAGOPAL (Legislative Assembly Constituency).—Mr. Chairman, While welcoming this Bill which is trying to create uniformity in the administrative pattern, I must say one very deplorable matter as far as the education system is concerned, particularly of Mysore State. It serves no useful purpose if thought of uniformity in the physical structure, pay-scales, etc. One thing which is very much lacking in Mysore State is that we have not introduced Kannada as a compulsory subject in all the stages in the State. I do not know why the Government of Mysore, in spite of agitations and representations,

has not thought of making Kannada a compulsory subject in all the educational institutions in the State. This is leading to all sorts of fissiparous tendencies among the students and from the students to the other sections of the society also. In the State we have the missionary English institutions, Anglo-Indian institutions, Telugu institutions, Tamil institutions, Gujarathi institutions. Every language institution we are having in the State. I am not against these institutions but all these institutions including the Government institutions should have Kannada as compulsory subject. The other day when I was mentioning that Kannada is not a compulsory subject, the Government came forward with the excuse that Kannada had been introduced as medium of education. That is not what is wanted in the educational pattern of the State. We are thinking of emotional integration, etc., etc. If we allow all these different sections of the society to have their own language institutions, how can you have integration if you do not have compulsory Kannada education in all the institutions and at all levels? This is very necessary. And I am sure the Government will bestow to it the attention which is needed to make Kannada a compulsory subect in the entire State at all levels.

ಶ್ರೀ ಕೆ. ಟಿ. ಶಾಮಯ್ಯಗೌಡ.—ಸ್ವಾಮಿ ನನಗೆ ಒಂದು ಕ್ಲಾರಿಫಿಕೇಷನ್ ಬೇಕಾಗಿದೆ. ಹಿಂದೆ ಇದೇ ತರಹ ಎಜುಕೇಷನ್ ಸೆಸ್ ಹಾಕಿದ್ದರ ಬಗ್ಗೆ ಕೆಲವರು ಕೋರ್ಟಿಗೆ ರಿಟ್ ಹೋಗಿ ಅವರಂತೆ ಮಾಡಿಕೊಂಡು ಸರ್ಕಾರದವರು ಹಿಂದೆ ಸೆಸ್ ವಸೂಲು ಮಾಡಿದ್ದನ್ನು ರೀಫಂಡ್ ತೆಗೆದು ಕೊಂಡಿದ್ದಾರೆ. ಆದ್ದರಿಂದ ಈಗ ಪುನಃ ಅದೇರೀತಿ ಎಜುಕೇಷನ್ ಸೆಸ್ ಹಾಕಿದರೆ ಅವರು ಮತ್ತೆ ಅದನ್ನು ವಾಪಸ್ಸು ತೆಗೆದುಕೊಳ್ಳಲು ಈ ಮಸೂದೆಯು ಪ್ರಾವಿಜನ್‌ನಲ್ಲಿ ದಾರಿ ಮಾಡಿದ್ದಾರೆ ಎಂದು ನಾನು ಹೇಳುತ್ತೇನೆ. ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸಭಾಪತಿಗಳೇ, ಮಾನ್ಯ ಶಾಮೇ ಗೌಡರು ಕೇಳಿದ ಕ್ಲಾರಿಫಿಕೇಷನ್‌ಗೆ ಮೊದಲು ಉತ್ತರ ಕೊಡುತ್ತೇನೆ. ಹೈಕೋರ್ಟ್‌ನಲ್ಲಿ ತೀರ್ಮಾನ ವಾಗಿರುವ ಬಗ್ಗೆ ಇನ್ನೊಂದು ತಿದ್ದುಪಡಿ ಈ ಸಭೆಯ ಮುಂದೆ ಬರುತ್ತದೆ. ಎಕ್ಸೈಜ್ ರೆವಿನ್ಯೂ ಮೇಲೆ ಎಜುಕೇಷನ್ ಸೆಸ್ ಹಾಕಬಾರದೆಂಬ ಪಾಲಿಸಿ ಸರ್ಕಾರಕ್ಕೆ ಮೊದಲು ಇತ್ತು. ಆದರೆ ಮೈಸೂರು ಎಲಿಮೆಂಟರಿ ಎಜುಕೇಷನ್ ಆಕ್ಟ್—1941ರ ಪ್ರಕಾರ ಈ ಸೆಸ್ಸನ್ನು ಹಾಕುವುದಕ್ಕೆ ಅವಕಾಶವಿದೆ. ಈ ಆಕ್ಟ್ ಪ್ರಕಾರ ನಾವು ಸೆಸ್ಸನ್ನು ವಸೂಲಿ ಮಾಡಿದ್ದೆವು. ಆದರೆ ಕೆಲವರು ಹೈಕೋರ್ಟಿಗೆ ರಿಟ್ ಹೋದರು. ಅಲ್ಲಿ ಸೆಸ್ ಹಾಕಬಾರದೆಂದು ತೀರ್ಮಾನ ಕೊಟ್ಟಿದ್ದಾರೆ. ಈಗ ಹೈಕೋರ್ಟಿನ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟಿಗೆ ಹೋಗಿದ್ದೇವೆ. ಈ ಕೇಸ್ ಪೆಂಡಿಂಗ್ ಇದ್ದರೂ ಕೂಡ, ಹೈಕೋರ್ಟಿನ ತೀರ್ಪನ್ನು ವ್ಯಾಲಿಡೇಟ್ ಮಾಡುವುದಕ್ಕೆ ಮತ್ತೊಂದು ತಿದ್ದುಪಡಿ ಯನ್ನು ಈ ಸಭೆಯ ಮುಂದೆ ತರುತ್ತೇವೆ. ಈಗ ಸಭೆಯ ಮುಂದೆ ಇರುವ Mysore Compulsory Primary Education (Amendment and Miscellaneous Provisions) Ordinance, 1969, ಬಿಲ್ ಏನಿದೆ ಇದರ ಮೇಲೆ ಇದುವರೆಗೆ ಬಹಳ ಮಂದಿ ಸದಸ್ಯರು ವಿಶೇಷ ಆಸಕ್ತಿಯಿಂದ ಮಾತನಾಡಿ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಒಂದು ಮಸೂದೆ ಬಹಳ ಸಣ್ಣದು ಇದ್ದರೂ ಕೂಡ 17 ಮಂದಿ ಸದಸ್ಯರು ಮಾತನಾಡಿದ್ದಾರೆ. ಎಲ್ಲಾ ಸದಸ್ಯರೂ ತಮ್ಮ ಅಮೂಲ್ಯ ಸಲಹೆಗಳನ್ನು ಕೊಟ್ಟಿರುವುದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಒಂದು ಸಂತೋಷದಾಯಕವಾದ ಸಂಗತಿ ಎಂದರೆ ಈ ಮಸೂದೆಯ ಮೇಲೆ ಮಾತನಾಡಿದ ಆಡಳಿತ ಪಕ್ಷದ ಸದಸ್ಯರು ಮತ್ತು ವಿರೋಧಪಕ್ಷದ ಸದಸ್ಯರು ಎಲ್ಲರೂ ಕೂಡ ಇದನ್ನು ಸಂತೋಷದಿಂದ ಸ್ವಾಗತ ಮಾಡಿದ್ದಾರೆ. ತಮ್ಮ ಹೃತ್ಪೂರ್ವಕವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಸದಸ್ಯರು ಕೆಲವು ಸಂಶಯಗಳನ್ನು ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಮೊದಲು ಉತ್ತರ ಕೊಡುತ್ತೇನೆ. ಎಲ್ಲರಿಗೂ ಗೊತ್ತಿರುವಂತೆ ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿ ಇಡೀ ರಾಜ್ಯಕ್ಕೆ ಅನ್ವಯಿಸುವಂತಹ ಏಕರೂಪವಾದ ಆಡಳಿತವಿರಬೇಕು, ಏಕರೂಪವಾದ ಶಾಲೆಗಳ ವ್ಯವಸ್ಥೆಯಿರ ಬೇಕು ಎಂಬುದು ಸರ್ಕಾರದ ಮನಸ್ಸಿನಲ್ಲಿ ಇತ್ತು. ಮತ್ತು ಅದನ್ನು ಜಾರಿಯಲ್ಲಿ ತರಬೇಕೆಂಬ

(ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ)

ಬಗ್ಗೆ ಸರ್ಕಾರ ಪ್ರಯತ್ನ ಮಾಡುತ್ತಿತ್ತು. ಇತ್ತೀಚೆಗೆ ಬಳ್ಳಾರಿ ಜಿಲ್ಲೆಯಲ್ಲಿದ್ದ ಖಾಸಗೀ ಏಡೆಡ್ ಶಾಲೆಗಳನ್ನು ಅಲ್ಲಿಯ ಆಡಳಿತ ಮಂಡಲಿಯವರ ಅನುಮತಿಯ ಮೇಲೆ ಸರ್ಕಾರ ವಹಿಸಿಕೊಂಡಿತು. ಈ ಕಾರಣದಿಂದ ಸರ್ಕಾರದ ಉದ್ದೇಶ ಏನಿತ್ತು, ಆ ಒಂದು ದಿಶೆಯಲ್ಲಿ ಮಹತ್ತರವಾದ ಹೆಜ್ಜೆಯನ್ನು ಇಟ್ಟಿತು ಎಂದು ಹೇಳಬಹುದು. ಮುಂಬೈ ಕರ್ನಾಟಕ ಮತ್ತು ಇನ್ನಿತರ ಭಾಗದವರು ಸಹ ಅಂದರೆ ಅನೇಕ ಮಂದಿ ಶಿಕ್ಷಕರು ಮತ್ತು ಅಲ್ಲಿಯ ಜನತಾ ಮುಂದಾಳುಗಳು ಅಲ್ಲಿರುವ ಏಡೆಡ್ ಶಾಲೆಗಳನ್ನು ಸರ್ಕಾರದವರೇ ನಡೆಸಬೇಕೆಂದು ಒತ್ತಾಯ ಮಾಡಿದಾಗ ಅಲ್ಲಿಯ ಶಾಲೆಗಳನ್ನು ಸಹ ಸರ್ಕಾರದವರೇ ವಹಿಸಿಕೊಂಡು ನಡೆಸಬೇಕೆಂದು ತೀರ್ಮಾನ ಮಾಡಿತು. ಈ ಒಂದು ಮಸೂದೆಯ ಬಗ್ಗೆ ರಾಜ್ಯಪಾಲರ ವಿಶೇಷಾಜ್ಞೆಯನ್ನು ಏತಕ್ಕೆ ಹೊರಡಿಸಲಾಯಿತು ಎಂದು ಅನೇಕ ಮಂದಿ ಸದಸ್ಯರು ಕೇಳಿದರು. ಕಳೆದ ಅಧಿವೇಶನದಲ್ಲಿಯೇ ಈ ಒಂದು ಮಸೂದೆಯನ್ನು ಸಭೆಯ ಮುಂದೆ ಮಂಡಿಸಬೇಕಾಗಿತ್ತು. ಆದರೆ ಅವಶ್ಯಕವಾಗಿ ಬೇಕಾಗಿದ್ದಂಥ ಮಾಹಿತಿಗಳು ಸಿಗದಿದ್ದುದರಿಂದ ಮಂಡಿಸುವುದಕ್ಕಾಗಲಿಲ್ಲ. ಪ್ರೈಮರಿ ಶಾಲೆಗಳ ಶೈಕ್ಷಣಿಕ ವರ್ಷ ಇದೇ ವರ್ಷದ ಮೇ 22ರಂದು ಪ್ರಾರಂಭವಾಗುವುದರಿಂದ ಮೇ ತಿಂಗಳ 1ರಂದು ರಾಜ್ಯಪಾಲರ ವಿಶೇಷ ಆಜ್ಞೆಯನ್ನು ಹೊರಡಿಸಬೇಕಾಯಿತು. ಈ ಕಾರಣದಿಂದ ವಿಶೇಷಾಜ್ಞೆಯನ್ನು ಹೊರಡಿಸಬೇಕಾಯಿತೇ ವಿನಃ ಯಾವುದೇ ವಿಧವಾದ ಅಸಹಾಯಕತೆ ಅಥವಾ ದುರುದ್ದೇಶದಿಂದ ಹೊರಡಿಸಲಿಲ್ಲ. ಆದಕಾರಣ ಆ ವಿಚಾರದಲ್ಲಿ ಯಾವುದೇ ವಿಧವಾದ ಅರ್ಥವನ್ನು ಕಲ್ಪಿಸುವ ಅಗತ್ಯವಿಲ್ಲವೆಂದು ಹೇಳುತ್ತೇನೆ. ರಾಜ್ಯಪಾಲರ ವಿಶೇಷಾಜ್ಞೆಯನ್ನು ಹೊರಡಿಸಿದ ಮೇಲೆ ಸಾರ್ವಜನಿಕರು ಮತ್ತು ಎಲ್ಲಾ ಉಪಾಧ್ಯಾಯರು ಅದನ್ನು ಮೆಚ್ಚಿಕೊಂಡಿದ್ದಾರೆ. ಈ ಮೂಲಕ ಸರ್ಕಾರ ಒಂದು ಮಹತ್ತರವಾದ ಪ್ರಗತಿಯನ್ನು ಸಾಧಿಸಿದಂತಾಗಿದೆ. ಮತ್ತು ಒಂದು ಹೆಚ್ಚಿನ ಐತಿಹಾಸಿಕ ಸುಧಾರಣೆಯನ್ನು ಮಾಡಿದಂತಾಗಿದೆ ಎಂದು ಹೇಳಬೇಕಾಗಿದೆ. ಸರ್ಕಾರದ ಮೂಲ ಉದ್ದೇಶ ಇರುವುದಾದರೂ ಕೂಡ ಇಡೀ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣದ ಮಟ್ಟದಲ್ಲಿ ಏಕರೂಪವಾದ ಶಿಕ್ಷಣವನ್ನು ಜಾರಿಗೆ ತರಬೇಕು ಎಂಬುದು. ಖಾಸಗೀಯವರು ನಡೆಸುತ್ತಿರುವ ಶಾಲೆಗಳನ್ನು ಸಹ ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಕೆಲವು ಸದಸ್ಯರು ಹೇಳಿದರು. ಖಾಸಗೀಯವರನ್ನು ಒತ್ತಾಯಪಡಿಸಿ ಅವರು ನಡೆಸುತ್ತಿರುವ ಶಾಲೆಗಳನ್ನು ಸರ್ಕಾರದವರು ವಹಿಸಿಕೊಳ್ಳಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ. ಮತ್ತು ರಾಷ್ಟ್ರೀಕರಣ ಮಾಡಬೇಕೆಂಬ ಉದ್ದೇಶವೂ ಇಲ್ಲ. ಯಾವ ಖಾಸಗೀ ಸಂಸ್ಥೆಯವರು ಉತ್ತಮವಾಗಿ ಶಾಲೆಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೋ ಅಂತಹವರಿಗೆ ಎಲ್ಲಾ ರೀತಿಯ ಅನುಕೂಲಗಳನ್ನು ಒದಗಿಸಿ ಕೊಡುತ್ತಿದ್ದೇವೆ. ಯಾವುದಾದರೂ ಶಾಲೆಯಲ್ಲಿ ದುರ್ವ್ಯವಹಾರ ನಡೆದಿದೆ ಎಂದು ಸರ್ಕಾರದ ಗಮನಕ್ಕೆ ಬಂದರೆ ಅಂತಹ ಶಾಲೆಯನ್ನು ಬಲಾತ್ಕಾರವಾಗಿ ತೆಗೆದುಕೊಳ್ಳುವುದಕ್ಕೆ ಹಿಂದೆಮುಂದೆ ನೋಡುವುದಿಲ್ಲ. ಖಾಸಗೀ ಶಾಲೆಗಳನ್ನು ಸರ್ಕಾರದವರೇ ನಡೆಸಬೇಕೆಂದು ಮೂಲ ಯೋಜನೆ ಇದ್ದರೂ ಕೂಡ ಕೂಡಲೇ ವಹಿಸಿಕೊಳ್ಳುವುದು ಕಷ್ಟವಾಗುತ್ತದೆ. ಮತ್ತು ಆ ರೀತಿ ಮಾಡುವುದು ಸೂಕ್ತವಲ್ಲ ಎಂಬ ಅಭಿಪ್ರಾಯವಿದೆ. ಸಾಧ್ಯವಾದ ಮಟ್ಟಿಗೂ ಶೈಕ್ಷಣಿಕ ಮಟ್ಟದಲ್ಲಿ ಒಂದು ರೀತಿಯ ಪೈಪೋಟಿ ನಡೆದರೇ ಒಳ್ಳೆಯದು. ಖಾಸಗೀಯವರಿಂದ ಬಲಾತ್ಕಾರವಾಗಿ ಶಾಲೆಗಳನ್ನು ವಹಿಸಿಕೊಳ್ಳಬೇಕೆಂಬುದು ಸರಿಯಲ್ಲ. ಮತ್ತು ಆ ಒಂದು ಉದ್ದೇಶ ಕೂಡ ಇಲ್ಲ. ಬೆಂಗಳೂರು ಕಾರ್ಪೊರೇಷನ್ ಆಡಳಿತದಲ್ಲಿರುವ ಶಾಲೆಗಳನ್ನು ಸಹ ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಕೆಲವು ಸದಸ್ಯರು ಸಲಹೆ ಮಾಡಿದ್ದಾರೆ. ಆದರೆ ಆ ಒಂದು ಉದ್ದೇಶ ಸರ್ಕಾರಕ್ಕೆ ಈಗ ಇಲ್ಲ. ಮತ್ತು ಅದಕ್ಕೆ ಪ್ರಾವಿಜನ್ ಕೂಡ ಮಾಡಿಲ್ಲ. ಈಗ ಬೆಂಗಳೂರು ಕಾರ್ಪೊರೇಷನ್ ಅವರು ಶಾಲೆಗಳನ್ನು ನಡೆಸುತ್ತಿರುವಂತೆ ಧಾರವಾಡ ಮತ್ತು ಹುಬ್ಬಳ್ಳಿ ಕಾರ್ಪೊರೇಷನ್ ಅವರು ಸಹ ನಡೆಸುವಂತೆ ಏರ್ಪಾಡು ಮಾಡಬೇಕೆಂದು ಕೆಲವು ಸದಸ್ಯರು ಹೇಳಿದರು. ಈಗ ಬೆಂಗಳೂರು ಕಾರ್ಪೊರೇಷನ್ ಆಡಳಿತದಲ್ಲಿರುವ ಶಾಲೆಗಳನ್ನು ನೋಡಿಕೊಳ್ಳುವುದಕ್ಕೆ ಒಬ್ಬ ಸ್ಪೆಷಲ್ ಆಫೀಸರ್ ಇದ್ದಾರೆ. ಮತ್ತು ಪ್ರತ್ಯೇಕವಾದ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ಈ ಒಂದು ವ್ಯವಸ್ಥೆ ಹುಬ್ಬಳ್ಳಿ—ಧಾರವಾಡ ಕಾರ್ಪೊರೇಷನ್‌ನಲ್ಲಿ ಇಲ್ಲ.

ವೈಸ್ ಚೇರ್‌ಮನ್‌ರವರು.—ಈ ವಿಚಾರದಲ್ಲಿ ಆ ಕಾರ್ಪೊರೇಷನ್ ಅವರು ಒಂದು ರೆಪ್ರಸೆಂಟೇಷನ್ ಕೊಟ್ಟಿದ್ದಾರೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಹುಬ್ಬಳ್ಳಿ—ಧಾರವಾಡ ಕಾರ್ಪೊರೇಷನ್ ಅವರು ಬೆಂಗಳೂರು ಕಾರ್ಪೊರೇಷನ್ ಅವರು ನಡೆಸುತ್ತಿರುವಂತೆ ನಡೆಸಿಕೊಂಡು ಹೋಗುತ್ತೇವೆ, ಅನುಮತಿ ಕೊಡಿ ಎಂದು ಮುಂದೆ ಬಂದರೆ ವಿಚಾರ ಮಾಡಬಹುದು. ಜಿಲ್ಲಾಪರಿಷತ್ ರಚನೆಯಾದ

ಮೇಲೆ ಈ ಶಾಲೆಗಳ ಆಡಳಿತವನ್ನು ಅದಕ್ಕೇ ವಹಿಸಬೇಕೆಂದು ಕೆಲವರು ಹೇಳಿದರು. ಈಗ ಒಂದು ಏಕ ರೂಪವಾದ ಶಿಕ್ಷಣವನ್ನು ಜಾರಿಗೆ ತರಬೇಕೆಂದು ಪ್ರಯತ್ನಪಟ್ಟಿದ್ದೇವೆ. ಜಿಲ್ಲಾಪರಿಷತ್ ರಚನೆಯಾದ ಮೇಲೆ ಈ ಶಾಲೆಗಳ ಆಡಳಿತವನ್ನು ಅದಕ್ಕೆ ವಹಿಸುವ ವಿಚಾರವನ್ನು ಮಾಡುವುದು ಅಗತ್ಯ. ಈಗ ಆ ಬಗ್ಗೆ ವಿಚಾರ ಮಾಡಬೇಕಾದ ಅಗತ್ಯವಿಲ್ಲ. ಕಾಮನ್ ಗ್ರ್ಯಾಂಟ್-ಇನ್-ಏಡ್ ಕೋಡನ್ನು ಜಾರಿಗೆ ತರಬೇಕೆಂದು ಕೆಲವು ಸದಸ್ಯರು ಹೇಳಿದರು. ಅದನ್ನು ಕೂಡ ಮಾಡುತ್ತಿದ್ದೇವೆ. ಕಂಪಲ್‌ಸರಿ ಪ್ರೈಮರಿ ಎಜುಕೇಷನ್ ಜಾರಿಗೆ ಬಂದಮೇಲೆ ಯಾವ ಒಂದು ಹೆಚ್ಚಿನ ಪ್ರಗತಿಯೂ ಕೂಡ ಆಗಿಲ್ಲ ಎಂದು ಕೆಲವರು ಹೇಳಿದರು. ಸುಮಾರು ಹತ್ತು ವರ್ಷಗಳ ಹಿಂದೆ ಶೇಕಡ 9.5 ರಷ್ಟು ಅಥವಾ ಹತ್ತರಷ್ಟು ಇದ್ದ ವಿದ್ಯಾವಂತರ ಸಂಖ್ಯೆ ಈಗ 25 ರಿಂದ 28 ರ ವರೆಗೆ ಏರಿದೆ. ಈ ರೀತಿ ಈಗ ಪರ್ಸೆಂಟೇಜ್ ಆಫ್ ಲಿಟರೆಸಿ ಇದೆ.

ಶ್ರೀ ಜಿ. ವಿ. ಆಂಜನಪ್ಪ.—ಹಳೆಯ ಮೈಸೂರಿನಲ್ಲೇ ಸುಮಾರು ಶೇ 22 ಇತ್ತು.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಾನು ಹೊಸ ಮೈಸೂರು ರಾಜ್ಯದ ಬಗ್ಗೆ ಇಲ್ಲಿ ಹೇಳುತ್ತಿರುವುದು. ನಮ್ಮ ಇಡೀ ರಾಜ್ಯದ ವಿದ್ಯಾವಂತರ ಸಂಖ್ಯೆ ಹೇಳುತ್ತಿದ್ದೇನೆ. ಭಾರತದಲ್ಲಿ ಇರುವ ರಾಜ್ಯಗಳಲ್ಲಿ ಕೇರಳ ರಾಜ್ಯ ವಿದ್ಯಾವಂತರ ಸಂಖ್ಯೆ ಹೆಚ್ಚಾಗಿದೆ ಮತ್ತು ಹೆಚ್ಚು ಪ್ರಗತಿ ಸಾಧಿಸಿದೆ. ಇದನ್ನು ಬಿಟ್ಟರೆ ನಮ್ಮ ಮೈಸೂರು ರಾಜ್ಯವೇ ಎರಡನೆಯದು. ಇಷ್ಟು ಪ್ರಗತಿ ಈಗ ಆಗಿದೆ. ಇದರ ಜೊತೆಗೆ ಎಕ್ಸ್‌ಟೆನ್‌ಷನ್ ದೃಷ್ಟಿಯಿಂದ ಹೇಳುವುದಾಗಿದ್ದರೆ ಸುಮಾರು 32 ಸಾವಿರ ಪ್ರೈಮರಿ ಶಾಲೆಗಳು ಈಗ ನಮ್ಮ ರಾಜ್ಯದಲ್ಲಿವೆ ಮತ್ತು ಸಾಕಷ್ಟು ಪ್ರಗತಿಯಲ್ಲಿ ನಡೆಯುತ್ತಿವೆ. ಇಲ್ಲಿರುವ ಶಾಲೆಗಳಲ್ಲಿ ಶೇಕಡಾ 94 ರಷ್ಟು ವಿದ್ಯಾರ್ಥಿಗಳು ಶಾಲೆಗೆ ಹೋಗುತ್ತಿದ್ದಾರೆ.

ಪ್ರತಿಯೊಂದು ಹಳ್ಳಿಯಲ್ಲಿಯೂ ನಾವು ನೋಡುತ್ತಿರುವಂತೆ ಹೆಚ್ಚು ಸಂಖ್ಯೆಯಲ್ಲಿ ಮಕ್ಕಳು ವಿದ್ಯಾಭ್ಯಾಸಕ್ಕಾಗಿ ಹೋಗುತ್ತಿದ್ದಾರೆ ಮತ್ತು ಬೀದಿಯಲ್ಲಿ ತಿರುಗುವ ಭಿಕ್ಷಕನ ಮಕ್ಕಳೂ ಕೂಡ ವಿದ್ಯಾಭ್ಯಾಸ ಪಡೆಯಲು ಶಾಲೆಗಳಿಗೆ ಹೋಗುತ್ತಿದ್ದಾರೆ.

ಶ್ರೀ ಜಿ. ವಿ. ಅಂಜನಪ್ಪ.—ಇದರ ಬಗ್ಗೆ ಏನಾದರೂ ಸರ್ವೇ ನಡೆಸಿದ್ದೀರಾ ! ಯಾವ ಆಧಾರದ ಮೇಲೆ ಇವನ್ನೆಲ್ಲಾ ಹೇಳುತ್ತಿದ್ದೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಮಗೆ ಡಿಪಾರ್ಟ್‌ಮೆಂಟುಗಳಿಂದ ಸ್ಟೇಟು ಮೆಂಟುಗಳು ಬರುತ್ತವೆ ಮತ್ತು ಆಡಳಿತಾಧಿಕಾರಿಗಳು ಎಲ್ಲ ಕಡೆಗಳಿಂದ ಬರುವ ರಿಪೋರ್ಟುಗಳ ಮೇಲೆ ಸರಕಾರಕ್ಕೆ ಒಂದು ವರದಿ ಕಳುಹಿಸುತ್ತಾರೆ. ಇದರ ಆಧಾರದಮೇಲೆ ಇಲ್ಲಿ ಹೇಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಜಿ. ವಿ. ಆಂಜನಪ್ಪ.—ಶೇಕಡಾ 94 ರಷ್ಟು ಹುಡುಗರು ಹಳ್ಳಿಗಳಲ್ಲಿ ಶಾಲೆಗಳಿಗೆ ಹೋಗುತ್ತಾರೆ ಎನ್ನುತ್ತೀರಿ. ಹಳ್ಳಿಗಳಲ್ಲಿ ಇವೊತ್ತು ನಾವು ನೋಡಿರುವಂತೆ ನೂರರಲ್ಲಿ 50 ರಿಂದ 60 ರಷ್ಟು ಶಾಲೆಗಳಲ್ಲಿ ಮಕ್ಕಳೇ ಇರುವುದಿಲ್ಲ. ಇರುವ ಹುಡುಗರೆಲ್ಲಾ ಸಗಣಿ ಎತ್ತುವುದಕ್ಕೆ ಇಲ್ಲವೇ ದನಕಾಯುವುದಕ್ಕೆ ಹೋಗುತ್ತಿದ್ದಾರೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಯಾವುದೋ ಆಧಾರದ ಮೇಲೆ ಹೇಳುತ್ತಿದ್ದಾರೆ. ದೇಶದೊಳಗೆ ಶಾಲೆಗೆ ಹೋಗತಕ್ಕವರ ನಿಜವಾದ ಸಂಖ್ಯೆ ಸುಮಾರು ಹತ್ತು ವರ್ಷಗಳ ಹಿಂದೆ ಶೇಕಡಾ 50 ಇರಬಹುದು. ಆದರೆ ಈಗ ಹೆಚ್ಚು ಆಗಿದೆ. ಬಹುಶಃ ಇನ್ನು ಹತ್ತು ವರ್ಷದೊಳಗೆ ಶಾಲೆಗೆ ವಿದ್ಯಾಭ್ಯಾಸ ಮಾಡಿ ವಿದ್ಯಾವಂತರಾಗುವವರ ಸಂಖ್ಯೆ ಬಹು ಮಟ್ಟಿಗೆ ಸುಧಾರಿಸುತ್ತದೆ ಮತ್ತು ಇನ್ನೂ ಹೆಚ್ಚು ಪ್ರಗತಿಯಾಗುತ್ತದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಮಾನ್ಯ ಸದಸ್ಯರು ಇಲ್ಲಿ ಹೇಳುತ್ತಿರುವ ಅಭಿಪ್ರಾಯವನ್ನು ಅಸತ್ಯವಾದುದು ಅಥವಾ ಸತ್ಯಕ್ಕೆ ದೂರವಾದುದು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಸ್ವಲ್ಪ ಶಿಕ್ಷಣದ ಮಟ್ಟ ಕಡಿಮೆಯಾಗಿರಬಹುದು. ಇದರಲ್ಲಿ ಕ್ವಾಂಟಿಟಿ ಹೆಚ್ಚಾಗಿ ಕ್ವಾಲಿಟಿ ಕಡಿಮೆಯಾಗಿರಬಹುದು. ಇದಕ್ಕಾಗಿ ನಾವು ಈಗ ಇನ್‌ಸ್ಪೆಕ್ಟೊರೇಟು ಸ್ಟಾಫ್‌ಗಳನ್ನು ಹೆಚ್ಚು ಮಾಡಬೇಕೆಂದು ಇದ್ದೇವೆ, ಜಿಲ್ಲಾ ಮಟ್ಟದಲ್ಲಿ ಆಡಳಿತ ವ್ಯವಸ್ಥೆಯನ್ನು ಇನ್ನೂ ಹೆಚ್ಚು ಭದ್ರಪಡಿಸಬೇಕು ಎಂದು ವ್ಯವಸ್ಥೆ ಮಾಡುತ್ತಿದ್ದೇವೆ ಮತ್ತು ಹೆಚ್ಚು ಸರಕಾರದ ಹತೋಟಿ ಇರುವಂತೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಮಾಡುತ್ತಿದ್ದೇವೆ ಎಂದು ಹೇಳಿದರೆ ಅದು ಅತಿಶಯೋಕ್ತಿ ಏನಲ್ಲ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಅಕ್ಷರಸ್ಥರ ಸಂಖ್ಯೆ ಎಷ್ಟಿತ್ತು ಮತ್ತು ಹೊಸ ಮೈಸೂರು ರಾಜ್ಯವಾದಮೇಲೆ ಅಕ್ಷರಸ್ಥರ ಸಂಖ್ಯೆ ಎಷ್ಟಿತ್ತು ಎನ್ನುವುದನ್ನು ಪರಿಶೀಲನೆ ಮಾಡಿ ನೋಡಿದರೆ ಹಿಂದೆ ಶೇಕಡಾ ಹತ್ತರಷ್ಟು ಇತ್ತು. ಈಗ ಅದು ಶೇಕಡಾ 28 ರಷ್ಟು ಆಗಿದೆ.

ಶ್ರೀ ಜಿ. ವಿ. ಆಂಜನಪ್ಪ.—ಮಾನ್ಯ ವಿದ್ಯಾ ಉಪಮಂತ್ರಿಗಳು ಇಲ್ಲಿ ಒಂದು ವಿಚಾರ ಗಮನಕ್ಕೆ ತೆಗೆದುಕೊಳ್ಳಬೇಕು. ಹಳೆಯ ಮೈಸೂರಿನಲ್ಲಿ ಶೇಕಡಾ 23 ರಷ್ಟು ಅಕ್ಷರಸ್ಥರ ಸಂಖ್ಯೆ ಇತ್ತು. ಹೊಸ ಮೈಸೂರು ಆದಾಗ ಅಷ್ಟು ಇರಲಿಲ್ಲ.

ಶ್ರೀ ಎಸ್. ಎಂ. ಕೊಟ್ರಬಸಯ್ಯ ಸೋಗಿ.—ನಾನು ಹೊಸ ಮೈಸೂರು ರಾಜ್ಯದ ಬಗ್ಗೆ ಹೇಳುತ್ತಿರುವುದು. ಹಳೆಯ ಮೈಸೂರಿನ ಬಗ್ಗೆ ಹೇಳುತ್ತಿಲ್ಲ. ಹಿಂದೆ ಯಾವ ರೀತಿಯಾದ ಕೆಲಸ ಕಾರ್ಯಗಳಾಗುತ್ತಿದ್ದವು ಮತ್ತು ಇದರ ಪರಿಣಾಮ ಏನಿತ್ತು ಮತ್ತು ಹೊಸ ರಾಜ್ಯವಾದ ಮೇಲೆ ಕೆಲಸ ಕಾರ್ಯಗಳು ಆಡಳಿತದಲ್ಲಿ ಹೇಗೆ ಆಗುತ್ತಿವೆ, ಬಾಂಬೆ ಕರ್ಣಾಟಕದಲ್ಲಿ ಇದ್ದಾಗ ಆಡಳಿತ ಹೇಗಿತ್ತು, ಅಲ್ಲಿ ಟೀಚಿಂಗು ಸ್ಟಾಫ್ ಹೇಗಿತ್ತು, ಮತ್ತು ಈಗ ಸರ್ಕಾರದ ನೌಕರರು ಯಾವ ರೀತಿಯ ಸೌಲಭ್ಯಗಳನ್ನು ಕೊಡುತ್ತಿದ್ದಾರೋ ಅದೇ ರೀತಿಯ ಸೌಕರ್ಯಗಳನ್ನು ಇಲ್ಲಿರುವ ಟೀಚಿಂಗ್ ಸ್ಟಾಫ್ ಇತ್ಯಾದಿ ಸೌಕರ್ಯಗಳನ್ನು ಸರಕಾರ ಈಗ ಕೊಡುತ್ತಿದೆ ಮತ್ತು ಇವರ ಸ್ಥಾನಮಾನಗಳನ್ನು ಕಡಿಮೆಯಾಗದಂತೆ ನೋಡಿಕೊಳ್ಳುತ್ತಿದ್ದೇವೆ. ಕೆಲವು ವಿಶೇಷ ಸೌಲಭ್ಯಗಳನ್ನು ಕೊಡಬೇಕೆಂದು ಕೆಲವರು ಹೇಳಿದರು. ಇದನ್ನು ಸ್ವಲ್ಪ ವಿಚಾರ ಮಾಡಿ ಪರಿಶೀಲನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ನಿರ್ಧಾರವಾಗಿ ಈಗಲೇ ಹೇಳುವುದಕ್ಕಾಗುವುದಿಲ್ಲ. ಸರಕಾರದ ನೌಕರರಿಗೆ ಏನೇನು ಸೌಲಭ್ಯಗಳನ್ನು ಕೊಡುತ್ತಿದ್ದೇವೋ ಅವನ್ನು ಕೊಡುತ್ತಿದ್ದೇವೆ ಎಂದು ನಾನು ಇಲ್ಲಿ ಹೇಳಲು ಅಪೇಕ್ಷೆ ಪಡುತ್ತೇನೆ. ಶ್ರೀಮಾನ್ ಚನ್ನಬಸವನಗೌಡರು ಬಳ್ಳಾರಿ ಜಿಲ್ಲೆಯಲ್ಲಿರುವ ಡಿಸ್ಟ್ರಿಕ್ಟ್ ಬೋರ್ಡು ಶಾಲೆಗಳನ್ನು ಸರಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿದರು. ಡಿಸ್ಟ್ರಿಕ್ಟ್ ಬೋರ್ಡು ಆಡಳಿತದಲ್ಲಿರುವ ಎಲ್ಲ ಪ್ರೈಮರಿ ಶಾಲೆಗಳನ್ನು ಸರಕಾರ ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿದೆ. ಈಗಾಗಲೇ ಇದರ ಬಗ್ಗೆ ಗವರ್ನಮೆಂಟ್ ಆರ್ಡರ್ ಇಷ್ಯೂ ಆಗುತ್ತದೆ. ಇನ್ನೊಂದು ವಾರದಲ್ಲಿ ಬರಬಹುದು. ಇದರಲ್ಲಿ ಏನಾಗಿದೆ ಎಂದರೆ ಕೆಲವು ಕಡೆ ಇರುವ ಬೋರ್ಡು ಶಾಲೆಗಳು ಡಿಫಂಕ್ಟ್ ಆಗಿವೆ ಮತ್ತು ಕೆಲವು ಕಡೆ ಬೋರ್ಡುಗಳಲ್ಲಿರುವ ಶಾಲೆಗಳು ಆಯಾ ಘಟಕದ ನಿಯಮದಂತೆ ಇದ್ದುದು ಈಗ ಸರಕಾರದ ವಶದಲ್ಲಿ ಬಂದಿವೆ ಇವನ್ನು ಸರಕಾರದ ಶಾಲೆಗಳು ಎಂದೇ ಪರಿಗಣಿಸಬೇಕಾಗುತ್ತದೆ. ಇದರ ಬಗ್ಗೆ ಸೂಕ್ತವಾದ ಗವರ್ನಮೆಂಟು ಆರ್ಡರು ಬರುವುದರಲ್ಲಿದೆ.

ಇನ್ನು ಕೆಲವರು ಎಜುಕೇಷನ್ ಸೆಸ್ ಏತಕ್ಕೆ ಹಾಕಬೇಕು ಎಂದು ಕೇಳಿದರು. ಮತ್ತು ಕೆಲವರು ಇದರ ಬಗ್ಗೆ ಉಗ್ರವಾದ ಟೀಕೆಯನ್ನೂ ಮಾಡಿದರು. ನಾವು ಪ್ರತ್ಯೇಕವಾದ ಸೆಸ್ ಎಂದು ಹಾಕುವುದಿಲ್ಲ. ಶ್ರೀಮಂತರ ಮೇಲೆ ಅಥವಾ ಬಡವರ ಮೇಲೆ ಟ್ಯಾಕ್ಸ್ ಹಾಕುವುದಿಲ್ಲ. ಸರ್ವೇ ಸಾಮಾನ್ಯವಾಗಿ ರಾಜ್ಯದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರಬೇಕೆಂದು ಇರುವಾಗ ಎಜುಕೇಷನ್ ಸೆಸ್ ಎಂದು ಇಂಡೈರೆಕ್ಟ್ ಆಗಿ ವಸೂಲು ಮಾಡಲು ಬರುವುದಿಲ್ಲ. ಈಗ ಕಾರ್ಪೊರೇಷನ್‌ನವರು ಯಾವುದಾದರೂ ಒಂದು ಟ್ಯಾಕ್ಸ್ ಹಾಕಿದರೆ ಅದರ ಜೊತೆಗೆ ಸ್ವಲ್ಪ ಹೆಚ್ಚು ಕೊಡಬೇಕೆಂದು ಮಾಡಿದೆ. ಟ್ಯಾಕ್ಸ್ ಇಲ್ಲದೇ ಇದ್ದರೆ ಸೆಸ್ ಹಾಕಲು ಬರುವುದಿಲ್ಲ. ಇದೇನೂ ಹೊಸ ಟ್ಯಾಕ್ಸ್ ಅಲ್ಲ. ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಕೊಡಬೇಕೆಂದು ಮಾಡಿರುವಾಗ ಇದರಲ್ಲಿ ಸಾಮಾನ್ಯ ಮಕ್ಕಳು ಅಥವಾ ಶ್ರೀಮಂತರ ಮಕ್ಕಳು ಎಂದು ಬರುವುದಿಲ್ಲ. ಎಲ್ಲೆಲ್ಲಿ ಲೋಕಲ್ ಬಾಡೀಸ್‌ಗಳು ಇರುತ್ತವೋ ಅವರು ಯಾವುದಾದರೂ ಐಟಂಗಳಮೇಲೆ ಟ್ಯಾಕ್ಸ್ ಹಾಕಿದರೆ ಸುಮಾರು ಒಂದು ರೂಪಾಯಿ ಟ್ಯಾಕ್ಸ್ ಇದ್ದರೆ ಇದರಮೇಲೆ ಐದು ಪೈಸೆ ಒಂದು ರೂಪಾಯಿಗೆ ಬರುತ್ತದೆ. ಇದೇನೂ ರೈತರಮೇಲೆ ಹೆಚ್ಚು ಹೊರೆಯಾಗಲಾರದು. ರೈತರು ಸುಮಾರು ನಾಲ್ಕು ರೂಪಾಯಿ ಕಂದಾಯ ಕೊಟ್ಟರೆ ಅದರ ಮೇಲೆ ಇಪ್ಪತ್ತು ಪೈಸೆ ಕೊಡಬೇಕೆಂದರೆ ಅದು ಹೆಚ್ಚಾಗಲಾರದು ಮತ್ತು ಹೆಚ್ಚು ಭಾರವಾಗುವುದಿಲ್ಲ ಮತ್ತು ಇದರಿಂದ ನಮ್ಮ ವಿದ್ಯಾ ಇಲಾಖೆಗೂ ಹೆಚ್ಚು ಅನುಕೂಲವಾಗುತ್ತದೆ. ಇದೇನೂ ಹೊಸದಾಗಿ ಹಾಕುವ ಟ್ಯಾಕ್ಸ್ ಅಲ್ಲ. ಶಿಕ್ಷಣಕ್ಕಾಗಿಯೇ ಸರಕಾರ ಸುಮಾರು 46 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇಲ್ಲಿ ಇಂತಹ ಸೆಸ್ ಹಾಕಿ ಬರುವ ಹಣವನ್ನು ಶಿಕ್ಷಣದ ವ್ಯವಸ್ಥೆಗಾಗಿ ಉಪಯೋಗ ಮಾಡುತ್ತೇವೆ. ಇದೇನೂ ಅಂತಹ ಹೆಚ್ಚು ಭಾರವಾದ ತೆರಿಗೆಯಾಗುವುದಿಲ್ಲ ಮತ್ತು ಹೆಚ್ಚು ಭಾರವಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಈಗ ಇದನ್ನು ಬೇರೆ ರೀತಿಯ ಟ್ಯಾಕ್ಸ್ ಎಂದು ಹಾಕುತ್ತಿಲ್ಲ. ಲೋಕಲ್ ಬಾಡಿಯವರು ಕೆಲವು ಕಡೆ ಸ್ಪೆಶಲ್ ಟ್ಯಾಕ್ಸ್ ಹಾಕುತ್ತಿಲ್ಲ. ಅದರಮೇಲೆ ಸೆಸ್ ಹಾಕಲು ಬರುವುದಿಲ್ಲ. ಮತ್ತು ಮಾನ್ಯ ಸದಸ್ಯರು ಹೇಳಿದ ಎಲ್ಲ ವಿಚಾರಗಳನ್ನೂ ಗಮನದಲ್ಲಿಟ್ಟುಕೊಂಡು ಆಡಳಿತದಲ್ಲಿ ಏನೇನು ಸುಧಾರಣೆಗಳನ್ನು ಮಾಡಬೇಕೋ ಅವನ್ನು ಮಾಡಲು ಸೂಕ್ತವಾದ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ ಎಂದು ಹೇಳಲು ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಬಹಳವಾಗಿ ಆಭಾರಿಯಾಗಿದ್ದೇನೆ.

ಮಾನ್ಯ ಸದಸ್ಯರಾದ ಶ್ರೀಮಾನ್ ರಾಜಗೋಪಾಲ್‌ರವರು ಆಡಳಿತದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಮಾಡಬೇಕು ಎಂದು ಸೂಚನೆ ಕೊಟ್ಟಿದ್ದಾರೆ. ಸರಕಾರ ಈಗಾಗಲೇ ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡಿದೆ. ಮಾತೃ ಭಾಷೆಯಾದ ಕನ್ನಡ ಮತ್ತು ಪ್ರಾದೇಶಿಕವಾಗಿರಬೇಕು ಮತ್ತು ಇದರ ಜೊತೆಗೆ ಇಂಗ್ಲೀಷು ಮತ್ತು ಹಿಂದಿ ಇರಬೇಕೆಂದು ಒಪ್ಪಿದ್ದೇವೆ. ಕನ್ನಡವನ್ನು ಆಡಳಿತ ಭಾಷೆಯಾಗಿ ಕಡ್ಡಾಯವಾಗಿ ಸರಕಾರ ಮಾಡಬೇಕು ಎಂದು ವಿಚಾರ ಮಾಡುತ್ತಿದ್ದಾರೆ, ಎಲ್ಲ ಕಡೆಯಲ್ಲೂ ಕನ್ನಡದ ಮೀಡಿಯಂದಲ್ಲಿ ಕಡ್ಡಾಯವಾಗಿ ಮಾಡುವುದು ಸ್ವಲ್ಪ ಕಷ್ಟವಾಗಿದೆ, ಇದನ್ನು ಸರಕಾರ ವಿಚಾರ ಮಾಡಿ ಕನ್ನಡ ಭಾಷೆಯನ್ನು ಆಡಳಿತದಲ್ಲಿ ತರಬೇಕಾದರೆ ಏನೇನು ಮಾಡಬೇಕು ಎನ್ನುವುದನ್ನೆಲ್ಲಾ ನೋಡಲು ಸರಕಾರ ಪ್ರಯತ್ನ ಮಾಡುತ್ತಿದ್ದಾರೆ.

ಇಷ್ಟನ್ನು ಹೇಳಿ ಮಾನ್ಯ ಸದಸ್ಯರು ಈ ಮಸೂದೆಯನ್ನು ಸ್ವಾಗತ ಮಾಡಿರುವುದರಿಂದ ಅವರೆಲ್ಲರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸಿ ಮಾನ್ಯ ಸದಸ್ಯರೆಲ್ಲರೂ ಯುನಾನಿಮಸ್ ಆಗಿ ಈ ಮಸೂದೆಯನ್ನು ಒಪ್ಪಬೇಕೆಂದು ಅವರೆಲ್ಲರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

6-30 P.M.

Mr. VICE-CHAIRMAN.—The question is :

"That the Mysore Compulsory Primary Education (Amendment and Miscellaneous Provisions) Bill, 1969, as passed by the Legislative Assembly be taken into consideration".

The motion was adopted.

CLAUSES

Mr. VICE-CHAIRMAN.—The question is :

"That clauses 2 to 15 both inclusive do stand part of the Bill".

The motion was adopted.

Clauses 2 to 15 both inclusive were added to the Bill.

Mr. VICE-CHAIRMAN.—The question is :

"That clause 1, the long title and enacting formula do stand part of the Bill".

The motion was adopted.

Clause 1, long title and Enacting formula were added to the Bill.

Motion to pass.

Sri N. M. KOTRABASAIAH SAOGI.—I move :

"That the Mysore Compulsory Primary Education (Amendment and Miscellaneous Provisions) Bill, 1969, as passed by the Legislative Assembly be passed".

ಮೈಸೂರು ವಿಧಾನಪರಿಷತ್ತು

MYSORE LEGISLATIVE COUNCIL

Wednesday the 3rd September 1969.

The House met in the Council Chamber, Vidhana Soudha, Bangalore, at Thirty Minutes past Two of the Clock.

MR. DEPUTY CHAIRMAN (SRI M. MADAIAH) in the Chair.

STARRED QUESTIONS

(to which oral answers were given)

Establishing another zoo in the State

71. **Sri M. G. HANDRAL** (Teachers' Constituency).—

Will the Minister for Agriculture be pleased to state :—

(*a*) whether the Government have thought of establishing another Zoo in the State ;

(*b*) if so, where it is proposed to be located ?

Sri B. RACHAIAH (Minister for Agriculture).—

(*a*) No.

(*b*) Does not arise in view of reply to (*a*).

ಶ್ರೀ ಎಂ. ಜಿ. ಹಂದ್ರಾಳ್.—ಮೈಸೂರು ರಾಜ್ಯದಲ್ಲಿ ಒಂದೇ ಒಂದು ಜೂ ಇದೆ. ಮೈಸೂರು ಕರ್ನಾಟಕದಲ್ಲಿ ಇನ್ನೊಂದು ಜೂ ಪ್ರಾರಂಭ ಮಾಡಿದರೆ ವನ್ಯಪ್ರಾಣಿಗಳ ರಕ್ಷಣೆಗೂ ಜನತೆಯ ಶಿಕ್ಷಣಕ್ಕೂ ಬಹಳಷ್ಟು ಅನುಕೂಲವಾಗುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ, ಇದನ್ನು ಪರಿಶೀಲನೆ ಮಾಡುತ್ತೀರಾ ?

Sri D. B. PAWAR.—This suggestion could be examined.

ಶ್ರೀ ಎಂ. ವಿ. ವೆಂಕಟಪ್ಪ.—ಬೆಂಗಳೂರು ನಗರದಲ್ಲಿ ಕಬ್ಬನ್ ಪಾರ್ಕ್ ಅಥವಾ ಲಾಲ್‌ಬಾಗ್‌ನಲ್ಲಿ ಒಂದು ಜೂ ಪ್ರಾರಂಭಮಾಡುವುದಕ್ಕೆ ಸರ್ಕಾರದವರು ಏಕೆ ಯೋಚನೆ ಮಾಡಬಾರದು ?

Sri D. B. PAWAR.—No such suggestion has come from the public.

ಶ್ರೀ ಎಂ. ಟಿ. ಶ್ರೀಕಂಠಯ್ಯ.—ಬೆಂಗಳೂರು ನಗರದಲ್ಲಿ ಮೊದಲು ಲಾಲ್‌ಬಾಗಿನಲ್ಲಿ ಜೂ ಇತ್ತು, ಕೆಲವು ಪ್ರಾಣಿಗಳನ್ನು ಅಲ್ಲಿ ಇಟ್ಟಿದ್ದರು, ಅವುಗಳನ್ನು ಮೈಸೂರಿನ ಜೂಗೆ ವರ್ಗಾವಣೆ ಮಾಡಿದರು. ಈಗ ಸಾಮಾನ್ಯವಾಗಿ ದೇಶದ ಮುಖ್ಯಪಟ್ಟಣಗಳಲ್ಲಿ, ರಾಜಧಾನಿಯಲ್ಲಿ ಜೂ ಇರುವುದರಿಂದ ಬೆಂಗಳೂರಿನಲ್ಲೂ ಪ್ರಾರಂಭ ಮಾಡುವುದಕ್ಕೆ ಶೀಘ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

Sri D. B. PAWAR.—As I said earlier there is no such proposal before Government at present, but it could be examined.

Smt. M. R. LAKSHAMMA.—What is the expenditure and what is the income of the Zoo at Mysore ?

Sri D. B. PAWAR.—I do not have those figures with me.

ಶ್ರೀ ವೈ. ಎಸ್. ಪಾಟೀಲ್.—ನಮ್ಮ ರಾಜ್ಯದಲ್ಲ ಅತಿ ದೊಡ್ಡ ಎರಡನೇ ಕಾರ್ಪೊರೇಷನ್ ಆದ ಹುಬ್ಬಳ್ಳಿ ಧಾರವಾಡ ಕ್ಷೇತ್ರದಲ್ಲಿ ಒಂದು ಜೂ ನಿರ್ಮಾಣ ಮಾಡುವಂತಹ ವಿಚಾರವನ್ನು ಪರಿಶೀಲಿಸುವಿರಾ ?

Sri D. B. PAWAR.—I have been saying that it could be examined by Government.

Smt. M. R. LAKSHAMMA.—My supplementary arises out of the main question. The question of the second zoo will arise only when we know the receipt and the expenditure of the zoo at Mysore.

Sri S. D. PAWAR.—I want notice for this question.

ಶ್ರೀ ಕೆ. ಎಸ್. ಸೂರ್ಯನಾರಾಯಣ ಅಡಿಗ.—ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್‌ಗೆ ಬೇಕೆಂದು ಕೇಳಿದರು. ಬೆಂಗಳೂರಿಗೆ ಬೇಕೆಂದು ಹೇಳಿದರು. ಹೀಗೆ ನಮ್ಮ ರಾಜ್ಯದಲ್ಲಿ ಬೇರೆ ಬೇರೆ ಕಡೆಗಳಿಂದಲೂ ಜೂ ಮಾಡಬೇಕೆಂಬ ಬೇಡಿಕೆ ಬರುತ್ತಾ ಇದೆ. ಆದ್ದರಿಂದ ಎಲ್ಲೆಲ್ಲಿ ಪ್ರಾಣಿಗಳು ಸುಲಭವಾಗಿ ಸಿಕ್ಕುತ್ತವೆ ಅಲ್ಲೆಲ್ಲಾ ನಮ್ಮ ರಾಜ್ಯದಲ್ಲಿ ಸಣ್ಣ ಸಣ್ಣ ಜೂಗಳನ್ನು ಮಾಡುವಂತಹ ಒಂದು ಯೋಜನೆ ಕುರಿತು ಸರ್ಕಾರ ಆಲೋಚನೆ ಮಾಡುತ್ತದೆಯೇ ?

Sri D. B. PAWAR.—Separate sanctuaries are meant for the purpose.

Sri S. P. GAONKAR.—Since man is a social animal, the question is whether steps would be taken by Government to keep human beings in the zoo ?

(*No answer*)

ಶ್ರೀ ಎಂ. ವಿ. ವೆಂಕಟಪ್ಪ.—ನ್ಯಾಷನಲ್ ಮ್ಯೂಸಿಯುಂನಲ್ಲಿ ಪ್ರಾಣಿಗಳನ್ನು ಕೇಜ್‌ನಲ್ಲಿ ಇಟ್ಟಿರುವುದಿಲ್ಲ. ಕೇಜ್ ಟ್ರೈಪ್ ವ್ಯಾನ್‌ನಲ್ಲಿ ಇಟ್ಟಿರುತ್ತಾರೆ, ಮೈಸೂರು ಜೂನಲ್ಲೂ ಆ ತರಹ ಕೇಜ್ ಟ್ರೈಪ್‌ವ್ಯಾನ್‌ನಲ್ಲಿ ಪ್ರಾಣಿಗಳನ್ನು ಏಕೆ ಇಡಬಾರದು ?

Sri D. B. PAWAR.—Actually the zoo authorities in Mysore have put up a scheme before Government for expansion of the present zoo at Mysore, for which purpose they had requested Government to spare 400 acres of land from the Palace area in Mysore. Government wanted to acquire that property, but since the Palace authorities showed their unwillingness to part with the land, the proposal has been dropped.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಪ್ರಾಣಿಸಂಗ್ರಹಾಲಯದಲ್ಲಿ ಮೀನುಸಂಗ್ರಹವನ್ನು ಹೆಚ್ಚಾಗಿ ಮಾಡಿ ಬೊಂಬಾಯಿ ಮತ್ತು ಇತರ ಕಡೆಗಳಲ್ಲಿ ಇರುವಂತೆ ಅಕ್ವೇರಿಯಮನ್ನು ಬೆಂಗಳೂರಿನಲ್ಲೂ ಸ್ಥಾಪನೆ ಮಾಡುವ ಯೋಚನೆ ಸರ್ಕಾರದವರು ಏಕೆ ಮಾಡಬಾರದು ?

Sri D. B. PAWAR.—That is a different question.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಈ ಪ್ರಾಣಿಸಂಗ್ರಹಾಲಯಗಳನ್ನು ಮಾಡತಕ್ಕ ಉದ್ದೇಶವಾದರೂ ಏನು ?

Sri D. B. PAWAR.—It is an entertainment for the public to come and spend some time and at the same time it is a sort of source of knowledge also.

Construction of High School Building in Sirsi

105. Sri Y. S. PATIL (Graduates' Constituency).—

Will the Minister of State for Municipal Administration be pleased to state :—

(*a*) the year in which construction of the High School Building was started by the then Sirsi Municipality ;

(*b*) the year in which it was scheduled to be completed ;

(*c*) the amount already spent on it ?

Sri B. M. PATIL (Minister of State for Municipal Administration).—

(*a*) October 1961.

(*b*) December 1963.

(*c*) Rs. 3,94,069.

ಶ್ರೀ ವೈ. ಎಸ್. ಪಾಟೀಲ್.—ಈ ಕಟ್ಟಡವನ್ನು ಕಟ್ಟಲು ಅಂದಾಜು ಮಾಡಲಾಗಿದ್ದ ಹಣವೆಷ್ಟು ?

†ಶ್ರೀ ಬಿ. ಎಂ. ಪಾಟೀಲ್.—ರೂ. 3,94,376.

ಶ್ರೀ ವೈ. ಎಸ್. ಪಾಟೀಲ್.—ತಾವು ಹೇಳಿದ ಹಣವೆಲ್ಲಾ ಈಗಾಗಲೇ ಮುಗಿದುಹೋಗಿದೆ. ಆದರೆ ಆ ಕಟ್ಟಡ ಇನ್ನೂ ಅರ್ಧದಲ್ಲೇ ನಿಂತಿದೆ. ಉಳಿದ ಕಟ್ಟಡವನ್ನು ಕಟ್ಟುವುದಕ್ಕೆ ದುಡ್ಡಿಲ್ಲದೆ ?

ಶ್ರೀ ಬಿ. ಎಂ. ಪಾಟೀಲ್.—ಕಂಟ್ರಾಕ್ಟರು ಎಷ್ಟು ಕೆಲಸವನ್ನು ಮಾಡಿದ್ದಾರೋ ಅದಕ್ಕಿಂತಲೂ ಹೆಚ್ಚಾಗಿ ಎಂದರೆ ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳನ್ನು ಜಾಸ್ತಿ ಕೊಡಲಾಗಿದೆ ಎಂದು ಆಡಿಟರ್ ವರದಿಯಲ್ಲಿ ತಿಳಿಸಿದ್ದಾರೆ. ಆ ಹಣವನ್ನು ವಸೂಲ್ಮಾಡುವುದಕ್ಕೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.

ಶ್ರೀ ಜಿ. ವಿ. ಆಂಜನಪ್ಪ.—1965 ರಲ್ಲಿ ಕಟ್ಟಡದ ಕೆಲಸ ಪ್ರಾರಂಭವಾಗಿದ್ದರೂ ಇಲ್ಲಿಯವರೆಗೂ ಏಕೆ ಆ ಕೆಲಸ ಮುಗಿಯಲಿಲ್ಲ ?

ಶ್ರೀ ಬಿ. ಎಂ. ಪಾಟೀಲ್.—ಕಂಟ್ರಾಕ್ಟರಿಂದ ಆ ಕೆಲಸವನ್ನು ಹಿಂದಕ್ಕೆ ತೆಗೆದುಕೊಂಡು ಅದನ್ನು ಪೂರ್ತಿ ಮಾಡುವುದಕ್ಕಾಗಿ ಅದನ್ನೀಗ ಪಿ. ಡಬ್ಲ್ಯು. ಡಿ. ಗೆ ವಹಿಸಲಾಗಿದೆ.

ಶ್ರೀ ಎಸ್. ಡಿ. ಗಾಂಕರ್.—ಹಾಗೆ ಒಂದು ಲಕ್ಷ 20 ಸಾವಿರ ರೂಪಾಯಿಗಳನ್ನು ಯಾವ ಆಧಾರದ ಮೇಲೆ ಹೆಚ್ಚಿಗೆ ಕೊಟ್ಟರು ? ಏನು ಅಷ್ಟು ಮೆಟೀರಿಯಲ್ಸ್ ಏನಾದರೂ ಹೆಚ್ಚಿಗೆ ಶೇಖರಣೆ ಮಾಡಲಾಗಿತ್ತೇ.

ಶ್ರೀ ಬಿ. ಎಂ. ಪಾಟೀಲ್.—ಈಗ ಆಡಿಟ್‌ರವರ ಲೆಕ್ಕದಲ್ಲಿ ಹೇಳಿರತಕ್ಕ ಪ್ರಕಾರ ಅಷ್ಟು ಹಣವನ್ನು ಹೆಚ್ಚಿಗೆ ಕೊಟ್ಟಿದ್ದಾರೆಂದು ಹೇಳಲಾಗಿದೆ.

ಶ್ರೀ ವೈ. ಎಸ್. ಪಾಟೀಲ್.—ಇದರ ಬಗ್ಗೆ ಆ ವಿಜಿಲೆನ್ಸ್ ಕಮಿಟಿಯವರ ವರದಿಯಲ್ಲಿ ಏನು ಹೇಳಿದೆ ?

ಶ್ರೀ ಬಿ. ಎಂ. ಪಾಟೀಲ್.—ಆ ವಿವರಗಳು ನನ್ನಲ್ಲಿಲ್ಲ. ಹೆಚ್ಚಿಗೆ ಕೊಟ್ಟಿರತಕ್ಕ ಹಣವನ್ನು ಕೂಡಲೇ ರಿಕವರ್ ಮಾಡಬೇಕೆಂದು ಆರ್ಡರ್ ಮಾಡಿದೆ.

ಶ್ರೀ ಎಸ್. ಸಿ. ಕುಬ್ಸದ್.—ಅಷ್ಟು ಹೆಚ್ಚಿಗೆ ಹಣವನ್ನು ಆ ಕಂಟ್ರಾಕ್ಟರಿಂದ ವಸೂಲ್ಮಾಡುವುದಕ್ಕೆ ರಹಾ ಇದೆಯೇ ?

† Indicates that remarks or speeches have not been revised by the member concerned.

ಶ್ರೀ ಬಿ. ಎಂ. ಪಾಟೀಲ್.—ರಿಕವರ್ ಮಾಡುವುದಕ್ಕೆ ಸೂಕ್ತ ತಿಳುವಳಿಕೆಯನ್ನು ಕೊಡಲಾಗಿದೆ.

ಶ್ರೀ ಜಿ. ವಿ. ಆಂಜನಪ್ಪ.—ಹಾಗೆ ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳನ್ನು ಯಾರು ಕೊಟ್ಟರು? ಕೊಡತಕ್ಕ ಸಂದರ್ಭ ಹೇಗೆ ಉಂಟಾಯಿತು? ಅದಕ್ಕೆ ಯಾರು ಜವಾಬ್ದಾರರು?

ಶ್ರೀ ಬಿ. ಎಂ. ಪಾಟೀಲ್.—ಯಾರು ಕೊಟ್ಟರು, ಹೇಗೆ ಕೊಟ್ಟರು, ಯಾವ ಸಂದರ್ಭದಲ್ಲಿ ಕೊಟ್ಟರು, ಇದಕ್ಕೆ ಸಂಬಂಧಪಟ್ಟವರು ಯಾರು ಎಂಬುದನ್ನೆಲ್ಲಾ ವಿವರವಾಗಿ ವಿಚಾರಣೆಮಾಡಲು ತಿಳಿಸಿದೆ. ವಿಚಾರಣೆ ನಡೆಯುತ್ತಿದೆ.

ಶ್ರೀ ವೈ. ಎಸ್. ಪಾಟೀಲ್.—ಅಲ್ಲಿ ಶೇಖರಣೆ ಮಾಡಲಾಗಿದ್ದ ಕಟ್ಟಿಗೆ ಮರಗಳೇನಾದರೂ ಕೆಟ್ಟು ಹೋಗಿ, ಕಟ್ಟಣಕ್ಕೆ ಜಂಗ್ ಹಿಡಿದು ಮತ್ತು ಅಲ್ಲಿ ಶೇಖರಣೆ ಮಾಡಲಾಗಿದ್ದ ಕಲ್ಲುಗುಂಡುಗಳನ್ನು ಯಾರಾದರೂ ಹೊತ್ತುಕೊಂಡು ಹೋಗಿ ಈ ನಷ್ಟಉಂಟಾಗಿದೆ ಎಂಬ ತಿಳಿವಳಿಕೆಯೇನಾದರೂ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಎಂ. ಪಾಟೀಲ್.—ಕಂಟ್ರಾಕ್ಟರು ಆ ಕೆಲಸವನ್ನು ತೀವ್ರತೆಯಿಂದ ಮಾಡುತ್ತಿಲ್ಲ ಎಂದು ಆ ಕೆಲಸವನ್ನು ಅವನಿಂದ ಕಿತ್ತು ಅದನ್ನೀಗ ಪಿ. ಡಬ್ಲ್ಯು.ಡಿ. ವಹಿಸಿದೆ.

ಶ್ರೀ ವೈ. ಎಸ್. ಪಾಟೀಲ್.—ಈ ವಿಚಾರದಲ್ಲಿ ಸಿಸಿ ಸಾರ್ವಜನಿಕರಿಂದೇನಾದರೂ ಮನವಿಗಳು ಬಂದಿವೆಯೇ?

ಶ್ರೀ ಬಿ. ಎಂ. ಪಾಟೀಲ್.—ಕಟ್ಟಡವನ್ನು ಬೇಗ ಕಟ್ಟಿಸಿ ಅದನ್ನು ಕೊಡಬೇಕೆಂದು ಸರ್ಕಾರಕ್ಕೆ ಮನವಿಗಳು ಬಂದಿವೆ.

ಶ್ರೀ ಜಿ. ವಿ. ಆಂಜನಪ್ಪ.—ಒರಿಜಿನಲ್ ಎಸ್ಟಿಮೇಟ್ ಎಷ್ಟು? ಈಗಿನ ರಿವೈಜ್ಡ್ ಎಸ್ಟಿಮೇಟೆಷ್ಟು?

ಶ್ರೀ ಬಿ. ಎಂ. ಪಾಟೀಲ್.—ಒರಿಜಿನಲ್ ಎಟ್ಟಿಮೇಟು ರೂ. 3 ಲಕ್ಷ 94 ಸಾವಿರದ 736. ಬಾಕಿ ವಿವರಗಳು ನನ್ನಲ್ಲಿಲ್ಲ.

ಶ್ರೀ ವೈ. ಎಸ್. ಪಾಟೀಲ್.—ಈ ಕಟ್ಟಡ ಇನ್ನೆಷ್ಟು ದಿವಸಗಳಲ್ಲಿ ಮುಗಿಸಬಹುದೆಂಬುದಕ್ಕೆ ಆಶ್ವಾಸನೆಯನ್ನು ಕೊಡುತ್ತೀರಾ?

ಶ್ರೀ ಬಿ. ಎಂ. ಪಾಟೀಲ್.—ಅದು ಅದಷ್ಟು ತೀವ್ರವಾಗಿ ಮುಗಿಯುತ್ತದೆ.

Police Findings in the case of the death of Race Horses

157. Smt. M. R. LAKSHAMMA (Graduates' Constituency).—

Will the Chief Minister be pleased to state :—

the findings of the Police department in respect of the causes of the "worst-ever fire disaster in the Indian Turf history" as a result of which thirty-six fine race horses met with ghastly death in Bangalore recently?

Sri VEERENDRA PATIL (Chief Minister).—

The matter is *sub-judice*.

Smt. M. R. LAKSHAMMA.—Sir, I do not wish to touch the matter under *sub-judice*. But, I would like to ask which is the agency which arranges for the races?

Mr. DEPUTY CHAIRMAN.—It is stated that the matter is *sub-judice*.

Sri C. S. BALAKRISHNA GOWDA.—The question relates to the findings of the Police department. We are not going to enter into the merits of the case.

Mr. DEPUTY CHAIRMAN.—The disclosure of the findings of the Police is a matter directly connected with it.

Sri C. S. BALAKRISHNA GOWDA.—If the intention was to discuss the merits or demerits of the case, we need not discuss it. But the findings of the Police Department and their opinion cannot be *sub-judice*.

Mr. DEPUTY CHAIRMAN.—When the matter is said to be *sub-judice*, the Chair is unable to agree with the hon. Members that we can enter into the findings of the Police Department.

Sri G. V. GOWDA.—Sir, police findings are not judicial findings.

Mr. DEPUTY CHAIRMAN.—When the matter has been taken to the Court, the connected matters also become *Sub-judice*, and so no supplementaries can be allowed on the subject.

Sri K. SURYANARAYANA ADIGA.—'*Sub-judice*' means, when a case or a matter is pending in a Court of Law, we should not say anything which may prejudice the Judge in coming to a particular finding. That is *sub-judice*. We should not say anything about the merits or demerits. But what is asked here is the opinion which the Police furnished to the Court, The investigation may be still pending.

Mr. DEPUTY CHAIRMAN.—When the Hon. Chief Minister says that the matter is *sub-judice*, the Chair will have to take it that the court is seized of the matter.

Sri K. SURYANARAYANA ADIGA.—The police have investigated the matter and filed a charge-sheet. I think, the question has been wrongly framed.

Sri G. V. ANJANAPPA.—I would like to know whether investigation is completed and whether charge sheet has been filed and if so, when ?

† **Sri VEERENDRA PATIL.**—The investigation has been completed and charge sheet has been submitted to the Court against 9 accused persons on 13th August 1969 and the case is pending.

Smt. M. R. LAKSHAMMA.—I want to know the agency which conducts the races ?

Sri VEERENDRA PATIL.—Bangalore Turf Club.

Smt. M. R. LAKSHAMMA.—What is the annual income derived by the Turf Club ?

Sri VEERENDRA PATIL.—The hon. Member may put a separate question.

ಶ್ರೀ ಸಿ. ಬಂದೀಗೌಡ.—ಈ ಬೆಂಕಿ ಅಪಘಾತದಲ್ಲಿ ಕುದುರೆಗಳು ಮಾತ್ರ ಸತ್ತಿದ್ದೋ, ಅಥವಾ ಇತರ ಆಸ್ತಿಪಾಸ್ತಿಗಳಿಗೂ ನಷ್ಟವಾಗಿದೆಯೋ, ಹಾಗಿದ್ದರೆ ಯಾವ ಪ್ರಮಾಣದ್ದು ?

ಶ್ರೀ ವೀರೇಂದ್ರ ಪಾಟೀಲ್.—ಬೆಂಕಿ ಅನಾಹುತದಿಂದ 33 ಕುದುರೆಗಳು ಶೆಡ್ಡಿನ ಒಳಗಡೆ ಇಟ್ಟಿದ್ದರಿಂದ ಸತ್ತು ಹೋಗಿವೆ. ಮೂರು ಕುದುರೆಗಳು ಹೊರಗೆ ಸತ್ತು ಹೋಗಿವೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಇದಕ್ಕೆ ಸುರಕ್ಷಿತವಾದ ಕಟ್ಟಡಗಳನ್ನು ಕಟ್ಟುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ನಮಗೂ ಅದಕ್ಕೂ ಸಂಬಂಧವಿಲ್ಲ. ಅದು ಟರ್ಫ್ ಕ್ಲಬ್ಬಿನವರು ಮಾಡಬೇಕಾದ ಕೆಲಸ, ನಮ್ಮ ಜವಾಬ್ದಾರಿಯಲ್ಲ.

Need of Village accountants in Revenue Department

118. Smt. M. R. LAKSHAMMA (Graduates' Constituency).—

Will the Minister for Revenue be pleased to state :—

(*a*) the number of Village accountants needed by the Revenue Department ;

(*b*) the actual strength at present ;

(*c*) the steps taken or proposed to be taken to recruit and train the personnel for Village accountants' Posts ?

Sri H. V. KOUJALGI (Minister for Revenue).—

(*a*) On the basis of certain criteria under consideration at a total number of about 8,318 Village accountants would be required.

(*b*) 4,951 posts have been sanctioned.

(*c*) The Mysore General Services (Revenue Subordinate Branch) Village Accountants (Cadre and Recruitment) Rules, 1961 has come into effect from 1st December 1961 and Rule 11 provides for the constitution of a recruitment Committee. Recruitment Committees have been formed in all districts. Syllabus has been prescribed for the training of Village Accountants. As many as 3,986 village Accountants have been imparted training so far. Necessary budget allotment of funds have been made for all the Divisions for training of Village Accountants.

Smt. M. R. LAKSHAMMA.—In answer you have stated that about 8,318 village accountants would be required. ಇದನ್ನು ಮುಂದಿನ ವರ್ಷವಾದರೂ ಬರ್ತಿ ಮಾಡುತ್ತೀರೋ ?

Sri H. V. KOUJALGI.—The proposals are before the Cabinet for approval and sanction. As soon as these posts are sanctioned by the Cabinet, the appointments will be made by District officers. A decision will be taken by the Cabinet in the matter very shortly.

Sri M. LINGANNA.—May I know whether Government has any phased programme or procedure with regard to the recruitment and appointments of the Village Accountants and whether they have stipulated any time within which the old Shanbhogues are to be replaced by these Village Accountants ?

Sri H. V. KOUJALGI.—The Government has taken a decision to remove these shanbhogues and in their place appoint Village Accountants.

In deserving cases considering the qualifications and experience of the old Shanbhogues they are also eligible for appointment as Village Accountants and in some cases they are also appointed.

ಶ್ರೀ ವಿ. ವೆಂಕಟಪ್ಪ.—ಕೆಲವು ಟ್ರೈನಿಂಗ್ ಆದ ಅಕೌಂಟೆಂಟ್ಸ್‌ಗೆ ಇನ್ನೂ ನೇಮಕ ಮಾಡದಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಕೆಲವು ಕಡೆ ಟ್ರೈನಿಂಗ್ ಆದರೂ ನೇಮಕ ಆಗಲಿಲ್ಲ. ಕೆಲವರು ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಇದರಿಂದ ತೊಂದರೆಯಾಗಿದೆ.

ಶ್ರೀ ಕೆ. ಚನ್ನಬಸವನಗೌಡ.—ಸ್ವಾಮಿ, ವಿಲೇಜ್ ಅಕೌಂಟೆಂಟರುಗಳಿಗೆ ಸಪರೇಟು ಕೇಡರ್ ಮತ್ತು ಸಂಬಳವನ್ನೇನಾದರೂ ನಿಗದಿ ಮಾಡಿದ್ದೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅವರಿಗೆ ಸೆಕೆಂಡ್ ಡಿವಿಜನ್ ಕ್ಲಾರ್ಕುಗಳ ಕೇಡರ್ ಇದೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗಾ.—ನಮ್ಮ ರಾಜ್ಯದಲ್ಲಿ ಹಿಂದೆ ಇದ್ದ ವಿಲೇಜ್ ಅಕೌಂಟೆಂಟರುಗಳಿಗೆ ಪಗಾರ ಕೊಡುವುದಕ್ಕೆ ಎಷ್ಟು ಹಣ ಖರ್ಚಾಗುತ್ತಿತ್ತು, ಈಗ ಹೊಸದಾಗಿ ನೇಮಕ ಮಾಡತಕ್ಕಂಥ ವಿಲೇಜ್ ಅಕೌಂಟೆಂಟರುಗಳಿಗೆ ಎಷ್ಟು ಖರ್ಚು ಬೀಳುತ್ತದೆ ಎಂಬುದನ್ನು ಏನಾದರೂ ಹೇಳುವುದಕ್ಕೆ ಸಾಧ್ಯವಿದೆಯೇ ?

Sri H. V. KOUJALGI.—So far as I remember they were all hereditary officers and were paid *potgi* but not any salary, which was a very small amount paid to them annually.

ಶ್ರೀ ಜಿ. ವಿ. ಅಂಜನಪ್ಪ.—ಈಗ ಒಟ್ಟು ನಮ್ಮ ರಾಜ್ಯಕ್ಕೆ 8,318 ಜನ ವಿಲೇಜ್ ಅಕೌಂಟೆಂಟರುಗಳು ಬೇಕು ಎಂದು ತಿಳಿಸಿದ್ದೀರಿ, ಈಗ 4,951 ಜನ ಮಾತ್ರ ಇದ್ದಾರೆ. ಬಾಕಿಯವರನ್ನು ಯಾವಾಗ ನೇಮಕ ಮಾಡಿಕೊಳ್ಳುತ್ತೀರಾ ?

Sri H. V. KOUJALGI.—The proposal is now before the Cabinet and after taking the approval of the Cabinet the Village Accountants would be appointed shortly.

ಶ್ರೀ ಕೆ. ಚನ್ನಬಸವನಗೌಡ.—ಈ ವಿಲೇಜ್ ಅಕೌಂಟೆಂಟರುಗಳಿಗೆ ಬಹಳ ಕಡಮೆ ಸಂಬಳವನ್ನು ಕೊಡುತ್ತಿದ್ದಾರೆ. ಇದರಲ್ಲಿ ಕೆಲವರಿಗೆ ಹೆಚ್ಚು ಕೆಲವರಿಗೆ ಕಡಿಮೆ ಸಂಬಳವನ್ನು ಕೊಡುತ್ತಿದ್ದಾರೆ. ಕಡಿಮೆ ಸಂಬಳವನ್ನು ಕೊಡುತ್ತಿರುವುದರಿಂದ ಜಾಸ್ತಿ ಜನ ಕೆಲಸಕ್ಕೆ ಬರುವುದಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

Sri H. V. KOUJALGI.—The pay scales would be made uniform in future.

ಶ್ರೀ ಜಿ. ವಿ. ಅಂಜನಪ್ಪ.—ನಮ್ಮ ರಾಜ್ಯಕ್ಕೆ 8,318 ಜನ ವಿಲೇಜ್ ಅಕೌಂಟೆಂಟರುಗಳು ಬೇಕು ಎಂದು ಯಾವ ಆಧಾರದ ಮೇಲೆ ತೀರ್ಮಾನಕ್ಕೆ ಬಂದಿದ್ದೀರಿ ?

ಶ್ರೀ ಎಚ್. ವಿ. ಕೌಜಲಗಿ.—15 ಸಾವಿರ ರೂಪಾಯಿಗಳ ಲ್ಯಾಂಡ್ ರೆವಿನ್ಯೂ ವಸೂಲು ಮಾಡುವುದಕ್ಕೆ ಒಬ್ಬರು ವಿಲೇಜ್ ಅಕೌಂಟೆಂಟ್ ನೇಮಿಸಬೇಕು ಎನ್ನುವ ಲೆಕ್ಕವನ್ನು ಗೊತ್ತು ಮಾಡಿಕೊಂಡು ಅದರ ಕ್ರೈಟೀರಿಯಾದ ಮೇಲೆ ಆ ವಿಲೇಜ್ ಅಕೌಂಟೆಂಟರುಗಳನ್ನು ನೇಮಿಸಬೇಕೆಂದು ತೀರ್ಮಾನಕ್ಕೆ ಬಂದಿದ್ದೇವೆ.

ಶ್ರೀ ಎಂ. ಟಿ. ಶ್ರೀಕಂಠಯ್ಯ.—ಈಗ ಕೆಲವು ಕಡೆ ವಿಲೇಜ್ ಅಕೌಂಟೆಂಟರುಗಳನ್ನು ನೇಮಕ ಮಾಡಿರುವ ಕಡೆಗಳಲ್ಲಿ ಅವರು ಪಂಚಾಯಿತಿಯ ಕಂದಾಯವನ್ನು ವಸೂಲಿ ಮಾಡುತ್ತಿಲ್ಲ. ಮೊದಲು ಇದ್ದ ಶ್ಯಾನುಭೋಗರು ಯಾವರೀತಿಯಾಗಿ ಸರಿಯಾಗಿ ಲೆಕ್ಕಪತ್ರಗಳನ್ನು ಇಡುತ್ತಿದ್ದರೋ ಆ ರೀತಿ ಈಗಿರತಕ್ಕ ವಿಲೇಜ್ ಅಕೌಂಟೆಂಟರುಗಳು ಲೆಕ್ಕವನ್ನು ಸರಿಯಾಗಿ ಇಡುತ್ತಿಲ್ಲ. ಆದ್ದರಿಂದ ಈ ವಿಲೇಜ್ ಅಕೌಂಟೆಂಟರುಗಳು ಪಂಚಾಯಿತಿಯ ಕಂದಾಯ ಮತ್ತು ರೆವಿನ್ಯೂ ಕಂದಾಯ ಎರಡನ್ನೂ ಸರಿಯಾಗಿ ವಸೂಲು ಮಾಡಿ ಲೆಕ್ಕಪತ್ರಗಳನ್ನು ಸರಿಯಾಗಿ ಇಡುವತನಕ ಅವರಿಗೆ ಸಂಬಳ ಸಾರಿಗೆಯನ್ನು ಕೊಡಬಾರದು ಎಂದು ಮೇಲ್ಪಟ್ಟ ಅಧಿಕಾರಿಗಳಿಗೆ ನಿರ್ದೇಶನವನ್ನು ಕೊಡುವುದು ಒಳ್ಳೆಯದಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ.--ಹಿಂದೆ ಇದ್ದಂತಹ ಹೆರೆಡಿಟರಿ ವಿಲೇಜ್ ಆಫೀಸರುಗಳು ಹೋಗಿ ಹೊಸ ಆಫೀಸರುಗಳು ಬರತಕ್ಕ ಈ ಮಧ್ಯಕಾಲದಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಾಸವಾಗುತ್ತದೆ. ಎಲ್ಲಾ ಕೆಲಸವನ್ನು ಮಾಡಲಿಲ್ಲ ಎಂದು ಅವರ ಸಂಬಳವನ್ನು ಬಂದ್ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ಟಿ. ಶ್ರೀಕಂಠಯ್ಯ.—ಲಕ್ಷಾಂತರ ರೂಪಾಯಿಗಳ ಪಂಚಾಯಿತಿ ಕಂದಾಯವನ್ನು ವಸೂಲು ಮಾಡತಕ್ಕ ಜವಾಬ್ದಾರಿಯನ್ನು ವಿಲೇಜ್ ಅಕೌಂಟೆಂಟರುಗಳಿಗೆ ವಹಿಸಲಾಗಿದೆ. ಆದರೆ ಅವರು ಸರಿಯಾಗಿ ಅದನ್ನು ವಸೂಲು ಮಾಡುತ್ತಿಲ್ಲ. ಆದ್ದರಿಂದ ಸಂಬಂಧಪಟ್ಟ ತಹಶೀಲ್ದಾರರಿಗೆಲ್ಲಾ ಡೈರೆಕ್ಷನ್ ಕೊಟ್ಟು ವಿಲೇಜ್ ಅಕೌಂಟೆಂಟರುಗಳು ಪಂಚಾಯಿತಿ ಕಂದಾಯವನ್ನು ವಸೂಲು ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

Sri H. V. KOUJALGI.—If I am correct, till to-day the Panchayat arrears are being recovered by the Panchayat Secretaries. This additional work will have to be entrusted to the Village Accountants.

ಶ್ರೀ ಜಿ. ವಿ. ಅಂಜನಪ್ಪ.—15 ಸಾವಿರ ರೂಪಾಯಿಗಳ ಲ್ಯಾಂಡ್ ರೆವಿನ್ಯೂ ವಸೂಲು ಮಾಡುವುದಕ್ಕೆ ಒಬ್ಬರು ವಿಲೇಜ್ ಅಕೌಂಟೆಂಟರನ್ನು ನೇಮಿಸಬೇಕೆಂದು ತೀರ್ಮಾನವಾಗಿದೆ ಎಂದು ತಾವು ಹೇಳಿದಿರಿ. 15 ಸಾವಿರ ರೂಪಾಯಿಗಳ ವರಮಾನವಿಲ್ಲದೆ ಇರುವ ಕಡೆ ವಿಲೇಜ್ ಅಕೌಂಟೆಂಟ್ ನೇಮಿಸುವುದರಲ್ಲಿ ಯಾವ ನಿಯಮವನ್ನು ಅನುಸರಿಸುತ್ತೀರಿ ?

ಶ್ರೀ ಎಚ್. ವಿ. ಕೌಜಲಗಿ.—ಒಂದೇ ಊರಿನಲ್ಲಿ 15 ಸಾವಿರ ರೂಪಾಯಿಗಳಷ್ಟು ವರಮಾನ ಇಲ್ಲದೇ ಇದ್ದಪಕ್ಷದಲ್ಲಿ 5—6 ಹಳ್ಳಿಗಳನ್ನು ಸೇರಿಸಿಕೊಂಡು ಒಂದು ಗ್ರೂಪ್ ಮಾಡುತ್ತೇವೆ, ಅದಕ್ಕೆ ಒಬ್ಬರು ವಿಲೇಜ್ ಅಕೌಂಟೆಂಟರನ್ನು ನೇಮಕ ಮಾಡುತ್ತೇವೆ.

ಶ್ರೀ ಚನ್ನಯ್ಯ ಒಡೆಯರ್.—ಅವರನ್ನು ನೇಮಿಸುವಾಗ ಯಾವ ನಿಯಮವನ್ನು ಅನುಸರಿಸುತ್ತೀರಿ ?

Sri H. V. KOUJALGI.—The Deputy Commissioner will call for the applications and interview the candidates as per the conditions laid down and he will appoint them.

ಶ್ರೀ ವಿ. ವೆಂಕಟಪ್ಪ.—ಈಗ ಇದುವರೆಗೂ ಕೆಲಸ ಮಾಡಿರತಕ್ಕ ಪಟೇಲ್ ಶ್ಯಾನುಭೋಗರಿಗೆ ಪೋಟಿಗೆ ಕೊಟ್ಟಿಲ್ಲ ಕಾರಣವೇನು ?

Sri H. V. KOUJALGI.—After the abolition of the Hereditary Act they were allowed to continue in service according to old terms and they will be paid according to those old terms only.

3-00 P.M.

Sri G. V. GOWDA.—May I know the time required to replace all the hereditary village Accountants by the regular candidates ?

Sri H. V. KOUJALGI.—Very shortly.

ಶ್ರೀ ಡಿ. ರಾಜಗೋಪಾಲ್.—ಈ ಗ್ರಾಮ ಲೆಕ್ಕಿಗರನ್ನು ನೇಮಕ ಮಾಡಿದಮೇಲೆ ಪಂಚಾಯಿತಿ ಸೆಕ್ರೆಟರಿಯವರನ್ನು ತೆಗೆದುಹಾಕುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಪಂಚಾಯಿತ್ ಸೆಕ್ರೆಟರಿಯವರನ್ನು ಇಟ್ಟುಕೊಳ್ಳುವುದು ಅಥವಾ ತೆಗೆಯುವುದು ಆಯಾ ಪಂಚಾಯಿತಿಯವರಿಗೆ ಸೇರಿದ್ದು.

ಶ್ರೀ ಡಿ. ರಾಜಗೋಪಾಲ್.—ಈ ಗ್ರಾಮ ಲೆಕ್ಕಿಗರಿಗೆ ವರ್ಷದ 365 ದಿನವೂ ಕೆಲಸ ಇರುತ್ತದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಹೌದು, 15 ಸಾವಿರ ರೂಪಾಯಿಗಳಷ್ಟು ರೆವಿನ್ಯೂವನ್ನು ವಸೂಲು ಮಾಡುವ ಕೆಲಸ ಇರುತ್ತದೆ. ಮತ್ತು ರೆವಿನ್ಯೂ ಸೆಟಲ್‌ಮೆಂಟ್‌ಗೆ ಸಂಬಂಧಪಟ್ಟಂತೆ ಕೆಲಸವಿರುತ್ತದೆ.

ಶ್ರೀ ಎಸ್. ಡಿ. ಗಾವಂಕರ್.—ಈ ಗ್ರಾಮ ಲೆಕ್ಕಿಗರ ಕೆಲಸಕ್ಕೆ ಹೆಣ್ಣುಮಕ್ಕಳನ್ನು ತೆಗೆದುಕೊಳ್ಳುವುದಿಲವೇ ?

ಶ್ರೀ ಎಚ್. ವಿ. ಕೌಜಲಗಿ.—ಇಲ್ಲ.

ಶ್ರೀ ಡಿ. ವಿ. ಅಂಜನಪ್ಪ.—ಈ ಗ್ರಾಮ ಲೆಕ್ಕಿಗರ ಕೆಲಸಗಳು ಏನೇನು ?

ಶ್ರೀ ಎಚ್. ವಿ. ಕೌಜಲಗಿ.—ಭೂ ಕಂದಾಯವನ್ನು ವಸೂಲು ಮಾಡುವುದು, ಹಿಂದಿನ ಬಾಕಿಯನ್ನು ವಸೂಲು ಮಾಡುವುದು ಇರುತ್ತದೆ. ರೆಕಾರ್ಡ್‌ಗಳನ್ನು ಸರಿಯಾಗಿ ಇಡುವ ಕೆಲಸವಿರುತ್ತದೆ.

ಶ್ರೀ ಕೆ. ಎಸ್. ಚೆನ್ನಪ್ಪ.—ಒಂದೊಂದು ಪಂಚಾಯುತಿಗೆ ಒಬ್ಬೊಬ್ಬರನ್ನು ನೇಮಕ ಮಾಡುವ ಬದಲು ಎರಡು ಪಂಚಾಯಿತಿಗಳಿಗೆ ಒಬ್ಬ ಗ್ರಾಮ ಲೆಕ್ಕಿಗನನ್ನು ನೇಮಕ ಮಾಡಿದರೆ ಉಳಿತಾಯವಾಗುವುದಿಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ.—ಒಂದೊಂದು ಪಂಚಾಯಿತಿಗೆ ಒಬ್ಬೊಬ್ಬರನ್ನು ನೇಮಕ ಮಾಡುತ್ತಿಲ್ಲ. 15 ಸಾವಿರ ರೂಪಾಯಿಗಳ ರೆವಿನ್ಯೂ ವಸೂಲಿ ಮಾಡುವುದಕ್ಕೆ ಒಬ್ಬರನ್ನು ನೇಮಕ ಮಾಡುತ್ತೇನೆ. ಈ ಪ್ರಕಾರ ಒಬ್ಬ ಗ್ರಾಮ ಲೆಕ್ಕಿಗನ ಭಾಗಕ್ಕೆ ಒಂದೇ ಗ್ರಾಮ ಬರಬಹುದು ಅಥವಾ ಒಂದಕ್ಕಿಂತ ಹೆಚ್ಚು ಗ್ರಾಮಗಳು ಬರಬಹುದು.

Constitution of Co-ordination Committee

166. Smt. M. R. LAKSHAMMA (Graduates' Constituency).—

Will the Minister for Education be pleased to state :—

(*a*) the date on which the co-ordination Committee for Research work on Karnataka Life and Culture was first constituted ;

(*b*) the dates of orders of subsequent renewals and its reconstitution ;

(*c*) the number of times the Committee has met ;

(*d*) the date of the recent reconstitution, *i.e.*, in 1969 ;

(*e*) the names of members and the number of times the Committee met after its latest reconstitution ?

Sri N. M. KOTRABASAIAH SOGI (Deputy Minister for Education).—

(*a*) 22nd May 1965.

(*b*) The tenure of the Committee was extended on 21st September 1967 and it was reconstituted on 18th June 1969.

(*c*) The Committee has met twice, once on 29th September 1965 and the second time on 22nd August 1968.

(*d*) 18-6-1969.

(*e*) The names of the members of the Committee are indicated in the appended Statement. The Committee is yet to meet after its reconstitution, in June 1969.

(SRI N. M. KOTRABASIAH SOGI)

STATEMENT

1	The Minister for Education.	Chairman,
2	The Deputy Minister for Education.	Vice-Chairman
3	Sri A. J. Doddameti, Minister of State for Minor Irrigation.	Member
4	The Vice-Chancellor, Mysore University, Mysore or his Nominee.	Do
5	The Vice-Chancellor, Karnatak University, Dharwar or his Nominee.	Do
6	The Vice-Chancellor, Bangalore University, Bangalore or his Nominee.	Do
7	The Director of Kannada Research Institute, Dharwar.	Do
8	The Director, Institute of Kannada Studies, Mysore.	Do
9	The Secretary, Karnatak Historical Research Society, Dharwar.	Do
10	The Secretary to Government, Education and Youth Welfare Department.	Do
11	The Secretary to Government, Finance Department.	Do
12	Smt. M. R. Lakshamma, M. L. C.	Do
13	The Director of Archaeology in Mysore, Mysore	Secretary.

ಶ್ರೀ ಜಿ. ವಿ. ಅಂಜನಪ್ಪ.—ಕರ್ನಾಟಕ ಜನಜೀವನ ಮತ್ತು ಸಂಸ್ಕೃತಿಗಳ ಬಗ್ಗೆ ಸಂಶೋಧನೆ ನಡೆಸಲು ಸಮನ್ವಯ ಸಮಿತಿಯನ್ನು ರಚಿಸಿರುವುದು ಯಾವ ತತ್ವದ ಮೇಲೆ ಮತ್ತು ಯಾವ ಆಧಾರದ ಮೇಲೆ ಎಂಬುದನ್ನು ಹೇಳುತ್ತೀರಾ ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ —ನಮ್ಮ ಕರ್ನಾಟಕದ ಸಂಸ್ಕೃತಿಯನ್ನು ಮತ್ತು ಸಾಹಿತ್ಯವನ್ನು ಸಂಶೋಧನೆ ಮಾಡಲು ಈ ಸಮಿತಿಯನ್ನು ನೇಮಕ ಮಾಡಲಾಗಿದೆ. ಈ ಸಮಿತಿಯಲ್ಲಿ ಸಂಶೋಧನೆಗೆ ಸಂಬಂಧಪಟ್ಟ ಅಧಿಕಾರಿಗಳು ಇದ್ದಾರೆ. ಸಂಬಂಧಪಟ್ಟ ಖಾತೆಯ ಮಂತ್ರಿಗಳು ಇದ್ದಾರೆ. ಮತ್ತು ಈ ಮನೆಯ ಸದಸ್ಯರೊಬ್ಬರಿದ್ದಾರೆ. ನಾನ್ ಅಫಿಷಿಯಲ್ ಮೆಂಬರ್ ಒಬ್ಬರು ಇದ್ದಾರೆ. ಹೆಸರುಗಳ ಪಟ್ಟಿಯನ್ನು ಸಹ ಕೊಡಲಾಗಿದೆ. ಈ ಸಮಿತಿಗೆ ಹೆಚ್ಚು ಅನುಭವ ಇರುವಂತಹವರನ್ನು ನೇಮಕ ಮಾಡಲಾಗಿದೆ.

ಶ್ರೀ ಜಿ. ವಿ. ಅಂಜನಪ್ಪ.—ಈ ಸಮಿತಿಯನ್ನು ನೇಮಕ ಮಾಡುವಂಥ ಉದ್ದೇಶವಾದರೂ ಕೂಡ ಏನಿತ್ತು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಮ್ಮ ಕರ್ನಾಟಕ ಸಂಸ್ಕೃತಿ ಮತ್ತು ಇತಿಹಾಸದ ಬಗ್ಗೆ ಸಂಶೋಧನೆ ನಡೆಸುವ ಸಲುವಾಗಿ ನೇಮಕ ಮಾಡಲಾಯಿತು. ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್, ಮೈಸೂರು, ಕನ್ನಡ ರೀಸರ್ಚ್ ಇನ್‌ಸ್ಟಿಟ್ಯೂಟ್, ಧಾರವಾಡ, ಕರ್ನಾಟಕ ಹಿಸ್ಟಾರಿಕಲ್ ರೀಸರ್ಚ್ ಇನ್‌ಸ್ಟಿಟ್ಯೂಟ್, ಧಾರವಾಡ, ಈ ಎಲ್ಲಾ ಇನ್‌ಸ್ಟಿಟ್ಯೂಟ್‌ಗಳ ಕಾರ್ಯವನ್ನು ಕ್ರೋಢೀಕರಿಸಿ ಒಂದು ಸಂಪರ್ಕವೇರ್ಪಡಿಸಿ ಈ ರಾಜ್ಯದ ಹಿತದೃಷ್ಟಿಯಿಂದ ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿ ಒಂದು ಸಮಗ್ರವಾದ ಮಾಹಿತಿಯನ್ನು ದೊರಕಿಸುವ ಉದ್ದೇಶದಿಂದ ಈ ಸಮಿತಿಯನ್ನು ನೇಮಕ ಮಾಡಲಾಗಿದೆ.

ಶ್ರೀ ಜಿ. ವಿ. ಅಂಜನಪ್ಪ.—ಸಮಿತಿಯನ್ನು ನೇಮಕ ಮಾಡಿದುದು 1965 ನೇ ಇಸವಿಯಲ್ಲಿ. ಆದರೆ ಎರಡೇ ಎರಡು ಸಲ ಮಾತ್ರ ಮೀಟಿಂಗು ಮಾಡಿದೆ ಎಂದು ಇದೆ. ಇದರ ಕಾರ್ಯಸ್ವರೂಪ

ವೇನು ? ಮತ್ತು ಇದರಲ್ಲಿ ಶ್ರದ್ಧೆ ಮತ್ತು ಆಸಕ್ತಿ ಇರುವವರನ್ನು ಏಕೆ ಸರಕಾರ ನೇಮಿಸಲಿಲ್ಲ ? ಇನ್ನು ಮುಂದಾದರೂ ಸರಿಯಾದ ಶ್ರದ್ಧೆ ಮತ್ತು ಆಸಕ್ತಿಯುಳ್ಳ ಜನರನ್ನು ಇದರಲ್ಲಿ ಸೇರಿಸಲು ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈ ಸಮಿತಿ ಪುನರ್ರಚನೆಯಾಗಿ ಸುಮಾರು ಎರಡು ತಿಂಗಳಾಗಿದೆ. ಇನ್ನು ಮುಂದೆ ಇದರ ಬಗ್ಗೆ ತೀವ್ರವಾದ ಕಾರ್ಯಗಳನ್ನು ಮಾಡಲು ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬಂದೀಗೌಡ.—ಸಮನ್ವಯ ಸಮಿತಿ ಎಂದು ಮಾಡಿದ್ದೀರಲ್ಲ, ಇದರಿಂದ ಎಷ್ಟು ಸಂಶೋಧನೆಗಳು ನಡೆದಿವೆ ತಿಳಿಸುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸಂಶೋಧನೆ ಮಾಡುವಂತಹ ಸಂಸ್ಥೆಗಳು ಇನ್ನೂ ಕೆಲವು ಇವೆ. ಇವೆಲ್ಲವುಗಳಲ್ಲಿ ಯಾವ ಯಾವ ರೀತಿ ಕೆಲಸಗಳು ಆಗಿವೆ ಅವನ್ನೆಲ್ಲಾ ಕ್ರೋಡೀಕರಿಸಿ ಏಕರೂಪತೆಯ ಮೂಲಕ ರಾಜ್ಯಕ್ಕೆಲ್ಲಾ ಅನ್ವಯವಾಗುವಂತೆ ಸಮಗ್ರ ಮಾಹಿತಿ ಒದಗಿಸುವ ದೃಷ್ಟಿಯಿಂದ ಇದರ ಕಾರ್ಯ ರೂಪವನ್ನು ಮಾಡಬೇಕೆಂದು ಇದೆ. ಇವರು ಇನ್ನೂ ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಸಿ. ಬಂದೀಗೌಡ.—ಇದುವರೆಗೆ ಕ್ರೋಡೀಕರಿಸುವ ಕೆಲಸ ಈ ಸಮಿತಿಯಿಂದ ಎಷ್ಟು ಮಟ್ಟಿಗೆ ನಡೆದಿದೆ ಎನ್ನುವುದನ್ನು ನಿರ್ದಿಷ್ಟವಾಗಿ ಹೇಳುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗಾಗಲೇ ತಿಳಿಸಿದಂತೆ ಇಲ್ಲಿಯವರೆಗೆ ಇದ್ದ ಸಮಿತಿಯವರು ಸಾಕಷ್ಟು ಕೆಲಸ ಮಾಡಲಾಗಲಿಲ್ಲ. ಇತ್ತೀಚೆಗೆ ಸಮಿತಿ ಪುನರ್ರಚನೆಯಾಗಿದೆ. ಇವರು ಇನ್ನೂ ಸಭೆ ಸೇರಿಲ್ಲ. ಸೇರಿದ ಮೇಲೆ ಇದರ ಕೆಲಸಗಳನ್ನು ರೂಪಿಸಬೇಕಾಗಿದೆ.

Sri D. RAJAGOPAL.—I would like to know why there is only one non-official member in this Committee ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದರಲ್ಲಿ ಒಬ್ಬರು ಮಹಿಳಾ ಸದಸ್ಯರು ಇರಬೇಕು. ಇಲ್ಲಿ ಒಬ್ಬರನ್ನು ತೆಗೆದುಕೊಳ್ಳಲಾಗಿದೆ, ಅಷ್ಟೇ.

ಶ್ರೀ ಎ. ಹೆಚ್. ಶಿವಾನಂದಸ್ವಾಮಿ.—ಇಂತಹ ಸಮಿತಿಗಳನ್ನು ಮಾಡುವಾಗ ಇಂತಿಷ್ಟು ಕಾಲದಲ್ಲಿ ಇದು ಸೇರಬೇಕು ಮತ್ತು ಮೂರು ತಿಂಗಳ ಕಾಲ ಸಭೆ ಸೇರದೆ ಇದ್ದರೆ ಈ ಸಮಿತಿಗಳು ರದ್ದಾಗುವುದಿಲ್ಲವೇ ? ಮತ್ತು ಇವರುಗಳು ಇಂತಿಷ್ಟು ಕಾಲದಲ್ಲಿ ಸಭೆ ಸೇರಿ ರಿಪೋರ್ಟ್ ಕೊಡಬೇಕೆಂದು ಸರಕಾರ ಏಕೆ ನಿಗದಿ ಮಾಡಬಾರದು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದು ಅಂತಹ ಸಮಿತಿಯಲ್ಲ. ಇದರ ವ್ಯವಹಾರ ಬೇರೆ ಕಡೆಗಳಲ್ಲಿ ಎಂತಹ ರೀಸರ್ಚ್ ಮಾಡಿದ್ದಾರೆ, ಅವರು ಯಾವ ಯಾವ ರೀತಿಯ ರೀಸರ್ಚ್ ಮಾಡಿದ್ದಾರೆ ಅವೆಲ್ಲವನ್ನೂ ಸಮನ್ವಯ ಮಾಡಿ ಕೆಲಸ ಮಾಡಬೇಕಾಗುತ್ತದೆ. ಇದಕ್ಕೆ ಸ್ವಲ್ಪ ಕಾಲ ಬೇಕಾಗುತ್ತದೆ. ಇವು ಪದೇ ಪದೇ ಸೇರುವಂತಹ ಸಮಿತಿಗಳಲ್ಲ ಮತ್ತು ಅದರ ಅವಶ್ಯಕತೆಯೂ ಇಲ್ಲ.

ಶ್ರೀ ಬಸವರಾಜ ಕಟ್ಟೀಮನಿ.—ಇಂತಹ ಸಮಿತಿಗಳಲ್ಲಿ ಏನೇನು ಕೆಲಸ ನಡೆದಿದೆ ಎಂದು ನೋಡಲು ಮತ್ತೆ ಬೇರೆ ಒಂದು ಸಮಿತಿ ಮಾಡುವುದು ಸರಿಯಲ್ಲವೇ ?

(ಉತ್ತರವಿಲ್ಲ)

ಶ್ರೀ ಎಂ. ಟಿ. ಶ್ರೀಕಂಠಯ್ಯ.—ಸ್ವಾಮಿ, ಕರ್ನಾಟಕ ಜನಜೀವನ ಮತ್ತು ಸಂಸ್ಕೃತಿಗಳ ಬಗ್ಗೆ ಒಂದು ಸಮಿತಿ ಮಾಡಿದ್ದೀರಿ. ಹಾಗೆಯೇ ಮೈಸೂರು ಜನಜೀವನ ಮತ್ತು ಸಂಸ್ಕೃತಿಗಳ ಬಗ್ಗೆ ಸಂಶೋಧನ ನಡೆಸಲು ಒಂದು ಸಮಿತಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಹೇಳಿದವೆಲ್ಲವೂ ಅವರಲ್ಲಿ ಒಳಪಟ್ಟಿವೆ.

ಶ್ರೀ ಎಸ್. ಸಿ. ಕುಬ್ಸದ್.—ಈ ಕಮಿಟಿ ಬಹಳ ದಿವಸದವರೆಗೆ ಕೂಡಲಿಲ್ಲ. ಇದಕ್ಕೆ ಕಾರಣ ಸದಸ್ಯರೇ ಕೂಡಿಲ್ಲವೋ ಅಥವಾ ಕಾರ್ಯದರ್ಶಿಗಳೇ ನಿಧಾನ ಮಾಡಿದ್ದಾರೆಯೋ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದಕ್ಕೆ ಕೇಂದ್ರ ಸರ್ಕಾರದ ಇಬ್ಬರು ಸದಸ್ಯರುಗಳಾಗಬೇಕಾಗುತ್ತದೆ. ಒಬ್ಬರು ಆಂಥ್ರಾಪಾಲಜಿಸ್ಟ್ ಇನ್ನೊಬ್ಬರು ಅಧಿಕಾರಿಗಳನ್ನು ಸೇರಿಸಬೇಕಾಗಿದೆ. ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಬೇಕಾಗಿರುವುದರಿಂದ ನಮಗೆ ತಡವಾಯಿತು. ಈಗ ಸಮಿತಿ ರಚನೆಯಾಗಿದೆ. ಮುಂದೆ ಅದರ ಕಾರ್ಯ ತೀವ್ರಗತಿಯಿಂದ ನಡೆಯುತ್ತದೆ.

ಶ್ರೀ ಜಿ ವೆಂಕಟಗೌಡ.—ಆ ಕಮಿಟಿಯವರಿಗೆ ಏನು ಖರ್ಚಾಗುತ್ತಾ ಇದೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರಿಗೆ ಅಷ್ಟೇನೂ ಖರ್ಚಾಗುತ್ತಾ ಇಲ್ಲ. ಬರೀ ಟಿ. ಎ. ಮತ್ತು ಡಿ. ಎ. ಕೂಡ ಹೆಚ್ಚು ಖರ್ಚು ಬಂದಿಲ್ಲ.

Mr. DEPUTY CHAIRMAN.—Sri M. V. Venkatappa is permitted to put question No. 175 on behalf of Sri Keshava Rao Nitturkar.

Including non-official sections in the administration like Chairman and Director of Co-operative Society

175. Sri M. V. VENKATAPPA (Graduates' Constituency) [On behalf of SRI KESHAVA RAO NITTURKAR (Teachers' Constituency)].—

Will the Minister for Development be pleased to state:—

(*a*) whether any suggestion has been made by the Vigilance Commissioner to include certain non-official sections in the administration like Chairman and Directors of Co-operative Societies, Banks and Corporations ;

(*b*) if so, whether it is contemplated to bring forward any legislative measures to control the wayward activity of Public men ?

Sri P. M. NADGOUDA (Minister for Development).—

(*a*) No.

(*b*) Does not arise.

ಶ್ರೀ ಎಂ. ವಿ. ವೆಂಕಟಪ್ಪ.—(ಅ) ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಹಾಗಾದರೆ ಇದನ್ನು ವಿಜಿಲೆನ್ಸ್ ಕಮೀಷನ್‌ಗೆ ಒಳಪಡಿಸುವುದಕ್ಕೆ ಸರ್ಕಾರದಲ್ಲಿರುವ ತೊಂದರೆಗಳೇನು ?

ಶ್ರೀ ಪಿ. ಎಂ. ನಾಡಗೌಡ.—ವಿಜಿಲೆನ್ಸ್ ಕಮಿಷನ್ ಇರುವುದು ಸರ್ಕಾರಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನು ಇದೆಯೇ ಹೊರತು ಅಧಿಕಾರರೇತರ ಮೇಲೆ ಡೈರೆಕ್ಟರ್ ಮೇಲೆ, ಛೇರ್ಮನ್‌ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಕಾನೂನಿನಲ್ಲಿ ಅಡಚಣೆ ಇದೆ. ಇದುವರೆಗೆ ಅಂಥಾ ರೆಕಮೆಂಡೇಷನ್ ಯಾವುದೂ ಬಂದಿಲ್ಲ. ಅದುದರಿಂದ ಅದರ ಬಗ್ಗೆ ಏನೂ ವಿಚಾರ ಮಾಡಲಿಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ಅಕಸ್ಮಾತ್ ಇಂತಹ ಅಧ್ಯಕ್ಷರ ಮೇಲೆ ದೂರುಗಳು ಸರ್ಕಾರಕ್ಕೆ ಬಂದಿದೆಯೇ ? ಅಂತಹ ದೂರುಗಳು ಎಷ್ಟು ಉಳಿದಿವೆ ? ಅವುಗಳ ಮೇಲೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಪಿ. ಎಂ. ನಾಡಗೌಡ.—ಅದಕ್ಕೋಸ್ಕರವಾಗಿಯೇ ಸರ್ಕಾರದಲ್ಲಿ ಒಂದು ಡಿಪಾರ್ಟ್‌ಮೆಂಟ್ ಇದೆ. ಆ ಡಿಪಾರ್ಟ್‌ಮೆಂಟಿನವರು ಎನಕ್ವೈರಿ ಮಾಡುತ್ತಾರೆ.

Mr. DEPUTY CHAIRMAN.—The Hon. Minister is not present. Will any Minister answer the question ?

Sri RAMAKRISHNA HEGDE.—The Hon. Minister concerned is held up in the Assembly. The question may be held over.

Mr. DEPUTY CHAIRMAN.—The question is held over and will be taken up when the Hon. Minister is here. Next question.

Size of the Public Debt of the Mysore State

200. Sri C. BANDI GOWDA (Teachers' Constituency).—

Will the Minister for Finance, Planning and Youth Welfare be pleased to state:—

(a) the size of the public debt of the reorganised Mysore State at the time of its formation on 1st November, 1956 ;

(b) what moiety of it constituted the outstanding public debt of the erstwhile Mysore State as on 31st October, 1956 ?

Sri RAMAKRISHNA HEGDE (Minister for Finance, Planning and Youth Welfare).—

(a) The Public Debt of the integrated areas of the Mysore State was allocated provisionally on the basis of population pending final allocation in accordance with the provisions of the States' Reorganisation Act, 1956. The outstanding debt of the Reorganised Mysore State as on 1st November 1956 works out to Rs. 77.58 crores as per details given below :

		(Rs. in crores)
Permanent Debt (Loans raised by State Government).	...	33.01
Loans from Government of India	...	44.57
Total	...	77.58

(b) As on 31st October 1956, the Public Debt position of Ex-Mysore State was as under :—

		(Rs. in crores)
Permanent Debt (Loans raised by State Government).	...	25.11
Loans from Government of India	...	24.08
Total	...	49·19

ಶ್ರೀ ಸಿ. ಬಂದೀಗೌಡ.—ಈಗ ಕೊಟ್ಟಿರತಕ್ಕಂಥ ಅಂಕಿಅಂಶಗಳು ತಾತ್ಕಾಲಿಕವಾಗಿ ಜನಸಂಖ್ಯೆ ಆಧಾರವಾಗಿಟ್ಟುಕೊಂಡು ಆ ಕಾಲದಲ್ಲಿ ಮಾಡಿದ್ದಾರೆ. ರಾಜ್ಯಪುನರ್ವಿಂಗಡಣಾ ಶಾಸನದ ಅವಕಾಶಗಳಿಗನುಗುಣವಾಗಿ ಅಂತಿಮವಾಗಿ ಯಾವಾಗ ಗೊತ್ತುಮಾಡಲಾಯಿತು ?

Sri RAMAKRISHNA HEGDE.—No Sir, these figures are based on finance acounts for the period 1st April 1956 to 31st October 1956.

ಶ್ರೀ ಸಿ. ಬಂದೀಗೌಡ.—ಮಾನ್ಯ ಮಂತ್ರಿಗಳ ಉತ್ತರ ಹೀಗಿದೆ:

"pending final allocation in accordance with the provisions of the S. R. Act. 1956."

ಇದನ್ನು ಯಾವಾಗ ಅಂತಿಮಗೊಳಿಸಿದಿರಿ ?

ಶ್ರೀ ರಾಮಕೃಷ್ಣ ಹೆಗಡೆ.—ಬೇರೆ ರಾಜ್ಯಗಳಿಂದ ಬಂದಂಥ, ಬೇರೆ ಪ್ರದೇಶದಿಂದ ಬಂದಂಥ ಪಬ್ಲಿಕ್ ಡೆಟ್ ಎಷ್ಟು ಇವೆಲ್ಲ ನಮಗೆ ಆಮೇಲೆ ಗೊತ್ತಾಯಿತು.

ಶ್ರೀ ಸಿ. ಬಂದೀಗೌಡ.—ಯಾವಾಗ ಗೊತ್ತಾಯಿತೋ ಆವಾಗಿನ ಅಂಕಿ ಅಂಶಗಳನ್ನು ಒದಗಿಸಿದ್ದರೆ ನಮಗೆ ವಿದ್ಯಮಾನಗಳು ಗೊತ್ತಾಗುತ್ತಿದ್ದವು.

Sri RAMAKRISHNA HEGDE.—This was provisionally fixed. But the actual figure of 49.19 is the correct figure. It is not provisional figure, because the source of this figure is finance account for that year.

Sri G. V. GOWDA.—Before the Government accepted the allocation on the population basis, I want to know whether Government were satisfied that these amounts that were allocated to New Mysore State had been actually spent in the integrating units ?

Sri RAMAKRISHNA HEGDE.—That was discussed between the representatives of Mysore Government and the concerned Governments and after a good deal of discussion, this figure was agreed to.

Sri G. V. GOWDA.—Did the Government ask for the assets that have been created out of the loan amounts borrowed by the erstwhile States ?

Sri RAMAKRISHNA HEGDE.—All these assets have been created in those areas where money was spent. There is no question of some asset in Bombay.

Sri G. V. GOWDA.—Let me make myself clear : supposing 20 lakhs of people were transferred to Mysore, 20 lakhs of rupees of public debt would be transferred. I want to know whether this amount of 20 lakhs has been spent in the integrated unit and whether any asset has been created by spending 20 lakhs and if so, is it not justifiable to claim that asset created out of this because we have owned the public debt.

Sri RAMAKRISHNA HEGDE.—When this liability was accepted, it was on the basis of the examination of the assets created out of the liability. If this amount of 49-50 crores has been accepted, it is because of the particular projects that have been built out of the money in those areas. I can tell the hon. Member that if money was spent in Bombay area, that liability will have been accepted by the Mysore Representatives. When we have accepted, it only means that corresponding asset has been created.

ಶ್ರೀ ಎಂ. ವಿ. ವೆಂಕಟಪ್ಪ.—ಹೊಸ ರಾಜ್ಯ ನಿರ್ಮಾಣವಾದ ಮೇಲೆ ಸುಮಾರು 28 ಕೋಟಿ ರೂಪಾಯಿ ಸಾಲ ಬಂದಿದೆ. ಇದರಲ್ಲಿ ಬೊಂಬಾಯಿ ಕರ್ಣಾಟಕ ಭಾಗದ್ದು ಎಷ್ಟು ಮತ್ತು ಹೈದರಾಬಾದ್ ಕರ್ಣಾಟಕದ್ದು ಎಷ್ಟು ಎನ್ನುವುದನ್ನು ಹೇಳುವುದಕ್ಕೆ ಆಗುತ್ತದೆಯೇ ?

Sri RAMAKRISHNA HEGDE.—I cannot give split up figure just now, Sir.

ಶ್ರೀ ಸಿ. ಬಂದೀಗೌಡ.—ತುಂಗಭದ್ರ ಜಲಾಶಯ ನಿರ್ಮಾಣವಾಗಿದೆ. ಮಾನ್ಯ ವೆಂಕಟಪ್ಪನವರು ಹೇಳಿದ ಹಾಗೆ ಅಲ್ಲಿಂದ ನಮಗೆ ವರ್ಗಾವಣೆಯಾಗಿರತಕ್ಕದು ಸುಮಾರು 28ಕೋಟಿ ರೂಪಾಯಿ ಸಾಲ. ತುಂಗಭದ್ರ ಜಲಾಶಯ ಇಡೀ ಮೈಸೂರಿನಲ್ಲಿರುವುದರಿಂದ ಅದರ ಬಗ್ಗೆ ವರ್ಗಾವಣೆಯಾಗಿರತಕ್ಕದ್ದು 28 ಕೋಟಿ ರೂಪಾಯಿಗಳಲ್ಲಿ ಒಂದು ಭಾಗ ಮಾತ್ರವೇ ?

Sri RAMAKRISHNA HEGDE.—For that I require notice.

Calling attention to a Matter of Urgent Public Importance *re*: Damages to the Madhavacharya idol at Hampi

Sri Y. S. PATIL (Graduates Constituency).—I beg to call the attention of the Minister for Education to the damage done to the idol of Shri Madhvacharya at Hampi.

†Sri N. M KOTRABASAIAH SOGI (Deputy Minister for Education).—Sir, with reference to the Calling Attention Notice of Sri Y. S. Patil and Smt. M. R. Lakshamma under Rule 62 of the Rules of Procedure and Conduct of Business, I beg to make the following Statement.—

Late on the night of 11th August or early in the morning of 12th August, certain culprits, who had hidden in the Yantrodharaka Swamy Temple in Hampi, removed Madhwacharya's idol and dug the earth beneath. The idol was also broken to a number of pieces. The idol was not being used for worship by any section of the community. The circumstances indicate that the aim of the culprits was to seek hidden treasures, if any. The reason for breaking the idol to pieces also appears to have been the same; the culprits must have suspected that treasures might have been hidden inside the idol. The Police authorities in Bellary have registered a case, and the case is under investigation.

The report in the 'Kannada Prabha' on August 23rd, that this incident has created a tense situation in and around the Hampi area appears to be exaggerated. It has been reported both by the Deputy Commissioner, Bellary, and by the Superintendent of Police, Bellary, that the situation has been normal throughout.

I am to add in this connection that all the monuments in Hampi, with the exception of Virupakshaswamy Temple, are vested with the Government of India and are administered by the Director-General of of Archaeology, on behalf of the Government of India.

ಉಪಸಭಾಪತಿಯವರು.—ನಿನ್ನೆಯ ದಿವಸ ಐದನೆಯ ಫೈನಾನ್ಸ್ ಕಮಿಷನ್ ರೆಕಮೆಂಡೇಷನ್ನಿನ ಮೇಲೆ ಕೆಲವು ಕ್ಲಾರಿಫಿಕೇಷನ್ಸ್ ಕೇಳಬೇಕೆಂದು ಶ್ರೀಮತಿ ಲಕ್ಷಮ್ಮನವರು ಹೇಳುತ್ತಿದ್ದರು. ಹಣಕಾಸಿನ ಸಚಿವರು ಇಂದು ಹಾಜರಿರುವುದರಿಂದ ಅವರು ಈಗ ಕೇಳಬಹುದು.

Award of the Fifth Finance Commission—Clarifications to a Call Attention notice replied on 29th August 1969

Smt. M. R. LAKSHAMMA (Graduates' Constituency).—I find that on page 2 of the Statement of the hon. Finance Minister, a sentence to the following effect.

That the deficit of Rs. 276.18 Crores does not take into account certain items of additional expenditure.

Why was not this expenditure included along with the deficit ? What were the reasons for the State Government for not inlcuding the four items ; in which case the deficit would have been greater ?

Sri RAMAKRISHNA HEGDE.—It is for the simple reason that the State Government has not passed any order in this respect. Therefore, we could not show it has committed expenditure.

Smt. M. R. LAKSHAMMA.—Is it not a fact that the other Governments have included even probable expenditure and future expenditure and shown big deficit with the result they have got bigger slice in the Grants-in-aid than Mysore, which has very prudently, obediently, very methodically and precisely shown their figures and therefore got the award : ಮೆತ್ತಗಿದ್ದವರಿಗೆ ಮತ್ತೆರಡು ಗುದ್ದು.

Sri RAMAKRISHNA HEGDE.—I am afraid that is not correct. Even supposing that there is some force in the argument of the hon. Member and this deficit has not been taken into consideration fully there is one danger in including this probable expenditure as committed expenditure. As I said, it cannot be included unless Government pass an order. As soon as Government pass an order, whether the Finance Commission agrees to compensate on that account or not, it becomes a liability to the Government. Supposing in this case if we had accepted it as a committed expenditure and we had received some award ; it was very likely that we would have to spend this amount of nearly Rs. 60 crores over the next five years.

Smt. M. R. LAKSHAMMA.—Is it only those items which are covered by an order included in the Budget ? Is it not the practice to include even those anticipated or probable items of expenditure ?

Sri RAMAKRISHNA HEGDE.—No Sir. The basis is the budget estimates and the actual accounts in regard to the revenue expenditure. The administrative procedure is to calculate on the basis of certain rate of growth for the next five years. Every year we think that the additional expenditure that is necessary for the same items is of the order of 5 or 6 per cent more. It is on this basis it is worked out. But in regard to other expenditure, whether it is in respect of expenditure which is likely to be incurred on account of acceptance of certain recommendations or in respect of action of the Government like abolition of hereditary offices, etc. Then unless and until the Government takes a final decision and pass an executive order, the Finance Commission will not consider it as committed expenditure.

Sri G. V. GOWDA.—Government is paying more than 50 per cent of land revenue to the Panchayat institutions and it has become a committed expenditure. I wish to know whether this fact has been taken into account.

Sri RAMAKRISHNA HEGDE.—We have shown it as committed expenditure.

ಶ್ರೀ ಎಂ. ವಿ. ವೆಂಕಟಪ್ಪ.—ಹಣಕಾಸಿನ ಮಂತ್ರಿಗಳು ನೆನ್ನೆ ಹೇಳಬೇಕಾದರೆ ಕೇಂದ್ರ ಸರ್ಕಾರದವರು ಹಣದ ವಿಷಯದಲ್ಲಿ ಒಪ್ಪುವುದಿಲ್ಲ ಕೋರ್ಟಿಗೆ ಹೋಗುವ ಪ್ರಸಂಗ ಬರಬಹುದು ಎಂದು ಹೇಳಿದರು. Under what Article can the State Government to go to a Court of Law?

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಅಡ್ವೊಕೇಟ್‌ರನ್ನು ಕೇಳಿ ಹೇಳುತ್ತೇನೆ.

3-30 P.M.

Smt. M. R. LAKSHAMMA.—Is the recommendation of the Finance Commission an award in the sense that it has got to be accepted by the Government of India?

Sri RAMAKRISHNA HEGDE.—Ever since the Constitution came into operation the convention has been to accept the recommendation of every Finance Commission.

Smt. M. R. LAKSHAMMA.—Is it not possible even now to appeal to the parliament because according to the Constitution the President shall cause every recommendation made by the Finance Commission under the provisions of the Constitution together with an explanatory memoradum as to the action taken thereon to be land before cach House of Parliament. I am informed that in respect of certain recommendations the State Government has no objection. It is only in respect of certain recommendations that the State Government is hard hit. Is it not possible for the State Government to appeal to the Members of the Parliament and see whether a revision of the award or recommendation is effected?

Sri RAMAKRISHNA HEGDE.—We can try it. But I am afraid it may not yield any result because no other representatives of other States are interested in this. But the best course appears to be to appeal to the Government of India that in view of the injustice done to Mysore the Government of India should give us certain grants on *ad hoc* basis. The Government of India can do if it minds.

Smt. M. R. LAKSHAMMA.—What is the action taken by the M. Ps. from Mysors in the Parliament?

Sri RAMAKRISHNA HEGDE.—As the hon. Member knows perhaps when this was published in the papers the Parliament had already adjourned.

Sri G. V. GOWDA.—Would it not have been possible for the Government to insist on different criteria to be adopted by the Finance Commission?

Sri RAMAKRISHNA HEGDE.—I have made clear that the Government of Mysore did not agree to this sort of criteria. We opposed it. We said one of the criteria should be backwardness of a particular State, to be determined on the basis of per capita income of that State as compared to the national per capita income because we had bitter experience in the National Development Council and it has cost us considerable amount by way of central assistance. Therefore, we opposed the idea that it should be distributed on the basis of backwardness compared to national per capita income.

Sri G. V. GOWDA.—Did the Government protest taking into account that the per capita income of Mysore is slightly over the national per capita income?

Sri RAMAKRISHNA HEGDE.—These figures are collected by various bodies like the Survey of India and I do not think anybody can take any objection on account of this.

Smt. M. R. LAKSHAMMA.—The very basis of calculating per capita income of the State is disputed. The criteria is not acceptable because the total income of the State includes certain incomes accruing from various central industries like the B.E.L., H.M.T., H.A.L., where a large number of beneficiaries are other than the children of the State. Therefore why not the Government make efforts th see that the criteria is disputed and proper criteria insisted upon?

Sri RAMAKRISHNA HEGDE.—That is a double-edged weapon. Whatever is the basis to arrive at the per capita income both at national level as well as at State level, that applies uniformly to all the States. Therefore, we cannot take objection that they should not include Central Government industries. That will be illogical because on the one hand we ask for more and more central industries to be located and when it goes slightly against us we should say that they should not take that into account. It will be just pouring hot and cold.

G. V. GOWDA.—The Government has been revising the emoluments of the Government servants and a certain portion of the amount has become committed expenditure. If the Government had taken action to implement the Tukol Commission Report the Government would have incurred 22 crores of rupees and may I know whether this fact was brought to the notice of the Finance Commission ?

Sri RAMAKRISHNA HEGDE.—That would have been a very great risk. As the hon. member perhaps knows, we have already included as committed expenditure —D. A., C. C. A and H. R. A.—and that has been taken into account by the Finance Commission. The only question is in regard to the State Government employees being given the pay scales which are equal to Central Government pay scales. Supposing we had taken a decision and the Finance Commission had not agreed to

it, it would have been a great risk. because in no State in India, State Government emplyees get the same salary for comparable posts as the Central Government employees. In no State it has been implemented. Supposing we had taken a decision and the Finance Commission had not agreed, it would have been much worse and we had to shell down, Rs. 22 crores.

Thirty-fourth Report of the Business Advisory Committee

Mr. DEPUTY CHAIRMAN.—I present the Thirty-fourth report of the Business Advisory Committee.

Sri M. V. VENKATAPPA.—I move :

"That this House agrees with the Thirty-forth Report of the Business Advisory Committee."

Mr. DEPUTY CHAIRMAN.—The question is:

"That this House agrees with the Thirt-fourth Report of the Business Advisory Committee"

The motion was adopted.

Mr. DEPUTY CHAIRMAN.—Now Legislative business.

Mysore Education Cess (Validation of Levy) 1969 (as passed by the Legislative Assembly)

Motion to consider.

Sri N. M. KOTRABASAIAH SOGI.—I beg to move:

"That the Mysore Education Cess (Validation of Levy) 1969 as passed by the Legislative Assembly be taken into consideration"

Mr. DEPUTY CHAIRMAN.—Motion moved:

"That the Mysore Education Cess (Validation of Levy) Bill 1969, as passed by the Legislative Assembly be taken into consideration."

†ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸ್ವಾಮಿ ; ನಾನು ಈಗ ಸಭೆಯಮುಂದೆ ಮಂಡಿಸುತ್ತಿರುವ ಮಸೂದೆಯ ಉದ್ದೇಶವೇನು ಎಂಬುದನ್ನು ಈ ಮಸೂದೆಯ ಸ್ಟೇಟ್‌ಮೆಂಟ್ ಆಫ್ ಆಬ್‌ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಎಲ್ಲವನ್ನೂ ವಿವರವಾಗಿ ತಿಳಿಸಲಾಗಿದೆ, ಹಿಂದೆ ಇದ್ದ ಎಲಿಮೆಂಟರಿ ಎಜುಕೇಷನ್ ಶಾಸನದ ಪ್ರಕಾರ ಭೂಕಂದಾಯದಮೇಲೆ ಹಳೇ ಮೈಸೂರಿನಲ್ಲಿ ಎಜುಕೇಷನ್ ಸೆಸ್ ಎಂದು ಒಂದು ಸೆಸ್ಸನ್ನು ಹಾಕಲಾಗುತ್ತಿತ್ತು. ಇನ್ನು ಕೆಲವು ಭಾಗಗಳಲ್ಲಿ ಬೇರೆ ಬೇರೆ ರೀತಿ ತೆರಿಗೆಗಳನ್ನು ವಿಧಿಸಲಾಗಿತ್ತು. ಅಲ್ಲದೆ ಕೆಲವು ಕಟ್ಟಡಗಳಮೇಲೂ ಮತ್ತು ಷಾಪುಗಳ ಮೇಲೂ ಇವನ್ನು ವಸೂಲ್ಮಾಡುತ್ತಿದ್ದರು. ಅದು ಅಕ್ರಮ ಎಂಬುದಾಗಿ ಮೈಸೂರು ಹೈಕೋರ್ಟ್

(ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ)

ತೀರ್ಮಾನ ಕೊಟ್ಟಿದೆ. ಹಾಗೆ ತೆರಿಗೆಯನ್ನು ವಸೂಲ್ಮಾಡುವುದು ಕಾಯಿದೆ ಬಾಹಿರವಾದದ್ದು ಎಂದು ಹೇಳಿದ್ದಾರೆ. ಹೀಗೆ ಕಳೆದ ಡಿಶೆಂಬರ್ ತಿಂಗಳಲ್ಲಿ ಒಂದು ಜಡ್ಜ್‌ಮೆಂಟಾಗಿದೆ. ಕಳೆದ ಡಿಸೆಂಬರ್ ತಿಂಗಳಲ್ಲಿ ತೀರ್ಮಾನ ಕೊಟ್ಟರು. ಅದರಮೇಲೆ ಸುಪ್ರೀಂ ಕೋರ್ಟಿಗೆ ಅಪೀಲು ಮಾಡಿಕೊಂಡಿದ್ದಾರೆ. ಈ ತೀರ್ಮಾನದ ಮೇಲೆ ಮಾನ್ಯ ಹೈಕೋರ್ಟಿನವರು ಕೆಲವು ಅರ್ಜಿದಾರರಿಗೆ ಹಣ ವಾಪಸ್ಸು ಕೊಡಬೇಕೆಂದು ತೀರ್ಮಾನಿಸಿದ್ದಾರೆ. ಅಲ್ಲದೆ ಕೆಲವರಿಗೆ ರೀಫಂಡ್ ಮಾಡಬೇಕೆಂದು ಹೇಳಿದ್ದಾರೆ. ಕಂಟ್ರಾಕ್ಟರಿಗೆ ಹಣವನ್ನು ರೀಫಂಡ್ ಕೊಡುವುದರಿಂದ ಯಾವ ತರಹ ಸಾರ್ಥಕವಾಗುವುದಿಲ್ಲ. ಸರ್ಕಾರಕ್ಕೆ ಅದು ಸಲ್ಲುವುದಿಲ್ಲ. ಸಾಮಾನ್ಯ ಜನತೆಗೂ ಅದು ಸಲ್ಲುವುದಿಲ್ಲ. ಇನ್ನು ಸೆಸ್ ಮುಖಾಂತರ ವಸೂಲುಮಾಡಿರುವ ಹಣವನ್ನು ಮತ್ತೆ ರೀಫಂಡ್ ಮಾಡಿದರೆ, ಕಂಟ್ರಾಕ್ಟರಿಗೆ ಲಾಭವಾಗುತ್ತದೆ. ಸಾಮಾನ್ಯ ಜನರಿಗೆ ಅಂದರೆ ಯಾರಿಂದ ವಸೂಲುಮಾಡಿದ್ದಾರೋ ಅಂತಹವರಿಗೆ ಅದು ಮುಟ್ಟುವುದಿಲ್ಲ. ಆದಕಾರಣ ಅದು ಜನತೆಗೆ ಸಲ್ಲಬೇಕು, ಇಲ್ಲದಿದ್ದರೆ ಸರ್ಕಾರಕ್ಕೆ ಸಲ್ಲಬೇಕು. ಎರಡೂ ತಪ್ಪಿಹೋಗಿ ಮಧ್ಯೆ ಶ್ರೀಮಂತರಾಗಿರತಕ್ಕ ಕಂಟ್ರಾಕ್ಟರಿಗೆ ಸಲ್ಲಬೇಕಾದುದು ಸರಿಯಲ್ಲ, ನ್ಯಾಯವಾದುದಲ್ಲ. ಇದನ್ನು ರೀಫಂಡ್ ಮಾಡುವುದಾದರೆ ಆ ಸೆಸನ್ನು ಯಾವ್ಯಾವ ಕನ್‌ಸ್ಯೂಮರ್‌ಮೇಲೆ ಹಾಕಿದ್ದಾರೆಂಬುದನ್ನು ಕಂಡುಹಿಡಿಯುವುದಕ್ಕಾಗುವುದಿಲ್ಲ. ಮತ್ತೆ ಸಾಹುಕಾರರಿಗೇ ಹೊಟ್ಟೆ ತುಂಬಿಸಿದಂತಾಗುತ್ತದೆ. ಇದು ಜನರಿಗೆ ಸಲ್ಲಬೇಕು ಅಥವಾ ಸರ್ಕಾರಕ್ಕೆ ಸಲ್ಲಬೇಕು ಇದನ್ನು ವ್ಯಾಲಿಡೇಟ್ ಮಾಡಬೇಕು. ಈ ಬಗ್ಗೆ ಲಾ ಡಿಪಾರ್ಟ್‌ಮೆಂಟಿನವರು ಮತ್ತು ಅಡ್ವೊಕೇಟ್ ಜನರಲ್ ಅವರು ಕೊಟ್ಟ ಸಲಹೆ ಮೇರೆಗೆ, ಈ ಬಿಲ್ಲನ್ನು ತಂದಿದ್ದೇವೆ. ಆದ್ದರಿಂದ ಇದರಲ್ಲಿ ಯಾವ ವಿಧವಾದ ವಿವರಣೆಯನ್ನು ಹೇಳುವ ಅವಕಾಶ ಕಂಡು ಬರುವುದಿಲ್ಲ. ಬಹಳ ಸಣ್ಣ ಬಿಲ್ ಇದು. ಮಾನ್ಯ ಸದಸ್ಯರು ಇದನ್ನು ಪರಿಶೀಲನೆ ಮಾಡಿ ತಮ್ಮ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ.

Smt. M. R. LAKSHAMMA.—Why has the High Court held this levy as illegal?

Sri N. M. KOTRABASAIAH SOGI.—The details of the judgment are not with me now. It refers to the collections already made in 1965–66. Prior to that, there was a Government order that the education cess should not be levied on the excise revenue. On the basis of that Government Order the High Court held it illegal to collect any education cess on the excise revenue. We have appealed to the Supreme Court. While it is pending there, this Bill has been brought to validate the action taken by the Department in collecting the cess.

† ಶ್ರೀ ಜಿ. ವಿ. ಆಂಜನಪ್ಪ (ಪದವೀಧರರ ಕ್ಷೇತ್ರ).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಶಿಕ್ಷಣ ಸಚಿವರು ತಂದಿರತಕ್ಕ ಮೈಸೂರು ಎಜುಕೇಷನ್ ಸೆಸ್ (ವ್ಯಾಲಿಡೇಷನ್ ಆಫ್ ಲೆವಿ) ಬಿಲ್ 1969—ಇದರ ಔಚಿತ್ಯ ಏನೆಂಬುದು ನನಗಂತೂ ಮಾನ್ಯ ಸಚಿವರು ವಿವರಣೆ ನೀಡಿದರೂ ಅರ್ಥವಾಗಿಲ್ಲ. ಏಕೆಂದರೆ 1941ನೇ ಇಸವಿಯ ಆಕ್ಟ್ ಪ್ರಕಾರ ಈ ಸೆಸ್‌ನ್ನು ಮರಗಳಮೇಲೆ ಮತ್ತು ಷಾಪ್‌ರೆಂಟ್‌ಮೇಲೆ ಹಾಕುವಂಥ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದರು. ಹೈಕೋರ್ಟಿನವರು ಆ ರೀತಿ ಎಜುಕೇಷನ್ ಸೆಸ್ ಹಾಕುವುದು ಕಾನೂನು ಬಾಹಿರವೆಂದು ಅದನ್ನು ಹೊಡೆದು ಹಾಕಿದರು. ಇದು ಕಾನೂನು ಪ್ರಕಾರವಿರಲಿ, ಅಥವಾ ಕಾನೂನು ವಿರೋಧವಾಗಿರಲಿ, ಕಳೆದ ಡಿಸೆಂಬರ್‌ನಲ್ಲಿ ನಮ್ಮ ರಾಜ್ಯದ ಶ್ರೇಷ್ಠ ನ್ಯಾಯಾಲಯದವರು ಈ ರೀತಿ ಎಜುಕೇಷನ್ ಸೆಸ್ಸನ್ನು ಹಾಕುವುದು ಕಾನೂನು ಬಾಹಿರ ಎಂಬುದಾಗಿ ಆಜ್ಞೆ ಹೊರಡಿಸಿದಾಗ ಸುಪ್ರೀಂ ಕೋರ್ಟಿಗೆ ಅರ್ಜಿ ಹಾಕುವ ಕಾರ್ಯಕ್ರಮವನ್ನು ಇವರು ತೆಗೆದುಕೊಳ್ಳಬೇಕಾಗಿತ್ತು. ಸುಪ್ರೀಂ ಕೋರ್ಟಿಗೆ ಸ್ಪೆಷಲ್ಲಾಗಿ ಅಪೀಲು ಮಾಡಬಹುದಾಗಿತ್ತು. ಸುಪ್ರೀಂ ಕೋರ್ಟಿನಲ್ಲಿ ಇದು ಇತ್ಯರ್ಥವಾಗುವವರೆಗೆ ಯಾವ ಹಣವನ್ನು ರೀಫಂಡ್ ಮಾಡುವ ಅವಶ್ಯಕತೆ ಇರಲಿಲ್ಲವೆಂದು ಒಂದು ಸ್ಟೇ ಆರ್ಡರ್ ತೆಗೆದುಕೊಳ್ಳಬಹುದಾಗಿತ್ತು. ಆ ರೀತಿಯಾದ ಕ್ರಮ ತೆಗೆದುಕೊಂಡಿದ್ದರೆ ಈ ಮಸೂದೆಯ ಅವಶ್ಯಕತೆಯೇ ಇರುತ್ತಿರಲಿಲ್ಲ. ಆದರೆ ಸುಪ್ರೀಂ ಕೋರ್ಟಿನಲ್ಲಿ ಏನಾಗುತ್ತದೆಂಬುದು ನಮಗೆ ಗೊತ್ತಿಲ್ಲ. ಸುಪ್ರೀಂ ಕೋರ್ಟಿನ ತೀರ್ಮಾನ ಬರುವವರೆಗೂ ಕಾದಿದ್ದು ಅನಂತರ ಇಂತಹ ಒಂದು ಮಸೂದೆಯನ್ನು ತಂದಿದ್ದರೆ ಇದು ಉಚಿತವಾಗುತ್ತಿತ್ತು ಮತ್ತು ಅರ್ಥಗರ್ಭಿತವಾಗುತ್ತಿತ್ತು. ಸುಪ್ರೀಂ ಕೋರ್ಟ್

ಕೊಡುವ ಅಭಿಪ್ರಾಯ ನಮಗೆ ತಿಳಿಯದೆ ಈಗ ಮಾನ್ಯ ಸಚಿವರು ಹೇಳಿದಹಾಗೆ ಹೈಕೋರ್ಟಿನವರು ಕೊಟ್ಟ ತೀರ್ಪಿನಮೇಲೆ ಹಣವನ್ನು ವಾಪಸ್ಸು ಕೊಡುತ್ತೀರಾ! ಇದು ಟೆಂಪೊರರಿ ಮಸೂದೆ ಯಾಯಿತು. ಪರ್ಮನೆಂಟು ಮಸೂದೆಯಾಗುವುದಿಲ್ಲ. ಇದು ರಾಜ್ಯಾಂಗಕ್ಕೆ ವಿರೋಧವಾಗುತ್ತದೆ. ಇದಕ್ಕೆ ಕಾನೂನು ಆಗುವುದಕ್ಕೆ ಅರ್ಹತೆ ಇರುವುದಿಲ್ಲ. ಯಾರಾದರೂ ರೀಫಂಡ್ ಕೇಳಿದರೆ ಅದನ್ನು ತಪ್ಪಿಸುವ ಸಲುವಾಗಿ ಈ ಒಂದು ಮಸೂದೆಯನ್ನು ತರುತ್ತೇವೆಂದು ಹೇಳಿದರೆ ಹಾಸ್ಯಾಸ್ಪದ ವಾಗುತ್ತದೆ. ನಿಜವಾಗಿ ಸರಿಯಾದ ಕಾಲದಲ್ಲಿ ಕ್ರಮ ತೆಗೆದುಕೊಂಡಿದ್ದರೆ ಈ ಮಸೂದೆಯ ಅವಶ್ಯ ಕತೆಯೇ ಇರುತ್ತಿರಲಿಲ್ಲ. 1941ನೇ ಎಜುಕೇಷನ್ ಆಕ್ಟ್ ಪ್ರಕಾರ ಹಿಂದೆ ನಾವು ಏನು ಮಾಡಿದ್ದೆವೋ ಆ ಕಾರ್ಯಕ್ರಮಗಳನ್ನು ವ್ಯಾಲೀಡೇಟ್ ಮಾಡುತ್ತೇವೆಂದು ಹೇಳುತ್ತೀರಿ. ಆದರೆ 1941ನೇ ಇಸವಿಯಿಂದ ಎಷ್ಟೋ ಕೆಲಸಕಾರ್ಯಗಳು ನಡೆದಿವೆ. ಈ ಮಸೂದೆಯ 3ನೇ ಸೆಕ್ಷನ್ ಪ್ರಕಾರ ಪ್ರೈಮರಿ ಎಜುಕೇಷನ್ ಸೆಸ್ ಕಲೆಕ್ಟ್ ಮಾಡುವುದು ಕಾನೂನು ಬಾಹಿರವೆಂದು ನ್ಯಾಯಾಲಯವು ತೀರ್ಪು ಕೊಟ್ಟಿರುವುದರಿಂದ ಅದರ ಬಗ್ಗೆ ರಾಜ್ಯಪಾಲರು ಒಂದು ಆರ್ಡಿನೆನ್ಸನ್ನು ಹೊರಡಿಸಿದ್ದಾರೆ. ಅದನ್ನು ರಿಪ್ಲೇಸ್ ಮಾಡುವುದಕ್ಕೋಸ್ಕರ ಈ ಮಸೂದೆಯನ್ನು ತಂದಿದ್ದೇವೆಂದು ಹೇಳಿದರೆ ಈ ಕಾನೂನು ಅಸ್ತಿತ್ವದಲ್ಲಿಲ್ಲ. ಇದರ ಕೆಳಗೆ ಆಗಿರುವ ಕೆಲಸಕಾರ್ಯಗಳು ಕಾನೂನಿಗೆ ಅನುಗುಣವಾಗಿವೆ, ಅವನ್ನು ವ್ಯಾಲಿಡೇಟ್ ಮಾಡುತ್ತೇವೆಂದು ಮಸೂದೆಯನ್ನು ತಂದಿದ್ದೀರಿ. ಇದು ಎಷ್ಟರಮಟ್ಟಿಗೆ ಕಾನೂನಿಗೆ ಅನುಗುಣವಾಗಿದೆಯೆಂಬುದು ನನಗೆ ಸಂಶಯವಿದೆ. ಇದರಲ್ಲಿ ಔಚಿತ್ಯ ವಿಲ್ಲ. ಈ ಮಸೂದೆಯನ್ನು ತರುವ ಪ್ರಮೇಯವೂ ಇರಲಿಲ್ಲ. ಅವರು ಜಾಗರೂಕರಾಗಿ ಇದು ಕಾನೂನು ಬಾಹಿರವೆಂದು ತೀರ್ಪುಕೊಟ್ಟಮೇಲೆ ಅದಕ್ಕೆ ಒಂದು ಸ್ಪೆಷಲ್ ಲೀವ್ ಹಾಕಿ ಒಂದು ಸ್ಟೇ ಆರ್ಡರನ್ನು ಆ ಕಾರಣದಿಂದ ಪಡೆದಿದ್ದರೆ ಈ ಮಸೂದೆಯ ಅವಶ್ಯಕತೆ ಏನು ಇತ್ತು! ಈ ಅಂತರ ದಲ್ಲಿ ಸುಪ್ರೀಂ ಕೋರ್ಟಿನವರು ತೀರ್ಮಾನ ಕೊಡುವವರೆಗೂ ನಮ್ಮ ರಾಜ್ಯದ ಹೈಕೋರ್ಟ್ ತೀರ್ಪಿನ ಆಧಾರದಮೇಲೆ ಹಣ ರಿಫಂಡ್ ಕೇಳುವ ಅಧಿಕಾರ ಜನರಿಗೆ ಅಥವಾ ಕಂಟ್ರಾಕ್ಟರಿಗೆ ಇರುತ್ತಿರಲಿಲ್ಲ. ಈ ಮಸೂದೆಯನ್ನು ತರುತ್ತೇವೆಂದು ಹೇಳುವುದಕ್ಕೆ ಬದಲಾಗಿ ಅದನ್ನು ಆಗಲೇ ಮಾಡಬಹುದಾಗಿತ್ತು. ಈಗ ತಂದಿರುವ ಮಸೂದೆಯ ಬಗ್ಗೆ ಇವರು ಲಾ ಡಿಪಾರ್ಟ್‌ಮೆಂಟನ್ನು ಕನ್‌ಸಲ್ಟ್ ಮಾಡಿದ್ದೇವೆಂದು ಹೇಳಿದ್ದಾರೆ. ಡಿಸೆಂಬರ್‌ನಲ್ಲಿ ಕೊಟ್ಟಿರತಕ್ಕ ತೀರ್ಪಿನ ಪ್ರಕಾರ ಸುಪ್ರಿಂ ಕೋರ್ಟಿಗೆ ಅಪೀಲು ಹೋಗಿದ್ದೇವೆಂದು ಹೇಳಿದರು. ಆದರೆ ಅವರು ಯಾವಾಗ ಹೋಗಿದ್ದಾರೆ ಎಂಬುದು ನಮ್ಮ ಮುಂದೆ ಇಲ್ಲ. ಸುಪ್ರೀಂ ಕೋರ್ಟಿನವರು ತೀರ್ಮಾನ ಕೊಡುವುದಕ್ಕೆ ಮುಂಚೆ ಈ ಮಸೂದೆಯನ್ನು ತಂದಿರುವುದು ಅಷ್ಟು ಉಚಿತವಾಗಿಲ್ಲ. ಇದು ಕಾನೂನಿಗನುಗುಣವಾಗಿ ಆಗುತ್ತದೋ ಇಲ್ಲವೋ ಎಂಬ ಸಂಶಯ ನನಗಿದೆ. ಈ ದೃಷ್ಟಿಯಿಂದ ಸರ್ಕಾರದವರು ಕಣ್ಣು ಮುಚ್ಚಿಕೊಂಡು, ಶ್ರದ್ಧೆಯಿಲ್ಲದೆ, ಏನೊಂದು ಯೋಚನೆ ಮಾಡದೆ ಮಂದ ಗತಿಯಿಂದ ಮುಂದೆ ಸಾಗುತ್ತಿರುವ ಫಲವಾಗಿ ಇದನ್ನು ತರುತ್ತಿದ್ದಾರೆ. ಯಾವ ಪ್ರಜಾಪ್ರಭುತ್ವ ದಲ್ಲಿಯೇ ಆಗಲೀ ಹಿಂದೆ ಆಗಿಹೋದ ಕೆಲಸಕಾರ್ಯಗಳನ್ನು, ಅದು ಒಳ್ಳೆಯದಾಗಿರಲಿ, ಕೆಟ್ಟದಾಗಿರಲಿ, ಅವುಗಳನ್ನು ಕಾನೂನುಬದ್ಧವಾಗಿ ಮಾಡುತ್ತೇವೆಂದು ಹೇಳಿದರೆ ಒಳ್ಳೆಯದಲ್ಲ. ಅದನ್ನು ವ್ಯಾಲಿಡೇಟ್ ಮಾಡುವುದು ಜನರ ಹಿತದೃಷ್ಟಿಯಿಂದಲ್ಲ; ಕಂಟ್ರಾಕ್ಟರುಗಳ ಹಿತದೃಷ್ಟಿ ಯಿಂದ ಮಾಡುತ್ತಿದ್ದಾರೆ. ನಿರ್ದಿಷ್ಟವಾಗಿ ರಾಷ್ಟ್ರದ ಶ್ರೇಷ್ಠ ನ್ಯಾಯಾಲಯದಲ್ಲಿ ನಿರ್ಣಯ ವಾಗುವ ಮೊದಲು ಈ ರೀತಿ ಮಾಡಬಾರದು ಮತ್ತು ಇದರಿಂದ ಪ್ರಯೋಜನವಾಗುವುದಿಲ್ಲ. ಮಾನ್ಯ ಸಚಿವರು ಹೇಳಿದ ಹಾಗೆ, ಯಾರ್ಯಾರು ದೊಡ್ಡ ಕಂಟ್ರಾಕ್ಟರ್ಸ್ ಇದ್ದಾರೆ ಅವರಿಗೆ ಲಕ್ಷಾನುಗಟ್ಟಲೆ ಹಣ ಹೋಗಬೇಕಾಗಿದೆ, ಅದು ಹೋಗಿದೆ. ಈಗ ಅಲ್ಪಸ್ವಲ್ಪ ಉಳಿದಿದೆ, ಅದನ್ನು ಸಲ್ಲದ ಹಾಗೆ ಮಾಡಬೇಕೆಂದು ಈ ರೀತಿ ತಂದಿದ್ದಾರೆ. ನಮ್ಮ ರಾಜ್ಯದ ಶ್ರೇಷ್ಠ ನ್ಯಾಯಾಲಯದಲ್ಲಿ ಕಾನೂನು ಬಾಹಿರವೆಂದು ತೀರ್ಪು ಮಾಡಿದ್ದಾರೆ. ದೊಡ್ಡ ದೊಡ್ಡ ಬಂಡವಾಳಗಾರರಿಗೆ ಹಣ ಹೋಗಿದೆ. ಚಿಕ್ಕ ಪುಟ್ಟ ಕಂಟ್ರಾಕ್ಟರುಗಳಿಗೆ ಇನ್ನೂ ಹಣ ಹೋಗಿಲ್ಲ. ಈ ದೃಷ್ಟಿಯಿಂದ ಕಾನೂನು ಮಾಡ ತಕ್ಕದ್ದು ಸರಿಯಲ್ಲ. ನಾವು ಇವತ್ತಿನ ದಿವಸ ಹುಚ್ಚರು. ಸರ್ಕಾರದವರು ಏನು ತಂದರೂ ನಾವು ಒಪ್ಪುತ್ತೇವೆ. ಸಾರ್ವಜನಿಕರು ತಮ್ಮ ಅಭಿಪ್ರಾಯದಲ್ಲಿ ಶಾಸಕರೆಂದರೆ, ಕಣ್ಣು ಮುಚ್ಚಿ ಕೊಂಡು ಕೈಎತ್ತುವವರು ಎಂದು ತಿಳಿದುಕೊಂಡಿದ್ದಾರೆ. ಇಷ್ಟು ಹೇಳಿ, ನಾನು ಇದನ್ನು ವಿರೋಧಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

†SRI G. V. GOWDA (Legislative Assembly Constituency) Sir, in democracy it is not proper to circumvent the decision of the High Court. On the other hand, Government should have respected it. In fact, when this education cess was included in the Bill and when the Bill was being discussed, we pointed out that it was an illegal levy and it would be

(SRI G. V. GOWDA)

held by the High Court as illegal and we requested the Government to withdraw the levy. But the Government did not heed to our request. The High Court, however, held it as illegal. It is said that they have gone to the Supreme Court, but as my friend rightly pointed out there was nothing to prevent the Government from obtaining a stay against the operation of the High Court judgment. That they could have easily got, but they did not do that and instead, got an Ordinance promulgated. This is a case where the Governor's power to promulgate Ordinance is again abused : For all sorts of things they get Ordinance issued. What was the urgency ? It is said that because contractors came forward claiming refund of this amount the Government got this Ordinance issued. For that very purpose they could have obtained a stay of the operation of the judgement of the High Court. It is not fair to violate the statutory provisions of law.

Another reason adduced is that the individual consumers who have paid this cess, cannot be identified and so they want to retain this amount. Is it justified ? After all, the contracter has collected the cess and it is his funeral whether he returns it or not. The big contractors and capitalists have obtained refund and now Government are harassing the small contractors. Is it justified ? So I oppose this validation Bill.

†ಶ್ರೀ ಕೆ. ಸೂರ್ಯನಾರಾಯಣ ಅಡಿಗ (ಸ್ಥಾನೀಯ ಪ್ರಾಧಿಕಾರಿ ಕ್ಷೇತ್ರ).—ಮಾನ್ಯ ಸಭಾಪತಿಯವರೇ, ಮಾನ್ಯ ಪ್ರತಿಪಕ್ಷದ ನಾಯಕರು ಇಷ್ಟೆಲ್ಲಾ ಹಣವನ್ನು ದೊಡ್ಡ ದೊಡ್ಡ ಕಂಟ್ರಾಕ್ಟರುಗಳು ತೆಗೆದುಕೊಂಡು ಹೋಗಿದ್ದಾರೆ; ಇನ್ನು ಸಣ್ಣ ಕಂಟ್ರಾಕ್ಟರುಗಳಿಗೆ ಹೋಗುವುದಕ್ಕೆ ಬಿಡಬಾರದು ಎಂದು ಮಾಡಿದ್ದಾರೆಂದು ಹೇಳಿದರು. ಅವರ ಉದ್ದೇಶವೇನೆಂದರೆ, ಹಣ ಕೆಲವರು ಪಡಕೊಂಡಿದ್ದಾರೆ. ಕೆಲವರು ಪಡಕೊಳ್ಳಲಿಲ್ಲ ; ಎಂದು. ಅಂದರೆ ಈ ಹಣವನ್ನು ತಡೆಮಾಡುವ ಉದ್ದೇಶದಿಂದ ಶೀಘ್ರವಾಗಿ ಮಾಡಿದ್ದಾರೆಂದು ಹೇಳಿದರು ; ಮತ್ತು ಸುಪ್ರೀಂ ಕೋರ್ಟಿನಿಂದ ಸ್ಟೇ ತೆಗೆದುಕೊಳ್ಳಬಹುದಿತ್ತು ಎಂದು ಹೇಳಿದರು ; ಮತ್ತು ಕಾನೂನು ಸರಿಯಾಗಿಲ್ಲ, ಲೆವಿ ತೆಗೆದುಕೊಳ್ಳುವುದರಲ್ಲಿ ನ್ಯಾಯವಿಲ್ಲವೆಂದು ಹೇಳಿದರು. ಸ್ಟೇ ಸುಪ್ರೀಂ ಕೋರ್ಟಿಗೆ ಹೋದ ಮೇಲೆ, ಅದು ಅಡ್ಮಿಟ್ ಆದಮೇಲೆ ತೆಗೆದುಕೊಳ್ಳಬೇಕಾಗಿತ್ತು ಎಂದು ಹೇಳಿದರು. ಇವತ್ತು ಹೇಗಿದ್ದರೂ ಸರ್ಕಾರಕ್ಕೆ ಕಾನೂನು ಇದೆ, ಏನಾದರೂ ಇದ್ದರೆ ಅವರು ಹಿಂದಕ್ಕೆ ಪಡೆದುಕೊಳ್ಳುತ್ತಾರೆ.

SrI G. V. ANJANAPPA.—How can the Government take back the amount already refunded? There is no provision for that.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಅದಕ್ಕೆ ಡೀಮಿಂಗ್ ಕ್ಲಾಸ್ ಇದೆ. ಈ ಲೆವಿ ಸರ್ಕಾರದವರು ಮಾಡಿದ್ದು. ನ್ಯಾಯವಾಗಿ ವಸೂಲು ಮಾಡಬಹುದು ಎಂದು ತೀರ್ಮಾನವಾದಮೇಲೆ ಹಿಂದಕ್ಕೆ ಕೇಳಬಹುದು. ಏನಾದರೂ ಪರಮೋಷ ಮಾಡಿದ್ದಾರೆ ಹಿಂದಕ್ಕೆ ತೆಗೆದುಕೊಳ್ಳಬಹುದು. ಹಣವನ್ನು ಯಾರಾದರೂ ಹೊಡಕೊಂಡು ಹೋಗಿದ್ದರೆ, ಅದನ್ನು ಹಿಂದಕ್ಕೆ ಪಡಕೊಳ್ಳುವ ಅವಕಾಶ ಇರಬಹುದು. ವಿರೋಧ ಪಕ್ಷದ ನಾಯಕರು ಹೇಳುತ್ತಾರೆ,—ಇಷ್ಟು ಬುದ್ಧಿವಂತರಾದ ಅಧಿಕಾರಿಗಳು ಸಲಹೆ ಕೊಟ್ಟರೂ ಕೂಡ ಕೋರ್ಟಿನಲ್ಲಿ ತಳ್ಳಿಹಾಕಲ್ಪಡುತ್ತದಲ್ಲ, ಎಂದು. ಅಧಿಕಾರಿಗಳು ಎಷ್ಟು ಬುದ್ಧಿವಂತರು ಇದ್ದರೂ, ಈ ಸೂಕ್ಷ್ಮ ಬುದ್ಧಿಯ ವಕೀಲರು ಅದನ್ನು ಕೋರ್ಟಿನಲ್ಲಿ ಕೈಬಿಡುವಂತೆ ಮಾಡುತ್ತಾರೆ. ಎಷ್ಟೋ ಬುದ್ಧಿವಂತರು ಲೂಪ್‌ಹೋಲ್ಸ್ ಇಲ್ಲವೆಂದು ಹೇಳಿದರೂ ಕೂಡ ಅದು ಹೈಕೋರ್ಟಿನಲ್ಲಿ ಒಂದಲ್ಲ ಒಂದು ವಿಚಾರದಲ್ಲಿ ಕೆಳಗೆ ಬಿದ್ದು ಹೋಗುತ್ತದೆ.

ಶ್ರೀ ಜಿ. ವಿ. ಅಂಜನಪ್ಪ.—ಮಾನ್ಯ ಶಿಕ್ಷಣ ಮಂತ್ರಿಯವರು ಹೇಳಿದರು ಸರ್ಕಾರದ ಆಜ್ಞೆಯ ಮೇಲೆ ನ್ಯಾಯಾಲಯದವರು......

ಶ್ರೀ ಎಸ್. ಎಂ. ಕೊಟ್ರಬಸಯ್ಯ ಸೋಗಿ.—ಹಾಗೆ ಹೇಳಿಲ್ಲ. What is stated here is "on which education cess is now being levied." When the 1941 Act came into force at that time education cess was not being levied on excise revenue. So on the basis of that, the High Court has held that if education cess is not levied on excise revenue like toddy, etc., then this cess is illegal. But the High Court has not struck down the entire Act.

MR. DEPUTY CHAIRMAN.—The discussion will be continued after recess. The House will now adjourn and meet after half-an-hour.

The House rose for tea at Four of the Clock and re-assembled at Thirty-Five Minutes past Four of the Clock.

[Mr. DEPUTY CHAIRMAN in the Chair]

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಮಾನ್ಯ ಸಭಾಪತಿಗಳೇ, ಈ ಮಸೂದೆಯಮೇಲೆ ಮಾತನಾಡುತ್ತಾ ಶ್ರೀಮಾನ್ ಜಿ. ವಿ. ಗೌಡರು ಒಂದು ಮಾತನ್ನು ಹೇಳಿದರು. ಅದೇನೆಂದರೆ ಹೈಕೋರ್ಟಿನ ತೀರ್ಪಿಗೆ ವಿರುದ್ಧವಾಗಿ ಈ ತಿದ್ದುಪಡಿ ಮಸೂದೆಯನ್ನು ಸರ್ಕಾರದವರು ತಂದಿದ್ದಾರೆ ಎಂದು. ಅದನ್ನು ನಾನು ವಿರೋಧಿಸುತ್ತೇನೆ. ಅವರ ವಾದವನ್ನು ನಾನು ಒಪ್ಪುವುದಿಲ್ಲ. ಸಕಾರಕ್ಕೆ ಆದಾಯ ಬರುವಂತೆ ಮಾಡುವ ದೃಷ್ಟಿಯಿಂದ ಎಜುಕೇಷನ್ ಲೆವಿ ಹಾಕಿದರು. ಅದು ಹೈಕೋರ್ಟಿಗೆ ಹೋಗಿ ಸ್ಟ್ರಕ್‌ಡೌನ್ ಆಯಿತು. ಇದು ಈಗ ಸುಪ್ರೀಮ್ ಕೋರ್ಟಿಗೆ ಹೋಗುವ ಸಂಧರ್ಭಇದೆ. ಹೈಕೋರ್ಟ್ ತೀರ್ಪು ಬಂದನಂತರ ಕಂಟ್ರಾಕ್ಟ್‌ದಾರರಿಗೆ ಹಣವನ್ನು ವಾಪಸ್ಸು ಕೊಡದಂತೆ ಆರ್ಡಿನೆನ್ಸ್ ಹೊರಡಿಸಿದ್ದರು. ಈಗ ಒಂದು ತಿದ್ದುಪಡಿ ಮಸೂದೆಯನ್ನು ತಂದು ಆ ಕಾನೂನಿನಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇಂಥಾ ಪ್ರಸಂಗಗಳು ಹಿಂದೆ ಎಷ್ಟೋ ಆಗಿವೆ. ಈರೀತಿ ಆಗಿರುವುದು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ. ಬೇರೆ ರಾಜ್ಯದಲ್ಲಿಯೂ ಸಹ ಈರೀತಿ ಆಗಿದೆ. ಈ ದೃಷ್ಟಿಯಿಂದ ನಮ್ಮ ವಿರೋಧಪಕ್ಷದ ಮಾನ್ಯ ಸದಸ್ಯರು ಈ ಮಸೂದೆಯ ವಿಚಾರದಲ್ಲಿ ಏನು ಹೇಳಿದರು ಅವರ ವಾದ ಸರಿಯಿಲ್ಲ. ಕಾನೂನಿನ ಲೋಪದೋಷಗಳಿಂದ ಈ ಒಂದು ಎಜುಕೇಷನ್ ಸೆಸ್ ವಿಧಿಸುವಂತಹ ಹಕ್ಕು ಹೈಕೋರ್ಟಿನಲ್ಲಿ ಸ್ಟ್ರಕ್‌ಡೌನ್ ಆಯಿತು. ಅದನ್ನು ಸರಿಪಡಿಸುವಂಥಾದ್ದು ಸರ್ಕಾರದ ಕರ್ತವ್ಯ. ಆದಕಾರಣ ಈಗ ಈ ತಿದ್ದುಪಡಿ ಮಸೂದೆಯನ್ನು ಈ ಸಭೆಯ ಮುಂದೆ ತಂದಿದ್ದಾರೆ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಮತ್ತು ಈ ಮಸೂದೆಗೆ ನನ್ನ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇನೆ.

†ಶ್ರೀ ಎ. ಕೆ. ಸುಬ್ಬಯ್ಯ (ಪದವೀಧರರ ಕ್ಷೇತ್ರ).—ಸ್ವಾಮಿ ಈಗ ಈ ಸಭೆಯಮುಂದೆ ಸರ್ಕಾರದವರು ತಂದಿರತಕ್ಕ ಮೈಸೂರು ಎಜುಕೇಷನ್ ಸೆಸ್ ವ್ಯಾಲಿಡೇಷನ್ ಬಿಲ್ 1969 ಏನಿದೆ ಇದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಕಾರಣವೇನೆಂದರೆ ಒಂದು ವರ್ಗದವರಿಗೆ ಅನ್ಯಾಯವಾಯಿತು ಎಂದು ಆ ಅನ್ಯಾಯವನ್ನು ಸರಿಪಡಿಸುವುದಕ್ಕೆ ಕೋರ್ಟಿಗೆ ಹೋಗುತ್ತಾರೆ. ಸಾಮಾನ್ಯವಾಗಿ ಪ್ರಜಾಪ್ರಭುತ್ವದಲ್ಲಿ ನ್ಯಾಯ ಎಲ್ಲಿ ಸಿಕ್ಕದಿದ್ದರೂ ಕೋರ್ಟಿಗೆ ಹೋಗುತ್ತಾರೆ. ಕೋರ್ಟಿನಲ್ಲಿ ನ್ಯಾಯಸಿಕ್ಕುತ್ತದೆ ಎನ್ನುವ ನಂಬಿಕೆ ಸರ್ವೇ ಸಾಮಾನ್ಯವಾಗಿ ಜನಗಳಿಗೆ ಇರುತ್ತದೆ. ಇಲಾಖೆಯಲ್ಲಿ ನ್ಯಾಯ ಸಿಕ್ಕಲಿಲ್ಲ, ಇನ್ನೊಂದು ಕಡೆ ನ್ಯಾಯ ಸಿಕ್ಕಲಿಲ್ಲ ಎಂದು ಅನೇಕರು ಹೈಕೋರ್ಟಿಗೆ ಹೋಗುತ್ತಾರೆ. ಪ್ರಜಾಪ್ರಭುತ್ವದಲ್ಲಿ ಇದು ಸಾಮಾನ್ಯವಾಗಿ ನಡೆಯುತ್ತದೆ. ಪ್ರಜಾಪ್ರಭುತ್ವದಲ್ಲಿ ಸಾಮಾನ್ಯ ಪ್ರಜೆಗೆ ನ್ಯಾಯ ಸಿಕ್ಕಬೇಕು. ಪ್ರಜಾಪ್ರಭುತ್ವದಲ್ಲಿ ಯಾರಿಗಾದರೂ ಏನಾದರೂ ಅನ್ಯಾಯವಾಗಿದ್ದರೆ ಅದನ್ನು ಹೈಕೋರ್ಟ್ ಸರಿಪಡಿಸುವಂಥಾದ್ದಾಗಿದೆ.. ಹೈಕೋರ್ಟ

(ಶ್ರೀ ಎ. ಕೆ. ಸುಬ್ಬಯ್ಯ)

ನವರು ಈರೀತಿ ಸರ್ಕಾರದವರು ಎಜುಕೇಷನ್ ಸೆಸ್ ವಸೂಲು ಮಾಡುವಂಥಾದ್ದು ಸರಿಯಲ್ಲ, ಅದು ಅನ್ಯಾಯ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಹೇಳಿ ಎಜುಕೇಷನ್ ಸೆಸ್ ಹಾಕಿದ್ದನ್ನು ರದ್ದು ಪಡಿಸಿದ್ದಾರೆ. ಆದರೆ ಈಗ ಸರ್ಕಾರದವರು ನ್ಯಾಯಾಲಯದ ತೀರ್ಪಿನಮೇಲೆ ಕಾಯಿದೆಯನ್ನು ತಿದ್ದುಪಡಿ ಮಾಡಿ ಒಂದು ಮಸೂದೆಯನ್ನು ಈ ಸಭೆಯಮುಂದೆ ತಂದಿದ್ದಾರೆ. ಈರೀತಿ ಸರ್ಕಾರದವರು ಈಗ ಈ ಒಂದು ತಿದ್ದುಪಡಿ ಮಸೂದೆಯನ್ನು ತಂದಿರುವುದು ಪ್ರಜಾಪ್ರಭುತ್ವಕ್ಕೆ ಅಪಚಾರವಾದಂತಾಗಿದೆ, ನ್ಯಾಯಾಲಯಕ್ಕೆ ಅಪಚಾರವಾದಂತಾಗಿದೆ, ಮತ್ತು ಈ ಮಾನ್ಯ ಸಭೆಯ ಅಮೂಲ್ಯವಾದ ಸಮಯವನ್ನು ದುರುಪಯೋಗ ಮಾಡಿದಂತಾಗಿದೆ ಎನಿಸುತ್ತದೆ. ಈರೀತಿ ಮಾಡುತ್ತ ಹೋದರೆ ಸರ್ಕಾರದ ಬಗ್ಗೆ ಜನತೆಗೆ ವಿಶ್ವಾಸ ಉಳಿಯುವುದಿಲ್ಲ. ಕೋರ್ಟಿಗೆ ಜನ ಏತಕ್ಕೆ ಹೋಗುತ್ತಾರೆ! ತಮಗೆ ಯಾವಾಗ ಸರಿಯಾಗಿ ನ್ಯಾಯ ಸಿಕ್ಕಲಿಲ್ಲ ಆಗ ನ್ಯಾಯವನ್ನು ದೊರಕಿಸಿಕೊಳ್ಳುವ ದೃಷ್ಟಿಯಿಂದ ಅವರು ಕೋರ್ಟಿಗೆ ಹೋಗುತ್ತಾರೆ. ಹೀಗಿರುವಾಗ ನ್ಯಾಯಾಲಯದ ತೀರ್ಪಿನಮೇಲೆ ಕಾಯಿದೆಯನ್ನು ತಿದ್ದುಪಡಿ ಮಾಡುವುದು ಪ್ರಜಾಪ್ರಭುತ್ವಕ್ಕೆ ವಿರೋಧ. ಯಾವುದನ್ನು ಹೈಕೋರ್ಟಿನವರು ಅನ್ಯಾಯ ಎಂದು ಹೇಳಿದ್ದಾರೆಯೋ ಅದನ್ನು ನ್ಯಾಯ ಎಂದು ಮಾಡುವುದಕ್ಕೋಸ್ಕರ ಒಂದು ಮಸೂದೆಯನ್ನು ತಂದು ಅದಕ್ಕೆ ಈ ಸಭೆಯ ಸಮಯವನ್ನು ಉಪಯೋಗಿಸುವಂಥಾದ್ದು ಸರಿಯಲ್ಲ, ಮತ್ತು ಇದರಿಂದ ಸರ್ಕಾರದ ಬೊಕ್ಕಸವನ್ನು ದುರುಪಯೋಗ ಮಾಡಿದಂತಾಗುತ್ತದೆ. ರಾಜ್ಯದ ಉಚ್ಚ ನ್ಯಾಯಾಲಯಕ್ಕೂ ಅಪಚಾರ ಮಾಡಿದಂತಾಗುತ್ತದೆ. ಆದ್ದರಿಂದ ಈ ಮಸೂದೆಯನ್ನು ನಾನು ತೀವ್ರವಾಗಿ ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಬಂದೀಗೌಡ. (ಉಪಾಧ್ಯಾಯರ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀಮಾನ್ ಎ. ಕೆ. ಸುಬ್ಬಯ್ಯನವರು ಈ ಮಸೂದೆಯಮೇಲೆ ಮಾತನಾಡುತ್ತಾ ಇಂಥಾ ವಿಷಯಗಳಿಗೋಸ್ಕರ ಇಲ್ಲಿ ಚರ್ಚೆ ನಡೆಸುವುದು ಸಮಯದ ದುರುಪಯೋಗ ಎಂದು ಹೇಳಿದರು. ಅದು ಸರಿಯಲ್ಲ. ಇಂಥಾ ವಿಷಯಗಳನ್ನು ಚರ್ಚೆ ಮಾಡುವುದಕ್ಕೇ ಈ ಸಭೆ ಇರುವುದು. ಇಂಥಾ ಮಸೂದೆಯನ್ನು ಈ ಸಭೆಯಮುಂದೆ ತಂದಿರುವುದು ನ್ಯಾಯಾಲಯಕ್ಕೆ ಅಪಚಾರವಾದಂತಾಗುತ್ತದೆ ಎಂದು ಹೇಳಿದರು ಅದು ಸರಿಯಲ್ಲ. ಯಾವ ಒಂದು ಅಧಿನಿಯಮವನ್ನು ಅನುಸರಿಸಿ ಸರ್ಕಾರದವರು ಕೆಲಸ ಮಾಡಬೇಕಾಗಿತ್ತೋ ಆ ರೀತಿ ಮಾಡಿಲ್ಲ. ಈ ಕಾನೂನಿನಲ್ಲಿ ಇದ್ದಂತಹ ಲೋಪವನ್ನು ಸರ್ಕಾರಕ್ಕೆ ಎತ್ತಿ ತೋರಿಸಿಕೊಟ್ಟಿದ್ದಾರೆ. ಸರ್ಕಾರವಾಗಲೀ, ಶಾಸನ ಸಭೆಯವರಾಗಲೀ ಒಂದು ತೀರ್ಮಾನಕ್ಕೆ ಬರುವಾಗ ರಾಜ್ಯದಲ್ಲಿ ಇದ್ದಂತಹ ಕೇವಲಿಗೆ ಅಲ್ಪಸ್ವಲ್ಪ ತೊಂದರೆಯಾದರೂ ಕೂಡ ಎಲ್ಲಾ ಜನಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ಕಾನೂನು ಮಾಡಬೇಕಾಗುತ್ತದೆ. ಆದ್ದರಿಂದ ಅಂಥಾ ಒಂದು ಮಹೋದ್ದೇಶವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದವರು ಈ ತಿದ್ದುಪಡಿಯನ್ನು ಈ ಸಭೆಯಮುಂದೆ ತಂದಿದ್ದಾರೆ. ಈ ದೃಷ್ಟಿಯಿಂದ ಇದು ಸಾಧುವಾಗಿದೆ. ಇದಕ್ಕೆ ಬೆಂಬಲಕೊಡುವುದು ಸೂಕ್ತವಾಗಿದೆ.

Sri M. LINGANNA (Lacal Authorities' Constituency).—Mr. Deputy Chairman Sir, it is said that this particular law relating to the education cess should not have been amended but the Government could have respected the decision of the High Court. One point I would like to mention in this connection is that the decision of the High Court was that the law on this matter was not consistent with the Constitution and therefore it was invalid. But that does not mean that it should not be rectified by the Lagislature again. The Legislature is paramount to make laws and rectifiy the laws wherever some lacuna is found. Therefore the impression created by some hon. members that once a High Court declares a law to be invalid and is not correct the decision of the High Court does not mean that the Legislature has no power to rectify the defects.

The present bill after all relates to the collection of cess so far as education is concerned. Though we have spent nearly 30 per cent. of

the State Exchequr's money we are still lagging behind in making every citizen of the State educated. I feel that this cess on education shall not be questioned by any representative worth the name.

Sri A. K. SUBBAIAH.—It is a bill introduced here to validate the Act which is otherwise declared as invalid by the High Court.

Sri M. LINGANNA.—Sir, any illegality found in any law has got to be rectified and this House, as well as the lower House, is quite competent to do it.

Sir, so far as the cess on education it concerned, I feel, it is perfectly in order and it is also stated in the bill that no amount should be refunded. In the statement of objects and reasons it is also stated that the State Government has preferred an appeal against this judgement. In the wake of what has been stated in the statement of objects and reasons the House could pass this bill and put an end to the illegality pointed out by the High Court. I once again stress that this House as also the Lower House is paramount and fully competent to rectify the illegality in any law found or pointed out by the High Court. With these words, I thank the Chair and conclude.

Mr. DEPUTY CHAIRMAN.—The hon. Deputy Minister to reply to the debate.

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸಭಾಪತಿಗಳೇ, ಈ ಮಸೂದೆಯ ಮೇಲೆ ಇದುವರೆಗೆ ಮಾತನಾಡಿದ ಸದಸ್ಯರೆಲ್ಲರೂ ಒಂದು ಹೊಸಬೆಳಕನ್ನು ಬೀರಿದ್ದಾರೆಂದು ಹೇಳಬಹುದು. ಕೆಲವು ಸದಸ್ಯರು ವಿಚಾರಪೂರ್ಣವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಸದಸ್ಯರುಗಳು ಸ್ವಾಗತ ಮಾಡಿದ್ದಾರೆ. ಮತ್ತೆ ಕೆಲವು ಸದಸ್ಯರು ಟೆಕ್ನಿಕಲ್ ಅಬ್ಜಕ್ಷನ್ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಮೈಸೂರು ಎಲಿಮೆಂಟರಿ ಎಜುಕೇಷನ್ ಆಕ್ಟ್, 1941ರಲ್ಲಿ ಎಜುಕೇಷನ್ ಸೆಸನ್ನು tree-tax, tree-rent and shop-rentals in respect of toddy, arrack and beer—ಮೇಲೆ ಹಾಕುವುದಕ್ಕೆ ಅವಕಾಶವಿದೆ. ಮೊದಲು ಈ ವಸ್ತುಗಳ ಮೇಲೆ ಹಾಕುವ ತೆರಿಗೆಯಮೇಲೆ ಎಜುಕೇಷನ್ ಸೆಸ್ಸನ್ನು ಹಾಕಬಾರದೆಂಬ ಧೋರಣೆ ಸರ್ಕಾರಕ್ಕೆ ಇತ್ತು. ಪಾನನಿರೋಧವನ್ನು ಸಡಿಲಗೊಳಿಸಿದಮೇಲೆ ಮತ್ತೆ ಎಜುಕೇಷನ್ ಸೆಸ್ಸನ್ನು ಹಾಕಲು ಸರ್ಕಾರ ತೀರ್ಮಾನ ಮಾಡಿತು. ಆ ತೀರ್ಮಾನದ ವಿರುದ್ಧ ಕೆಲವರು ಹೈಕೋರ್ಟಿಗೆ ಹೋದರು. ಹೈಕೋರ್ಟಿನವರು ಆ ರೀತಿ ಹಾಕುವುದು ಸರಿಯಲ್ಲ, ಹಣವನ್ನು ವಾಪಸ್ ಮಾಡಬೇಕೆಂದು ತೀರ್ಮಾನ ಕೊಟ್ಟರು. ಹೈಕೋರ್ಟಿನ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ. ಮತ್ತು ಹೈಕೋರ್ಟಿನ ತೀರ್ಪಿನವಿರುದ್ಧವಾಗಿ ಸುಪ್ರೀಂ ಕೋರ್ಟಿಗೂ ಸಹ ಹೋಗಿದ್ದೇವೆ. ಸುಪ್ರೀಂ ಕೋರ್ಟಿನಲ್ಲಿ ಈ ಕೇಸ್ ತೀರ್ಮಾನವಾಗುವವರೆಗೂ ನಾವು ಹೈಕೋರ್ಟಿನ ತೀರ್ಪಿಗೆ ಬದ್ಧರಾಗಿದ್ದೇವೆ. ಯಾವ ಒಂದು ದುರುದ್ದೇಶವನ್ನು ಇಟ್ಟುಕೊಂಡು ನಾವು ಈ ತಿದ್ದುಪಡಿಯನ್ನು ತಂದಿಲ್ಲ. ಇರುವ ಲೋಪದೋಷಗಳನ್ನು ಸರಿಪಡಿಸಲು ಇದನ್ನು ತರಲಾಗಿದೆ. ರಾಜ್ಯದ ಜನರಿಗೆ ಅಹಿತ ಮಾಡಬೇಕೆಂದು ಇದನ್ನು ತಂದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಅಂಜನಪ್ಪನವರು ಒಂದು ಅನುಮಾನವನ್ನು ವ್ಯಕ್ತಪಡಿಸಿದರು. ಜಾರಿಯಲ್ಲಿ ಇರದೇ ಇರತಕ್ಕಂಥ ಕಾಯಿದೆಯ ಬಗ್ಗೆ ತಿದ್ದುಪಡಿಯನ್ನು ತರಬಹುದೇ ಎಂದು. ಮೈಸೂರಿನ ಜನರಲ್ ಆಕ್ಟ್‌ನ ಸೆಕ್ಷನ್ 6ರಲ್ಲಿ ಹೇಳಿರುವ ಪ್ರಕಾರ ರಿಪೀಲ್ ಆದರೂ ಕೂಡ ತಿದ್ದುಪಡಿ ತರುವುದಕ್ಕೆ ಅವಕಾಶವಿದೆ. ಆದಕಾರಣ ಕಾಯಿದೆಯ ಪ್ರಕಾರ ಈ ತಿದ್ದುಪಡಿ ತಂದಿರುವುದು ಸರಿಯಾಗಿದೆಯೆಂದು ಹೇಳಲು ಇಷ್ಟಪಡುತ್ತೇನೆ. ಹೈಕೋರ್ಟಿನ ತೀರ್ಪಿನ ಪ್ರಕಾರ ಕಂಟ್ರಾಕ್ಟುದಾರರಿಗೆ ಹಣವನ್ನು ವಾಪಸ್ ಮಾಡಬೇಕಾಗಿತ್ತು. ಆ ರೀತಿ ಹಣವನ್ನು ವಾಪಸ್ ಮಾಡಿದರೆ ಬಡಜನರ ಹಿತವನ್ನು ಸಾಧನೆ ಮಾಡುವುದಕ್ಕಾಗುವುದಿಲ್ಲವೆಂದು ತಿಳಿದುಕೊಂಡು ಈ ಒಂದು ತಿದ್ದುಪಡಿಯನ್ನು ತರಬೇಕಾಯಿತು. ಸಾಮಾನ್ಯ ಜನರಿಗೆ ಈ ಹಣವನ್ನು ಹಂಚಬೇಕೆಂಬ ಉದ್ದೇಶದಿಂದ ಇದನ್ನು ತರಲಾಗಿದೆ. ಕೆಲವು ಮಾನ್ಯ ಸದಸ್ಯರು ಈ ಬಿಲ್ಲಿನ ಬಗ್ಗೆ ಆಸಕ್ತಿವಹಿಸಿ ಮಾತನಾಡಿದ್ದಕ್ಕೆ ಅವರನ್ನು ಅಭಿನಂದಿಸುತ್ತೇನೆ. ಅನೇಕ ಮಾನ್ಯ

(ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ)

ಸದಸ್ಯರು ಇದನ್ನು ಸ್ವಾಗತ ಮಾಡಿದ್ದಾರೆ. ಕೊನೆಯದಾಗಿ ಮಾನ್ಯಸದಸ್ಯರೆಲ್ಲರೂ ಕೂಡ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Mr. DEPUTY CHAIRMAN.—The question is :

"That the Mysore Education Cess (Validation of Levy) Bill, 1969, as passed by the Legislative Assembly, be taken into consideration."

The motion was adopted.

CLAUSES

Mr. DEPUTY CHAIRMAN.—The question is :

"That clauses 2 to 4 both inclusive do stand part of the Bill."

The motion was adopted.

Clauses 2 to 4 both inclusive were added to the Bill.

Mr. DEPUTY CHAIRMAN.—The question is :

"That clause 1, the Long Title and the Enacting Formula do stand part of the Bill."

The motion was adopted.

Clause 1, the Long Title and the Enacting Formula were added to the Bill.

Motion to pass

Sri N. M. KOTRABASAIAH SOGI.—I beg to move.

"That the Mysore Education Cess (Validation of Levy) Bill, 1969 as passed by the Mysore Legislative Assembly, be passed."

Mr. DEPUTY CHAIRMAN —The question is.

"That the Mysore Education Cess (Validation of Levy) Bill, 1969, as passed by the Mysore Legislative Assmbly, be passed."

The motion as adopted.

Mysore Sales Tax (Amendment) Bill, 1969,

(as Passed by the Legislative Assembly)

Motion to Consider

SRI RAMAKRISHNA HEGDE.—Sir, I beg to move:

"That the Mysore Sales Tax (Amendment) Bill, 1969, as passed by the Mysore Legislative Assembly, be taken into consideration."

MR. DEPUTY CHAIRMAN.—Motion Moved.

"That the Mysore Sales Tax (Amendment) Bill, 1969, as passed by the Mysore Legislative Assembly, be taken into consideration."

SRI RAMAKRISHNA HEGDE.—I would like to say a few words. Arrack, which is sold by the Government to licensed contractors falls under entry No. 39 of the Second Schedule and was taxable at 6½ per cent. With effect from 1st April 1966 excise duty paid by the sellers came to be included in the taxable turnover consequent on the deletion of Rule 6 (4) (j) of the M. S. T. Rules which originally provided for the deduction of excise duty from the taxable turnover. Accordingly, the Excise Commissioner issued instructions to Tahsildars to collect tax on the total price inclusive of excise duty and Health and Education Cesses while selling arrack. But the High Court in D. Cowasjee's case reported in Law Reports Vol. 16, page 641 held that the excise duty and the Health and Education Cesses were separate levies and did not form part of the sale price while the arrack was being sold by the Government and therefore Sales Tax was recoverable only on the basic sale price. Following this decision huge amounts representing the tax collected by the Government on excise duty and Health and Education Cesses portion were rendered refundable. As the intention of the Government was to collect a higher amount per litre as sales tax and actually had already collected such higher amounts, it became necessary to increase the rate of tax from 6½ per cent originally chargeable on the total amount of sale price to 45 per cent only on the basic sale price, to effectuate that intention. In other words the revised rate of 45 per cent would be charged on the basic price only while the old rate of 6½ per cent had been charged on the entire sale price including duty and cesses. This enhancement in rate enables the Government to retain the Sales Tax already collected, notwithstanding the High Court decision.

The purpose and effect of this amendment is only to prevent refund of huge amounts to the contractors and the question of collecting huge amounts from the contractors now for the past periods is not there. However, there may be a few cases where, consequent on stay orders granted by the High Court, the higher amounts (*Viz.*, Sales Tax on the sale price inclusive of duty and cesses) had not been collected. Only

(SRI RAMAKRISHNA HEGDE)

in such cases the Government will have to take a view on the basis of merit of each case.

In the statement of objects and reasons, the position has been made absolutely clear. The intention of the Government is not to levy this enhanced sales tax for the previous year or with retrospective effect.

†ಶ್ರೀ ಜಿ. ವಿ. ಅಂಜನಪ್ಪ.—ಮಾನ್ಯ ಸಭಾಪತಿಗಳೇ, ಮೈಸೂರು ಸೇಲ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್, 1969 ಇದನ್ನು ನಾನು ವಿರೋಧಿಸುತ್ತೇನೆ. ಕೆಲವು ನಿಮಿಷಗಳ ಹಿಂದೆ ಮಾನ್ಯ ಮಂತ್ರಿಗಳು ಹೇಳಿದ ವಾದವನ್ನು ಮತ್ತೆ ಪುನರ್ವಿಚಾರ ಮಾಡಬೇಕಾಗಿದೆ. ಏಕೆಂದರೆ ಸೇಲ್ಸ್ ಟ್ಯಾಕ್ಸ್ ಶೇಕಡಾ ಆರೂವರೆಯಂತೆ ಇದ್ದುದು ಇಂದು ಶೇಕಡಾ 45ರ ವರೆಗೆ ಏರಿಸಬೇಕು ಎಂದು ಸರಕಾರದ ನಿರ್ಧಾರವಾಗಿದೆ ಎಂದು ಈ ಮಸೂದೆಯಲ್ಲಿ ಹೇಳಿದ್ದಾರೆ. ಇದಕ್ಕೆ ಕಾರಣ ಮಾನ್ಯ ಅರ್ಥಸಚಿವರು ರಾಜ್ಯದಲ್ಲಿ ಟ್ಯಾಕ್ಸ್‌ಗಳನ್ನು ಹಾಕುವಾಗ ಎಕ್ಸೈಜು ಡ್ಯೂಟಿಯನ್ನು ಸೇರಿಸಿ ವಸೂಲು ಮಾಡಿರುವುದು ಸರಿಯಾಗಿಲ್ಲ, ಎಕ್ಸೈಜು ಡ್ಯೂಟಿಯನ್ನು ವಾಪಸು ಕೊಡಬೇಕಾಗುತ್ತದೆ ಎಂದು ಹೈಕೋರ್ಟು ತೀರ್ಮಾನ ಮಾಡಿದ್ದಾರೆ. ಆ ಹಣವನ್ನು ವಾಪಸು ಕೊಡದೆ ಇರುವುದಕ್ಕಾಗಿಯೇ ಈ ಮಸೂದೆ ತಂದಿದ್ದಾರೆ ಎಂದು ಇಲ್ಲ ಅಪ್ಪಣೆ ಕೊಡಿಸಿದರು. ಇದರಲ್ಲಿರುವ ಸ್ಟೇಟ್‌ಮೆಂಟ್ ಆಫ್ ಅಬ್ಜಕ್ಟ್ಸ್ ಅಂಡ ರೀಸನ್ಸ್‌ನಲ್ಲಿ ಈ ತಿದ್ದುಪಡಿಯಿಂದ ರಾಜ್ಯಕ್ಕೆ ಎಷ್ಟು ವರಮಾನ ಬರಬಹುದು ಮತ್ತು ಶ್ರೇಷ್ಠ ನ್ಯಾಯಾಲಯದ ತೀರ್ಪಿನಂತೆ ಎಷ್ಟು ವಾಪಸು ಕೊಡಬೇಕಾಗಿ ಬರಬಹುದು ಎನ್ನುವ ವಿವರಗಳನ್ನು ಇದರಲ್ಲಿ ನಮೂದು ಮಾಡಿಲ್ಲ. ಶೇಕಡ ಆರೂವರೆಯಿಂದ ಶೇಕಡ 45ರ ವರೆಗೆ ಏರಿಸುವ ತಿದ್ದುಪಡಿ ಮಸೂದೆ ಕಾನೂನಿಂದ ರಾಜ್ಯದ ಬೊಕ್ಕಸಕ್ಕೆ ಎಷ್ಟು ಆದಾಯ ಬರುತ್ತದೆ ಎನ್ನುವುದನ್ನೂ ಇದರಲ್ಲಿ ನಮೂದು ಮಾಡಿಲ್ಲ. ಈ ದೃಷ್ಟಿಯಿಂದ ಈ ಮಸೂದೆಯನ್ನು ವಿರೋಧಿಸುತ್ತೇನೆ. ಮತ್ತೆ ಪ್ರಜಾಪ್ರಭುತ್ವದಲ್ಲಿ ಜನಗಳು ಶ್ರೇಷ್ಠ ನ್ಯಾಯಾಲಯದ ತೀರ್ಪನ್ನು ತಪ್ಪಿಸಿಕೊಳ್ಳುವ ಸಲುವಾಗಿ ಇನ್ನೊಂದು ಬಾಗಿಲಿನಿಂದ ಶಾಸಕರಿಗೆ ಕಾನೂನು ಮಾಡುವ ಅಧಿಕಾರ ಇದೆ ಎಂದು ತಂದಿರುವ ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಇಂತಹ ತಿದ್ದುಪಡಿ ಕಾನೂನು ತರುವುದು ಯಾವ ಸರ್ಕಾರಕ್ಕೂ ಭೂಷಣವಲ್ಲ. ಪ್ರಜಾಪ್ರಭುತ್ವದಲ್ಲಿ ಶಾಸನ ಸರಿಯಾಗಿದೆಯೋ ತಪ್ಪು ಆಗಿವೆಯೋ ಎನ್ನುವುದರ ಬಗ್ಗೆ ತೀರ್ಮಾನ ಕೊಡಲು ನ್ಯಾಯಾಲಯಗಳಿಗೆ ರಾಜ್ಯಾಂಗ ಬದ್ಧವಾಗಿ ಇರುವ ಕರ್ತವ್ಯ. ಇದಕ್ಕಾಗಿ ಕೋರ್ಟುಗಳು ಯಾವ ತೀರ್ಪನ್ನು ಕೊಡುತ್ತವೋ ಅದರಂತೆ ಅನುಸರಿಸಬೇಕು. ಈ ಶಾಸನದ ಬಗ್ಗೆ ಹೈ ಕೋರ್ಟಿನವರು ಒಂದು ತೀರ್ಮಾನ ಕೊಟ್ಟರು ಎಂದು ಇನ್ನೊಂದು ರೀತಿಯಲ್ಲಿ ಅದನ್ನು ಸರಕಂವೆಂಟ್ ಮಾಡಿಕೊಂಡು ವ್ಯಾಲಿಡೇಟ್ ಮಾಡುವ ವಿಧೇಯಕ ತರುವುದು ಸರಿಯಲ್ಲ. ಈ ದೇಶದಲ್ಲಿರುವ ಹೈ ಕೋರ್ಟಿನಲ್ಲಿ ಸರಕಾರಕ್ಕೆ ನ್ಯಾಯ ದೊರಕದೇ ಹೋದರೆ ಮುಂದೆ ಸುಪ್ರೀಂ ಕೋರ್ಟಿಗೆ ಏತಕ್ಕಾಗಿ ಹೋಗಲಿಲ್ಲ? ಅದೇನೂ ಮಾಡದೇ ಇಲ್ಲಿ ವಸೂಲಾಗಿರುವ ಹಣವನ್ನು ವಾಪಸು ಕೊಡಬೇಕಾಗುತ್ತದೆ ಎಂದು ಹೇಳಿ ಇಲ್ಲಿ ಇಂತಹ ಒಂದು ತಿದ್ದುಪಡಿ ಮಸೂದೆ ತರುವುದು ಅಷ್ಟು ಉಚಿತವಲ್ಲ ಎಂದು ಸೂಚನೆ ಮಾಡಲು ಇಚ್ಛಿಸುತ್ತೇನೆ.

SRI G. V. GOWDA — Mr. Chairman Sir, it is very unfortunate that this year has become the year of ordinances. We have already passed a Bill replacing an ordinance. Again, this Bill has come up for replacing the ordinance No. 3.

5-00 P.M.

Sir, as my friend observed, flouting the decision of the High Court itself is anti-democratic and inconsistent with the principles of natural justice. Sir, commonsense would reveal that sales tax would be levied on selling price or purchase price. How could you levy sales-tax on excise duty? Therefore, quite rightly the High Court has held that it is not proper. I do not know which particular department deleted

that rule. It is understandable to every one that excise duty cannot be taxed. Such being the case, it is apparent on the face of it that it is illegal and the High Court have correctly held that it is illegal. Why should the Government resort to retain the money illegally collected because, Government have not appealed against that order of the High Court and therefore, it amounts to an admission on the part of the Government that it is illegal. The Government could have raised this money by some other means. They could have enhanced the tax itself by amending the Act instead of validating what has already been held illegal and trying to retain that money which is not proper. When we point out to people that they are exploiting, they are making money illegally, why should the Government be a party to such transactions ? If the Government is in need of money, there are ways and means of collecting money. Sir, Government have enhanced the tax from 6¼ per cent to 45 per cent which is more than 350 per cent. I do not know whether that would be fair. Whatever it may be, it should have been done in the ordinary course of business—not by resorting to ordinance and abusing the power vested in the Government.

ಶ್ರೀ ಎ. ಕೆ. ಸುಬ್ಬಯ್ಯ.—ಸ್ವಾಮಿ, ಮಾರಾಟ ತೆರಿಗೆಗೆ ಸಂಬಂಧಪಟ್ಟ ಈ ವಿಧೇಯಕವನ್ನು ನಾನು ವಿರೋಧಿಸುತ್ತೇನೆ. ಇದರ ಮುಖ್ಯ ಉದ್ದೇಶ ಏನೆಂದರೆ ಹೈಕೋರ್ಟಿನ ಆಜ್ಞೆ ಪ್ರಕಾರ ನಿಗದಿಯಾದ ಮೊತ್ತದ ಹಣವನ್ನು ವಾಪಸ್ಸು ಕೊಡಬೇಕಾಗಿದೆ. ಇದನ್ನು ನೀವೇ ಉಳಿಸಿಕೊಳ್ಳುವ ಉದ್ದೇಶದಿಂದ ತಂದಿದ್ದಾಗಿದೆ. ನೀವು ದುಡ್ಡಿಗೋಸ್ಕರವಾಗಿ ಬಾಯಿ ಬಿಡುತ್ತಿದ್ದೀರಿ. ಹೈಕೋರ್ಟ್ ಆಜ್ಞೆ ಇದ್ದರೂ ಕೂಡ ಜನತೆ ಸರ್ಕಾರದ ಖಜಾನೆಯಲ್ಲಿ ಕೇಳತಕ್ಕಂಥ ದುಡ್ಡಿಗೆ, ನಾವು ದಿವಾಳಿಯಾಗಿದ್ದೇವೆ ಎಂದರೆ ಅದರಲ್ಲಿ ಏನೂ ಅರ್ಥವಿಲ್ಲ. ಹೈಕೋರ್ಟಿನ ಆಜ್ಞೆ ಹಣವನ್ನು ವಾಪಸ್ಸು ಕೊಡಬೇಕೆಂದು ಇದ್ದರೂ ಅದಕ್ಕೆ ಅಪಚಾರ ಮಾಡುವುದು ಸರಿಯಲ್ಲ. ಇಂತಹ ಕಾನೂನನ್ನು ತಾನೇ ಏಕೆ ಮಾಡಬೇಕಾಗಿತ್ತು ? ಅವರನ್ನೇ ಕೇಳಬಹುದಾಗಿತ್ತು. ನೀವು ಬಿಟ್ಟುಕೊಡಿ ಎಂದು. ಕೈಕಾಲು ಹಿಡಿದು ಬಿಟ್ಟಿದ್ದರೆ ಅವರು ಬಿಟ್ಟುಕೊಡುವರು. ಹೈಕೋರ್ಟ್ ಆಜ್ಞೆ ಯಾವುದಾದರೂ ರಾಜ್ಯ ಸರ್ಕಾರಕ್ಕೆ ಸರಿಯಲ್ಲ ಎಂದು ಎನಿಸಿದರೆ ನಿಮಗೆ ಬೇಕಾದಂಥ ಒಂದು ಕಾನೂನನ್ನು ಮಾಡಿಕೊಳ್ಳುವುದಾದರೆ ನಾನು ಒಂದು ಸಲಹೆ ಕೊಡುತ್ತೇನೆ. ನಮಗೆ ಹೈಕೋರ್ಟ್ ಬೇಡ ಎಂದು ಹೇಳಿಬಿಡಿ ಅಥವಾ ನೀವು ಬರೆದುಕೊಟ್ಟ ಜಡ್ಜ್‌ಮೆಂಟನ್ನು ಅವರು ಓದುವ ಹಾಗೆ ಮಾಡಿಬಿಡಿ. ಪದೇಪದೇ ನೀವು ಹೈಕೋರ್ಟ್ ಆಜ್ಞೆಯನ್ನು ವಿರೋಧ ಮಾಡುವುದು ಅಥವಾ ಅದನ್ನು ಉಲ್ಲಂಘನೆ ಮಾಡುವುದು, ಅದಕ್ಕೆ ಅಪಚಾರ ಎಸಗುವಂಥಾದ್ದು, ಈ ರೀತಿ ಕಾನೂನಿಗೆ ವಿರೋಧವಾಗಿ ಹೋಗುವಂಥಾದ್ದು ಸರಿಯಲ್ಲ. ಸರ್ಕಾರ ಇದನ್ನು ಕೈಬಿಡಬೇಕು ಎಂದು ಹೇಳುತ್ತೇನೆ.

† ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಮಾನ್ಯ ಅಧ್ಯಕ್ಷರೇ, ಈ ಮೈಸೂರು ಸೇಲ್ಸ್ ಟ್ಯಾಕ್ಸ್ ಮೇಲೆ ಏನು ತಿದ್ದುಪಡಿ ತಂದಿದ್ದಾರೋ ಅದನ್ನು ನಾನು ಅನುಮೋದಿಸುತ್ತೇನೆ. ಈ ತಿದ್ದುಪಡಿ ಮಸೂದೆಯನ್ನು ತಂದಿರುವಂಥಾದ್ದು ಹೈಕೋರ್ಟಿಗೆ ಅಪಚಾರ ಮಾಡಬೇಕು, ಸರ್ಕಾರ ದಿವಾಳಿಯಾಗಿದೆ, ಯಾರು ತೆರಿಗೆಯನ್ನು ಕೊಡಬೇಕಾಗಿತ್ತೋ ಅವರ ಕೈಕಾಲನ್ನು ಹಿಡಿದು ವಸೂಲ್ಮಾಡಿ ಎಂದು ಮಾನ್ಯ ಸದಸ್ಯರು ಹೇಳಿದರು. ಈ ರೀತಿ ಸರ್ಕಾರ ನಡೆಸುವಂಥಾ ಕಾರ್ಯಕ್ರಮ ಹೊಸದು ಎಂದು ತಿಳಿದುಕೊಳ್ಳಬೇಕಾಗಿದೆ. ಇದು ನಮಗೆ ಗೊತ್ತಿಲ್ಲ. ನಾವು ಹಳೆಯ ಕಾರ್ಯಕ್ರಮವನ್ನು ನಡೆಸುವಂಥ ಪಂಗಡಕ್ಕೆ ಸೇರಿದವರು. ಹಾಗೆ ಇದಕ್ಕೆ ಕಾನೂನು ತರುತ್ತೇವೆ. ಅದೇ ರೀತಿ ಸೇಲ್ಸ್‌ಟ್ಯಾಕ್ಸ್ ತಿದ್ದುಪಡಿ ತಂದಿದ್ದೇವೆ. ಮಾರಾಟದ ಮೇಲೆ 6¼ ಪರ್ಸೆಂಟು ಸೇಲ್ಸ್ ಟ್ಯಾಕ್ಸ್ ವಸೂಲ್ಮಾಡಬೇಕೆಂದು ಇದೆ. ಒಂದು ಕಂಟ್ರೋಲಿಕರಿಗೆ ಒಂದು ಲೀಟರ್‌ಗೆ ಒಂದು ರೂಪಾಯಿ ಮಾರಾಟ ಕ್ರಯ ಇರುತ್ತದೆ ಎಂದು ಇಟ್ಟುಕೊಳ್ಳೋಣ. ಹೈಕೋರ್ಟಿನಲ್ಲಿ ಏನು ಹೇಳಿದ್ದಾರೆ ಎಂದರೆ ಒಂದು ರೂಪಾಯಿನಲ್ಲೇ ಎಕ್ಸೈಜ್ ಡ್ಯೂಟಿ ಸೇರಿದೆ ಎಂದು ಹೇಳಿದ್ದಾರೆ. ಮಾರಾಟ ಕ್ರಯದಲ್ಲಿ ಎಕ್ಸೈಜ್ ಡ್ಯೂಟಿ ಸೇರಿದ್ದರೆ ಆಗ ಡ್ಯೂಟಿ ಸೇರಿಸಿ ಒಂದು ರೂಪಾಯಿ ನಾಲ್ಕು ಆಣೆ ಇರಬೇಕಾಗಿತ್ತು. ಇದು ನಮ್ಮ ವಾದ. ಹೈಕೋರ್ಟಿನವರು ಈ ಬಿಲ್‌ನಲ್ಲಿಯೇ ಎಕ್ಸೈಜ್ ಡ್ಯೂಟಿ ಸೇರಿದೆ ಎಂದು ಹೇಳುವುದು ಸರಿಯಲ್ಲ. ಶಾಸನದ ಉದ್ದೇಶ ಅವನು ಏನು ಮಾರಿದ್ದಾನೆ ಅದರ

(ಶ್ರೀ ಕೆ. ಸೂರ್ಯನಾರಾಯಣ ಅಡಿಗ)

ಮೇಲೆ 6½ ಪರ್ಸೆಂಟ್ ನಮಗೆ ಸಿಕ್ಕಬೇಕು ಎನ್ನುವುದು. ಅವನು ನ್ಯಾಯವಾಗಿ ಕೊಡತಕ್ಕ ಹಣವನ್ನು ನಾವು ವಸೂಲ್ಮಾಡುವುದು ಹೈಕೋರ್ಟಿಗೆ ಅಗೌರವ ತೋರಿಸುವಂಥ ರೀತಿಯಲ್ಲಿ ಆಗಿಲ್ಲ ಮತ್ತು ಇದನ್ನು ಅಪಪ್ರಚಾರವಾದ ರೀತಿಯಲ್ಲಿ ಕಾನೂನು ಮಾಡಿದ್ದಾರೆ ಎನ್ನುವುದು ಸರಿಯಲ್ಲ. ಆದುದರಿಂದ ಇದರಲ್ಲಿ ಹೈಕೋರ್ಟಿಗೆ ಅಪಚಾರ ಮಾಡುವಂಥಾದ್ದೇನೂ ಇಲ್ಲ. ಇದು ಉತ್ತಮವಾದ ಬಿಲ್ಲು. ಆದುದರಿಂದ ಇದರಮೇಲೆ ಒಂದು ಆರ್ಡಿನೆನ್ಸ್ ಮಾಡಿ ಕಾನೂನು ತಂದಿರುವುದರ ಬಗ್ಗೆ ಸರ್ಕಾರದವರನ್ನು ಅಭಿನಂದಿಸುತ್ತೇನೆ.

† ಶ್ರೀ ಜಿ. ವಿ. ಆಂಜನಪ್ಪ.—ಉಚ್ಚನ್ಯಾಯಾಲಯದವರು ಹಣವನ್ನು ವಾಪಸ್ಸು ಕೊಡಬೇಕು ಎಂದು ಹೇಳಿದ್ದರ ಮೇಲೆ ಅವರಿಗೆ ಗೌರವ ತೋರಿಸುವ ಸಲುವಾಗಿಯಾದರೂ ಆ ಹಣವನ್ನು ಅವರಿಗೆ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕಾಗಿತ್ತು. 1956 ರಿಂದ ಈ ಕಾನೂನು ಜಾರಿಯಲ್ಲಿರುವ ಹಾಗೆ ಮಾಡಿದ್ದೀರಿ. ಈ ರೀತಿ ಮಾಡಿದ್ದು ಹೈಕೋರ್ಟಿಗೆ ಅಗೌರವ ತೋರಿಸುವುದೋ ಇಲ್ಲವೋ ಎಂಬುದನ್ನು ತಾವೇ ನೋಡಬೇಕು.

† ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಮಾನ್ಯ ಸಭಾಪತಿಗಳೇ, ಹೈಕೋರ್ಟಿನವರು ಹಣವನ್ನು ಯಾವ ರೀತಿ ಹಂಚಬೇಕು ಎಂದು ಇಲ್ಲಿ ಹೇಳುತ್ತಿಲ್ಲ. ರಿಟ್ ಪಿಟಿಷನ್ ಬಂದು ಇದರಲ್ಲಿ ಸರಕಾರ ಹಣ ವಸೂಲು ಮಾಡುತ್ತಿದೆ ಮತ್ತು ಕಾನೂನಿಗೆ ವಿರೋಧವಾಗುತ್ತದೆ ಎಂದು ಮಾಡಿದರು ಎಂದು ಆ ರೀತಿ ಅಭಿಪ್ರಾಯಕ್ಕೆ ಬರುವುದು ಸರಿಯಲ್ಲ. ಕ್ಲೈಂ ಮಾಡುವುದಕ್ಕೆ ಒಂದು ಸಲ ಪಾರ್ಟಿ ಕೊಟ್ಟಿರುವ ಹಣವನ್ನು ಹಿಂದಕ್ಕೆ ಕೇಳುವ ಹಕ್ಕು ಬರಬಹುದು. ಆ ಕಾರಣದಿಂದ ಈ ತಿದ್ದುಪಡಿ ತಂದಿರುವುದನ್ನು ಸ್ವಾಗತಿಸಿ ಈ ಮಸೂದೆಗೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ.

† ಶ್ರೀ ಸಿ. ಬಂದೀಗೌಡ.—ಮಾನ್ಯ ಸಭಾಪತಿಗಳೇ, ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಇಲ್ಲಿ ಮುಖ್ಯವಾಗಿ ಇರತಕ್ಕದ್ದು ಶ್ರೇಷ್ಠ ನ್ಯಾಯಾಲಯದ ತೀರ್ಪು ಮತ್ತು ಯಾವ ದಿನಾಂಕದಿಂದ ಹಣ ವಾಪಸು ಕೊಡಬೇಕು ಎನ್ನುವುದು. ಇವೆರಡು ಮುಖ್ಯ ಪ್ರಶ್ನೆಗಳು. ಇನ್ನೊಂದು ಪ್ರಶ್ನೆ ನ್ಯಾಯಾಲಯ ಇಂತಹ ಒಂದು ತೀರ್ಮಾನ ಕೊಟ್ಟರೂ ರಾಷ್ಟ್ರದ ಅಭಿವೃದ್ಧಿ ಕಾರ್ಯಗಳಿಗೋಸ್ಕರ ಮತ್ತು ಸಮಾಜದ ಬೆಳವಣಿಗೆಗೋಸ್ಕರ ಕಾನೂನು ನಿಯಮಗಳನ್ನು ಕೆಲವು ವೇಳೆ ತೆಗೆದು ಹಾಕಿ ತೆರಿಗೆಗಳನ್ನು ವಸೂಲು ಮಾಡಬೇಕಾಗುತ್ತದೆ. ಈ ತರಹ ಮಾಡುವುದು ಒಳ್ಳೆಯದಲ್ಲ ಎನ್ನುವುದನ್ನು ನಾನೂ ಒಪ್ಪುತ್ತೇನೆ. ಆದರೆ ಈ ಹಣ ಬಡವರ ಅನುಕೂಲಕ್ಕೋಸ್ಕರ ಒದಗಿಸಬೇಕಾಗಿದೆ. ಏನೋ ಕಾನೂನು ಮಾಡುವಾಗ ಕೈ ತಪ್ಪಿ ಒಂದೆರಡು ನ್ಯೂನಗಳು ಆಗಬಹುದು. ಇದರ ಬಗ್ಗೆ ಮಾನ್ಯ ಅರ್ಥ ಸಚಿವರು ಯಾವ ಮುಚ್ಚುಮರೆ ಇಲ್ಲದೆ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಇದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಇಂತಹ ಒಂದು ತೆರಿಗೆಯಿಂದ ಕೆಲವರಿಗೆ ಲಾಭವಾಗುತ್ತದೆ ಎಂದು ಇದನ್ನು ನೋಡಿಕೊಂಡು ಸುಮ್ಮನೆ ಕೂರುವುದಲ್ಲ. ಒಂದು ವೇಳೆ ನಾವು ಮಾಡಿರುವ ಕಾನೂನುಗಳಲ್ಲಿ ಏನಾದರೂ ನ್ಯೂನತೆ ಸಾಮಾನ್ಯ ಜನತೆಗೆ ಆಗಿದ್ದರೆ ಮತ್ತು ಜನತೆಗೆ ಇರುವ ಸೌಲಭ್ಯಗಳು ಕಡಿಮೆಯಾಗಿದ್ದರೆ ಅಥವಾ ಕೆಲವರಿಗೆ ಲಾಭ ಸಂಪಾದನೆಯಾಗುವಂತಿದ್ದರೆ ಇದಕ್ಕೆ ನ್ಯಾಯಾಲಯಗಳು ಅವಕಾಶ ಮಾಡಿಕೊಡುವುದು ಸರಿಯಲ್ಲ. ಅದನ್ನು ಸರಿಪಡಿಸುವುದು ಬುದ್ಧಿವಂತರ ಲಕ್ಷಣ. ಇದಕ್ಕಾಗಿ ಸಚಿವರನ್ನು ಅಭಿನಂದಿಸಿ ಈ ಬಿಲ್ಲನ್ನು ಸ್ವಾಗತ ಮಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸಭಾಪತಿಗಳೇ, ವಿರೋಧ ಪಕ್ಷದ ಕೆಲವು ಸದಸ್ಯರು ಈ ಮಸೂದೆಯ ಮೇಲೆ ಮಾಡಿದ ಟೀಕೆಯನ್ನು ನೋಡಿ ನನಗೆ ತುಂಬಾ ಆಶ್ಚರ್ಯವಾಗಿದೆ. ನಾನು ಅವರೂ ಕೂಡ ಇದನ್ನು ಸಮರ್ಥನೆ ಮಾಡುತ್ತಾರೆಂದು ನಂಬಿಕೊಂಡಿದ್ದೆ. ಇದರಲ್ಲಿ ಏನಾಗಿದೆ ಎಂದರೆ ಸರಕಾರ, ಏನೇ ತರಲಿ, ಯಾವ ಉದ್ದೇಶದಿಂದ ಸ್ಟೇಟ್‌ಮೆಂಟು ಕೊಡಲಿ, ಅವೇನೇ ಇರಲಿ ವಿರೋಧ ಪಕ್ಷದಲ್ಲಿರುವುದರಿಂದ ಅದನ್ನು ವಿರೋಧ ಮಾಡಬೇಕಾಗುತ್ತದೆ ಎನ್ನುವುದೇ ಅವರ ಧ್ಯೇಯ ಎಂದು ಕಾಣುತ್ತದೆ.

ಶ್ರೀ ಜಿ. ವಿ. ಆಂಜನಪ್ಪ.—ವಿರೋಧ ಮಾಡುವುದೇ ನಮ್ಮ ಉದ್ದೇಶವಲ್ಲ. ನಮಗೆ ಸಮರ್ಪಕವಾಗಿ ತೋರಿದರೆ ಅದನ್ನು ಒಪ್ಪಬಹುದು. ಆದರೆ ಸರಕಾರದವರು ಪ್ರತಿಯೊಂದರಲ್ಲೂ ತಪ್ಪು ಮಾಡುತ್ತಿರುವುದು ಅಭ್ಯಾಸವಾಗಿರುವುದರಿಂದ ನಾವು ವಿರೋಧ ಮಾಡಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಸುಮಾರು ಒಂದೂವರೆ ವರ್ಷಗಳ ಹಿಂದೆ ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಆಕ್ಟಿಗೆ ಸಂಬಂಧಪಟ್ಟಂತೆ ಹೈ ಕೋರ್ಟಿನವರು ಒಂದು ತೀರ್ಮಾನ ಕೊಟ್ಟರು. ಈ ತೀರ್ಮಾನ ಬರುವುದಕ್ಕೆ ಮೊದಲು ಸರ್ಕಾರದವರು ವ್ಯಾಪಾರಸ್ಥರಿಂದ ಸುಮಾರು ಒಂದೂವರೆಯಿಂದ ಎರಡು ಕೋಟಿಯಷ್ಟು ಹಣವನ್ನು ಟ್ಯಾಕ್ಸ್ ರೀತಿಯಲ್ಲಿ ವಸೂಲು ಮಾಡಿದ್ದರು. ಹೈ

ಕೋರ್ಟಿನ ಈ ತೀರ್ಮಾನದ ಪ್ರಕಾರ ಇದನ್ನು ವಾಪಸು ಕೊಡುವ ಪರಿಸ್ಥಿತಿ ಬಂತು ಮತ್ತು ಸರಕಾರದವರು ವಾಪಸ್ಸು ಕೊಟ್ಟರು. ಈ ಸಂಬಂಧದಲ್ಲಿ ಕೆಳಗಿನ ಮನೆಯಲ್ಲಿ ಹಾಗೂ ಈ ಮನೆಯಲ್ಲಿ ಪ್ರಶ್ನೆಗಳ ಮುಖಾಂತರ ಸರಕಾರವನ್ನು ಕಟುವಾಗಿ ಟೀಕೆ ಮಾಡಿದರು. ಮತ್ತು ಏಕೆ ಸರಕಾರ ಬೇರೆ ಒಂದು ಕಾನೂನನ್ನು ತಂದು ಇದನ್ನು ತಡೆಯಲಿಲ್ಲ, ಇಷ್ಟೊಂದು ಹಣವನ್ನು ಜನತೆ ಯಿಂದ ವಸೂಲು ಮಾಡಿ ಸರಕಾರ ಮತ್ತೆ ವಾಪಸು ಕೊಡುವುದು ಸರಿಯಲ್ಲ ಇದನ್ನು ಸರಕಾರ ದಲ್ಲೇ ಇಟ್ಟುಕೊಳ್ಳುವಂತೆ ಏಕೆ ಮಾಡಬಾರದು ಎಂದು ಸಲಹೆ ಮಾಡಿದರು. ಅಂತಹದೇ ಒಂದು ಪ್ರಸಂಗ ಈ ಕಾನೂನಿನಲ್ಲಿ ಉಂಟು. ಸೇಲ್ಸ್ ಟ್ಯಾಕ್ಸ್ ರೂಲು 6 (4) (ಜೆ) ನಲ್ಲಿರುವದನ್ನು ಡಿಲಿಟ್ ಮಾಡಬೇಕಾದರೆ ಇದರ ಇಂಪ್ಲಿಕೇಷನ್ ಈರೀತಿಯಾಗುತ್ತದೆ ಎನ್ನುವುದು ಗೊತ್ತಾಗಲಿಲ್ಲ. ಇದನ್ನು ಡಿಲಿಟ್ ಮಾಡಬೇಕಾದರೆ ಇದರ ಪರಿಣಾಮ ಏನಾಗುತ್ತದೆ ಎಂದರೆ ಅರಾಕ ಮೇಲೆ ಇರುವ ಬೆಲೆ ಮತ್ತು ಇತರ ಎಕ್ಸೈಜು ಡ್ಯೂಟಿ ಎಜುಕೇಷನ್ ಸೆಸ್, ಹೆಲ್ತ್ ಸೆಸ್ ಇವೆಲ್ಲಾ ಟ್ಯಾಕ್ಸಬಲ್ ಟರ್ನ ಓವರು ಆಗುತ್ತದೆ. ಇದರ ಪರಿಣಾಮವೇನಾಯಿತು ಎಂದರೆ ನಮ್ಮ ಅಧಿಕಾರಿಗಳು ಟ್ಯಾಕ್ಸಬಲ್ ಟರ್ನ ಓವರ್ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕಿದರು. ಇದರ ವಿರುದ್ಧ ಕೆಲವರು ಕಂಟ್ರಾಕ್ಟರುಗಳು ಹೈ ಕೋರ್ಟಿಗೆ ಹೋದರು. ಇದು ಸರಿಯಲ್ಲ ಟ್ಯಾಕ್ಸ್ ಬೇರೆ ಎಕ್ಸೈಜು ಡ್ಯೂಟಿ ಬೇರೆ ಮತ್ತು ಸೆಸ್‌ಗಳ ಲೇವಿಯೇ ಬೇರೆ ಎಂದು ಹೈ ಕೋರ್ಟು ತೀರ್ಪು ಕೊಟ್ಟು ಕಂಟ್ರಾಕ್ಟರರ ವಾದವನ್ನು ಎತ್ತಿ ಹಿಡಿಯಿತು. ಹೀಗೆ ಡ್ಯೂಟಿಯ ಮೇಲೆ ಎಂದು ಟ್ಯಾಕ್ಸ್ ಕಲೆಕ್ಟ್ ಮಾಡುವುದು ಸರಿಯಲ್ಲ ಎಂದು ಹೇಳಿತು. ಇದರಲ್ಲಿ ಹೈ ಕೋರ್ಟಿಗೆ ಅಪಚಾರ ಮಾಡುವ ಮಾತಿಲ್ಲ. ಹೈ ಕೋರ್ಟಿ ನವರು ಯಾವುದಾದರೂ ಒಂದು ವ್ಯಕ್ತಿಗೆ ಅಥವಾ ಸಂಸ್ಥೆಗೆ ಅವರ ಹಕ್ಕು ಬಾಧ್ಯತೆ ಉಂಟು ಮಾಡಿ ಅಂಥ ಹಕ್ಕನ್ನು ಕಿತ್ತು ಹಾಕುವ ಕಾನೂನು ಇದಲ್ಲ. ಹೈ ಕೋರ್ಟಿನವರು ಟ್ಯಾಕ್ಸ್ ಸ್ಟ್ರಕ್ಚರನ್ನು ಒಪ್ಪಿಕೊಳ್ಳಲಿಲ್ಲ. ಆದರೆ ಯಾವ ಟ್ಯಾಕ್ಸನ್ನು ಸರಕಾರ ಜನತೆಯಿಂದ ಕೂಡಿಸಿದ್ದಾರೆ ಅದರ ಬಗ್ಗೆ ಯಾವ ಭಿನ್ನಾಭಿಪ್ರಾಯವಿಲ್ಲ. ಹೈ ಕೋರ್ಟಿನ ತಡೆಯಾಜ್ಞೆಯ ಪ್ರಕಾರ ಗ್ರಾಹಕ ರಿಂದ ಇದನ್ನು ಕಲೆಕ್ಟ್ ಮಾಡದಿದ್ದರೆ ಇದಕ್ಕಾಗಿ ಅಂಥ ಕಂಟ್ರಾಕ್ಟರಿಗೆ ಪುನಃ ಶಿಕ್ಷೆಕೊಡುವ ಉದ್ದೇಶವಿಲ್ಲ. ಹೈ ಕೋರ್ಟಿನಿಂದ ತಡೆ ಆಜ್ಞೆ ತಂದು ಶೇಕಡಾ ಆರೂವರೆಯಂತೆ ಕೆಲವರು ಸೇಲ್ಸ್ ಟ್ಯಾಕ್ಸ್ ಎತ್ತಿದ್ದರೆ ಅದಕ್ಕೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಹೈ ಕೋರ್ಟಿನವರು ಹೇಳುತ್ತಿರುವುದು ಗ್ರಾಹಕರಿಂದ ಎಷ್ಟು ಹಣವನ್ನು ಕೂಡಿಸಿದರೂ ಅದು ಜನತೆಯ ಹಣ ಅದು ಅವರಿಗಾಗಿ ಉಪಯೋಗವಾಗಬೇಕು. ಇದರಲ್ಲಿ ಬಲ್ಕ ಅರಿಯರ್ಸ್ ಬರುವುದಕ್ಕೆ ಕಾರಣ 55 ಪೈಸೆ ಇದಕ್ಕೆ ಎಕ್ಸೈಜು ಡ್ಯೂಟಿ 2.75 ಇದಕ್ಕೆ ಸೆಸ್ಸುಗಳು ಸೇರಿಲ್ಲ. ಇದು ಸೇರಿದರೆ 38 ಪೈಸೆ ಎಂದರೆ ಬೇಸಿಕ್ ಪ್ರೈಸು ಮೇಲೆ 55 ಪೈಸೆ ಇದ್ದರೆ ಅದರ ಒಟ್ಟು ಕಿಮ್ಮತ್ತು 3.68 ಪೈಸೆ ಮತ್ತು ಶೇಕಡಾ ಆರುವರೆಯಷ್ಟು ಟ್ಯಾಕ್ಸ್ ವಸೂಲು ಮಾಡಿ ಎಂದು ಹೈ ಕೋರ್ಟಿನವರು ಕೊಟ್ಟಿರುವ ನಿರ್ಣಯದ ಪ್ರಕಾರ ಏನು ಮಾಡಬೇಕಾಗುತ್ತದೆ ? ಕೇವಲ ಬೇಸಿಕ್ ಪ್ರೈಸು ಶೇಕಡಾ 55 ರಷ್ಟು ವಸೂಲು ಮಾಡಬೇಕಾದರೆ ಅಷ್ಟನ್ನು ಮಾತ್ರ ಇಟ್ಟುಕೊಳ್ಳಬಹುದು ಮತ್ತು ಇದುವರೆಗೆ ಕೂಡಿಸಿರುವ ಹಣ ಸುಮಾರು 30–40 ಲಕ್ಷ ರೂಪಾಯಿಗಳಷ್ಟನ್ನು ಪುನಃ ಅವರಿಗೇಕೆ ಕೊಡಬೇಕು ಎನ್ನುವುದು ವಿರೋಧ ಪಕ್ಷದ ಸದಸ್ಯರುಗಳ ಅಭಿಪ್ರಾಯ. ನಮ್ಮ ಉದ್ದೇಶವೇನೆಂದರೆ, ನಾವು ಎಕ್ಸೈಜು ಡ್ಯೂಟಿ ಅರಾಕ ಮೇಲೆ ಹಾಕುತ್ತಿರುವುದು ಮತ್ತು ಇದರ ಮೇಲೆ ಮಾರಾಟದ ತೆರಿಗೆ 3.68 ಪೈಸೆ ಇವೆಲ್ಲಾ ಸೇರಿದರೆ 3.92 ಪೈಸೆ ಆಗುತ್ತದೆ. ಇದನ್ನು ಸೇರಿಸಿ ಮಾರಾಟ ಮಾಡುತ್ತೇವೆ. ಈಗ ವಸೂಲುಮಾಡಿರುವ 40 ಲಕ್ಷ ರೂಪಾಯಿ ಮಾರಾಟ ತೆರಿಗೆಯನ್ನು ದೊಡ್ಡ ದೊಡ್ಡ ಕಂಟ್ರಾಕ್ಟರುಗಳ ಬೊಕ್ಕಸಕ್ಕೆ ಹೋಗುವುದಕ್ಕೆ ಅವಕಾಶ ಕೊಡುವುದು ನ್ಯಾಯವೇ ? ಹೈಕೋರ್ಟ್ ಆಜ್ಞೆಯನ್ನು ಹಿಂದಿನ ಬಾಗಿಲಿಂದ ಉಲ್ಲಂಘನೆ ಮಾಡುತ್ತೀರಾ ಎಂಬ ಪ್ರಶ್ನೆಯಿದೆ. ಅದು ನಮ್ಮ ಉದ್ದೇಶವಲ್ಲ. ಅದಕ್ಕೆ ಹೆಚ್ಚಿನ ಮಹತ್ವ, ಗೌರವ ಕೊಡುತ್ತೇವೆ. ಅದನ್ನು ಉಲ್ಲಂಘಿಸುವುದಿಲ್ಲ. ಯಾವುದೇ ಒಂದು ವ್ಯಕ್ತಿಗೆ ಅಥವಾ ಸಂಸ್ಥೆಗೆ ಸಹಾಯಮಾಡುವ ಉದ್ದೇಶ ದಿಂದ ತಿದ್ದುಪಡಿ ತಂದಿಲ್ಲ, ಇದು ಜನತೆಗೆ ಸೇರಿರುವ ಹಣ, ಕಂಟ್ರಾಕ್ಟರ ಹಣವಲ್ಲ. ಆದುದ ರಿಂದ ಯಾರಿಂದ ವಸೂಲುಮಾಡಿದೆಯೋ ಅವರ ಉಪಯೋಗಕ್ಕೇ ಇದು ವಿನಿಯೋಗವಾಗಲಿ ಎಂಬ ಉದ್ದೇಶದಿಂದ ತಿದ್ದುಪಡಿ ಮಸೂದೆ ತರಲಾಗಿದೆ. 1–7–1969 ರಿಂದ ಹೊಸ ವ್ಯವಸ್ಥೆ ಜಾರಿಗೆ ತರಲಾಗಿದೆ. ಪ್ರೈಸ್ ಹೆಚ್ಚಿಸಿದ್ದೇವೆ, ಕೇವಲ ನಾಮಿನಲ್ ಸೆಸ್ ಮತ್ತು ಡ್ಯೂಟಿ ಹಾಕಿದ್ದೇವೆ. ಹೆಲ್ತ್ ಸೆಸ್ ಮತ್ತು ಡ್ಯೂಟಿ ಎಲ್ಲಾ ಒಟ್ಟು ಮೂಲ ಬೆಲೆಯಮೇಲೆ ಸೇಕಡ ಆರೂವರೆಯಂತೆ ಹಾಕಿದರೆ ಬೇಕಾದಷ್ಟು ಆದಾಯ ಬರುತ್ತದೆ. ಇದರಲ್ಲಿ ದುರುದ್ದೇಶವಿಲ್ಲವೆಂದು ಮಾನ್ಯ ಸದಸ್ಯರಿಗೆ ಕಳಕಳಿಯಿಂದ ಹೇಳುತ್ತೇನೆ. ಇದರಲ್ಲಿ ಒಳ್ಳೆಯ ಉದ್ದೇಶವಿದೆ. ನಾವಾಗಿ ವಸೂಲು ಮಾಡಿರುವುದು ಜನರ ಬೊಕ್ಕಸಕ್ಕೆ ಸೇರಲಿ ಎಂಬ ಉದ್ದೇಶದಿಂದ ಈ ತಿದ್ದುಪಡಿ ವಿಧೇಯಕವನ್ನು ತಂದಿರುವುದರಿಂದ ಇದಕ್ಕೆ ಎಲ್ಲರೂ ಮನ್ನಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ಎಸ್. ಪಾಟೀಲ್.—ಹೇಸ್ಟಿ ಲೆಜಿಸ್ಲೇಷನ್ ಮಾಡಬಾರದು, ಗಡಿಬಿಡಿಯಿಂದ ಕಾನೂನು ಮಾಡಿದರು ಎಂದು ಜನರು ಭಾವಿಸುವುದಕ್ಕೆ ಅವಕಾಶವಿರಬಾರದು ಎಂದು ನಾವು ಹೇಳುವುದು. ಸವಿಸ್ತಾರವಾದ ಕಾನೂನನ್ನು ಮಾಡಿದ್ದರೆ ಈ ರೀತಿ ಆಗುತ್ತಿರಲಿಲ್ಲ. ಆದುದರಿಂದ ನಾವು ವಿರೋಧಿಸುವುದು.

ಶ್ರೀ ರಾಮಕೃಷ್ಣ ಹೆಗಡೆ.—ಯಾವುದೇ ಕಾನೂನಾಗಲಿ ಒಂದು ಶಿಲಾ ಲಿಖಿತವಲ್ಲ, ಎಲ್ಲರೂ ಸೇರಿ ಕಾನೂನು ಮಾಡುವುದು. ರಾಜ್ಯಾಂಗವನ್ನು ಎಷ್ಟೋ ವರ್ಷ ಸತತವಾಗಿ ಕುಳಿತು ಉತ್ತಮ ಪಂಡಿತರನ್ನು ಸೇರಿಸಿ ರಚನೆಮಾಡಲಾಯಿತು. ಆದರೂ ಕೂಡ ಅದನ್ನು ತಿದ್ದುಪಡಿ ಮಾಡಬೇಕಾದ ಸಂದರ್ಭ ಬರುತ್ತದೆ. ಹೇಗೆ ಮಾಡಿದರೂ ಒಂದುತಪ್ಪು ಆಗೇ ಆಗುವುದು. ಕಂಪ್ಯೂಟರ್‌ನಿಂದ ಕೆಲಸಮಾಡುವುದಾದರೆ ಅದು ಬೇರೆ. ತಪ್ಪಾಗುವುದನ್ನು ತಪ್ಪಿಸುವುದಕ್ಕಾಗುವುದಿಲ್ಲ, ಅದಕ್ಕೆ ಉಪಾಯವಿಲ್ಲ.

ಶ್ರೀ ಜಿ. ವಿ. ಆಂಜನಪ್ಪ.—ಹೈಕೋರ್ಟಿನ ಜಡ್ಜ್‌ಮೆಂಟ್ ಆದಮೇಲೆ ಯಾರಾದರೂ ರೀಫಂಡ್ ಪಡೆದರೇ ?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ. ಅದಕ್ಕೇ ಯಾರಾದರೂ ರೀಫಂಡಿಗೆ ಬರಬಹುದೆಂದು ನಾವು ಆರ್ಡಿನೆನ್ಸ್ ಹೊರಡಿಸಿರುವುದು. ರೀಫಂಡ್ ಕೊಟ್ಟಿಲ್ಲ.

Mr. DEPUTY CHAIRMAN.—The question is:

"That the Mysore Sales Tax (Amendment) Bill, 1969, as passed by the Legislative Assembly, be taken into consideration.

The motion was adopted.

CLAUSES.

Mr. DEPUTY CHAIRMAN.—The question is:

That clauses 2 to 4, both inclusive, do stand part of the Bill.

The motion was adopted.

Clauses 2 to 4, both inclusive, were added to the Bill.

Mr. DEPUTY CHAIRMAN.—The question is:

That clause 1, the Long Title and the Enacting Formula do stand part of the Bill.

The motion was adopted.

Clause 1, the Long Title and the Enacting Formula were added to the Bill.

Motion to pass.

Sri RAMAKRISHNA HEGDE.—I move:

"That the Mysore Sales Tax (Amendment) Bill, 1969, as passed by the Ligislative Assembly, be passed."

MR. DEPUTY CHAIRMAN.—The question is :

"That the Mysore Sales Tax (Amendment) Bill, 1969, as passed by the Ligislative Assembly, be passed."

The motion was adopted.

SRI K. SURYANARAYANA ADIGA.—Sir, on a point of clarification. Whenever a motion is put if there are some hon. Members for Ayes and some hon. Members for Noes, then the Chair may say "I think." But when there is no hon. Member for "Noes" the Chair can say straightaway the Ayes have it.

Mysore Shops and Commercial Establishment (Amendment) Bill, 1969

Motion to consider.

SRI K. PUTTASWAMY (Minister for Law, Labour and Parliamentary Affairs)—Sir, I move:

"That the Mysore Shops and Commercial Establishments (Amendment) Bill, 1969, be taken into consideration."

MR. DEPUTY CHAIRMAN.—Motion moved :

"That the Mysore Shops and Commercial Establishments (Amendment) Bill, 1969, be taken into consideration."

SRI K. PUTTASWAMY.—Sir, the amendment before this House is simple. Under the Mysore Shops and Commercial Establishments Act, 1961, there is no power for the Government to give any exemption to any of the shops even though the conditions there are better than the conditions that are contemplated under the Shops and Commercial Establishments Act. The Mysore Bank, Khadi and Village Industries Board, and the Life Insurance Corporation, have been urging for exemption from the operation of this Act. As we all know, the conditions there are better than in ordinary shops and establishments. I do not think it would be necessary to apply the provisions of the Shops and Establishments Act for institutions of this type. Conditions there are definitely more favourable than what are contemplated under the Act. Therefore, in this amendment it is proposed to take power so that in suitable cases the Government may give exemptions. As a matter of abundant precaution, power is sought to be taken to exercise only in the cases where the conditions are favourable for the employees. Therefore, I request the House kindly to agree to the principles of this Bill.

5-30 P.M.

†ಶ್ರೀ ಜಿ. ವಿ. ಆಂಜನಪ್ಪ.—ಸ್ವಾಮಿ, ಈ ಮಸೂದೆಯನ್ನು ನಾನು ವಿರೋಧಿಸುತ್ತೇನೆ. ಸಂಘ ಸಂಸ್ಥೆಗಳಲ್ಲಿ, ಅಥವಾ ಕಮರ್ಷಿಯಲ್ ಎಸ್ಟ್ಯಾಬ್ಲಿಷ್‌ಮೆಂಟುಗಳಲ್ಲಿ ಕೆಲಸ ಮಾಡತಕ್ಕ ನೌಕರರ

(ಶ್ರೀ ಜಿ. ವಿ. ಆಂಜನಪ್ಪ)

ಹಿತದೃಷ್ಟಿಯಿಂದಲೇ ಅವರ ಏಳಿಗೆಗಾಗಿಯೇ ಕಾಲವನ್ನು ನಿಗದಿ ಮಾಡುವ ಒಂದು ಸದುದ್ದೇಶದಿಂದ ಹಿಂದೆ ಇಂತಹ ಒಂದು ಮಸೂದೆಯನ್ನು ತಂದಿದ್ದರು. ಹಾಗಿರುವಾಗ ಸಂಘ ಸಂಸ್ಥೆಗಳಲ್ಲಿ ಅಥವಾ ಕಮರ್ಷಿಯಲ್ ಎಸ್ಟ್ಯಾಬ್ಲಿಷ್‌ಮೆಂಟುಗಳಲ್ಲಿ ಅಲ್ಲಿನ ಪರಿಸ್ಥಿತಿ ಚೆನ್ನಾಗಿದ್ದಂತಹ ಸಂದರ್ಭದಲ್ಲಿ ವಿನಾಯಿತಿಯಾದರೂ ಕೊಡತಕ್ಕ ಪ್ರಮೇಯವೇನು ? ಈಗಿರತಕ್ಕ ಪರಿಸ್ಥಿಯಲ್ಲಿ ಇದರ ದುರುಪಯೋಗವೇ ಜಾಸ್ತಿ. ತಮಗೆ ಬೇಕಾಗಿರತಕ್ಕ ಸಂಘ ಸಂಸ್ಥೆಗಳಿಗೆ, ಕಮರ್ಷಿಯಲ್ ಎಸ್ಟ್ಯಾಬ್ಲಿಷ್‌ಮೆಂಟುಗಳಿಗೆ ವಿನಾಯಿತಿ ಕೊಡತಕ್ಕ ಒಂದು ಉದ್ದೇಶದಿಂದ ಈ ಅಧಿಕಾರವನ್ನು ತೆಗೆದುಕೊಳ್ಳುತ್ತಾ ಇದ್ದಾರೆ ಎಂದು ನಾನು ಹೇಳಬೇಕಾಗಿದೆ. ಹಿಂದೆ ನಾವೇ ನೌಕರರ ಹಿತ ದೃಷ್ಟಿಯಿಂದ ಇಂತಹ ಒಂದು ಮಸೂದೆಯನ್ನು ಪಾಸು ಮಾಡಿ ಅದು ಅನುಷ್ಠಾನಕ್ಕೆ ಬಂದು 7–8 ವರ್ಷಗಳಾದ ಮೇಲೆ ಈ ತರಹ ಒಂದು ವಿನಾಯಿತಿಯನ್ನು ಕೊಡುವ ಅಧಿಕಾರವನ್ನು ಪಡೆಯಲು ಪ್ರಬಲವಾದ ಕಾರಣವೇನು ಬಂತು ! ಪರಿಸ್ಥಿತಿ ಚೆನ್ನಾಗಿರತಕ್ಕ ಸಂದರ್ಭದಲ್ಲಿ ವಿನಾಯಿತಿ ಕೊಡಬೇಕಾದ ಸಂದರ್ಭ ಉದ್ಭವಿಸುವುದೇ ಇಲ್ಲ. ಆದ್ದರಿಂದ ಯಾರಿಗೋ ತಮಗೆ ಬೇಕಾದ ಎಸ್ಟ್ಯಾಬ್ಲಿಷ್‌ಮೆಂಟ್‌ಗಳಿಗೆ ಸಹಾಯ ಮಾಡಬೇಕು ಅಥವಾ ವಿನಾಯಿತಿ ಕೊಡಬೇಕು ಎಂಬ ದೃಷ್ಟಿ ಇದ್ದಿದ್ದ ಪಕ್ಷದಲ್ಲಿ ಇದನ್ನು ಖಂಡಿಸುತ್ತೇನೆ ಮತ್ತು ತೀವ್ರವಾಗಿ ವಿರೋಧಿಸುತ್ತೇನೆ. ಇಂತಹ ಮನೋಭಾವ ರಾಜ್ಯಸರ್ಕಾರಕ್ಕೆ ಇರಬೇಕೂಡದು. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕ ಜನ ಇದನ್ನು ಮಾಡತಕ್ಕದ್ದಲ್ಲ. ಆದ್ದರಿಂದ ಈ ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳುವುದು ಒಳ್ಳೆಯ ದೆಂದು ಕಾಣುತ್ತದೆ. ಈ ದೃಷ್ಟಿಯಿಂದ ಈ ಮಸೂದೆಯನ್ನು ನಾನು ವಿರೋಧಿಸುತ್ತೇನೆ.

†ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರ ಮನಸ್ಸಿನಲ್ಲಿ ಏನೋ ಸಂಶಯ ಇದ್ದು ಮಾತನಾಡುತ್ತಾ ಇದ್ದಾರೆ ಎಂದು ಹೇಳುತ್ತೇನೆ. ಬೇಕಾದವರಿಗೆ ವಿನಾಯಿತಿ ಕೊಡಬೇಕೆಂದು ಈ ಮಸೂದೆಯನ್ನು ತಂದಿಲ್ಲ. ನಾನು ಆಗಲೇ ನಮಗೆ ಯಾರ್ಯಾರು ವಿನಾಯಿತಿ ಕೊಡಿ ಎಂದು ಕೇಳಿದ್ದಾರೆ ಎಂಬುದನ್ನು ಹೇಳಿದೆ. ಲೈಫ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್‌ನಲ್ಲಿ ಕೆಲವರಿಗೆ ಫಿಕ್ಸೆಡ್ ಅವರ್ಸ್ ಆಫ್ ವರ್ಕ್ ಇಲ್ಲ, ಎಷ್ಟೋ ಹೊತ್ತಿಗೆ ಬರುತ್ತಾರೆ, ಹೋಗುತ್ತಾರೆ 8 ರಿಂದ ಅಂತ ಹೇಳಿ ಕಂಟಿನ್ಯೂಯಸ್ ಆಗಿ ಇರುವುದಿಲ್ಲ. ಹಾಗೆಯೇ ಖಾದಿ ಅಂಡ್ ವಿಲೇಜ್ ಇಂಡಸ್ಟ್ರೀಸ್. ಇಂಥಾ ವೇಳೆಯಲ್ಲೇ ಬಂದು ಕೆಲಸ ಮಾಡುವ ನಿಯಮ ಕೆಲವರಿಗೆ ಅನ್ವಯ ಮಾಡುವುದಕ್ಕಾಗುವುದಿಲ್ಲ ಅದೇ ರೀತಿ ಸ್ಟೇಟ್‌ಬ್ಯಾಂಕ್ ಆಫ್ ಮೈಸೂರು ಕೆಲವು ನೌಕರರು 5 ಗಂಟೆ ಆದಮೇಲೂ ಕೂಡ ಇರಬೇಕಾದ ಸಂದರ್ಭ ಬರುತ್ತದೆ. ಹಲವಾರು ವೇಳೆ ರಜಾ ಇರತಕ್ಕ ದಿನಗಳಲ್ಲೂ ಸಹ— ಆದಿತ್ಯವಾರಬಂದು ಲೆಕ್ಕ ಸರಿಯಾಗಿದೆಯೇ ಇಲ್ಲವೇ ಅಂತ ಹೇಳಿ ಜಫ್ತಿ ಮಾಡುವುದಕ್ಕೆ ಬರಬೇಕಾಗುತ್ತದೆ. ಈಗ ಇರತಕ್ಕ ಷಾಪ್ ಅಂಡ್ ಕಮರ್ಷಿಯಲ್ ಎಸ್ಟ್ಯಾಬ್ಲಿಸ್‌ಮೆಂಟ್ ಆಕ್ಟನ್ನು ಅನ್ವಯ ಮಾಡುವುದರಿಂದ ಅವರು ಮಾಡುತ್ತಾ ಇರತಕ್ಕ ಕೆಲಸಕ್ಕೆ ತೊಂದರೆಯಾಗುತ್ತದೆ, ಇದನ್ನು ಮನಗಂಡು ಅವರು ನಮಗೆ ವಿನಾಯಿತಿ ಕೊಡಿ ಎಂದು ಕೇಳಿದ್ದರು. ಇವೆಲ್ಲಾ ಸಾರ್ವಜನಿಕ ಸಂಸ್ಥೆಗಳು, ಅವರಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿಯವರ ವಿಚಾರದಲ್ಲಿ, ಅವರ ಕ್ಷೇಮಾಭ್ಯುದಯದ ವಿಚಾರದಲ್ಲಿ ಅವರು ಹೆಚ್ಚು ಗಮನವನ್ನು ಕೊಡತಕ್ಕವರು, ಬೇರೆ ಕಡೆ ಕೆಲಸ ಮಾಡುವವರಿಗಿಂತ ಉತ್ತಮವಾದ ಸೌಲಭ್ಯ ಅಲ್ಲಿ ದೊರೆಯುತ್ತಾ ಇದೆ. ಹಾಗಿದ್ದು ಅವರ ನ್ಯಾಯವಾದಂತಹ ಕಾರಣಗಳಿಗಾಗಿ ವಿನಾಯಿತಿ ಕೇಳಿದಾಗ ಅದನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದು ಅಷ್ಟು ಚೆನ್ನಾಗಿಲ್ಲ ಅಂತ ಅನ್ನುವುದು ಸರ್ಕಾರದ ಭಾವನೆ, ಆ ಕಾರಣದಿಂದಲೇ ಈ ತಿದ್ದುಪಡಿಯನ್ನು ತಂದಿರುವುದು. ಶ್ರೀಮಾನ್ ಆಂಜನಪ್ಪನವರು ಹೇಳಿದಂತೆ ನೌಕರರ ಹಕ್ಕುಬಾಧ್ಯತೆಗಳನ್ನು ಕಾಪಾಡಬೇಕು, ಅವರು ಅನಾವಶ್ಯಕವಾದ ತೊಂದರೆಗಳಿಗೆ ಈಡಾಗುವಂತಹ ರೀತಿಯಲ್ಲಿ ಮಾಡಬಾರದು, ನಾವು ಮೊದಲು ಯಾವ ಉದ್ದೇಶದಿಂದ ಈ ಕಾನೂನನ್ನು ಮಾಡಿದೆವೋ ಅದು ಈಡೇರಬೇಕು ಅಂತ ಅನ್ನುವುದು ಸರ್ಕಾರಕ್ಕೂ ಕೂಡ ಇದೆ. ಆದರೂ ನಾನು ಈಗಾಗಲೇ ಹೇಳಿದಂತೆ ಕೆಲವು ಸಂಸ್ಥೆಗಳಿಗೆ ವಿನಾಯಿತಿ ಕೊಡುವುದು ಅಗತ್ಯವಾಗಿದೆ. ಒಂದುವೇಳೆ ಅಲ್ಲಿನ ಪರಿಸ್ಥಿತಿ ಏನಾದರೂ ಬೇರೆಯಾದರೆ ಈಗ ಕೊಟ್ಟಿದ್ದಂಥ ಅನುಮತಿಯನ್ನು ಹಿಂದಕ್ಕೆ ತೆಗೆದು ಕೊಳ್ಳುವುದಕ್ಕೂ ಕೂಡ ಅವಕಾಶವಿದೆ. ಆದ್ದರಿಂದ ಈ ತಿದ್ದುಪಡಿಯನ್ನು ಸಭೆಯವರು ಒಪ್ಪಿಕೊಂಡು ಸರ್ವಾನುಮತದಿಂದ ಅಂಗೀಕಾರ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Mr. DEPUTY CHAIRMAN.—The question is :

"That the Mysore Shops and Commercial Establishments (Amendment) Bill, 1969, be taken into consideration."

The motion was adopted.

CLAUSES

Mr. DEPUTY CHAIRMAN.—The question is :

"The clause 2, do atand part of the Bill".

The motion was adopted.

Clause 2 was added to the Bill.

Mr. DEPUTY CHAIRMAN.—The question is :

" That clause 1, the Long Title and the Enacting formula do stand part of the Bill."

The motion was adopted.

Clause, 1 the Long Title and the Enacting Farmula were added to the Bill.

Motion to pass

Sri K. PUTTASWAMY.—Sir, I beg to move :

" That the Mysore Shops and Commercial Establishments (Amendment) Bill, 1969 be passed."

Mr. DEPUTY CHAIRMAN.—The question is :

" That the Mysore Shops and Commercial Establishments (Amendment) Bill, 1969, be passed."

The motion was adopted.

Mysore Civil Courts (Amendment) Bill, 1969

Motion to consider

Sri K. PUTTASWAMY.—I move :

" That the Mysore Civil Courts (Amendment) Bill, 1969, be taken into consideration ".

Mr. DEPUTY CHAIRMAN.—Motion moved :

" That the Mysore Civil Courts (Amendment) Bill, 1969, be taken into consideration. "

† ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಈಗ ನಾನು ಮೈಸೂರು ಸಿವಿಲ್‌ಕೋರ್ಟುಗಳ (ತಿದ್ದುಪಡಿ) ಮಸೂದೆ—1969 ಇದನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. ಈ ತಿದ್ದುಪಡಿ ಮಸೂದೆಯ ಅವಶ್ಯಕತೆಯೇನು ಎಂಬುದನ್ನು ಮಾನ್ಯ ಸದಸ್ಯರೆಲ್ಲರೂ ಓದಿ ತಿಳಿದುಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಇತ್ತೀಚೆಗೆ ಸಿವಿಲ್ ಕೋರ್ಟುಗಳು ಜಾರಿಗೆ ಬಂದಮೇಲೆ ನಮ್ಮ ರಾಜ್ಯ

(ಶ್ರೀ ಕೆ. ಪುಟ್ಟಸ್ವಾಮಿ)

ದಲ್ಲಿ ಇರತಕ್ಕ ಮುನಿಸಿಫ್ಸ್ ಕೋರ್ಟುಗಳೇನಿವೆ ಇವುಗಳಿಗೆ 10 ಸಾವಿರ ರೂಪಾಯಿಗಳಿಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ನಡೆಸುವುದಕ್ಕೆ ಅವಕಾಶವಿಲ್ಲ. ಇನ್ನು ಈ ಸಿವಿಲ್ ಜಡ್ಜ್‌ಗಳ ಕೋರ್ಟಿನಲ್ಲಿ ಇವು ಅನ್ ಲಿಮಿಟೆಡ್ ಜೂರಿಸ್‌ಡಿಕ್ಷನ್ ಆದ್ದರಿಂದ ಯಾವ ವ್ಯವಹಾರಗಳನ್ನಾದರೂ ಹೂಡಬಹುದು. ಇನ್ನು ಅಪೀಲುಗಳನ್ನು ದಾಖಲ್ಮಾಡತಕ್ಕ ವಿಚಾರದಲ್ಲಿ ಮುನಿಸೀಫ್ ಕೋರ್ಟಿನಲ್ಲಿ ಇತ್ಯರ್ಥವಾದ ಸಿವಿಲ್ ಮೊಕ್ಕದ್ದಮ್ಮೆಗಳ ಮೌಲ್ಯ 5 ಸಾವಿರದೊಳಗಿದ್ದರೆ ಅಂಥ ಕೇಸುಗಳ ಅಪೀಲನ್ನು ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಅಡ್ಮಿಟ್ ಮಾಡುವುದಕ್ಕೆ ಅವಕಾಶವಿಲ್ಲ. ಅಲ್ಲದೆ ಇನ್ನು ಸಿವಿಲ್ ಜಡ್ಜ್ ಕೋರ್ಟುಗಳಲ್ಲಿ ತೀರ್ಮಾನವಾದಂಥ ಮೊಕದ್ದಮೆಗಳ ಮೌಲ್ಯ 20 ಸಾವಿರದೊಳಗಿದ್ದರೆ ಅಂಥ ಮೊಕದ್ದಮೆಗಳ ಅಪೀಲನ್ನು ಡಿಸ್ಟ್ರಿಕ್ಟ್ ಜಡ್ಜಸ್ ಕೋರ್ಟಿನಲ್ಲಿ ದಾಖಲ್ಮಾಡಬಹುದು. ಅದಕ್ಕೂ ಹೆಚ್ಚಿನ ಮೌಲ್ಯ ಇದ್ದಾಗ ಆ ಕೇಸುಗಳ ಅಪೀಲನ್ನು ಹೈಕೋರ್ಟಿನಲ್ಲಿ ದಾಕಲ್ಮಾಡಬೇಕೆಂದು ಇದರಲ್ಲಿ ನಮೂದಿಸಿರುತ್ತೆ. ಹಾಲಿ ಕೆಲವು ಜಿಲ್ಲೆಗಳಲ್ಲಿ ಇರತಕ್ಕ ಡಿಸ್ಟ್ರಿಕ್ಟ್ ಕೋರ್ಟುಗಳಲ್ಲಿ ಡಿಸ್ಟ್ರಿಕ್ಟ್ ಅಂಡ್ ಸೆಷನ್ ಜಡ್ಜ್‌ರಿಗೆ ಸಾಕಷ್ಟು ಕೆಲಸವಿಲ್ಲ. ಆದರೆ ಎಲ್ಲಾ ಸಿವಿಲ್ ಜಡ್ಜರ ಕೋರ್ಟಿನಲ್ಲೂ ವ್ಯವಹಾರಗಳು ಜಾಸ್ತಿಯಾಗಿರುತ್ತವೆ. ಹೀಗೆ ಎಲ್ಲಿ ವ್ಯವಹಾರಗಳ ಒತ್ತಡ ಜಾಸ್ತಿಯಾಗುತ್ತದೆ ಅಂಥ ಕಡೆಗಳಲ್ಲಿ ಕೆಲವು ವ್ಯವಹಾರಗಳಲ್ಲಿ ನ್ಯಾಯಾಲಯಗಳಿಗೆ ಸಮರ್ಪಕವಾಗಿ ನ್ಯಾಯ ನಿರ್ವಹಣೆ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಸರ್ಕಾರದವರು ಆರೀತಿ ಭಾವಿಸಿದ್ದಾರೆ. ಆದ್ದರಿಂದ ಎಲ್ಲಿ ಹೆಚ್ಚಿಗೆ ವ್ಯವಹಾರಗಳಿರುತ್ತವೋ ಅವುಗಳನ್ನು ಕಡಮೆ ವ್ಯವಹಾರವಿರತಕ್ಕ ಕಡೆಗೆ ವರ್ಗಾಯಿಸುವುದಕ್ಕೆ ಹೈಕೋರ್ಟಿನವರೂ ಕೂಡ ಒಪ್ಪಿಗೆ ಕೊಟ್ಟಿದ್ದಾರೆ. ಆದ್ದರಿಂದ ಆ ಎಲ್ಲ ವಿವರಗಳನ್ನೂ ಒಳಗೊಂಡಿರತಕ್ಕ ಈ ಒಂದು ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. ಇನ್ನು ಇದು ಇಲ್ಲಿ ಪಾಸಾಗಿ ಆಕ್ಟ್ ಆದ ತರುವಾಯ ಮುನಿಸೀಫ್ ಕೋರ್ಟಿನಲ್ಲಿ 5 ಸಾವಿರದೊಳಗಡೆ ಇದ್ದು ತೀರ್ಮಾನವಾಗತಕ್ಕ ಮೊಕದ್ದೊಮ್ಮೆಗಳ ಅಪೀಲೆಲ್ಲಾ ಮುಂದೆ ಸಿವಿಲ್ ಜಡ್ಜಸ್ ಕೋರ್ಟಿಗೆ ದಾಖಲ್ಮಾಡಲಾಗುತ್ತದೆ. ಇತರೇ ಕೆಲವು ಮೊಕದ್ದಮೆಗಳ ಅಪೀಲನ್ನೂ ಈ ಕೋರ್ಟಿಗೆ ದಾಖಲ್ಮಾಡಬಹುದು. ಡಿಸ್ಟ್ರಿಕ್ಟ್ ಕೋರ್ಟುಗಳು ಇನ್ನು ಮುಂದಕ್ಕೆ ಅವು ಅಪೇಕ್ಷಿಸುವುದಾದರೆ ಪ್ರತ್ಯೇಕ ಆಕ್ಟ್‌ಗಳ ಆಧಾರದಮೇಲೆ ಆ ಕೋರ್ಟುಗಳು ಪ್ರಿನ್ಸಿಪಲ್ ಸಿವಿಲ್ ಜಡ್ಜಸ್ ಕೋರ್ಟುಗಳ ವ್ಯವಹಾರಗಳನ್ನು ನಡೆಸಬಹುದೆಂದು ಹೇಳಿದೆ. ಅದಕ್ಕೂ ಇದರಲ್ಲಿ ಅವಕಾಶ ಮಾಡಲಾಗಿದೆ. ಇದಕ್ಕೆ ಕಾರಣ ಕೆಲವು ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟ್ ಜಡ್ಜ್‌ರ ಕೋರ್ಟುಗಳಲ್ಲಿ ಸಾಕಷ್ಟು ವ್ಯವಹಾಗಳು ಇಲ್ಲ. ಇದೇ ತಿದ್ದುಪಡಿ ಮಸೂದೆಯಲ್ಲಿ ಇನ್ನೂ ಒಂದೆರಡು ತಿದ್ದುಪಡಿಗಳನ್ನು ಅಳವಡಿಸಿದೆ. ಆ ತಿದ್ದುಪಡಿಗಳೇನೆಂದರೆ—ಇಂಡಿಯನ್ ಸಕ್ಸೆಷನ್ ಆಕ್ಟಿಗೆ ಸಂಬಂಧಪಟ್ಟ ವ್ಯವಹಾರಗಳನ್ನೆಲ್ಲಾ ಜಿಲ್ಲಾ ನ್ಯಾಯಾಧೀಶರೇ ವಿಚಾರಣೆ ಮಾಡಬೇಕೆಂಬ ನೇಮವಿದೆ. ಸಾಮಾನ್ಯವಾಗಿ ಜಿಲ್ಲಾ ಕೋರ್ಟುಗಳೆಲ್ಲಾ ಜಿಲ್ಲಾ ಕಸಬೆಗಳಲ್ಲೇ ಇರುತ್ತವೆ. ಸಕ್ಸೆಷನ್ ಆಕ್ಟಿಗೆ ಸಂಬಂಧಪಟ್ಟ ಕೆಲವು ಸಣ್ಣ ಪುಟ್ಟ ವ್ಯವಹಾರಗಳನ್ನು ಜಿಲ್ಲಾ ಕಸಬೆಗೆ ಬಂದು ಅಲ್ಲೇ ಅವುಗಳನ್ನು ಸಿವಿಲ್ ಜಡ್ಜರ ಕೋರ್ಟಿನಲ್ಲಿ ನಡೆಸಬೇಕೆಂದರೆ ಜನರಿಗೆ ಹಣದ ತೊಂದರೆ ಮತ್ತು ಇತರೇ ಕಷ್ಟಗಳಿರುತ್ತವೆ. ಈ ತೊಂದರೆಯನ್ನು ತಪ್ಪಿಸುವುದಕ್ಕಾಗಿ ಈ ಅಧಿಕಾರವನ್ನು ಮುನಿಸಿಫ್ ಕೋರ್ಟುಗಳಿಗೆ ವರ್ಗಾಯಿಸಲು ನಮ್ಮ ಹೈಕೋರ್ಟೂ ಕೂಡ ಒಪ್ಪಿದೆ. ಮುಂದೆ ಅವುಗಳ ಬಗ್ಗೆ ಅಪೀಲ್ ಹೋಗಬೇಕಾದರೆ ಅವರು ಹೈಕೋರ್ಟಿಗೆ ಬರಲು ಅವಕಾಶ ಮಾಡಿದೆ. ಈ ತಿದ್ದುಪಡಿ ಮಸೂದೆಯನ್ನು ಒಪ್ಪಿದರೆ ಏನೂ ತೊಂದರೆಗಳಾಗುವುದಿಲ್ಲ. ಈ ತಿದ್ದುಪಡಿಗಳೆಲ್ಲ ಬಹಳ ಅಗತ್ಯವಾದುವುಗಳು. ಆದ್ದರಿಂದ ಸರ್ಕಾರ ಈ ತಿದ್ದುಪಡಿಗಳನ್ನು ಸಭೆಯ ಮುಂದೆ ಮಂಡಿಸಿದೆ. ಮಾನ್ಯ ಸಭೆಯವರು ಈ ತಿದ್ದುಪಡಿ ಮಸೂದೆಗೆ ಬೆಂಬಲ ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ವಿ. ಆಂಜನಪ್ಪ.—ಸ್ವಾಮಿ, ಸರ್ಕಾರದವರು ಸಭೆಯ ಮುಂದೆ ಮಂಡಿಸಿರತಕ್ಕ ತಿದ್ದುಪಡಿ ಮಸೂದೆಯಲ್ಲಿ ಔಚಿತ್ಯ ಹೆಚ್ಚಾಗಿದೆಯೇ ಅನೌಚಿತ್ಯ ಹೆಚ್ಚಾಗಿದೆಯೇ ಎಂಬ ಬಗ್ಗೆ ಸರ್ಕಾರದವರಲ್ಲಿ ಒಂದು ಮನವಿ ಮಾಡಿಕೊಳ್ಳಬೇಕಾಗಿದೆ. ಸರ್ಕಾರದವರು ಆ ಸಿವಿಲ್ ಜಡ್ಜ್‌ರ ಕೋರ್ಟ್ ಆಕ್ಟ್‌ನ್ನು ಪಾಸ್‌ಮಾಡಿಸಿ ಇಲ್ಲಿಗೆ ಸುಮಾರು 5 ವರ್ಷಗಳಾಯಿತು. ಈ ದಿವಸ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಡಿಸ್ಟ್ರಿಕ್ಟ್ ಅಂಡ್ ಸೆಷನ್ ಜಡ್ಜರ ಕೋರ್ಟು ಇರುತ್ತದೆ. ಆ ದಿವಸ ಆ ಒಂದು ಪ್ಯಾಟ್ರನ್ ಬಹಳ ಒಳ್ಳೆಯದೆಂದು ಹೇಳಿ ಅದನ್ನು ಪಾಸ್ ಮಾಡಿಸಿಕೊಂಡರು. ಆ ಪ್ಯಾಟ್ರನ್ ಪ್ರಕಾರ ಒಂದು ಜಿಲ್ಲೆಯ ವ್ಯವಹಾರಗಳು ಹೆಚ್ಚಿರಲಿ ಕಡಮೆ ಇರಲಿ ಪ್ರತಿಯೊಂದು ಜಿಲ್ಲೆಗೂ ಒಂದೊಂದು ಜಿಲ್ಲಾ ಕೋರ್ಟನ್ನ ನಾವು ಮಾಡಿದ್ದೇವೆ. ಆದರೆ ಇಲ್ಲಿ ಕೆಲವು ತಿದ್ದುಪಡಿಗಳನ್ನು ಹೈಕೋರ್ಟಿನವರು ಶಿಫಾರ್ಸುಮಾಡಿದ್ದರಿಂದ ತಂದಿದ್ದೇವೆ ಎಂದು

ಹೇಳುತ್ತಿದ್ದಾರೆ. ಸರ್ಕಾರದವರು ಹೀಗೆ ತಿದ್ದುಪಡಿಗಳ ಮೇಲೆ ತಿದ್ದುಪಡಿಗಳನ್ನು ಪದೇ ಪದೇ ತರುತ್ತಿದ್ದರೆ ಈ ಕೋರ್ಟುಗಳಲ್ಲಿ ವ್ಯವಹಾರ ನಡೆಸತಕ್ಕಂಥ ಜನಗಳಿಗೆ ಯಾವ ಕಟ್ಟಲೆಯನ್ನು ಯಾವ ಕೋರ್ಟಿನಲ್ಲಿ ದಾಖಲ್ಮಾಡಬೇಕೆಂಬುದೇ ಗೊತ್ತಾಗದೆ ಬಹಳ ತೊಂದರೆ ಆಗಬಹುದು. ಆದರೆ ಸರ್ಕಾರದವರು ಅದಕ್ಕೆ ವಕೀಲರಿದ್ದಾರೆಂದು ಹೇಳಬಹುದು. ಆದರೆ ಆ ಲಾಯರನ್ನು ಕಟ್ಟಿಕೊಂಡು ವ್ಯವಹಾರ ಮಾಡುವುದರಲ್ಲಿ ಎಷ್ಟು ಜನ ಹಣವಂತರಿದ್ದಾರೆ? ಈಗ ಮಾಡಿರತಕ್ಕ ಸುಧಾರಣೆಗಳೇ ಸಾಕಾಗಿತ್ತು. ಕೆಲವು ಜಿಲ್ಲೆಗಳಲ್ಲಿ ಕೆಲವು ಕೋರ್ಟುಗಳಿಗೆ ಹೆಚ್ಚು ಕೆಲಸವಿರಬಹುದು, ಇನ್ನು ಕೆಲವು ಕೋರ್ಟುಗಳಿಗೆ ಕಡಮೆ ಕೇಸುಗಳಿರಬಹುದು. ಇನ್ನು ಕೆಲವು ಬೇರೆ ಜಿಲ್ಲೆಗಳಲ್ಲಿ ಬೇರೆ ರೀತಿ ಇರಬಹುದು. ಆದರೆ ಅದು ಕೋರ್ಟುಗಳ ತಪ್ಪಲ್ಲ. ಅದು ಅಲ್ಲಿರತಕ್ಕ ಜನರನ್ನು ಅವಲಂಬಿಸಿದೆ. ಆದರೆ ಈ ಕೋರ್ಟುಗಳಿಗೆ ಬರತಕ್ಕ ವ್ಯವಹಾರಗಳು ಕೇವಲ ಹಣಕಾಸಿಗೆ ಸಂಬಂಧಪಟ್ಟವುಗಳೇ ಅಲ್ಲ. ಲೇಬರ್ ವ್ಯವಹಾರಗಳೂ, ಕಾಂಟ್ರಾಕ್ಟರ ವ್ಯವಹಾರಗಳೂ ಇವೆಲ್ಲಾ ಬರುವುದಕ್ಕೆ ಅವಕಾಶವಿದೆ. ಆದ್ದರಿಂದ ಮಾನ್ಯ ಸಚಿವರು ಈ ಎಲ್ಲಾ ವಿಚಾರಗಳನ್ನೂ ಪರಿಶೀಲನೆ ಮಾಡಿ ಇದನ್ನು ತಂದಹಾಗೆ ಕಾಣುವುದಿಲ್ಲ.

ಮಾನ್ಯ ಸಚಿವರು ಯಾವುದಾದರೂ ಒಂದು ಕಾನೂನು ಮಾಡಿದರೆ ಕೆಲವು ಕಾಲ ಈ ದೇಶದಲ್ಲಿ ಅದು ಜಾರಿಯಲ್ಲಿರಬೇಕು. ಪದೇ ಪದೇ ಈ ರೀತಿಯಾಗಿ ತಿದ್ದುಪಡಿ ತರುವುದು ಸಮಂಜಸವಾದುದಲ್ಲವೆಂದು ನಾನು ಸೂಚಿಸಬಯಸುತ್ತೇನೆ.

ಇಷ್ಟು ಹೇಳಿ ನನ್ನ ಮಾತನ್ನ ಮುಗಿಸುತ್ತೇನೆ.

† ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಮಾನ್ಯ ಸಭಾಪತಿಯವರೇ, ಮಾನ್ಯ ನ್ಯಾಯಾಂಗ ಸಚಿವರು ಸಿವಿಲ್ ಕೋರ್ಟ್ಸ್‌ಗೆ ಸಂಬಂಧಪಟ್ಟಹಾಗೆ ಹಾಗೂ ನಮ್ಮ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಒಂದು ಸಮಗ್ರವಾದ ಕಾನೂನನ್ನು ತಂದಿದ್ದಾರೆ. ಏನೋ ಒಂದು ರೀತಿಯಾದಂಥ ಕಾನೂನು ಬರುತ್ತದೆಂದು ಕೆಲವರಿಗೆ ಸಂದೇಹ ಬಂದಿರುವುದು. ನನಗೆ ಆ ರೀತಿ ಸಂದೇಹವಿಲ್ಲ. ಐದು ವರ್ಷಗಳ ಕಾಲದಿಂದ ಸಿವಿಲ್ ಕೋರ್ಟ್ಸ್ ಕಾನೂನನ್ನು ಕಾರ್ಯಾಚರಣೆಗೆ ತರುವಾಗ ಏನೇನು ಅನಾಹುತಗಳು ಬಂದಿದ್ದವೋ ಅವನ್ನು ಸರಿಪಡಿಸುವುದಕ್ಕೋಸ್ಕರ ಈ ಮಸೂದೆಯನ್ನು ತಂದಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತೇನೆ. ನಾನು ಈ ಮಾತನ್ನು ನನ್ನ ಸ್ವಂತ ಅನುಭವದಿಂದ ಹೇಳಬಲ್ಲೆ. ನಾವು ಕೋರ್ಟುಗಳಿಗೆ ಹೋದಾಗ ಕಕ್ಷಿಗಾರರು ಜಿಲ್ಲಾ ನ್ಯಾಯಾಧೀಶರು ಬೇಕೆಂದು ಕೇಳುತ್ತಿದ್ದರು. ಮೊದಲು ಜಿಲ್ಲಾ ನ್ಯಾಯಾಧೀಶರು ತೀರ್ಮಾನ ಮಾಡುವುದಕ್ಕೆ ಕೇಸುಗಳು ಇರಲಿಲ್ಲ. ಆದ್ದರಿಂದ ಎರಡು ಮೂರು ಜಿಲ್ಲೆಗಳಿಗೆ ಒಬ್ಬ ಜಿಲ್ಲಾ ನ್ಯಾಯಾಧೀಶರು ಇದ್ದರು. ಆದರೆ ಜನರ ಬೇಡಿಕೆಯಂತೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದು ಕೋರ್ಟು ಆಯಿತು. ಆದರೆ ಜಿಲ್ಲಾ ನ್ಯಾಯಾಧೀಶರಿಗೆ ತೀರ್ಮಾನಮಾಡುವಷ್ಟು ಕೇಸುಗಳು ಇಲ್ಲ. ಆದರೂ ಅವರಿಗೆ ಸುಮ್ಮನೆ ಒಂದು ಸಾವಿರ ರೂಪಾಯಿಗಳಷ್ಟು ಸಂಬಳವನ್ನು ಕೊಡುತ್ತಿದ್ದರು. ಇದರ ಬಗ್ಗೆ ಈ ಸಭೆಯಲ್ಲಿ ಟೀಕೆ ಬರುತ್ತದೆಂದು ಸುಮ್ಮನೆ ಅವರಿಗೆ ಸಂಬಳವನ್ನು ಕೊಡುತ್ತಾ ಬಂದಿದ್ದರು. ಈಗ ಅವರಿಗೆ ಬೇಕಾದಷ್ಟು ಕೆಲಸ ಕೊಡಬೇಕೆಂಬ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತಂದಿದ್ದಾರೆ. ಹಿಂದೆ ತಂದಂಥ ಸಿವಿಲ್ ಕೋರ್ಟ್ಸ್ ಆಕ್ಟ್ ಪ್ರಕಾರ ರೈಟ್ ಆಫ್ ಅಪೀಲ್ 20 ಸಾವಿರ ರೂಪಾಯಿಗಳ ಮೇಲೆ ಮಾತ್ರ ಜಿಲ್ಲಾ ನ್ಯಾಯಾಧೀಶರಿಗೆ ಹೋಗುತ್ತಿತ್ತು. ಅದರ ಒಳಗಡೆ ಇರುವ ಕೇಸಸ್ ಸಿವಿಲ್ ಜಡ್ಜ್‌ಗೆ ಹೋಗುತ್ತಿತ್ತು. ಅವರಿಗೆ ಕೇಸುಗಳನ್ನು ತನಿಖೆ ಮಾಡುವುದೇ ಬೇಕಾದಷ್ಟು ಇದೆ. ಅದರ ಜೊತೆಗೆ ಅವರಿಗೆ ಅಪೀಲು ಕೊಟ್ಟರೆ ನಿಜವಾಗಿ ಒಂದು ಕೇಸೂ ಕೂಡ ತೀರ್ಮಾನವಾಗುವುದಿಲ್ಲ. ಸಿವಿಲ್ ಕೋರ್ಟಿಗೆ ಹೋದರೆ ಒಂದೊಂದು ಕೇಸು ತೀರ್ಮಾನವಾಗಲು ಎಷ್ಟು ದಿವಸವಾಗುತ್ತದೆಂಬುದು ಗೊತ್ತು. ಜಿಲ್ಲಾ ನ್ಯಾಯಾಧೀಶರಿಗೆ ಸುಮ್ಮನೆ ಸಂಬಳ ಕೊಡಬೇಕಾಗುತ್ತದೆ. ಕೆಲಸ ಮಾತ್ರ ಇರುವುದಿಲ್ಲ. ಆದ್ದರಿಂದ ಐದು ಸಾವಿರ ರೂಪಾಯಿಗಳಿಗಿಂತ ಒಳಪಟ್ಟು ಸಿವಿಲ್ ಜಡ್ಜ್‌ಗೆ ಅಪೀಲಿಗೆ ಅವಕಾಶವಿರಲಿ, ಅದಕ್ಕೆ ಮೇಲ್ಪಟ್ಟು ಜಿಲ್ಲಾ ನ್ಯಾಯಾಧೀಶರಿಗೆ ಅವಕಾಶವಿರಲಿ ಎಂಬುದಾಗಿ ತಂದಿರುವುದನ್ನು ನಾನು ಒಪ್ಪುತ್ತೇನೆ.

ಶ್ರೀ ಎ. ಕೆ. ಸುಬ್ಬಯ್ಯ.—ಈಗ ಅನೇಕ ಮುನ್ಸೀಫ್ ಕೋರ್ಟುಗಳಿವೆ. ಅಲ್ಲಿ ಸಾಕಷ್ಟು ಕೆಲಸವಿಲ್ಲ. ಅವರಿಗೆ ಏನು ಕೆಲಸ ಒದಗಿಸಬೇಕೆಂದು ಮಾನ್ಯ ಸದಸ್ಯರು ಅಪೇಕ್ಷೆ ಪಡುತ್ತಾರೆ?

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ತಮ್ಮ ಅಭಿಪ್ರಾಯವನ್ನು ಕಾನೂನು ಸಚಿವರಿಗೆ ಕೊಟ್ಟರೆ ಅದನ್ನು ಜಾರಿಗೆ ತರುವುದಕ್ಕೆ ಸಿದ್ಧರಿದ್ದಾರೆ. ಅವರು ಧೈರ್ಯವಾಗಿದ್ದಾರೆ. ನ್ಯಾಯ ಮಂತ್ರಿಗಳು ಅದನ್ನು ಜಾರಿಗೆ ತರುತ್ತಾರೆ. ಇನ್ನು ಜಿಲ್ಲಾ ನ್ಯಾಯಾಧೀಶರಿಗೆ ಅನುಭವ ಪರಿಪಕ್ವವಾಗಿರುತ್ತದೆ. ಅಂತಹವರು ಅಪೀಲುಗಳನ್ನು ತೀರ್ಮಾನ ಮಾಡುವುದು ಒಳ್ಳೆಯದು. ಏಕೆಂದರೆ,

(ಶ್ರೀ ಕೆ. ಸೂರ್ಯನಾರಾಯಣ ಅಡಿಗ)

ಸಿವಿಲ್ ಜಡ್ಜ್ ಆಗಿರುವವರು ಬೇಗ ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. ಹೆಚ್ಚಿನ ಪರಿಪಕ್ವವಾದ ಅನುಭವವುಳ್ಳ ಜಿಲ್ಲಾ ನ್ಯಾಯಾಧೀಶರಿಗೆ ಆ ಅಧಿಕಾರವನ್ನು ಕೊಡುವುದು ಸಾಧುವಾದುದು. ಅದೂ ಅಲ್ಲದೆ ಜನರಿಗೆ ಇವತ್ತು ಸಕ್ಸೆಷನ್ ಸರ್ಟಿಫಿಕೇಟ್ ಪಡೆಯಬೇಕಾದರೆ ಬಹಳ ಕಷ್ಟವಾಗಿದೆ. ಎಲ್.ಐ.ಸಿ. ಮತ್ತು ಬ್ಯಾಂಕುಗಳಲ್ಲಿ ಇರತಕ್ಕ ಹಣಕ್ಕೆ ಯಾರು ವಾರಸುದಾರರು ಎಂಬುದನ್ನು ಹೇಳಬೇಕಾಗುತ್ತದೆ. ಅದೂ ಕೂಡ ಜಿಲ್ಲಾಮಟ್ಟಕ್ಕೆ ಹೋಗಬೇಕಾಗುತ್ತದೆ. ಈ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ಮುನ್ಸೀಫ್ ಕೋರ್ಟಿಗೆ ಕೊಡುವುದಕ್ಕಾಗುವುದಿಲ್ಲ. ಸರ್ಕಾರದವರು ಜನರ ಹಿತವನ್ನು ನೋಡಿ ಈ ತಿದ್ದುಪಡಿಯನ್ನು ತಂದಿದ್ದಾರೆ. ಏನಾದರೂ ಒಂದು ಟೀಕೆ ಬರಲಿ ಅದರಲ್ಲಿ ಯಾವುದು ಒಳ್ಳೆಯದು ಎಂಬುದಾಗಿ ಕಾಣುತ್ತದೋ ಅದನ್ನು ಆದಷ್ಟು ಜಾಗ್ರತೆ ಜಾರಿ ಮಾಡಬೇಕೆಂದು ನ್ಯಾಯಸಚಿವರು ಈ ದೇಶದ ಮುಂದೆ ಈ ಮಸೂದೆಯನ್ನು ತಂದಿರುವುದನ್ನು ನಾನು ಸ್ವಾಗತಿಸುತ್ತೇನೆ. ಮತ್ತು ಅಭಿನಂದಿಸುತ್ತೇನೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ನನಗೆ ಒಂದು ಇನ್‌ಫರ್‌ಮೇಷನ್ ಬೇಕಾಗಿದೆ. ಇವತ್ತಿನ ದಿವಸ ಯುಗಪುರುಷನಾದಂಥ ಗೀತಾಚಾರ್ಯನಾದ ಶ್ರೀ ಕೃಷ್ಣನ ಜನ್ಮಾಷ್ಟಮಿ. ಈ ದಿನ ನಾವು ಅನೇಕ ಮಸೂದೆಗಳನ್ನು ಇಲ್ಲಿ ಪಾಸ್ ಮಾಡಿದ್ದೇವೆ. ಈ ಸಭೆಯನ್ನು ಜಾಗ್ರತೆ ಮುಗಿಸಿ ನಾವೆಲ್ಲರೂ 6 ಗಂಟೆಗೆ ಹೋಗುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಇವತ್ತು ಗೋಕುಲಾಷ್ಟಮಿಯಾಗಿರುವುದರಿಂದ ಶ್ರೀ ಕೃಷ್ಣನು ಹುಟ್ಟುವವರೆಗೂ ಅಂದರೆ ಸುಮಾರು 10 ಗಂಟೆಯವರೆಗೂ ನಾವು ಈ ಸಭೆಯಲ್ಲಿ ಕೂತು ಕೆಲಸ ಮಾಡಬಹುದು.

Sri M. LINGANNA.—Mr. Chairman, Sir, one peculiar aspect which appealed to my mind by going through this Bill, is, that the two principles (1) what is called decentralization and (2) principle of centralization, are blended, as far as the pecuniary jurisdiction of the Munsiff Courts and the Civil Courts are concerned, the trend seems to be towards Centralization. It would be more safe and expedient if the pecuniary jurisdiction of the Civil Courts are subject to a lower limit, and when value of the suit exceeds Rs. 5,000-they should be processed through the District Courts on the other hand, under section 23 (a), we have, in a way, decentralized the powers and the High Court has been authorised to invest powers to the Civil Courts and also Munsif Courts so far as the litigation under Succession Act is concerned, and the Pecuniary jurisdiction may also be notified. I do not know why these two things have been blended. I hope it is with a happy note. The Law Minister was pleased to say that the litigants could be put to difficulties if suits were to be only processed through the District Courts and if this pecuniary jurisdiction is given to the Civil Courts and Munsiff Courts their hardships would be lessened. The same argument holds good so far as suits which lie under Civil suits are concerned. I am rather unable to find this argument in this particular bill. Anyhow the mind of the Law Minister seems to be that with regard to centralization of pecuniary jurisdiction in respect of Civil Courts it is based on the recommendation of the High Court. Of Course, it may be tried. But, in a way, reshifting of jurisdictions very often may lead to difficulty. The process of law and the judicious application of the mind has to be at an elevated hight. If that is the only criteria with which this centralization is done, I am one with the Law Minister and I wholeheartedly support this Bill

though there seems to be a contradiction in the principle of blending both centralization and decentralization.

† ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಶ್ರೀಮಾನ್ ಅಂಜನಪ್ಪನವರು ಈ ಮಸೂದೆಯ ಮೇಲೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. 5 ವರ್ಷ ಆಗುವುದಕ್ಕೆ ಮುಂಚಿತವಾಗಿ ತಿದ್ದುಪಡಿ ತಂದಿದ್ದಾರೆ ಎಂದು ಹೇಳಿದರು. ಇದು ನ್ಯಾಯ ನಿರ್ವಹಣೆಗೆ ಸಂಬಂಧಪಟ್ಟ ಕಾನೂನು. ಕಾನೂನಿನ ಮೂಲಭೂತವಾದ ಯಾವ ನಿಯಮವೂ ಇದರಲ್ಲಿ ಅಡಕವಾಗಿಲ್ಲ. ಅಪೀಲ್ ಸಿವಿಲ್ ಕೋರ್ಟಿನಲ್ಲಿ ಇತ್ಯರ್ಥ ಆಗಬೇಕೇ, ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಇತ್ಯರ್ಥವಾಗಬೇಕೇ ಎಂಬುದು. ಮಾನ್ಯ ಅಡಿಗರು ಹೇಳಿದಹಾಗೆ ತೀರ್ಮಾನ ಮಾಡುವುದರಲ್ಲಿ ಸಿವಿಲ್ ಜಡ್ಜರಿಗಿಂತಲೂ ಡಿಸ್ಟ್ರಿಕ್ಟ್ ನ್ಯಾಯಾಧೀಶರು ಹೆಚ್ಚು ಕಾಲ ಕೆಲಸ ಮಾಡಿದವರಾಗಿರುತ್ತಾರೆ; ಆದ್ದರಿಂದ ತೀರ್ಮಾನಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಆದರೂ ಒಂದೇ ನಿಯಮವನ್ನು ಅನುಸರಿಸುತ್ತಾ ಇಲ್ಲ. ಕೆಲವು ಜಿಲ್ಲೆಗಳಲ್ಲಿ ಕೆಲವು ನ್ಯಾಯಾಧೀಶರಿಗೆ ಹೆಚ್ಚು ಕೆಲಸವಿದೆ. ಅವರು ಜಿಲ್ಲೆಯಲ್ಲಿ ತಮಗೆ ಕೊಟ್ಟ ಕೆಲಸಗಳನ್ನು ಮುಗಿಸುವುದಕ್ಕೆ ಆಗುವುದಿಲ್ಲ. ಅಂಥ ಸಂದರ್ಭದಲ್ಲಿ ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಅಪೀಲ್ ತೀರ್ಮಾನ ಮಾಡುತ್ತಾರೆ. ಎಲ್ಲಿ ಸಿವಿಲ್ ಕೋರ್ಟಿನಲ್ಲಿ, ಜಿಲ್ಲಾ ಕೋರ್ಟಿನಲ್ಲಿ ಕೆಲಸ ಕಡಿಮೆ ಇದೆ, ಅಲ್ಲಿಗೆ ಮಾತ್ರ ಇದು ಅನ್ವಯವಾಗುತ್ತದೆ. ಮೈಸೂರು, ಮಂಡ್ಯ, ಚಿತ್ರದುರ್ಗ ಇಂಥ ಕಡೆಗಳಲ್ಲಿ ಜಿಲ್ಲಾ ನ್ಯಾಯಾಧೀಶರ ಕೋರ್ಟಿನಲ್ಲಿ ಹೆಚ್ಚು ಮೊಕದ್ದಮೆಗಳು ಇಲ್ಲ. ಈ ದೃಷ್ಟಿಯನ್ನು ಅರಿತು ಸಿವಿಲ್ ಜಡ್ಜ್ ಕೋರ್ಟಿನಿಂದ ಅಪೀಲ್ ತರಿಸಿಕೊಂಡು ತೀರ್ಮಾನ ಮಾಡಿದ್ದಾರೆ. ಅದನ್ನು ವ್ಯಾಲಿಡೇಶನ್ ಮಾಡುವುದಕ್ಕೆ ಕೂಡ 7ನೇ ಕ್ಲಾಸಿನಲ್ಲಿ ತಿದ್ದುಪಡಿಯನ್ನು ತಂದಿದ್ದೇವೆ. ಮತ್ತು ಮದ್ರಾಸ್ ವಿಲೇಜ್ ಕೋರ್ಟ್ಸ್ ಆಕ್ಟ್, ಬಾಂಬೇ ವಿಲೇಜ್ ಪಂಚಾಯತ್ ಆಕ್ಟ್ ರಿಪೀಲ್ ಆಗಿದೆ. ಅದು ಈಗ ಅಸ್ತಿತ್ವದಲ್ಲಿ ಇಲ್ಲ. ಈ ಮಾನ್ಯ ಸಭೆ ಇದರ ತತ್ವವನ್ನು ಒಪ್ಪಿಕೊಂಡಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಈ ಮಸೂದೆಗೆ ಯಾರೂ ತಿದ್ದುಪಡಿಯನ್ನೂ ಕೂಡ ಸೂಚಿಸಿಲ್ಲ. ಈ ಮಸೂದೆಗೆ ಬೆಂಬಲ ಕೊಟ್ಟದ್ದಕ್ಕಾಗಿ ನಾನು ನನ್ನ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY CHAIRMAN.—The question is :

"That the Mysore Civil Courts (Amendment) Bill, 1969 be taken into consideration."

The motion was adopted.

CLAUSES.

Mr. DEPUTY CHAIRMAN.—The question is :

"That Clauses 2 to 9 both inclusive do stand part of the Bill."

The motion was adopted.

Clauses 2 to 9, both inclusive were added to the Bill.

Mr. DEPUTY CHAIRMAN.—The question is :

"That Clause 1, the long title and the enacting formula do stand part of the Bill."

The motion was adopted.

Clause 1, the long title and the Enacting formula were added to the Bill."

Motion to pass

Sri K. PUTTASWAMY.—Sir, I move:

"That the Mysore Civil Courts (Amendment) Bill, 1969 be passed."

Mr. DEPUTY CHAIRMAN.—The question is:

"That the Mysore Civil Courts (Amendment) Bill, 1969 be passed."

The motion was adopted.

Mysore Sales Tax and Entertainments Tax (Amendment) Bill, 1969 (as passed by the Legislative Assembly)

Motion to Consider

Sri RAMAKRISHNA HEGDE (Minister for Finance, Planning and Youth Welfare).— Sir, I beg to move:

"That the Mysore Sales Tax and Entertainments Tax (Amendment) Bill, 1969 as passed by the Legis'ative Assembly be taken into consideration."

Mr. DEPUTY CHAIRMAN.—Motion moved:

"That the Mysore Sales Tax and Entertainments Tax (Amendment) Bill, 1969 as passed by the Legislative Assembly, be taken into consideration."

Sri RAMAKRISHNA HEGDE.—Sir, this is a very simple measure and only one section is being sought to be amended in each of the Acts. The amendment is in respect of persons responsible for cetain offence and who plead guilty before the Court and the Court is given the right to dispose of such cases as if it is heard. This is in the interest of expenditious administration of justice and in the interest of public convenience.

Mr. DEPUTY CHAIRMAN.—The question is:

"That the Mysore Sales Tax and Entertainments Tax (Amendment) Bill, 1969 as passed by the Legislative Assembly be taken into consideration."

The motion was adopted.

CLAUSES

MR. DEPUTY CHAIRMAN.—The question is :

"That clauses 2 and 3 do stand part of the Bill."

The motion was adopted.

Clauses 2 and 3 were added to the Bill.

MR. DEPUTY CHAIRMAN.—The question is :

"That clause 1, the long title and the Enacting Formula do stand part of the Bill."

The motion was adopted.

Clause 1, The long title and the Enacting formula were added to the Bill.

Motion to pass.

SRI RAMAKRISHNA HEGDE.—Sir I move :

"That the Mysore Sales Tax and Entertainments Tax (Amendment) Bill, 1969 as passed by the Legislative Assembly, be passed."

MR. DEPUTY CHAIRMAN.—The question is :

"That the Mysore Sales Tax and Entertainments Tax (Amendment) Bill, 1969 as passed by the Legislative Assembly, be passed."

The motion was adopted.

Mysore Local Authorities (Disciplinary Proceedings against Employees) Bill, 1969

(as passed by the Legislative Assembly)

Motion to Consider

SRI B. M. PATIL (Minister of State for Municipal Administration).—I beg to move :

"That the Mysore Local Authorities (Disciplinary proceedings against Employees) Bill, 1968, as passed by the Legislative Assembly be taken into consideration."

Mr DEPUTY CHAIRMAN.— Motion moved:

"That the Mysore Local Authorities (Disciplinary proceedings against Employees) Bill, 1968 as passed by the Legislative Assembly be taken into consideration."

† ಶ್ರೀ ಬಿ. ಎಂ. ಪಾಟೀಲ್.—ಸನ್ಮಾನ್ಯ ಸಭಾಪತಿಗಳೇ, ಮೈಸೂರು ರಾಜ್ಯದ ಸ್ಥಳೀಯ ಸಂಸ್ಥೆಗಳಾದ ಪುರಸಭೆಗಳು, ಕಾರ್ಪೊರೇಷನ್, ಟ್ರಸ್ಟ್‌ಬೋರ್ಡ್ ಮುಂತಾದ ಸ್ಥಳೀಯ ಸಂಸ್ಥೆಗಳಿಗೆ ಈ ರಾಜ್ಯದ ಜಾಗ್ರತಾ ಆಯೋಗದ ಅಧಿಕಾರವನ್ನು ವಿಸ್ತರಿಸಬೇಕು ಮತ್ತು ಈ ರಾಜ್ಯದ ಜಾಗ್ರತಾ ಆಯೋಗದ ಕಾರ್ಯವ್ಯಾಪ್ತಿಗೆ ಈ ಸಂಸ್ಥೆಗಳನ್ನು ಒಳಪಡಿಸಬೇಕು ಎನ್ನುವ ಉದ್ದೇಶದಿಂದ ಈ ಮಸೂದೆಯನ್ನು ತರಲಾಗಿದೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಅಭಿಪ್ರಾಯ ಪಟ್ಟಿರುವ ಹಾಗೆ ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ಸುಧಾರಿಸಬೇಕು. ಅದರ ಆಡಳಿತ ಮಟ್ಟ ಇನ್ನೂ ಮೇಲ್ಮಟ್ಟಕ್ಕೆ ಹೋಗಿ, ಅಲ್ಲಿ ಅಧಿಕಾರಿಗಳಾಗಲೀ, ನೌಕರರುಗಳಾಗಲೀ, ಯಾರು ಯಾರು ಇರುತ್ತಾರೆಯೋ ಅವರ ವಿರುದ್ಧ ಏನಾದರೂ ಭ್ರಷ್ಟಾಚಾರ, ಅಥವಾ ದುರ್ನಡತೆ ಮುಂತಾದ ಆರೋಪಣೆಗಳು ಇದ್ದಾಗ ಅವುಗಳನ್ನು ವಿಚಾರಣೆ ಮಾಡಲು ಜಾಗ್ರತಾ ಆಯೋಗಕ್ಕೆ ಅಧಿಕಾರ ಇರಬೇಕು, ಎಂದು ಈ ಮಸೂದೆಯನ್ನು ಈ ಮಾನ್ಯ ಸಭೆಯ ಮುಂದೆ ತರಲಾಗಿದೆ. ಮಾನ್ಯ ಸದಸ್ಯರುಗಳು ಸರ್ವರೂ ಇದಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟು ಈ ಸಭೆ ಇದನ್ನು ಅಂಗೀಕಾರ ಮಾಡಬೇಕೆಂದು ನಾನು ನಿವೇದಿಸಿಕೊಳ್ಳುತ್ತೇನೆ.

Mr. DEPUTY CHAIRMAN.—The House now stands adjourned to re-assemble tomorrow at 2–30 P.M.

The House adjourned at Fifteen Minutes past Six of the Clock to meet again at Thirty Minutes past Two of the Clock on Thursday the 4th September 1969.

WD 13609—GPB—600—3-4-70

ಮೈಸೂರು ವಿಧಾನ ಪರಿಷತ್ತು

MYSORE LEGISLATIVE COUNCIL

Thursday 4th September 1969.

The House met in the Council Chamber, Vidhana Soudha, Bangalore, at Thirty Minutes past Two of the Clock.

MR. DEPUTY CHAIRMAN (SRI M. MADAIAH) in the Chair.

STARRED QUESTIONS

(to which oral answers were given)

Merger of Talwadi Firka, Hosur Taluk and Madakshira in Mysore State

37. SRI M. V. VENKATAPPA (Graduates' Constituency).—

Will the Chief Minister be pleased to state:—

(*a*) whether it has come to the notice of the Government that Talawadi Firka of Hosur Taluk in Tamli Nadu and Madakshira in Andhra Pradesh are pure Kannada areas ;

(*b*) if so, the steps taken by them so far, for the merger of those parts in Mysore State ;

(*c*) whether any representations have been received from the public of these areas for the merger of the said areas with the State ;

(*d*) whether there are any proposals before the Goverament for the early merger of the above areas with the State ?

SRI VEERENDRA PATIL (Chief Minister).—

(*a*) Yes.

(*b*) The matter is under consideration of Government ; they have not yet taken a decision on the steps to be taken.

(*c*) Yes.

(*d*) Does not arise in view of the reply to clause (*b*).

ಶ್ರೀ ಎಂ. ವಿ. ವೆಂಕಟಪ್ಪ.—ಪರಿಶೀಲನೆಯಲ್ಲಿದೆ ಎಂದು ಉತ್ತರದಲ್ಲಿ ಹೇಳಿದೆ. ಇದು ಯಾವ ಮಟ್ಟದಲ್ಲಿದೆ ?

†ಶ್ರೀ ವೀರೇಂದ್ರ ಪಾಟೀಲ್.—ಇದು ಇನ್ನೂ ಸ್ಟೇಟು ಮಟ್ಟದಲ್ಲೇ ಇದೆ. ಇದರ ಮೇಲೆ ಯಾವ ಕ್ಲೇಮನ್ನೂ ಹಾಕಿಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ಗಡಿ ವಿಚಾರದಲ್ಲಿ ಎಲ್ಲ ವಿಷಯಗಳನ್ನೂ ಪರಿಶೀಲಿಸಲು ಮಾನ್ಯ ಮಹಾಜನರವರ ಒಂದು ಕಮಿಟಿ ಮಾಡಿದ್ದೀರಲ್ಲ ಅವರು ಇದನ್ನೆಲ್ಲಾ ವಿಚಾರ ಮಾಡುತ್ತಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಇದರಲ್ಲಿ ಒಂದು ವಿಚಾರ ತಿಳಿದುಕೊಳ್ಳಬೇಕು. ಯಾವುದಾದರೂ ಪ್ರದೇಶವನ್ನು ನಾವು ಕೇಳಬೇಕಾದರೆ ಅದಕ್ಕೆ ತಕ್ಕಂತೆ ನಾವು ಕೆಲವು ಭಾಗವನ್ನು ಕೊಡುವುದಕ್ಕೂ ತಯಾರಾಗಿರಬೇಕು. ಈಗಾಗಲೇ ಮಾನ್ಯ ಸದಸ್ಯರಿಗೆ ಗೊತ್ತಾಗಿರುವಂತೆ ಬೆಳಗಾಮಿಗೆ ಸೇರಿದ ನಿಪ್ಪಾಣಿ ಹಾಗೂ ಇನ್ನಿತರ ಭಾಗಗಳನ್ನು ಕೊಡಬೇಕೆಂದು ಕಮಿಷನ್‌ನ ವರದಿ ಬಂದಿದೆ. ಆದುದರಿಂದ ಇಂತಹ ಒಂದು ಭಾಗ ಕೇಳಬೇಕಾದರೆ ಇವೆಲ್ಲಾ ತೊಂದರೆಗಳು ಬರುತ್ತವೆ ಎಂದು ನಾವು ಇದರ ಬಗ್ಗೆ ತೀವ್ರವಾಗಿ ಯೋಚನೆ ಮಾಡಿಲ್ಲ.

ಶ್ರೀ ಕೆ. ಚನ್ನಬಸವನ ಗೌಡ.—ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರಿದಾಗ ಆಂಧ್ರದ ಭಾಗಗಳಾಗಿರುವ ಆದೋಣಿ ಹಾಗೂ ರಾಯದುರ್ಗದ ಪಶ್ಚಿಮ ಭಾಗಗಳಲ್ಲಿ ಹೆಚ್ಚು ಜನ ಕನ್ನಡ ಮಾತನಾಡುತ್ತಿದ್ದಾರೆ, ಅದನ್ನು ಬಳ್ಳಾರಿ ಜೊತೆಗೆ ಸೇರಿಸಿ ಎಂದು ಬೇಕಾದಷ್ಟು ಗಲಾಟೆಗಳಾದವು. ಈಗಲಾದರೂ ಸರಕಾರ ಇವನ್ನು ಸೇರಿಸಲು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನಮಗೆ ಬರಬೇಕಾದ್ದು ಬರಲಿ ನಾವು ಕೊಡಬೇಕಾದುದನ್ನು ಕೊಡಬಾರದು ಎನ್ನುವ ನೀತಿಯನ್ನು ನಾವು ಅನುಸರಿಸಿದರೆ ಸರಿಹೋಗುವುದಿಲ್ಲ. ಬಾರ್ಡರ್ ಡಿಸ್‌ಪ್ಯೂಟು ಬಂದಾಗ ಇದರ ಬಗ್ಗೆ ಒಂದು ನಿರ್ಣಯ ಮಾಡಿ ಅದನ್ನು ಒಪ್ಪಬೇಕು ಮುಂದೆ ಇದರ ಬಗ್ಗೆ ಪದೇ ಪದೇ ಎತ್ತಬಾರದು ಎನ್ನುವ ನೀತಿಯನ್ನು ಅನುಸರಿಸಿ ನಾವು ಇದರ ಬಗ್ಗೆ ಯಾವ ಕ್ಲೇಮನ್ನೂ ಹಾಕಿಲ್ಲ.

ಶ್ರೀ ಸಿ. ಬಂದೀಗೌಡ.—ಈಗ ಕೆಲವು ಕನ್ನಡ ಪ್ರದೇಶಗಳು ನಮಗೆ ಬರಬೇಕಾದ ವಿಚಾರದಲ್ಲಿ ನಾವು ಒಂದು ನಿಲುವು ತಾಳಿದ್ದೇವೆ. ಹಾಗೆಯೇ ಬೆಳಗಾಂ ಪ್ರದೇಶದ ಬಗ್ಗೆ ಬೇರೆ ನಿಲುವು ಇದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಬೆಳಗಾಂ ಮಾತ್ರ ಇತರ ಪ್ರದೇಶಗಳು ನಮ್ಮಲ್ಲಿ ಇರಬೇಕು ಎನ್ನುವ ಅಭಿಪ್ರಾಯ ಇರುವುದಾದರೆ ಅವರೂ ಸಹ ನಮ್ಮ ಪ್ರದೇಶದಲ್ಲಿರುವ ಕೆಲವು ಭಾಗಗಳು ಬರಬೇಕು ಎನ್ನುವ ಅಭಿಪ್ರಾಯಪಡುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಬೆಳಗಾಂ ಬಗ್ಗೆ ಒಂದು ನೀತಿ ಧೋರಣೆ ತಾಳಿದ್ದೇವೆ. ನಮ್ಮ ಕೇಸು ಈಗ ಯಾವರೀತಿ ಇದೆ ಎಂದರೆ ಒಂದು ಕಡೆ ನಮ್ಮ ಭಾಗಗಳನ್ನು ಕೊಟ್ಟು ಇನ್ನೊಂದು ಕಡೆ ಅವರ ಭಾಗಗಳನ್ನು ತೆಗೆದುಕೊಳ್ಳುವ ಧೋರಣೆ ಇದೆ ಆದರೆ ಬೆಳಗಾಂ ಧೋರಣೆ ಆ ರೀತಿ ಇಲ್ಲ.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ ಬೆಳಗಾಂ ಧೋರಣೆ ಏನು ?

ಶ್ರೀ ವೀರೇಂದ್ರ ಪಾಟೀಲ್.—ಸ್ಟೇಟ್ ರೀ ಆರ್ಗನೈಸೇಷನ್ ಆದಮೇಲೆ ಅದನ್ನು ಮತ್ತೆ ರೀಓಪನ್ ಮಾಡುವುದು ಬೇಡ. ಏನು ಧೋರಣೆ ಇದ್ದರೂ ಮೊದಲೇ ತಿಳಿಸಿ ಬಗೆಹರಿಸಿಕೊಳ್ಳಬೇಕು, ಒತ್ತಾಯ ತರಕೂಡದು ಎನ್ನುವ ಧೋರಣೆ ತಾಳಿದೆ.

ಶ್ರೀ ಜಿ. ವಿ. ಆಂಜನಪ್ಪ.—ಸ್ವಾಮಿ, ಇದರ ಬಗ್ಗೆ ಯಾವುದಾದರೂ ಸಂಘ ಸಂಸ್ಥೆಗಳಿಂದ ಮನವಿಗಳು ಬಂದಿವೆಯೇ ? ಹಾಗೆ ಬಂದಿದ್ದರೆ ಎಷ್ಟು ಬಂದಿವೆ ?

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಮುಂದೆ ಆ ಇನ್‌ಫರ್ಮೇಷನ್ ಇಲ್ಲ. ಅನೇಕ ಜನ ಬಂದಿದ್ದರು. ಅದರಲ್ಲಿ ಅನೇಕ ಸಂಘ ಸಂಸ್ಥೆಗಳು ಸೇರಿರಬಹುದು.

ಶ್ರೀ ಎ. ಕೆ. ಸುಬ್ಬಯ್ಯ.—ಸ್ವಾಮಿ, ಹೊಸೂರು ತಾಲ್ಲೂಕಿನ ತಾಳವಾಡಿ ಫಿರ್ಕಾ ಮತ್ತು ಆಂಧ್ರ ಪ್ರದೇಶದಲ್ಲಿರುವ ಮಡಕಶಿರಾ ಈ ಎರಡು ಪ್ರದೇಶಗಳ ಬಗ್ಗೆ ಇರುವ ವಾದವಿವಾದಗಳನ್ನು ಮಹಾಜನ್ ಕಮಿಷನ್ ಮುಂದೆ ರಾಜ್ಯ ಸರಕಾರದವರು ಉಲ್ಲೇಖ ಮಾಡಿದಿರಾ ?

---

†Indicates that the remarks or speeches have not been revised by the member concerned.

ಶ್ರೀ ವೀರೇಂದ್ರ ಪಾಟೀಲ್.—ಮಹಾಜನ್ ಕಮೀಷನ್ ಬಂದದ್ದು ಮೈಸೂರು-ಮಹಾರಾಷ್ಟ್ರ ನಡುವೆ ಇರತಕ್ಕಂಥ ಬಾರ್ಡರ್ ವಿವಾದ ಮತ್ತು ಮೈಸೂರು-ಕೇರಳ ನಡುವೆ ಇರತಕ್ಕಂಥ ಬಾರ್ಡರ್ ವಿವಾದ ಇತ್ಯರ್ಥ ಮಾಡುವುದಕ್ಕೆ ಬಂದಿದ್ದರು. ಆದುದರಿಂದ ಮಾನ್ಯ ಸದಸ್ಯರು ಹೇಳಿದಂಥ ಪ್ರಶ್ನೆಗೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಎ. ಎಸ್. ನಂದೀಶ್.—ಸ್ವಾಮಿ, ಆಂಧ್ರ ಪ್ರದೇಶದಲ್ಲಿರುವ ಮಡಕಶಿರಾ ತಾಲ್ಲೂಕಿಗೂ ನಮ್ಮ ಗಡಿಗೂ 10 ಮೈಲಿ ಅಂತರ ಇದೆ. ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ ಪಾವಗಡಕ್ಕೆ ಹೋಗ ಬೇಕಾದರೆ ಮಧ್ಯೆ ಆಂಧ್ರ ಪೋಲೀಸಿನವರು ಬಹಳ ತೊಂದರೆ ಕೊಡುತ್ತಾ ಇದ್ದಾರೆ. ಮಡಕಶಿರಾ ದಲ್ಲಿ ಪೂರ್ತಾ ಕನ್ನಡ ಮಾತನಾಡುವ ಜನರಿದ್ದಾರೆ. ಅವರನ್ನು ಕೇಳುವವರೇ ಇಲ್ಲ. ಆದ್ದರಿಂದ ಮಡಕಶಿರಾವನ್ನು ಆದಷ್ಟು ಶೀಘ್ರವಾಗಿ ನಮ್ಮ ರಾಜ್ಯಕ್ಕೆ ಸೇರಿಸಿಕೊಂಡರೆ ಅನುಕೂಲವಾಗುತ್ತದೆ. ಅಲ್ಲಿ ಓಡಾಡುವ ಲಾರಿಗಳು, ಬಸ್ಸುಗಳಿಗೆ ಪೋಲೀಸಿನವರು ತುಂಬಾ ತೊಂದರೆಕೊಡುತ್ತಿದ್ದಾರೆ ; ಇದರ ಬಗ್ಗೆ ಶೀಘ್ರ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಒಂದೇ ಸಲ ಮಡಕಶಿರಾ ಕೇಳುವುದಕ್ಕಾಗುವುದಿಲ್ಲ. ಹಾಗೆ ಆಂಧ್ರದವರನ್ನು ಕೇಳಿದರೆ ನಮಗೆ ಎಷ್ಟು ಬೇಕೋ ಅಷ್ಟು ಕೊಡಿರಿ ಎಂದು ಹೇಳುತ್ತಾರೆ. ಆದುದರಿಂದ ನಮ್ಮಲ್ಲಿರುವ ಪ್ರದೇಶಗಳನ್ನು ಅವರಿಗೆ ಕೊಡುವುದು, ಅವರಲ್ಲಿರುವ ಪ್ರದೇಶಗಳನ್ನು ನಾವು ತೆಗೆದುಕೊಳ್ಳುವುದು ಈ ರೀತಿ ಸಮಸ್ಯೆ ಬರುತ್ತದೆ. ಇದನ್ನೆಲ್ಲಾ ವಿಚಾರಮಾಡಬೇಕಾ ಗುತ್ತದೆ.

ಶ್ರೀ ಸಿ. ಬಂದೀಗೌಡ.—ಮಹಾಜನ ಕಮೀಷನ್ ನೀತಿಯನ್ನು ಒಪ್ಪಿಕೊಳ್ಳಬೇಕೆಂದು ಈಗ ಸದನದ ನೀತಿ. ಇದರಲ್ಲಿ ಮುಖ್ಯವಾದ ಅಂಶ ಮಹಾರಾಷ್ಟ್ರದ ಕೆಲವು ಪ್ರದೇಶ ಮೈಸೂರಿಗೆ ಬರಬೇಕು, ಮೈಸೂರಿನ ಕೆಲವು ಪ್ರದೇಶ ಮಹಾರಾಷ್ಟ್ರಕ್ಕೆ ಹೋಗಬೇಕು ಎಂದು. ಹೀಗೆ ಅವರಿಗೆ ಸ್ವಲ್ಪ ಪ್ರದೇಶಗಳನ್ನು ನಾವು ಕೊಡುವುದು, ಅವರಿಂದ ನಾವು ಸ್ವಲ್ಪ ಪ್ರದೇಶಗಳನ್ನು ತೆಗೆದು ಕೊಳ್ಳುವುದು ಈ ರೀತಿಯಾಗಿದೆ. ಅದೇ ರೀತಿ ಬೇರೆಗಡಿಯಲ್ಲಿನ ಪ್ರದೇಶಗಳ ಜನರಿಗೆ ಅನ್ಯಾಯ ವಾಗುತ್ತಾ ಇದೆ. ಆದುದರಿಂದ ಈ ವಿಚಾರವನ್ನು ಪ್ರತ್ಯೇಕವಾಗಿ ಆಯಾಯ ಪರಿಸ್ಥಿತಿಗೆ ಅನುಗುಣವಾಗಿ ಇಬ್ಬರೂ ಸೇರಿ ಚರ್ಚೆ ಮಾಡುವುದಕ್ಕೆ ಅಡ್ಡಿ ಇದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಚರ್ಚೆ ಮಾಡುವುದರಲ್ಲಿ ಅಡ್ಡಿ ಇದೆ. ಇಬ್ಬರೂ ಸೇರಿ ನಿರ್ಣಯಕ್ಕೆ ಬಂದರೆ ಆಗಬಹುದು. ಇದು ಸಂಬಲಾರದಂಥ ಕೆಲಸ. ಇದು ಆಗದೇ ಹೋದರೆ ಒಂದುರೀತಿ ನಾವೇ ಜನರಲ್ಲಿ ಚಳುವಳಿ ಹುಟ್ಟಿಸುವಂಥ ಕೆಲಸವಾಗುತ್ತದೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಇಂಥ ಪರಿಸ್ಥಿತಿ ಇರುವುದರಿಂದ ಈಗ ಸರ್ಕಾರದ ಧೋರಣೆ ಈಗಿರತಕ್ಕ ಪ್ರದೇಶವನ್ನು ಕೊಡುವ ಹಾಗೆಯೂ ಇಲ್ಲ ಮತ್ತು ಹೊಸ ಪ್ರದೇಶವನ್ನು ತೆಗೆದುಕೊಳ್ಳುವ ಹಾಗೆಯೂ ಇಲ್ಲ ಎನ್ನುವುದೇ ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಮಹಾಜನ್ ಆಯೋಗವನ್ನು ನೇಮಕ ಮಾಡುವವರೆಗೂ ನಮ್ಮ ಧೋರಣೆ ಹಾಗೆಯೇ ಇತ್ತು, ಮಹಾಜನ್ ಆಯೋಗದವರು ಒಂದು ನಿರ್ಣಯ ಕೊಟ್ಟ ಮೇಲೆ ಅದಕ್ಕಿಂತ ಮುಂದೆ ಏನೂ ಮಾಡಬೇಕಾಗಿಲ್ಲವೆನ್ನುವ ಧೋರಣೆಯನ್ನು ತಾಳಿದ್ದೇವೆಂದು ಹೇಳಿದೆ. ಅನೇಕ ವರ್ಷಗಳಿಂದ ಜಗಳ ಬಗೆಹರಿದಿರಲಿಲ್ಲ ಎಂದು ಒಂದು ಆಯೋಗವನ್ನು ನೇಮಕ ಮಾಡಿದರು. ಅವರು ಕೊಟ್ಟ ನಿರ್ಣಯವನ್ನು ನಾವು ಒಪ್ಪಿಕೊಂಡಿದ್ದೇವೆ.

ಶ್ರೀ ಎಂ. ವಿ. ವೆಂಕಟಪ್ಪ.—ಬೇರೆ ರಾಜ್ಯಗಳಿಗೆ ನಮ್ಮ ಭಾಗಗಳನ್ನು ಕೊಡಬೇಕಾಗುತ್ತದೆ ಎಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದರು. ಆಂಧ್ರ ಮತ್ತು ಮದ್ರಾಸು ರಾಜ್ಯದವರು ನಮ್ಮ ರಾಜ್ಯದಲ್ಲಿದರುವ ಭಾಗಗಳನ್ನು ಕೇಳಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನಾವು ಅವರಿಗೆ ಹೋಗಿ ಕೇಳಿಲ್ಲ, ಅವರು ನಮ್ಮನ್ನು ಕೇಳಿಲ್ಲ. ನಾವು ಕೇಳುವುದಕ್ಕೆ ಪ್ರಯತ್ನ ಮಾಡಿದರೆ ಅವರೂ ಕೇಳುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ಕೆ. ಚನ್ನಬಸವನ ಗೌಡ.—ರಾಯದುರ್ಗ ತಾಲ್ಲೂಕಿನ ಹಿರಾಳ ಫಿರ್ಕಾ ಒಂದು ಪಾಕೆಟ್ ಆಗಿದ್ದು, ಎರಡೂ ಕಡೆ ಚೆಕ್ ಪೋಸ್ಟ್‌ಗಳಿರುವುದರಿಂದ ದವಸ ಧಾನ್ಯಗಳನ್ನು ತರುವುದಕ್ಕೆ ಬಹಳ ಕಷ್ಟವಾಗಿರುವುದರಿಂದ ಇದರ ಬಗ್ಗೆ ಸರ್ಕಾರ ಏನಾದರೂ ಕ್ರಮವನ್ನು ಕೈಗೊಂಡಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈ ತರಹ ಪಾಕೆಟ್‌ಗಳಿಲ್ಲ ಎಂದು ನಾನು ಹೇಳುವುದಿಲ್ಲ. ಇದೇ ರೀತಿಯಲ್ಲಿ ನಾವು ಪಾವಗಡಕ್ಕೆ ಹೋಗಬೇಕಾಗಿದ್ದರೆ ಆಂಧ್ರಕ್ಕೆ ಸೇರಿದ ಪ್ರದೇಶದ ಮುಖಾಂತರವಾಗಿ ಹೋಗಬೇಕು. ಮಡಕಸಿರಾ ತಾಲ್ಲೂಕನ್ನು ಕೇಳಿದರೆ ಅವರು ಪಾವಗಡ

(ಶ್ರೀ ವೀರೇಂದ್ರ ಪಾಟೀಲ್)

ವನ್ನು ಕೇಳಬಹುದು. ಅದಕ್ಕಾಗಿ 'ಗಿವ್ ಅಂಡ್ ಟೇಕ್ ಪಾಲಿಸಿ' ಇರಬೇಕಾಗುತ್ತವೆ ಎಂದು ನಾನು ಆಗಲೇ ಹೇಳಿದ್ದೇನೆ. ನಾವು ಕೊಡುವಂಥದ್ದು ಏನೂ ಇಲ್ಲ, ಬರುವಂಥದ್ದು ಮಾತ್ರ ಬರಲಿ ಎನ್ನುವ ವಾದದಲ್ಲಿ ಅರ್ಥವಿಲ್ಲ. ಈಗ ಏನು ಸಮಸ್ಯೆಗಳಿವೆ ಅವನ್ನೇ ಎದುರಿಸುವುದಕ್ಕೆ ಬಹಳ ತೊಂದರೆಯಾಗಿರುವಾಗ ಹೊಸ ಸಮಸ್ಯೆಗಳನ್ನು ಕೈಗೊಳ್ಳುವುದು ಬೇಡ ಎನ್ನುವುದು ನಮ್ಮ ಉದ್ದೇಶವಾಗಿದೆ.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಪ್ರಶ್ನೆಯಲ್ಲಿ ಕೇಳಿರುವ ಭಾಗಗಳಲ್ಲದೆ ಬಾರ್ಡರ್ ಪ್ರದೇಶದಲ್ಲಿ ಬರಗೂರು ಹೋಬಳಿ, ನೀಲಗಿರಿಯ ಭಾಗ, ಕಾಸರಗೋಡಿನ ಭಾಗ ಇವುಗಳ ಬಗ್ಗೆ ಸರ್ಕಾರ ನೇಮಿಸಿರುವ ಸಮಿತಿಗೆ ಏನಾದರೂ ರೆಫರೆನ್ಸ್ ಕೊಟ್ಟಿದ್ದೀರಾ ಅಥವಾ ಕೊಡದೆ ಇದ್ದರೆ ಈ ವಿಷಯದ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಈಗಾಗಲೇ ಅನೇಕ ಸಾರಿ ಹೇಳಿದ್ದೇನೆ ನಮ್ಮ ನೀತಿ ಏನಿದೆ ಎನ್ನುವುದನ್ನು. ಸ್ಟೇಟ್ಸ್ ರೀಆರ್ಗನೈಜೇಷನ್ ಆಕ್ಟ್ ಆದ ಮೇಲೆ ಗಡಿ ವಿಚಾರದಲ್ಲಿ ಏನಾಗಿದೆಯೋ ಅದನ್ನು ನಾವು ರೀಓಪನ್ ಮಾಡಬಾರದು ಎನ್ನುವ ನಿಲುವೆಯನ್ನು ತಾಳಿದ್ದೇವೆ. ಆದರೆ ರೀಓಪನ್ ಮಾಡುವಂಥ ಪ್ರಶ್ನೆ ಕೇವಲ ಮೈಸೂರು—ಮಹಾರಾಷ್ಟ್ರ, ಬಾರ್ಡರ್ ಮತ್ತು ಮೈಸೂರು ಕೇರಳ ಬಾರ್ಡರ್ ಪ್ರಶ್ನೆ ಬಂದಾಗ ಅದನ್ನು ಒಂದು ಕಮಿಷನ್ನಿಗೆ ರೆಫರ್ ಮಾಡಿದರು. ಕಮಿಷನ್‌ನವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಅದನ್ನು ಒಪ್ಪಿಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿದ್ದೇನೆ. ಅದಕ್ಕಾಗಿ ನಾವಾಗಿಯೇ ಬಾರ್ಡರಿನಲ್ಲಿರುವಂಥ ಪ್ರದೇಶ ಬೇಕು ಎಂದು ಕೇಳುವುದಕ್ಕೆ ಹೋಗಿಲ್ಲ. ಒಂದು ವೇಳೆ ಕೇಳುವುದಕ್ಕೆ ಪ್ರಯತ್ನ ಮಾಡಿದರೆ ಕೊಡುವುದಕ್ಕೂ ತಯಾರಾಗಿರಬೇಕು. ಬಾರ್ಡರಿನಲ್ಲಿರುವವರಲ್ಲಿ ಎರಡೂ ಭಾಷೆಗಳನ್ನು ಮಾತನಾಡುವವರಿರುತ್ತಾರೆ. ಎಷ್ಟೇ ಬುದ್ಧಿವಂತಿಕೆಯಿಂದ ಬಾರ್ಡರ್ ಡಿಮಾರ್ಕೇಟ್ ಮಾಡಲಿಕ್ಕೆ ಹೋದರೂ ಭಾಷಾ ಅಲ್ಪ ಸಂಖ್ಯಾಂತರು ಉಳಿದೇ ಉಳಿಯುತ್ತಾರೆ.

Agricultural Debtors Act

79. Sri K. CHANNABASAVANA GOWDA (Local Authorities' Constituency).—

Wll the Minister for Development be pleased to state :—

(*a*) whether Government is aware that the agricultural Debtors are put to great hardship as a result of Agricultural Debtors Act, as the credit facilities available from money lenders have all of a sudden been stopped and as Government too have not made any alternative arrangements to help the poor agriculturists ;

(*b*) whether there is any proposal to remove the compulsion to go to Court by Creditors by deleting Section 15 of the above Act by bringing an amendment to it ?

Sri P. M. NADGOUDA (Minister for Development).—

(*a*) No.

(*b*) No.

I have to make a submission that a general stay has been given by the Hon. High Court on the validity of the Act which has been

questioned in a number of petitions. So the supplementary questions may not be kindly admitted.

ಶ್ರೀ ಕೆ. ಚನ್ನಬಸವನಗೌಡ.—ಆ ವಿಚಾರದ ಬಗ್ಗೆ ಕೇಳುವುದಿಲ್ಲ. ರೈತರಿಗೆ ಕಷ್ಟವಾಗಿಲ್ಲ ವೆಂದು ತಿಳಿಸಿದ್ದಾರೆ, ಅದರ ಬಗ್ಗೆ ಕೇಳುತ್ತೇನೆ.

ಉಪಸಭಾಪತಿಯವರು.—ಆಗಬಹುದು.

ಶ್ರೀ ಕೆ. ಚನ್ನಬಸವನಗೌಡ.—ಅಗ್ರಿಕಲ್ಚರಲ್ ಡೆಟರ್ಸ್ ರಿಲೀಫ್ ಆಕ್ಟ ಜಾರಿಗೆ ಬಂದಮೇಲೆ ರೈತರಿಗೆ ತೊಂದರೆಯಾಗಿದೆ ಸಾಲಹುಟ್ಟುವುದಿಲ್ಲ. ಆದರೆ ಹಾಗಾಗಿರುವುದು ಗೊತ್ತಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಯಾರಾದರೂ ಒಬ್ಬರು ಆಫೀಸರನ್ನು ರೈತರಿಗೆ ತೊಂದರೆಯಾಗಿರುವುದನ್ನು ಪರೀಕ್ಷಿಸಲು ಕಳಿಸುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಹೈಕೋರ್ಟಿನಲ್ಲಿ ಒಂದು ಸಾವಿರದಮೇಲೆ ರಿಟ್ ಅರ್ಜಿಗಳು ಇರುವುದರಿಂದ ಅಲ್ಲಿ ತೀರ್ಮಾನವಾಗುವವರೆಗೆ ಏನೂ ಹೇಳಲು ಬರುವುದಿಲ್ಲ.

Sri K. S. SURYANARAYANA ADIGA.—Sir a ruling may be given for our guidance in future. I would like the Chair to tell us whether it is the practice to be followed that no questions shoud be asked as soon as the matter has been taken to court or whether only when the matter is *sub-judice.* As far as I understand, the matter pending in the High Court is for the purpose of finding out whether the enactment transgresses the power given to the legislature under the Constitution. Here, we want to know through this question whether hardship is caused or not; that is the point at issue, and it is not pending in the High Court. Will the Government consider amending the Act to suit the needs of the general public?

Sri G. V. ANJANAPPA.—If the Chair feels that the matter is *sub judice,* at the stage of admission itself, the Chair can disallow the question. After admitting and puttting it on the list of business, to plead like this is not correct.

Mr. DEPUTY CHAIRMAN.—Even this question need not have been included in the list of questions. The Chair invites kind attention of Hon' Members to sub-clause (*b*) of the question:

> "Whether there is any proposal to remove the compulsion to go to Court by Creditors by deleting section 15 of the above Act by bringing an amendment to it ;"
> On this point also there is stay.

Sri K. CHANNABASAVANA GOUDA.—Let him not answer questions on that.

Sri P. M. NADGOUDA.—May I enlighten further that there are nearly 1,000 writ petitions and every line in the Act has been questioned by the writ petitions and on these writ petitions a general stay has been given by the High Court. Government is not able to take any action and say anything at this stage.

Mr. DEPUTY CHAIRMAN.—Under rule 260 a Member while speaking shall not refer to any matter of fact on which a judicial decision is pending. That may be read with rule 35 (r) it shall not ask for information on a matter which is under adjudication by a Court of Law having jurisdiction in any part of India.

Sri K. SURYANARAYANA ADIGA.—If we just ask whether the Government have any idea of amending the rule because there is hardship caused—the Minister can say yes or no. That is not *sub judice*.

Sri P. M. NADGOUDA.—On the part of the Government, they have taken a decision that the extension of time will not be granted and on that, writ petitions have been filed.

Sri VISWANATHASWAMY.—The High Court has not stayed the entire Act. Stay has been granted only in respect of three Sections.

Sri P. M. NADGOUDA.—General stay has been given. The very basis of the Act has been questioned.

Mr. DEPUTY CHAIRMAN.—The Chair is not inclined to allow any more supplementaries on this question.

ಶ್ರೀ ಕೆ. ಚನ್ನಬಸವನಗೌಡ.—ರೈತರಿಗೆ ಬೀಜ ಸಿಕ್ಕಲಿಲ್ಲ, ಗೊಬ್ಬರ ಸಿಕ್ಕಲಿಲ್ಲ ಅದಕ್ಕೆ ಸರ್ಕಾರದವರು ಆಲ್‌ಟರ್‌ನೇಟ್ ಅರೇಂಜ್‌ಮೆಂಟ್ ಏನಾದರೂ ಮಾಡಿದ್ದಾರೆಯೇ?

Mr. DEPUTY CHAIRMAN.—The Chair has already ruled that it is not inclined to allow any supplementaries on this question.

Sri G. V. ANJANAPPA.—The question of Sri Channabasavana Gowda is entirely different from the subject matter of the writ petitions and it may be allowed as he wants to know whether any alternative arrangements have been made for financial assistance.

Mr. DEPUTY CHAIRMAN.—I may say once and for all that the Chair is not inclined to revise its decision. The Chair still holds that no supplementary should be asked on this question. The hon. Members will kindly co-operate with the Chair.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಇದರಲ್ಲಿ ಕೋರ್ಟಿಗೆ ಸಂಬಾಧಪಟ್ಟದ್ದು ಕೇಳುವುದೇನೂ ಇಲ್ಲ. ರೈತರಿಗೆ ತೊಂದರೆಯಾಗಿರುವುದರಿಂದ ಆಲ್‌ಟರ್‌ನೇಟ್ ಅರೇಂಜ್‌ಮೆಂಟ್ ಮಾಡುತ್ತಾರೆಯೇ ಇಲ್ಲವೇ ಎಂಬುದು ಅವರ ಪ್ರಶ್ನೆ ಅದಕ್ಕೆ ಉತ್ತರ ಕೊಡಬೇಕು.

Mr. DEPUTY CHAIRMAN.—Since the Hon. Minister has replied that he is not willing to furnish any reply in view of the fact that stay has been issued and writ petitions are pending in the Court, the Chair has held that it is a matter pending adjudication of a Court of Law and so no supplementary could be asked. I, therefore, once again request the hon. Members to extend their co-operation in upholding the Chair's ruling.

Next question.

Post of Primary School teachers kept vacant in North Kanara area

90. **Sri V. S. HIREGOUDAR** (Local Authorities' Constituency).—

Will the Minister for Education be pleased to state.—

(*a*) whether it has come to the notice of the Government that many posts of Primary School teachers are kept vacant on account of the

Government Circular not to fill up the vacant posts in the North Karnatak area subsequent to the taking over the Primary Schools in the area by the Government ;

(*b*) whether it has come to the notice of the Government that in many Primary Schools in North Karnatak area there are no teachers for taking up certain classes on account of deputation of the concerned teachers for training with the result that the progress of the children is hampered ;

(*c*) whether the Government intends to withdraw the said Circular immediately and make arrangements to ensure that adequate number of teachers as per prescribed norms in the Primary Schools, in the North Karnatak area are posted to work ?

Sri N. M. KOTRABASIAH SOGI (Deputy Minister for Education).—

(*a*) No.

(*b*) No.

(*c*) Does not arise.

Sri V. S. HIREGOUDER.—I know from my personal knowledge that the posts which are lying vacant on account of deputation of Primary School Teachers for training are vacant. So many Teachers have been selected regularly by the District School Boards and none is appointed in their places. I know for certain that there are vacant posts. So the answer given by the hon. Deputy Minister is not acceptable as it is not satisfactory. What I am telling is a statement of fact.

† Sri N. M. KOTRABASIAH SOGI.—The D. P. I. has issued another circular to the D. D. P. I., Dharwar, asking him to ensure himself that the work of those Schools do not suffer for want of Teachers. So necessary arrangements have been made by posting supernumerary teachers to the Schools where there was necessity for additional Teachers. I think the position is quite satisfactory now.

Sri V. S HIREGOUDER.—In continuation of his written reply, the Deputy Minister now says that a revised circular has been issued subsequently to fill up vacant posts. Still, does he know that there are so many vacant posts, particularly in Girls Primary Schools with the result the girls who attend schools are simply asked to dance, sing and return home without any lessons ?

Sri N. M. KOTRABASAIAH SOGI.—Just on the verge of taking over these Schools from the School Boards, it was quite likely that there was some sort of confusion because on taking over those Schools, new regulations had to be implemented. Formerly appointments had been made under the Rules framed under the Bombay Education Act which was in force then. After the issue of this ordinance, those Schools had come under the fold of the Mysore Government and

(SRI N. M. KOTRABASIAH SOGI)

necessarily the Bombay Act having been repealed, all the appointments had to be made under the rules and regulations of our Government. So there was some confusion and the D. P. I. issued a transitory circular stating that no transfers should be made for the time being. Subsequently a revised circular has been issued asking D. D. P. I. to ensure himself that on account of shortage of Teachers the work of the Schools does not suffer. So superfluous Teachers have been posted as reserve to fill the vacant posts and now the position is satisfactory.

Sri D. RAJAGOPAL.—Sir, we would like to know which is the legal jurisdiction of this "North Karnatak" mentioned in the Question and where does it exist?

Sri N. M. KOTRABASIAH SOGI.—I think the four Districts which were originally under the Bombay Province.

Sri D. RAJAGOPAL.—Where is the definition for it?

Sri C. S. BALAKRISHNA GOWDA.—Did the Government answer the question? Let them answer.

ಶ್ರೀ ಡಿ. ರಾಜಗೋಪಾಲ್.—ಆರೀತಿ ಎಲ್ಲಿ ಹೇಳಿದೆ ? ಅದಕ್ಕೆ ಆಧಾರವೆಲ್ಲಿದೆ ?

Sri K. SURYANARAYANA ADIGA —Will the Government hereafter stop answering questions where this State is referred to in such divisive terminology as "North Karnatak, Bombay Karnatak, Madras Karnatak", etc.

Sri N. M. KOTRABASIAH SOGI.—The Hon'ble Member wanted to elucidate information from the Government regarding a particular area comprising of four Districts. There is no order defining "North Karnatak".

Sri D. RAJAGOPAL.—Under what provision of law can the Government furnish reply to a question relating to "North Karnatak" which does not exist?

Sri K. SURYANARAYANA ADIGA.—Is there any general enactment or Government Order which defines which is "North Karnatak?"

Mr. DEPUTY CHAIRMAN.—While sending the question the Hon'ble Member said "North Karnatak" and probably the Government presumed that he meant four Districts that were transferred from Bombay State to this State.

Sri C. S. BALAKRISHNA GOWDA.—Supposing I call for information regarding "South Karnatak", will the Government supply information with respect to that area? When an expression is used, it should not be capable of being understood only by the member employing it. Everyone should understand it clearly.

ಶ್ರೀ ಎ. ಎಸ್. ಶಿವಾನಂದಸ್ವಾಮಿ.—ಹಾಗೆ ಕರ್ಣಾಟಕ ಎಂಬ ಶಬ್ದವನ್ನು ಉಪಯೋಗ ಮಾಡದೆ ಉತ್ತರ ಮೈಸೂರು ಎಂದು ಹೇಳಿದರೆ ಅದಕ್ಕೆ ಗಡಿಯಾವುದು ?

Sri V. S. HIREGOUDAR.—I wish to clarify. My friends know that it is common knowledge that Belgaum Division is always referred as "North Karnatak."

Sri C. S. BALAKRISHNA GOWDA.—I do not think there is anything in writing or legal parlance to show that "North Karnatak" means Belgaum Division.

3-00 P.M.

Sri V. S. HIREGOWDAR.—Will the Government be pleased to depute a special officer to ascertain if there are enough number of teachers in all the primary schools ?

Sri D. RAJAGOPAL.—On a point of order. Since the term "North Karnatak" is not in vogue anywhere nor is it mentioned in the S.R. Act, I say that this question should not be taken in this House.

Sri C. S. BALAKRISHNA GOWDA.—In furtherance of the point of order raised by the Hon'ble Member I have got something to say.

Mr. DEPUTY CHAIRMAN.—If the Hon'ble member has any supplementary he may put it.

ಶ್ರೀ ಎಂ. ಜಿ. ಹಂದ್ರಾಳ್.—ಧಾರವಾಡ ಭಾಗದಲ್ಲಿ ರಿಲೀವ್ ಆದ ಉಪಾಧ್ಯಾಯರುಗಳನ್ನು ಪುನಃ ನೇಮಕ ಮಾಡಬಾರದೆಂದು ಹೇಳಿ ಡಿ.ಪಿ.ಐ. ಅವರಿಂದ ಇನ್‌ಸ್ಟ್ರಕ್ಷನ್ ಹೋಗಿದೆ. ಅದಕ್ಕೋಸ್ಕರ ಅವರನ್ನು ನೇಮಕ ಮಾಡಿಲ್ಲವೆಂದು ಉಪಾಧ್ಯಾಯರ ಮನವಿ ಇವೆ. ಮತ್ತು ಅವರನ್ನು ಸೆಲೆಕ್ಟ್ ಮಾಡುವುದಕ್ಕೆ ಸ್ಟ್ಯಾಚುಟರಿ ಬಾಡಿ ಮಾಡಿದೆ. ಅವರಿಗೆ ಆ ಹಕ್ಕು ಇದೆ. ಅವರನ್ನು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಟ್ರೀಟ್ ಮಾಡಿಲ್ಲ. ಲೋಕಲ್ ಕ್ಯಾಂಡಿಡೇಟ್ಸ್ ಎಂಬಂತೆ ಅರ್ಥ ಮಾಡಿ ಸ್ಟ್ಯಾಚುಟರಿ ಬಾಡಿ ನೇಮಕ ಮಾಡಿದಂಥ ಉಪಾಧ್ಯಾಯರುಗಳನ್ನು ನೇಮಿಸಿಲ್ಲ. ಅವರನ್ನು ತಡೆಹಿಡಿದಿದ್ದಾರೆ. ಅದನ್ನು ಪರಿಶೀಲಿಸುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದು ಸ್ಟ್ಯಾಚುಟರಿ ಬಾಡಿಯಿಂದ ನಿಜವಾಗಿ ಆಗಿದ್ದರೂ ಅದು ಮೇ 21 ರ ನಂತರ ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಆ ಬಾಡಿಗೆ ಅಧಿಕಾರವಿರಲಿಲ್ಲ. ಸ್ಟ್ಯಾಚುಟರಿ ಬಾಡಿ ಮೇ 21 ರ ನಂತರ ಮಾಡಿದ್ದು ವ್ಯಾಲಿಡ್ ಎಂದು ಹೇಳುವುದಕ್ಕಾಗುವುದಿಲ್ಲ. ಮತ್ತು ಅಧಿಕೃತವಾಗಿ ಅವರು ಸೆಲೆಕ್ಟ್ ಆಗಿದ್ದಾರೆಂದೂ ಸಹ ಹೇಳುವುದಕ್ಕೆ ಸಾಧ್ಯವಿಲ್ಲ.

Sri C. S. BALAKRISHNA GOWDA.—There is no definite demarcation of South Karnataka, North Karnataka, etc. Therefore I request you to kindly hold over the question and direct that a clear-cut question be put. Even in Madras Karnatak, in Mangalore and other places primary schools were taken over under this order.

Mr. DEPUTY CHAIRMAN.—Hon. Members should quote the rule under which they raise a point of order. I want to know whether points are being raised in connection with any interpretation of rule or article of the Constitution ?

Sri C. S. BALAKRISHNA GOWDA.—I am putting a supplementary. The question raised by the hon. Member Sri Hiregowdar has led to confusion in the minds of Members.

Mr. DEPUTY CHAIRMAN.—There is no point of order. Hon. Member may put the supplementary.

Sri C. S. BALAKRISHNA GOWDA.—The hon. Member refers to Government rule whereunder primary schools are taken. Under the Government *order so many primary Schools were taken.* Many of us are under confusion to put supplementaries because it is stated here as North Karnataka. Has the Minister any information as to where North Karnataka is ? Has it any legal sanction behind it ?

ಶ್ರೀ ಎನ್. ಎಂ. ಕೊಟ್ರುಬಸಯ್ಯ ಸೋಗಿ.—ಸ್ವಾಮಿ, ಮಾನ್ಯ ಸದಸ್ಯರಿಗೆ ಅವರಿಗೆ ಏನಾದರೂ ಸಮಸ್ಯೆ ಇದ್ದರೆ, ಅದರ ತಿಳುವಳಿಕೆಯನ್ನು ಸರ್ಕಾರ ಒದಗಿಸಿ ಕೊಡುತ್ತದೆ. ಆ ದೃಷ್ಟಿಯಿಂದ ಹಿರೇಗೌಡರ್ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಉತ್ತರ ಕೊಟ್ಟಿದೆ. ಅವರು ಉತ್ತರ ಕರ್ಣಾಟಕ ವೆಂದರೆ ನಾಲ್ಕು ಜಿಲ್ಲೆಗಳನ್ನು ಅರ್ಥ ಮಾಡಿಕೊಂಡು ಕೇಳಿದ್ದಾರೆಂದು ನನ್ನ ಭಾವನೆ. ಮಾನ್ಯ ಸದಸ್ಯರು ಹಾಗೆ ಅರ್ಥ ಮಾಡಿಕೊಂಡಿದ್ದಾರೆಂದು ನಾನು ತಿಳಿದಿದ್ದೇನೆ.

Sri G. V. ANJANAPPA.—When the matter is seized by the House everyone of us is entitled to know.

Mr. DEPUTY CHAIRMAN.—The matter is seized by the House and the hon. Members are entitled to ask information.

Sri D. RAJAGOPAL.—Is there anything like Karnataka ? How can they discuss about North Karnataka ? I want to know whether this House is competent to discuss a matter which is not constitutional.

Mr. DEPUTY CHAIRMAN.—I have given a ruling that there is no point of order.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಈ ಪ್ರಶ್ನೆಯಲ್ಲಿ ಹೀರೇಗೌಡರು ನಾರ್ತ್ ಕರ್ಣಾಟಕದ ಬಗ್ಗೆ ಕೇಳಿದ್ದಾರೆ. ಬಾಂಬೇ ಪ್ರಾಂತ್ಯದಲ್ಲಿ ಕನ್ನಡ ಭಾಗಗಳು ಏನಿವೆ, ಅದು ಉತ್ತರ ಕರ್ಣಾಟಕ ಮತ್ತು ಅದು 50 ವರ್ಷದಿಂದ ಹೋರಾಟ ಮಾಡಿ ಬಂದಂತಹ ಪ್ರದೇಶ. ಅದಕ್ಕೆ ಬೌಂಡರಿ ಎಲ್ಲಾ ಫಿಕ್ಸ್ ಆಗಿದೆ. ಆ ನಾಲ್ಕು ಜಿಲ್ಲೆಗಳು ಏನಿವೆ ಅವು ನಾರ್ತ್ ಕರ್ಣಾಟಕ ಎಂದು ಡಿಫೈನ್ ಆಗಿದೆ. ದಯವಿಟ್ಟು ಇದರ ಬಗ್ಗೆ ಮಂತ್ರಿಯವರು ವಿವರ ಕೊಟ್ಟರೆ ಒಳ್ಳೆಯದು.

Sri K. PUTTASWAMY (Minister for Law, Labour and Parliamentary Affairs).—Sri V. S. Hiregowda has tabled a question. He has used the words "North Karnataka" The Government have understood it to mean the four districts that have come from Bombay area. If the Members do not agree that the four districts form North Karnataka, they can very well hold their own opinion. But, as far as the Government is concerned we understand it to mean the four districts belonging to the erstwhile Bombay area. That is all.

Sri D. RAJAGOPAL.—Can the Government go on presumption ? Are they not bound by the Constitution and by the States Reorganisation Act under which this State has been formed. What is meant by 'North Karnataka'.

Sri C. S. BALAKRISHNA GOWDA.—The Hon. Minister for Parliamentary Affairs is putting his own interpretation on the words 'North Karnataka', We have passed so many Acts and have the words 'North Karnataka' been defined as the four districts of the erstwhile Bombay State in any of those Acts ? I throw a challenge; let him accept it.

Sri K. PUTTASWAMY.—Sir, the hon. Member Sri Balakrishna Gowda is capable of throwing and accepting challenges. I am not in a

position to accept his challenge. When we go to the question of legislation we will consider it. As far as this question is concerned, the Government have understood that the hon. Member meant those four districts and we have given that information. Hon. Members are entitled to have their own opinion.

ಉಪಸಭಾಪತಿಯವರು.—ಈ ಬಗ್ಗೆ ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆಯನ್ನು ಅರ್ಥ ಮಾಡಿಕೊಂಡು ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಇದುವರೆಗೆ ಈ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಆದ್ದರಿಂದ ನಾವು ಇನ್ನು ಮುಂದಿನ ಪ್ರಶ್ನೆ ತೆಗೆದುಕೊಳ್ಳೋಣ.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಹಳೆಯ ಮೈಸೂರು ಎಂದಾಗ ಹೊಸ ಮೈಸೂರಿನವರು ಏಗು ಬೀಳುತ್ತಾರೆ. ಹಾಗೆಯೇ ಇಲ್ಲದೇ ಇರತಕ್ಕ ಉತ್ತರ ಕರ್ನಾಟಕ ಎನ್ನುವ ಪದವನ್ನು ಉಪಯೋಗಿಸಿದರೆ ನಮ್ಮ ಹೃದಯಕ್ಕೆ ನಮ್ಮ ಮನಸ್ಸಿಗೆ ನೋವುಂಟಾಗುತ್ತದೆ.

Cultivable lands in the possession of the State Government

109. Sri Y. S. PATIL (Graduates' Constituency).—

Will the Minister for Revenue be pleased to state :—

(*a*) total number of cultivable lands, (but not cultivated) in possession of the State Government ;

(*b*) the reasons for not cultivating them ?

Sri H. V. KOUJALGI (Minister for Revenue).—

(*a*) 11,60,286-26 acres.

(*b*) The reasons are :

These lands have to be disposed off according to Mysore Land Grant Rules, 1968. Further, the various, local officers, empower to make grant according to powers given to them must follow rules. Divesting of lands from the jurisdiction of Villagers of Panchayat has to be ordered by the Divisional Commissioner. Appropriation of land for cultivation has to be sanctioned by the Deputy Commissioner. Opinion of the Village Panchayats and the Villager is to be obtained in every case. Aggrieved parties taking up the matters in appeal before the respective appellate authorities and issue of stay by the appellate authorities, practical difficulties in the clearance of malki by the Forest Department also add to delay.

ಶ್ರೀ ವೈ. ಎಸ್. ಪಾಟೀಲ್.—ಸ್ವಾಮಿ, ಸಾಗುವಳಿ ಮಾಡದೆ ಇರತಕ್ಕ ಜಮೀನನ್ನು ಭೂರಹಿತ ಜನಗಳಿಗೆ ಹಂಚತಕ್ಕ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಲ್ಯಾಂಡ್ ಗ್ರಾಂಟ್ ರೂಲ್ಸ್‌ಗೆ ಸಂಬಂಧಪಟ್ಟಹಾಗೆ ಕೆಲವು ದುರಸ್ತುಗಳನ್ನು ಮಾಡಿ ಭೂಮಿ ಇಲ್ಲದೇ ಇರತಕ್ಕವರಿಗೆ ಮತ್ತು ಬಡವರಿಗೆ ಭೂಮಿಯನ್ನು ಹಂಚ ಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ.

ಶ್ರೀ ಜಿ. ವಿ. ಆಂಜನಪ್ಪ.—ಸಾಗುವಳಿಗೆ ಯೋಗ್ಯವಾದ ಸಾಗುವಳಿಯಾಗದೇ ಇರುವ ಸುಮಾರು 11,60,282-26 ಎಕರೆ ಜಮೀನು ಸರ್ಕಾರದವರ ಅಧೀನದಲ್ಲದೆಯೆಂದು ಅಪ್ಪಣೆ ಕೊಡಿಸಿದ್ದೀರಿ, ಹಾಗಾದರೆ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ 1968ನೇ ಇಸವಿಯಲ್ಲಿಯೇ ಪಬ್ಲಿಷ್ ಆಗಿದ್ದರೂ ಕೂಡ ಇಲ್ಲಿಯವರೆಗೂ ಆ ಜಮೀನನ್ನು ಭೂರಹಿತ ಜನಗಳಿಗೆ ಕೊಡಲು ಏತಕ್ಕೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಲಿಲ್ಲ ?

ಶ್ರೀ ಎಚ್. ವಿ. ಕೌಜಲಗಿ.—1968 ನೇ ಇಸವಿಯ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಈಗಾಗಲೇ ಎಷ್ಟೋ ಜಮೀನುಗಳನ್ನು ವಿತರಣೆ ಮಾಡಿದ್ದೇವೆ. ಆ ರೂಲ್ಸಿನಲ್ಲಿ ಕೆಲವು ದೋಷಗಳು ಇರುವುದರಿಂದ ಈ ಜಮೀನನ್ನು ವಿತರಣೆ ಮಾಡುವುದಕ್ಕೆ ಹಲವು ತೊಡಕುಗಳು ಬಂದು ಸ್ವಲ್ಪ ವಿಳಂಬವಾಗಿದೆ. ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಅನ್ನು ಸ್ವಲ್ಪ ದುರಸ್ತು ಮಾಡಿ ಈಗ ಇರತಕ್ಕ ಭೂಮಿಯನ್ನು ವಿತರಣೆ ಮಾಡಬೇಕೆಂದು ಸರ್ಕಾರದ ಉದ್ದೇಶ ಇದೆ.

ಶ್ರೀ ಜಿ. ವಿ. ಆಂಜನಪ್ಪ.—ಈಗ ನಮ್ಮ ರಾಜ್ಯದಲ್ಲಿ ಸಾಗುವಳಿಗೆ ಯೋಗ್ಯವಾಗಿ, ಸಾಗುವಳಿಯಾಗದೇ ಇರುವ ಸುಮಾರು 11,60,282-26 ಎಕರೆ ಜಮೀನು ಇದೆಯೆಂದು ಅಪ್ಪಣೆ ಕೊಡಿಸಿದ್ದೀರಿ, ಹಾಗಾದರೆ ಇದರಲ್ಲಿ ನಿರುದ್ಯೋಗಿ ಪದವೀಧರರಿಗೆ ಕೆಲವು ಜಮೀನನ್ನು ಕೊಡಬೇಕೆಂದು ಏನಾದರೂ ನಿರ್ಧಾರ ಮಾಡಿದ್ದೀರಾ ? ಹಾಗೆ ಮಾಡಿದ್ದರೆ ಎಷ್ಟು ಎಕರೆ ಜಮೀನನ್ನು ನಿರುದ್ಯೋಗಿ ಪದವೀಧರರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ ?

ಶ್ರೀ ಎಚ್. ವಿ. ಕೌಜಲಗಿ.—ನಿರುದ್ಯೋಗ ಪದವೀಧರರಿಗೆ ಕೃಷಿ ಕಾರ್ಯಕ್ಕೆ ಅನುಕೂಲವಾಗುವಂತೆ ಎರಡು ಮೂರು ಕಡೆ ಒಂದು ಸಾವಿರ ಎಕರೆ ಸರ್ಕಾರಿ ಜಮೀನಿನ ಪ್ಲಾಟುಗಳನ್ನು ಮೀಸಲಿಡಲು ಯೋಚಿಸಲಾಗಿದೆ. ಈ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ರೂಪಿಸುವಂತೆ ಅಧಿಕಾರಿಗಳಿಗೆ ತಿಳಿಸಲಾಗಿದೆ.

ಶ್ರೀ ವಿ. ವೆಂಕಟಪ್ಪ.—ಮೈಸೂರು ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ 1968 ಎಂದು ಇಲ್ಲಿ ಹೇಳಲಾಗಿದೆ. ಇದಕ್ಕೆ ಹಿಂದೆ ಎಂ. ಪಿ. ಪಾಟೀಲರ ಕಾಲದಲ್ಲಿ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪಾಸಾಗಿರಲಿಲ್ಲವೆ ?

ಶ್ರೀ ಎಚ್. ವಿ. ಕೌಜಲಗಿ.—ಆಗಿನ ನಿಯಮ ಸರಿಯಾಗಿಲ್ಲ ಎಂದು 1968 ರಲ್ಲಿ ಹೊಸ ನಿಯಮವನ್ನು ಮಾಡಲಾಯಿತು.

ಶ್ರೀ ವಿ. ವೆಂಕಟಪ್ಪ.—ಇದಕ್ಕೆ ಹಿಂದೆ ಜಮೀನುಗಳನ್ನು ಯಾರಿಗೂ ಹಂಚಿಲ್ಲವೆ ?

ಶ್ರೀ ಎಚ್. ವಿ. ಕೌಜಲಗಿ.—ಆಗಿನ ನಿಯಮದ ಪ್ರಕಾರವೂ ಕೂಡ ಹಂಚಿದ್ದೇವೆ.

ಶ್ರೀ ವೈ. ಎಸ್. ಪಾಟೀಲ್.—ಇದುವರೆಗೆ ಎಷ್ಟು ಎಕರೆ ಜಮೀನು ಹಂಚಲಾಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಆ ವಿವರ ಇಲ್ಲ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಸಾಗುವಳಿಗೆ ಯೋಗ್ಯವಾದ ಜಮೀನುಗಳ ವಿಸ್ತೀರ್ಣವನ್ನು ಇಲ್ಲಿ ಕೊಟ್ಟಿದ್ದೀರಿ. ಸಾಗುವಳಿಗೆ ಯೋಗ್ಯವಲ್ಲದ ಜಮೀನುಗಳ ವಿಸ್ತೀರ್ಣ ಎಷ್ಟು ಇದೆ ಎಂದು ಹೇಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಆ ಲೆಕ್ಕ ಇಲ್ಲ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಹೆಚ್ಚಿನ ಆಹಾರ ಉತ್ಪಾದನೆಯ ದೃಷ್ಟಿಯಿಂದ ಈ ಜಮೀನನ್ನು ಜಾಗ್ರತೆ ಹಂಚುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಆದಷ್ಟು ಜಾಗ್ರತೆ ಹಂಚಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ.

ಶ್ರೀ ಕೆ. ಟಿ. ರಾಮಯ್ಯಗೌಡ.—11,60,2[illegible]6-26 ಎಕರೆಗಳು ಎಂದು ಹೇಳಿದ್ದೀರಿ. ಇದರಲ್ಲಿ ಅರಣ್ಯ ಇಲಾಖೆಗೆ ಎಷ್ಟು ಎಕರೆ ಸೇರಿದೆ ?

ಶ್ರೀ ಎಚ್. ವಿ. ಕೌಜಲಗಿ.—ಇಲ್ಲಿ ಕೊಟ್ಟಿರುವ ಎಲ್ಲಾ ಎಕರೆಗಳೂ ಸಹ ರೆವೆನ್ಯೂ ಇಲಾಖೆಗೆ ಸೇರಿದ್ದು.

ಶ್ರೀ ಎ. ಕೆ. ಸುಬ್ಬಯ್ಯ.—ಇಲ್ಲಿ ಕೊಟ್ಟಿರುವ ಅಂಕಿಗಳಲ್ಲಿ ಕೆಲವರು ಅನಧಿಕೃತವಾಗಿ ಸಾಗುಮಾಡುತ್ತಿರುವ ಜಮೀನಿನ ವಿಸ್ತೀರ್ಣವೂ ಸಹ ಸೇರಿದೆಯೇ ?

ಶ್ರೀ ಎಚ್. ಕೌಜಲಗಿ.—ಹೌದು.

ಶ್ರೀ ಎ. ಕೆ. ಸುಬ್ಬಯ್ಯ.—ಈ ಅಂಕಿಗಳಲ್ಲಿ ಅನಧಿಕೃತವಾಗಿ ಸಾಗು ಮಾಡುತ್ತಿರುವ ಜಮೀನಿನ ವಿಸ್ತೀರ್ಣ ಎಷ್ಟು ಇದೆ ?

ಶ್ರೀ ಎಚ್. ವಿ. ಕೌಜಲಗಿ.—ಸುಮಾರು ಎರಡು ಲಕ್ಷ ಎಕರೆ ಇರಬಹುದು.

ಶ್ರೀ ಕೆ. ಟಿ. ಶಾಮಯ್ಯಗೌಡ.—(ಅ) ಪ್ರಶ್ನೆಗೆ ಉತ್ತರವಾಗಿ ಕಾರಣವನ್ನು ಕೊಡುತ್ತಾ, ಅರಣ್ಯಾಧಿಕಾರಿಗಳು ಜಮೀನಿನಲ್ಲಿ ಬೆಳೆದಿರುವ ಮರಗಿಡಗಳನ್ನು ಕಡಿದುಹಾಕುವ ಬಗ್ಗೆ ಇರುವ ವಾಸ್ತವಿಕ ತೊಂದರೆಗಳೂ ಈ ವಿಳಂಬಕ್ಕೆ ಕಾರಣ ಎಂದು ಹೇಳಿದ್ದೀರಿ. ಅಂದರೆ ಇಲ್ಲಿ ಕೊಟ್ಟಿರುವ ಜಮೀನುಗಳ ಅಧಿಕಾರ ಅರಣ್ಯ ಇಲಾಖೆಗೂ ಸೇರಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಇಲ್ಲ. ಮರಗಿಡಗಳನ್ನು ಏನಾದರೂ ಕಡಿದುಹಾಕುವುದು ಇದ್ದರೆ ಅರಣ್ಯ ಇಲಾಖೆಗೆ ಒಪ್ಪಿಸುತ್ತೇನೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—11,60,286-26 ಎಕರೆಗಳಲ್ಲಿ ಸ್ಕೀಗೆ ಒಳಪಟ್ಟಂಥಹ ಜಮೀನುಗಳ ವಿಸ್ತೀರ್ಣ ಎಷ್ಟು ?

ಶ್ರೀ ಎಚ್. ವಿ. ಕೌಜಲಗಿ.—3-4 ಸಾವಿರ ಎಕರೆಯೊಳಗೆ ಇರಬಹುದು. ಜಾಸ್ತಿ ಇಲ್ಲ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಉಳಿದ ಜಮೀನುಗಳು ಆದಷ್ಟು ತೀವ್ರವಾಗಿ ನಿರುದ್ಯೋಗಿ ಪದವೀಧರರಿಗೆ ಹಂಚುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಈಗಾಗಲೇ ಹೇಳಿದ್ದೇನೆ. ಸರ್ಕಾರದ ಉದ್ದೇಶ ಆದಷ್ಟು ಜಾಗ್ರತೆ ಈ ಜಮೀನುಗಳನ್ನು ಬಡಜನರಿಗೆ ಹಂಚಬೇಕು ಎಂಬುದು ಇದೆ. ಈ ಬಗ್ಗೆ ಕೆಲವು ರೂಲ್ಸ್‌ಗಳನ್ನು ಮಾಡಿ ಸಾರ್ವಜನಿಕರ ಸಲಹೆಗಾಗಿ ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಅನೇಕ ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ಆ ಸಲಹೆಗಳನ್ನು ವಿಚಾರ ಮಾಡಲಾಗಿದೆ. ಈಗ ಕೊನೆಯ ಹಂತದಲ್ಲಿ ಇದೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಅರಣ್ಯ ಮತ್ತು ಸೇಂದಿಗಿಡಗಳನ್ನು ಬೆಳೆಯುತಕ್ಕಂಥ ಪ್ರದೇಶಗಳೂ ಸಹ ಸರ್ಕಾರದ ವಶಕ್ಕೆ ಬರುತ್ತದೆಯೇ, ಆ ರೀತಿ ಬರುವುದಾದರೆ ಅಂತಹ ಪ್ರದೇಶಗಳು ಎಷ್ಟು ಇದೆ, ಅಂತಹ ಪ್ರದೇಶವನ್ನು ಸಾಗುವಳಿ ಮಾಡಲು ಕೊಡುತ್ತೀರಾ, ಕೊಡುವುದಕ್ಕೆ ಆಗದಿದ್ದರೆ ಉತ್ತರಕನ್ನಡಜಿಲ್ಲೆಯಲ್ಲಿ ಇಂತಹ ಪ್ರದೇಶವನ್ನು ಸುಮಾರು 48 ಸಾವಿರ ಎಕರೆಯಷ್ಟು ಪ್ರದೇಶವನ್ನು ಯಾವ ರೀತಿ ಕೊಟ್ಟಿದ್ದೀರಿ ?

ಶ್ರೀ ಎಚ್. ವಿ. ಕೌಜಲಗಿ.—ಇದರಲ್ಲಿ ಸೇಂದಿ ಗಿಡ ಅಥವಾ ಡೇಟ ಎರಿಯಾದ ವಿವರಗಳಿಲ್ಲ. ಎರಡನೆಯದು ಡೇಟ ಗಿಡಗಳು ಬೆಳೆಯುವ ಪ್ರದೇಶಗಳಲ್ಲಿ ಸಾಗುಮಾಡುವುದಕ್ಕೆ ಬರುವುದಿಲ್ಲ. ಎರಡನೆಯದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 48 ಸಾವಿರ ಎಕರೆಗಳಷ್ಟು ಭೂಮಿಯನ್ನು ಫಾರೆಸ್ಟ್ ಏರಿಯಾದಲ್ಲಿ ಹರಿಜನರಾಗಿರುವ ಬಡವರು ಹಾಗು ಲ್ಯಾಂಡ್‌ಲೆಸ್ ಟ್ರೈಬ್ಸ್ ಜನಗಳಿಗೆ ಅನುಕೂಲವಾಗಲು ಮತ್ತು ಅವರು ಸಾಗು ಮಾಡಲು ಎಂದು ಅವರಿಗೆ ಕೊಡಬೇಕಾಗಿದೆ.

ಶ್ರೀ ಎ. ಕೆ. ಸುಬ್ಬಯ್ಯ.—ಎರಡು ಲಕ್ಷ ಚಿಲ್ಲರೆ ಎಕರೆ ಇರುವ ಭೂಮಿಯನ್ನು ಖಾಸಗಿ ಜನರಿಗಾಗಿ ಹಂಚಲು ಸರಕಾರದ ಧೋರಣೆ ಏನು ?

ಶ್ರೀ ಎಚ್. ವಿ. ಕೌಜಲಗಿ.—ಸುಮಾರು ಎರಡು ಲಕ್ಷ ಚಿಲ್ಲರೆ ಅನಧಿಕೃತವಾಗಿ ಖಾಸಗಿಯವರು ಸಾಗು ಮಾಡುತ್ತಿದ್ದರು ಇದರಲ್ಲಿ ಬಡವರು ಹಾಗು ಶ್ರೀಮಂತರೂ ಇದ್ದಾರೆ. ಆದರೆ ಇವರಲ್ಲಿ ಬಡವರು ಎಂದರೆ ಹರಿಜನರು, ಲ್ಯಾಂಡಲೆಸ್ ಲೇಬರುಗಳು, ಟ್ರೈಬ್ಸ್ ಜನಾಂಗದವರು ಸಾಗು ಮಾಡುತಿದ್ದರೆ ಅಂಥವರಿಗೆ ಅವರು ಸಾಗುಮಾಡುತ್ತಿರುವ ಭೂಮಿಯನ್ನು ಕೊಡಬೇಕು ಎನ್ನುವುದು ಸರಕಾರದ ಉದ್ದೇಶವಾಗಿದೆ. ಯಾರು ಬಡವರು ಅಲ್ಲವೋ ಅವರಿಗೆ ಕೊಡುವುದಿಲ್ಲ. ಅವರಿಂದ ಬಿಡಿಸಲಾಗುತ್ತದೆ.

Stay for Repayment of Retired Teachers' own Contribution to his Provident Fund

127. Sri S. MUKUNDA RAO (Teacher's Constituency).—

Will the Minister for Education be pleased to state: —

(a) whether under instructions from Government the Director of Public Instruction has ordered that repayment of a retired teacher's own contribution in his provident fund should be stayed ;

(b) if so, the reason for ordering such a stay?

Sri N. M. KOTRABASAIAH SOGI (Deputy Minister for Education).-

(a) In respect of teachers who retired between 1st April 1963 and 31st March 1967, the Director of Public Instruction had ordered on 13th June 1969 that pending Government's decision on giving retrospective effect to the liberalised provisions of the Triple Benefit Scheme, payment of provident fund (including teacher's own share) should be withheld. No such instructions had, however, been issued by Government.

(b) This was due to a bona fide misunderstanding of Government's instructions in the matter.

Sri S. MUKUNDA RAO.—Has the D. P. I. corrected the circular which was issued through a misunderstanding ?

†Sri N. M. KOTRABASAIAH SOGI.—He has subsequently issued another circular on 18th August 1969 revising the original instructions.

Sri S. MUKUNDA RAO.—Is it a fact that according to Government insturctions the management's contribution is to be withheld ?

Sri N. M. KOTRABASAIAH SOGI.—The management's contribution and the Government contribution both have to be withheld as the matter is under examination by Government regarding applying the liberalised Triple Benefit Scheme.

Sri S. MUKUNDA RAO.—Whether it is the old scheme or revised scheme the management's contribution has to go to the teachers. Then why is it withheld ?

Sri N. M. KOTRABASAIAH SOGI.—After final decision is taken, if anything is to be settled it is to be settled along with the management's contribution also.

Implementation of the Revised Rules of Triple Benefit Scheme

133. Sri M. G. HANDRAL (Teachers' Constituency).—

Will the Minister for Education be pleased to state :—

(*a*) whether the teachers who retired between 1963 and 1967 are asking for implementation of the revised rules of T. B. S. 1967 from 1st April 1963 ?

(*b*) if so, the decision of Government in this behalf ?

Sri N. M. KOTRABASAIAH SOGI (Deputy Minister for Education).—

(*a*) Yes.

(*b*) The request is being examined.

ಶ್ರೀ ಎಂ. ಜಿ. ಹಂದ್ರಾಳ.—ಸ್ವಾಮಿ, ಈ ಟ್ರಿಪಲ್ ಬೆನಿಫಿಟ್ ಸ್ಕೀಮ್ ಬಗ್ಗೆ 1963ರಲ್ಲಿ ಒಂದು ಆರ್ಡರ್ ಇದೆ, 1967ರಲ್ಲಿ ಒಂದು ಆರ್ಡರ್ ಇದೆ. ಇದರಲ್ಲಿ ಯಾವುದಾದರೂ ಆಯ್ಕೆ ಮಾಡಿಕೊಳ್ಳುವುದಕ್ಕೆ ಏತಕ್ಕೆ ಅವಕಾಶ ಕೊಡಲಾಗಿದೆ ? ಅವರು ಏನಾದರೂ ಆಪ್ಷನ್ ಕೇಳಿದಾಗ 1962 ರಲ್ಲಿ ಹೊರಡಿಸಿದ ಆರ್ಡರ್‌ನಂತೆ ಆಪ್ಷನ್ ಕೊಡುವುದರ ಉದ್ದೇಶ ಏನು ? ಯಾವುದು ಲಾಭ ಇದೆಯೋ ಅದನ್ನು ಕೇಳಲಿ ಅನ್ನುವ ಉದ್ದೇಶವೇ ? ಅದಕ್ಕೋಸ್ಕರ 1963 ಅಥವಾ 1967ರ ನಡುವೆ ರಿಟೈರ್ಡ್ ಆದಂಥ ಉಪಾಧ್ಯಾಯರುಗಳಿಗೆ 1967ರ ಆರ್ಡರನಂತೆ ಅಪ್ಷನ್ ಮಾಡುವುದಕ್ಕೆ ಅನುಮಾನ ಏನು ? ಇನ್ನೂ ಇದರ ಬಗ್ಗೆ ತೀರ್ಮಾನ ಕೈಗೊಳ್ಳಲಿಲ್ಲವೇ ? ಅವರುಗಳಿಂದ ಮನವಿಗಳು ಬಂದಿಲ್ಲವೇ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದನ್ನು ಸರ್ಕಾರ ಪರಿಶೀಲಿಸುತ್ತಾ ಇದೆ. ಡಿ. ಪಿ. ಐ. ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಇಂಪ್ಲಿಮೆಂಟ್ ಮಾಡಿ ವರದಿ ಸಲ್ಲಿಸಬೇಕೆಂದು ಈಗಾಗಲೇ ಮಾಹಿತಿ ಕರದಿದ್ದೇವೆ. ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಬಂದಮೇಲೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎ. ಕೆ. ಸುಬ್ಬಯ್ಯ.—ಸ್ವಾಮಿ, (ಅ) ಗೆ ಉತ್ತರವಾಗಿ ಅವರ ವಿನಂತಿಯನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಹಾಗಾದರೆ ಪರಿಶೀಲನೆ ಯಾವಾಗ ಮುಗಿಯಬಹುದು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದಷ್ಟು ಕ್ಷಿಪ್ರದಲ್ಲಿಯೇ ಮುಗಿಯುತ್ತದೆ.

ಶ್ರೀ ಎಸ್. ಪಿ. ರಾಜಣ್ಣ.—ಈ ಕ್ಯಾಟಗರಿಯಲ್ಲಿ ಯಾರು ಯಾರು ಉಪಾಧ್ಯಾಯರುಗಳು ಇದ್ದಾರೆ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನನ್ನ ಹತ್ತಿರ ಆ ಮಾಹಿತಿ ಇಲ್ಲ. ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

Cases of Cheating by Chit Funds reported

165. Smt. M. R. LAKSHAMMA (Graduates' Constituency).—

Will the Chief Minister be pleased to state :—

(*a*) whether cases of cheating by Chit Funds have been reported to the Police Department ;

(*b*) if so, the number of such cases reported to the Police ?

Sri VEERENDRA PATIL (Chief Minister).—

(*a*) Yes.

(*b*) 22 cases have been reported in the State from 1967.

Smt. M. R. LAKASHAMMA.—May I know what type of cases of cheating has been reported to the Police Department ?

† Sri VEERENDRA PATIL.—In one case they issued a cheque which was dishonoured. They collected money and disappeared. In most of the cases it is like this, they collect money and then disappear.

Smt. M. R. LAKSHAMMA.—In addition to these cases which are reported to the police, since there are a number of fraudulent chit funds prevalent, will Government think of controlling them by means of a Bill or some other measure ?

Sri VEERENDRA PATIL.—It is a good suggestion. We will consider it.

Sri G. V. ANJANAPPA.—Out of 22 cases reported, how many have been charge-sheeted in courts of law ?

Sri VEERENDRA PATIL.—Out of 22, two are undetected, one was found to be false, two were acquitted by the court and 13 are under investigation and 4 are pending trial.

3-30 P.M.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—22 ಕೇಸುಗಳಲ್ಲಿ ಚೀಟಿಂಗು ನಡೆದಿವೆ ಎಂದು ಹೇಳಿದ್ದೀರಿ. ಇವೆಲ್ಲಾ ಯಾವ ತರಹದವುಗಳು ಮತ್ತು ಇವು ರಿಜಿಸ್ಟರ್ಡ್ ಸಂಸ್ಥೆಗಳೇ ಇಲ್ಲವೇ ಅನ್‌ರಿಜಿಸ್ಟರ್ಡ್ ಸಂಸ್ಥೆಗಳೇ ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಎಲ್ಲ ಅನ್‌ರಿಜಿಸ್ಟರ್ಡ್ ಸಂಸ್ಥೆಗಳೇ ಆಗಿವೆ. ಒಂದೆರಡು ರಿಜಿಸ್ಟರ್ಡ್ ಸಂಸ್ಥೆಗಳೂ ಇರಬಹುದು ಎಂದು ಕಾಣುತ್ತದೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಈ ಚಿಟ್ ಫಂಡುಗಳ ಪ್ರಾರಂಭೋತ್ಸವಕ್ಕಾಗಿ ಮಂತ್ರಿಮಂಡಲದ ಗೌರವಾನ್ವಿತ ಸದಸ್ಯರೂ ಭಾಗ ವಹಿಸುತ್ತಿರುವುದರಿಂದ ಜನರಲ್ಲಿ ಇದರ ಭದ್ರತೆ ವಿಷಯವಾಗಿ ತಪ್ಪು ಕಲ್ಪನೆ ಆಗಲಿಕ್ಕೆ ಅವಕಾಶವಾಗುತ್ತದೆ. ಇದರ ಬಗ್ಗೆ ಸರಕಾರ ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಇದು ನನಗೆ ಗೊತ್ತಿಲ್ಲ. ಚಿಟ್ ಫಂಡುಗಳಿಗೆ ಯಾರು ಹೋಗಿದ್ದರೋ ಗೊತ್ತಿಲ್ಲ. ನಾಲ್ಕಾರು ಜನ ಸೇರಿಕೊಂಡು ಒಂದು ಚಿಟ್ ಫಂಡು ಎಂದು ಮಾಡಿಕೊಂಡಿರುತ್ತಾರೆ. ಕೆಲವು ದಿವಸ ಇವು ಸರಿಯಾಗಿ ಕೆಲಸ ಮಾಡುತ್ತವೆ. ಸ್ವಲ್ಪ ದುಡ್ಡು ಹೆಚ್ಚು ಸೇರಿದಮೇಲೆ ಇವು ಹಾಗೇ ಮಾಯವಾಗಿ ಹೋಗುತ್ತವೆ. ಎಲ್ಲ ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತೇವೆ ಎಂದು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಎಸ್. ಚನ್ನಪ್ಪ.—ಪ್ರತಿ ಹಳ್ಳಿಗಳಲ್ಲಿಯೂ ಈ ಚೀಟಿಗಳ ಹಾವಳಿ ಬಹಳ ಜಾಸ್ತಿಯಾಗುತ್ತಿರುವುದರಿಂದ ಇದರ ಬಗ್ಗೆ ಸರಕಾರ ಯಾವುದಾದರೂ ಹತೋಟಿ ಕಾರ್ಯಕ್ರಮ ತೆಗೆದುಕೊಳ್ಳುವುದು ಒಳ್ಳೆಯದಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಶ್ರೀಮತಿ ಲಕ್ಷಮ್ಮನವರು ಹೇಳಿದಹಾಗೆ ಇದನ್ನು ರೆಗ್ಯುಲೇಟ್ ಮಾಡಲು ಏನು ಕಾರ್ಯಕ್ರಮ ತೆಗೆದುಕೊಳ್ಳುವುದು ಎನ್ನುವುದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಯಾವ ರೀತಿ ಮಾಡಬೇಕಾದರೂ ಕಾನೂನಿನ ಪರಿಮಿತಿಯೊಳಗೇ ಮಾಡಬೇಕು. ಇದಕ್ಕೆ ಬೇರೆ ದಾರಿ ನನಗೆ ಗೊತ್ತಿಲ್ಲ. ಈ ವಿಚಾರ ಪರಿಶೀಲನೆ ಮಾಡುತ್ತೇನೆ ಎಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಕೆ. ಟಿ. ಶಾಮಯ್ಯಗೌಡ.—ಚಿಟ್ ಫಂಡು ಹಾಗೂ ಫೈನಾನ್ಸ್ ಕಾರ್ಪೊರೇಶನ್ ಎಂದು ಮಾಡಿಕೊಂಡು ಶೇಕಡಾ 13 ರಷ್ಟು ಬಡ್ಡಿ ಕೊಡುತ್ತಾರೆ. ಆದರೆ ಬ್ಯಾಂಕುಗಳವರು ಇಷ್ಟು ಕೊಡಲಾಗುತ್ತಿಲ. ಅಲ್ಲದೆ ಇಂತಹ ಕಾರ್ಪೊರೇಷನ್‌ಗಳ ಪ್ರಾರಂಭೋತ್ಸವ ಬೆಂಗಳೂರಲ್ಲಿ

ಇತ್ತೀಚೆಗೆ ನಡೆದಾಗ ಮಾನ್ಯ ಶ್ರೀ ನಾಗಪ್ಪ ಆಳ್ವರವರೂ ಹೋಗಿದ್ದರು ಮತ್ತು ತಾವು ಕೂಡ ಇದರ ಪ್ರಾರಂಭೋತ್ಸವಕ್ಕೆ ಹೋಗಿದ್ದಿರಿ. ಇಂತಹ ಸಂಸ್ಥೆಗಳು ಸರಿಯಾಗಿ ನಡೆಯುತ್ತಿವೆಯೋ ಇಲ್ಲವೇ ಎನ್ನುವುದನ್ನೇನಾದರೂ ಪರಿಶೀಲಿಸಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಫೈನಾನ್ಸ್ ಕಾರ್ಪೊರೇಷನ್ ಎಂದು ಕೆಲವು ಜನ ಮಾಡುತ್ತಿದ್ದಾರೆ. ಇದನ್ನು ಹೇಗೆ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ ಮತ್ತು ಕೆಲವರು ಚಿಟ್ ಫಂಡುಗಳು ಎಂದು ಬೇರೆ ನಡೆಸುತ್ತಾರೆ. ಫೈನಾನ್ಸ್ ಕಾರ್ಪೊರೇಷನ್‌ಗಳ ಒಂದೆರಡು ಫಂಕ್ಷನ್ ಗಳಿಗೂ ನಾನು ಹೋಗಿದ್ದೆ. ಇತ್ತೀಚೆಗೆ ನಾನು ಹೋಗಿಲ್ಲ. ನಾನು ಹೋಗುವುದಕ್ಕೆ ಮೊದಲು ಇದರ ಪ್ರಾಸ್‌ಪೆಕ್ಟಸನ್ನು ತರಿಸಿಕೊಂಡು ಇವು ಯಾವ ರೀತಿ ಸಾಲ ಕೊಡುತ್ತಿವೆ, ಮತ್ತು ಹೇಗೆ ವ್ಯವಹಾರ ಮಾಡುತ್ತಿವೆ ಎನ್ನುವುದನ್ನೆಲ್ಲಾ ವಿವರವಾಗಿ ತಿಳಿದುಕೊಂಡಮೇಲೆ ಅಲ್ಲಿಗೆ ಹೋಗುತ್ತೇನೆ. ಇವು ಯಾವರೀತಿ ಕೆಲಸ ಮಾಡುತ್ತಿವೆ ಎನ್ನುವುದನ್ನು ಇನ್ನೂ ಕಾದು ನೋಡಬೇಕಾಗಿದೆ. ನಾವು ಇಲ್ಲಿಗೆ ಹೋಗಿ ಇಲ್ಲಿ ಭಾಗವಹಿಸುವುದರಿಂದ ಸರಕಾರವೇ ಇವರಿಗೆ ಸಹಾಯುವಾಡುತ್ತಿದೆ ಅಥವಾ ಮಾಡಬಹುದು ಎಂದು ಯಾರೂ ತಿಳಿದುಕೊಳ್ಳಬಾರದು. ಸರಿಯಾದ ರೀತಿಯಲ್ಲಿ ನಡೆಯದೇ ನಷ್ಟವುಂಟು ಮಾಡುತ್ತಿದ್ದರೆ ಇಂತಹವರನ್ನು ಎಚ್ಚರಿಸಲು ತಕ್ಕ ಕ್ರಮ ತೆಗೆದುಕೊಳ್ಳಲು ಹಿಂದು ಮುಂದು ನೋಡುವುದಿಲ್ಲ. ಇವರು ಬಡ್ಡಿಯನ್ನು ಶೇಕಡಾ 13 ಮತ್ತು 14ರಂತೆ ಕೊಡಬೇಕಾದರೆ ಇವರು ಯಾವ ರೀತಿ ಕೊಡುತ್ತಾರೆ ಎನ್ನುವುದರ ಬಗ್ಗೆ ಇವರ ವ್ಯವಹಾರಗಳ ವಿವರಗಳನ್ನು ನೋಡಿದ ಹೊರತು ಯಾರಿಗೂ ತಿಳಿಯುವುದಿಲ್ಲ.

Sri G. V. ANJANAPPA.—May I know the total amount involved in these 22 cheating cases ?

ಶ್ರೀ ವೀರೇಂದ್ರ ಪಾಟೀಲ್.—ಎಲ್ಲ ವಿವರಗಳೂ ಇವೆ. ಒಂದರಲ್ಲಿ ಸುಮಾರು 620 ರೂಪಾಯಿಗಳಾಗಿವೆ. ಒಬ್ಬರಿಗೆ 750 ರೂಪಾಯಿಗಳು ಎಂದು ಇದೆ, ಇನ್ನೊಂದು ಕೇಸಿನಲ್ಲಿ 103 ರೂಪಾಯಿಗಳು ಎಂದು ಇದೆ. ಮತ್ತೊಂದರಲ್ಲಿ 72,100 ರೂಪಾಯಿಗಳು ಮತ್ತು ಇದರ ಕೇಸು ಕೋರ್ಟಿನಲ್ಲಿ ಪೆಂಡಿಂಗು ಇದೆ. ಇದರಲ್ಲಿ ತಪ್ಪಿತಸ್ಥರು ಇಬ್ಬರು ಎಂದರೆ ಒಂದು ಅಬ್ದುಲ್ಲ ಸುಭಾನ ಮತ್ತು ಅಬ್ದುಲ್ಲ ಹಫೀಜ, ಬೆಂಗಳೂರಿನವರು ಎಂದು ಇದೆ ಮತ್ತು ಇದು ಒಂದು ಅನ್‌ರಿಜಿಸ್ಟರ್ಡ್ ಸಂಸ್ಥೆ ಮತ್ತು ಇದು ಟ್ರಯಲ್ ಕೋರ್ಟ್‌ನಲ್ಲಿ ನಡೆಯುತ್ತಿದೆ.

ಶ್ರೀ ಎಸ್. ಸಿ. ಕುಬಸದ್.—ಸ್ಟೇಟು ಫೈನಾನ್ಸ್ ಕಾರ್ಪೊರೇಷನ್ ಎಂದು ಇರುವಾಗ ಬೇರೆ ಬೇರೆಯವರೂ ಫೈನಾನ್ಸ್ ಕಾರ್ಪೊರೇಷನ್ ಎಂದು ಕರೆದರೆ ಇದರಲ್ಲಿ ತಪ್ಪು ಆಗುವ ಸಂಭವ ಇರುತ್ತದೆಯಲ್ಲವೇ ? ಫೈನಾನ್ಸ್ ಕಾರ್ಪೊರೇಷನ್ ಎಂದು ಒಂದೇ ಹೆಸರಿನಲ್ಲಿ ಹೇಗೆ ರಿಜಿಸ್ಟರು ಮಾಡಿಕೊಳ್ಳುತ್ತಾರೆ ? ಇದರಲ್ಲಿ ತಪ್ಪು ಕಲ್ಪನೆಗೆ ಅವಕಾಶವಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಇಂತಹ ಹೆಸರನ್ನು ಇಡುವುದರಲ್ಲಿ ತಪ್ಪೇನಿಲ್ಲ. ನಾವು ಇಡೀ ದೇಶದ ಸ್ಟೇಟು ಫೈನಾನ್ಸ್ ಕಾರ್ಪೊರೇಷನ್ ಎಂದು ಹೆಸರು ಇಟ್ಟಿದ್ದೇವೆ. ಇಲ್ಲಿರುವ ಫೈನಾನ್ಸ್ ಕಾರ್ಪೊರೇಷನ್‌ಗೆ ಕೇಳಿದವರಿಗೆಲ್ಲಾ ದುಡ್ಡು ಕೊಡುವುದಕ್ಕೆ ಶಕ್ತಿ ಇಲ್ಲ. ಕಾನೂನು ಚೌಕಟ್ಟಿನೊಳಗೆ ಅದರ ಕೆಲಸ ಕಾರ್ಯಗಳನ್ನು ಸರಿಯಾಗಿ ಮಾಡುತ್ತಿದ್ದರೆ ಅದರಲ್ಲಿ ತಪ್ಪೇನಿಲ್ಲ.

Women Judicial Officers

179. Sri K. S. N. ADIGA (Local Authorities' Constituency).—

Will the Minister for Law, Labour and Parliamentary Affairs be pleased to state :—

(a) the number of women working as Judicial Officers in the Judiciary of our State ;

(b) whether it is the policy of the Government to exclude women from recruitment to the judiciary ;

(c) the steps taken by Government to ensure that at least a token if not adequate representation is there for women on the judiciary ?

Sri K. PUTTASWAMY (Minister for Law, Labour and Parliamentary Affairs).—

(a) Nil.
(b) No.
(c) Does not arise.

Sri K. SURYANARAYANA ADIGA.—Why is it there are no ladies at all in the Judiciary in the State ?

Sri K. PUTTASWAMY.—Because they have not been appointed.

Sri K. SURYANARAYANA ADIGA.—It is stated that there is no bar for their appointment. Unless the Government has got prejudice against their appointment, what is the explanation for their not being appointed so far ?

Sri K. PUTTASWAMY.—The prejudice or pleasure of Government will not count in the matter of appointment of judicial officers. The House is aware of the Cadre and Recruitment Rules. The Munsiffs are appointed after holding an examination and *viva voce* by the Public Service Commission on the recommendation of the Public Service Commission. Government have no hand in the appointments to the cadre of Civil Judges; it is by promotion. To the cadre of District Judges, the High Court Judges interview the candidates and take into consideration their performance as Advocates and they make a recommendation, and Government formally appoints them.

Sri K. SURYANARAYANA ADIGA.—Is the Government aware that recently during the A. I. C. C. Session here, women lawyers went on deputation to the Prime Minister and pressed for their claim to the judiciary ?

Sri K. PUTTASWAMY.—Sir, ladies as a class would never forgo an opportunity of getting themselves heard for pressing their case.

ಶ್ರೀ ಎಂ. ವಿ. ವೆಂಕಟಪ್ಪ.—ಇತ್ತೀಚೆಗೆ ಗವರ್ನಮೆಂಟು ಪ್ಲೀಡರುಗಳನ್ನು ನೇಮಕ ಮಾಡಿದ್ದೀರಿ. ಬೆಂಗಳೂರಿನಲ್ಲಿರುವ ವಕೀಲರ ಸಂಘದಲ್ಲಿ ಸುಮಾರು 10—15 ಜನ ಮಹಿಳೆಯರು ಸಾಕಷ್ಟು ಪರಿಣತರಾಗಿದ್ದರೂ ಅವರ ಪೈಕಿ ಯಾರನ್ನಾದರೂ ನೇಮಕ ಮಾಡಬಹುದಾಗಿತ್ತಲ್ಲವೇ ?

Sri K. PUTTASWAMY.—Government is guided by the same consideration as an ordinary client, takes into consideration while appointing an advocate.

Sri K. SURYANARAYANA ADIGA.—If women lawyers with ability and experience do come forward, will the Government consider the propriety or justice of appointing them either to the District Judges cadre or High Court judgeship in the near future ?

Sri K. PUTTASWAMY.—Sir, I have made it quite clear that Government do not come into the picture. If there are competent lady advocates, I am sure the Hon. Judges of the High Court will take their claims also into consideration while making a recommendation.

Smt. M. R. LAKSHAMMA.—Are the Government aware that the day is not far off when women lawyers by dint of their virtue will occupy very high places in the judiciary ?

Sri K. PUTTASWAMY.—I shall be very happy if that day comes soon.

Mr. DEPUTY SPEAKER.—Question hour is over.

QUESTION FOR ANSWER ON THE DAY
(but not taken up)

Opening of Central Colleges in the South

168. Sri KESHAV RAO NITTURKAR (Teachers' Constituency).—

Will the Minister for Education be pleased to state :—

(a) whether the Government is aware of the proposal of the Union Education Minister to open Central Colleges in the South ;

(b) if so, whether the Government had indicated any place for such college to be opened in the State ?

Sri K. V. SHANKARA GOWDA (Minister for Education).—

(a) No communication has so far been received from the Government of India.

(b) Does not arise.

Calling Attention to a Matter of Urgent Public Importance
re : Hunger Strike by Workers of Government Soap Factory

Sri Y. S. PATIL (Graduates' Constituency).—Sir, I call the attention of the Minister for Law, Labour and Parliamentary Affairs to the hunger strike undertaken by the workers of the Government Soap Factory, Bangalore.

Sri K. PUTTASWAMY (Minister for Law, Labour and Parliamentary Affairs).—Sir, the hon. members have given notice to call my attention to the hunger strike undertaken by the workers of the Government Soap Factory, Bangalore.

There are two Trade Unions in the Government Soap Factory—the Workers and Staff Association and the Government Soap Factory Employees' Union. During 1967 the workers and Staff Association of Government Soap Factory placed a charter of demands before the management of the Government Soap Factory. This charter of demands contained about 11 demands pertaining to revision of pay scales,

(SRI K. PUTTASWAMY)

production bonus, promotion, suspension wages, leave facilities, uniforms, etc. The Deputy Labour Commissioner took up these demands in conciliation and fixed up a conciliation meeting in November 1967. Meanwhile the conciliation officer received a representation from the Government Soap Factory Employees' Union enclosing a copy of demands presented to the management of the Government Soap Factory. In this representation, the Union claimed that it represents the majority of the employees. Since there had been no verification so far as to which Union enjoys the confidence of the workers and had the majority of the membership and as the charter of demands submitted by the Employees' Union was more or less the same as submitted by the workers and staff Association, the Conciliation Officers considered it necessary and desirable to make this Union also a party to the dispute.

During the conciliation proceedings, it was not possible to come to any agreement. The conciliation proceedings therfore ended in a failure.

Even though the conciliation proceedings ended in failure, the management was carrying on negotiations with the workers for arriving at some settlement in respect of all the outstanding demands. To enable the management to enter into some amicable settlement with the workers, the Government did not take a decision regarding reference of the dispute to adjudication.

The management of the Government Soap Factory informed the State Government on 18th August 1969 that they have signed a settlement on 16th August 1969 with the Government Soap Factory Employees' Union. This agreement is binding on the management and the workers who are members of this Union. On perusal of this agreement, it is seen that the issues cover most of the demands raised by the workers and staff association.

The Government is examining the desirability or otherwise of referring the pending dispute to adjudication in the light of the above agreement.

SRI Y. S. PATIL.—The Hon. Minister stated that there are two unions in the Government Soap Factory. May I know which of the two unions has been recognised under the Code of Discipline ?

SRI K. PUTTASWAMY.—None of the two is recognised.

ಶ್ರೀ ಎ. ಕೆ. ಸುಬ್ಬಯ್ಯ.—ಈ ಸೋಪ್ ಫ್ಯಾಕ್ಟರಿಯಲ್ಲಿ ಎರಡು ಯೂನಿಯನ್ನುಗಳಿವೆ, ಅವುಗಳಲ್ಲಿ ಬೇರೆ ಬೇರೆ ಮೆಂಬರ್‌ಷಿಪ್ ಎಷ್ಟು ?

SRI K. PUTTASWAMY.—I have no information.

SRI A. K. SUBBAIAH.—It is stated in the statement that both the Unions claim majority of the workers ?

SRI K. PUTTASWAMY.—Majority is more than 50 per cent. Government cannot claim omnipotence. If the hon. Member wants that information I am prepared to collect that information and furnish it.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಸುಮಾರು 30-40 ವರ್ಷದಿಂದ ಈ ಕಾರ್ಖಾನೆಯಿದೆ. ಕಾರ್ಮಿಕರು ಎರಡು ಸಂಸ್ಥೆ ಮಾಡಿಕೊಂಡಿದ್ದಾರೆ. ಒಂದನ್ನೂ ರೆಕಗ್ನೈಜ್ ಮಾಡಿಲ್ಲವೆಂದು ಹೇಳಿದ್ದೀರಿ. ಏಕೆ? ಅವು ಕಾನೂನು ಬಾಹಿರವಾಗಿವೆಯೋ?

SRI K. PUTTASWAMY.—There are certain rules regarding giving recognition. They have not fulfilled the requirements for recognition. All the same, both the associations have been dealt with as if they are recognised.

Election of Members to Committees

Announcement of Results

MR. DEPUTY CHAIRMAN.—At an election held yesterday, the following members of the Legislative Council were declared elected to the Public Accounts Committee, House Committe and the Subordinate Legislation Committee :—

PUBLIC ACCOUNTS COMMITTEE

Sriyuths :
1. S. P. Rajanna
2. B. Rangappa
3. A. H. Shivanandaswamy

HOUSE COMMITTEE

Sriyuths :
1. K. Channabasavana Gouda
2. Smt. Leelamma Shivananjappa
3. M. L. Vasudeva Murthy
4. N. M. Kheny

SUBORDINATE LEGISLATION COMMITTEE

Sriyuths :
1. Smt. Abbasia Begum Mecci
2. C. S. Balakrishna Gowda
3. M. V. Venkatappa
4. H. K. Shivarudrappa

Mysore Local Authorities (Disciplinary Proceedings against Employees) Bill, 1968

(as passed by the Legislative Assembly)

Motion to Consider

(Debate Contd.)

†ಶ್ರೀ ಜಿ. ವಿ. ಆಂಜನಪ್ಪ (ಪದವೀಧರರ ಕ್ಷೇತ್ರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ಥಳೀಯ ಸಂಸ್ಥೆಗಳ ಸಚಿವರು ತಂದಿರುವ ಮೈಸೂರು ಲೋಕಲ್ ಅಥಾರಿಟೀಸ್ (ಡಿಸಿಪ್ಲಿನರಿ ಪ್ರೊಸೀಡಿಂಗ್ ಎಗೇನ್‌ಸ್ಟ್ ಎಂಪ್ಲಾಯೀಸ್) ಬಿಲ್, 1968 ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇದು ಸ್ಥಳೀಯ ಸಂಸ್ಥೆಗಳ ಆಡಳಿತಕ್ಕೆ ಸಂಬಂಧಪಟ್ಟಿರುವುದು. ಇತರ ಸಂಸ್ಥೆಗಳೇನಿವೆ ಅವುಗಳ ಬಗ್ಗೆ ಕೂಡ ವಿಜಿಲೆನ್ಸ್ ಕಮಿಷನರ ಆಡಳಿತಕ್ಕೆ ಅವು ಒಳಪಡುವಂತೆ ಈ ಬಿಲ್ಲಿನಲ್ಲಿ ಅವಕಾಶ ಮಾಡಿದ್ದರೆ ಚೆನ್ನಾಗಿತ್ತು. ಮಾನ್ಯ ಸಚಿವರು ಈ ವಿಧೇಯಕವನ್ನು ಮೈಸೂರು ರಾಜ್ಯದಲ್ಲಿರುವ ಲೋಕಲ್ ಅಥಾರಿಟೀಸ್ ಅಂದರೆ ಮುನಿಸಿಪಾಲಿಟಿಗಳು, ಕಾರ್ಪೊರೇಷನ್, ವಾಟರ್ ಸಪ್ಲೈ ಬೋರ್ಡು ಮುಂತಾದುವುಗಳಿಗೆ ಅನ್ವಯಿಸುವ ಹಾಗೆ ತಂದಿದ್ದಾರೆ. ಇದರ ಜೊತೆಗೆ ತಾಲ್ಲೂಕ್ ಬೋರ್ಡುಗಳು, ಗ್ರಾಮ ಪಂಚಾಯಿತಿಗಳು ಇವುಗಳನ್ನೂ ಒಳಪಡಿಸಿದ್ದರೆ ಚೆನ್ನಾಗಿತ್ತು. ಸರಕಾರಿ ನೌಕರರು ವಿಜಿಲೆನ್ಸ್ ಕಮಿಷನ್ ಆಡಳಿತಕ್ಕೆ ಒಳಪಟ್ಟಿದ್ದಾರೆ, ಸರಕಾರಿ ನೌಕರರಲ್ಲದಿರುವವರೂ ಇದ್ದಾರೆ,

* * * * *

ಈ ರೀತಿ ಸ್ಥಳೀಯ ಸಂಸ್ಥೆಗಳಲ್ಲಿ ಎಂದರೆ ವಿಲೇಜ್ ಪಂಚಾಯಿತಿ, ತಾಲ್ಲೂಕು ಬೋರ್ಡುಗಳಲ್ಲಿ ಇರತಕ್ಕ ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗಿಸಿಕೊಂಡಾಗ ದುರ್ನಡತೆಯಿಂದ, ಅಸಭ್ಯತನದಿಂದ ಹಣವನ್ನು ಉಪಯೋಗಿಸಿಕೊಂಡ ಸಂದರ್ಭದಲ್ಲಿ ಅವರನ್ನೂ ಕೂಡ ವಿಜಿಲೆನ್ಸ್ ಕಮಿಷನ್‌ನವರ ಆಡಳಿತಕ್ಕೆ ಒಳಪಡಿಸಬಹುದು ಎಂದು ಇದ್ದಿದ್ದರೆ ಈ ಬಿಲ್ ಇನ್ನೂ ಚೆನ್ನಾಗಿರುತ್ತಿತ್ತು. ಇದು ನನ್ನ ಖಾತೆಗೆ ಸಂಬಂಧಪಟ್ಟಿದ್ದಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಬಹುದು. ದೇಶದ ಹಣವನ್ನು ಪೋಲು ಮಾಡತಕ್ಕ ಸಂಸ್ಥೆಗಳು ಎಂದರೆ ಈ ಸಹಕಾರ ಸಂಸ್ಥೆಗಳು, ಅದರ ಅಧಿಕಾರವರ್ಗದವರೂ ಸಹ ಈ ವಿಜಿಲೆನ್ಸ್ ಕಮಿಷನ್‌ನವರು ಅವರ ಆಡಳಿತಕ್ಕೆ ಒಳಪಟ್ಟಿರಬೇಕು. ಸಹಕಾರ ಸಂಘಗಳಲ್ಲಿರುವ ಅಧಿಕಾರಿಗಳು ಮತ್ತು ಅಧಿಕಾರೇತರರು ಮತ್ತು ಸ್ಥಳೀಯ ಸಂಸ್ಥೆಗಳಲ್ಲಿರತಕ್ಕ ಅಧಿಕಾರಿ ಮತ್ತು ಅಧಿಕಾರೇತರರು ಅವರೆಲ್ಲರ ಮೇಲೂ ಕೂಡ ಇವರ ಅಧಿಕಾರ ಇದ್ದಿದ್ದರೆ ಚೆನ್ನಾಗಿತ್ತು. ಆ ದೃಷ್ಟಿಯಿಂದ ಈ ಒಂದು ಮಸೂದೆಯನ್ನು ಸ್ವಾಗತಿಸಿದರೂ ಕೂಡ, ಸಮಗ್ರವಾದ ಒಂದು ಮಸೂದೆಯನ್ನು ಈ ಬಗ್ಗೆ ತಂದಿದ್ದರೆ ಇನ್ನೂ ಹೆಚ್ಚಿನ ಸಂತೋಷದಿಂದ ಇದನ್ನು ಸ್ವಾಗತಿಸುತ್ತಾ ಇದ್ದೆ.

ನತದೃಷ್ಟ ಸರ್ಕಾರಿ ನೌಕರರ ಮೇಲೆ ಈ ಜಾಗೃತ ಆಯೋಗದವರ ಕಣ್ಣು ಇದೆ. ಇದೇರೀತಿಯಲ್ಲಿ ಸರ್ಕಾರದಿಂದ ಹಣ ಪಡೆಯತಕ್ಕ—ಬಿಳಿ ಆನೆಯಂತೆ—ಹೇರಳವಾಗಿ ಹಣ ಖರ್ಚಾಗತಕ್ಕ ಕೆಲವು ಸಂಸ್ಥೆಗಳು ಇವೆ. ಕಾರ್ಪೊರೇಷನ್‌ಗಳಾಗಲಿ, ಅಟಾನಮಸ್ ಬಾಡೀಸ್ ಯೂನಿವರ್ಸಿಟಿಗಳಾಗಲಿ, ಜಾಯಿಂಟ್ ಸ್ಟಾಕ್ ಕಂಪೆನಿಗಳಾಗಲಿ ಅವೆಲ್ಲವೂ ಕೂಡ ಈ ಜಾಗೃತ ಆಯೋಗದ ವ್ಯಾಪ್ತಿಗೆ ಒಳಪಟ್ಟಿರಬೇಕೆಂದು ಸೂಚನೆ ಮಾಡುತ್ತೇನೆ.

ಈ ಮಸೂದೆಯಲ್ಲಿ ಕೆಲವು ಸಂದೇಹಗಳು ಉಂಟಾಗಿವೆ. 4 ನೇ ಕಲಂನಲ್ಲಿರುವುದು ಸ್ಪಷ್ಟವಾಗಿ ಕಾಣುತ್ತಿಲ್ಲ. ಇನ್ನೂ ಸ್ಪಷ್ಟವಾಗಿ ಹೇಳಿದ್ದರೆ ಚೆನ್ನಾಗಿ ಅರ್ಥವಾಗಬಹುದು ಎಂದು ಕಾಣುತ್ತದೆ. ಒಬ್ಬ ಅಧಿಕಾರಿಯ ಮೇಲೆ ಒಂದು ಸಾರಿ ಸರ್ಕಾರದವರು ಕ್ರಮವನ್ನು ಕೈಕೊಂಡಿದ್ದರೆ ಅಥವಾ ಜಾಗೃತ ಆಯೋಗದವರು ಕ್ರಮವನ್ನು ಕೈಕೊಂಡಿದ್ದರೆ ಎರಡನೇ ಬಾರಿಗೆ ಅವನು ಶಿಕ್ಷೆಗೆ ಅನರ್ಹ ಎಂದು ಇರಬಹುದು ಎಂಬುದಾಗಿ ಭಾವನೆ ಮಾಡಿಕೊಂಡಿದ್ದೇನೆ. ಹಾಗಿದ್ದಪಕ್ಷದಲ್ಲಿ ಸ್ಪಷ್ಟವಾದ ಭಾಷೆಯನ್ನು ಉಪಯೋಗಿಸುವುದು ಲೇಸು ಎಂದು ಕಾಣುತ್ತದೆ. ಮಾನ್ಯ ಸಚಿವರು ಇದನ್ನು ಪರ್ಯಾಲೋಚನೆ ಮಾಡಬೇಕೆಂದು ಹೇಳುತ್ತೇನೆ.

** Expunged as ordered by the Chair on 12th September 1969.

5ನೇ ಕಲಂನಲ್ಲೂ ಕೂಡ ಒಂದು ಅಂಶವನ್ನು ಪರಿಶೀಲನೆ ಮಾಡಬೇಕಾಗಿದೆ. ಜನರಿಂದ ಬಂದ ಅರ್ಜಿಗಳನ್ನು ಪರಿಶೀಲನೆ ಮಾಡಿ ಅದರ ಮೇಲೆ 4 ನೇ ಕಲಂ ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕೇ ಅಥವಾ ಸರ್ಕಾರದಿಂದ ರೆಫರ್ ಆಗಿರುತ್ತದೆಯಲ್ಲಾ, ಅಂದರೆ ಹಣ ದುರುಪಯೋಗಪಡಿಸಿದ್ದಾರೆ, ವಿಲೇವಾರಿ ಸರಿಯಾಗಿಲ್ಲ, ಕಾನೂನಿಗನುಗುಣವಾಗಿ ಕೆಲಸಕಾರ್ಯ ನಡೆಸಿಲ್ಲ ಎಂಬುದಾಗಿ, ಅಂತಹ ಸಂದರ್ಭಗಳಲ್ಲೂ ಕೂಡ ಸರ್ಕಾರದವರು ವಿಜಿಲೆನ್ಸ್ ಕಮಿಷನ್‌ಗೆ ರೆಫರ್ ಮಾಡಬಹುದೇ ? ಇದು ಸ್ಪಷ್ಟವಾಗಿ ಕಾಣುತ್ತಿಲ್ಲ. ಏಕೆಂದರೆ ಸೆಕ್ಷನ್ 4 ರ ಪ್ರಕಾರ ಯಾರು ಬೇಕಾದರೂ ದೂರು ಕೊಡಬಹುದು ಜಾಗ್ರತ ಆಯೋಗದವರು ಪರಿಶೀಲಿಸಬಹುದು ಎಂದು ಹೇಳುತ್ತಾರೆ. ಇದನ್ನು ಸ್ಪಷ್ಟವಾಗಿ ಹೇಳಿದ್ದರೆ ಚೆನ್ನಾಗಿತ್ತು.

ಮುಂದೆ ವಿಜಿಲೆನ್ಸ್ ಕಮಿಷನ್‌ನವರಿಗೆ ವಿಶಿಷ್ಟವಾದ ಆಖೈರು ತೀರ್ಮಾನ ಮಾಡುವುದನ್ನು ಬಿಟ್ಟುಕೊಟ್ಟಿದ್ದಾರೆ, ಇದು ಅರ್ಥಗರ್ಭಿತವಾಗಿದೆ. ಪರಿಶೀಲನೆ ಮಾಡಬೇಕು, ಇನ್ಸ್‌ಪೆಕ್ಷನ್ ಮಾಡಬೇಕು ಅಂತ ಜಾಗ್ರತ ಆಯೋಗದವರ ಮನಸ್ಸಿಗೆ ಬಂದ ಪಕ್ಷದಲ್ಲಿ ಅಂತಹ ದೂರುಗಳನ್ನು ಪರಿಶೀಲನೆ ಮಾಡಬಹುದು ಎಂಬ ಒಂದು ಅಧಿಕಾರವನ್ನು ಅವರಿಗೆ ಕೊಟ್ಟ ಹಾಗೆ ಕಾಣುತ್ತದೆ. ಇದು ಸಮಂಜಸವಾಗಿ ಕಾಣುವುದಿಲ್ಲ. ಅಸ್ಪಷ್ಟವಾಗಿ ನಿರ್ಧಾರವಾದದ್ದು, ಹುರುಳಿಲ್ಲದ ಅರ್ಜಿ ಅಂತ ಮನವರಿಕೆಯಾದ ಪಕ್ಷದಲ್ಲಿ ಅಂಥಾದ್ದನ್ನು ಜಾಗೃತ ಆಯೋಗದವರು ವಿಲೇ ಮಾಡಬಹುದು. ಆದರೆ ಅವರಿಗೇ ವಿಶಿಷ್ಟವಾದ ಆಖೈರ್ ತೀರ್ಮಾನ ಮಾಡತಕ್ಕ ಅಧಿಕಾರವನ್ನು ಕೊಟ್ಟರೆ, ಸತ್ಯಾಂಶ ಇರತಕ್ಕ ಅರ್ಜಿಗಳ ಬಗ್ಗೆ ಅವರು ಕೊಟ್ಟ ತೀರ್ಮಾನವನ್ನು ಯಾರೂ ಚಾಲೆಂಜ್ ಮಾಡುವ ಹಾಗೆ ಇಲ್ಲ, ಸರ್ಕಾರದವರೂ ಕೂಡ ಪ್ರಶ್ನಿಸುವ ಹಾಗೆ ಇಲ್ಲ. ಆದ್ದರಿಂದ ಈ ಅಧಿಕಾರವನ್ನು ಕಾನೂನು ಪ್ರಕಾರ ಅವರಿಗೆ ಕೊಡದೇ ಒಂದು ಸ್ಪೆಡಿಂಗ್ ಕ್ಲಾಸ್ ಹಾಕಿ ಇಂತಿಂಥ ಸಂದರ್ಭದಲ್ಲಿ ಮಾತ್ರ ಅವರ ವ್ಯಾಪ್ತಿಗೆ ಒಳಪಡಿಸಬಹುದು, ಅವರೇ ಆಖೈರಾದ ತೀರ್ಮಾನ ಕೈಕೊಳ್ಳಕೂಡದು ಎಂದು ಸ್ಪಷ್ಟವಾದ ನಿರೂಪಣೆ ಕೊಟ್ಟಿದ್ದರೆ ಚೆನ್ನಾಗಿತ್ತು ಎಂದು ಅನಿಸುತ್ತದೆ.

Mr. DEPUTY CHAIRMAN.—The House will now rise for tea and meet again at 4-30 P.M.

The House rose for Tea at Four of the Clock and reassembled at Thirty-five Minutes past Four of the Clock.

[MR. DEPUTY CHAIRMAN in the Chair]

ಶ್ರೀ ಜಿ. ವಿ. ಅಂಜನಪ್ಪ.—ಮಾನ್ಯ ಸಭಾಪತಿಗಳೇ, ಈ ಹಿಂದೆ ನಾನು (5) ನೇ ಕಲಂ ಬಗ್ಗೆ ಮಾತನಾಡುತ್ತಿದ್ದೆ. ಅದರಲ್ಲಿ ಹೀಗೆ ಹೇಳಿದೆ :

> "if in the opinion of the Vigilance Commissioner such complaints require investigation"

ಇಲ್ಲಿ ಹೇಳಿರತಕ್ಕ ಪ್ರಕಾರ ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ಸನ್ನಿವೇಶದಲ್ಲಿ ಯಾವ ವಿಶಿಷ್ಟ ಸಂದರ್ಭದಲ್ಲಿ ವಿವರಣೆಯನ್ನು ಕೊಡಬೇಕು ಎನ್ನುವುದನ್ನು ಇಲ್ಲಿ ಇನ್ನೂ ವಿವರವಾಗಿ ಸ್ಪಷ್ಟೀಕರಣ ಮಾಡಿದ್ದರೆ ಚೆನ್ನಾಗಿತ್ತು.

ಇನ್ನು ಕಲಂ (6) ರಲ್ಲಿ ಕೂಡ ಸ್ವಲ್ಪಮಟ್ಟಿಗೆ ವಿರೋಧಾಭಿಪ್ರಾಯಗಳೇ ಹೆಚ್ಚಿಗೆ ಕಂಡುಬರುವಂತೆ ಕಾಣುತ್ತಿದೆ. ಇಲ್ಲಿಯೂ ಕೂಡ ಸ್ಪಷ್ಟೀಕರಣ ಮಾಡತಕ್ಕ ಅಗತ್ಯ ಇದೆ. ಇಲ್ಲಿ ಹೀಗೆ ಹೇಳಿದ್ದಾರೆ:

> "Where the alleged misconduct of an employee is investigated by the Vigilance Commission either *suo motu* or on a reference from the Government or from any other authority and the Vigilance Commission is of the opinion that disciplinary proceedings shall be taken, it shall forward the records of investigation along with its recommendation to the Government and the government after examining the records may direct an inquiry into the case by the Vigilance Commission"

(ಶ್ರೀ ಜಿ. ವಿ. ಅಂಜನಪ್ಪ)

ಇದರಲ್ಲಿ ವಿಜಿಲೆನ್ಸ್ ಕಮಿಷನ್ನಿನವರು ಅವರಿಗೆ ಒಂದು ಅಪಾದನೆಯ ಅರ್ಜಿ ಬಂದಮೇಲೆ, ಇಲ್ಲವೇ ಸರ್ಕಾರದವರು ಅವರ ಕಡೆಗೊಂದು ಅಪಾದನೆಯ ಅರ್ಜಿಯನ್ನು ವಿಚಾರಣೆ ಮಾಡುವುದಕ್ಕಾಗಿ ಕಳುಹಿಸಿಕೊಟ್ಟಾಗ ಅವರು ಆ ಬಗ್ಗೆ ವಿಚಾರಣೆ ಮಾಡಿ ಅದರ ಬಗ್ಗೆ ಒಂದು ವರದಿಯನ್ನು ಸರ್ಕಾರಕ್ಕೆ ಕಳುಹಿಸಬೇಕೆಂದು ಹೇಳಿದೆ. ಇಲ್ಲಿ ಹೇಳಿರುವುದು ಹೀಗಿದೆ :

"The Government after examining the records may direct an enquiry into the case by the Vigilance Commission."

ಕಲಂ (4) ರಲ್ಲಿ ಹೇಳಿರತಕ್ಕ ಇನ್‌ವೆಸ್ಟಿಗೇಷನ್ ಮತ್ತು ಎನ್‌ಕ್ವೈರಿ ಈ ಎರಡರ ಬಗ್ಗೆ ಏನು ವ್ಯತ್ಯಾಸವಿದೆ ಎಂಬುದನ್ನು ಇಲ್ಲಿ ತಿಳಿಸಿಲ್ಲ. ವಿಜಲೆನ್ಸ್ ಕಮಿಷನ್ನಿನವರು ತಮಗೆ ಬಂದ ದೂರನ್ನು ವಿಚಾರಣೆ ಮಾಡಿ ಅದರ ಬಗ್ಗೆ ಸರ್ಕಾರಕ್ಕೆ ಒಂದು ವರದಿಯನ್ನು ನೀಡಬೇಕೆಂದು ತಿಳಿಸಲಾಗಿದೆ. ಸರ್ಕಾರದವರಿಗೆ ಅದು ಒಪ್ಪಿಗೆಯಾಗಿದ್ದರೆ ಸರಿ, ಇಲ್ಲವಾದರೆ ಅವರು ಮತ್ತೆ ವಿಚಾರಣೆ ಮಾಡಲು ಇಲ್ಲವೆ ಪುನರ್ಪರಿಶೀಲನೆ ಮಾಡಲು ಹಿಂದಕ್ಕೆ ಕಳುಹಿಸಬೇಕೆಂದು ಹೇಳಿರತಕ್ಕದ್ದು ಸರಿಯಲ್ಲ.

"Power of Government to pass orders in disciplinary proceedings—(i) on receipt of the records under sub-section (2) of Section 6, the Government, may, after consulting the Mysore Public Service Commission, where such consultation is necessary pass orders, (i) either exonerating the employee, or (ii) Imposing any penalty. (2) The orders passed by the Government under sub-section (1) shall be binding on the employee and the local authority concerned."

ಇಲ್ಲಿ ಏನು ಹೇಳಿದ್ದಾರೆಂದರೆ —ಯಾರ ಮೇಲೆ ಅಪಾದನೆ ಅಥವಾ ದೂರು ಬಂದಿದೆಯೋ ಅಂಥವರ ಬಗ್ಗೆ ವಿಚಾರಣೆ ನಡೆಸಿ ಅದನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆಮಾಡಿ ಆತನು ತಪ್ಪು ಮಾಡಿದ್ದಾನೆಯೋ ಇಲ್ಲವೇ ಎಂಬುದನ್ನು ನೋಡಿ ಅದರ ಬಗ್ಗೆ ಸರ್ಕಾರಕ್ಕೆ ವರದಿ ಕಳುಹಿಸುತ್ತಾರೆ. ಹಾಗೆ ಕಳುಹಿಸಿದ್ದ ವರದಿಯನ್ನು ಮತ್ತೆ ಹಿಂದಕ್ಕೆ ಕಳುಹಿಸಿ ಅದನ್ನು ಪುನರ್ವಿಚಾರಣೆ ಮಾಡಿ ಎಂದರೆ ಇದರಲ್ಲಿ ಅರ್ಥವೇನಿದೆ ? ವಿಜಿಲೆನ್ಸ್ ಕಮಿಷನ್ನಿನವರು ವಿಚಾರಣೆಯನ್ನೂ ಮಾಡಬೇಕು, ಅವರು ಎನ್‌ಕ್ವೈರಿಯನ್ನೂ ಮಾಡಬೇಕು, ಈ ಎರಡನ್ನೂ ಮಾಡಬೇಕು ಎಂದು ಕೇಳುತ್ತಿರುವಾಗ ಈ ಎರಡಕ್ಕೂ ವ್ಯತ್ಯಾಸವೇನೂ ಇಲ್ಲವೇ ಅಥವಾ ಇದೆಯೋ ಎಂಬುದನ್ನು ಸ್ಪಷ್ಟಪಡಿಸಬೇಕಾಗಿತ್ತು. ಇಲ್ಲಿ ಇಂಥ ಅನುಮಾನಕ್ಕೆ ಆಸ್ಪದವಿದೆ.

ಇನ್ನು ಆರನೆಯ ಕಲಂನಲ್ಲಿಯೂ ಸ್ವಲ್ಪ ವಿರೋಧ ಇರುವ ಹಾಗೆ ಕಂಡು ಬರುತ್ತಿದೆ. ಅದನ್ನು ಮಾನ್ಯ ಸಚಿವರು ಪರಿಶೀಲನೆ ಮಾಡಬೇಕು. ಮತ್ತೆ 7ನೇ ಕಲಂನಲ್ಲಿಯೂ ಕೂಡ Power of Government to pass orders in disciplinary proceedings—(i) On receipt of the records under sub-section (2) of Section 6 the Government may ಎಂದು ಹೇಳಿ after consulting the Mysore Public Service Commission ಎಂದು ಅದಕ್ಕೆ ಮುಂದೆ ಸೇರಿಸಿ where such consultation is necessary ಎಂಬ ಪದಗಳನ್ನು ಪ್ರಯೋಗಮಾಡಿ ಈ ಅಧಿಕಾರ ತೆಗೆದುಕೊಂಡಿದ್ದಾರೆ. ಅದನ್ನು ಪಬ್ಲಿಕ್ ಸರ್ವಿಸ್ ಕಮಿಷನ್ನಿನವರನ್ನು ಕನ್‌ಸಲ್ಟ್ ಮಾಡಬೇಕೆಂಬ ಒಂದು ಅರ್ಥದಲ್ಲಿ ಹೇಳಿದ್ದಾರೆ. "Where such consultation is necessary" ಎಂದರೆ ಅವರ ಜೊತೆಯಲ್ಲಿ ಸಲಹೆ ಪಡೆಯಬಹುದೆಂದು ತೀರ್ಮಾನಮಾಡುವವರು ಯಾರು ? ವಿಜಿಲೆನ್ಸ್ ಕಮಿಷನ್ನಿನವರು ಬಂದಿರತಕ್ಕ ಎಲ್ಲಾ ಕೇಸುಗಳನ್ನು ರಿಕಾರ್ಡ್‌ಮಾಡಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಸಲಹೆ ಪಡೆಯುವುದು ಅನಾವಶ್ಯಕವೆಂದು ಮಾಡಬಹುದು. ಆದುದರಿಂದ ಯಾವಕಾಲದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರ ಸಲಹೆ ಪಡೆಯಬಹುದೆಂಬುದಕ್ಕೆ ವಿವರಣೆ ಹೇಳಿದ್ದರೆ ಬಹಳ ಚೆನ್ನಾಗಿತ್ತು. ಹಿಂದೆ ಆ ಅಧಿಕಾರವನ್ನು ಕೊಟ್ಟಿದ್ದರು. ಈಗ ಅದನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ನಾವು ಪಬ್ಲಿಕ್ ಸರ್ವಿಸ್ ಕಮಿಷನ್ನಿನವರ ಸಲಹೆ ಪಡೆಯಬಹುದೆಂದು ಏಕೆ ಹೇಳಬೇಕು ? ಇಂತಿಂಥ ಸಂದರ್ಭದಲ್ಲಿ ಅವರ ಸಲಹೆಯನ್ನು ಪಡೆಯಬೇಕೆಂದು ಹೇಳಿದ್ದರೆ ಚೆನ್ನಾಗಿತ್ತು. ಶಿಸ್ತು ಉಲ್ಲಂಘನೆ ಮಾಡಿದರೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರ ಸಲಹೆ ಪಡೆಯಬೇಕೆಂದು ಸರ್ವಿಸ್ ರೂಲ್ಸ್ ಅಂಡ್ ರೆಗ್ಯು

ಲೇಷನ್ಸ್‌ನಲ್ಲಿ ನಿಬಂಧನೆ ಮಾಡಿದ್ದಾರೆ. ಅಂತಹವರ ಸಲಹೆಯನ್ನು ಪಡೆಯುವುದು ಸೂಕ್ತ. ವಿಜಿಲೆನ್ಸ್ ಕಮಿಷನ್ನಿನವರು ಅನೇಕ ಕೇಸುಗಳನ್ನು ಸರ್ಕಾರದ ಪರಿಶೀಲನೆಗೆ ಕಳುಹಿಸುತ್ತಾರೆ. ಅವರು ಪಬ್ಲಿಕ್ ಸರ್ವಿಸ್ ಕಮಿಷನ್ನಿನವರ ಕನ್‌ಸಲ್‌ಟೇಷನ್ ಪಡೆದು ಆಖೈರು ತೀರ್ಮಾನವನ್ನು ತೆಗೆದುಕೊಂಡಿದ್ದರೆ ಚೆನ್ನಾಗಿತ್ತು. ಅದು ತಪ್ಪಾಗುತ್ತಿರಲಿಲ್ಲ. ಸರ್ಕಾರದ ತೀರ್ಮಾನವೇ ಆಖೈರಾದರೂ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರ ಸಲಹೆ ಪಡೆಯಬಹುದಾಗಿತ್ತು. ಅವರ ಸಲಹೆಯನ್ನು ತೆಗೆದುಕೊಳ್ಳಬಹುದೆಂದು ಇದರಲ್ಲಿ ಸೇರಿಸಿದ್ದರೆ ಚೆನ್ನಾಗಿತ್ತು. ಆದರೆ 7ನೇ ಕಲಂ ಪ್ರಕಾರವಾಗಿ ಅದು ಸಾಧ್ಯವಾಗುವುದಿಲ್ಲ. ನಾನು ಮೊದಲೇ ಸೂಚನೆ ಕೊಟ್ಟಿರುವ ಹಾಗೆ ಸರ್ಕಾರದ ನೆರವು ಹಾಗೂ ಧನಸಹಾಯ ಎಲ್ಲಾ ಸಣ್ಣ ಸಂಸ್ಥೆಗಳಿಗೆ ಕೊಡುವ ಬಗ್ಗೆ ಸರ್ಕಾರದ ಆಡಳಿತಕ್ಕೆ ಸಂಬಂಧಪಟ್ಟಂತೆ ಸಮಗ್ರವಾದ ಒಂದು ಮಸೂದೆಯನ್ನು ಕ್ಷಿಪ್ರದಲ್ಲಿಯೇ ತರುತ್ತೀರೆಂದು ತಿಳಿದು ನನ್ನ ಮಾತನ್ನು ಮುಗಿಸುತ್ತೇನೆ.

† SRI S. MUKUNDA RAO (Teachers' Constituency).—Sir, I welcome this measure. The intention is to bring the municipal servants also under the purview of the Vigilance Commission so that their work may be above board. At the same time, I request the Government to see that the service conditions and other amenities to these municipal servants are on a par with those of the Government servants. You should not subject them to the disciplinary rules of Government servants without giving them the same facilities that the Government servants have. In certain respects, the service conditions of these municipal servants have worsened in recent years. Take, for example, the condition of the employees of municipal high schools. Before our new Act was passed in 1964, they were in a State-wide cadre and the D. P. I. maintained a seniority list for all the employees in the municipal high schools. He granted them promotional grades, he promoted them to the Headmastership and he transferred them. After this new Act, the High Court has said that the D. P. I. has lost all those powers over these municipal high school employees. They are municipal employees of the respective municipalities but there are no Cadre and Recruitment Rules for these high school teachers and others in the municipal rules. There is no mention of qualification, pay scale or age at the time of recruitment; nothing is mentioned. They are treated just like other municipal servants. Even the protection, which they expected before the new Act was passed, is given up. They have lost all that. So, I request the Government that they should think seriously about bringing the service conditions of municipal high school employees on par with the Government high school employees if you are to subject them to the same disciplinary rules.

Just the other day the municipal administration agreed to hand over the municipal primary schools to the Education Department and convert all of them into government servants. In the same manner they could hand over all the municipal high schools to the Education Department. Or they can all be run as Government schools maintained by the D. P. I's Department just as the Fisheries Department is having a number of high schools of its own. Then they will automatically become Government servants. Or you can say that all these employees are Government servants serving under the respective municipalities just like the engineers, health officers and others. They are Government

(SRI S. MUKUNDA RAO)

servants serving under the various municipalities. It may be asked that it may put a heavier burden on the State Exchequer. When the district board primary schools were placed under the Deputy Commissioner and later on under the Education Department, this was not felt because there is a provision in the Local Boards Act that the respective Taluk Board must contribute, to the maintenance of these schools, an amount which they used to contribute before the transfer. In the same way it can be provided that the respective municipalities must contribute to the maintenance of these high schools an amount equal to what they used to contribute before. That would create no additional burden on the State Exchequer and the service conditions of these teachers and others will be on a par with those of the Government servants. With these words I plead that while subjecting them to the disciplinary rules of the Government servants, their service conditions may also be brought on a par with those of the Government servants.

† ಶ್ರೀ ಕೆ. ಸೂರ್ಯನಾರಾಯಣ ಅಡಿಗ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಮಾನ್ಯ ಸಭಾಪತಿಯವರೇ, ಮೈಸೂರು ಲೋಕಲ್ ಅಥಾರಿಟೀಸ್ (ಡಿಸಿಪ್ಲಿನರಿ ಪ್ರೊಸೀಡಿಂಗ್ಸ್ ಎಗೇನ್ಸ್ಟ್ ಎಂಪ್ಲಾಯೀಸ್) ಬಿಲ್, 1968 ನ್ನು ನಾನು ಸ್ವಾಗತಿಸುತ್ತೇನೆ. ಪುರಸಭೆಗಳ ಅಧೀನದಲ್ಲಿರತಕ್ಕ ನೌಕರರುಗಳನ್ನು ಸರ್ಕಾರೀ ನೌಕರರಂತೆ ಒಂದು ಶಿಸ್ತಿಗೊಳಪಡಿಸಿ ಅವರೇನಾದರೂ ಒಂದು ಅಕ್ರಮ, ಅವ್ಯವಹಾರ, ದುರಾಡಳಿತ ಮಾಡಿದರೆ ಅವರನ್ನು ಶಿಕ್ಷೆಗೊಳಪಡಿಸಬೇಕೆಂದು ಇದರ ಉದ್ದೇಶವಾಗಿದೆ. ಈ ಸಂದರ್ಭದಲ್ಲಿ ನಗರಸಭೆ ನೌಕರರನ್ನೂ ಕೂಡ ಸರ್ಕಾರೀ ನೌಕರರ ಮಟ್ಟಕ್ಕೆ ತರಬೇಕು ಮತ್ತು ಅವರಿಗೆ ಶಿಕ್ಷೆಕೊಡುವಾಗ ಅವರಿಗೆ ಇರುವ ಸೌಲಭ್ಯಗಳನ್ನು ಸರ್ಕಾರದ ನೌಕರರ ಮಟ್ಟಕ್ಕೆ ತರಬೇಕೆಂದು ಮಾನ್ಯ ಸದಸ್ಯರಾದ ಶ್ರೀಮುಕುಂದರಾಯರು ಹೇಳಿರುವುದನ್ನು ನಾನು ಒಪ್ಪುತ್ತೇನೆ. ಇಲ್ಲದಿದ್ದರೆ ನಗರಸಭೆಯ ನೌಕರರಿಗೆ ಅದರಿಂದ ತೊಂದರೆಯಾಗುತ್ತದೆಂದು ಹೇಳಿದರು. ನಾನು ತಿಳಿದಿರುವ ಹಾಗೆ ಕೆಲವು ಜಿಲ್ಲೆಗಳಲ್ಲಿ ಮುನಿಸಿಪಲ್ ಹೈಸ್ಕೂಲುಗಳಿವೆ. ಕೆಲವು ಕಡೆ ಹೈಸ್ಕೂಲುಗಳನ್ನು ಅರ್ಧಂಬರ್ಧವಾಗಿ ನಡೆಸುತ್ತಾ ಇದ್ದಾರೆ. ಏಕೆಂದರೆ ಅಲ್ಲಿನ ಮುನಿಸಿಪಾಲಿಟಿಯವರಿಗೆ ಹಣ ಕೊಡುವುದಕ್ಕೆ ಆಗಲಿಲ್ಲ. ಆದಕ್ಕಾಗಿ ಸರ್ಕಾರದವರೇ ನಡೆಸುತ್ತಿದ್ದಾರೆ.

ಶ್ರೀ ಎಸ್. ಮುಕುಂದರಾವ್.—ಆಕ್ಟ್ ಆಗುವ ಮೊದಲು ಸರಿಯಾಗಿತ್ತು, ಈಗ ಸಂಪೂರ್ಣವಾಗಿ ಮುನಿಸಿಪಾಲಿಟಿ ನೌಕರರ ಮೇಲೆ ಡಿ.ಪಿ.ಐ.ಗೆ ಏನೂ ಅಧಿಕಾರವಿಲ್ಲ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಇನ್ನೊಂದು ವಿಷಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ಏನೆಂದರೆ ಈ ಸರ್ಕಾರಿ ನೌಕರರ ವಿಚಾರವಾಗಿ ಮಾತ್ರವಲ್ಲದೆ, ಎಲ್ಲರ ಮೇಲೂ ಎಚ್ಚರಿಕೆಯನ್ನು ತೆಗೆದುಕೊಳ್ಳುವುದು ಸೂಕ್ತವೆಂದು. ಅದನ್ನು ನಾನು ಒಪ್ಪುತ್ತೇನೆ. ಅಕ್ರಮ ಯಾರಾದರೂ ನಡೆಸುವ ಉದ್ದೇಶ ಇಟ್ಟುಕೊಂಡಿದ್ದರೆ ಮತ್ತು ಆ ಅಕ್ರಮಕ್ಕೆ ಯಾರು ಸಹಾಯಕರಾಗಿರುತ್ತಾರೋ ಯಾರು ಪ್ರಚೋದಿಸುತ್ತಾರೋ ಅವರನ್ನು ಕೂಡ ಶಿಕ್ಷಿಸತಕ್ಕ ಅವಕಾಶ ಈ ಮಸೂದೆಯಲ್ಲಿ ಇರಬೇಕು. ಏಕೆಂದರೆ ಅವರು ಕೂಡ ಅಷ್ಟೇ ತಪ್ಪುಗಾರರಾಗುತ್ತಾರೆ. ಅಂಥ ಒಂದು ಕಾಲಮು ಇಲ್ಲಿ ಕಂಡುಬರುವುದಿಲ್ಲ. ಕ್ಲಾಸ್ 4(ಬಿ) ಯಲ್ಲಿ ಹೀಗೆ ಹೇಳುತ್ತಾರೆ: "causes an inquiry or an investigation to be made into 1) any complaint that an employee had exercised or refrained from exercising his powers for improper or corrupt purposes;" ಯಾರು ಅನ್ಯಾಯದ ಕೆಲಸ ಮಾಡಿದ್ದಾರೋ, ಅವರ ಮೇಲೆ ಕ್ರಮ ಕೈಕೊಳ್ಳಬಹುದು. ಕೆಲವರು ಬುದ್ಧಿವಂತರು, ಏನೋ ಇನ್ನೊಬ್ಬರ ಹತ್ತಿರ ನೋಟ್ ಬರೆಸಿಬಿಟ್ಟು, ಅನ್ಯಾಯದ ಕೆಲಸ ಮಾಡುತ್ತಾರೆ. ಕೆಲವು ಮೇಲಾಧಿಕಾರಿಗಳು ಕೆಳಗಿನವರನ್ನು ಕರೆಸಿ, ನೀನು ಹೀಗೆ ಹೀಗೆ ಮಾಡಬೇಕು, ಇಲ್ಲದಿದ್ದರೆ ನಿನಗೆ ತೊಂದರೆಯಾಗುತ್ತದೆಂದು ಹೇಳಿಸಿ, ಕೆಲವು ಅನ್ಯಾಯದ ಕೆಲಸಗಳನ್ನು ಮಾಡಿಸುತ್ತಾರೆ. ಒಂದು ವೇಳೆ ತನಗೆ ಯಾರಾದರೂ ಬೇಡದವನು ಇದ್ದರೆ, ಅವನಿಗೆ ಪ್ರೊಮೋಷನ್ ಬರುವ ಹಾಗಿದ್ದರೆ, ಇಂಥ

ಕೆಲವು ವ್ಯವಹಾರಗಳನ್ನು ಮಾಡುವ ಪ್ರಸಂಗಗಳು ಬರುತ್ತವೆ. ಅದ್ದರಿಂದ ಹಾಗೆ ಮಾಡಿದಂಥಹ ವ್ಯಕ್ತಿಯನ್ನು ಇದರಲ್ಲಿ ಸೇರಿಸಬೇಕಾಗಿತ್ತು. ಅದು ಒಂದು ಲೋಪ ಇಂದು ಕಾಣುತ್ತದೆ. ಇದರ ನಿವಾರಣೆ ಅವಶ್ಯವಿದೆ. ಇನ್ನೊಬ್ಬರನ್ನು ಯಾರು ಪ್ರಚೋದಿಸಿದ್ದಾರೋ ಅವರಿಗೂ ಶಿಕ್ಷೆಯಾಗಬೇಕು. ಯಾರಿಗೆ ನ್ಯಾಯ ಸಿಗಬೇಕೋ, ಅದನ್ನು ದೊರಕಿಸಿಕೊಡಲಿಕ್ಕೆ ಅಡ್ಡಿ ಮಾಡುವಂತಹ ದುರುದ್ದೇಶದಿಂದ ಈ ಒಂದು ಕಾರ್ಯಾಚರಣೆಯನ್ನು ಸೆಕ್ಷನ್ 4 ಮತ್ತು 6 ರಲ್ಲಿ, ಒಂದಕ್ಕೊಂದು ತದ್ವಿರುದ್ಧವಾದ ಭಾವನೆ ಕಂಡು ಬರುವ ಹಾಗೆ ಮಾಡಿದ್ದಾರೆಂದು ಹೇಳಿದರು. ಹಾಗೆ ಏನೋ ಎಂಬುದು ನನ್ನ ಅಭಿಪ್ರಾಯ. ಏಕೆಂದರೆ ಇದರ ಕಾಲಮಿನಲ್ಲಿ, ವಿಜಿಲೆನ್ಸ್ ಕಮಿಶನರ್ ಸಾರ್ವಜನಿಕರು ಯಾರಾದರೂ ಅರ್ಜಿ ಕಳಿಸಿಯೋ, ಅಥವಾ ಅವರೇ ತಮ್ಮ ಪ್ರಚೋದನೆಯಿಂದ ಹುಡುಕಿ ತೆಗೆದುಕೊಳ್ಳಬಹುದು, ಮತ್ತು ಇನ್‌ವೆಸ್ಟಿಗೇಷನ್ ಮಾಡಬಹುದು. ಆಮೇಲೆ ತನಿಖೆ ಕಾರ್ಯಕ್ರಮ ಕೈಕೊಳ್ಳಲು ಸರ್ಕಾರಕ್ಕೆ ಅವರು ಬರೆಯಬೇಕು. ಸರ್ಕಾರ ಅದಕ್ಕೆ ಒಪ್ಪಿ, ನೀವು ಮುಂದೆ ಸರಿಯಾದಂತಹ ಕಾರ್ಯಕ್ರಮ ತೆಗೆದುಕೊಳ್ಳಬೇಕು, ಡಿಸಿಪ್ಲಿನರಿ ಪ್ರೊಸೀಡಿಂಗ್ಸ್ ಆರಂಭಿಸಬೇಕು ಎಂದು ಹೇಳಿದ ಮೇಲೆ ಕ್ರಿಮಿನಲ್ ಪ್ರೊಸೀಜರ್ ಪ್ರಕಾರ ಆರಂಭಿಸುತ್ತಾರೆ. ಆಗ ಸಂಬಂಧಪಟ್ಟ ಅಪರಾಧಿ ಬಂದು ಎಕ್ಸ್‌ಪ್ಲನೇಶನ್ ಕೊಡಬೇಕಾಗುತ್ತದೆ. ಈ ಎರಡು ಬಿನ್ನಾಭಿಪ್ರಾಯಗಳು ಇವೆ. ಅದು ಸರಿಯಾದ್ದಲ್ಲ. ಈ ಕಾಲಮು ಎಷ್ಟುಮಟ್ಟಿಗೆ ಇದೆಯೆಂದರೆ, ಇದು ಕೇವಲ ಹಣ ಕೊಡಿಸುವಂತದ್ದು, ಹಿಡಿಸುವಂತದ್ದು. ಆದರೆ ಇದರಲ್ಲಿ ಹಾಕಿದಂತಹ ಪದ ಪ್ರಯೋಗವನ್ನು ಸರಿಯಾಗಿ ನೋಡಿದರೆ, ಒಬ್ಬ ಅಧಿಕಾರಿ ಸ್ವಜನ ಪಕ್ಷಪಾತದಿಂದ ನಿಜವಾಗಿಯೂ ಯಾರಿಗೆ ಸಿಗಬೇಕೋ ಅವನಿಗೆ ಸಿಗದಂತೆಮಾಡಿ ಇನ್ನೊಬ್ಬನಿಗೆ ಸಿಗುವ ಹಾಗೆ ಮಾಡಿದರೆ, ಅದನ್ನು ಕೂಡ ಇವತ್ತಿನ ದಿವಸ ವಿಜಿಲೆನ್ಸ್ ಕಮಿಶನರ್, ಅವರ ಕಾರ್ಯಾಚರಣೆಯೊಳಗೆ ತಂದು ಶಿಕ್ಷೆಗೆ ಒಳಪಡಿಸುವುದಕ್ಕೆ ಸಾಧ್ಯವಿದೆ ಎಂದು ಕಂಡು ಬರುತ್ತದೆ. ಸೆಕ್ಷನ್ 4 ಕ್ಲಾಸ್ (ಬಿ) (1) ರಲ್ಲಿ any complaint that an employee had exercised or refrained from exercising his powers for improper or corrupt purposes; ಎಂದು ಇದೆ. ನಾನು ರೆಕಮೆಂಡ್ ಮಾಡುವುದಿಲ್ಲ, ಇನ್ನೊಬ್ಬನನ್ನು ರೆಕಮೆಂಡ್ ಮಾಡುತ್ತೇನೆಂದು ಯಾರಾದರೂ ಹೇಳಿದರೆ, ಅದರ ಪವರ್ ಸರ್ಕಾರ ಇಟ್ಟುಕೊಂಡಿದೆ, ಇದು ಬಹಳ ಒಳ್ಳೆಯದು. ಇದು ದುಡ್ಡು ತೆಗೆದುಕೊಂಡಿದ್ದಾನೆಂಬ ಒಂದು ಕಾರಣಕ್ಕೆ ಅಲ್ಲ. ನ್ಯಾಯವಾಗಿ ಯಾರಿಗೆ ಸಿಗಬೇಕೋ, ಆಫೀಸ್ ನೋಟಿನಲ್ಲಿ ನ್ಯಾಯ ಸಿಗದಿದ್ದರೂ, ಸರ್ಕಾರ ಅದರಲ್ಲಿ ನ್ಯಾಯಕ್ಕೆ ಪ್ರಯತ್ನ ಮಾಡಬಹುದು. ಇಷ್ಟುಹೇಳಿ, ಈ ಮಸೂದೆಗೆ ನನ್ನ ಬೆಂಬಲವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5-00 P. M.

ಶ್ರೀ ಬಸವರಾಜ ಕಟ್ಟೀಮನಿ.—ಶ್ರೀ ಅಡಿಗಾರವರು ಹೇಳಿದರು, ಸಾರ್ವಜನಿಕರು ತಪ್ಪುಮಾಡಿದರೆ, ಅಂತಹವರಮೇಲೂ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿರಬೇಕೆಂದು. ಹಾಗಾದರೆ, ಆ ರೀತಿ ಸಾರ್ವಜನಿಕರಮೇಲೆ ಕ್ರಮ ತೆಗೆದುಕೊಳ್ಳಲು ಈ ವಿಧೇಯಕದಲ್ಲಿ ಒಂದು ಅವಕಾಶವನ್ನು ಸೇರಿಸಬಹುದಲ್ಲವೇ ?

†ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ನಾನು ಆಗಲೇ ಹೇಳಿದ್ದೇನೆ, ಅಂಥಾ ತಿದ್ದುಪಡಿಯನ್ನು ಈ ವಿಧೇಯಕದಲ್ಲಿ ಸೇರಿಸುವುದಕ್ಕೆ ಆಗುವುದಿಲ್ಲವೆಂದು.

ಶ್ರೀ ವೈ. ಎಸ್. ಪಾಟೀಲ್ (ಪದವೀಧರರ ಕ್ಷೇತ್ರ).—ಅಧ್ಯಕ್ಷ ಮಹೋದಯರೇ, ಸರ್ಕಾರದಲ್ಲಿ ಎಲ್ಲಾ ನೌಕರರ ಕರ್ತವ್ಯ, ಅವರು ಮಾಡುವಂಥಾ ಕಾರ್ಯ ಇವುಗಳನ್ನು ನೋಡಿಕೊಳ್ಳಲು ಸಾಕಷ್ಟು ಡಿಸಿಪ್ಲಿನ್, ರೂಲ್ಸ್ ಇದ್ದಾಗ್ಯೂ ಕೂಡ ಅವರ ಮೇಲೆ ವಿಜಿಲೆನ್ಸ್ ಕಮಿಷನ್ ನೇಮಿಸಬೇಕು ಎಂದು ಹೇಳಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಈ ವಿಜಲೆನ್ಸ್ ಕಮಿಷನ್ನಿನವರ ಆಡಳಿತದ ವ್ಯಾಪ್ತಿಗೆ ಪುರಸಭೆಗಳು, ಕಾರ್ಪೊರೇಷನ್ ಮುಂತಾದ ಸ್ಥಳೀಯ ಸಂಸ್ಥೆಗಳನ್ನು ಒಳಪಡಿಸುವಂಥಾದ್ದು ಸರಿಯಲ್ಲ. ಈ ವಿಜಲೆನ್ಸ್ ಕಮಿಷನ್‌ನ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಮತ್ತೊಂದು ಸೂಪರ್ ವಿಜಿಲೆನ್ಸ್ ಕಮಿಷನ್ ನೇಮಕ ಮಾಡಬೇಕಾದ ಸಂದರ್ಭ ಬರುತ್ತದೆಯೋ ಏನೋ ಎಂದು ನನಗೆ ಅನಿಸುತ್ತದೆ. ಈ ರೀತಿ ಮಾಡುತ್ತಾ ಹೋದರೆ ಇದು ಯಾವ ಮಟ್ಟಕ್ಕೆ ಹೋಗುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಈಗ ಇರುವಂಥಹ ರೂಲ್ಸ್ ಡಿಸಿಪ್ಲೀನ್, ಇವುಗಳನ್ನೇ ಚೆನ್ನಾಗಿ ಅಪ್ಲೈಮಾಡಿ ನೌಕರರು ಮಾಡತಕ್ಕಂಥ ಕೆಲಸಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವಂತಹ ವ್ಯವಸ್ಥೆಯನ್ನು ಮಾಡಬೇಕು. ಈ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕ ನೌಕರರಮೇಲೆ ವಿಜಿಲೆನ್ಸ್ ಕಮಿಷನ್ನಿನವರ ಅಧಿಕಾರವನ್ನು ವಿಸ್ತರಣೆ

(ಶ್ರೀ ವೈ. ಎಸ್. ಪಾಟೀಲ್)

ಮಾಡುತ್ತಾ ಹೋದರೆ ಅವರನ್ನೂ ತೃಪ್ತಿಪಡಿಸಬೇಕಾಗುವ ಸಂದರ್ಭ ಈ ನೌಕರರಿಗೆ ಬಂದು 10 ರೂಪಾಯಿ ಲಂಚವನ್ನು ತೆಗೆದುಕೊಳ್ಳುತ್ತಿದ್ದ ನೌಕರರು 20 ರೂಪಾಯಿ ಲಂಚತೆಗೆದುಕೊಳ್ಳುತ್ತಾರೆ. ಈ ದೃಷ್ಟಿಯಿಂದ ಈಗ ಸ್ಥಳೀಯ ಸಂಸ್ಥೆಗಳಲ್ಲಿ ಇರತಕ್ಕ ರೂಲ್ಸ್, ಡಿಸಿಪ್ಲೀನುಗಳು ಏನಿವೆ ಅವುಗಳನ್ನೇ ಸರಿಯಾಗಿ ಅಪ್ಲೈಮಾಡಿ ನೌಕರರು ದಕ್ಷತೆಯಿಂದ ಕೆಲಸಕಾರ್ಯಗಳನ್ನು ಮಾಡುವಂತೆ ಮಾಡಬೇಕೆ ವಿನಹ ಅವರಮೇಲೆ ವಿಜಿಲೆನ್ಸ್ ಕಮಿಷನ್, ಅವರಮೇಲೆ ಸೂಪರ್ ವಿಜಿಲೆನ್ಸ್ ಕಮಿಷನ್ ಇವುಗಳನ್ನು ನೇಮಿಸುವುದರಿಂದ ಯಾವ ಕೆಲಸಗಳು ಆಗುವುದಿಲ್ಲ ಎಂದು ನನ್ನ ಅಭಿಪ್ರಾಯ.

ಶ್ರೀಮತಿ ಎಂ. ಆರ್. ಲಕ್ಷಮ್ಮ (ಪದವೀಧರರ ಕ್ಷೇತ್ರ).—ಮಾನ್ಯ ಸಭಾಪತಿಯವರೇ, ಈಗ ಈ ಸಭೆಯಮುಂದಿಟ್ಟಿರತಕ್ಕ 1968 ನೇ ಇಸವಿಯ ಮೈಸೂರು ಲೋಕಲ್ ಅಥಾರಿಟೀಸ್ ಡಿಸಿಪ್ಲಿನರಿ ಪ್ರೊಸೀಡಿಂಗ್ಸ್ ಎಗೆನೆಸ್ಟ್ ದಿ ಎಂಪ್ಲಾಯೀಸ್ ವಿಧೇಯಕ ಏನಿದೆ ಇದನ್ನು ನಾನು ಸ್ವಾಗತಿಸುತ್ತೇನೆ. ನಮ್ಮ ರಾಜ್ಯದಲ್ಲಿರತಕ್ಕ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸಮಾಡತಕ್ಕ ನೌಕರ ಮಾನೆಯವರು ಏನಿದ್ದಾರೆ ಅವರನ್ನೂ ಕೂಡ ವಿಜಿಲೆನ್ಸ್ ಕಮಿಷನ್ನಿನ ಆಡಳಿತ ವ್ಯಾಪ್ತಿಗೆ ಒಳಪಡಿಸತಕ್ಕದ್ದು ಯೋಗ್ಯ. ಅದರಂತೆ ಈ ವಿಧೇಯಕವನ್ನು ಸರ್ಕಾರದವರು ಈ ಸಭೆಯಮುಂದೆ ತಂದಿದ್ದಾರೆ. ಇದರಲ್ಲಿ ನನಗೆ ಒಂದು ಅನುಮಾನ ಏನೆಂದರೆ ಈ ಮಸೂದೆಯ ಸೆಕ್ಷನ್ 7 ರಲ್ಲಿ "Power of Government to pass orders in disciplinary proceedings: (1) On receipt of the records under sub-section (2) of section 6, the Government, after consulting the Mysore Public Service Commission, where such consultation is necessary, pass orders," ಎಂದು ಹೇಳಿದ್ದಾರೆ. ಜಾಗ್ರತಾ ಆಯೋಗದವರ ತಮ್ಮ ಫೈಂಡಿಂಗ್ಸ್ ಅನ್ನು ಸರ್ಕಾರಕ್ಕೆ ಕಳುಹಿಸುತ್ತಾರೆ. ಆ ನಂತರ ಸರ್ಕಾರದವರು ಕೆಲವು ತತ್ವಗಳ ವಿಷಯದಲ್ಲಿ ಮೈಸೂರು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರ ಸಲಹೆಯನ್ನು ತೆಗೆದುಕೊಳ್ಳಬೇಕಾಗುತ್ತದೆ, ಅವರ ಸಲಹೆಯನ್ನು ತೆಗೆದುಕೊಂಡಮೇಲೆ ಮೊದಲು ಜಾಗ್ರತಾ ಆಯೋಗದವರು ಏನು ಶಿಕ್ಷೆಯನ್ನು ವಿಧಿಸಬೇಕೆಂದು ಹೇಳಿರುತ್ತಾರೆಯೋ ಅದನ್ನು ಸರ್ಕಾರದವರು ಎಗ್ರೋವೇನರೇಟ್ ಮಾಡಬಹುದೇ ಹೇಗೆ ? ಮತ್ತು ಒಂದು ವೇಳೆ ಜಾಗ್ರತಾ ಆಯೋಗದವರು ಉಗ್ರ ಶಿಕ್ಷೆಯನ್ನು ವಿಧಿಸಬೇಕೆಂದು ಸಲಹೆ ಮಾಡಿದ್ದರೆ ಅದನ್ನು ಸರ್ಕಾರದವರು ಕಡಿಮೆ ಮಾಡಬಹುದೇ ಹೇಗೆ ? ಈ ವಿಚಾರದಲ್ಲಿ ನನಗೆ ಅನುಮಾನವುಂಟಾಗಿದೆ.

ಎರಡನೆಯ ವಿಚಾರವೇನೆಂದರೆ, ಈ ಸಂದರ್ಭದಲ್ಲಿ ಶ್ರೀಮಾನ್ ಮುಕುಂದರಾವ್ ಅವರು ಮತ್ತು ಶ್ರೀಮಾನ್ ಕೆ. ಸೂರ್ಯನಾರಾಯಣ ಅಡಿಗಾ ಅವರು ಈ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕ ನೌಕರರು, ಸರ್ಕಾರಿ ನೌಕರರ ಹಾಗೆ ಶಿಕ್ಷೆಗೆ ಹೇಗೆ ಸಮಾನಸ್ಕಂದರೋ ಹಾಗೆಯೇ ಇತರ ಸೌಲಭ್ಯಗಳನ್ನು ಪಡೆಯುವುದರಲ್ಲಿಯೂ ಸಮಾನಸ್ಕಂಧರು ಎನ್ನುವ ಹಾಗೆ ವಿಚಾರಮಾಡುವುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳಿದರು. ಆದ್ದರಿಂದ ಈಗ ಸ್ಥಳೀಯ ಸಂಸ್ಥೆಗಳಲ್ಲಿ, ಮುನಿಸಿಪಾಲಿಟಿಗಳಲ್ಲಿ ಕೆಲಸ ಮಾಡತಕ್ಕ ಇತರ ವರ್ಗದ ನೌಕರ ಮಾನೆಯವರು ಏನಿದ್ದಾರೆಯೋ ಅವರ ಸಂಬಳಸಾರಿಗೆಗಳು ಕಡಿಮೆ ದರದಲ್ಲಿ ಇದೆಯೆಂದು ನಾನು ಕೇಳಿದ್ದೇನೆ. ಅವರಿಗೂ ಸಹ ಸರ್ಕಾರಿ ನೌಕರರಿಗೆ ಕೊಡತಕ್ಕಂಥ ಒಂದು ಸೌಲಭ್ಯವನ್ನು ಕೊಡಬೇಕೆಂದು ನಾನಾದರೂ ಆಶಿಸುತ್ತೇನೆ.

ಮೂರನೆಯ ವಿಷಯವೇನೆಂದರೆ ಸೆಕ್ಷನ್ (9) ರಲ್ಲಿ ಗೌರ್ನಮೆಂಟ್ ಮೇಕ್ ರೂಲ್ಸ್ ಎಂದು ಏನಿದೆ ಇದರಲ್ಲಿ ಹೇಳಿರುವ ಹಾಗೆ ಆದಷ್ಟು ಶೀಘ್ರವಾಗಿ ರೂಲ್ಸುಗಳನ್ನು ಜಾರಿಗೆ ತರುವುದಕ್ಕೆ ಪ್ರಯತ್ನಮಾಡಬೇಕು. ನಮ್ಮ ಒಂದು ಅನುಭವವನ್ನು ಹೇಳುವುದಾದರ ರೂಲ್ಸ್‌ಗಳು ಎಷ್ಟೋ ವೇಳೆ ಆರುತಿಂಗಳು ಒಂದು ವರ್ಷ ಹೀಗೆ ತಡವಾಗಿ ಬರುತ್ತಿವೆ. ಆದ್ದರಿಂದ ಆದಷ್ಟುಬೇಗ ರೂಲ್ಸ್‌ಗಳನ್ನು ಜಾರಿಗೆ ತಂದರೆ ಅನುಕೂಲವಾಗುತ್ತದೆ. ಈ ಮೂರು ಅಂಶಗಳನ್ನು ನಾನು ಸರ್ಕಾರದ ಗಮನಕ್ಕೆ ತಂದು ನನ್ನ ಮಾತನ್ನು ಮುಗಿಸುತ್ತೇನೆ.

† Sri M. LINGANNA (Local Authorities' Constituency).—Sir, while welcoming this Bill, some doubts have arisen in my mind, which I want to be clarified by the Minister concerned while replying to the debate.

Sri N. M. KOTRABASAIAH SOGI.—This Committee was constituted to advise Government on matters of Collegiate Education.

ಶ್ರೀ ಜಿ. ವಿ. ಅಂಜನಪ್ಪ.—ಶಿಕ್ಷಣ ತಜ್ಞರಿಂದ ಕೂಡಿದ ಸಮಿತಿಯಲ್ಲಿ ನಾನ್ ಅಫಿಷಿಯಲ್ ಸದಸ್ಯರುಗಳು ಯಾರೂ ಇಲ್ಲ. ಹಾಗಾದರೆ ಡಾ. ತಗ್ಗೀಮನಿಯವರ ಅರ್ಹತೆ ಏನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರ ಅರ್ಹತೆಗಿಂತ ಹೆಚ್ಚಿಗೆ ಅವರು ಒಂದು ದೊಡ್ಡ ಸಂಸ್ಥೆಯ ಅಧ್ಯಕ್ಷರು. ಹಲವಾರು ಅಂದರೆ ಸುಮಾರು 20–30 ಕಾಲೇಜುಗಳನ್ನು ನಡೆಸುವಂಥ ಒಂದು ದೊಡ್ಡ ಶಿಕ್ಷಣ ಕೊಡುವ ಸಂಸ್ಥೆಯಲ್ಲಿದ್ದವರು.

ಶ್ರೀ ಜಿ. ವಿ. ಅಂಜನಪ್ಪ.—ಅದಕ್ಕಿಂತಲೂ ಹೆಚ್ಚಿಗೆ ಶಿಕ್ಷಣ ಸಂಸ್ಥೆಗಳಲ್ಲಿ ಮೈಸೂರು ಸಂಸ್ಥಾನದಲ್ಲಿ ದೊಡ್ಡ ದೊಡ್ಡ ಮನುಷ್ಯರು ಇದ್ದಾರೆ. ಅವರನ್ನು ಬಿಟ್ಟು ಮಾನ್ಯ ಶ್ರೀ ತಗ್ಗೀಮನಿಯವರನ್ನು ಇಲ್ಲಿಗೆ ಏಕೆ ತೆಗೆದುಕೊಂಡಿದ್ದೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರನ್ನು ಏಕೆ ತೆಗೆದುಕೊಂಡಿದ್ದೇವೆಂಬ ಬಗ್ಗೆ ಪುನಃ ಇನ್ನೇನೂ ಉತ್ತರ ಹೇಳುವುದಕ್ಕಾಗುವುದಿಲ್ಲ. ಅವರಿಗೆ ಅನೇಕ ಕಾಲೇಜುಗಳ ಸಂಬಂಧ ಇರುವುದರಿಂದ ಅಂತಹ ದೊಡ್ಡ ಸಂಸ್ಥೆಗಳ ಅಧ್ಯಕ್ಷರು ಅವರು ಎಂದು ತೆಗೆದುಕೊಂಡಿದ್ದೇವೆ.

ಶ್ರೀ ಜಿ. ವಿ. ಅಂಜನಪ್ಪ.—ಈ ಅಡ್ವೈಸರಿ ಕಮಿಟಿ ಮೀಟಿಂಗ್ ಮಾಡುವುದು 8 ತಿಂಗಳಿಗೊಂದು ಸಾರಿ. ಈ ಅಡ್ವೈಸರಿ ಕಮಿಟಿ ಮಾಡುವ ಶಿಫಾರಸುಗಳನ್ನು ಇಂಪ್ಲಿಮೆಂಟ್ ಮಾಡುತ್ತಾ ಇಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆಗಾಗ್ಗೆ ಮೀಟಿಂಗ್ ಕೂಡುತ್ತಾ ಅವರು ನಿರ್ಣಯಗಳನ್ನು ಮಾಡಿದ್ದಾರೆ. ಕಾಲೇಜುಗಳಿಗೆ ಗ್ರಾಂಟುಗಳನ್ನು ಕೊಡುವುದು, ಸರ್ವಿಸ್ ಮ್ಯಾಟರ್ಸ್ ಮುಂತಾದುವುಗಳನ್ನು ಚರ್ಚೆಮಾಡಿ ಆ ಬಗ್ಗೆ ವರದಿ ಕೊಟ್ಟು ಶಿಫಾರಸು ಮಾಡುವುದು ಇವನ್ನು ಅವರು ಮಾಡುತ್ತಿದ್ದಾರೆ. ಸಾಧ್ಯವಿರುವಷ್ಟು ಸರ್ಕಾರದವರು ಅವುಗಳ ಬಗ್ಗೆ ಕಾರ್ಯಗತ ಮಾಡಿದ್ದಾರೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಈ ಸಮಿತಿ ಯಾವ ವಿಚಾರದಲ್ಲಿ ಸಲಹೆ ಕೊಟ್ಟಿದ್ದಾರೆ ಏನು ಸಿಲಬಸ್, ಯಾವುದು ಹೇಳಿಕೊಡಬಾರದು, ಇದರ ಬಗ್ಗೆ ಏನು ಸಲಹೆ ಕೊಟ್ಟಿದ್ದಾರೆ, ಉಪಾಧ್ಯಾಯರು ಹೇಗೆ ಇರಬೇಕು, ಹೇಗೆ ಕಾಲೇಜನ್ನು ನಡೆಸಿಕೊಂಡು ಹೋಗಬೇಕೆಂಬ ಬಗ್ಗೆ ವಿದ್ಯಾ ಮಂತ್ರಿಗಳಿಗೆ ಸಲಹೆ ಕೊಟ್ಟಿದ್ದಾರೆಯೇ ? ಅವರೊಳಗೆ ತಿಳುವಳಿಕೆ ಹೆಚ್ಚಿಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ಸಲಹೆ ಕೊಡುವುದಿಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸರ್ಕಾರಕ್ಕೆ ಸಲಹೆ ಕೊಡುವುದಕ್ಕಾಗಿ ಅನೇಕ ಸರ್ಕಾರೀ ಕಾಲೇಜುಗಳಿವೆ. ಕಾಲೇಜುಗಳಲ್ಲಿ ಸುಧಾರಣೆಯಾಗಬೇಕಾದರೆ, ಸರ್ವಿಸ್ ವಿಷಯದಲ್ಲಿ ಸುಧಾರಣೆಯಾಗಬೇಕು, ಗ್ರಾಂಟು ಕೊಡುವ ವಿಷಯದಲ್ಲಿ ಸುಧಾರಣೆಯಾಗಬೇಕು, ಏನಾದರೂ ಉಪಕರಣಗಳು ಬೇಕಾಗಿದ್ದರೆ, ಶಿಕ್ಷಣ ಪದ್ಧತಿಯಲ್ಲಿ ಸುಧಾರಣೆಯಾಗಬೇಕು ಇಂತಹ ವಿಷಯದಲ್ಲಿ ಸರ್ಕಾರಕ್ಕೆ ಸಲಹೆ ಕೊಡುವುದಕ್ಕೆ ಆ ಸಮಿತಿಯನ್ನು ನೇಮಿಸಲಾಗಿದೆ.

ಶ್ರೀ ಬಸವರಾಜ ಕಟ್ಟೀಮನಿ.—ಡಾ. ತೆಗ್ಗೀಮನಿಯವರು ಈಗ ಕೆ.ಎಲ್.ಎ. ಸೊಸೈಟಿ ಅಧ್ಯಕ್ಷರಲ್ಲ. ಅವರ ಬದಲು ಹೊಸಬರು ಬಂದಿದ್ದಾರೆ. ಆದ್ದರಿಂದ ಅಲ್ಲಿ ಹೊಸಬರನ್ನು ಹಾಕುವುದಕ್ಕೆ ವಿಚಾರ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದನ್ನು ಪರಿಶೀಲನೆ ಮಾಡುತ್ತೇವೆ. ಇನ್ನು ಮೂರು ತಿಂಗಳೊಳಗೆ ಹೊಸ ಕಮಿಟಿಯನ್ನು ರಚನೆ ಮಾಡಬೇಕಾಗಿದೆ. ಅದರೊಳಗೆ ಆ ಕಮಿಟಿ ಅವಧಿ ಮುಗಿಯುತ್ತದೆ.

3-00 P.M.

ಶ್ರೀ ಎಸ್. ಡಿ. ಗಾಂವ್‌ಕರ್.—ಈ ಕಮಿಟಿಯುವರು ಇಲ್ಲಿಯವರೆಗೆ ಯಾವ್ಯಾವ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಅವುಗಳಲ್ಲಿ ಯಾವ್ಯಾವುದನ್ನು ಇಂಪ್ಲಿಮೆಂಟ್ ಮಾಡಿದ್ದೀರಿ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದು ಬಹಳ ದೊಡ್ಡ ಪ್ರಶ್ನೆ, ಅದರ ಮಾಹಿತಿ ನನ್ನಲ್ಲಿ ಇಲ್ಲ.

ಶ್ರೀ ಎ. ಕೆ. ಸುಬ್ಬಯ್ಯ.—ಈ ಸಮಿತಿಯ ಕೆಲಸ ಕಾರ್ಯಗಳಿಗೆ ಏನಾದರೂ ನೀತಿ ನಿಯಮ ಇದೆಯೋ, ಅಥವಾ ಅವರು ಇಷ್ಟ ಬಂದ ಹಾಗೆ ಕೆಲಸ ಕೈಗೊಳ್ಳುವುದೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನೀತಿ ನಿಯಮ ಅಂದರೆ, ಅವಶ್ಯಕತೆ ಇದ್ದ ಹಾಗೆ ಸಮಿತಿ ಸೇರುತ್ತದೆ. ಅಲ್ಲಿ ಸಮಿತಿಯು ಎಲ್ಲಾ ವಿಷಯಗಳನ್ನು ಪರಿಶೀಲನೆ ಮಾಡಿ ಸಲಹೆಗಳನ್ನು ಕೊಡುತ್ತಾರೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಈ ಸಮಿತಿ ಫಲಪ್ರದವಾಗಿ ಕಾರ್ಯಗಳನ್ನು ಮಾಡಬೇಕಾದರೆ, ಮೂರು ತಿಂಗಳಿಗೊಮ್ಮೆಯಾದರೂ ಸೇರಬೇಕು. ಆದ್ದರಿಂದ ಮೂರು ತಿಂಗಳಿಗೊಮ್ಮೆ ಸೇರಲು ಆದೇಶ ಕೊಡುತ್ತೀರಾ ?

Sri N. M. KOTRABASAIAH SOGI.—It is a suggestion for action.

ಶ್ರೀ ಎ. ಕೆ. ಸುಬ್ಬಯ್ಯ.—ಮೀಟಿಂಗ್ ಅವಶ್ಯಕತೆ ಇದ್ದಾಗ ಕರೆಯುತ್ತಾರೆಂದು ಹೇಳಿದ್ದೀರಿ. ಇದನ್ನು ಯಾರು ಕರೆಯುತ್ತಾರೆ, ಅವಶ್ಯಕತೆ ಇದೆಯೆಂದು ಯಾರು ತಿಳಿಸುತ್ತಾರೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಡೈರೆಕ್ಟರ್ ಆಫ್ ಕೊಲಜಿಯೇಟ್ ಇದಕ್ಕೆ ಕಾರ್ಯದರ್ಶಿಯಾಗಿದ್ದಾರೆ ; ಮತ್ತು ಕನ್‌ವೀನರ್ ಆಗಿದ್ದಾರೆ. ಕಾಲೇಜು ಆಡಳಿತದಲ್ಲಿ ಏನಾದರೂ ಜಟಿಲವಾದ ಸಮಸ್ಯೆಗಳು ಬಂದಾಗ, ಸಲಹೆಗಳು ಬೇಕೆನಿಸಿದಾಗ ಈ ಸಭೆಯನ್ನು ಕರೆಸುತ್ತಾರೆ.

ಶ್ರೀ ಜಿ. ವಿ. ಅಂಜನಪ್ಪ.—ಈ ಕಮಿಟಿ ನೇಮಕವಾದ ಮೇಲೆ ಇಲ್ಲಿಯವರೆಗೆ ಎಷ್ಟು ಸಭೆ ನಡೆಸಿದೆ ? ಎರಡು ವರ್ಷಗಳಲ್ಲಿ ಎರಡು ಸಾರಿ ಸೇರಿದೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—1962 ರಿಂದ ಈಚೆಗೆ 7 ಸಾರಿ ಸೇರಿದೆ.

ಶ್ರೀ ಎಚ್. ಪಿ. ರಾಜಣ್ಣ.—ಈ ಕಮಿಟಿಯಲ್ಲಿರುವವರೆಲ್ಲಾ ಪ್ರಿನ್ಸಿಪಾಲರವರಾಗಿದ್ದಾರೆ, ಅವರು ಸ್ವಂತ ಆಡಳಿತದ ವಿಷಯವಾಗಿ ಯೋಚನೆ ಮಾಡುತ್ತಾರೆಯೇ ಹೊರತು, ಉಳಿದ ಅಭಿವೃದ್ಧಿಯ ಬಗ್ಗೆ ಯೋಚನೆ ಮಾಡುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಹೆಚ್ಚಾಗಿ ಅವರು ಕಾಲೇಜು ಆಡಳಿತದ ಬಗ್ಗೆ ವಿಚಾರ ಮಾಡುತ್ತಾರೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಇಲ್ಲಿ ಸದಸ್ಯರನ್ನು ನೇಮಿಸುವುದು ಅವರಿಗೆ ಇರುವಂತಹ ತಿಳುವಳಿಕೆಯನ್ನು ನೋಡಿಕೊಂಡು ಮಾಡುವುದೋ, ಅಥವಾ ಸ್ವಂತ ದೃಷ್ಟಿಯಲ್ಲಿ ನೇಮಿಸುತ್ತೀರೋ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರ ಅರ್ಹತೆಯ ಸ್ಥಾನವನ್ನು ಪರಿಶೀಲಿಸಿ ಮಾಡತಕ್ಕದ್ದು.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಇದರಲ್ಲಿ ಹೆಚ್ಚಿನವರು ಅಧಿಕಾರಿಗಳಾಗಿದ್ದಾರೆ. ಇದರಿಂದ ಇಂಥ ಸಮಿತಿಯ ಅವಶ್ಯಕತೆಯೇನು ? ಅವರನ್ನು ಯಾವಾಗಲೂ ಕರೆದು ಸಲಹೆ ತೆಗೆದುಕೊಳ್ಳಬಹುದಲ್ಲ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಕಾಲೇಜಿನಲ್ಲಿ ಆಡಳಿತ ನಡೆಸತಕ್ಕ ಪ್ರಿನ್ಸಿಪಾಲ್ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಗೊತ್ತಿರುತ್ತದೆ. ಅದರಿಂದ ಅವರು ಕೂತು ವಿಚಾರ ಮಾಡುತ್ತಾರೆ. ಅದಕ್ಕೆ ಅವರನ್ನು ನೇಮಕ ಮಾಡಿದೆ.

ಶ್ರೀ ವೈ. ಎಸ್. ಪಾಟೀಲ್.—ಈ ಸಮಿತಿಯಲ್ಲಿ ಅಗ್ರಿಕಲ್ಚರಲ್ ಯೂನಿವರ್ಸಿಟಿಯ ವೈಸ್ ಚಾನ್ಸಲರನ್ನು ಸೇರಿಸದಿರುವುದಕ್ಕೆ ಕಾರಣವೇನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.— ಇತರ ಕಾಲೇಜುಗಳು ಏನಿವೆ, ಅವುಗಳ ಜೊತೆಗೆ ಈ ಅಗ್ರಿಕಲ್ಚರಲ್ ಕಾಲೇಜು ಸೇರಿಲ್ಲ. ಈಗ ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೆ. ಅದನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಜಿ. ವಿ. ಆಂಜನಪ್ಪ.—ಈ ಸಮಿತಿಯ ಮೇಲೆ ಎಷ್ಟು ಹಣ ಖರ್ಚು ಮಾಡಿದ್ದೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದರ ಬಗ್ಗೆ ಮಾಹಿತಿ ಇಲ್ಲ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಸಾಮಾನ್ಯವಾಗಿ ಡೈರೆಕ್ಟರ್ ಆಫ್ ಕೊಲ್ಲಿಜಿಯೇಟ್‌ನವರು ಸಿಲೆಬಸ್, ಅಕೆಡೆಮಿಕ್ ವಿಷಯದಲ್ಲಿ ಮಾತನಾಡುವುದಿಲ್ಲ. ಅವರು ಮುಖ್ಯವಾಗಿ ಹಣಕಾಸಿನ ದೃಷ್ಟಿಯಲ್ಲಿ ಮಾತನಾಡುವುದು. ಆ ದೃಷ್ಟಿಯಿಂದ ನೋಡಿದರೆ, ಇಲ್ಲಿ ಬರೀ ಪ್ರಿನ್ಸಿಪಾಲರು, ಸೆಕ್ರೆಟರಿಗಳು ಇದ್ದಾರೆ ವಿನಹ ನೇರವಾಗಿ ಉಪಾಧ್ಯಾಯರ ಪ್ರತಿನಿಧಿಗಳು ಯಾರೂ ಇಲ್ಲ, ಮತ್ತು ಅದರಿಂದ ಅನೇಕ ತೊಂದರೆಗಳಿವೆ. ಇವತ್ತು ಪ್ರಾವಿಡೆಂಟ್ ಸ್ಕೀಂ ಕೂಡ ಎಷ್ಟೋ ಕಾಲೇಜುಗಳಲ್ಲಿ ಇಂದಿನವರೆಗೂ ಕೂಡ ಜಾರಿಗೆ ಕೊಟ್ಟಿಲ್ಲವೆಂಬುದನ್ನು ಮನಗಂಡು, ಇನ್ನುಮೇಲಾದರೂ ಉಪಾಧ್ಯಾಯರ ಪ್ರತಿನಿಧಿಗಳನ್ನು ಸೇರಿಸುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಉಪಾಧ್ಯಾಯರ ವಿಷಯ, ವಿದ್ಯಾರ್ಥಿಗಳ ವಿಷಯ, ಶಿಕ್ಷಣದ ಪದ್ಧತಿ ವಿಷಯ ಇದು ಹೆಚ್ಚಾಗಿ ಯೂನಿವರ್ಸಿಟಿಗೆ ಸಂಬಂಧಪಟ್ಟ ವಿಷಯವಾಗಿದೆ. ಇವರು ಪರಿಶೀಲನೆ ಮಾಡಬೇಕಾದ ವಿಷಯ ಅಂದರೆ ಕಾಲೇಜುಗಳ ಅಡ್ಮಿನಿಸ್ಟ್ರೇಷನ್ ಮತ್ತು ಫೈನಾನ್ಷಿಯಲ್ ವಿಚಾರದಲ್ಲಿ ಸೂಕ್ತವೆಂದು ಇದನ್ನು ಮಾಡಿದ್ದೇವೆ.

ಶ್ರೀ ವೈ. ಎಸ್. ಪಾಟೀಲ್.—ಸ್ವಾಮಿ ಗುಲ್ಬರ್ಗಾ ಕಾಲೇಜು ಮತ್ತು ಕೆ. ಎಲ್. ಇ. ಸೊಸೈಟಿಗಳಿಗೆ ಹೇಗೆ ಪ್ರಾತಿನಿಧ್ಯ ಕೊಟ್ಟಿದ್ದೀರೋ ಹಾಗೆಯೇ ಜೆ. ಎಸ್. ಎಸ್. ಕಾಲೇಜು ಮತ್ತು ಬಿ. ಎಲ್. ಡಿ. ಸೊಸೈಟಿಯವರಿಗೂ ಪ್ರಾತಿನಿಧ್ಯವನ್ನು ಕೊಡಬಲ್ಲಿರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಈ ಸಮಿತಿಯ ಅವಧಿ ಮುಗಿದು ಇನ್ನೊಂದು ಸಮಿತಿಯನ್ನು ಪುನರ್ರಚನೆ ಮಾಡುವಾಗ ಇದನ್ನು ಯೋಚನೆ ಮಾಡಬಹುದು.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಈಗ ಆ ಕಮಿಟಿಯಲ್ಲಿರುವಂಥಾ ಸದಸ್ಯರಿಗಿಂತಲೂ ಇನ್ನೂ ಉತ್ತಮ ತಜ್ಞರ ಹೆಸರನ್ನು ಈ ಮಾನ್ಯ ಸಭೆಯ ಸದಸ್ಯರು ಸೂಚಿಸಿದರೆ ಮುಂದೆ ರಚನೆಯಾಗುವ ಸಲಹಾ ಸಮಿತಿಯಲ್ಲಿ ಅವರನ್ನು ಸೇರಿಸುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಸಲಹೆ ಮಾಡಬಹುದು.

ಶ್ರೀ ಎಸ್. ಪಿ. ರಾಜಣ್ಣ.—ಆ ಅಡ್ವೈಸರಿ ಕಮಿಟಿಯವರು ಕೆಲವು ಕಾಲೇಜುಗಳಿಗೆ ಬಿಲ್ಡಿಂಗ್ ಸಾಲುವುದಿಲ್ಲ, ರೂಮು ಸಾಲುವುದಿಲ್ಲ ಎನ್ನುವ ವಿಷಯದಲ್ಲಿ ಹಾಗೂ ಇನ್ನೂ ಇತರ ಕೆಲವು ವಿಷಯಗಳಲ್ಲಿ ಕೆಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಈ ಬಗ್ಗೆ ತಾವು ಏನು ಯೋಚನೆ ಮಾಡಿದ್ದೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈ ಬಗ್ಗೆ ಏನು ತೀರ್ಮಾನ ಮಾಡಿದ್ದಾರೆ ಎನ್ನುವ ಡೀಟೈಲ್ಸ್ ನನ್ನ ಹತ್ತಿರ ಇಲ್ಲ. ಈ ಬಗ್ಗೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರ ಹೇಳುತ್ತೇನೆ.

ಶ್ರೀ ಜಿ. ವಿ. ಆಂಜನಪ್ಪ.—ರಾಜ್ಯದಲ್ಲಿ ಮಹಿಳಾ ಕಾಲೇಜುಗಳು ಇವೆ. ಈ ಸಲಹಾ ಸಮಿತಿಯಲ್ಲಿ ಒಬ್ಬರೂ ಮಹಿಳೆಯರಿಲ್ಲ, ಅದಕ್ಕೆ ಕಾರಣವೇನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಮಹಿಳೆಯರ ವಿಷಯದಲ್ಲಿ ಆಸಕ್ತಿ ವಹಿಸಿದರೆ ತುಂಬಾ ಸಂತೋಷ.

ಶ್ರೀ ಎಸ್. ಪಿ. ರಾಜಣ್ಣ.—ಈಗ ಆ ಅಡ್ವೈಜರಿ ಕಮಿಟಿಯಲ್ಲಿ ಇಷ್ಟೇ ಜನ ಸದಸ್ಯರು ಇರಬೇಕೆಂದು ನಿಗದಿ ಮಾಡಿದ ಹಾಗೆ ಕಾಣುವುದಿಲ್ಲ. ಆದ್ದರಿಂದ ಅದರಲ್ಲಿ ಕೆಲವು ನಾನ್.ಅಫಿಷಿಯಲ್‌ಗಳನ್ನು ಸೇರಿಸುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮುಂದೆ ಸಮಿತಿಯನ್ನು ಪುನರ್ರಚನೆ ಮಾಡುವಾಗ ಇದನ್ನು ಪರಿಶೀಲನೆ ಮಾಡುತ್ತೇವೆ.

Increasing the number of Seats in Agricultural Colleges

150. Sri BASAVARAJ KATTIMANI (Nominated).—

Will the Minister for Agriculture be pleased to state :—

(a) the number of seats in the first year class of the Agriculture Colleges in the State ;

(b) the number of applications received this year for the said seats ;

(c) Is it not necessary to increase the number of colleges for the convenience of large number of students who are trying to get admission to the said colleges ?

Sri B. RACHAIAH (Minister for Agriculture).—

(a) 320.

(b) 2,469.

(c) Opinion of the Agriculture University has been sought.

ಶ್ರೀ ಬಸವರಾಜ ಕಟ್ಟೀಮನಿ.—ಸ್ವಾಮಿ ಒಂದು ವ್ಯವಸಾಯ ಕಾಲೇಜಿಗೆ ಸರಿ ಸುಮಾರಾಗಿ ಅಂದಾಜು ಎಷ್ಟು ದುಡ್ಡು ಖರ್ಚಾಗುತ್ತದೆ ?

† ಶ್ರೀ ಬಿ. ರಾಚಯ್ಯ.—ಅದಕ್ಕೆ ನೋಟೀಸು ಬೇಕು.

ಶ್ರೀ ಬಸವರಾಜಕಟ್ಟೀಮನಿ.—ಖಾಸಗಿ ಶಿಕ್ಷಣ ಸಂಸ್ಥೆಯವರು ವ್ಯವಸಾಯ ಕಾಲೇಜನ್ನು ಸ್ಥಾಪನೆ ಮಾಡಲು ಮುಂದೆ ಬಂದರೆ ಅವರಿಗೆ ಸರ್ಕಾರದವರು ಅನುಮತಿಯನ್ನು ಕೊಡುತ್ತಾರೆಯೇ ?

ಶ್ರೀ ಬಿ. ರಾಚಯ್ಯ.—ಇನ್ನೂ ಯಾರೂ ಆ ರೀತಿ ಖಾಸಗೀ ಶಿಕ್ಷಣ ಸಂಸ್ಥೆಯವರು ವ್ಯವಸಾಯ ಕಾಲೇಜನ್ನು ಸ್ಥಾಪನೆ ಮಾಡಲು ಮುಂದೆ ಬಂದಿಲ್ಲ. ಅವರು ಆ ರೀತಿ ಮುಂದೆ ಬಂದಮೇಲೆ ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಸಿ. ಬಂದೀಗೌಡ.—ಕೃಷಿ ವಿಶ್ವವಿದ್ಯಾನಿಲಯದವರ ಅಭಿಪ್ರಾಯವನ್ನು ಕೇಳಲಾಗಿದೆ ಎಂದು ಹೇಳಿದ್ದೀರಿ ಯಾವ ವಿಷಯದಲ್ಲಿ ಅವರ ಅಭಿಪ್ರಾಯವನ್ನು ಕೇಳಿದ್ದೀರಿ ?

ಶ್ರೀ ಬಿ. ರಾಚಯ್ಯ.—ಈಗ ಹಾಲಿ ಇರತಕ್ಕ ವ್ಯವಸಾಯ ಕಾಲೇಜುಗಳಲ್ಲಿ ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಕ್ಕೆ ಅವಕಾಶ ಇದೆಯೇ ಎಂದು ಕೇಳಿದ್ದೇವೆ.

ಶ್ರೀ ಕೆ. ಚನ್ನಬಸವನಗೌಡ.—ಸ್ವಾಮಿ ಹಿಂದೆ ಮೆಡಿಕಲ್ ಕಾಲೇಜುಗಳಿಗೆ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಸೀಟುಗಳ ವಿಷಯದಲ್ಲಿ ಎಷ್ಟು ಒತ್ತಡ ಇತ್ತೋ ಅಷ್ಟು ಒತ್ತಡ ಇವೊತ್ತು ವ್ಯವಸಾಯ ಕಾಲೇಜುಗಳಿಗೆ ಸೀಟಿನ ಒತ್ತಡ ಜಾಸ್ತಿಯಾಗಿದೆ. ಆದ್ದರಿಂದ 7 ಲಕ್ಷ ಎಕರೆ ನೀರಾವರಿ ಜಮೀನು ಇರತಕ್ಕ ತುಂಗಭದ್ರಾ ವ್ಯಾಲಿಯ ಪ್ರದೇಶದಲ್ಲಿ ಒಂದು ವ್ಯವಸಾಯ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಈಗ ಇನ್ನೊಂದು ಕಾಲೇಜನ್ನು ತೆರೆಯುವ ಪ್ರಶ್ನೆ ಸರ್ಕಾರದ ಮುಂದೆ ಇಲ್ಲ. ಈಗ ಹಾಲಿ ಇರತಕ್ಕ ಕಾಲೇಜುಗಳಲ್ಲಿ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಸ್ವಾಮಿ, ಕೃಷಿಗೆ ಪ್ರಧಾನವಾಗಿರತಕ್ಕ ನಮ್ಮ ರಾಜ್ಯದಲ್ಲಿ ಕೃಷಿಯಲ್ಲಿ ಪರಿಣತರನ್ನು ತಯಾರು ಮಾಡುವುದು ನಮ್ಮ ಸರ್ಕಾರದ ಕರ್ತವ್ಯ. ಆದ್ದರಿಂದ ನಮ್ಮ ರಾಜ್ಯದ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಕೃಷಿ ವಿದ್ಯಾಭ್ಯಾಸವನ್ನು ಪಡೆದು ಕೃಷಿ ಕಾರ್ಯದಲ್ಲಿ ಹೆಚ್ಚು ಭಾಗವಹಿಸುವುದಕ್ಕೆ ಅವಕಾಶವಾಗುವಂತೆ ಹೆಚ್ಚು ಕೃಷಿ ಕಾಲೇಜನ್ನು ಸ್ಥಾಪನೆ ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಬಿ. ರಾಚಯ್ಯ.—ಅದು ಸದಸ್ಯರ ಅಭಿಪ್ರಾಯ.

ಶ್ರೀ ಎಂ. ಲಿಂಗಣ್ಣ.—ಒಂದು ಸೀಟಿಗೆ 8 ಅರ್ಜಿಗಳು ಬಂದಿರುವಂತೆ ಕಾಣುತ್ತದೆ. ಇಷ್ಟು ತೀವ್ರತೆ ಇರುವುದಕ್ಕೆ ಕಾರಣ ಏನು ಎಂಬುದನ್ನು ಪರಿಶೀಲನೆ ಮಾಡಿದ್ದೀರಾ?

ಶ್ರೀ ಬಿ. ರಾಚಯ್ಯ.—ಪರಿಶೀಲನೆ ಮಾಡಿದ್ದೇವೆ. ಮೊದಲು ಮೆಡಿಕಲ್ ಕಾಲೇಜಿನ ಸೀಟಿಗೂ ಇದೇ ರೀತಿ ಇತ್ತು. ಈಗ ಕಡಿಮೆಯಾಗಿದೆ. ಅದರಂತೆ ಇಂಜನಿಯರಿಂಗ್ ಕಾಲೇಜಿಗೂ ಇತ್ತು. ಈಗ ಕಡಿಮೆಯಾಗುತ್ತಿದೆ. ಅದರಂತೆ ಈ ಕಾಲೇಜಿಗೂ ಒಂದೆರಡು ವರ್ಷದಲ್ಲಿ ಒತ್ತಡ ಕಡಿಮೆಯಾಗಬಹುದು.

ಶ್ರೀ ಕೆ. ಚೆನ್ನಬಸವನಗೌಡ.—ಇರುವ ಕಾಲೇಜುಗಳಲ್ಲಿಯೇ ಸೀಟ್‌ಗಳನ್ನು ಜಾಸ್ತಿ ಮಾಡುತ್ತೇವೆಂದು ಹೇಳಿದಿರಿ. ಎಷ್ಟು ಸೀಟ್‌ಗಳನ್ನು ಜಾಸ್ತಿ ಮಾಡಬಹುದು ಎಂಬುದನ್ನು ಹೇಳುತ್ತೀರಾ!

ಶ್ರೀ ಬಿ. ರಾಚಯ್ಯ.—ಕಳೆದ ವರ್ಷ ಮೊದಲನೆಯ ವರ್ಷದ ಸ್ಥಳಗಳ ಸಂಖ್ಯೆಯನ್ನು 100ಕ್ಕೆ ಹೆಚ್ಚು ಮಾಡಿದ್ದೇವೆ. ಮತ್ತು ಆ ಬಗ್ಗೆ 8 ಲಕ್ಷ ರೂಪಾಯಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ. ಸೀಟ್‌ಗಳ ಸಂಖ್ಯೆಯನ್ನು ಮಾತ್ರ ಜಾಸ್ತಿ ಮಾಡಿದರೆ, ಲ್ಯಾಬರೇಟರಿ, ಟೀಚಿಂಗ್ ಸ್ಟಾಫ್, ಕ್ಲಾಸ್‌ರೂಮ್ಸ್ ಎಷ್ಟು ಬೇಕಾಗುತ್ತದೆ ಎಂಬ ಬಗ್ಗೆ ಶಿಫಾರಸ್ಸನ್ನು ಕಳುಹಿಸಿ ಕೊಡುವಂತೆ ಕೇಳಿದ್ದೇವೆ.

ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ.—ರಾಯಚೂರು ಜಿಲ್ಲೆಯಲ್ಲಿ ವ್ಯವಸಾಯ ಕಾಲೇಜು ಆಗಬೇಕೆಂದು ಅಲ್ಲಿನವರು ಚಳುವಳಿ ಮಾಡಿದಾಗ ಸರ್ಕಾರದವರು ವ್ಯವಸಾಯ ವಿಶ್ವವಿದ್ಯಾನಿಲಯದ ಒಬ್ಬರನ್ನು ಅಲ್ಲಿಗೆ ಕಳುಹಿಸಿ ಅಲ್ಲಿ ಕಾಲೇಜನ್ನು ತೆರೆಯುವ ಬಗ್ಗೆ ತನಿಖೆ ನಡೆಸಲಾಯಿತೇ, ಹಾಗಿದ್ದ ಪಕ್ಷದಲ್ಲಿ ಅವರಿಂದ ಏನು ವರದಿ ಬಂದಿದೆ ?

ಶ್ರೀ ಬಿ. ರಾಚಯ್ಯ.- ಅವರು ಚಳುವಳಿ ಮಾಡುವುದಕ್ಕೆ ಮೊದಲೇ ಅಲ್ಲಿ ಒಂದು ವ್ಯವಸಾಯ ಕಾಲೇಜನ್ನು ತೆರೆಯಬೇಕೆಂದು ಉದ್ದೇಶ ಇತ್ತು. ಕೇಂದ್ರದ ಮಂತ್ರಿಗಳು ಬಂದು ಮೊದಲನೆ ವರ್ಷದ ತರಗತಿಯನ್ನು ಪ್ರಾರಂಭ ಮಾಡುವ ಬಗ್ಗೆ ಇನಾಗುರೇಷನ್ ಸಹ ಮಾಡಿದ್ದರು. ಆದರೆ ಅಲ್ಲಿ ಲ್ಯಾಬರೇಟರಿ ಮತ್ತು ಬಿಲ್ಡಿಂಗಿನ ಅನುಕೂಲವಾಗುವವರೆಗೆ ಬೆಂಗಳೂರಿನಲ್ಲಿ ನಡೆಸಿ, ಮುಂದಿನ ವರ್ಷದಿಂದ ಅಲ್ಲಿ ನಡೆಸಬೇಕೆಂದು ಮಾಡಿದ್ದೆವು. ಈ ಕಾರಣದಿಂದ ಅಲ್ಲಿಯ ಜನರು ಮೊದಲನೆಯ ವರ್ಷದಿಂದಲೇ ಅಲ್ಲಿ ನಡೆಸಬೇಕೆಂದು ಒತ್ತಡ ತಂದರು.

ಶ್ರೀ ಎಸ್ ಪಿ. ರಾಜಣ್ಣ.—ಬೇರೆ ಕೆಲಸಗಳಿಗೆ ಹೋಗಬಾರದು ಎಂದುಕೊಂಡು ಅಗ್ರಿಕಲ್ಚರ್ ಫ್ಯಾಮಿಲಿಯವರು ಈ ಕಾಲೇಜಿಗೆ ಸೇರಲು ಅಪ್ಲಿಕೇಷನ್ ಹಾಕಿಕೊಂಡಿರುವುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಬಿ. ರಾಚಯ್ಯ.—ಅರ್ಜಿ ಹಾಕಿಕೊಂಡಿರುನವರೆಲ್ಲಾ ಅಗ್ರಿಕಲ್ಚರಲ್ ಫ್ಯಾಮಿಲಿಗೆ ಸೇರಿದವರು ಎಂದು ಭಾವಿಸಿಕೊಂಡಿದ್ದೇವೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ನಮ್ಮ ರಾಜ್ಯದಲ್ಲಿ 100ಕ್ಕೆ 80ರಷ್ಟು ಜನ ವ್ಯವಸಾಯಕ್ಕೆ ಹೊಂದಿಕೊಂಡಿದ್ದಾರೆ. ಮತ್ತು ಈ ಕಾಲೇಜಿಗೆ ಸೇರುವವರ ಸಂಖ್ಯೆಯೂ ಜಾಸ್ತಿ ಇದೆ. ಆದಕಾರಣ ಹೊಸ ಕಾಲೇಜುಗಳನ್ನು ಜಾಸ್ತಿ ಮಾಡುವುದಕ್ಕಾಗದಿದ್ದರೆ ಹೈಸ್ಕೂಲ್‌ಗಳಲ್ಲಿಯಾದರೂ ಕೂಡ ವ್ಯವಸಾಯದ ಬಗ್ಗೆ ಒಂದು ಸಬ್ಜೆಕ್ಟ್ ಇಟ್ಟು ಅದನ್ನು ಕಲಿಯುವವರಿಗೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಬಿ. ರಾಚಯ್ಯ.—ವ್ಯವಸಾಯದ ಸ್ಕೂಲ್‌ಗಳನ್ನು ಪ್ರತಿಯೊಂದು ಜಿಲ್ಲೆಯಲ್ಲಿಯೂ ತೆರೆಯ ಬೇಕೆಂದು ಯೋಚನೆ ಮಾಡಿದ್ದೇವೆ. ಕೆಲವು ಭಾಗಗಳಲ್ಲಿ ವ್ಯವಸಾಯದ ಸ್ಕೂಲ್‌ಗಳು ಇವೆ. ಈಗಾಗಲೇ ಗ್ರಾಮ ಸೇವಾ ಸೆಂಟರ್‌ಗಳನ್ನು ತೆಗೆದಿದ್ದೇವೆ. ಆ ಸೆಂಟರುಗ ... ತ್ತು ವ್ಯವಸಾಯದ ಕೂಲಿಗಾರರಿಗೆ ಟ್ರೈನಿಂಗ್ ಕೊಡುವ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ದಾವಣಗೆರೆಯ ಬಾಪೂಜಿ ವಿದ್ಯಾಸಂಸ್ಥೆಯವರು ವ್ಯವಸಾಯ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಅನುಮತಿ ಕೇಳಿದ್ದಾರೆಯೇ, ಕೇಳಿದ್ದರೆ ಅನುಮತಿ ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಆ ವಿವರ ಇಲ್ಲ.

ಶ್ರೀ ವಿಶ್ವನಾಥಸ್ವಾಮಿ.—ರಾಯಚೂರಿನಲ್ಲಿ ಮೊದಲನೆಯ ವರ್ಷದ ತರಗತಿ ಯಾವಾಗ ಪ್ರಾರಂಭವಾಗುತ್ತದೆ ?

ಶ್ರೀ ಬಿ. ರಾಚಯ್ಯ.—ಅಕ್ಟೋಬರ್ ಎರಡರಂದು ಪ್ರಾರಂಭವಾಗುತ್ತದೆ.

ಶ್ರೀ ಎಸ್. ಡಿ. ಗಾಂವ್‌ಕರ್.—ವ್ಯವಸಾಯದ ಕಾಲೇಜಿಗೆ 320 ಸೀಟುಗಳಿಗಾಗಿ ಸುಮಾರು 2469 ಅರ್ಜಿಗಳು ಬಂದಿರುವಾಗ ವ್ಯವಸಾಯಕ್ಕೆ ಹೆಚ್ಚು ಡಿಮ್ಯಾಂಡು ಇರುವಂತೆ ತೋರುತ್ತದೆ. ಇದಕ್ಕಾಗಿ ಸರಕಾರದವರೇನಾದರೂ ಕಂಡೆನ್ಸ್ಡ್ ಕೋರ್ಸ್ ಎಂದು ಸರಕಾರ ಏರ್ಪಾಡು ಮಾಡಲು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಬಿ. ರಾಚಯ್ಯ.—ಸದ್ಯಕ್ಕೆ ಆ ಯೋಚನೆ ಇಲ್ಲ.

ಶ್ರೀ ಬಸವರಾಜ ಕಟ್ಟೀಮನಿ.—ಅಗ್ರಿಕಲ್‌ಚರು ಕಾಲೇಜಿಗೂ ಮತ್ತು ಅಗ್ರಿಕಲ್‌ಚರು ಇಂಜನೀಯರಿಂಗ್ ಕಾಲೇಜಿಗೂ ಇರುವ ವ್ಯತ್ಯಾಸವೇನು ?

ಶ್ರೀ ಬಿ. ರಾಚಯ್ಯ.—ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವ ಸೋಷಿಯಲ್ ಸರ್ವಿಸ್ ಸಂಸ್ಥೆಗಳವರು ಮತ್ತು ಇತರರು ವ್ಯವಸಾಯದಲ್ಲಿ ಹೆಚ್ಚು ತರಬೇತಿ ಪಡೆಯಲು ಅಗ್ರಿಕಲ್‌ಚರು ಕಾಲೇಜಿಗೆ ಬರುತ್ತಾರೆ. ಅಗ್ರಿಕಲ್‌ಚರು ಇಂಜನೀಯರಿಂಗ್ ಕಾಲೇಜುಗಳಲ್ಲಿ ಮೆಕನೈಸ್ಡ್ ಫಾರ್ಮಿಂಗ್ ಬಗ್ಗೆ ಹೆಚ್ಚು ಗಮನ ಕೊಡುತ್ತಾರೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಸದ್ಯದಲ್ಲಿ ಇರುವ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಹುಡುಗರ ಸಂಖ್ಯೆ ಬರಬರುತ್ತಾ ಕಡಿಮೆಯಾಗುತ್ತಿವೆ. ಸಿವಿಲ್ ಇಂಜನೀಯರಿಂಗ್ ವಿಭಾಗ ತೆರೆದಿರುವಂತೆ ಅಗ್ರಿಕಲ್‌ಚರ್ ಇಂಜಿನೀಯರಿಂಗ್ ವಿಭಾಗವನ್ನೂ ತೆರೆಯಬಹುದು ಎಂದು ಸರಕಾರ ಯೂನಿವರ್ಸಿಟಿಗೆ ಅಡ್ವೈಸು ಮಾಡಿ ಏಕೆ ಓಪನ್ ಮಾಡಬಾರದು ?

ಶ್ರೀ ಬಿ. ರಾಚಯ್ಯ.—ಇದು ಒಂದು ಸೂಕ್ತವಾದ ಸಲಹೆ.

ಶ್ರೀ ಕೆ. ಚನ್ನಬಸವನಗೌಡ.—ಪ್ರತಿ ಜಿಲ್ಲೆಯಲ್ಲೂ ಅಗ್ರಿಕಲ್‌ಚರ್ ಸ್ಕೂಲು ಎಂದು ತೆರೆಯಬೇಕು ಎನ್ನುವುದು ಸರಕಾರದ ಅಭಿಪ್ರಾಯ ಎಂದು ತಿಳಿಯಿತು. ನಮ್ಮ ಭಾಗದಲ್ಲಿ ಇಂತಹ ಸ್ಕೂಲುಗಳನ್ನು ತೆರೆಯಲು ಕೆಲವರು ದೇಣಿ ಕೊಡಲು ಮುಂದೆ ಬರುತ್ತಾರೆ. ಸರಕಾರಕ್ಕೆ ಇಂತಹವರಿಂದ ಎಷ್ಟು ದೇಣಿ ಬಂದರೆ ಅಗ್ರಿಕಲ್‌ಚರ್ ಸ್ಕೂಲು ತೆರೆಯುತ್ತೀರಿ?

ಶ್ರೀ ಬಿ. ರಾಚಯ್ಯ.—ಅರ್ಧ ಖರ್ಚು ಕೊಟ್ಟರೆ ಒಪ್ಪಿಕೊಳ್ಳಬಹುದು.

ಶ್ರೀ ಕೆ. ಚನ್ನಬಸವನಗೌಡ.—ಅರ್ಧ ಖರ್ಚು ಎಂದರೆ ಸುಮಾರು ಎಷ್ಟಾಗಬಹುದು?

ಶ್ರೀ ಬಿ. ರಾಚಯ್ಯ.—ಕೊನೆಯ ಪಕ್ಷ ಒಂದು ಅಗ್ರಿಕಲ್‌ಚರ್ ಸ್ಕೂಲು ತೆರೆಯಬೇಕಾದರೆ ಹತ್ತು ಲಕ್ಷದಷ್ಟು ಖರ್ಚು ಬರುತ್ತದೆ.

ಉಪ ಸಭಾಪತಿಯವರು.—ಪ್ರಶ್ನೋತ್ತರ ವೇಳೆಯಾಯಿತು.

Petition *re*: Damages due to heavy rains in Virupakshapura

ಶ್ರೀ ಜಿ. ವಿ. ಆಂಜನಪ್ಪ (ಪದವೀಧರ ಕ್ಷೇತ್ರ).—ಮಾನ್ಯ ಸಭಾಪತಿಗಳೇ ಚನ್ನಪಟ್ಟಣ ತಾಲ್ಲೂಕು ವಿರೂಪಾಕ್ಷಪುರ ಮತ್ತು ಇದರ ಸುತ್ತಮುತ್ತ ಮಳೆ ಹೆಚ್ಚು ಬಂದು ಇಲ್ಲಿರುವ ಅಳ್ಳಗೋಳು ಊರಿನ ಹೊಳೆಗಿ ಗ್ರಾಮದಲ್ಲಿ ನೀರು ನುಗ್ಗಿ ಬಂದು ನೂರು ಮನೆಗಳು ನೆಲಸಮವಾಗುತ್ತಲಿವೆ ಮತ್ತು

(ಶ್ರೀ ಜಿ. ವಿ. ಅಂಜನಪ್ಪ)

ಪರಿಸ್ಥಿತಿಯು ಬಹಳ ತೀವ್ರವಾಗಿದೆ ಇದರ ಬಗ್ಗೆ ಸರಕಾರ ತೀವ್ರವಾದ ಕಾರ್ಯಕ್ರಮ ತೆಗೆದು ಕೊಳ್ಳಬೇಕೆಂದು ಕೋರಿರುವ ಮನವಿಯನ್ನು ತಮ್ಮ ಮೂಲಕ ಸರಕಾರಕ್ಕೆ ಕಳುಹಿಸಬೇಕೆಂದು ಕೋರಿ ಇಲ್ಲಿ ತಮಗೆ ಸಲ್ಲಿಸುತ್ತಿದ್ದೇನೆ.

Strike by the Untrained teachers in Chitradurga

ಶ್ರೀ ಜಿ. ವಿ. ಅಂಜನಪ್ಪ.—ಇನ್ನೊಂದು ವಿಚಾರ ತಮ್ಮ ಗಮನಕ್ಕೆ ತರಬೇಕಾಗಿರುವುದು. ಈಚೆಗೆ ಚಿತ್ರದುರ್ಗ ಜಿಲ್ಲೆಯಲ್ಲಿರುವ ಡಿ.ಇ.ಓ. ಅಧಿಕಾರಿಗಳು ಇಲ್ಲಿ ಡಿ.ಎಲ್.ಆರ್.ಸಿ. ಮೂಲಕ ಚುನಾಯಿಸಲ್ಪಟ್ಟ ಉಪಾಧ್ಯಾಯರುಗಳನ್ನು ಕೆಲಸದಿಂದ ತೆಗೆದು ತಮಗೆ ಬೇಕಾದವರನ್ನು ನೇಮಕ ಮಾಡಿದ್ದಾರೆ ಎಂದು ಹಿಂದೆ ಒಂದು ಸಾರಿ ಸರಕಾರದ ಗಮನವನ್ನು ಸೆಳೆದಿದ್ದೆ. ಇದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಂತೆ ಕಾಣಲಿಲ್ಲ. ಈಗಲಾದರೂ ಸರಕಾರದವರು ತೀವ್ರವಾದ ಕಾರ್ಯಕ್ರಮ ಈ ಬಗ್ಗೆ ತೆಗೆದುಕೊಳ್ಳಬೇಕೆಂದು ಕೋರುತ್ತಿದ್ದೇನೆ. ಇತ್ತೀಚೆಗೆ ಇಲ್ಲಿರುವ ಡಿ.ಇ.ಓ.ರವರು ಅವರ ಮನಸ್ಸಿಗೆ ಬಂದಂತೆ ಸ್ವೇಚ್ಛೆಯಾಗಿ ಯಾರು ಅರ್ಹರಾಗಿದ್ದರೋ ಅವರನ್ನೆಲ್ಲಾ ತೆಗೆದು ಅನರ್ಹರಾದವರನ್ನು ಅವರ ಜಾಗದಲ್ಲಿ ನೇಮಕ ಮಾಡುತ್ತಿದ್ದಾರೆ. ಇದರಿಂದ ಬಹಳ ಜನರಿಗೆ ಅನ್ಯಾಯವಾಗುತ್ತಿದೆ. ನಾಲ್ಕೈದು ತಿಂಗಳಿಂದಲೂ ಇದರ ಬಗ್ಗೆ ಸರಕಾರಕ್ಕೆ ಮನವಿ ಮಾಡಿಕೊಂಡರೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಸರಕಾರ ಈಗಲಾದರೂ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Strike by the Students of the Bangalore University

ಶ್ರೀ ಜಿ. ವಿ. ಅಂಜನಪ್ಪ.—ಇನ್ನೊಂದು ಮುಖ್ಯವಾದ ವಿಚಾರ. ಈ ನಗರದಲ್ಲಿರುವ ಸುಮಾರು ಇಪ್ಪತ್ತು ಸಾವಿರ ಯೂನಿವರ್ಸಿಟಿ ವಿದ್ಯಾರ್ಥಿಗಳು ಮೂರು ದಿನದಿಂದಲೂ ಸತತವಾಗಿ ಮಳೆ ಸುರಿಯುತ್ತಿದ್ದರೂ ಲೆಕ್ಕ ಮಾಡದೆ ಶಾಂತ ರೀತಿಯಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ ಮತ್ತು ಇದನ್ನು ಮುಂದುವರಿಸುತ್ತಿದ್ದಾರೆ. ಇವೊತ್ತಿನ ದಿನ ಇದರಲ್ಲಿ 7—8 ಜನರು ಉಪವಾಸ ಮುಷ್ಕರ ಬೇರೆ ಪ್ರಾರಂಭ ಮಾಡಿದ್ದಾರೆ. ಇದೇ ರೀತಿ ವಿದ್ಯಾರ್ಥಿಗಳ ಮುಷ್ಕರ ಮುಂದುವರಿಯುತ್ತಿದ್ದರೆ ರಾಜ್ಯದಲ್ಲಿ ವಿಪತ್ಕಾರಕವಾದ ಪರಿಸ್ಥಿತಿ ಉಂಟಾಗುತ್ತದೆ ಮತ್ತು ವಿದ್ಯಾರ್ಥಿಗಳ ಕೆರಿಯರ್ ಕೂಡ ಹಾಳಾಗುತ್ತದೆ ಎಂದು ಅವರ ಪೇರೆಂಟ್ಸ್‌ಗಳು ಮನವಿ ಮಾಡುತ್ತಿದ್ದಾರೆ ಮತ್ತು ಅನೇಕ ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆಯಾಗುತ್ತದೆ. ಇದನ್ನು ಸರಕಾರ ಇಷ್ಟು ಲಘುವಾಗಿ ಕಾಣಬಾರದು. ಮತ್ತು ನಾವು ವಿದ್ಯಾಥಿಗಳನ್ನು ಅಲ್ಲಿ ಅಭಿನಂದಿಸಬೇಕಾಗಿದೆ. ಅವರು ಯಾವ ವಿಧವಾದ ಹಿಂಸಾಕೃತ್ಯಕ್ಕೆ ತೊಡಗದೆ ಶಾಂತ ರೀತಿಯಿಂದ ತಮ್ಮ ಮುಷ್ಕರವನ್ನು ನಡೆಸುತ್ತಾ ಬರುತ್ತಿದ್ದಾರೆ. ಇದರಲ್ಲಿ ವಿದ್ಯಾರ್ಥಿಗಳ ಗುಂಪುಗಳನ್ನು ಒಡೆದು ಬೇರೆ ರೀತಿಯಿಂದ ಪ್ರಚೋದನೆಗೆ ಗುರಿ ಮಾಡಿದರೆ ಇದರಿಂದ ದೇಶದ ಆಸ್ತಿ ಪಾಸ್ತಿಗಳಿಗೆ ಲುಕ್ಸಾನು ಆಗುವ ಸಂದರ್ಭಗಳು ಬರಬಹುದು. ಇಂತಹ ಸನ್ನಿವೇಶದಲ್ಲಿ ಇದನ್ನು ತಪ್ಪಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಇದಕ್ಕಾಗಿ ನಾನು ತಮ್ಮ ಮೂಲಕ ಸರಕಾರದಲ್ಲಿ ಪ್ರಾರ್ಥನೆ ಮಾಡುವುದು ಇಲ್ಲಿರುವ ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ಕರೆಸಿಕೊಂಡು ಇದರ ಸಮಸ್ಯೆಗಳೇನು ಮತ್ತು ಇರುವ ಅಡ್ಡಿ ಆತಂಕಗಳೇನು ಎನ್ನುವುದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಉಪಸಭಾಪತಿಯವರು.—ಈಗಾಗಲೇ 27ನೇ ತಾರೀಖು ಕಾಲ್ ಅಟೆನ್‌ಷನ್ ಮೋಷನ್ ಸಂಬಂಧದಲ್ಲಿ ವಿವರಗಳನ್ನು ಸರಕಾರ ಕೊಟ್ಟಿದೆ.

ಶ್ರೀ ಜಿ. ವಿ. ಅಂಜನಪ್ಪ.—ಅದರಿಂದೀಚೆಗೆ ಎಷ್ಟೋ ಹೆಚ್ಚು ತೊಂದರೆಗಳುಂಟಾಗಿವೆ ಅದಕ್ಕಾಗಿ ಸರಕಾರದ ಗಮನವನ್ನು ಸೆಳೆಯಬೇಕಾಗಿ ಬಂದಿದೆ. ಅದಕ್ಕಾಗಿಯೇ ಮುನ್ನೆಚ್ಚರಿಕೆ ನೋಡಿಕೊಂಡು ಅವರ ಕಷ್ಟಸುಖ ಏನೆಂಬುದನ್ನು ತಿಳಿದುಕೊಂಡು ಅದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

Strike by the Doctors and Surgeons at the Wenlock Hospital Mangalore

ಶ್ರೀ ಕೆ. ಸೂರ್ಯನಾರಾಯಣ ಅಡಿಗ (ಸ್ಥಾನೀಯ ಪ್ರಾಧಿಕಾರೀಕ್ಷೇತ್ರ).—ಮಾನ್ಯ ಸಭಾಪತಿಯವರೇ, ಮಂಗಳೂರಿನ ಆಸ್ಪತ್ರೆಯಲ್ಲಿ ಹೌಸ್ ಸರ್ಜನ್ಸ್ ಮುಷ್ಕರ ಮಾಡುತ್ತಾ ಇರುವುದರಿಂದ ಅಲ್ಲಿಗೆ ಡಾಕ್ಟರನ್ನೂ ಕೂಡ ಅವರು ಒಳಗಡೆ ಹೋಗುವುದಕ್ಕೆ ಬಿಡುವುದಿಲ್ಲ. ಇನ್ನು ಪೇಷೆಂಟ್‍ಗಳ ಅವಸ್ಥೆ ಏನಾಗಿದೆಯೋ ಗೊತ್ತಿಲ್ಲ. ಜನರಿಗೆ ಬಹಳ ತೊಂದರೆಯಾಗಿದೆ. ಪ್ರೈವೇಟ್ ಡಾಕ್ಟರಿಗೆ ಅಷ್ಟು ದುಡ್ಡು ಕೊಟ್ಟು ಔಷಧಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದರಿಂದ ಜನರಿಗೆ ತೊಂದರೆಯಾಗುತ್ತಾ ಇದೆ ಎಂದು ನನಗೆ ವರ್ತಮಾನ ಬಂದಿದೆ. ಆದ್ದರಿಂದ ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುವುದು ಏನೆಂದರೆ ಸರ್ಕಾರ ಇದರಲ್ಲಿ ಪ್ರವೇಶ ಮಾಡಿ, ಜನರಿಗೆ ತೊಂದರೆ ಆಗದೇ ಇದ್ದಹಾಗೆ ಸುಧಾರಿಸಲಿಕ್ಕೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ಒತ್ತಾಯಪೂರ್ವಕವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

Priority to be given to discuss the Appropriation Bill

Smt. M. R. LAKSHAMMA (Graduates' Constituency).—You may please remember that the other day one Bill as well as the Supplementary Estimates was left half discussed. At that time it was decided that the Appropriation Bill should be taken up for discussion. Now the other Bills are put down on the agenda and we may not reach the Appropriation Bill today. There is no meaning if the discussion on the Appropriation Bill is delayed unduly. If the Appropriation Bill is taken up in the first instance, we will certainly co-operate with the Hon. Minister in regard to his Bill afterwards.

ಶ್ರೀ ಜಿ. ವಿ. ಆಂಜನಪ್ಪ.—ಸ್ವಾಮಿ, ಶ್ರೀಮತಿ ಲಕ್ಷಮ್ಮನವರು ಹೇಳಿರುವುದರಲ್ಲಿ ಸ್ವಲ್ಪ ಅರ್ಥವಿದೆ. ಹಿಂದೆ ಸಪ್ಲಿಮೆಂಟರಿ ಬೇಡಿಕೆಗಳ ಬಗ್ಗೆ ಮಾತನಾಡಬೇಕಾದರೆ ಕೆಲವರಿಗೆ ಅವಕಾಶ ಸಿಕ್ಕಲಿಲ್ಲ. ಮುಂದೆ ಮಾತನಾಡಲು ಅವಕಾಶ ಕೊಡುತ್ತೇವೆ ಎಂದು ಹೇಳಿದ್ದರು. ಈಗ ಅಪ್ರೋಪ್ರಿಯೇಷನ್ ಬಿಲ್ ತೆಗೆದುಕೊಂಡಿದ್ದೀರಿ ಅನೇಕ ಮಾನ್ಯ ಸದಸ್ಯರು ಮಾತನಾಡುವವರು ಇದ್ದಾರೆ. ಆದುದರಿಂದ ಅವರಿಗೆ ಮಾತನಾಡಲು ಅವಕಾಶ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. DEPUTY CHAIRMAN.—I draw the attention of the hon. Members to Rule 27. It reads thus:

> "On days allotted for the transaction of Government business such business shall have precedence and the Secretary shall arrange that business in such order as the Chairman may, in consultation with the Leader of the House, determine:
>
> "Provided that such order of business shall not be varied on the day that business is set down for disposal unless the Chairman is satisfied that there is sufficient ground for such variation."

(MR. DEPUTY CHAIRMAN)

So far as the Appropriation Bill is concerned, as the hon. Members are aware, it is a money Bill and this was placed before this House on and September. Within 14 days we have to pass that Bill. Unless and until the hon. Members convince the Chair that there is sufficient ground for variation of the business of the House, we may carry on the legislative business as per the list of business.

Hydarabad Jagirs (Commutation) Regulation (Mysore Amendment) Bill 1967.

(As passed by the Legislative Assembly)

Motion to Consider

SRI H. V. KOUJALGI (Minister for Revenue) I beg to move :—

"That the Hyderabad Jagirs (Commutation) Regulation (Mysore Amendment) Bill, 1967, as passed by the Legislative Assembly, be taken into consideration."

MR. DEPUTY CHAIRMAN.—Motion moved :

"That the Hyderabad Jagirs (Commutation) Regulation (Mysore Amendment) Bill, 1967 as passed by the Legislative Assembly, be taken into consideration."

SRI H. V. KOUJALGI.—Sir, this is a Bill Seeking to amend the Hyderabad Jagirs Regulation No. 25 of 1951. This was a legislation passed by the then Hyderabad State in the year 1951. After integration some of the districts, *i.e.*, Gulbarga, Bidar and Raichur have been merged with the Mysore State and so this Hyderabad Jagirs Regulation is in force in this State. It affects these three districts only. In the working of this regulation, some difficulties have been experienced. To remove those difficulties this amending Bill has been brought before this House. I may submit Sir, these amendments are more or less procedural and very formal.

In the first amendment in Section 4, some amendments are sought to be made. The main object of this regulation was to abolish the Jagirs in the old Hyderabad districts. When these Jagirs were to be abolished, some compensation amount had to be paid by the Government to the Jagirdars. These Jagirdars were paying only some allowances to the Government. These allowances are called hissa, sarkar, chowth, makasa, dharpatti etc. According to this regulation, these have all been abolished. The first amendment provides how the basic amount has to be calcuated. It is more or less a procedural one. The provisions of the Act were not so clear in this respect. There was some difficulty in implementing those provisions. Therefore it was

found that some amendment was necessary. The average annual revenue will be taken into consideration for the purposes of calculation instead of the gross basic sum.

Now I come to the second amendment. Sir, the Jagirdars were expected to pay some allowance to the Nawab on account of hissa, sarkar, chowth Makasa, dharpatti etc. While commuting the Jagir what the Jagirdars used to pay to the Navab was deducted and the balance was paid to the Jagirdars. The Andhra High Court has held in a case filed in that Court that we cannot make such deductions when the Act is not very clear on that point and the provisions of that Act were set aside. What we have done is we have deducted all the amount that was due to the Navab and the balance was paid. Now, as per the direction of the High Court, we will have to refund the entire amount if the law stands as it is. We have to make provision that what we have deducted is rightly deducted and that it is not returnable. That provision is made now. In Andhra State also, such an amendment has been brought. In section 5, suppose while paying this commutation amount to the Jagirdar, if he receives an amount less than what is due to him, he has a remedy to go in appeal. But if on the other hand, the administrator inadvertantly or for any other reason makes an over-payment, more than what is due; Government has no remedy now under the existing Act. By this amendment, provision has been made for Government also to go in appeal if any amount has been paid in excess of what is due.

3-30 P.M.

Secondly, by way of an interim arrangement, sometimes these commutation amounts are also paid and after some time as a result of new evidence if it comes to the notice of the Government that the amount paid is excessive, there is no remedy to get back the money or to recover. So, that remedy is also provided in this amendment.

Thirdly, these being old jagirs, sufficient evidence was not coming forward when these commutations were settled and now it has come to light through some reliable evidence or through some document. In such a case, if the Administrator is satisfied, he can re-open the matter and take into consideration the new evidence that has come into light and if he is satisfied after re-opening there is any case, he can reduce the commutation. In some cases, Sir, he can revise these matters on an application or even suo motu.

SRI G. V. ANJANAPPA—In Hyderabad they may call it as jagir commutation regulation. In Mysore, they may call it inam abolition. Similar problems exist in Mysore State also.

SRI H. V. KOUJALGI.—With due respect to my friend, his suggestion could have been considered if we are legislating a new enactment. Here the Act is already there and it has been implemented in

(SRI H. V. KOUJALGI)

Mysore State since 1956. Because we are experiencing some difficulties in implementing the provisions of the Act, we wanted to remove those difficulties and therefore an amendment Bill has been brought. We are not making a new legislation. Those practices, which are there in ex-Hyderabad districts, do not exist in other areas of the State and therefore I can understand the difficulty of the hon. Member in appreciating the provisions. I have consulted the Law Department and they have said that these amendments are necessary. Lastly in section 10, some amount was given as allowance to educational, chartiable institutions and in some cases to individuals. How these are to be paid and in what proportion they are to be paid is provided in the amendment of section 10 and insertion of Section 10-A.

These are formal amendments and merely procedural in order to remedy certain difficulties felt in the implementation of this Bill. This Bill will have effect only in those districts of the former Hyderabad State. Such amendments are carried out in Andhra Pradesh also which containes a major portion of the districts of old Hyderabad State.

I request the House to kindly accept this Bill and pass it.

† ಶ್ರೀ ಜಿ. ವಿ. ಆಂಜನಪ್ಪ.—ಇದೊಂದು ವಿಚಿತ್ರವಾದ ಪರಿಸ್ಥಿತಿ. ಈ ಮಸೂದೆಯಲ್ಲಿರುವುದೇನು ಎಂದು ತಿಳಿದುಕೊಳ್ಳುವುದಕ್ಕೆ ಬಹಳ ಪ್ರಯತ್ನಪಟ್ಟೆ, ಅರ್ಥವಾಗಲಿಲ್ಲ. ಆದರೂ ಭಾಷಣ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ಸರಕಾರಕ್ಕೆ ತಿಳಿದಿರುವುದಿಷ್ಟೆ : ಹಳೆಯ ಮೈಸೂರಿನಲ್ಲಿ ಇನಾಂ ಅಬಾಲಿಷನ್ ಬಿಲ್ ಇದೆ. ಎಲ್ಲವನ್ನೂ ಒಟ್ಟಿಗೆ ಸೇರಿಸಿ ಹೈದರಾಬಾದು ಕರ್ಣಾಟಕ-ಮುಂಬಯಿ ಪ್ರದೇಶ ಮುಂತಾದ ಎಲ್ಲ ಭಾಗಗಳನ್ನು ಸೇರಿಸಿ ಸಮಗ್ರವಾದ ಒಂದು ಕಾನೂನನ್ನು ತಂದಿದ್ದರೆ ಚೆನ್ನಾಗಿತ್ತು. ಇಂದು ಹೈದರಾಬಾದು ಪ್ರದೇಶಕ್ಕೆ ಸಂಬಂಧಪಟ್ಟಹಾಗೆ ಅಲ್ಲಿ 51ನೆಯ ಇಸವಿಯ ಹೈದರಾಬಾದು ರೆಗ್ಯುಲೇಷನ್ ಜಾರಿಯಲ್ಲಿದೆಯೆಂದು ಹೇಳಿದರು. ಮುಂಬಯಿ ಪ್ರದೇಶದಲ್ಲಿರುವ ಕಾನೂನು ಮತ್ತು ಹಳೇ ಮೈಸೂರಿನಲ್ಲಿರುವ ಕಾನೂನು ಇವನ್ನೆಲ್ಲಾ ಸೇರಿಸಿ ಕ್ರೋಢೀಕರಿಸಿ ಇನಾಂ ಅಬಾಲಿಷನ್ ಮತ್ತು ಜಹಗೀರ್ ಅಬಾಲಿಷನ್ ಆದರೆ ಕಾಂಪೆನ್ಸೇಷನ್ ಯಾವರೀತಿ ಕೊಡಬೇಕಾಗುತ್ತದೆ ಎಂದು ತಿಳಿಸುವ ಒಂದು ಸಮಗ್ರವಾದ ಮಸೂದೆಯನ್ನು ತಂದಿದ್ದರೆ ಕಷ್ಟವಿರುತ್ತಿರಲಿಲ್ಲ. ಆ ಪ್ರದೇಶದಲ್ಲಿರುವ ಕಾನೂನು ನನಗೆ ಅರ್ಥವಾಗುವುದಿಲ್ಲ. ಅದನ್ನು ಅಧಿಕಾರಿಗಳು ಅರ್ಥಮಾಡಿಕೊಂಡು ಯಾವರೀತಿ ಕಾರ್ಯಕ್ರಮ ಕೈಗೊಳ್ಳುತ್ತಾರೋ ತಿಳಿಯದು. ಆದುದರಿಂದ ಈ ಬಿಲ್ಲಿನ ವಿಚಾರದಲ್ಲೇನು ಮಾತನಾಡಬೇಕೋ ತಿಳಿಯದು. ಮುಂದಾದರೂ ಇಡೀ ರಾಜ್ಯಕ್ಕೆ ಸಂಬಂಧಪಟ್ಟಹಾಗೆ ಸಮಗ್ರವಾದ ಮಸೂದೆಯನ್ನು ತರಬೇಕೆಂದು ಸೂಚಿಸುತ್ತೇನೆ.

† ಶ್ರೀ ಸಿ. ಬಂದೀಗೌಡ (ಉಪಾಧ್ಯಾಯರ ಕ್ಷೇತ್ರ) —ಮಾನ್ಯ ಸಭಾಪತಿಗಳೇ, ಶ್ರೀಮಾನ್ ಆಂಜನಪ್ಪನವರು ಮಾತನಾಡುವಾಗ ಇದಕ್ಕೆ ಸಂಬಂಧಪಟ್ಟ ಹಾಗೆ ಇಡೀ ರಾಜ್ಯಕ್ಕೆ ಅನ್ವಯವಾಗುವ ಒಂದು ಮಸೂದೆ ತರಬೇಕು ಎಂದು ಸೂಚಿಸಿದ್ದಾರೆ. ಹೈದರಾಬಾದ್ ಕರ್ಣಾಟಕದಲ್ಲಿರುವ ವಿಶೇಷ ಮಸೂದೆಯನ್ನು ಈ ರಾಜ್ಯಕ್ಕೆ ಸಂಬಂಧಪಟ್ಟಹಾಗೆ ತರುವುದಕ್ಕೆ ಸಾಧ್ಯವೇ ಇಲ್ಲ, ಅದರ ಅಗತ್ಯವೂ ಇಲ್ಲ.

ಶ್ರೀ ಜಿ. ವಿ. ಆಂಜನಪ್ಪ.—ನಾನು ಹೇಳಿದ್ದು ಜಹಗೀರು ಮತ್ತು ಇನಾಂ ಅಬಾಲಿಷನ್ ಇವುಗಳಿಗೆ ಸಂಬಂಧಪಟ್ಟ ಮಸೂದೆಗಳೆರಡೂ ಒಂದೇ ರೀತಿಯ ಮಸೂದೆಗಳು. ಆದುದರಿಂದ ಸಮಗ್ರವಾದ ಮಸೂದೆ ತರಬಹುದಾಗಿತ್ತು ಎಂದು. ಆದರೆ ಶ್ರೀ ಬಂದೀಗೌಡರು ಹಳೇ ಮೈಸೂರಿನಲ್ಲಿ ಈ ಸಂಬಂಧವಾದ ಮಸೂದೆಯೇ ಇಲ್ಲ ಎಂದರೆ ಎಷ್ಟುಮಟ್ಟಿಗೆ ಅದು ನಿಜ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಿ. ಬಂದೀಗೌಡ.—ಇದು ನಿಜ, ಸರಿ ಮಾತಲ್ಲ. ಮಾನ್ಯ ಸಚಿವರ ಭಾಷಣದಿಂದ ಎರಡು ಸಂಗತಿಗಳು ಬೆಳಕಿಗೆ ಬಂದಿದೆ. ಮೊದಲನೆಯದಾಗಿ ಹಿಂದಿನ ಹೈದರಾಬಾದು ಪ್ರದೇಶದಲ್ಲಿ ಜಾಗೀರ್‌ದಾರರಿಗೆಷ್ಟು ಪರಿಹಾರ ಕೊಡಬೇಕು ಎಂದು ಗೊತ್ತುಮಾಡುವುದು ಕಷ್ಟವಾಗಿದೆ. ಎರಡನೆಯದು ಹೀಗೆ ಪರಿಹಾರವನ್ನು ಲೆಕ್ಕ ಮಾಡುವಾಗ ಎಷ್ಟೋವೇಳೆ ಎಷ್ಟು ಕೊಡಬೇಕೋ ಅದಕ್ಕಿಂತ ಹೆಚ್ಚು ಕೊಡಲಾಗಿದೆ. ಜಹಗೀರ್‌ದಾರರಿಗೆ ಕಡಿಮೆ ಪರಿಹಾರ ದೊರೆತಿದ್ದರೆ ಅಪೀಲು ಮಾಡಲು ಅವಕಾಶವಿದೆ; ಸರಕಾರಕ್ಕೆ ಅಧಿಕಾರವಿಲ್ಲ. ಆದುದರಿಂದ ಸರಕಾರದವರಿಗೆ ಅಂಥ ಅವಕಾಶ ಸಿಕ್ಕುವಹಾಗೆ ತಿದ್ದುಪಡಿ ತರಲಾಗಿದೆ ಎಂದು ತಿಳಿಸಿದರು. ಜಾಗೀರ್‌ದಾರರಿಗೂ ಸರಕಾರದವರಿಗೂ ಒಂದು ಮುಖ್ಯವಾದ ವೆತ್ಯಾಸವಿದೆ. ಸರಕಾರದವರು ತಮ್ಮ ಸ್ವಂತ ಅಧಿಕಾರಿಗಳನ್ನು ನೇಮಕಮಾಡಿರುತ್ತಾರೆ. ಸರಿಯಾದ ರೀತಿಯಲ್ಲಿ ಲೆಕ್ಕಮಾಡಿ ಎಷ್ಟು ಕೊಡಬೇಕೋ ಅಷ್ಟನ್ನು ಕೊಡಬೇಕು, ಇದು ಅಧಿಕಾರಿಗಳ ಹೊಣೆ. ಕೊಡಬೇಕಾದ್ದಕ್ಕಿಂತ ಹೆಚ್ಚಾಗಿ ಕೆಲವು ಆಫೀಸರುಗಳು ಕೊಟ್ಟರೆ ಆ ಹೊಣೆಯನ್ನು ಅಧಿಕಾರಿಗಳು ಹೊತ್ತುಕೊಳ್ಳಬೇಕಾಗುತ್ತದೆ. ಯಾರೋ ಒಬ್ಬ ಬಡಪಾಯಿ ಐದಾರು ವರ್ಷಗಳ ಹಿಂದೆ ಪರಿಹಾರ ಇಷ್ಟು ಬರಬೇಕೆಂದು ತೆಗೆದುಕೊಂಡು ಖರ್ಚುಮಾಡಿದ್ದರೆ ನಾಲ್ಕೈದು ವರ್ಷವಾದ ಮೇಲೆ ಹತ್ತು ಸಾವಿರ ರೂಪಾಯಿ ಜಾಸ್ತಿ ಕೊಟ್ಟಿದೆ, ವರ್ಷಕ್ಕೆ ಎರಡು ಸಾವಿರ ರೂಪಾಯಿಗಳಂತೆ ಕೊಡಬೇಕು ಎಂದು ಹೇಳಿದರೆ ಗತಿಯೇನು ? ಅತ ಹೇಗೆ ಕೊಡುವುದು ? ಇದನ್ನು ಸರಕಾರದವರು ಪರ್ಯಾಲೋಚನೆ ಮಾಡಬೇಕು. ಆದಷ್ಟು ಬಹಳ ವಿತರಣೆಯಿಂದ ಕೆಲಸ ನಡೆಸಬೇಕು. ಒಂದುವೇಳೆ ಅಚಾತುರ್ಯದಿಂದ ಜಹಗೀರುದಾರರಿಗೆ ಹೆಚ್ಚು ಪರಿಹಾರ ಕೊಟ್ಟಿದ್ದರೆ ಅವರಿಂದ ವಾಪಸ್ಸು ತೆಗೆದುಕೊಳ್ಳಬೇಕಾಗಿ ಬಂದ ಸಂದರ್ಭದಲ್ಲಿ ಅಂದಿನ ಅವರ ಆರ್ಥಿಕ ಪರಿಸ್ಥಿತಿ ಹೇಗಿದೆಯೆಂಬುದನ್ನು ಗಮನಿಸದೆ ವಸೂಲು ಮಾಡುವುದು ಸಾಮಾಜಿಕ ನ್ಯಾಯವಲ್ಲ.

†ಶ್ರೀ ಡಿ. ರಾಜಗೋಪಾಲ್ (ವಿಧಾನ ಸಭಾಕ್ಷೇತ್ರ).—ಶ್ರೀ ಪಾನ್ ಅಂಜನಪ್ಪನವರು ಹೇಳಿದ್ದರಲ್ಲಿ ಸ್ವಲ್ಪ ನಿಜಾಂಶ, ಸತ್ಯ ಇದೆ. ಈಗ ಜಾರಿಯಲ್ಲಿರತಕ್ಕ ನಾನಾ ಕಾನೂನುಗಳನ್ನೆಲ್ಲಾ ಸೇರಿಸಿ ಒಂದೇ ಒಂದು ಕಾನೂನು ಇಡೀ ಮೈಸೂರು ಸಂಸ್ಥಾನಕ್ಕೆ ಅನುಕೂಲವಾಗುವಂತೆ ತರಬೇಕೆಂದು ಹೇಳಿದರು, ಅದು ನಿಜ, ಅದನ್ನು ಸರ್ಕಾರದವರು ಮಾಡಲೇಬೇಕಾಗಿದೆ. ಎರಡನೆಯದು ಮೈಸೂರು ರಾಜ್ಯ ಇಂಟಗ್ರೇಟ್ ಆಗಿ 13 ವರ್ಷವಾದರೂ ಇವತ್ತಿಗೂ ಕೂಡ ಹೈದ್ರಾಬಾದು ಜಾಗೀರ್ ರೆಗ್ಯುಲೇಷನ್ ಅಂಡ್ ಕಮ್ಯೂಟೇಷನ್ ಆಕ್ಟ್ ಅಂತ ಓದಬೇಕಾಗಿದೆ. ಒಂದು ತಿದ್ದುಪಡಿಯನ್ನು ತಂದು ಇದನ್ನೆಲ್ಲಾ ಸೇರಿಸಿ ಮೈಸೂರು ಜಾಗೀರ್ ರೆಗ್ಯುಲೇಷನ್ ಅಂಡ್ ಕಮ್ಯೂಟೇಷನ್ ಆಕ್ಟ್ ಅಂತ ಬದಲಾವಣೆ ಮಾಡಿದ್ದೇವೆ ಅಂತ ಹೇಳಬಹುದಾಗಿತ್ತು. ಈ ಕಡೆಗೆ ಸರ್ಕಾರದವರು ಗಮನ ಕೊಡದೇ ನಮ್ಮ ನಮ್ಮಲ್ಲೇ ಒಂದು ಪ್ರತ್ಯೇಕತೆಯ ಭಾವನೆ ಮೂಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ.

ಶ್ರೀ ಸಿ. ಬಂದೀಗೌಡ.—ಈ ಜಾಗೀರುಗಳಿಗೆ ಒಂದೊಂದು ಪ್ರದೇಶದಲ್ಲಿ ಒಂದೊಂದು ಅರ್ಥವಿದೆ. ಮನುಷ್ಯ ಎಂದರೆ ಎಲ್ಲರೂ ಒಂದೇ ಅಂತ ಹೇಳುವಹಾಗೆ ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಎಲ್ಲವನ್ನೂ ಒಂದೇ ಮಾಡುವುದಕ್ಕೆ ಕಷ್ಟ ಸಾಧ್ಯವಾಗುತ್ತದೆ, ಒಂದು ವೇಳೆ ಮಾಡಿದರೂ ಕೂಡ ಬಾಲಕೃಷ್ಣ ಗೌಡರಂಥವರು ನೂರೆಂಟು ತಪ್ಪುಗಳನ್ನು ಕಂಡುಹಿಡಿಯುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಡಿ. ರಾಜಗೋಪಾಲ್.—ಮಾನ್ಯ ಸದಸ್ಯರು ನಾನು ಹೇಳುತ್ತಾ ಇದ್ದುದನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ ಈ ಒಂದು ವಿವರಣೆಯನ್ನು ಕೊಡಬೇಕಾದ ಅವಶ್ಯಕತೆ ಇರಲಿಲ್ಲ. ಇತ್ತೀಚೆಗೆ ಬೇರೆ ಬೇರೆ ಪ್ರದೇಶಗಳಲ್ಲಿದ್ದ ಕೆಲವು ಕಾನೂನುಗಳನ್ನು ಕ್ರೋಢೀಕರಿಸಿ ಒಂದು ಬಿಲ್‌ನ್ನು ತಂದು ಇಲ್ಲಿ ಪಾಸ್ ಮಾಡಿದ್ದೇವೆ. ಲೇಬರ್ ಲಾಸ್ ಉದಾಹರಣೆಗೆ ತೆಗೆದುಕೊಳ್ಳಬಹುದು. ಎಲ್ಲವನ್ನೂ ಕ್ರೋಢಿಕರಿಸಿ ಒಂದು ಕಾನೂನನ್ನು ಮಾಡಿ ಇಂತಿಂಥ ಕಲಂಗಳು ಇಂತಿಂಥ ಪ್ರದೇಶಗಳಿಗೆ ಅನ್ವಯವಾಗುತ್ತದೆ ಎಂದು ಹೇಳಬಹುದು. ಅದೇನೂ ಒಂದು ಮಹತ್ಕಾರ್ಯವಲ್ಲ, ಚಂದ್ರಲೋಕಕ್ಕೆ ಹೋಗಬೇಕಾದ್ದು ಇಲ್ಲ. ಆ ರೀತಿ ಮಾಡದೇ ಇನ್ನೂ ಕೂಡ ನಾವು ಹೈದ್ರಾಬಾದಿನವರು, ನಾವು ಬೊಂಬಾಯಿನವರು, ನಾವು ಗುಲ್ಬರ್ಗಾದವರು ಅಂತ ಹೇಳಬೇಕಾದ ಪ್ರಮೇಯ ಇದೆ. ಇದನ್ನೆಲ್ಲಾ ಸರಿಪಡಿಸಬೇಕೆಂದು ಹೇಳಿ, ಆಡಳಿತಕ್ಕೆ ಅನುಕೂಲವಾಗುವ ಹಾಗೆ 3 ತಿದ್ದುಪಡಿಗಳನ್ನು ತಂದಿದ್ದಾರೆ, ಇದು ಕ್ಲಿಷ್ಟವಾದ ಕಾನೂನಲ್ಲಿ ಪಾಸ್ ಮಾಡಬಹುದು ಎಂದು ಹೇಳುತ್ತೇನೆ.

† Smt. M. R. LAKSHAMMA (Graduates' Constituency).—Sir, I would like to offer a few comments on the Hyderabad Jagirs (Commutation) Regulation (Mysore Amendment) Bill, 1969.

Sir, we all know that Hyderabad, originally the domain of Nawabs, was a conglomeration of very many Jagirs and these Jagirs had to be later on adjusted so as to fit in the Republic of India and conform to the Socialistic pattern. Accordingly, certain changes have taken place and the Jagir Administrator seems to have been appointed and he gave various awards in respect of various kinds of Jagirs taking into consideration various arrears like hissa, sarkar, chowth, Makasa, dharpatti and other dues. I do not want to go into these. As was expressed by the hon. Member Sri Anjanappa, we are ignorant of the origin of Jagirs.

But one point I want to raise on this occasion, continuing the arguments of hon. Member Dr. Bandi Gowda, I would reiterare that while revising the order of the Jagir Administrator, the Government of course, should have a right of appeal but the Government should have the right of appeal within a certain number of years; it should not have unlimited right of appeal. After the Jagirdar expends money for his various expenditures and has no other means of paying this sum, the Government should not come in and demand the excess of money that was paid to the Jagirdar or his successor; it would be a hardship. We all have passed in this House Acts validating invalidation of various Acts. That is to say, Government itself want certain amounts which were due to them rightly or wrongly; and we have seen that bills relating to the validation of certain levy and collection of tax have been passed so that those collected amounts could accrue to the Government, though it was held by the High Court that such payments were not regular. Then the Legislature came to the help of the Government and saw to it that these amounts were credited to the Government. In other words, the Government does not want to lose the money that is due to the Government. There should not be double standards in the case of the Government as well as the subject. The praja should have the same privileges as the Government there should be no double standards. So the Jagirdar also should not be made to pay monies much later when he is not in a position to pay and when he has expended long ago the various monies that were given to him, not at his instance, but by the award of the Jagir Administrator. I would like to request the Government to view this matter sympathetically.

In respect of the other payments of Rs. 25 in the case of various persons, whose list is given in the Table below the proposed new Section 10 (A), it is said :

" (1) Where the age of the person, whether male or female, was not less than 60 years on the 1st day of April 1960,

(2) Where the age of the person was less than 60 years on the 1st day of April, 1960

(i) in the case of a male, or an unmarried woman, if the person is incapable of earning a livelihood on account of being blind, deaf, dumb and mute, mentally deranged or crippled or paralytic.

From the 1st April 1960, till the date of the death of the person.

In these hard cases, I think the Government will see to it that this payment of Rs. 25 per mensem is not only expedited but the cases are considered sympathetically and not rigidly according to certain rules because humanity is much more important and humane attitude is much more fitting from a Government of the nature of Mysore than rigid adherence to rules.

With these few words, I welcome this amendment and I hope it will conform to one uniform pattern.

SRI H. V. KOUJALGI.—Since the House has been pleased to accept the amendment except for one suggestion that a comprehensive Bill ought to have been brought, I have not much to reply. Since the existing laws are different in different areas, it was found difficult to bring a uniform Bill.

MR. DEPUTY CHAIRMAN.—The question is:

"That the Hyderabad Jagirs (Commutation) Regulation (Mysore Amendment) Bill, 1967, as passed by the Legislative Assembly, be taken into consideration."

The motion was adopted.

V-32 N69
N70-42-8-16
(B) 5093

CLAUSES

MR. DEPUTY CHAIRMAN.—The question is:

"That clauses 2 to 8, both inclusive do stand part of the Bill."

The motion was adopted.

Clauses 2 to 8, both inclusive, were added to the Bill.

MR. DEPUTY CHAIRMAN.—The question is:

That clause 1, the long title and Enacting formula do stand part of the Bill.

The motion was adopted.

Clause 1, the long title and Enacting formula were added to the Bill.

Motion to pass

Sri H. V. KOUJALGI.—I move:

"That the Hyderabad Jagirs (Commutation) Regulation (Mysore Amendment) Bill 1967, as passed by the Ligislative Assembly, be passed."

Mr. DEPUTY CHAIRMAN.—The question is:

"That the Hyderabad Jagirs (Commutation) Regulation (Mysore Amendment) Bill, 1967, as passed by the Legislative Assembly' be passed.

The motion was adopted.

Mysore Inams Abolition Laws (Amendment) Bill 1968 (as passed by the Legislative Assembly)

Motion to consider.

Sri H. V. KOUJALGI.—I move:

"That the Mysore Inams Abolition Laws (Amendment) Bill, 1968, as passed by the Legislative Assembly, be taken into consideration."

Mr. DEPUTY CHAIRMAN.—Motion moved:

"That the Mysore Inams Abolition Laws (Amendment) Bill 1968, as passed by the Legislative Assembly, be taken into consideration."

Sri H. V. KOUJALGI.—In Mysore State there are some Acts abolishing the inams—Psrsonal and Miscellaneous Abolition of Inams Act No. 1 of 1955 and also Abolition of Religious and Charitable Inams Abolition Act 18 of 1955. In these two Acts, during implementation some difficulties have been experienced and therefore the amendment is brought forward. The amendments in these two Acts are one and the same. That is why the amendments, though they concern two Acts, are brought in one and the same Bill.

In Clause 1 of the Act I of 1955, it may be noted that in Mysore and other districts there are 60,000 minor inam holdings. It is rather difficult to mention them all in the Bill. So, we have provided that all these inams should be enumerated in a separate notification and that should be treated as a part of this Bill. It is only for the sake of convenience this has been done. So it is proposed to amend the section suitably.

Sub-section 2 of Section 10 of the Act provides for settling th rights of occupation. The amendment provides for making application

within a specified time. As it is, no time limit is prescribed for the inamdar to apply to the Government for free grant of his land. He may apply or may not apply. As no time limit is prescribed, the Act cannot be implemented within a certain period or all these inams cannot be abolished and the lands cannot be regranted to the persons concerned. Since no time is prescribed in the Act, some time limit is to be fixed by notification.

Under sub-clause 3, it is proposed to add a new section. The Deputy Commissioner determines the total compensation payable for an inam. It is found that in some cases excess compensations are allowed and the courts have held that Government cannot prefer an appeal. Hence a new section 20A is proposed empowering the Deputy Comissioner to revise the amount of compensation determined by him, either by increasing or decreasing it and to recover excess compensation paid as arrears of land revenue. In many cases inadvertantly excess payments have been made and the remedy is to review the cases and recover the excess. A new section 27A has also been proposed conferring on the Divisional Commissioner the power of Superintendence, giving guidance to the Deputy Commissioner and also cancel or revise any order of the Deputy Commissioner whether a particular area is a part of an inam or not. The new sub-section 27B gives revisional power to the Government to cancel or revise any order of the Divisional Commissioner.

These are the powers found necessary in order to avoid any misuse of the powers of the Deputy Commissioners. At present the Government cannot appeal against the orders of Deputy Commissioner even though such orders are prejudicial to the Government. It is provided for the sake of safeguarding the interests of the Government against the arbitrary payments made by the Deputy Commissioners. Our experience has shown that in many cases the Deputy Commissioners have paid excess amounts as compensation and there is no remedy to go in appeal or review or recover the amount. In order to avoid such misuse, these provisions have been brought by way of amendments.

Mr. DEPUTY CHAIRMAN.—Now the House will rice for Tea and re-assemble at 4-30 P.M.

The House rose for Tea at Four of the clock and re-assembled at Thirty five minutes past Four of the clock

---

[MR. DEPUTY CHAIRMAN in the Chair]

Sri H. V. KOUJALGI.—Sir, I was at the close of my speech and I was saying that whenever any Deputy Commissioner awards more than the compensation which is unreasonable or which cannot be justified,

(SRI H. V. KOUJALGI)

there was no remedy for the Government to go in appeal. So, an appeal has been provided. Not only that, but the Divisional Commissioner can send for the records and give guidance to the Deputy Commissioner and also revise the order or sometimes cancel the order if it is not legal in his opinion. I stated in the beginning that similar amendments have been sought to be made in the Mysore Act 18 of 1955 *i.e.* Mysore Religious and Charitable Inams Abolition Act 1955.

Another thing is that under section 14 so many times assessment was to be paid for getting land regranted. But assessment of what year? It was not made clear in the original Act which was passed in 1954. So, while calculating the amount, the assessment prevailing in the year 1953-54 will have to be taken into consideration. So, it will be so many times the assessment in the year 1953-54. That lacuna was there and that is also sought to be removed. With these observations, I request the House to pass this Bill.

† ಶ್ರೀ ವಿ. ವೆಂಕಟಪ್ಪ (ವಿಧಾನಸಭಾ ಕ್ಷೇತ್ರ).—ಮಾನ್ಯ ಅಧ್ಯಕ್ಷರೇ, ಈಗ ಹೈದರಾಬಾದ್ ಜಹಗೀರ್ ತಿದ್ದುಪಡಿ ಮಸೂದೆಯ ಬಗ್ಗೆ ಮಾತನಾಡುವಾಗ ಮಾನ್ಯ ಶ್ರೀ ಬಂದೀಗೌಡರು ಏನು ಹೇಳಿದರೋ ಅದರ ವಿಷಯದಲ್ಲಿ ನಾನು ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಸೆಕ್ಷನ್ 20(A) ನಲ್ಲಿ ಈ ರೀತಿ ಹೇಳಿದೆ ;

> 20 A. Review by the Deputy Commissioner.—(1) "If at any time after the determination of total compensation under Section 20, the Deputy Commissioner is satisfied that the amount so determined was not correctly determined and requires to be revised with reference to any new and important matter which has since come to his notice, or on account of some mistake or error apparent on the face of the record or for any other sufficient reason, he may, *Suo motu* revise the amount of compensation determined by him under Section 20, either by increasing or decreasing it"

ಇನಾಂ ಅಬಾಲಿಷನ್ ಆಕ್ಟ್ ಪ್ರಕಾರ 1959ನೇ ಇಸವಿಯಲ್ಲಿ ಅನೇಕ ಇನಾಂ ಗ್ರಾಮಗಳು ಗೌರ್ನಮೆಂಟ್‌ನಲ್ಲಿ ವೆಸ್ಟ್ ಆದುವು. ಅದಾದಮೇಲೆ ಕೆಲವು ದಿವಸಗಳಲ್ಲಿ ಅಂದರೆ, 1960-61ರಲ್ಲಿ ಕಂಪನ್ಸೇಷನ್ನನ್ನು ಕೆಲವರಿಗೆ ಕೊಟ್ಟಿದ್ದಾರೆ. ಈಗ ಮಂತ್ರಿಗಳು ಹೇಳಿದಹಾಗೆ ಕಾರಣಾಂತರ ದಿಂದ ಹೆಚ್ಚು ಕಂಪನ್ಸೇಷನ್ನನ್ನು ಕೊಟ್ಟಿದ್ದಾರೆ. ಅದು ಡೆಪ್ಯುಟಿ ಕಮಿಷನರ್ ಗಮನಕ್ಕೆ ಬಂದರೆ ಅವರು ತಾವಾಗಿಯೇ ಆ ವಿಷಯದಲ್ಲಿ ಕ್ರಮ ತೆಗೆದುಕೊಂಡು ಹಣವನ್ನು ಹಿಂದಕ್ಕೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದಾರೆಂದು ಹೇಳಿದ್ದಾರೆ. ಈಗ ಮಾನ್ಯ ಶ್ರೀ ಬಂದಿಗೌಡರು ಹೇಳಿದಹಾಗೆ ಇದು ಯಾವ ಇನಾಂಗೆ ಅಪ್ಲೈ ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಈಗ ತಾವು 60 ಸಾವಿರ ಮೈನರ್ ಇನಾಂಗಳು ಇವೆಯೆಂದು ಹೇಳುತ್ತಿದ್ದೀರಿ. ಅದಲ್ಲದೆ ಈಗ ಇನಾಂ ಗ್ರಾಮಗಳಿಗೂ ಇದು ಅಪ್ಲೈಯಾಗುತ್ತದೆಂದು ಹೇಳುವುದಾದರೆ ಈಗಾಗಲೇ ಹೆಚ್ಚಿಗೆ ಕೊಟ್ಟಿರುವವರಿಂದ ವಸೂಲುಮಾಡುವುದಕ್ಕೆ ಅನೇಕ ಸಂದರ್ಭಗಳಲ್ಲಿ ಒಂದುವೇಳೆ ಆ ರೀತಿ ಇದ್ದರೆ ಅದಕ್ಕೆ ಅವಕಾಶವಿಲ್ಲವೆಂದು ತೋರುತ್ತದೆ. ಅದರ ಬಗ್ಗೆ ಏನು ಮಾಡುತ್ತಾರೆಂಬುದು ಗೊತ್ತಾಗುವುದಿಲ್ಲ. ಇದರಲ್ಲಿ ಯಾರು ತಪ್ಪಾಗಿ ಕೊಟ್ಟರೋ ಅವರಿಂದ ವಸೂಲುಮಾಡುವುದಕ್ಕೆ ಪ್ರಯತ್ನ ಮಾಡಬೇಕು, ಯಾಕೆಂದರೆ, ಯಾರು ತೆಗೆದುಕೊಂಡಿದ್ದಾರೋ ಅವರಲ್ಲಿ ಅನೇಕರು ಇವತ್ತಿನ ದಿವಸ ಇಲ್ಲ. ನನಗೆ ಗೊತ್ತಿದೆ. ಕೆಲವರು ಬಹಳ ಮುದುಕರೂ ಇದ್ದರು. ಅವರು ಹೆಚ್ಚಿಗೆ ತೆಗೆದುಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅವರು ಹೋಗಿಬಿಟ್ಟಿದ್ದಾರೆ. ಈಗ ಕನ್ನಮಂಗಳ ಗ್ರಾಮಕ್ಕೆ 11 ಜನರು ವೃತ್ತಿದಾರರು ಇದ್ದಾರೆ. ಅದರಲ್ಲಿ 6 ವೃತ್ತಿ ಇದ್ದವರೂ

ಕೊಂಡುಕೊಂಡಿದ್ದಾರೆ. ಅವರು ಈಗ ಹೋಗಿಬಿಟ್ಟಿದ್ದಾರೆ. ಒಂದು ವೇಳೆ ಅವರಿಗೆ ಏನಾದರೂ ಹೆಚ್ಚು ಕೊಟ್ಟಿದ್ದರೆ, ಯಾವ ರೀತಿಯಿಂದ ಅದನ್ನು ತೆಗೆದುಕೊಳ್ಳುತ್ತೀರಿ ? ಅವರಿಗೆ ಜಮೀನು ಇಲ್ಲ, ಯಾವುದೂ ಇಲ್ಲ. ಇನ್ನು ಕೆಲವರು ಒಂದು ವೃತ್ತಿ, ಎರಡು ವೃತ್ತಿ ಇದ್ದವರು ಬಹಳ ಹಳಬರು ಇದ್ದರು. ಅಂಥವರ ಮೇಲೆ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ? ತಾವಾಗಿ ಯಾರು ತಪ್ಪನ್ನು ಮಾಡಿದರೋ, ಆ ಅಧಿಕಾರಿಯ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡದೆ, ಯಾರು ತಮಗೆ ಗೊತ್ತಿಲ್ಲದೆ ಸರ್ಕಾರದವರು ಕೊಟ್ಟಂತಹ ಹಣ, ನ್ಯಾಯವಾದುದು ಎಂದು ಹೇಳಿ ತೆಗೆದುಕೊಂಡಿದ್ದಾರೋ, ಅಂಥವರಿಂದ ಹೇಗೆ ಹಣವನ್ನು ವಸೂಲು ಮಾಡುವುದು ಎಂದು ಗೊತ್ತಾಗುವುದಿಲ್ಲ. ಇಲ್ಲಿ ಏನು ಹೇಳುತ್ತಾರೆಂದರೆ, Against any decision of the Deputy Commissioner under Section 10 or Section 11, the Government may within six months from the date of commencement of the Mysore Inams Abolition Laws (Amendment) Act, 1968 or from the date of the decision, whichever is later, and any person aggrieved by such decision may, within thirty days from the said date, appeal to the prescribed authority and the decision of the prescribed authority shall be final. ಆರು ತಿಂಗಳು ಅಂದರೆ, 1968 ರಿಂದ ಲೆಕ್ಕ ಹಾಕಿದರೂ 6 ತಿಂಗಳು ಕಳೆದು ಹೋಗಿದೆ. ಹಿಂದಿನ ಆಕ್ಟ್ ತೆಗೆದುಕೊಂಡರೆ, ವರ್ಷದ ಮೇಲೆ ಹೋಗಿದೆ. ಇದನ್ನು ಹೇಗೆ ಮಾಡುತ್ತೀರಿ ಎಂದು ಗೊತ್ತಾಗಿಲ್ಲ. ಕಡಿಮೆ ಬಂದಿದೆ ಎಂದು ಯಾರಾದರೂ ಅಗ್ರೀವ್‌ಡ್ ಪಾರ್ಟಿ ಇದ್ದರೆ, ಡಿಸಿಷನ್ ಆದ 30 ದಿನಗಳಲ್ಲಿ ಅಪೀಲ್ ಮಾಡಬೇಕೆಂದು ಇದೆ. ಅವೆಲ್ಲಾ ಆದನಂತರ ಹೈಕೋರ್ಟಿಗೆ ಹೋಗತಕ್ಕ ಸಂದರ್ಭ ಬರುತ್ತದೆ. ಇಲ್ಲಿ ಹೀಗೆ ಹೇಳಿದ್ದಾರೆ:

"(ii) in respect of lands in such inams which vest in the State on or after the date of commencement of the Mysore Inams Abolition Laws (Amendment) Act, 1968, within six years from the date of vesting of the inam concerned".

60,000 ಇನಾಂಸ್ ಇದೆಯೆಂದು ಹೇಳುತ್ತಿದ್ದಾರೆ. ಅವರೆಲ್ಲಾ 1969ನೇ ಇಸವಿಯಿಂದ ಆರು ವರ್ಷದೊಳಗೆ ಅಪೀಲು ಹಾಕಬೇಕಾಗುತ್ತದೋ ಅಥವಾ ಯಾವಾಗ ಹಾಕಬೇಕು ? ಇನ್ನೊಂದು ಕಡೆ ಹೇಳುತ್ತಾರೆ :

"(ii) in respect of lands in such inams which vest in the State on or after the date of commencement of the Mysore Inams Abolition Laws (Amendment) Act, 1968, within six years from the date of vesting of the inam concerned.

(i) In respect of lands which have vested in the State before the date of commencement of the Mysore Inams Abolition Laws (Amendment) Act, 1968 within such period as may be prescribed"

ಇದು ಯಾವುದಕ್ಕೆ ಪ್ರಿಸ್ಕ್ರೈಬ್ ಮಾಡುತ್ತಾರೆ ? ಇದರಲ್ಲಿ ಸ್ವಲ್ಪಮಟ್ಟಿಗೆ ಅರ್ಥವಾಗದೆ ಇರತಕ್ಕ ಭಾಗ ಬಹಳ ಇದೆ. ಇದರ ಪ್ರಕಾರ ಇದುವರೆಗೂ ಡೆಪ್ಯೂಟಿ ಕಮಿಷನರ್ ಆರ್ಡರ್ ಮಾಡಿದ ಮೇಲೆ ಟ್ರಿಬ್ಯೂನಲ್‌ಗೆ ಅಪೀಲ್ ಮಾಡುವುದಕ್ಕೆ ಅವಕಾಶ ಇತ್ತು. ಈಗ, ಇದರ ಪ್ರಕಾರ ಡೆಪ್ಯೂಟಿ ಕಮಿಷನರದು ಆದಮೇಲೆ ಡಿವಿಜನಲ್ ಕಮಿಶನರ್, ಆಮೇಲೆ ಸರ್ಕಾರಕ್ಕೆ ಹಾಕಿಕೊಳ್ಳುವುದಕ್ಕೆ ಅವಕಾಶ ಇದೆ. ಅದು ಏನೋ ಒಳ್ಳೇಯದು. ಆದರೆ ಹೈಕೋರ್ಟಿಗೆ ಹಾಕತಕ್ಕ ಅಧಿಕಾರ ತೆಗೆದುಬಿಟ್ಟಿದ್ದಾರೋ, ಇದೆಯೋ ಎಂಬುದು ಗೊತ್ತಿಲ್ಲ. ಸರ್ಕಾರದ್ದೇ ಕೊನೆಯ ತೀರ್ಮಾನ ಎನ್ನುವುದಾದರೆ, ಬಹಳ ಅನ್ಯಾಯವಾಗುತ್ತದೆ. ಅವರಿಗೆ ಅಪೀಲ್ ಹಾಕಿಕೊಂಡರೆ ಸರಿಯಾದ ತೀರ್ಪು ಕೊಡುತ್ತಾರೆಂದು ಹೇಳುವುದು ಕಷ್ಟವಾಗುತ್ತದೆ. ಆದ್ದರಿಂದ ಹೈಕೋರ್ಟಿಗೂ ಅಪೀಲ್ ಮಾಡತಕ್ಕ ಅವಕಾಶ ಇರತಕ್ಕದ್ದು ನ್ಯಾಯವೆಂದು ಹೇಳಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಸೂರ್ಯನಾರಾಯಣ ಅಡಿಗ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಮಾನ್ಯ ಸಭಾಪತಿಯವರೇ, ಮೈಸೂರು ಇನಾಂ ಅಬಾಲಿಷನ್ ಅಮೆಂಡ್‌ಮೆಂಟ್ 1968 ವಿಧೇಯಕ ನಮ್ಮ ಮುಂದೆ ಇಟ್ಟಿದ್ದಾರೆ. ಈಗತಾನೆ ಮಾತನಾಡಿದ ಮಾನ್ಯ ವೆಂಕಟಪ್ಪನವರು ಹೈಕೋರ್ಟಿಗೆ ಹೋಗಲು ಇರುವಂತಹ ಪ್ರೊವಿಜನ್ಸ್‌ನ್ನು ಮೊಟಕು ಮಾಡಬಾರದು ಎಂದು ಸಲಹೆ ಕೊಟ್ಟಿದ್ದಾರೆ. ಅದನ್ನು ಸರ್ಕಾರ ಇಲ್ಲಿ ಮೊಟಕು ಮಾಡಿದ ಹಾಗೆ ಕಂಡುಬರುವುದಿಲ್ಲ. ಸೆಕ್ಷನ್ 31ರಲ್ಲಿ ಆ ಅಧಿಕಾರವನ್ನು ಇಟ್ಟಿದ್ದಾರೆ. ಕಾನೂನಿಗೆ ವಿರುದ್ಧವಾಗಿ ಯಾವುದಾದರೂ ಮಾಡಿದರೆ, ಆಗ ಹೈಕೋರ್ಟಿಗೆ ಹೋಗ ತಕ್ಕ ಅವಕಾಶ ಇದೆ. ಸೆಕ್ಷನ್ 28 ರಲ್ಲಿ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟದ್ದು ಒಳ್ಳೆಯದು. ಆದರೆ, ಅದನ್ನು ದುರುಪಯೋಗ ಮಾಡುವುದಕ್ಕೆ ಅವಕಾಶ ಕೊಟ್ಟ ಹಾಗೆಯೂ ಆಗುತ್ತದೆ. ಕೆಲವರಿಗೆ ಬಹಳ ಕಡಿಮೆ ಕೊಟ್ಟಿದೆ, ಅನ್ಯಾಯವಾಗಿದೆ, ನ್ಯಾಯ ದೊರಕಿಸಿಕೊಡಬೇಕು ಎಂದು ಹಿಂದಿನಿಗಿಂತ ಹೆಚ್ಚಿಗೆ ಹಣ ಪಡೆದುಕೊಳ್ಳಬಹುದು. ಹಿಂದೆ ಕೊಟ್ಟದ್ದು ಹೆಚ್ಚಾಗಿದೆ ಎಂದು ಕಡಿಮೆ ಕೂಡ ಕೊಡಿಸಬಹುದು. ಇದು ಬಂದ ಮೇಲೆ ಪ್ರತಿಯೊಬ್ಬರಿಗೂ ನೋಟೀಸ್ ಹೊರಡುತ್ತದೆ. ಅವರು ಅಲ್ಲಿ ಬಂದು ಅಲ್ಲಿ ಒಂದು ರೀತಿಯ ಅನ್‌ಅಫೀಷಿಯಲ್ ಕಾಂಪೌಂಡಿಂಗ್ ಆಗುತ್ತದೆ. ಆದ್ದರಿಂದ ಇಂಥ ಒಂದು ಅಕ್ರಮ ವ್ಯವಹಾರವನ್ನು ಮಾಡುವುದಕ್ಕೆ ನಾವು ಹೆಚ್ಚಿನ ಅನುಕೂಲವನ್ನು ಒದಗಿಸಿಕೊಟ್ಟ ಹಾಗೆ ಆಗುತ್ತದೆ. ಅಧಿಕಾರಿ ಕೊಟ್ಟಿದ್ದು ಜಾಸ್ತಿಯಾಗಿದೆ, ಇನ್ನೂ ಕಡಿಮೆ ಮಾಡಿ ಎಂದೂ ಹೇಳಬಹುದು. ಅದೇ ರೀತಿ ಸರ್ಕಾರದವರು ದರೋಡೆ ಮಾಡುವ ಅವಕಾಶವೂ ಇದೆ. ಅಧಿಕಾರಿ ಹೇಳುತ್ತಾನೆ, ನಮಗೆ ಏನಾದರೂ ಕೊಡುತ್ತೀರಾ, ಹಾಗಿದ್ದರೆ, ನಿಮಗೆ ಹೆಚ್ಚು ಸಿಗುವಂತೆ ಮಾಡುತ್ತೇವೆಂದು. ಈ ರೀತಿ ದುರುಪಯೋಗ ಮಾಡುವುದಕ್ಕೂ ಅವಕಾಶ ಇದೆ. ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತದಲ್ಲ ? ಏನು ಮಾಡುವುದು ?

ಇದೇ ರೀತಿ ಒಬ್ಬರಿಗೆ ಅನ್ಯಾಯವಾಗಿದ್ದರೆ ಅವರಿಗೆ ನ್ಯಾಯವನ್ನು ಒದಗಿಸಬೇಕೆಂಬ ಉದ್ದೇಶದಿಂದ ಹೊರಟಾಗ ಅದು ದುರುಪಯೋಗವಾಗುವ ಸಂಭವ ಕಂಡುಬಂದರೆ ಅದಕ್ಕೆ ಏನು ಮಾಡಬೇಕು ಎನ್ನುವಂಥಾದ್ದನ್ನು ಕುರಿತು ಸರ್ಕಾರ ಆಲೋಚನೆ ಮಾಡಬೇಕಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನೊಂದು ವಿಚಾರ. ಲ್ಯಾಂಡ್ ಅಕ್ವಿಜಿಷನ್ ಆದಾಗ ಸರ್ಕಾರದವರು ಕಾಂಪೆನ್‌ಸೇಷನ್ ಕೊಡುವಾಗ ಏನಾದರೂ ಹೆಚ್ಚು ಕಾಂಪೆನ್‌ಸೇಷನ್ ಕೊಟ್ಟರೆ, ಕಡಿಮೆ ಕಾಂಪನ್‌ಸೇಷನ್ ಕೊಟ್ಟರೆ ಅದನ್ನು ಹೆಚ್ಚು ಕಡಿಮೆ ಮಾಡುವಂತಹ ಪ್ರಾವಿಜನ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನಲ್ಲಿ ಇದ್ದಹಾಗೆ ನೆನಪು ಇಲ್ಲ. ಈಗ ಅದನ್ನು ಹೊಸದಾಗಿ ಏತಕ್ಕೆ ತರಬೇಕಾಯಿತು ಎನ್ನುವುದು ನನಗೆ ಗೊತ್ತಾಗಲಿಲ್ಲ. ಮಾನ್ಯ ಮಂತ್ರಿಗಳು ಈ ಒಂದು ಸಂದೇಹವನ್ನು ನಿವಾರಿಸುತ್ತಾರೆಂದು ನಾನು ನಂಬಿದ್ದೇನೆ. ಈ ಮಸೂದೆಯನ್ನು ತಂದಿರುವುದಕ್ಕೆ ಉದ್ದೇಶ ಬಹಳ ಘನವಾದದ್ದು. ಇದಕ್ಕೆ ನಾನು ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ. ನಾನು ಹೇಳಿದಂತಹ ಸಂದೇಹದ ನಿವಾರಣೆಯ ಬಗ್ಗೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕೆಂದು ಹೇಳಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬಂದೀಗೌಡ.—ಮಾನ್ಯ ಸಭಾಪತಿಗಳೇ, ಶ್ರೀಮಾನ್ ಸೂರ್ಯನಾರಾಯಣ ಅಡಿಗರು ಅವರು ಹೇಳಿದ್ದರಲ್ಲಿ ಸತ್ಯ ಇದೆ. ಮಾನ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸುತ್ತಾ ಕೆಲವು ಸಂದರ್ಭಗಳಲ್ಲಿ ಅಧಿಕಾರ ದುರುಪಯೋಗವಾಗಿ ಇನಾಂದಾರರಿಗೆ ಕಾಂಪೆನ್‌ಸೇಷನ್ ಕೊಡುವ ಸಂದರ್ಭದಲ್ಲಿ ಕಾಂಪೆನ್‌ಸೇಷನ್ ಹೆಚ್ಚು ಅಥವಾ ಕಡಿಮೆ ಆಗಬಹುದು ಎಂದು ತಿಳಿಸಿದರು. ಒಂದುವೇಳೆ ಜಿಲ್ಲಾಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಸರ್ಕಾರಕ್ಕೆ ನಷ್ಟವಾಗುವಂತೆ ವರ್ತಿಸಿದರೆ ಆಗ ಸರ್ಕಾರಕ್ಕೆ ಆಗತಕ್ಕಂಥ ನಷ್ಟಕ್ಕೆ ಪರಿಹಾರವನ್ನು ಪಡೆದಂತಹ ಇನಾಂದಾರ ಗುರಿಯಾಗಬಾರದು. ಅಧಿಕಾರಿಗಳು ತಮ್ಮ ಸ್ಥಾನವನ್ನು ದುರುಪಯೋಗಪಡಿಸಿಕೊಂಡರೆ, ಅದು ಸಾಬೀತು ಆಗುವುದಾದರೆ ಇಡೀ ಹಣವನ್ನು ಅಧಿಕಾರಿಗಳಿಂದ ವಸೂಲು ಮಾಡುವುದಕ್ಕೆ ವ್ಯವಸ್ಥೆಯಾಗಬೇಕು.

ಎರಡನೆಯದು. ಈ ಮಸೂದೆಯ ಸೆಕ್ಷನ್ (20 ಎ) ನಲ್ಲಿ " If at any time after the determination of total compensation under Section 20, the Deputy Commissioner is satisfied that the amount so determined was not correctly determined and requires to be revised with reference to any new important matter which has sine come to his notice ಎಂದು ಹೇಳಿದ್ದಾರೆ. ಇದರಲ್ಲಿ ಒಂದು ಕಾಲ ಮಿತಿ ಇಲ್ಲದೆ ಜಿಲ್ಲಾಧಿಕಾರಿಗಳು ಅವರಿಗೆ ಯಾವಾಗ ಮನಸ್ಸು ಬಂದರೆ

ಆಗ ಇದನ್ನು ಮಾಡಬಹುದು ಎನ್ನುವ ಅವಕಾಶ ಇದೆ. ಇದು ಸರಿಯಲ್ಲ. ಆದ್ದರಿಂದ ಇದಕ್ಕೆ ಒಂದು ಕಾಲ ಮಿತಿಯನ್ನು ಹಾಕಬೇಕು. 1955ನೇ ಇಸವಿಯಲ್ಲಿ ಕೊಟ್ಟಂಥಾ ಪರಿಹಾರಕ್ಕೆ 1970ನೇ ಇಸವಿಯಲ್ಲಿ ಅದನ್ನು ಪುನರ್ವಿಮರ್ಶೆ ಮಾಡಿ ಹೆಚ್ಚು ಕೊಟ್ಟಿದ್ದರೆ ಅದನ್ನು ಕಡಿಮೆ ಮಾಡುವುದಕ್ಕಾಗಲೀ, ಕಡಿಮೆ ಕೊಟ್ಟಿದ್ದರೆ ಅದನ್ನು ಹೆಚ್ಚು ಮಾಡುವುದಕ್ಕಾಗಲೀ ಒಂದು ಅವಕಾಶ ಇದೆ. ಇದು ಈ ರೀತಿ ಇರುವುದರಿಂದ ಈ ವಿಚಾರದಲ್ಲಿ ದುರುಪಯೋಗವಾಗುತ್ತದೆ ಎನ್ನುವುದರಲ್ಲಿ ಯಾರಿಗೂ ಸಂಶಯವಿಲ್ಲ. ಸರ್ಕಾರದವರು ಇದನ್ನು ಗಮನದಲ್ಲಿಟ್ಟುಕೊಂಡು ಅಟ್ ಎನಿ ಟೈಮ್ ಎನ್ನುವುದನ್ನು ತೆಗೆದುಹಾಕಿ ಒಂದು ಸೂಕ್ತ ಕಾಲವನ್ನು ನಿಗದಿ ಮಾಡಬೇಕು ಎಂದು ಹೇಳಿ ನಾನು ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಮಾನ್ಯ ಸಭಾಪತಿಯವರೇ, ಈಗ ಈ ಸಭೆಯಮುಂದೆ ಮಂಡಿಸಿರತಕ್ಕ ಇನಾಂ ಆಬಾಲಿಷನ್ ತಿದ್ದುಪಡಿ ಮಸೂದೆಯ ವಿಷಯದಲ್ಲಿ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಇದರಲ್ಲಿ ನನಗೆ ಕೆಲವು ಸಂಶಯಗಳು ಇವೆ. ಅವುಗಳ ಬಗ್ಗೆ ಮಾತ್ರ ನಾನು ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಸರ್ಕಾರ ನ್ಯಾಯತಕ್ಕಡಿಯನ್ನು ಹಿಡಿದುಕೊಂಡಿರುತ್ತದೆ. ಆದ್ದರಿಂದ ನ್ಯಾಯ ತೀರ್ಮಾನವಾಗಬೇಕಾದರೆ ಒಂದು ಸರಿಯಾದ ಪರಿಸ್ಥಿತಿ ಇರಬೇಕು. ಸರ್ಕಾರದವರು ಕೊಟ್ಟಂತಹ ಒಂದು ತೀರ್ಮಾನಕ್ಕೆ ಯಾವ ಅಕ್ಷೇಪಣೆಯೂ ಇರಬಾರದು. ಈಗ ಈ ಮಸೂದೆಯ ಪ್ರಕಾರ ಇನಾಂದಾರರಿಗೆ ಕಾಂಪೆನ್‌ಸೇಷನ್ ಕೊಡುವ ಸಂದರ್ಭದಲ್ಲಿ ಡೆಪ್ಯುಟಿಕಮೀಷನರು ಯಾವ ಒಂದು ಆಧಾರದಮೇಲೆ ತೀರ್ಮಾನ ಕೊಡುತ್ತಾರೆ ಎಂದರೆ ತಮ್ಮ ಕೈಕೆಳಗಿನ ಅಧಿಕಾರಿಗಳ ಹೇಳಿಕೆಯ ಮೇಲೆ ಅವರು ಕಾಂಪೆನ್‌ಸೇಷನ್ ಫಿಕ್ಸ್ ಮಾಡುತ್ತಾರೆ. ಶ್ರೀಮಾನ್ ಬಂದೀಗೌಡರು ಕಾಂಪೆನ್‌ಸೇಷನ್ ಫಿಕ್ಸ್ ಮಾಡುವ ವಿಷಯದಲ್ಲಿ ಅಧಿಕಾರಿಗಳು ತಪ್ಪು ಮಾಡಿದ್ದರೆ ಅವರಿಗೆ ದಂಡವನ್ನು ವಿಧಿಸಬೇಕು ಎಂದು ಹೇಳಿದರು. ಅಂಥಾ ಸಂದರ್ಭದಲ್ಲಿ ಅಧಿಕಾರಿಯು ತಪ್ಪು ಮಾಡಿದ್ದರೆ ಅವನಿಗೆ ದಂಡವನ್ನು ವಿಧಿಸುವುದು ಸರಿ. ಆದರೆ ಅಧಿಕಾರಿ ನಿರಪರಾಧಿಯಾಗಿದ್ದರೆ ಅಂಥವರಿಗೆ ದಂಡವನ್ನು ವಿಧಿಸುವುದು ಸರಿಕಾಣಿಸುವುದಿಲ್ಲ. ಆದ್ದರಿಂದ ಇದನ್ನು ಸ್ವಲ್ಪ ವಿಚಾರ ಮಾಡಬೇಕು.

ಎರಡನೆಯದಾಗಿ ಒಂದು ಸಾರಿ ಇನಾಂದಾರನಿಗೆ ಕಾಂಪೆನ್‌ಸೇಷನ್ ಕೊಟ್ಟಮೇಲೆ ಅದನ್ನು ಹೆಚ್ಚಿನ ರೀತಿಯಲ್ಲಿ ರಿವೈಜ್ ಮಾಡುವುದಕ್ಕೆ ಅವಕಾಶವನ್ನು ಕೊಡಬಾರದು. ಏತಕ್ಕೆಂದರೆ ಆ ಬಗ್ಗೆ ಹೆಚ್ಚು ದೂರುಗಳು ಬರುವುದಕ್ಕೆ ಅವಕಾಶವಾಗುತ್ತದೆ. ಈ ಮಸೂದೆಯಲ್ಲಿ ಹೇಳಿರುವ ಹಾಗೆ ಒಂದು ಕಾಲ ಮಿತಿಯಿಲ್ಲದೆ ಜಿಲ್ಲಾಧಿಕಾರಿಗಳು ಅವರಿಗೆ ಯಾವಾಗ ಮನಸ್ಸು ಬಂದರೆ ಆಗ ಕಾಂಪೆನ್‌ಸೇಷನ್ ರಿವೈಜ್ ಮಾಡುವುದಕ್ಕೆ ಅವಕಾಶ ಇದೆ. ಇದು ಸರಿಯಲ್ಲ. ಇದಕ್ಕೆ ಒಂದು ಕಾಲ ಮಿತಿಯಿರಬೇಕು. ಈಗ ಡೆಪ್ಯುಟಿ ಕಮೀಷನರು ಕಾಂಪೆನ್‌ಸೇಷನ್ ಫಿಕ್ಸ್ ಮಾಡಿದಮೇಲೆ ಅದನ್ನು ಡಿವಿಜನಲ್ ಕಮೀಷನರು ನಂತರ ಸರ್ಕಾರದವರು ಹೀಗೆ ಅನೇಕ ಹಂತಗಳಲ್ಲಿ ಕಾಂಪೆನ್‌ಸೇಷನ್ ರಿವೈಜ್ ಮಾಡುವುದಕ್ಕೆ ಅವಕಾಶ ಇದೆಯೋ ಹೇಗೆ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಈ ಚರ್ಚೆಗೆ ಉತ್ತರ ಕೊಡುವ ಸಮಯದಲ್ಲಿ ತಿಳಿಸಬೇಕು. ಈಗಾಗಲೇ ಡೆಪ್ಯುಟಿ ಕಮೀಷನರಿಗೆ ಬೇಕಾದಷ್ಟು ಕೆಲಸ ಕಾರ್ಯಗಳು ಇವೆ. ಅದರ ಜೊತೆಗೆ ಇದನ್ನು ಬೇರೆ ಅವರಿಗೆ ಲಗತ್ತು ಮಾಡಿದರೆ ಅವರ ಕೆಲಸ ಕಾರ್ಯಗಳಿಗೆ ತೊಂದರೆಯಾಗಬಹುದು. ಇದರಿಂದ ಅನೇಕ ಪ್ರಾಬ್ಲಮ್‌ಗಳು ಬರುತ್ತವೆ. ಆದ್ದರಿಂದ ಯಾವ ಕಾರಣದಿಂದ ಮಾನ್ಯ ಮಂತ್ರಿಗಳು ಈ ತಿದ್ದುಪಡಿಯನ್ನು ತಂದಿದ್ದಾರೆ ಎನ್ನುವ ಬಗ್ಗೆ ಅವರು ತಿಳಿಸುತ್ತಾರೆ ಎಂದು ತಿಳಿದುಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಸುಬ್ಬರಾವ್ (ನಾಮ ನಿರ್ದೇಶನ ಹೊಂದಿದವರು).—ಮಾನ್ಯ ಸಭಾಪತಿಯವರೇ, ಈಗ ಈ ಸಭೆಯ ಮುಂದೆ ಮಂಡಿಸಿರುವ ಮೈಸೂರು ಇನಾಮ್ ಅಬಾಲಿಷನ್ ತಿದ್ದುಪಡಿ ಮಸೂದೆಯ ವಿಷಯದಲ್ಲಿ ನಾನು ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ವಿ. ವೆಂಕಟಪ್ಪನವರು ಹೇಳಿದ ಹಾಗೆ ಸುಲಭವಾಗಿ ಅರ್ಥವಾಗದೇ ಇರುವ ಕೆಲವು ಸಮಸ್ಯೆಗಳು ಇದರಲ್ಲಿ ಇವೆ. ಅವುಗಳನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಅದಕ್ಕೆ ಮಾನ್ಯ ಮಂತ್ರಿಗಳು ತಕ್ಕ ಸಮಜಾಯಿಷಿ ಕೊಡುತ್ತಾರೆಂದು ನಾನು ನಂಬಿದ್ದೇನೆ. ಈ ಮಸೂದೆಯನ್ನು ನಾನು ಸಮರ್ಥನೆ ಮಾಡುತ್ತೇನೆ. ಇದನ್ನು ನಾನು ವಿರೋಧ ಮಾಡುತ್ತಿಲ್ಲ. ಆದರೆ ಈ ಮಸೂದೆಯಲ್ಲಿರತಕ್ಕ ಕೆಲವು ಪ್ರಾವಿಜನ್‌ಗಳು ನನಗೆ ಸ್ವಲ್ಪ ವಿರೋಧವಾಗಿ ಕಾಣುತ್ತಿವೆ. ಇನಾಮ್‌ಗಳಲ್ಲಿ ಎರಡು ಬಗೆಯ ಇನಾಮ್‌ಗಳು ಇವೆ. ಒಂದು ಮೈನರ್ ಇನಾಮ್, ಇನ್ನೊಂದು ಮೇಜರ್ ಇನಾಮ್. ಈ ಮಸೂದೆಯ ಕ್ಲಾಜ್ (3)ರಲ್ಲಿ “ in respect of lands in inams

(ಶ್ರೀ ಕೆ. ಸುಬ್ಬರಾವ್)

which vest in the State on or after the date of commencement of the Mysore Inams Abolition Laws (Amendment) Act, 1968, within six years from the date of vesting of the inam concerned ಎಂದು ಹೇಳಿದ್ದಾರೆ. ಇದಕ್ಕಿಂತ ಮುಂಚೆ ಸರ್ಕಾರದವರು ವಹಿಸಿಕೊಂಡಿರತಕ್ಕ ಇನಾಮ್ತಿಗಳಿಗೆ ಇದು ಅನ್ವಯಿಸುತ್ತದೆಯೇ ಹೇಗೆ ಎನ್ನುವುದು ಗೊತ್ತಾಗಲಿಲ್ಲ. 1955ನೇ ಇಸವಿಯಲ್ಲಿ ಸರ್ಕಾರದವರು ಇನಾಮ್ ಅಬಾಲಿಷನ್ ಆಕ್ಟನ್ನು ತಂದು ಕೆಲವಾರು ಇನಾಮ್ ಗ್ರಾಮಗಳನ್ನು ವಶಪಡಿಸಿಕೊಂಡರು. ಅವುಗಳಿಗೂ ಇದು ಅನ್ವಯಿಸುತ್ತದೆಯೇ ಹೇಗೆ? ಮೇಜರ್ ಇನಾಮ್ತಿಗಳಾದ ಇನಾಮ್ ಗ್ರಾಮಗಳಲ್ಲದೆ ಕೆಲವು ಮೈನರ್ ಇನಾಮ್‌ಗಳು ಇವೆ. ಆ ಮೈನರ್ ಇನಾಮ್‌ಗಳು ಯಾವುವೆಂದರೆ ದೇವಾದಾಯ, ಬ್ರಹ್ಮಾದಾಯ, ಶ್ಯಾನುಭೋಗ, ಪಟೇಲ, ತೋಟಿ, ತಳವಾರ, ನೀರಗಂಟಿ ಮುಂತಾದ ನೌಕರರುಗಳಿಗೆ ಹಿಂದೆ ಕೆಲವಾರು ಇನಾಮ್ತಿಗಳನ್ನು ಕೊಡಲಾಗಿತ್ತು. ಇವು ಮೈನರ್ ಇನಾಮ್‌ಗಳು ಗ್ರಾಮಾಧಿಕಾರಿಗಳಿಗೆ ಸಂಬಂಧಪಟ್ಟ ಇನಾಮ್‌ಗಳು ಇದಕ್ಕೆ ಒಳಪಡುವುದಿಲ್ಲ ಎಂದು ನನ್ನ ಭಾವನೆ. ಆದರೆ ದೇವರ ಪೂಜೆಗೋಸ್ಕರ ದೇವರ ಕೊಡಗಿ ಎಂದು ಏನು ಇನಾಮ್ತಿಗಳನ್ನು ಕೊಟ್ಟಿದ್ದರು ಅವುಗಳಿಗೆ ಈ ಕಾನೂನು ಅನ್ವಯಿಸುತ್ತದೆ ಎಂದು ನನ್ನ ಭಾವನೆ. ಕ್ಲಾಜ್ 2 (1)ರಲ್ಲಿ ಹೀಗಿದೆ: "in sub-section (4) of section 1, for the words "in respect of any inam village, or minor inam in any unalienated village, on such date as the Government may by notification appoint," the words "in all minor inams in unalienated village, on such date as the Government may by notification, appoint, and in any village, on such date as the Government may, by notification, specify in respect of such inam village" shall be substituted" ಇದನ್ನು ನೋಡಿದರೆ ಸರ್ಕಾರಿ ಗ್ರಾಮಗಳಲ್ಲಿರತಕ್ಕ ಕೊಡಗಿಗಳಿಗೂ ಇದು ಅನ್ವಯಿಸುತ್ತದೆ, ಇದರಲ್ಲಿ ವಿರೋಧಾಭಾಸ ಕಾಣುವುದಿಲ್ಲ.

5·00 P.M.

ಈ ಆಕ್ಟ್ ತರುವುದಕ್ಕೆ ಮೊದಲೇ ಎಷ್ಟೋ ಇನಾಂ ಜಮೀನುಗಳು ಸರ್ಕಾರಕ್ಕೆ ಸೇರಿ ಹೋಗಿವೆ. ಈಗ ತಂದಿರುವುದು 60 ಸಾವಿರ ಮೈನರ್ ಇನಾಂಗಳನ್ನು ವಿಲೇವಾರಿ ಮಾಡುವುದಕ್ಕಾಗಿ. ಈಗ ಯಾರು ಇನಾಂ ಜಮೀನನ್ನು ಹೊಂದಿದ್ದಾರೋ ಅಂತಹವರಿಂದ ಪಡೆದುಕೊಳ್ಳಲು ಜಿಲ್ಲಾಧಿಕಾರಿಯವರಿಗೆ ಅಧಿಕಾರ ಕೊಡಲಾಗಿದೆ. ಮತ್ತು ಕಾಂಪೆನ್‌ಸೇಷನ್ ಕೊಡುವ ಅಧಿಕಾರವನ್ನು ಜಿಲ್ಲಾಧಿಕಾರಿಯವರಿಗೇ ವಹಿಸಲಾಗಿದೆ. ಕಾಂಪ್‌ನ್‌ಸೇಷನ್ ಕೊಟ್ಟಿರುವುದು ಕಡಿಮೆಯಾಗಿದ್ದರೆ ಆ ಬಗ್ಗೆ ಸಂಬಂಧಪಟ್ಟವರು ಅರ್ಜಿ ಹಾಕಿಕೊಳ್ಳುವುದಕ್ಕೆ ಮೊದಲು 6 ವರ್ಷಗಳ ಕಾಲ ಸಮಯ ಇತ್ತು. ಈಗ ಅದನ್ನು 30 ದಿವಸಗಳಿಗೆ ಇಳಿಸಿದ್ದಾರೆ. ಇದು ಬಹಳ ಕಷ್ಟವಾಗುತ್ತದೆ. ಒಂದು ತಿಂಗಳಲ್ಲಿ ಸಂಬಂಧಪಟ್ಟವರು ಅರ್ಜಿ ಕೊಡಬೇಕಾದರೆ ಬಹಳ ಕಷ್ಟವಾಗುತ್ತದೆ. ಇದನ್ನು ಸರ್ಕಾರದವರು ವಿಚಾರಮಾಡಿ ಕಾಲವನ್ನು ಹೆಚ್ಚು ಮಾಡಬೇಕು. ಡಿವಿಜನಲ್ ಕಮೀಷನರ್ ಅವರಿಗೆ ಹೆಚ್ಚು ಅಧಿಕಾರ ಇದರಲ್ಲಿ ಕೊಟ್ಟಿಲ್ಲ. ಏನಿದ್ದರೂ ಕೂಡ ಜಿಲ್ಲಾಧಿಕಾರಿಯವರಿಗೆ ಇವರು ಗೈಡೆನ್ಸ್ ಕೊಡಬಹುದು. ಈಗ ಇನಾಂ ಜಮೀನನ್ನು ಮಾಡುತ್ತಿರುವವರು ಕ್ವಾಸಿಯೋ, ಪರ್ಮನೆಂಟೋ, ಟೆನೆಂಟೋ ಅಥವಾ ಟೆಂಪರರಿಯಾದವರೋ ಎಂಬುದು ಜಿಲ್ಲಾಧಿಕಾರಿಯವರಿಗೆ ಗೊತ್ತಿರುವುದಿಲ್ಲ. ಕೇವಲ 30 ದಿವಸದ ಕಾಲಾವಧಿ ಕೊಟ್ಟು ಕಾಂಪ್‌ನ್‌ಸೇಷನನ್ನು ತೀರ್ಮಾನ ಮಾಡಿಬಿಡುತ್ತಾರೆ. ಅಷ್ಟರೊಳಗೆ ಆ ಇನಾಂ ಜಮೀನಿನ ವಾರಸುದಾರರು ಅರ್ಜಿ ಹಾಕಿಕೊಳ್ಳದಿದ್ದರೆ ಜಿಲ್ಲಾಧಿಕಾರಿಯವರ ತೀರ್ಮಾನವೇ ಕೊನೆಯದಾಗುತ್ತದೆ. ಈಗಿನ ತಿದ್ದುಪಡಿಯ ಪ್ರಕಾರ ಜಿಲ್ಲಾಧಿಕಾರಿಯವರ ಆರ್ಡರ್ ವಿರುದ್ಧ ವಿಭಾಗಾಧಿಕಾರಿಯವರಿಗೆ ಅರ್ಜಿ ಕೊಡಲು ಅವಕಾಶವೇ ಇಲ್ಲ.

"Against any decision of the Deputy Commissioner under Section 10 or Section 11 the Government may, within six Months from the date of commencement of the Mysore Inams Abolition Laws (Amendment) Act, 1968 or from the date of the decision, whichever is later, and any person aggrieved by such

> decision may, within thirty days from the said date, appeal to the prescribed authority and the decision of the prescribed authority be final.''

ಎಂದು ಇರುವುದರಿಂದ ಜಿಲ್ಲಾಧಿಕಾರಿಯವರ ಆರ್ಡರ್ ವಿರುದ್ಧ ಟ್ರಿಬ್ಯುನಲ್ ಕೋರ್ಟಿಗೆ ಹೋಗುವುದಕ್ಕೆ ಈ ತಿದ್ದುಪಡಿಯ ಕಾರಣ ಅವಕಾಶವಿಲ್ಲವಾಗಿದೆ. ಮೊದಲು ಇನಾಂಗೆ ಸಂಬಂಧಪಟ್ಟ ಕೇಸ್‌ಗಳೆಲ್ಲಾ ಟ್ರಿಬ್ಯುನಲ್‌ಗೆ ಹೋಗಿ ತೀರ್ಮಾನವಾಗುತ್ತಿದ್ದವು. ಇನ್ನು ಮುಂದೆ ಜಿಲ್ಲಾಧಿಕಾರಿಯವರೇ ತೀರ್ಮಾನ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಇದರ ಜೊತೆಗೆ 20 (ಎ) ನಲ್ಲಿ ಈ ರೀತಿ ಹೇಳಿದೆ :

> "Review by the Deputy Commissioner –(1) If at any time after the determination of total compensation under Section 20, the Deputy Commissioner is satisfied that the amount so determined was not correctly determined and requires to be revised with reference to any new and important matter which has since come to his notice or on account of some mistake or error apparent on the face of the record or for any other sufficient reason, he may, suo motu revise the amount of compensation determined by him under Section 20, either by increasing or decreasing it ''

ಈ ಒಂದು ಲೆಕುನಾ ಮಾಡಿ ಇಟ್ಟಿರುವುದು ಸರಿಯಲ್ಲ. ಇದನ್ನು ಬದಲಾವಣೆ ಮಾಡಬೇಕು. ಇಲ್ಲದಿದ್ದರೆ ಈಗ ಇರುವ ಮೈನರ್ ಇನಾಂ ಜಮೀನಿನವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಮೊದಲು ಸರ್ಕಾರದ ಆರ್ಡರ್ ವಿರುದ್ಧ ಹೈಕೋರ್ಟಿಗೆ ಹೋಗುವುದಕ್ಕೆ ಅವಕಾಶ ಇತ್ತು. ಈಗ ಅದನ್ನು ತಪ್ಪಿಸಿರುವುದು ಸರಿಯಲ್ಲ. ಈಗ ಇರುವ ಲೆಕುನಾ ಏನಿದೆ ಅದನ್ನು ಸರಿಪಡಿಸುವುದು ಒಳ್ಳೆಯದು. ಸೆಕ್ಷನ್ 31ನ್ನು ಬದಲಾವಣೆ ಮಾಡಿಲ್ಲ. ಇದನ್ನೆಲ್ಲಾ ಮಾನ್ಯ ರೆವಿನ್ಯೂ ಮಂತ್ರಿಗಳು ವಿಚಾರ ಮಾಡಬೇಕು. ತಾವು ವಕೀಲರಾಗಿದ್ದೀರಿ. ಮತ್ತು ಅನುಭವಶಾಲಿಗಳು ಆಗಿದ್ದೀರಿ. ಈಗ ತಂದಿರುವ ತಿದ್ದುಪಡಿಯನ್ನು ಮತ್ತೆ ವಿಚಾರ ಮಾಡಿ ಸೂಕ್ತ ಬದಲಾವಣೆಗಳನ್ನು ಮಾಡಿದರೆ ಒಳ್ಳೆಯದು. ಹೈಕೋರ್ಟಿಗೆ ಸರ್ಕಾರದ ತೀರ್ಮಾನದ ವಿರುದ್ಧ ಹೋಗದಂತೆ ಮಾಡಿರುವುದು ಸರಿಯಲ್ಲ. ಹೈಕೋರ್ಟಿಗೆ ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಯಾವ ಯಾವ ತಿದ್ದುಪಡಿಗಳನ್ನು ಸೇರಿಸಬೇಕಾಗಿತ್ತೋ ಅದನ್ನು ಕೈಬಿಟ್ಟಿದ್ದಾರೆ. ಜಿಲ್ಲಾಧಿಕಾರಿಯವರು ಇನಾಂ ಜಮೀನ್ ಬಗ್ಗೆ ಕಾಂಪನ್‌ಷೇಷನ್ ತೀರ್ಮಾನ ಮಾಡುತ್ತಾರೆ. ಅದನ್ನು ಇನಾಂ ಜಮೀನನ್ನು ಅನುಭವಿಸುತ್ತಿರುವವರಿಗೆ ಕೊಡಬೇಕೇ ಅಥವಾ ಆ ಇನಾಂ ಜಮೀನನ್ನು ಮಾಡುತ್ತಿರುವವರಿಗೆ ಕೊಡಬೇಕೇ ಎನ್ನುವುದನ್ನು ಇಲ್ಲಿ ಹೇಳಿಲ್ಲ. ಇದರಿಂದ ಮುಂದೆ ತೊಂದರೆ ಬರಬಹುದು. 60,000 ಮೈನರ್ ಇನಾಂಗಳು ಎಂದು ಅಷ್ಟೇ ಹೇಳಿದ್ದಾರೆ. ಈ 60,000 ಮೈನರ್ ಇನಾಂಗಳು ಯಾವುವು, ಮುಖ್ಯವಾಗಿ ಅವು ಎಲ್ಲೆಲ್ಲಿ ಇವೆ ಎಂಬ ವಿವರಗಳನ್ನು ಇಲ್ಲಿ ಕೊಟ್ಟಿಲ್ಲ. ಇದೇ ಕಾರಣದಮೇಲೆ ನಾಳೆ ಯಾರಾದರು ಕೋರ್ಟಿಗೆ ಹೋಗುವುದಕ್ಕೆ ಅವಕಾಶವಿದೆ. ಆದಕಾರಣ ಸರ್ಕಾರದವರು ಇವೆಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು ಸೂಕ್ತ ಬದಲಾವಣೆಗಳನ್ನು ಈ ತಿದ್ದುಪಡಿಯಲ್ಲಿ ಸೇರಿಸಿದರೆ ಒಳ್ಳೆಯದೆಂದು ಹೇಳುತ್ತೇನೆ. ಈಗ ಇರತಕ್ಕಂಥ ನ್ಯೂನತೆಗಳು ಏನೇನಿವೆ ಅವೆಲ್ಲವನ್ನೂ ಕೂಡ ಸರಿಪಡಿಸಿ ಈ ತಿದ್ದುಪಡಿಯನ್ನು ಜಾರಿಗೆ ತರಬೇಕೆಂದು ಸಲಹೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

SRI H. V. KOUJALGI.—I am very thankful to the hon. Members for having participated in this amending Bill. They have made some suggestions.

One suggestion of the hon. Members is that where the compensation is already paid the case may not be reopened and the amount due, if any, may not be recovered. At this stage after the proceedings are once finalised, if the person who has received the compensation is asked to return the excess money, it would not be reasonable. We must also

(SRI H. V. KOUJALGI)

see how far this saggestion could be implemented. Many cases have been settled and finalised. The provision is made not only for the cases that have been heard and disposed of, but also for the cases which will be decided in future. I may bring to the notice of the House that at least the mischief which is likely to happen in future could be avoided if we accept this legislation. There will be some officers to discharge the duties under this Act. There will be at least some fear in their mind that they will be punished or will be called upon to explain if any mistakes is Committed. We can punish that officer not by taking him to a Court of law but by taking departmental action against him. Whatever orders he has passed could be revised or cancelled once for all. So far as the future action is concerned, that mischief can be stopped. In a Court of Law it will be difficult. If there is a prima facie case it can be re-opened. Some such cases have been re-opened. But all the cases cannot be re-openad. We can take note of the conduct of the officers concerned. So far as the remedy for going to the High Court, is concerned, as Sri Adiga pointed out, we cannot help. We cannot prevent anybody from going to the Court. But the question is when excess payment is made, it is our experience, as I have already stated in my preliminary remarks, that many of the Officers have misused their powers and there is no remedy to check them at present. At least in future such misuse of powers could be checked by providing this remedy. Without this remedy we cannot ask him why he has misused and all that. Sri Adiga said that there is no such provision in the Land Acquisition Act. I personally feel that there is that lacuna in the Land Acquisition Act. If the Land Acquisition Officer misuses his powers, there is no remedy for the Government to go in appeal. That is why Government is also thinking of amending that provision. A Committee of the Central Government has been appointed for this purpose and this lacuna has been brought to its notice. No doubt, in due course that Act also will be amended. Properties worth thousands of rupees have been valued excessively and the Government is bound to pay them. The violation has been committed by our own Officers. Now we cannot say they have done excessively.

The hon. Member Sri Subba Rao has expressed his doubts in regard to the implementatioin of the Act. I may tell him that so far as this amending Bill is concerned many of his doubts are groundless. He has suggested that, while framing the rules, the Government should take into consideration how these irregularities and apprehensions could be avoided. I will take note of it. Sri Adiga said that the parties who are involved in past cases or who may be involved in future cases will be unnecessarily harassed by the officers. I will assure the House that Government will take note of the suggestions made by the Hon. Members and see that such things do not occur.

MR. DEPUTY CHAIRMAN.—The question is:

"That the Mysore Inams Abolition Law (Amendment) Bill, 1968, as passed by the Legislative Assembly, be taken into consideration."

The motion was adopted.

CLAUSES

MR. DEPUTY CHAIRMAN.—The question is:

"That clauses 2 to 4, both inclusive do atand part of the Bill."

The motion was adopted.

Clauses 2 to 4, both inclusive, were added to the Bill.

MR. DEPUTY CHAIRMAN.—The question is:

"That clause 1, the long Title and the Enacting formula do stand part of the Bill."

The motion was adopted.

Clause 1, the long Title and the Enacting Formula were added to the Bill.

Motion to pass.

SRI H. V. KOUJALGI.—Sir, I beg to move:

"That the Mysore Inams Abolition Law (Amendment) Bill, 1968, as passed by the Legislative Assembly, be passed."

MR. DEPUTY CHAIRMAN.—The question is:

"That the Mysore Inams Abolition Law (Amendment) Bill, 1968, as passed by the Legislative Assembly, be passed."

The motion was adopted.

City of Bangalore Municipal Corporation (2nd Amendment) Bill, 1969 (as passed by the Legislative Assembly).

Motion to consider.

SRI B. M. PATIL (Minister of State for Municipal Administration).—I beg to move:

"That the City of Bangalore Municipal Corporation (Second Amendment) Bill, 1969, as passed by the Legislative Assembly, be taken into consideration."

Mr. DEPUTY CHAIRMAN.—Motion moved :

" That the City of Bangalore Municipal Corporation (Second Amendment) Bill, 1969, as passed by the Legislative Assembly, be taken into consideration. "

† ಶ್ರೀ ಬಿ. ಎಂ. ಪಾಟೀಲ್.—ಸನ್ಮಾನ್ಯ ಸಭಾಪತಿಗಳೇ, ಈಗ ಕಾರ್ಪೊರೇಷನ್ ಆಕ್ಟ್ ಷೆಡ್ಯೂಲ್ 8, ಸಬ್ ರೂಲ್(3)ರಲ್ಲಿ ಮತದಾರರ ಪಟ್ಟಿಯನ್ನು ತಯಾರು ಮಾಡುವಾಗ ಅಕ್ಷರ ಅನುಕ್ರಮವಾಗಿ (Alphabetical Order) ಮತದಾರರ ಪಟ್ಟಿಯನ್ನು ತಯಾರು ಮಾಡಬೇಕು ಎಂದು ಇದೆ. - ಆದರೆ ಅದರಿಂದ ಅನಾನುಕೂಲತೆಗಳು ಬಹಳ ಆಗುತ್ತಾ ಇವೆ. ಚುನಾವಣೆಗೆ ಅನೇಕ ತೊಂದರೆಗಳು ಉದ್ಭವಿಸುತ್ತವೆ ಎಂದು ಹೇಳುತ್ತೇನೆ. ಅನೇಕ ಸನ್ಮಾನ್ಯ ಸದಸ್ಯರು, ಸನ್ಮಾನ್ಯ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಬಂದು ಈ ವಿಚಾರದಲ್ಲಿ ಬೇಕಾದಷ್ಟು ರೆಪ್ರಸೆಂಟೇಷನ್ ಮಾಡಿದ್ದಾರೆ. ಈ ರೆಪ್ರಸೆಂಟೇಷನ್ ಆಫ್ ದಿ ಪೀಪಲ್ ಆಕ್ಟ್‌ನಲ್ಲಿ ಇರುವಂತೆಯೇ ಮನೆ ನಂಬರು ಪ್ರಕಾರ ಮತದಾರರ ಪಟ್ಟಿಯನ್ನು ತಯಾರು ಮಾಡಲು ಅವಕಾಶ ಒದಗಿಸಿ ಕೊಡಲಿಕ್ಕೆ ಈ ತಿದ್ದುಪಡಿ ತರಲಾಗಿದೆ.

ಇನ್ನು ಬೆಂಗಳೂರು ನಗರ ಸುಂದರವಾಗಿ ಬೆಳೆಯಬೇಕಾಗಿದೆ. ಈ ದೃಷ್ಟಿಯಿಂದ ಯಾರಾದರೂ ಕಾನೂನುಬಾಹಿರವಾಗಿ ಏನಾದರೂ ಒಂದು ಕಟ್ಟಡವಾಗಲಿ, ಬಾವಿಯಾಗಲಿ, ಗುಡಿಸಲಾಗಲಿ ಕಟ್ಟಿಸಿದ್ದೇ ಆದರೆ ಅದು ನಿಯಮಕ್ಕೆ ಬಾಹಿರವಾದಾಗ ಕಾರ್ಪೊರೇಷನ್ ಕಮೀಷನರಿಗೆ ಅದನ್ನು ತಡೆಗಟ್ಟಲು ಈ ಒಂದು ಅಧಿಕಾರವನ್ನು ವಹಿಸಿಕೊಟ್ಟಿದ್ದೇವೆ. ಇದೇ ರೀತಿ ಅವಕಾಶವನ್ನು ಬಾಂಬೆ ಕಾರ್ಪೊರೇಷನ್ ಮತ್ತು ಇನ್ನು ಇತರ ಕಾರ್ಪೊರೇಷನ್‌ಗಳು ಒದಗಿಸಿಕೊಟ್ಟಿವೆ ; ಮತ್ತು ಕಾರ್ಪೊರೇಷನ್ನಿನವರು ಯಾವರೀತಿ ಪ್ಲಾನ್ ಮಂಜೂರು ಮಾಡುತ್ತಾರೋ ಅದೇರೀತಿ ಮನೆ ಕಟ್ಟಬೇಕು. ಈ ರೀತಿಯಾಗಿ ಒಂದು ಅಧಿಕಾರವನ್ನು ಕಾರ್ಪೊರೇಷನ್ ಕಮೀಷನರಿಗೆ ಕೊಡಲಾಗಿದೆ. ಈ ಎರಡೂ ಸಹ ಸರಳವಾದ ತಿದ್ದುಪಡಿಗಳಾದುದರಿಂದ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ಈ ಸಭೆಯ ಮುಂದೆ ಈ ತಿದ್ದುಪಡಿ ಮಸೂದೆಯನ್ನು ಇಡುತ್ತೇನೆ.

† ಶ್ರೀ ಜಿ. ವಿ. ಆಂಜನಪ್ಪ.—ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ತಂದಿರತಕ್ಕಂಥ The City of Bangalore Municipal Corporation (Second Amendment) Bill, 1969 ಈ ಮಸೂದೆಯನ್ನು ಸ್ವಾಗತಿಸುತ್ತೇನೆ. ಈ ಒಂದು ತಿದ್ದುಪಡಿಯ ಅವಶ್ಯಕತೆ ಬಹಳ ದಿವಸದಿಂದಲೂ ಇತ್ತು ಮತ್ತು ನಗರದ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಅನೇಕರು ಈ ಸಂಬಂಧದಲ್ಲಿ ಮಾನ್ಯ ಸಚಿವರನ್ನು ಭೇಟಿ ಮಾಡಿ ಚರ್ಚಿಸಿದಾಗ ಈ ವರ್ಷದ ಅಂತ್ಯದ ಒಳಗಾಗಿ ಚುನಾವಣೆ ಮಾಡುತ್ತೇವೆಂದು ಅಪ್ಪಣೆ ಕೊಡಿಸಿದರು. ಎಷ್ಟೋ ಸಲ ತಮ್ಮನ್ನು ಭೇಟಿ ಮಾಡಿ ಹೇಳಿದ್ದಕ್ಕೆ ಈಗಲಾದರೂ ಇದನ್ನು ತಂದಿದ್ದೀರಲ್ಲಾ, ಅಷ್ಟೇ ಸಂತೋಷ. ಜೊತೆಗೆ ಈ ವರ್ಷದ ಅಂತ್ಯದೊಳಗೆ ಚುನಾವಣೆ ಮಾಡುತ್ತೇವೆಂದು ಹೇಳಿದ್ದಾರೆ. ಅದು ಎಷ್ಟುಮಟ್ಟಿಗೆ ಮಾಡುತ್ತಾರೋ ನೋಡಬೇಕು. ಈ ತಿದ್ದುಪಡಿಯನ್ನು ಮೊದಲೇ ತರಬೇಕಾಗಿತ್ತು, ಇಷ್ಟು ತಡ ಮಾಡಿದ್ದು ಏತಕ್ಕೆ? ಆದರೂ ಕೂಡ ಅವರಲ್ಲಿ ಒಳ್ಳೆಯ ಗುಣ ಇದೆ, ಒಳ್ಳೆಯ ಮನಸ್ಸು ಇದೆ, ಆ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದಾರೆ. ಅವರ ಮನಸ್ಸನ್ನು ನೋಡಿದರೇನೇ ನಮಗೆ ಗೊತ್ತಾಗುತ್ತದೆ. ಕಾರ್ಪೊರೇಷನ್ ಆಡಳಿತವನ್ನು ಅಧಿಕಾರಿಗಳ ಕೈಕೆಳಗೆ ಕೊಟ್ಟು 1½ ವರ್ಷದ ಮೇಲಾಯಿತು. ಹಿಂದೆ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿರತಕ್ಕಂಥ ಆಡಳಿತ ಪಕ್ಷದವರಿಗೆ ಇದರಲ್ಲಿ ಶ್ರದ್ಧೆ, ನಂಬಿಕೆ ಇದ್ದ ಪಕ್ಷದಲ್ಲಿ ಪ್ರತಿನಿಧಿಗಳ ಆಡಳಿತವನ್ನು ಸ್ವಾಗತಿಸಬೇಕಾಗಿತ್ತು. ರಾಜ್ಯದ ರಾಜಧಾನಿಯಾದ ಬೆಂಗಳೂರು ನಗರ ಸಭೆ ಆಡಳಿತವನ್ನು ಅಧಿಕಾರಿಗಳ ಕೈಗೆ ಒಪ್ಪಿಸಿ ಈ ದಿವಸ ಪ್ರಜಾಪ್ರಭುತ್ವ ತತ್ವಕ್ಕೆ ತಿಲಾಂಜಲಿ ಹಾಕಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು. ತೃಪ್ತಿಕರವಾದ ಆಡಳಿತವನ್ನು ನಡೆಸುವುದರಲ್ಲಿ ವಿಫಲರಾಗಿದ್ದಾರೆ ಎಂದು ಹೇಳಬಹುದು. ಈ ಪ್ರಜಾಪ್ರಭುತ್ವದಲ್ಲಿ ಜನಗಳ ಸೇವೆ ಮಾಡುವುದಾದರೆ ಈ ಆಡಳಿತವನ್ನು ಅಧಿಕಾರಿಗಳ ಕೈಗೆ ಕೊಟ್ಟಿರುವುದನ್ನು ತಪ್ಪಿಸಿ ಪ್ರಜಾಪ್ರತಿನಿಧಿಗಳು ಭಾಗವಹಿಸುವಂತೆ ಅವಕಾಶ ಮಾಡಿಕೊಡಬೇಕು. ನಾನು ಕೇಳುತ್ತೇನೆ, ಈ ನಗರ ಸಭೆ ಚುನಾವಣೆಯನ್ನು ಎರಡು ವರ್ಷದಿಂದಲೂ ಏತಕ್ಕೆ ನಡೆಸಲಿಲ್ಲ ಎಂದು. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಈವೊತ್ತು ಒಂದು ಕುಂಟು ನೆಪದಿಂದ ಕಾನೂನಿನ ಲೋಪದೋಷಗಳನ್ನು ತಂದು ನಗರಸಭೆಯ ಆಡಳಿತವನ್ನು ಆಡಳಿತ ಅಧಿಕಾರಿಗಳ ಕೈಯಲ್ಲಿ ಕೊಟ್ಟಿದ್ದೀರಿ. ಇದರಿಂದ ತಮಗೆ ಬೇಕಾದ

ಹಾಗೆ ಅನುಕೂಲತೆಗಳನ್ನು ಮಾಡಿಕೊಂಡಿದ್ದೀರಿ. ಓಟರ್ ಲಿಸ್ಟ್ ತಯಾರು ಮಾಡಬೇಕಾದರೆ ಆಲ್ಫಬೆಟಿಕಲ್ ಆರ್ಡರ್ ಆಗಿ ಮಾಡಬೇಕು ಎಂದು ಮೊದಲು ಯಾತಕ್ಕೆ ಮಾಡಿದರು ? ಇದು ಸರ್ಕಾರಕ್ಕೆ ಮೊದಲು ಗೊತ್ತಾಗಲಿಲ್ಲವೇ ? ಯಾರು ಇದನ್ನು ತಯಾರು ಮಾಡಿದರೋ ಗೊತ್ತಿಲ್ಲ. ಒಂದು ವೇಳೆ ತಪ್ಪು ಮಾಡಿದರೆ ಅದನ್ನು ಸರಿಮಾಡಬೇಕಾದರೆ 2 ವರ್ಷ ಬೇಕಾಗುತ್ತದೆಯೇ ? ಇದರಿಂದ ತಮಗೆ ಬೇಕಾದ ಹಾಗೆ ನಡೆಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಪ್ರಜಾಪ್ರತಿನಿಧಿಗಳು ಇದ್ದರೆ ಅದರಲ್ಲಿಯೂ ವಿರೋಧ ಪಕ್ಷಗಳ ಕೈಗೆ ಆಡಳಿತ ಸಿಕ್ಕಿದರೆ ಏನಾದರೂ ಒಂದು ನೆಪ ತಂದು ಸೂಪರ್‌ಸೀಡ್ ಮಾಡುತ್ತೀರಿ. ಮಾನ್ಯ ಸಚಿವರು ಎಷ್ಟರಮಟ್ಟಿಗೆ ಉದಾತ್ತವಾಗಿದ್ದಾರೋ ಅಷ್ಟರಮಟ್ಟಿಗೆ ತಾತ್ವಿಕವಾದ ಮನಸ್ಸು ಇದ್ದರೆ ಬಹಳ ಸಂತೋಷ. ಈಗಲಾದರೂ ಪ್ರಜಾಪ್ರತಿನಿಧಿಗಳ ಕೂಗಿಗೆ ಕಿವಿಗೊಟ್ಟು ಎಲೆಕ್ಷನ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಲ್ಲಾ ಅಷ್ಟೇ ಸಂತೋಷ. ಬೆಂಗಳೂರು ನಗರದಲ್ಲಿ ಏನಾದರೂ ಪ್ಲಾನ್‌ಗೆ ಮೀರಿ ಮನೆಗಳನ್ನಾಗಲೀ, ಗುಡಿಸಲುಗಳನ್ನಾಗಲೀ, ಬಾವಿಗಳನ್ನಾಗಲೀ, ಕಟ್ಟಿಸಿದರೆ ಅದನ್ನು ಕೆಡವಿಸುವುದಕ್ಕಾಗಲಿ, ತಡೆಹಿಡಿಯುವುದಕ್ಕಾಗಲಿ ಅಧಿಕಾರವನ್ನು ಕಾರ್ಪೊರೇಷನ್ ಕಮೀಷನರ್‌ಗೆ ಕೊಟ್ಟಿದೆ ಎಂದು ಈ ಮಸೂದೆಯಲ್ಲಿ ತಿಳಿಸಿದ್ದೀರಿ. ಇದರ ಅವಶ್ಯಕತೆ ಇಷ್ಟು ವರ್ಷವಾದ ಮೇಲಾದರೂ ಬಂದಿತಲ್ಲಾ. ಈಗಲೂ ಸಹ ಸ್ಥಳೀಯ ಸಂಸ್ಥೆಗಳ ಕಾನೂನಿನಲ್ಲಾಗಲಿ ಅಥವಾ ನಗರಸಭೆಯ ಆಡಳಿತ ಕಾನೂನಿನಲ್ಲಾಗಲಿ ನಮೂದಿಸಿರುವಂತೆ ಯಾರು ಮನೆಗಳನ್ನು ಕಟ್ಟಬೇಕಾದರೂ, ಗುಡಿಸಲು ಕಟ್ಟಬೇಕಾದರೂ ಕಾರ್ಪೊರೇಷನ್ ಮಂಜೂರಾತಿ ಇಲ್ಲದೆ ಏನೂ ಮಾಡುವ ಹಾಗಿಲ್ಲ. ಅದಕ್ಕನುಗುಣವಾಗಿಯೇ ಕಟ್ಟಬೇಕೆಂದು ಇದೆ. ಇಂತಹ ಸಂದರ್ಭದಲ್ಲಿ ಈ ತಿದ್ದುಪಡಿಯಲ್ಲಿ ಇದನ್ನು ತಂದಿದ್ದರ ಔಚಿತ್ಯವಾದರೂ ಏನೆಂಬುದು ತಿಳಿಯುವುದಿಲ್ಲ. ಇನ್ನು ಮುಂದಾದರೂ ಈ ಒಂದು ಟ್ರಿಕ್ಕನ್ನು ಮಾಡಬಾರದು ಎಂದು ಹೇಳುತ್ತೇನೆ. ಈ ಪ್ರಜಾಪ್ರಭುತ್ವದಲ್ಲಿ ಶ್ರದ್ಧೆ, ನಂಬಿಕೆ ಇದ್ದ ಜನ ಈ ರೀತಿ ಮಾಡಬಾರದು. ತಮ್ಮ ಮನಸ್ಸಿನಲ್ಲಿ ಒಳ್ಳೆಯ ಅಭಿಪ್ರಾಯ ಇದ್ದರೂ ಕೂಡ ಒಳಗಡೆ ಇರುವ ಜನ ಅಡ್ಡಿ ಮಾಡುತ್ತಾ ಇದ್ದಾರೆ. ಅದಕ್ಕೆ ನೀವೂ ಏನೂ ಮಾಡುವುದಕ್ಕಾಗುವುದಿಲ್ಲ. ನಿಮ್ಮ ಕೈಯಲ್ಲಿ ಅಧಿಕಾರ ಇದೆಯೆಂದು ನಿಮಗೆ ಬೇಕಾದ ಹಾಗೆ ಕಾನೂನು ಮಾಡುವುದು ಸರಿಯಲ್ಲ ಎಂದು ನಾನು ಹೇಳುತ್ತೇನೆ. ಮತ್ತು ನಗರ ಸಭೆ ಚುನಾವಣೆಯನ್ನು ಆದಷ್ಟು ಜಾಗ್ರತೆ ನಡೆಸಬೇಕು ಎಂದು ಹೇಳುತ್ತೇನೆ.

5-30 P.M.

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಬೆಂಗಳೂರಿನಲ್ಲಿ ನಡೆದಾಗ ಬೆಂಗಳೂರು ಕಾರ್ಪೊರೇಷನ್‌ನವರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಅಧಿವೇಶನದ ಬಗ್ಗೆ ಶ್ರದ್ಧೆಯನ್ನು ತೋರಿ ಎಲ್ಲ ವಿಧವಾದ ಸಹಕಾರ ನೆರವು ಸಹಕಾರಗಳನ್ನು ಕೊಟ್ಟಿದ್ದಾರೆ. ರಾಜಕೀಯ ಪಕ್ಷಗಳಿಗೂ ನಗರ ಸಭೆಗಳಿಗೂ ಸಂಬಂಧವಿಲ್ಲ. ಆದರೆ ಬೆಂಗಳೂರು ಕಾರ್ಪೊರೇಷನ್‌ನವರು ಯಥೇಷ್ಟವಾಗಿ ಹಣವನ್ನು ಖರ್ಚುಮಾಡಿದ್ದಾರೆ. ಜನಗಳ ಹಿತದೃಷ್ಟಿಯಿಂದ, ಜನಗಳಿಗೆ ಅನುಕೂಲಮಾಡುವ ಸಲುವಾಗಿ ನಗರದಲ್ಲಿರುವ ರಸ್ತೆಗಳ ರಿಪೇರಿ ಮಾಡತಕ್ಕದಾಗಲೀ, ಅಂದಚೆಂದಗಳಿಗೆ ಹಣ ವೆಚ್ಚ ಮಾಡುವುದಾಗಲೀ ಸ್ವಾಭಾವಿಕ. ಆದರೆ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಬೆಂಗಳೂರು ನಗರದಲ್ಲಿ ಸಮಾವೇಶವಾದಾಗ ಮಾತ್ರ ಬೆಂಗಳೂರು ನಗರದ ಅನೇಕ ಕಡೆ ಟಾರ್ ಹಾಕಿರುವುದು, ರಸ್ತೆಗೆ ಮಣ್ಣು ಹಾಕಿಸಿರುವುದು, ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕುಗಳ ಅಂದಚೆಂದಗಳಿಗಾಗಿ ಹಣವನ್ನು ಖರ್ಚು ಮಾಡಿರುವುದು ಇವೆಲ್ಲ ಆಗಿವೆ. ಈ ದೃಷ್ಟಿಯಿಂದ ಪ್ರಜಾಪ್ರಭುತ್ವ ತತ್ವಗಳಲ್ಲಿ ನಂಬಿಕೆ ಇರುವ ಜನ, ಜನತಾಪ್ರತಿನಿಧಿಗಳಾಗಿರುವವರು ಅಧಿಕಾರವನ್ನು ಪಡೆದಿದ್ದ ಪಕ್ಷದಲ್ಲಿ ಈ ರೀತಿಯಾಗಿ ಹಣದ ದುರುಪಯೋಗವಾಗುತ್ತಿರಲಿಲ್ಲ. ಅದೂ ಅಲ್ಲದೆ ಎರಡು ವರ್ಷ ಕಾಲ ಅಧಿಕಾರಿಗಳ ಕೈಯಲ್ಲಿ ಆಡಳಿತವನ್ನು ಕೊಟ್ಟು ತಮಗೆ ಬೇಕಾದಹಾಗೆ ಕೆಲಸಕಾರ್ಯಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಇದು ಅಕ್ಷಮ್ಯ ಅಪರಾಧ. ಇದನ್ನು ಮಾಡಬಾರದು ಎಂದು ಹೇಳಿ ಈ ಮಸೂದೆಗೆ ನಾನು ಬೆಂಬಲ ಕೊಡುತ್ತೇನೆ.

† ಶ್ರೀಮತಿ ಎಂ. ಆರ್. ಲಕ್ಷಮ್ಮ.—ಮಾನ್ಯ ಅಧ್ಯಕ್ಷರೇ, ಈ ವಿಧೇಯಕವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತ, ನನ್ನ ಜಿಲ್ಲೆಯಿಂದ ಬಂದಂಥ ಮತ್ತು ನನ್ನ ಕ್ಷೇತ್ರದಿಂದ ಬಂದಂಥ ಶ್ರೀಮಾನ್ ಅಂಜನಪ್ಪನವರು ಆಗಾಗ ಸರ್ಕಾರ ಮಾಡತಕ್ಕ ಕಾರ್ಯಕ್ರಮ ಒಳ್ಳೆಯದು ಎಂದು ಒಪ್ಪಿಕೊಳ್ಳುವ ಸೌಜನ್ಯವನ್ನು ತಳೆದದ್ದು ನನಗೆ ಬಹಳ ಸಂತೋಷವಾಗಿದೆ. ಆದರೆ ಅದೇ ಧ್ವನಿಯಲ್ಲಿ ಇನ್ನೊಂದು ಅಪಶ್ರುತಿಯನ್ನು ನುಡಿದಿದ್ದಾರೆ, ಒಂದು ಆಕ್ಷೇಪವನ್ನು ಎತ್ತಿದ್ದಾರೆ. ಮೊದಲನೆಯದಾಗಿ ಅಕ್ಷರಾನುಕ್ರಮದ ಪ್ರಕಾರ ಏಕೆ ಮತದಾರರ ಪಟ್ಟಿಯನ್ನು ಪ್ರಕಟಿಸಿದರು,

(ಶ್ರೀಮತಿ ಎಂ. ಆರ್. ಲಕ್ಷಮ್ಮ)

ಜನತಾ ಪ್ರಾತಿನಿಧ್ಯದ ಕಾನೂನು ಪ್ರಕಾರ ಏಕೆ ಮತದಾರರ ಪಟ್ಟಿಯನ್ನು ತಯಾರು ಮಾಡಲಿಲ್ಲ ಎನ್ನುವುದು ನನಗೂ ತಿಳಿಯಲಾರದ ವಿಷಯವಾಗಿದೆ. ಇದುವರೆಗೂ ನಡೆದುಬಂದ ಪದ್ಧತಿಯನ್ನು ಬಿಟ್ಟು ಹೊಸ ರೀತಿಯ ಪದ್ಧತಿ, ಅಕ್ಷರಾನುಕ್ರಮಕ್ಕಿರುವ ಪದ್ಧತಿ ಪ್ರಕಾರ ಮತದಾರರ ಪಟ್ಟಿಯನ್ನು ತಯಾರು ಮಾಡಿದರೆ ಜನಗಳನ್ನು ಗುರುತು ಮಾಡುವುದು ಕಷ್ಟ ಎನ್ನುವುದು ಸರ್ಕಾರದವರು ಮುಂಚೆಯೇ ಯೋಚನೆ ಮಾಡದೆ ಇಷ್ಟೊಂದು ದೂರ ಹೋಗಿ, ಪಟ್ಟಿಯನ್ನು ಸಿದ್ಧಪಡಿಸುವ ಕ್ರಮವನ್ನು ಏಕೆ ತೆಗೆದುಕೊಂಡರು, ಒಂದು ಕ್ರಮವನ್ನು ಬದಲಾಯಿಸಿ ಇನೊಂದು ಕ್ರಮವನ್ನು ಏಕೆ ಅನುಸರಿಸಿದರು ಎನ್ನುವುದು ನನಗೆ ಗೊತ್ತಿಲ್ಲ. ನಾವೆಲ್ಲರೂ ಕೂಡ ಇದಕ್ಕೆ ಜವಾಬ್ದಾರರು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಸಮಯದಲ್ಲಿ ಇಲ್ಲ, ರಷ್ ದಿ ರೆಜಿಸ್ಟ್ರೇಷನ್, ಹರಿ ದಿ ರೆಜಿಸ್ಟ್ರೇಷನ್ ಎನ್ನುವ ರೀತಿಯಲ್ಲಿ ಆಗಾಗ್ಗೆ ಆಗುತ್ತಿರುವುದು ಇಂಥ ತಪ್ಪುಗಳಿಗೆ ಪ್ರಮಾದಗಳಿಗೆ ಆಸ್ಪದ ಕೊಡುತ್ತದೆ ಎನ್ನುವುದನ್ನು ಒಪ್ಪುವ ವಿಧಿ ಇಲ್ಲ.

ಬೇಕು ಎಂದು ತಡ ಮಾಡುವುದಕ್ಕೆ ಎರಡು ವರ್ಷವಾದಮೇಲೆ ಸಿದ್ಧವಾಗಿದ್ದೇವೆ ಎಂದು ಹೇಳುತ್ತಾರೆ. ಮೊದಲು ಏನಾದರೂ ತಡ ಮಾಡಿದರೆ ಆವಾಗಲೂ ಆಕ್ಷೇಪ ಮಾಡುವವರು ಎದುರು ಪಕ್ಷದವರೇ. ತ್ವರಿತವಾಗಿ ವಿಚಾರ ಮಾಡಿ ಒಂದು ನಿರ್ಧಾರಕ್ಕೆ ಬಂದರೆ ಆಗಲೂ ಆಕ್ಷೇಪವನ್ನು ತೆಗೆದುಕೊಳ್ಳುವವರೂ ಅವರೇ. ಹೀಗೆ ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಎನ್ನುವಂತೆ ಹೇಗಾದರೂ ಆಗಲಿ ಆಕ್ಷೇಪ ತೆಗೆದುಕೊಳ್ಳುವ ಮನೋಭಾವದಿಂದ ಕೂಡಿರುತ್ತಾರೆ. ಈ ಹೊತ್ತಿನ ದಿವಸ ಚುನಾವಣೆಗಳನ್ನು ಮಾಡಬೇಕು, ಪ್ರಜಾಪ್ರತಿನಿಧಿಗಳು ಬೆಂಗಳೂರು ಕಾರ್ಪೊರೇಷನ್ನಿಗೆ ಚುನಾಯಿತರಾಗಬೇಕು, ಸರಿಯಾದ ವಾತಾವರಣದಲ್ಲಿ ಕಲ್ಯಾಣನಗರಿಯ ಕಾರ್ಯಕ್ರಮ ನಡೆಯಬೇಕು ಎನ್ನುವ ಉದ್ದೇಶದಿಂದ ಸರ್ಕಾರದವರು ಈ ತಿದ್ದುಪಡಿಯನ್ನು ತಂದಿದ್ದಾರೆ. ಮತ್ತು ಇಲ್ಲಿ ಚುನಾವಣೆಗಳನ್ನು ಡಿಸೆಂಬರ್ ತಿಂಗಳಿನಲ್ಲಿ ನಡೆಸಬೇಕೆಂಬ ಯೋಗ್ಯವಾದ ನಿರ್ಣಯವನ್ನು ಕೈಗೊಂಡಿದ್ದಾರೆ.

ಈ ಮಸೂದೆಗೆ ಲಗತ್ತಾಗದೆ ಇರತಕ್ಕ ಒಂದು ಪ್ರಶ್ನೆಯನ್ನು ಪ್ರತಿಪಕ್ಷದ ನಾಯಕರಾದ ಅಂಜನಪ್ಪನವರು ಎತ್ತಿದ್ದಾರೆ. ಕೆಲವೊಂದು ರಸ್ತೆಗಳಿಗೆ ರಿಪೇರಿ ಮಾಡಿದರು, ಕೆಲವೊಂದು ಮನೆಗಳಿಗೆ ಸುಣ್ಣ ಬಣ್ಣ ಮಾಡಿ ಸಿದ್ಧ ಮಾಡಿದರು ಎಂದು ಹೇಳಿದ್ದಾರೆ. ಈ ಕೆಲಸಗಳಿಗಾಗಿ ಖರ್ಚು ಮಾಡಿರುವ ಹಣ ಕಾಂಗ್ರೆಸ್ ಅಧಿವೇಶನಕ್ಕಾಗಿ ಖರ್ಚಾದುದಲ್ಲ. ಈ ರಸ್ತೆಗಳಮೇಲೆ ಯಾರು ತಿರುಗಾಡುತ್ತಾರೆಯೋ ಆ ಜನಗಳಿಗೆ ಅನುಕೂಲವಾಗಿದೆ. ಜಯನಗರದ ಹರವಿನಲ್ಲಿ ಅನೇಕ ರಸ್ತೆಗಳು ಸುಧಾರಿತವಾದದ್ದು ನನಗೆ ಸಂತೋಷ. ಹೀಗೆಯೇ ಇನ್ನೊಂದು ರಾಜಕೀಯ ಪಕ್ಷ ಸಮ್ಮೇಳನವನ್ನು ಮಾಡಿದರೆ ಆ ಸಂಬಂಧದಲ್ಲಿ ಎಲ್ಲಿಯಾದರೂ ಹರವಿನಲ್ಲಿರುವ ರಸ್ತೆಗಳ ರಿಪೇರಿಯಾದರೆ, ಇಡೀ ನಗರದ ರಸ್ತೆಗಳೇ ರಿಪೇರಿಯಾಗಿ, ಬೇಗ ಬೇಗ ಉತ್ತಮವಾಗುವುದಕ್ಕೆ ಒಂದು ಅವಕಾಶವಾಗುತ್ತದೆ. ನಗರ ಕಾರ್ಪೊರೇಷನ್‌ನವರು ಮಾಡಿರುವ ಕೆಲಸಗಳಿಂದ ಎಷ್ಟೋ ನಾಗರೀಕರಿಗೆ ಪ್ರಯೋಜನವಾಗಿ ನಗರವಾಸಿಗಳಿಗೆ ಅನುಕೂಲವಾಗಿದೆ. ಜಯನಗರದ ನಿವಾಸಿಗಳು ಇದರಿಂದ ಬಹಳ ಸಂತುಷ್ಟರಾಗಿದ್ದಾರೆ. ಹೀಗೆಯೇ ಏನಾದರೂ ಸಂದರ್ಭಗಳು ಒದಗಲಿ ಎಂದು ಅವರು ದೇವರನ್ನು ಪ್ರಾರ್ಥಿಸುತ್ತಿದ್ದಾರೆ. ಹೀಗಿರುವಾಗ ಈ ವಿಚಾರವನ್ನು ಹೆಚ್ಚು ಮಾಡತಕ್ಕ ಅಗತ್ಯವಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ಅನಧಿಕೃತ ಕಟ್ಟಡಗಳನ್ನು ತಡೆಯುವುದಕ್ಕೆ ಮತ್ತು ಪೋಲೀಸರ ಸಹಾಯದಿಂದ ಅಂಥ ಅನಧಿಕೃತ ಕಟ್ಟಡಗಳನ್ನು ತೆಗೆದುಹಾಕಲು ಕಮೀಷನರಿಗೆ ಅಧಿಕಾರವನ್ನು ಕೊಡುವ ತಿದ್ದುಪಡಿ ಮುಖ್ಯವಾದುದು. ಇದು ಮುಂಚೆಯೇ ಬಂದಿದ್ದರೆ ಚೆನ್ನಾಗಿತ್ತು. ಅನೇಕ ಕಡೆ ಅನಧಿಕೃತ ಕಟ್ಟಡಗಳು ಎಷ್ಟರಮಟ್ಟಿಗೆ ಆಗಿವೆ ಎನ್ನುವುದನ್ನು ನೋಡಿದರೆ ಸಾಕಷ್ಟು ಅಧಿಕಾರ ಕಮಿಷನರಿಗೆ ಇರುವುದು ಒಳ್ಳೆಯದು ಎಂದು ನಾವು ಯೋಚನೆ ಮಾಡುತ್ತಿದ್ದೆವು. ತಡವಾದರೂ ಚಿಂತೆ ಇಲ್ಲ, ಉಗ್ರವಾದ ಅಧಿಕಾರವನ್ನು ಕಮೀಷನರಿಗೆ ಕೊಟ್ಟಿರುವುದು ಬಹಳ ಒಳ್ಳೆಯದು. ಈ ನಗರದ ಸೌಂದರ್ಯವೇ ಕೆಟ್ಟು ಹೋಗುತ್ತಿದೆ, ಎಷ್ಟೋ ಅನಧಿಕೃತ ಕಟ್ಟಡಗಳು ಬರುತ್ತಿವೆ. ಯಾವುದೇ ನಗರ ಚೆನ್ನಾಗಿ ಬೆಳೆಯಬೇಕಾದರೆ ಸೌಂದರ್ಯರಹಿತವಾಗದೆ ಇರಬೇಕು. ಹಿಂದೆ ಸಾತ್ವಿಕ ರೀತಿಯಲ್ಲಿ ಇದ್ದುದನ್ನು ಈಗ ಉಗ್ರವಾಗಿ ತಂದಿರುವುದು ಈ ಹೊತ್ತಿನ ಪರಿಸ್ಥಿತಿಯಲ್ಲಿ ಸರಿಯಾದದ್ದು ಎಂದು ನಾನು ಹೇಳುತ್ತಿದ್ದೇನೆ. ಕೆಲವೊಂದು ಕಾಲೇಜುಗಳ ಪಕ್ಕದಲ್ಲಿರುವ ಗುಡಿಸಲುಗಳನ್ನು ಬೇರೆ ಕಡೆಗೆ ಹಾಕದೆ ಇದ್ದರೆ ಕಾಲೇಜು ವ್ಯಾಸಂಗದ ಮುನ್ನಡೆಗೆ ಬಹಳ ಧಕ್ಕೆ ಬರುತ್ತದೆ. ಅದಕ್ಕೆ ಸಾಕಷ್ಟು ಅಧಿಕಾರವಿಲ್ಲದೆ ಇರುವುದರಿಂದ ಅಲ್ಲಿಗೆ ನಿಂತಿದೆ. ಆದ್ದರಿಂದ ಈ ರೀತಿ ಸ್ಪಷ್ಟ

ಪಡಿಸಿರುವುದು ಸಕಾಲಿಕವಾಗಿದೆ, ಯೋಗ್ಯವಾಗಿದೆ, ಸಮಂಜಸವಾಗಿದೆ. ಈ ವಿಧೇಯಕವನ್ನು ತಂದಂಥ ಮಾನ್ಯ ಸಚಿವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಮತ್ತೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಕೆ. ಸುಬ್ಬಯ್ಯ.—ಮಾನ್ಯ ಸಭಾಪತಿಗಳೇ, ಈ ತಿದ್ದುಪಡಿ ವಿಧೇಯಕವನ್ನು ಸ್ವಾಗತಿಸುತ್ತ ನಾನೂ ಕೂಡ ಎರಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಇದರಲ್ಲಿ ಮತದಾರರ ಪಟ್ಟಿಯನ್ನು ತಯಾರು ಮಾಡುವಾಗ ಅಕ್ಷರ ಮಾಲೆಗೆ ಅನುಗುಣವಾಗಿ ತಯಾರು ಮಾಡಬೇಕು ಎನ್ನುವುದು ಮೂಲ ಕಾಯಿದೆಯಲ್ಲಿ ಇತ್ತು. ಅದು ತುಂಬ ಕಷ್ಟತರವಾದ ಕೆಲಸವಾಗಿರುವುದರಿಂದ ಜನತಾ ಪ್ರಾತಿನಿಧ್ಯದ ಶಾಸನದ ಪ್ರಕಾರ, ಅಲ್ಲಿರತಕ್ಕ ನಿಯಮಾವಳಿಗನುಗುಣವಾಗಿ ಮನೆ ನಂಬರಿಗೆ ಅನುಗುಣವಾಗಿ ಮತದಾರರ ಪಟ್ಟಿಯನ್ನು ತಯಾರು ಮಾಡುವುದಕ್ಕೆ ಅನುಕೂಲವಾಗುವ ಹಾಗೆ ಮಾಡಬೇಕು ಎಂದು ತಿದ್ದುಪಡಿಯನ್ನು ಮಾನ್ಯ ಸಚಿವರು ಮಂಡಿಸಿದ್ದಾರೆ. ಇದು ಸರಿಯಾದ ತಿದ್ದುಪಡಿಯಾಗಿದೆ. ಆದರೆ ಮಾನ್ಯ ಸದಸ್ಯರಾದ ಅಂಜಪ್ಪನವರು ವ್ಯಕ್ತಪಡಿಸಿದ ಸಂಶಯ ನನ್ನಲ್ಲಿಯೂ ಉಂಟಾಗಿದೆ. ಮೂಲ ಕಾಯಿದೆಯಲ್ಲಿ ಇದು ಹೇಗೆ ಬಂತು ! ಈ ಹೊತ್ತು ತಪ್ಪನ್ನು ಸರಿಪಡಿಸಿಕೊಳ್ಳತಕ್ಕ ತಿದ್ದುಪಡಿಯನ್ನು ಮಾಡಲೇಬೇಕಾಗಿದೆ. ಈ ತಿದ್ದುಪಡಿಯನ್ನು ನೋಡಿದಾಗ ನಮಗೆ ಅರ್ಥವಾಗುತ್ತದೆ. ಈ ತಿದ್ದುಪಡಿಯಾದಮೇಲೆ ಮನೆ ನಂಬರಿಗೆ ಅನುಗುಣವಾಗಿ ಮತದಾರರ ಪಟ್ಟಿ ಮುಂದೆ ತಯಾರಾಗಬೇಕಾಗಿದೆ. ಅನೇಕ ಕಡೆ ಮಾನ್ಯ ಸಚಿವರು ಹೇಳಿಕೆ ಕೊಟ್ಟಮೇಲೆ ಈ ವರ್ಷದ ಅವಧಿಯಲ್ಲಿ ಬೆಂಗಳೂರು ಕಾರ್ಪೊರೇಷನ್ನಿನ ಚುನಾವಣೆ ನಡೆಸುತ್ತೀರೆಂದು ನಾವು ತಿಳಿದುಕೊಂಡಿದ್ದೇವೆ. ಮತದಾರರ ಪಟ್ಟಿ ಇನ್ನೂ ತಯಾರಾಗಿಲ್ಲ, ಆದ್ದರಿಂದ ಈ ವರ್ಷ ಚುನಾವಣೆ ನಡೆಸುವುದಕ್ಕಾಗಲಿಲ್ಲ ಎಂಬ ಧೋರಣೆ ಸರಕಾರ ತಳೆಯಬಾರದು. ಯಾವುದೇ ಚುನಾವಣೆಯಾದರೂ ಕೂಡ ಕಾನೂನಿಗನುಗುಣವಾಗಿ ನಿಯಮಗಳ ಪ್ರಕಾರ ನ್ಯಾಯ ರೀತಿಯಿಂದ ನಡೆಯುವುದು ಸೂಕ್ತ. ಇದೇ ಸಂದರ್ಭದಲ್ಲಿ ಇನ್ನೊಂದು ಸೂಚನೆ ಗಮನಕ್ಕೆ ತರುವುದೇನೆಂದರೆ ಬೆಂಗಳೂರು ಕಾರ್ಪೊರೇಷನ್ ಮತದಾರರಿಗೆ ಸಂಬಂಧಪಟ್ಟಂತೆ ಡಿವಿಜನ್ ಮಾಡಿದ್ದಾರೆ. ಮೊದಲಿದ್ದುದಕ್ಕೂ ಈಗ ಮಾಡಿರುವುದಕ್ಕೂ ಅಸಮಾನತೆ ಇದೆ ಎಂಬ ಕೂಗು ಇದೆ, ಇದನ್ನು ಅನೇಕ ಮತದಾರರು ಹೇಳಿದ್ದಾರೆ. ಒಂದು ವಿಭಾಗದಲ್ಲಿ 4 ಸಾವಿರ ಮತದಾರರು, ಇನ್ನೊಂದು ಕಡೆ 10 ಸಾವಿರ ಮತದಾರರು ಇರುವುದರಿಂದ, ಹೀಗೆ ಅಸಮಾನತೆ ಇರುವುದರಿಂದ, ಈ ವಿಭಾಗಗಳನ್ನು ಪುನರ್ವಿಂಗಡಣೆ ಮಾಡದೆ ಚುನಾವಣೆ ನಡೆಸಿದರೆ ಅನ್ಯಾಯವಾಗುವುದಿಲ್ಲವೇ ಎಂಬ ಪ್ರಶ್ನೆಯನ್ನು ವಿಚಾರಮಾಡಬೇಕಾಗಿದೆ. ಸರಕಾರದವರು ತಳೆದಿರುವ ಧೋರಣೆ ಪ್ರಕಾರ ಈ ವರ್ಷದ ಅಂತ್ಯದಲ್ಲಿ ಚುನಾವಣೆ ಮಾಡಬೇಕು, ಅಷ್ಟರೊಳಗೆ ಮಾನ್ಯ ಸರಕಾರದವರು ಅನಕೂಲವಾಗುವ ರೀತಿಯಲ್ಲಿ ಮನೆ ನಂಬರುಗಳಿಗನುಗುಣವಾಗಿ ಮತದಾರರ ಪಟ್ಟಿ ಮಾಡಬೇಕು, ಮತ್ತು ವಿಭಾಗಗಳನ್ನು ಪುನರ್ವಿಂಗಡಣೆ ಮಾಡುವುದನ್ನು ಪರಿಶೀಲಿಸಿ ಸರಕಾರಕ್ಕೆ ಸೂಕ್ತವೆಂದು ಕಂಡರೆ ಒಡನೆಯೇ ಅದನ್ನು ಕೂಡ ಮಾಡಬೇಕು ಎಂದು ಸೂಚಿಸುತ್ತೇನೆ. ಅದಲ್ಲದೆ ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟಿರುವುದನ್ನು ಪತ್ರಿಕೆಯಲ್ಲಿ ನೋಡಿದೆ. ಮತದಾರರ ಪಟ್ಟಿ ಈಗಾಗಲೆ ತಯಾರಾಗಿದೆ, ಮುದ್ರಣಕ್ಕೆ ಹೋಗಲಿದೆ, ಅದಕ್ಕೆ ಟೆಂಡರ್ ಕರೆದಿವೆ ಎಂದು ಅವರು ಹೇಳಿದ್ದಾರೆ. ಈ ಮಸೂದೆ ನಮ್ಮ ಮುಂದೆ ಇಂದು ಬಂಧಿದೆ. ಇದು ಅಂಗೀಕಾರವಾಗುವುದಕ್ಕೆ ಮೊದಲೇ ಯಾವ ರೀತಿ ಮತದಾರರ ಪಟ್ಟಿ ಮಾಡಿ ಟೆಂಡರ್ ಕರೆದರೋ ಗೊತ್ತಾಗುವುದಿಲ್ಲ. ಈ ಸಂಶಯ ನಿವಾರಣೆಮಾಡಬೇಕು ಎಂದು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಪಿ. ರಾಜಣ್ಣ (ಉಪಾಧ್ಯಾಯರ ಕ್ಷೇತ್ರ).—ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿ ಮಸೂದೆಯನ್ನು ಸ್ವಾಗತಿಸುತ್ತಿದ್ದೇನೆ. ನಾನು ಬೆಂಗಳೂರು ವಾಸಿ. ಆದುದರಿಂದ ಓಟರುಪಟ್ಟಿ ಮಾಡುವಾಗ ಏನು ಅನಾನುಕೂಲವಾಯಿತು ಎಂಬುದು ಗಮನಕ್ಕೆ ಬಂದಿದೆ. ಮೊದಲು ಮನೆ ನಂಬರು ಪ್ರಕಾರ ಓಟರು ಪಟ್ಟಿ ಇತ್ತು. ಈಗಲೂ ಹಾಗೇ ಮಾಡಿದ್ದಾರೆ. ಆದುದರಿಂದ ಬದಲಾವಣೆ ಮಾಡಿಲ್ಲ, ಚುನಾವಣೆ ಮುಂದುವರೆಸುವರು ಎಂಬ ಭಯ ಇರಬೇಕಾಗಿಲ್ಲ. ಈಗ ಮನೆ ನಂಬರು ಪ್ರಕಾರ ಪಟ್ಟಿ ಮಾಡಿದ್ದಾರೆಯೇ ಹೊರತು ಅಕ್ಷರ ಪ್ರಕಾರ ಮಾಡುವುದಕ್ಕಾಗಿಲ್ಲ, ಮಾಡಿಲ್ಲ.

ಶ್ರೀ ಎ. ಕೆ. ಸುಬ್ಬಯ್ಯ.—ಕಾನೂನಿಗನುಗುಣವಾಗಿ ಮಾಡಬೇಕಾದರೆ ಕಾನೂನೇ ಇಲ್ಲದೆ ಅಧಿಕಾರವಿಲ್ಲದೆ ಪಟ್ಟಿ ಯಾವರೀತಿ ಮಾಡಿದರು ?

ಶ್ರೀ ಎಸ್. ಪಿ. ರಾಜಣ್ಣ.—ಕಷ್ಟ ಬಂದಹಾಗೆ ಕಾನೂನು ಬದಲಾಯಿಸಬೇಕು, ಆ ರೀತಿ ಬದಲಾಯಿಸುತ್ತಾರೆ ಎಂಬ ಧೈರ್ಯದಿಂದ ಮಾಡಿರಬೇಕು. ಇಂದು ಒಪ್ಪದಿದ್ದರೆ ಅದೇ ರೀತಿ ಮಾಡಬೇಕಾಗುತ್ತದೆ, ಅದರಿಂದ ಅನಾನುಕೂಲವಾಗುಯ್ತದೆ.

ಇನ್ನು ಕಮಿಷನರ ಅಧಿಕಾರದ ವಿಚಾರ ಹೇಳುತ್ತೇನೆ. ನಾನು ಜಯನಗರದ ವಾಸಿ, ಅಲ್ಲಿ ಅನ್‌ಅಥರೈಜ್ಡ್ ಕನ್‌ಸ್ಟ್ರಕ್‌ಷನ್ ಹೆಚ್ಚಾಗುತ್ತಿದೆ. ಅದಕ್ಕೆ ಕಾರಣ ಕೊಳಚೆ ಪ್ರದೇಶವನ್ನು ನಿರ್ಮೂಲ ಮಾಡದಿರುವುದು. ಇದರಿಂದ ಒಂದು ಅಂಥ ಪ್ರದೇಶವಿದ್ದುದು ನಾಲ್ಕಾಗಿದೆ. ಅಲ್ಲಿ ರೆವಿನ್ಯೂ ಲ್ಯಾಂಡ್ ಇದೆ, ಅದರಲ್ಲಿ ಗುಡಿಸಲುಗಳನ್ನು ಕಟ್ಟುತ್ತಾ ಇದ್ದಾರೆ. ಅವನ್ನು ತಡೆಗಟ್ಟುವುದಕ್ಕೆ ಕಮೀಷನರಿಗೆ ಅಧಿಕಾರ ಬೇಕಾಗಿತ್ತು. ಆದುದರಿಂದ ಈ ವಿಧೇಯಕವನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ (ವಿಧಾನಸಭಾ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಈ ಸದನದ ಮುಂದೆ ಬಂದಿರುವ ಬೆಂಗಳೂರು ಕಾರ್ಪೊರೇಷನ್‌ನ ಎರಡನೆಯ ತಿದ್ದುಪಡಿ ಮಸೂದೆಯೇನಿದೆ ಅದನ್ನು ನಾವು ಸ್ವಾಗತಿಸಬೇಕಾದರೂ ಕೂಡ ಅದರಲ್ಲಿರುವ ಕೆಲವು ಅಂಶಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಈ ಬಿಲ್ಲನ್ನು ತೆಗೆದುಕೊಂಡುಬಂದ ಉದ್ದೇಶವನ್ನು ಸರಕಾರದವರು ತಿಳಿಸಿದ್ದಾರೆ. ಕಾರ್ಪೊರೇಷನ್ ಆಡಳಿತವನ್ನು ಚುನಾಯಿತ ಪ್ರತಿನಿಧಿಗಳು ನಡೆಸುತ್ತಿದ್ದಾಗ ಸರಕಾರ ಅವರಿಂದ ಅಧಿಕಾರವನ್ನು ವಹಿಸಿಕೊಂಡು ಅಲ್ಲಿದ್ದ ಚುನಾಯಿತ ಪ್ರತಿನಿಧಿಗಳನ್ನು ವಜಾಮಾಡಿ ಒಬ್ಬ ಆಡಳಿತ ಅಧಿಕಾರಿಯನ್ನು ನೇಮಕಮಾಡಿತು. ಅದಕ್ಕೆ ಕೊಟ್ಟ ಕಾರಣವೇನೆಂದರೆ ಅಲ್ಲಿ ಆಡಳಿತ ಸರಿಯಾಗಿ ರಲಿಲ್ಲ ಎಂದು ಹದಿನೆಂಟು ಛಾರ್ಜ್‌ಷೀಟ್ ಮಾಡಿ ಕಾರ್ಯ ಸರಿಯಾಗಿ ನಡೆಯದೇ ಇರುವುದರಿಂದ ಆಡಳಿತ ವಹಿಸಿಕೊಂಡಿದ್ದೇವೆ ಎಂಬುದು. ಈ ಬಿಲ್ಲನ್ನು ತರುವಾಗ ಈ ವಿಷಯ ಪ್ರಸ್ತಾಪಿಸಿದ್ದರೆ ಚೆನ್ನಾಗಿತ್ತು. ಈ ಚುನಾವಣೆ ನಡೆಸಬೇಕೆಂಬ ಉದ್ದೇಶದಿಂದ ಈ ಬಿಲ್ಲನ್ನು ತಂದಿದ್ದೇವೆ ಎಂದು ಹೇಳುತ್ತಿದ್ದಾರೆ. ಚುನಾವಣೆ ನಡೆಯಬೇಕು, ಆದರೆ ಇಷ್ಟು ತಡ ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ನಾವು ನೋಡಿದಹಾಗೆ ಯಾವ ಒಂದು ಸ್ಥಾನ ಖಾಲಿ ಇರಲಿ ಅಥವಾ ಸರಕಾರದ ಆಡಳಿತಕ್ಕೆ ವಹಿಸಿಕೊಳ್ಳಲಿ, ರಾಜ್ಯಪಾಲರು ಅಥವಾ ಪ್ರೆಸಿಡೆಂಟರು ಯಾರಾದರೂ ವಹಿಸಿಕೊಳ್ಳಲಿ, ವಹಿಸಿಕೊಂಡಮೇಲೆ 6 ತಿಂಗಳಲ್ಲಿ ಚುನಾವಣೆ ಮಾಡಬೇಕಾದ ಒಂದು ಪದ್ಧತಿ ಇದೆ. ಸೂಪರ್ ಸೀಡ್ ಮಾಡುವ ವಿಧಾನ ಈಗಿನ ಮಂತ್ರಿಗಳು ಬಂದಮೇಲೆ ನಿಂತಿವೆ. ಹಿಂದಿದ್ದವರು ಎಲ್ಲಾ ಸೂಪರ್ ಸೀಡ್ ಮಾಡಿದವರು, ಚುನಾವಣೆ ಮುಂದಕ್ಕೆ ಹಾಕಿ ತಳ್ಳಿಕೊಂಡು ಹೋದರು. ಮೂಲಭೂತ ತತ್ವವೊಂದಿದೆ. ಯಾವ ಉದ್ದೇಶಕ್ಕಾಗಿ ಸೂಪರ್‌ಸೀಡ್ ಮಾಡಿದರೋ ಅದನ್ನಾದರೂ ಸರಕಾರಿ ಅಧಿಕಾರಿ ಇರುವಾಗ ಸಾಧಿಸಿದ್ದರೆ ನಿಜವಾಗಿಯೂ ಒಳ್ಳೆಯ ಮಸೂದೆ ಮಾಡಿದ್ದಾರೆ ಎಂದು ತಿಳಿಯಬಹುದಾಗಿತ್ತು. ಕಾರಣ ಕೊಟ್ಟಿರುವುದೊಂದು, ಒಳಗಡೆ ಇದ್ದ ಉದ್ದೇಶ ಬೇರೆ. ಚುನಾವಣೆ ಮಾಡಲು ಇಷ್ಟು ಕಾಲ ಏಕೆ ಬೇಕಾಗಿತ್ತು ? ಬಹುಶಃ ವಿರೋಧ ಪಕ್ಷದವರು ಕಾರ್ಪೊರೇಷನ್ನಿನಲ್ಲಿದ್ದುದರಿಂದ ಅವರನ್ನು ತೆಗೆದುಹಾಕಿದರೆ ಎ ಐ ಸಿ ಸಿ ಗೆ ಸಾಕಷ್ಟು ಕಾರ್ಪೊರೇಷನ್ನಿನ ಹಣ ಖರ್ಚು ಮಾಡಬಹುದು, ಅನುಕೂಲ ಮಾಡಬಹುದು ಎಂಬ ಉದ್ದೇಶದಿಂದ ಸೂಪರ್ ಸೀಡ್ ಮಾಡಿರಬಹುದು. ಇಲ್ಲದಿದ್ದರೆ 18 ಛಾರ್ಜುಗಳೇನಿತ್ತು ಅವುಗಳನ್ನು ಸರಿಪಡಿಸಿರುವರೇ ಎಂಬುದನ್ನು ಮಂತ್ರಿಗಳು ಹೇಳಬೇಕು, ಹಾಗೆ ಮಾಡಿದರೆ ಜನರಿಗೆ ಒಂದು ಒಳ್ಳೆಯ ಅಭಿಪ್ರಾಯ ಬರುವುದು; ಒಳ್ಳೆಯ ಉದ್ದೇಶದಿಂದ ಸೂಪರ್‌ಸೀಡ್ ಮಾಡಿದ್ದಾರೆ ಎಂದು ತಿಳಿಯುವರು.

ಡಿಸೆಂಬರ್ ಒಳಗೆ ಚುನಾವಣೆ ನಡೆಸುತ್ತೇವೆ ಎಂದು ಮಾನ್ಯ ಮಂತ್ರಿಗಳು ಅನೇಕ ಸಾರಿ ಹೇಳಿದ್ದಾರೆ, ಬಹಳ ಸಂತೋಷ, ಒಂದು ದಿವಸವೂ ಕೂಡ ತಡವಾಗದ ಹಾಗೆ ನಡೆಸುವುದು ಬಹಳ ಒಳ್ಳೆಯದು. ಓಟರು ಲಿಸ್ಟ್‌ಗಳಲ್ಲಿ ಬದಲಾವಣೆ ಮಾಡುವುದು ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯಬೇಕಾಗಿದೆ. ಹಾಗಲ್ಲದೆ ಪೀಪಲ್ಸ್ ರೆಪ್ರಸೆಂಟೇಷನ್ ಆಕ್ಟ್ ಪ್ರಕಾರ ತಯಾರು ಮಾಡಿರತಕ್ಕ ಲಿಸ್ಟನ್ನು ಅನುಸರಿಸಿದ್ದೇ ಆದರೆ ಬಹಳ ಹೆಚ್ಚಿನ ತೊಂದರೆಯಾಗುತ್ತದೆ ಎಂದು ಭಾವಿಸಿದ್ದೇನೆ. ಏಕೆಂದರೆ ಯಾರಿಗೆ ಓಟು ಕೊಡತಕ್ಕ ಅಧಿಕಾರ, ಹಕ್ಕು ಇಲ್ಲವೋ ಅವರನ್ನು ಕರಸಿ ಓಟು ಕೊಡಿಸತಕ್ಕ ಅವಕಾಶ ಇದೆ. ಇದನ್ನು ಪರಿಶೀಲನೆ ಮಾಡಬೇಕು. ಓಟರುಗಳ ಲಿಸ್ಟಿನಲ್ಲಿ ತಿದ್ದುಪಡಿಮಾಡತಕ್ಕದ್ದು, ಅಡಿಷನ್ಸ್ ಮತ್ತು ಡಿಲಿಷನ್ಸ್ ಇದಕ್ಕೆ ಹೆಚ್ಚು ಪ್ರಚಾರ ಮಾಡಿ, ಇಂತಹ ಅವಧಿಯಲ್ಲೇ ಚುನಾವಣೆ ಮಾಡುತ್ತೇವೆ ಅಂತ ಹೇಳಿ ವಾರಕ್ಕೆ ಒಂದು ಸಾರಿ ಪಬ್ಲಿಷ್ ಮಾಡಿದರೆ ಒಳ್ಳೆಯದು, ಮತ್ತು ಮೈಕ್ ಮುಖಾಂತರ ಬೆಂಗಳೂರು ಕಾರ್ಪೊರೇಷನ್ ಏರಿಯಾದಲ್ಲಿ ಪ್ರಚಾರ ಮಾಡಿದ್ದೇ ಆದರೆ ಅನೇಕ ಜನ ಲೇಬರರ್ಸ್ ಇದ್ದಾರೆ, ಅವರಿಗೆ ತಿಳಿವಳಿಕೆ ಕೊಟ್ಟ ಹಾಗಾಗುತ್ತದೆ. ಇಲ್ಲದೇ ಹೋದರೆ ಅನೇಕ ಜನಗಳಿಗೆ ಗೊತ್ತಾಗುವುದಿಲ್ಲ; ಸಾವಿರಾರು ಜನರು ಓಟುಕೊಡತಕ್ಕ ಜನ ಅವರ ಓಟನ್ನು ಚಲಾಯಿಸಲು ಅವಕಾಶವಿಲ್ಲದಂತಾಗುತ್ತದೆ. ಇನ್ನೊಂದು

ಮುಖ್ಯವಾದ ವಿಷಯವೇನೆಂದರೆ ಓಟರು ಲಿಸ್ಟ್‌ನಲ್ಲಿ ಸೇರಿಸಬೇಕೆಂದು ಅರ್ಜಿಕೊಡುತ್ತಾನೆ, ಅದು ಸರಿಯೋ ಅಲ್ಲವೋ ಎಂಬುದು ಗೊತ್ತಾಗುವುದಿಲ್ಲ, ಯಾವುದೋ ಮೂರೆಯಲ್ಲಿರುವ ಒಂದು ಸಾವಿರ ಜನರನ್ನು ನನ್ನ ಡಿವಿಜನ್‌ನಲ್ಲಿ ಸೇರಿಸಿದರೆ ಅದು ಸರಿಯೇ ಅಲ್ಲವೇ ಅಂತ ಹೇಳಿ ತಕರಾರು ಹಾಕುವುದಕ್ಕೆ ಪಬ್ಲಿಕೇಷನ್ ಅದನಂತರ 3 ದಿವಸ ಅಥವಾ ಒಂದು ವಾರ ಟೈಂ ಕೊಡಬೇಕು. ಆ ರೀತಿ ಮಾಡಿ ಚುನಾವಣೆ ನಡೆಸುವುದು ಬಹಳ ಒಳ್ಳೆಯದು ಎಂದು ಸೂಚಿಸುತ್ತೇನೆ.

ಮುನಿಸಿಪಲ್ ರೂಲ್ಸ್‌ಗೆ ವಿರೋಧವಾಗಿ ಕಟ್ಟಡಗಳನ್ನು ಕಟ್ಟಿದರೆ ಅವನ್ನು ಒಡೆದುಹಾಕುವುದಕ್ಕೆ ಅಧಿಕಾರವನ್ನು ಕೇಳಿದ್ದಾರೆ. ಈಗಿರುವ ಅಧಿಕಾರವನ್ನು ಉಪಯೋಗ ಮಾಡಿ ಎಷ್ಟು ಕಟ್ಟಡಗಳನ್ನು ಒಡೆಸಿ ಹಾಕಿದ್ದೀರಿ ಎಂದು ಕೇಳುತ್ತೇನೆ. ಎಷ್ಟೋ ಅನ್ ಅಥರೈಸ್ಡ್ ಕನ್‌ಸ್ಟ್ರಕ್ಷನ್‌ಗಳು ಪ್ರತಿನಿತ್ಯ ಆಗುತ್ತಿರುತ್ತವೆ ಅವೆಲ್ಲವೂ ಕೂಡ ರೆಗ್ಯುಲರೈಸ್ ಆಗಿವೆಯೋ ? ಖಂಡಿತವಾಗಿಯೂ ಈ ನಗರ ಸಭೆಯ ಆಡಳಿತ ಬಹಳ ವಿಚಿತ್ರವಾಗಿ ನಡೆಯುತ್ತಿದೆ ಎಂದು ಹೇಳಬೇಕಾಗಿದೆ. ಕೌನ್ಸಿಲ್ ಇದ್ದಾಗ ಕೊನೆ ಪಕ್ಷ ಚರ್ಚೆಗಾದರೂ ಬರುತ್ತಿತ್ತು, ಈ ಅಡ್ಮಿನ್‌ಸ್ಟ್ರೇಟರ ಕಾಲದಲ್ಲಿ ಅನ್ ಅಥರೈಸ್ಡ್ ಕನ್‌ಸ್ಟ್ರಕ್ಷನ್‌ನ್ನು ಎಷ್ಟು ರೆಗ್ಯುಲರೈಸ್ ಮಾಡಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಯಾವ ಉದ್ದೇಶದಿಂದ ಸೂಪರಸೀಡ್ ಮಾಡಲಾಯಿತೋ ಅದಕ್ಕೆ ತದ್ವಿರುದ್ಧವಾಗಿ ಕಾರ್ಯಕ್ರಮಗಳು ನಡೆದಿವೆ ಎಂದು ಕಂಡುಬಂದ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳಮೇಲೆ ತೀವ್ರ ಕಾರ್ಯಕ್ರಮ ತೆಗೆದುಕೊಂಡು ಅವರನ್ನು ಡಿಗ್ರೇಡ್ ಮಾಡಬೇಕೆಂದು ಹೇಳಬಯಸುತ್ತೇನೆ.

ಕಾನೂನು ಇದೆ, ಅದರ ಪ್ರಕಾರ ಲೈಸೆನ್ಸ್ ತೆಗೆದುಕೊಳ್ಳಬೇಕು, ಕಟ್ಟಡ ಕಟ್ಟಬೇಕು. ಅವನು ಏನು ಮಾಡುತ್ತಾನೆ ? ಆ ರೀತಿ ಯಾವುದನ್ನೂ ಮಾಡದೆ ಎಲ್ಲಾ ಅಧಿಕಾರಗಳನ್ನೂ ಸರಿಪಡಿಸಿಕೊಳ್ಳುತ್ತಾನೆ, ಹೆಲ್ತ್ ಇನ್‌ಸ್ಪೆಕ್ಟರಿಂದ ಹಿಡಿದು ಅತ್ಯಂತ ಮೇಲಿನ ಅಧಿಕಾರಿಯವರೆಗೂ ಸರಿಪಡಿಸಿಕೊಂಡು ಲಕ್ಷಣವಾಗಿ ಮನೆ ಕಟ್ಟಿ ಒಂದುವೇಳೆ ಅವನಮೇಲೆ ಕೇಸು ಹಾಕಿದರೆ ಕಾಂಪೌಂಡ್ ಮಾಡಿಕೊಳ್ಳಲು ಎಷ್ಟು ಬೇಕೋ ಅಷ್ಟನ್ನೂ ಮಾಡಿ ರೆಗ್ಯುಲರೈಸ್ ಮಾಡಿಸಿಕೊಳ್ಳುತ್ತಾನೆ. ಆಗ ಯಾವುದೂ ಗೊತ್ತಾಗುವುದಿಲ್ಲ. ಇಂತಹ ಕೃತ್ಯಗಳು ಸೂಪರ್‌ಸೀಡ್ ಆದ ಟೈಂನಲ್ಲಿ ಎಷ್ಟು ಆಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕು. ಇದರಿಂದ ಬಹಳ ದುಷ್ಪರಿಣಾಮವಾಗಿದೆ. ನಮಗೆಲ್ಲಾ ಗೊತ್ತಿದೆ, ಒಂದು ದೊಡ್ಡ ರಸ್ತೆ ಒಡೆದು ಲಕ್ಷಾಂತರ ರೂಪಾಯಿ ಕಾಂಪೆನ್‌ಸೇಷನ್ ಕೊಟ್ಟಿದ್ದೇವೆ ಮನೆ ಕಟ್ಟುವುದಕ್ಕೆ ಅವಕಾಶ ಕೊಡುತ್ತೇವೆ, ರಸ್ತೆ ಒತ್ತುವರಿ ಮಾಡುವುದಕ್ಕೆ ಅವಕಾಶ ಕೊಡುತ್ತೇವೆ, ಅನಾರೋಗ್ಯ ಪರಿಸ್ಥಿತಿಯನ್ನು ಉಂಟುಮಾಡತಕ್ಕ ಪರಿಸ್ಥಿತಿಯನ್ನು ನಾವೇ ಉಂಟುಮಾಡುತ್ತೇವೆ. ಇದನ್ನೆಲ್ಲಾ ಮಾಡಿದಮೇಲೆ ಇದನ್ನು ಸರಿಪಡಿಸುವುದಕ್ಕೆ ಮತ್ತೆ ಜನತೆಯ ಹಣವನ್ನು ಉಪಯೋಗಿಸಿ ಸರಿಮಾಡುತ್ತೇವೆ ಎಂದರೆ ಇದರಂತಹ ಅಪರಾಧ ಯಾವುದೂ ಇಲ್ಲ. ಮಾನ್ಯ ಮಂತ್ರಿಗಳು ನಿಗಾವಹಿಸಿ ಈ ರೀತಿಯ ಅನ್ಯಾಯವಾಗುವುದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಏನೇನೋ ಅಕ್ರಮ ನಡೆದಿದೆ ಎಂದು ಜನ ಹೇಳುತ್ತಾರೆ, ಹೇಳುವವರು ಇಲ್ಲ, ಕೇಳುವವರು ಇಲ್ಲ. ಮೇಲಿನಿಂದ ಹಿಡಿದು ಕೆಳಗಿನವರವರೆಗೂ ಲಂಚ ಕೊಟ್ಟು ಎಲ್ಲವನ್ನೂ ಸರಿಮಾಡಿಕೊಳ್ಳುತ್ತಿರುವುದರಿಂದ ಈ ರೀತಿಯ ಅವ್ಯವಹಾರಗಳು ನಡೆಯುತ್ತಿವೆ, ಇದಕ್ಕೆ ಅವಕಾಶ ಕೊಡದ ಹಾಗೆ ಸರ್ಕಾರ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಇವಕ್ಕೆಲ್ಲಾ ಅವಕಾಶವಿದೆಯೋ ಹೇಗೆ ಎಂಬುದನ್ನು ನೋಡಬೇಕೆಂದು ನಾನು ಹೇಳಬಯಸುತ್ತೇನೆ. ಈ ಒಂದು ಸಂದರ್ಭದಲ್ಲಿ ಸರ್ಕಾರದವರು ತಂದಿರುವ ಈ ತಿದ್ದುಪಡಿ ಮಸೂದೆಯನ್ನು ಸ್ವಾಗತಿಸುತ್ತೇನೆ. ಮಾನ್ಯ ಮಂತ್ರಿಗಳು ಈಗಾಗಲೆ ಅಪ್ಪಣೆ ಕೊಡಿಸಿದ ಹಾಗೆ ಈ ಚುನಾವಣೆಯನ್ನು ಬೇಗ ನಡೆಸುವುದಕ್ಕೆ ಅನುಕೂಲ ಆಗುವಂತೆ ಓಟರುಗಳ ಲಿಸ್ಟನ್ನು ತರಿಸಿ ಅವುಗಳನ್ನು ಚೆಕ್‌ಮಾಡಿ ಸಕಾಲದಲ್ಲಿ ಚುನಾವಣೆಗಳನ್ನು ನಡೆಸುವುದಕ್ಕೆ ಸಿದ್ಧತೆಗಳನ್ನು ಮಾಡಬೇಕೆಂದು ಹೇಳುತ್ತೇನೆ. ಮೇಲಾಗಿ ಈಗ ಇದರ ಛಾರ್ಜಿನಲ್ಲಿರತಕ್ಕ ಮಾನ್ಯ ಸಚಿವರು ಯುವಕರು ಒಳ್ಳೆಯ ಉತ್ಸಾಹಶಾಲಿಗಳು, ಇವರು ಚೆನ್ನಾಗಿ ಕೆಲಸ ಮಾಡುತ್ತಾರೆಂಬ ನಂಬಿಕೆ ನನಗಿದೆ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

6-00 P.M.

†ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಮಾನ್ಯ ಸಭಾಪತಿಗಳೇ, ಮಾನ್ಯ ಮಂತ್ರಿಗಳು ಸ್ಥಳೀಯ ಸಂಸ್ಥೆಗಳ ಆಡಳಿತಕ್ಕೆ ಸಂಬಂಧಪಟ್ಟ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ. ಇದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈ ತಿದ್ದುಪಡಿ ಮಸೂದೆಯನ್ನು ಸಾಮಾನ್ಯವಾಗಿ ಈ ಸಭೆಯಲ್ಲಿ ಎಲ್ಲರೂ ಸ್ವಾಗತಿಸಿದ್ದಾರೆ. ಇದೊಂದು ಬಹಳ ಸಂತೋಷದ ವಿಷಯ. ಇಲ್ಲ

(ಶ್ರೀ ಕೆ. ಸೂರ್ಯನಾರಾಯಣ ಅಡಿಗ)

ಆಡಳಿತ ಪಕ್ಷದವರು ಯಾವುದೇ ಒಂದು ಮಸೂದೆಯನ್ನು ತರಲಿ, ಅದು ಎಷ್ಟೇ ಒಳ್ಳೆಯದಾಗಿರಲಿ, ವಿರೋಧಪಕ್ಷದಲ್ಲಿರತಕ್ಕ ಸದಸ್ಯರು ಅದನ್ನು ವಿರೋಧಿಸಲೇಬೇಕು ಎಂಬುದು ವಿರೋಧಪಕ್ಷಗಳವರ ಒಂದು ಸಾಮಾನ್ಯ ನೀತಿಯಾಗಿದೆ. ಇದೇ ವಿಚಾರದಲ್ಲಿ ಒಬ್ಬ ಸುಪ್ರಸಿದ್ಧ ರಾಜಕಾರಣಿ ಸರ್ ಐವರ್ ಜೆನ್ನಿಂಗ್ಸ್ ಎಂಬಾತನು— "ದಿ ಡ್ಯೂಟಿ ಆಫ್ ದಿ ಅಪೋಜಿಷನ್ ಈಸ್ ಟು ಅಪೋಸ್" ಎಂಬ ಒಂದು ದೊಡ್ಡ ಗ್ರಂಥವನ್ನೇ ಬರೆದಿದ್ದಾನೆ. ಸರ್ಕಾರದವರು ಏನೇ ತರಲಿ ಅದನ್ನು ವಿರೋಧ ಪಕ್ಷಗಳು ವಿರೋಧಿಸಬೇಕು ; ಆತನ ತತ್ವದ ಪ್ರಕಾರ. ಆದರೆ ಈ ಸಂದರ್ಭದಲ್ಲಿ ಸರ್ಕಾರದವರು ತಂದಂಥ ಬಿಲ್ಲನ್ನು ಇಲ್ಲಿ ವಿರೋಧ ಪಕ್ಷಗಳವರು ಇದನ್ನು ಸ್ವಾಗತ ಮಾಡಿದ್ದಾರೆ. ಇದೊಂದು ಒಳ್ಳೆಯ ಚಿಹ್ನೆ ಮತ್ತು ಈ ಸಭೆಯಲ್ಲಿ ಒಂದು ಒಳ್ಳೆಯ ಮೇಲುಪಂಗ್ತಿಯನ್ನು ಹಾಕಿದಂತಾಗಿದೆ. ಆದರೆ ಶ್ರೀಮತಿ ಲಕ್ಷಮ್ಮನವರು ಇದೇ ಸಂದರ್ಭದಲ್ಲಿ ಒಂದು ಅಪಸ್ವರ ಬಂದಿತೆಂದು ಹೇಳಿದರು. ಆದರೆ ಪ್ರಾರಂಭದಲ್ಲಿ ಸ್ವರಗಳೆಲ್ಲಾ ಅಪಸ್ವರಗಳೇ. ಅವು ಬರುಬರುತ್ತ ಒಳ್ಳೆಯ ಸ್ವರಗಳಾಗುತ್ತವೆ. ನಗರಸಭೆಯನ್ನು ಸರ್ಕಾರದವರು ಕೈವಶಮಾಡಿಕೊಂಡಿದ್ದು ನಗರದಲ್ಲಿ ಎ. ಐ. ಸಿ. ಸಿ. ಯ ಅಧಿವೇಶನದ ಬಗ್ಗೆ ಮಾಡತಕ್ಕ ಕೆಲಸಕಾರ್ಯಗಳಿಗಾಗಿ, ಹಾಗೆ ಇದನ್ನು ಅವರು ಕೈವಶಮಾಡಿಕೊಂಡರೆಂದು ಯಾರೋ ಒಬ್ಬ ಸದಸ್ಯರು ಹೇಳಿದರು. ಆದರೆ ಅದು ಸತ್ಯಕ್ಕೆ ದೂರವಾದ ವಿಷಯ. ಮುಂದೆ ಬೆಂಗಳೂರು ನಗರದಲ್ಲಿ ಇಂಥ ವೇಳೆಯಲ್ಲಿ ಇಲ್ಲಿ ಎ. ಐ. ಸಿ. ಸಿ. ಯ ಅಧಿವೇಶನ ನಡೆಯುತ್ತದೆಂಬ ಭವಿಷ್ಯವನ್ನು ಸರ್ಕಾರದವರು ಮುಂದಾಗಿ ಮನಗಂಡು ಹೀಗೆ ಸೂಪರ್‌ಸೀಡ್ ಮಾಡಿದರೆಂಬುದು ಸತ್ಯಕ್ಕೆ ದೂರವಾದ ಮಾತು. ಹಾಗೆ ಇದನ್ನು ಸೂಪರ್‌ಸೀಡ್ ಮಾಡಿದ ವೇಳೆಯಲ್ಲಿ ಇದ್ದ ನಗರಾಡಳಿತದ ಅಧ್ಯಕ್ಷರಾರು ! ಮೇಯರರು ಯಾರು ! ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದ ಶ್ರೀ ತಿಮ್ಮರಾಯ ಗೌಡರಿದ್ದರು. ಅಂದಾಗ ಸರ್ಕಾರದವರಿಗೆ ಸೂಪರ್‌ಸೀಡ್ ಮಾಡತಕ್ಕ ಅಗತ್ಯವಾದರೂ ಏನಿತ್ತು ?

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ತಾವು ಹೇಳುತ್ತಿರುವುದು, ನಿಜ. ಆಗ ಮೇಯರಾಗಿದ್ದವರು ಶ್ರೀ ತಿಮ್ಮರಾಯಗೌಡರು, ನಿಜ. ಆದರೆ ಅವರಿಗೆ ಮೇಜಾರಿಟಿ ಇರಲಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಕಾಂಗ್ರೆಸ್ಸಿಗೆ ಬಹಳ ಬೇಕಾದವರೇ ಇದ್ದರು. ಅವರು ಒಂದೂವರೆ ವರ್ಷಕಾಲ ಒಂದು ಮೀಟಿಂಗನ್ನೂ ಕರೆಯಲಿಲ್ಲ. ಅದಕ್ಕೇಕೆ ಸುಮ್ಮನಿದ್ದರು ?

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಇಲ್ಲಿನ ಆಡಳಿತವನ್ನು ಸರ್ಕಾರದವರು ವಹಿಸಿಕೊಂಡಿದ್ದು ನ್ಯಾಯವಾದ ಕಾರಣಗಳಿಗಾಗಿ. ಅವರು ವಿನಾಕಾರಣ ಈ ಆಡಳಿತವನ್ನು ವಹಿಸಿಕೊಳ್ಳಲಿಲ್ಲ. ಈ ವಿಚಾರ ಶ್ರೇಷ್ಠ ನ್ಯಾಯಾಲಯಕ್ಕೂ ಹೋಗಿ ಅಲ್ಲಿ ಆಡಳಿತವನ್ನು ಸರ್ಕಾರದವರು ವಹಿಸಿಕೊಳ್ಳಲೇಬೇಕೆಂದು ಆಜ್ಞೆಯಾದ್ದರಿಂದ ಸರ್ಕಾರದವರು ಆಡಳಿತವನ್ನು ವಹಿಸಿಕೊಂಡರು. ಅಷ್ಟೇವಿನಾ ಇವರು ಅಧಿಕಾರ ಲಾಲಸೆಯಿಂದೇನೂ ಹಾಗೆ ಮಾಡಲಿಲ್ಲ. ಇನ್ನು ಇಲ್ಲಿ ಲೈಸೆನ್ಸ್‌ಗಳಿಲ್ಲದೆ ಕಟ್ಟಡಗಳನ್ನು ಮಾಡಿದ್ದಾರೆಂದು ಹೇಳಿದರು. ನಾನು ಇಲ್ಲಿಯವನಲ್ಲ. ನನಗೆ ಇಲ್ಲಿನ ಮಾಹಿತಿ ಅಷ್ಟು ಹೆಚ್ಚಾಗಿ ಇಲ್ಲ. ಇದರ ಬಗ್ಗೆ ನಾನೇನೂ ಹೇಳಲಾರೆ. ಸರ್ಕಾರದವರು ಆಡಳಿತವನ್ನು ವಹಿಸಿಕೊಂಡಮೇಲೆ ಇಲ್ಲಿ ಒಳ್ಳೆಯ ದೊಡ್ಡ ದೊಡ್ಡ ರಸ್ತೆಗಳನ್ನು ಮಾಡಿದ್ದಾರೆ. ದೀಪದ ವ್ಯವಸ್ಥೆಯನ್ನು ಉತ್ತಮಗೊಳಿಸಿದ್ದಾರೆ. ಆದರೆ ನಗರದ ಪ್ರತಿನಿಧಿಗಳಿದ್ದರೂ ಒಳ್ಳೆಯ ಕೆಲಸಗಳನ್ನೇ ಮಾಡುತ್ತ ಇದ್ದರು. ಸರ್ಕಾರದವರು ಆಡಳಿತವನ್ನು ವಹಿಸಿಕೊಂಡಮೇಲೂ ಇಲ್ಲಿ ಎಷ್ಟೋ ಉತ್ತಮವಾದ ಕೆಲಸಗಳನ್ನು ಮಾಡಿದ್ದಾರೆ. ಬಾಕಿ ಇದ್ದ ಹಣಕಾಸುಗಳನ್ನು ವಸೂಲ್ಮಾಡಿದ್ದಾರೆ. ಇದನ್ನೆಲ್ಲಾ ಅವರು ಎ. ಐ. ಸಿ. ಸಿ. ಗಾಗಿ ಮಾಡಲಿಲ್ಲ. ನಗರವನ್ನು ಸುಂದರವನ್ನಾಗಿ ಮಾಡಿದ್ದಾರೆ. ಈ ಹಿಂದೆ ಇದೇ ಬೆಂಗಳೂರು ನಗರದಲ್ಲಿ ಪಿ. ಎಸ್. ಪಿ. ಪಕ್ಷದವರ ಒಂದು ದೊಡ್ಡ ಅಧಿವೇಶನ ನಡೆಯಿತು. ಆಗ ಸರ್ಕಾರದವರು ಆ ಪಕ್ಷದ ಅಧ್ಯಕ್ಷರನ್ನು ಸ್ಟೇಟ್‌ಗೆಸ್ಟಾಗಿ ಕಾರು—ಬಂಗಲೆಗಳನ್ನೆಲ್ಲಾ ಕೊಟ್ಟು, ಅವರಿಗೇನೊಂದು ಗೌರವವನ್ನು ಸಲ್ಲಿಸಬೇಕಾಗಿತ್ತೋ ಅದನ್ನು ಸಲ್ಲಿಸಿದ್ದಾರೆ. ಸಾಧ್ಯವಾದಮಟ್ಟಿಗೂ ಒಳ್ಳೆಯ ವಸತಿಸೌಕರ್ಯಗಳನ್ನು ಒದಗಿಸಿಕೊಟ್ಟರೆ ಇಲ್ಲಿಗೆ ಬರತಕ್ಕ ಜನರು ಹೆಚ್ಚಾಗುತ್ತಾರೆ. ಅದರಿಂದಲೂ ರಾಜ್ಯಕ್ಕೆ ವರಮಾನ ಉಂಟು. ಆದ್ದರಿಂದ ನಗರಗಳನ್ನು ಸುಂದರವಾಗಿಡುವುದು ಒಳ್ಳೆಯದು.

ಇನ್ನೊಂದು ವಿಚಾರ, ಈ ತಿದ್ದುಪಡಿ ಮಸೂದೆಯಲ್ಲಿ ಓಟರು ಲಿಸ್ಟನ್ನು ಬದಲಾವಣೆ ಮಾಡತಕ್ಕ ವಿಚಾರ ಹೇಳಿದ್ದಾರೆ. ಹಿಂದೆ ಅಕ್ಷರಾನುಕ್ರಮಣಿಕೆಯಲ್ಲಿ ಓಟರುಗಳ ಪಟ್ಟಿಯನ್ನು ತಯಾರಿಸುತ್ತಿದ್ದರು. ಆದರಿಂದ ಅದನ್ನು ಪರಿಷ್ಕೈಮಾಡುವುದಕ್ಕೆ ಬಹಳ ತೊಂದರೆಯಿತ್ತು. ಆದ್ದರಿಂದ ಈಗ ಆ ಪಟ್ಟಿಯನ್ನು ಮನೆಗಳಿಗೆ ಕೊಟ್ಟಿರತಕ್ಕ ನಂಬರುಗಳ ಪ್ರಕಾರ ತಯಾರಿಸು

ತ್ತಿದ್ದಾರೆ, ಆ ಬದಲಾವಣೆಯನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಇದರ ಜೊತೆಯಲ್ಲೇ ಇನ್ನೊಂದು ತಿದ್ದುಪಡಿಯನ್ನು ಮಾಡಿದ್ದಾರೆ. ಅದೇನೆಂದರೆ ಕಮಿಷನರಿಗೆ ಕೆಲವೊಂದು ವಿಶೇಷ ಅಧಿಕಾರಗಳನ್ನು ಕೊಡಬೇಕೆಂದು ಹೇಳಿದ್ದಾರೆ. ನಗರಗಳ ಸರಹದ್ದಿನಲ್ಲಿ ಎಲ್ಲಿಯಾದರೂ ಒಂದು ಅನಧಿಕೃತ ಕಟ್ಟಡವನ್ನು ಅಥವಾ ಒಂದು ಷೆಡ್ಡನ್ನು ಯಾರಾದರೂ ಕಟ್ಟುತ್ತಿರುವುದು ಕಂಡುಬಂದರೆ ಅವರು ಕೂಡಲೆ ಸ್ಥಳಕ್ಕೆ ಹೋಗಿ ಅವರನ್ನು ಅಲ್ಲಿಂದ ಹೊರಗೆ ಹಾಕಬೇಕಾಗುತ್ತದೆ. ಆದುದರಿಂದ ಅದಕ್ಕೆ ಸಾಕಷ್ಟು ಅಧಿಕಾರ ಅವರಿಗೆ ಇರಬೇಕು. ಕೆಲವರನ್ನು ಕೋರ್ಟಿಗೂ ತೆಗೆದುಕೊಂಡು ಹೋಗಬೇಕಾಗುವುದು. ಕೆಲವರನ್ನು ಪ್ರಾಸೆಕ್ಯೂಟ್ ಕೂಡ ಮಾಡಬೇಕಾಗುತ್ತದೆ. ಕೆಲವರು ಇನ್‌ಜಂಕ್ಷನ್ ತರುತ್ತಾರೆ. ಹೀಗೆಲ್ಲಾ ವ್ಯವಹಾರಗಳು ನಡೆಯುತ್ತವೆ. ಇನ್ನು ಕೆಲವರು ಆ ವಿಚಾರ ಗಳನ್ನು ಸರ್ಕಾರದ ಮಟ್ಟದವರೆಗೂ ತಂದು ಇಲ್ಲಿ ಅನಧಿಕೃತ ಕಟ್ಟಡಗಳನ್ನು ಅಧಿಕೃತ ಕಟ್ಟಡ ಗಳನ್ನಾಗಿ ಮಾಡಿಕೊಳ್ಳುತ್ತಾರೆ. ಇಂಥ ಸಂದರ್ಭದಲ್ಲಿ ಯಾರು ಅನಧಿಕೃತವಾಗಿ ಕಟ್ಟಡವನ್ನು ಅಥವಾ ಒಂದು ಗುಡಿಸಲನ್ನು ಕಟ್ಟುವುದಕ್ಕೆ ಪ್ರಯತ್ನಮಾಡುವನೋ ಅಂಥವನಿಗೆ ಕೂಡಲೆ ಕಮಿಷನರು ಒಂದು ನೋಟೀಸನ್ನು ಕೊಡಬೇಕೆಂದು ಇಲ್ಲಿ ಹೇಳಿದೆ. ಆ ನೋಟೀಸಿನಲ್ಲಿ ಹೀಗೆ ಹೇಳಿದೆ :

> " Where the owner or builder has been directed to refrain from proceeding with the building or well or hut under sub-section (1), the Commissioner may direct that any person acting in contravention of such direction shall be removed by any police officer from the place where the building, well or hut is being constructed or reconstructed ."

ಈ ಹೊತ್ತು ಬಿಲ್ಡಿಂಗ್ಸ್ ಆಕ್ಟ್ ಇದೆ. ಅದರ ಪ್ರಕಾರ ಯಾರಾದರೂ ಒಬ್ಬರು ಒಕ್ಕಲಾಗಿ ಮನೆಯಲ್ಲಿ ಇದ್ದರೆ ಅವನನ್ನು ಹೊರಗೆ ಹಾಕುವಂಥ ಅಧಿಕಾರವಿಲ್ಲ. ಅದಕ್ಕೆ ಮಾಲೀಕನಾದವನು ಇಂಥ ಕಾನೂನಿನ ಅವಕಾಶವನ್ನು ಹೊಂದುವುದಕ್ಕೆ ಪ್ರಯತ್ನ ಮಾಡುವುದಕ್ಕೆ ಸಾಧ್ಯವಿದೆ. ಯಾರಾದರೂ ಒಂದು ಗುಡಿಸಲನ್ನು ಕಟ್ಟಿಕೊಂಡಿದ್ದರೆ, ಸಣ್ಣ ಮನೆಯನ್ನು ಕಟ್ಟಿಕೊಂಡಿದ್ದರೆ ಭೂ ಮಾಲೀಕನಾದವನು ನಗರ ಸಭೆಯ ಅಧಿಕಾರಿಗಳ ಸಹಕಾರವನ್ನು ಪಡೆದುಕೊಂಡು, ತಾನು ಸ್ವಲ್ಪ ಅನಧಿಕೃತವಾಗಿ ಕಟ್ಟಡವನ್ನು ಕಟ್ಟಿ, ನಗರಸಭೆಯಿಂದ ತಾನೂ ನೋಟೀಸ್ ಪಡೆದುಕೊಂಡು, ಒಕ್ಕಲು ಇರುವವನಿಗೂ ನೋಟೀಸ್ ಕೊಡಿಸಿ, ಅವನನ್ನು ಹೊರಗೆ ಹಾಕಲು ಅಧಿಕಾರವನ್ನು ದುರುಪಯೋಗ ಮಾಡಬಹುದು. ಈ ರೀತಿ-ಆಗದಂತೆ ನೋಡಿಕೊಂಡರೆ ಈ ಅಧಿಕಾರವನ್ನು ಕಮಿಷನರಿಗೆ ಕೊಟ್ಟಿರುವುದು ತಪ್ಪು ಎಂದು ಹೇಳಲಿಕ್ಕೆ ಆಗುವುದಿಲ್ಲ ಎಂದು ಹೇಳಿ, ಈ ಮಸೂದೆಗೆ ನಾನೂ ಕೂಡ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ.

†ಶ್ರೀ ಬಿ. ಎಂ. ಪಾಟೀಲ್.—ಸನ್ಮಾನ್ಯ ಸಭಾಪತಿಗಳೇ, ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಮಾನ್ಯ ಸದಸ್ಯರು ಸಭೆಯ ಮುಂದೆ ತಂದಿರುವ ತಿದ್ದುಪಡಿ ಸೂಕ್ತವಾಗಿದೆ ಎನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಕ್ಕಾಗಿ ನನಗೆ ಬಹಳ ಸಂತೋಷವಾಗಿದೆ.

ಪ್ರತಿಪಕ್ಷದ ನಾಯಕರು ಮಾತನಾಡುವಾಗ ಸರ್ಕಾರಕ್ಕೆ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಲ್ಲ, ವಿರೋಧಪಕ್ಷಗಳ ಹತೋಟಿಯಲ್ಲಿ ಯಾವ ಯಾವ ಪುರಸಭೆಗಳಿವೆಯೋ ಅಂಥ ಪುರಸಭೆಗಳನ್ನು ಸರ್ಕಾರ ಸೂಪರ್‌ಸೀಡ್ ಮಾಡಿ ಆಡಳಿತ ವಹಿಸಿಕೊಳ್ಳುತ್ತಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಆದರೆ ಈ ಅಭಿಪ್ರಾಯ ಸತ್ಯಕ್ಕೆ ದೂರವಾದುದು. ಪ್ರಜಾಸತ್ತೆಯಲ್ಲಿ ನಮಗೆಲ್ಲರಿಗೂ ವಿಶ್ವಾಸವಿರುವುದ ರಿಂದಲೇ ಇಂದಿನ ದಿನ ಪ್ರಜಾಸತ್ತೆಯಲ್ಲಿ ನಾವೆಲ್ಲರೂ ಕಾರ್ಯಮಾಡುತ್ತಿದ್ದೇವೆ. ಇಂದು ಅನೇಕ ರಾಜ್ಯ ಗಳಲ್ಲಿ ವಿರೋಧ ಪಕ್ಷಗಳು ಅಧಿಕಾರದಲ್ಲಿವೆ. ಬೆಂಗಳೂರು ಕಾರ್ಪೊರೇಷನ್ ಅಧಿಕಾರವನ್ನು ಸರ್ಕಾರ ವಹಿಸಿಕೊಳ್ಳುವಾಗ ಅಲ್ಲಿ ವಿರೋಧಪಕ್ಷ ಅಧಿಕಾರದಲ್ಲಿದೆ ಎನ್ನುವ ಕಾರಣದಿಂದ ಅಧಿಕಾರ ವನ್ನು ವಹಿಸಿಕೊಳ್ಳಲಿಲ್ಲ. ಅಲ್ಲಿಯ ಅಧಿಕಾರ ಒಳ್ಳೆಯ ರೀತಿಯಿಂದ ನಡೆಯುತ್ತಿರಲಿಲ್ಲ ಎಂದು ಅನೇಕ ಸಾರ್ವಜನಿಕರಿಂದ ದೂರುಗಳು ಸರ್ಕಾರಕ್ಕೆ ಬಂದಾಗ ಅಲ್ಲಿಯ ಆಡಳಿತ ಸೂತ್ರವನ್ನು ಮಾರ್ಗಕ್ಕೆ ತರಬೇಕು, ಆಡಳಿತ ವ್ಯವಸ್ಥೆಯನ್ನು ಸರಿಪಡಿಸಬೇಕು ಎನ್ನುವ ಉದ್ದೇಶದಿಂದ ಸರ್ಕಾರ ಅಧಿಕಾರ ವಹಿಸಿಕೊಂಡಿತು. ಸರ್ಕಾರ ಈ ಬಗ್ಗೆ ಏನು ಆಜ್ಞೆಯನ್ನು ಹೊರಡಿಸಿತು ಅದನ್ನು ಈ ರಾಜ್ಯದ ಶ್ರೇಷ್ಠ ನ್ಯಾಯಾಲಯ ಎತ್ತಿ ಹಿಡಿದಿದೆ ಎನ್ನುವುದನ್ನು ಮಾತ್ರ ಹೇಳಲಿಕ್ಕೆ ಇಚ್ಛಿಸುತ್ತೇನೆ.

(ಶ್ರೀ ಬಿ. ಎಂ. ಪಾಟೀಲ್)

ಈಚೆಗೆ ಬೆಂಗಳೂರಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆದಾಗ ಕಾರ್ಪೊರೇಷನ್‌ನವರು ಹಣ ಖರ್ಚು ಮಾಡಿದ್ದಾರೆ, ಹಣ ದುರುಪಯೋಗವಾಗಿದೆ ಎನ್ನುವ ಅಭಿಪ್ರಾಯವನ್ನು ಮಾನ್ಯ ಪ್ರತಿಪಕ್ಷದ ನಾಯಕರು ವ್ಯಕ್ತ ಮಾಡಿದರು. ಕಾರ್ಪೊರೇಷನ್‌ನವರು ಆ ಸಭೆಗೋಸ್ಕರ ಯಾವುದೇ ಹಣವನ್ನು ಖರ್ಚು ಮಾಡಲಿಲ್ಲ ಮತ್ತು ಹಾಗೆ ಖರ್ಚು ಮಾಡಲಿಕ್ಕೆ ಬರುವುದಿಲ್ಲ. ಅವರು ತಮ್ಮ ದಿನನಿತ್ಯದ ಕಾರ್ಯಗಳಿಗಾಗಿ ಯಾವರೀತಿ ಹಣವನ್ನು ಖರ್ಚು ಮಾಡುತ್ತಾರೆಯೋ ಅದೇ ರೀತಿಯಾಗಿ ಖರ್ಚು ಮಾಡಿದ್ದಾರೆ.

ಮಾನ್ಯ ಮಿತ್ರರನೇಕರು ಮಾತನಾಡುತ್ತ ಮತದಾರರ ಪಟ್ಟಿಯಲ್ಲಿ ಅಕ್ಷರಾನುಕ್ರಮವನ್ನು ಅನುಸರಿಸಬೇಕು ಎನ್ನುವುದು ಯಾವರೀತಿ ಬಂತು, ಇದನ್ನು ತಿದ್ದುಪಡಿ ಮಾಡಬೇಕಾದರೆ ಇಷ್ಟು ದಿವಸ ಕಾಲಾವಕಾಶ ಏಕೆ ಬೇಕಾಯಿತು ಎಂದು ಕೇಳಿದರು. ಕಾರ್ಪೊರೇಷನ್ ಕಾಯಿದೆಗೆ 8ನೇ ಷೆಡ್ಯೂಲ್ ಸೇರಿಸುವ ತಿದ್ದುಪಡಿ ಅಂಗೀಕೃತವಾದಾಗ ಈ ರೀತಿಯಾಗಿದೆ. ಇದರಲ್ಲಿರುವ ನ್ಯೂನತೆಯನ್ನು ಸರ್ಕಾರದ ಗಮನಕ್ಕೆ ಮಾನ್ಯ ಸದಸ್ಯರಾಗಲೀ, ವಿರೋಧ ಪಕ್ಷದ ಸದಸ್ಯರಾಗಲೀ ತಂದುದು ಒಂದು ತಿಂಗಳ ಹಿಂದೆ ಮಾತ್ರ. ಅದಕ್ಕಿಂತ ಮೊದಲು ಅದನ್ನು ಸರ್ಕಾರದ ಗಮನಕ್ಕೆ ಯಾರೂ ತರಲಿಲ್ಲ. ಸರ್ಕಾರದ ಗಮನಕ್ಕೆ ತಂದ ಕೆಲವೇ ವೇಳೆಯಲ್ಲಿ ಸರ್ಕಾರ ತೀವ್ರ ಕಾರ್ಯಕ್ರಮವನ್ನು ತೆಗೆದುಕೊಂಡಿದೆ.

ಮತದಾರರ ಪಟ್ಟಿಯನ್ನು ಅಕ್ಷರಾನುಕ್ರಮದಲ್ಲಿ ಮಾಡಬೇಕೆಂದಿರುವಾಗ ಅದನ್ನು ಮನೆ ನಂಬರ್ ಪ್ರಕಾರ ಮಾಡಲಿಕ್ಕೆ ಹೇಗೆ ಅವಕಾಶವಿದೆ, ಯಾವರೀತಿಯಿಂದ ಅದನ್ನು ಮಾಡಿದ್ದಾರೆ ಎಂದು ಕೇಳುತ್ತಿದ್ದಾರೆ. ಮತದಾರರ ಪಟ್ಟಿಯನ್ನು ತಯಾರುಮಾಡುವುದಕ್ಕೆ ಪೂರ್ವಭಾವಿಯಾಗಿ ಅವಶ್ಯಕವಾದ ಮಾಹಿತಿಯನ್ನು ಮನೆಮನೆಗೆ ಹೋಗಿ ತೆಗೆದುಕೊಳ್ಳಬೇಕಾಗುತ್ತದೆ. ಮನೆ ಮನೆಗೆ ಹೋಗುವಾಗ ಅಕ್ಷರಾನುಕ್ರಮದಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮನೆಯಲ್ಲಿ ಎಷ್ಟು ಜನ ಮತದಾರರಿದ್ದಾರೆ ಎನ್ನುವ ವಿಷಯವನ್ನು ಮಾತ್ರ ತೆಗೆದುಕೊಂಡು ಬರುತ್ತಾರೆ. ತದನಂತರ ಅದನ್ನು ಅಚ್ಚು ಮಾಡುವಾಗ ಅಕ್ಷರಾನುಕ್ರಮಕ್ಕೆ ಬದಲಾವಣೆ ಮಾಡಬೇಕಾಗುತ್ತದೆ. ಕಾರ್ಪೊರೇಷನ್‌ನವರು ಸಂಗ್ರಹಿಸಿರುವ ಮಾಹಿತಿಯನ್ನು ಅಕ್ಷರಾನುಕ್ರಮದಲ್ಲಿ ವಿಂಗಡಿಸಿ ಅಚ್ಚು ಮಾಡಬೇಕು ಎನ್ನುವ ಪ್ರಶ್ನೆ ಬಂದಾಗ, ಇದಕ್ಕೆ ಸಂಬಂಧಪಟ್ಟ ತಿದ್ದುಪಡಿ ಉಭಯ ಸದನಗಳ ಮುಂದೆ ಬಂದು ಅದು ಸ್ವೀಕಾರವಾಗಬೇಕಾಗಿದ್ದುದರಿಂದ ಆ ಕೆಲಸವನ್ನು ಮುಂದುವರಿಸದೆ ಇಡಲಾಗಿದ್ದು, ಈಗ ಅದಕ್ಕೆ ಎರಡೂ ಸದನಗಳ ಒಪ್ಪಿಗೆ ದೊರೆಯಲಿರುವುದರಿಂದ ಇನ್ನು ಮೇಲೆ ಕಾರ್ಪೊರೇಷನ್ ಅಧಿಕಾರಿಗಳಿಗೆ ಯಾವ ರೀತಿಯಾಗಿ ಅಚ್ಚು ಮಾಡಬೇಕು ಎನ್ನುವ ಆದೇಶವನ್ನು ನೀಡುತ್ತೇವೆ

ಮತ ಕ್ಷೇತ್ರದಲ್ಲಿ ಕೆಲವು ಕಡೆ ಬಹಳ ಹೆಚ್ಚು ಜನ ಮತದಾರರಿದ್ದಾರೆ, ಕೆಲವು ಕಡೆ ಕಡಮೆ ಜನರಿದ್ದಾರೆ. ಈ ವಿಷಯವನ್ನು ಸರ್ಕಾರ ಈಗಾಗಲೇ ಕೂಲಂಕಷವಾಗಿ ಪರಿಶೀಲಿಸಿದೆ. ಹಿಂದಿನ ಜನಗಣತಿಯ ಪ್ರಕಾರ ಪ್ರತಿಯೊಂದು ಮತ ಕ್ಷೇತ್ರದಲ್ಲಿಯೂ ಸಾಮಾನ್ಯವಾಗಿ ಆ ಮತ ಕ್ಷೇತ್ರದಿಂದ ಆರಿಸಿಬರುವಂಥ ಸದಸ್ಯರ ಸಂಖ್ಯೆ ಮತ್ತು ಅಲ್ಲಿನ ಜನಸಂಖ್ಯೆ ಇವೆರಡರ ನಡುವೆ ಪ್ರಮಾಣ ಆದಷ್ಟು ಮಟ್ಟಿಗೂ ಸರಿಸಮಾನವಾಗಿರಬೇಕು ಎಂದು ಇದೆ. ಆ ರೀತಿಯಿಂದ ನೋಡಿದರೆ ಮತದಾರರ ಸಂಖ್ಯೆ ಮಹತ್ವದ್ದಲ್ಲ. ಆದ್ದರಿಂದ ಮತಕ್ಷೇತ್ರಗಳ ಪುನರ್ವಿಂಗಡಣೆ ಮಾಡುವುದು ಅಷ್ಟು ಸೂಕ್ತವಾಗುವುದಿಲ್ಲ, ಮಾಡುಹಂಥ ಅವಶ್ಯಕತೆ ಇಲ್ಲ ಎನ್ನುವ ಅಭಿಪ್ರಾಯಕ್ಕೆ ಸರ್ಕಾರ ಬಂದಿದೆ.

ಕಾರ್ಪೊರೇಷನ್ ಕಮಿಷನರಿಗೆ ಯಾರಾದರೂ ಅನಧಿಕೃತವಾಗಿ ಒಂದು ಕಟ್ಟಡ, ಗುಡಿಸಲು ಅಥವಾ ಬಾವಿಯನ್ನು ಕಟ್ಟುತ್ತಿದ್ದರೆ ಅಲ್ಲಿಯ ಮಾಲೀಕನನ್ನಾಗಲೀ ಅಥವಾ ಯಾರು ಕಟ್ಟುತ್ತಾರೆ ಅವರನ್ನಾಗಲೀ ತೆಗೆದು ಹಾಕುವುದಕ್ಕೆ ಅಧಿಕಾರ ಕೊಡುತ್ತಿದ್ದೇವೆ. ಇದಕ್ಕಿಂತ ಮೊದಲು ಕಾರ್ಪೊರೇಷನ್‌ನವರಿಗೆ ಇದ್ದ ಅಧಿಕಾರ ಬಹಳ ಕಡಮೆಯಾದದ್ದಾಗಿತ್ತು. ಕೇವಲ ಕೆಲವೇ ಗಂಟೆಗಳಲ್ಲಿ, ಕೆಲವೇ ದಿವಸಗಳಲ್ಲಿ ಗುಡಿಸಲುಗಳನ್ನು ಮತ್ತು ಕೆಲವು ಕಟ್ಟಡಗಳನ್ನು ಕಟ್ಟುವುದಕ್ಕೆ ಬರುತ್ತದೆ. ಮೊದಲು ಇದ್ದ ಪ್ರಕಾರ ಮಾಲೀಕನಾದವನಿಗೆ ಅನಧಿಕೃತವಾಗಿ ಕಟ್ಟಡ ಆಗುವ ಸಂದರ್ಭದಲ್ಲಿ ನೋಟೀಸ್ ಕೊಡಬೇಕು, ಅದಕ್ಕೆ ಮಾಲೀಕನಾದವನು ಉತ್ತರ ಕೊಡಬೇಕು. ಅನಂತರ ಡಿಮಾಲಿಷ್ ಮಾಡುತ್ತೇವೆಂದು ನೋಟೀಸ್ ಕೊಡಬೇಕು. ಇದೆಲ್ಲ ಮುಗಿಯುವುದರೊಳಗೆ ಕಟ್ಟಡ ಪೂರ್ತಿಯಾಗುವುದರಿಂದ, ಅವರು ಕೋರ್ಟಿನಿಂದ ತಡೆ ಆಜ್ಞೆ ತರುತ್ತಾರೆ. ಅನಧಿಕೃತ ಕಟ್ಟಡಗಳನ್ನು ತೆಗೆದುಹಾಕುವುದಕ್ಕೆ ಅಧಿಕಾರವಿದ್ದರೂ ಸಹ ಆ ಅಧಿಕಾರದ ಉಪಯೋಗ ಸರಿಯಾಗಿ ಆಗುತ್ತಿಲ್ಲ. ಅದಕ್ಕಾಗಿ ಇಂಥ ಕಟ್ಟಗಳು ಬರುತ್ತಾ ಇದ್ದರೆ, ಅದಕ್ಕೆ ಅತೀ ಕೂಡಲೆ,

ತಡೆಹಾಕುವುದಕ್ಕೆ ಅವಕಾಶ ಒದಗಿಸಲಾಗಿದೆ. ಇದರಿಂದ ಯಾವ ರೀತಿಯ ದುರುಪಯೋಗ ವಾಗುವುದಕ್ಕೂ ಸಾಧ್ಯವಿಲ್ಲವೆಂದು ಹೇಳುತ್ತೇನೆ.

ಅದೇ ರೀತಿ ಚುನಾವಣೆ ಆದಷ್ಟು ಜಾಗ್ರತೆ ಮಾಡಬೇಕೆಂದು ಇದೆ. ಮಾನ್ಯ ಸದಸ್ಯರನೇಕರು ಹೇಳಿದರು, ಚುನಾವಣೆ ಮಾಡುವ ಉದ್ದೇಶ ಇಟ್ಟುಕೊಂಡಿಲ್ಲ ಏನಾದರೂ ಮಾಡಿ ಮುಂದಕ್ಕೆ ಹಾಕಬೇಕಾಗಿದೆ ಎಂದು. ನಾನಾದರೂ ಹೇಳುತ್ತೇನೆ, ಸಾಧ್ಯವಾದಷ್ಟು ತೀವ್ರವಾಗಿ, ಚುನಾವಣೆ ನಡೆಸುತ್ತೇವೆ. ಆದಕ್ಕೋಸ್ಕರ ಕಾರ್ಪೊರೇಷನ್ ಆಡಳಿತಾಧಿಕಾರಿಯವರು ಈಗಾಗಲೇ ಚುನಾವಣೆ ಪಟ್ಟಿ ಮಾಡುವುದಕ್ಕೆ ಆದೇಶವನ್ನು ಹೊರಡಿಸಿದ್ದಾರೆ. ಅದೇ ರೀತಿ ಚುನಾವಣೆಯ ವೇಳಾಪಟ್ಟಿಯನ್ನು ಕೂಡ ಟೆಂಟೇಟಿವ್ ಆಗಿ ಸಿದ್ಧಮಾಡಿದ್ದಾರೆ. ಚುನಾವಣೆಯನ್ನು ಆದಷ್ಟು ಬೇಗ ನಡೆಸಲಾಗುವುದು. ಪ್ರಜಾಪ್ರಭುತ್ವದಲ್ಲಿ ಪೂರ್ಣವಾದ ವಿಶ್ವಾಸ ನಮಗೂ ಇದೆ. ಅದಕ್ಕಾಗಿ ಈ ಚುನಾವಣೆಯನ್ನು ಮಾಡುತ್ತೇವೆ. ಆ ಒಂದು ಉದ್ದೇಶದಿಂದಲೇ ಈ ತಿದ್ದುಪಡಿಯನ್ನು ತರಲಾಗಿದೆ. ಏನು ಮಾನ್ಯ ಸದಸ್ಯರು ಅಪೇಕ್ಷಿಸುತ್ತಾರೆ, ಅದಕ್ಕಿಂತಲೂ ತೀವ್ರವಾಗಿ ಚುನಾವಣೆ ನಡೆಯುತ್ತದೆ ಎಂದು ಹೇಳುತ್ತೇನೆ, ಮತ್ತು ಮಾನ್ಯ ಸದಸ್ಯರು ಇದಕ್ಕೆ ಬೆಂಬಲ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY CHAIRMAN.—The question is :

"That the City of Bangalore Municipal Corporation (Second Amendment) Bill, 1969, as passed by the Legislative Assembly, be taken into consideration".

The motion was adopted.

CLAUSES

Mr. DEPUTY CHAIRMAN.—The question is :

"That Clauses 2 and 3 do stand part of the Bill."

The motion was adopted.

Clauses 2 and 3 were added to the Bill.

Mr. DEPUTY CHAIRMAN.—The question is :

"That clause 1, the long title and the Enacting Formula do stand part of the Bill".

The motion was adopted.

Clause 1, the long Title and the Enacting Formula were added to the Bill.

Motion to pass.

Sri B. M. PATIL.—I beg to move :

"That the City of Bangalore Municipal Corporation (Second Amendment) Bill, 1969, as passed by the Legislative Assembly, be passed".

Mr. DEPUTY CHAIRMAN.—The question is :

"That the City of Bangalore Municipal Corporation (Second Amendment) Bill, 1969, as pased by the Legislative Assembly, be passed."

The motion was adopted.

Mysore Appropriation (No. 4) Bill, 1969
(as passed by the Legislative Assembly)

Motion to Consider.

Sri RAMAKRISHNA HEGDE (Minister for Finance, Planning and Youth Welfare).—Sir, I beg move :

"That the Mysore Appropriation (No. 4) Bill, 1969, as passed by the Legislative Assembly, be taken into consideration."

Mr. DEPUTY CHAIRMAN.—Motion moved :

"That the Mysore Appropriation (No. 4) Bill, 1969, as passed by the Legislative Assembly, be taken into consideration".

ಶ್ರೀ ರಾಮಕೃಷ್ಣ ಹೆಗಡೆ.—ಈ ಅಪ್ರೋಪ್ರಿಯೇಷನ್ ಬಿಲ್ಲು ಕೆಲವು ದಿವಸಗಳ ಹಿಂದೆ ಸಪ್ಲಿಮೆಂಟರಿ ಡಿಮ್ಯಾಂಡನ್ನು ಏನು ಇಟ್ಟಿತ್ತು, ಅದಕ್ಕೆ ಸಂಬಂಧಪಟ್ಟದ್ದು. ಆ ಸಂದರ್ಭದಲ್ಲಿ ಚರ್ಚೆಯಲ್ಲಿ ಭಾಗವಹಿಸಿದಂತಹ ಕೆಲವು ಸದಸ್ಯರು ಕೆಲವು ಟೀಕೆಗಳನ್ನು ಮಾಡಿದ್ದಾರೆ. ಅದರಲ್ಲಿ ಮುಖ್ಯವಾದ ಟೀಕೆ ಏನೆಂದರೆ, 39 ಕೋಟಿ ರೂಪಾಯಿ ಅನುದಾನ ಸರ್ಕಾರದವರು ತಂದಿದ್ದಾರೆ, ಈ ಸಪ್ಲಿಮೆಂಟರಿ ಡಿಮ್ಯಾಂಡ್ ತರುವಂತದ್ದು ಯಾವಾಗೆಂದರೆ, ಅದು ಅಕಾಲ ಪರಿಸ್ಥಿತಿ, ಅಥವಾ ಅಭಾವ ಪರಿಸ್ಥಿತಿ, ಅಥವಾ ಪ್ರವಾಹ ಬಂದಾಗ ಮಾತ್ರ ತರಬೇಕೆಂದು ಹೇಳಿದರು. ನಾವು 39 ಕೋಟಿ ರೂಪಾಯಿ ಚಿಲ್ಲರೆ ಏನು ಕೇಳಿದ್ದೇವೆ, ಅದು ಸರ್ಕಾರದ ಬೊಕ್ಕಸದಿಂದ ಹೋಗತಕ್ಕದ್ದಲ್ಲ. ಅವರಲ್ಲಿ ಬಹಳ ಅಂಶ ಲೆಕ್ಕಪತ್ರದ ಅಜಸ್ಟ್‌ಮೆಂಟ್ಸ್ ಮತ್ತು ಬಹಳ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮುಗಳು ಇವೆ, ಅದಕ್ಕೆ ಸೆಂಟ್ರಲ್ ಸರ್ಕಾರದಿಂದ ಬರತಕ್ಕ ಹಣಗಳಿವೆ, ಅದಕ್ಕೆ ಎಲ್ಲಾ ಸಂಬಂಧಪಟ್ಟಿದೆ. ಕೇವಲ ಒಂದು ಕೋಟಿ ರೂಪಾಯಿ ಮಾತ್ರ ಸರ್ಕಾರದ ಖಜಾನೆಯಿಂದ ಹೊರಗೆ ಹೋಗತಕ್ಕದ್ದು. ಇದರಲ್ಲಿ ಅಷ್ಟೊಂದು ಆಕ್ಷೇಪವೆತ್ತುವಂತಹ ವಿಚಾರ ಯಾವುದೂ ಇಲ್ಲ. 220 ಕೋಟಿ ರೂಪಾಯಿ ಬಜೆಟ್ಟಿನಲ್ಲಿ ಒಂದು ಕೋಟಿ ರೂಪಾಯಿಯಷ್ಟು ಪೂರಕ ಬೇಡಿಕೆ ಇಟ್ಟರೆ, ಅದು ಒಂದು ಪರ್ಸೆಂಟ್ ಕೂಡ ಆಗಲಿಲ್ಲ. ಅಷ್ಟು ವೇರಿಯೇಷನ್ ಆಗತಕ್ಕದ್ದು ಸ್ವಾಭಾವಿಕ. ನಾವು ಏನು ಮುಂಗಡ ಪತ್ರ ಇಡುತ್ತೇವೆ, ಅದು ಮುಂಗಡ ಪತ್ರ ಹೊರತು, ನೂರಕ್ಕೆ ನೂರು ಕ್ಲುಪ್ತವಾದ ಲೆಕ್ಕಾಚಾರದ ಬಜೆಟಲ್ಲ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಇವರದ್ದು ಏನೆಂದರೆ, ಮುಂಗಡ ಪತ್ರ ಇಟ್ಟಾಗ ನಮ್ಮನ್ನು ದಾರಿ ತಪ್ಪಿಸಿ, ಇದಕ್ಕೆ ಅವಶ್ಯಕವಾದ ಹಣವನ್ನು ಖರ್ಚು ಮಾಡಬೇಕೆಂದು, ಆ ಒಂದು ವ್ಯವಸ್ಥೆಯನ್ನು ಸುವ್ಯವಸ್ಥಿತವಾಗಿ ಮಾಡುತ್ತಾರೆಂದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಜಿ. ವಿ. ಅಂಜನಪ್ಪ.—ನೀವು ಟೋಕನ್ ಗ್ರ್ಯಾಂಟ್ ಎಂದು 100 ರೂಪಾಯಿ ಸೇರಿಸುತ್ತೀರಿ. ಆ ಯೋಜನೆ ಮೂವತ್ತು ಲಕ್ಷ, ನಲ್ವತ್ತು ಲಕ್ಷಕ್ಕೆ ಇರುತ್ತದೆ. ಅದಕ್ಕೆ ದಾರಿ, ಸೇವಿಂಗ್ಸ್ ಎಂದು ಹೇಳುತ್ತಾರೆ. ಆಯವ್ಯಯ ಮಂಡಿಸುವಾಗ ಇವರಿಗೆ ಸೇವಿಂಗ್ಸ್ ಎಲ್ಲಿಂದ ಬಂತು ! ಆಯವ್ಯಯದಲ್ಲಿ ಸೇರಿಸಿದಾಗ ಇವರು ಕರಾರುವಾಕ್ಕಾಗಿ, ಕೂಲಂಕಷವಾಗಿ ಇದನ್ನು ಪರಿಶೀಲನೆ ಮಾಡಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಟೋಕನ್ ಗ್ರ್ಯಾಂಟ್ ಸಪ್ಲಿಮೆಂಟರಿ ಭಾಗದಲ್ಲಿ ಸೇರಿಸಬಾರದು ಮಾನ್ಯ ಸಚಿವರು ಅಘಾದವಾದ ಪ್ರಗತಿಯನ್ನು ಸಾಧನೆ ಮಾಡುತ್ತೇವೆ, ಎಂದು ಎಲ್ಲಾ ಜನರಿಗೆ ಒಂದು ನಂಬಿಕೆ ಹುಟ್ಟುವಹಾಗೆ ಮಾಡುತ್ತಿದ್ದಾರೆ, ಇದು ತಪ್ಪಲ್ಲವೇ ? ಸೇವಿಂಗ್ ಒಂದು ಕೋಟಿ ರೂಪಾಯಿಯಷ್ಟು ಇಲ್ಲವೇ ಇಲ್ಲ. ಇವರು ಮಾಡಿದಂತಹ ಅನೇಕ ಬಜೆಟ್ ಎಸ್ಟಿಮೇಟುಗಳಲ್ಲಿ ನೂರಕ್ಕೆ ನೂರು ಭಾಗ ಬದಲಾವಣೆಯಾಗುತ್ತಿದೆ. ಇಂಥ ಒಂದು ನಿಜವಲ್ಲದಿರತಕ್ಕ ಅಂಕಿ ಅಂಶಗಳನ್ನು ಏಕೆ ಇಲ್ಲಿ ಇಡಬೇಕು ?

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ದಾರಿ ತಪ್ಪಿಸಬೇಕೆನ್ನುವಂತಹ ಪ್ರಮೇಯ ಏನೂ ಇಲ್ಲ.

6-30 P.M.

ಇವೊತ್ತು ನಾಳೆ ದಾರಿ ತಪ್ಪಿಸುವಂಥಾ ಪ್ರಯತ್ನವನ್ನು ಸರ್ಕಾರದವರು ಮಾಡಿದರೆ ಶಾಶ್ವತವಾಗಿ ಮಾನ್ಯ ಸದಸ್ಯರ ಕಣ್ಣು ತಪ್ಪಿಸುವಂಥಾ ಪ್ರಯತ್ನವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ಅಂಜನಪ್ಪನವರು ಮಾತನಾಡುತ್ತಾ ಇವೊತ್ತು ಸರ್ಕಾರದವರು ಟೋಕನ್ ಗ್ರ್ಯಾಂಟ್ ಏನು ಕೇಳುತ್ತಿದ್ದಾರೆ ಈ ಬಗ್ಗೆ ಆಗತಕ್ಕಂಥ ಖರ್ಚು ಎಷ್ಟು ಇದೆ ಆದನ್ನು ಸೇವಿಂಗ್ಸ್‌ನಲ್ಲಿ ಪೂರೈಸಿಕೊಂಡು ಹೋಗುವುದಕ್ಕೆ ಹೇಗೆ ಸಾಧ್ಯ, ಮೊದಲು ಸರ್ಕಾರದವರು ಈ ಸಭೆಯ ಮುಂದೆ ಇಟ್ಟಂಥ ಆಯವ್ಯಯ ಪಟ್ಟಿ ದೋಷಪೂರಿತವಾದದ್ದು ಎಂದು ಹೇಳಿದರು. ಈಗ ಒಂದೊಂದು ಡಿಪಾರ್ಟ್‌ಮೆಂಟಿನಲ್ಲಿ ನೂರಾರು ಸ್ಕೀಮುಗಳು ಇರುತ್ತವೆ. ಈ ಸ್ಕೀಮುಗಳಿಗೆ ಈ ವರ್ಷ ಎಷ್ಟು ಹಣ ಖರ್ಚಾಗಬಹುದು ಎಂದು ಹೇಳಿ ಲೆಕ್ಕ ಹಾಕಿರುತ್ತೇವೆಯೋ ಅಷ್ಟೇ ಹಣವನ್ನು ಪ್ರೊವೈಡ್ ಮಾಡುವುದಕ್ಕೆ ಸಾಧ್ಯವಿಲ್ಲ. ಎಷ್ಟೇ ಬುದ್ಧಿಯನ್ನು ಉಪಯೋಗಿಸಲಿ ಎಷ್ಟೇ ದೂರದರ್ಶಿತ್ವವನ್ನು ಉಪಯೋಗಿಸಿದರೂ ಅದೂ ಸಾಧ್ಯವಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ಕೆಲವೊಂದು ಪ್ರಾಜೆಕ್ಟನ್ನು ನಾವು ಮಂಜೂರು ಮಾಡಿರುತ್ತೇವೆ. ಅದಕ್ಕೆ ಡಿಪಾರ್ಟ್‌ಮೆಂಟಿನವರು ಟೆಂಡರ್ ಕರೆಯುತ್ತಾರೆ. ಅದನ್ನು ಒಪ್ಪುವುದಿಲ್ಲ. ಆಗ ಎರಡನೇ ಟೆಂಡರ್ ಕರೆಯುತ್ತಾರೆ. ಆ ರೀತಿ ಆದಾಗ 6—7 ತಿಂಗಳು ವಿಳಂಬ ಆಗಬಹುದು. ಆ ಪ್ರಾಜೆಕ್ಟಿಗೆ ಒಂದು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅಂಥಾದ್ದಕ್ಕೆ 10—15 ಲಕ್ಷ ರೂಪಾಯಿಗಳನ್ನು ನಾವು ಪ್ರೊವೈಡ್ ಮಾಡುತ್ತೇವೆ. ಆ ರೀತಿ ಅದು ವಿಳಂಬವಾಗುವುದರಿಂದ ಆ ಪ್ರಾಜೆಕ್ಟಿಗೆ ಎಷ್ಟು ಖರ್ಚಾಗುತ್ತದೆ ಎನ್ನುವುದು ಸರಿಯಾಗಿ ನಿರ್ದಿಷ್ಟವಾಗಿ ನಮ್ಮ ತಿಳುವಳಿಕೆಗೆ ಬರುವುದು ಯಾವಾಗ ಎಂದರೆ ಡಿಸೆಂಬರ್ ತಿಂಗಳ ವೇಳೆಗೆ. ಈ ರೀತಿ ಪ್ರತಿಯೊಂದು ಡಿಪಾರ್ಟ್‌ಮೆಂಟಿನಲ್ಲೂ ಯಾವ ಯಾವ ಬಾಬುಗಳಿಗೆ ಯಾವ ಯಾವ ಸ್ಕೀಮುಗಳಿಗೆ ಎಷ್ಟೆಷ್ಟು ಹಣವನ್ನು ಇಟ್ಟಿರುತ್ತಾರೆ; ಎಷ್ಟು ಹಣವನ್ನು ಪ್ರೊವೈಡ್ ಮಾಡಿರುತ್ತಾರೆ, ಎಷ್ಟು ಹಣ ಖರ್ಚಾಗುತ್ತದೆ ಅದು ಹೆಚ್ಚು ಕಡಿಮೆ ಆಗದಂತೆ ಹೇಳುವುದಕ್ಕೆ ಸಾಧ್ಯವಿಲ್ಲ. ನಾವು ಟೋಕನ್ ಗ್ರ್ಯಾಂಟನ್ನು ಏತಕ್ಕೆ ಕೇಳುತ್ತೇವೆ ಎಂದರೆ ಯಾವ ಡಿಪಾರ್ಟ್‌ಮೆಂಟಿನಲ್ಲಿ ಇಂಥಾ ಒಂದು ಸಂದರ್ಭ ಇದೆಯೋ ಅಂಥಾ ಕಡೆ ಸ್ವಲ್ಪ ರೀ ಅಪ್ರೋಪ್ರಿಯೇಷನ್ ಆಗುವುದಕ್ಕೆ ಶಕ್ಯ ಇದೆ. ಅಂಥಾದ್ದಕ್ಕೆ ಮಾತ್ರ ಇದರಲ್ಲಿ ಟೋಕನ್ ಗ್ರ್ಯಾಂಟ್ ಕೇಳುತ್ತೇವೆ. ಈಗ ಟೂರಿಜಮ್ ಡಿಪಾರ್ಟ್‌ಮೆಂಟಿನಲ್ಲಿ ಕೆಲವು ಹೊಸ ಯೋಜನೆಗಳಿಗಾಗಿ 5 ಲಕ್ಷ ರೂಪಾಯಿಗಳನ್ನು ಒದಗಿಸಿದೆ. ಇದಕ್ಕೆ ಟೋಕನ್ ಗ್ರ್ಯಾಂಟ್ ಕೇಳುವುದಕ್ಕೆ ಹೋಗುವುದಿಲ್ಲ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಇದರಲ್ಲಿ ಅಂಥಾದ್ದು ಏನೂ ನಾವು ಮಾಡಿಲ್ಲ. ಕೆಲವು ಯೊಜನೆಗಳಿಗೇ ನಾವು ವಾರ್ಷಿಕವಾಗಿ ಯೋಜನೆಗಳನ್ನು ತಯಾರು ಮಾಡುವಾಗ ಕೇಂದ್ರ ಸರ್ಕಾರದವರು ಕೆಲವೊಂದು ಯೋಜನೆಗಳನ್ನು ಆದರಲ್ಲಿ ಸೇರಿಸಬೇಕು ಎಂದು ಹೇಳುತ್ತಾರೆ. ವಾರ್ಷಿಕ ಯೋಜನೆ ಯಾವಾಗ ತಯಾರಾಗುತ್ತದೆ ಎಂದರೆ ನವೆಂಬರ್ ತಿಂಗಳಿನಲ್ಲಿ ಅಥವಾ ಡಿಸೆಂಬರ್ ತಿಂಗಳಿನಲ್ಲಿ ಆಗ ಕೇಂದ್ರ ಸರ್ಕಾರದಿಂದ ನಮಗೆ ಬರತಕ್ಕ ಆರ್ಥಿಕ ಸಹಾಯ ಎಷ್ಟು, ನಮ್ಮ ಸಂಪನ್ಮೂಲಗಳೆಷ್ಟು, ಎಂಬುದನ್ನು ನೋಡಿಕೊಂಡು ಅದರ ಆಧಾರದಮೇಲೆ ವಾರ್ಷಿಕ ಯೋಜನೆಯನ್ನು ಮಾಡುವುದು ನಿರ್ಧಾರವಾಗುತ್ತದೆ. ಇದರಲ್ಲಿ ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮುಗಳು ಏನಿವೆ ಅವುಗಳ ಬಗ್ಗೆ ಕರಾರುವಾಕ್ ಆಗಿ ಇಂತಿಂಥಾ ಸ್ಕೀಮುಗಳ ಬಗ್ಗೆ ಇಂತಿಷ್ಟು ಹಣವನ್ನು ಅವರು ಕೊಡುತ್ತೇವೆ ಎಂದು ಹೇಳುವುದಿಲ್ಲ. ಅಂದಾಜಿನಮೇಲೆ ಇಂತಿಂಥಾ ಯೋಜನೆಗಳಿಗೆ ಇಂತಿಷ್ಟು ಹಣ ಸಿಕ್ಕಬಹುದು ಎಂದು ಒಂದು ರಫ್ ಫಿಗರ್ ಅನ್ನು ಕೊಟ್ಟು ಅದನ್ನು ಬಡ್ಜೆಟ್ಟಿನಲ್ಲಿ ಸೇರಿಸುತ್ತೇವೆ. ಸೆಂಟ್ರಲಿ ಸ್ಪಾನ್ಸರ್ಡ್ ಯೋಜನೆಗಳು ಕೇಂದ್ರದಿಂದ ಅಪ್ರೂವ್ ಆಗಿ ಸಂಬಂಧಪಟ್ಟ ಖಾತೆಗೆ ಕಮ್ಯೂನಿಕೇಷನ್ ಬರುವವರೆಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಕೆಲಸ ಕಾರ್ಯಗಳಿಗೆ ಕೇಂದ್ರ ಸರ್ಕಾರದವರು ಕಡಿಮೆ ಹಣವನ್ನು ಒದಗಿಸಿದರೆ ಆಗ ಇದನ್ನು ತೆಗೆದು ಅದಕ್ಕೆ ಹಾಕಿ ಅದರಿಂದ ತೆಗೆದು ಇದಕ್ಕೆ ಹಾಕಿ ಎಂದಾಗ ಖರ್ಚುಗಳು ನಮ್ಮ ಕೈ ಮೀರತಕ್ಕ ಪ್ರಸಂಗ ಬರುತ್ತದೆ. ಇಂಥಾ ಸಂದರ್ಭದಲ್ಲಿ ಖರ್ಚು ಬಾಬುಗಳು ಯಾರ ಕೈಗೂ ನಿಲುಕದಂತಹ ಪರಿಸ್ಥಿತಿ ಉದ್ಭವವಾಗುತ್ತದೆ. ಅದಕ್ಕಾಗಿ ಪೂರಕ ಬೇಡಿಕೆಗಳನ್ನು ಇಡಬೇಕಾಗಿದೆ. ಈ ಸಾರಿ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ತೋರಿಸಿರುವ ಖರ್ಚಿನ ಬಗ್ಗೆ ವಿಶದವಾಗಿ ವಿವರ ಕೊಟ್ಟಿದ್ದೇವೆ. ಅದಕ್ಕೆ ಸಂಬಂಧಪಟ್ಟ ಗೌವರ್ನ್‌ಮೆಂಟ್ ಆರ್ಡರ್ ಅನ್ನು ಕೂಡ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಇಷ್ಟೊಂದು ಪೂರಕ ಬೇಡಿಕೆಗಳನ್ನು ತರುತ್ತೀರಿ, ಇದರಲ್ಲಿ ಏನೋ ಅನುಮಾನ ಇದೆ ಎಂದು ಹೇಳಿದರು. ಯಾವ ಯಾವ ಬಾಬಿಗೆ ಎಷ್ಟೆಷ್ಟು ಖರ್ಚಾಗುತ್ತದೆ ಎನ್ನತಕ್ಕ ಲೆಕ್ಕಪತ್ರಗಳನ್ನು ಸರಿಯಾಗಿ ಕೊಟ್ಟಿದೆ. ಈ ಬಗ್ಗೆ ಕೇಂದ್ರ ಸರ್ಕಾರದಿಂದ ಬರತಕ್ಕ ಹಣ ಮತ್ತು ನಮ್ಮ ಬೊಕ್ಕಸದಿಂದ ಹಾಕತಕ್ಕಂಥ ಹಣ ಎಲ್ಲಕ್ಕೂ ಸರಿಯಾಗಿ ಲೆಕ್ಕವನ್ನು ಇಡಲಾಗಿದೆ. ಇದರಲ್ಲಿ ಯಾವುದೇ ತರಹ ತಪ್ಪು

(ಶ್ರೀ ರಾಮಕೃಷ್ಣ ಹೆಗಡೆ)

ಇಲ್ಲ. ಮತ್ತು ಯಾವುದೇ ತರಹ ತಪ್ಪು ತಿಳುವಳಿಕೆಗೆ ಅವಕಾಶ ಆಗದಂತೆ ಎಲ್ಲಾ ವ್ಯವಸ್ಥೆಯನ್ನು ಮಾಡಿದೆ. ಆದರೂ ಸಹ ಮಾನ್ಯ ಸದಸ್ಯರು ಕೆಲವೊಂದು ಟೀಕೆಯನ್ನು ಮಾಡಿದ್ದಾರೆ. ಇದರಲ್ಲಿ ಯಾವುದೇ ತಪ್ಪು ಸಹ ಇಲ್ಲ. ಇದಕ್ಕೆ ಈ ಮಾನ್ಯ ಸಭೆಯವರು ಮನ್ನಣೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Mr. DEPUTY CHAIRMAN.—The House will now adjourn to meet at 2-30 P.M. on 8th September 1969.

The House adjourned at Forty Minutes past Six of the Clock to meet again at Thirty Minutes past Two of the Clock on Monday, the 8th September, 1969.

WD 13613—GPB—600—24-4-1970

ಮೈಸೂರು ವಿಧಾನ ಪರಿಷತ್ತು

MYSORE LEGISLATIVE COUNCIL

Monday, 8th September 1969

The House met in the Council Chamber, Vidhana Soudha, Bangalore, at Thirty Minutes past Two of the Clock.

MR. DEPUTY CHAIRMAN (SRI M. MADIAH) in the Chair.

STARRED QUESTIONS

(to which oral answers were given)

Bogus industrial concerns and blackmarketing of raw materials

3. SRI M. V. VENKATAPPA (Graduates' Constituency).—

Will the Minister for Industries be pleased to state :—

(*a*) whether there are any bogus institutions which have drawn raw materials under the guide of running the Industries and sold them in blackmarket and made lot of money ; if so, their number ;

(*b*) the dates on which these institutions were issued licences for getting raw materials, their month'y or annual quota, the name of the industry for which it was given and the quota allotted to each one of them ;

(*c*) the steps taken by them to wipe out these bogus institutions ?

SRI A. P. APPANNA (Deputy Minister for Industries).—

(*a*) Yes. There are three such institutions.

(*b*) The details are furnished in the statement appended.

(*c*) Special Investigation establishment of the Central Government are taking suitable action to book the bogus institutions. The Assistant Directors of Industries of the Districts have been instructed to inspect such institutions often. If the institutions found to have misused the raw materials it will not only be reported to the Controller but also their application will be rejected.

(SRI A. P. APPANNA)

STATEMENT

Showing the Institutions which have misused the raw materials.

(i) M/s. Eswar Iron Foundry near Railway Station, Bangalore City.

Iron and Steel

		Rs.
(*a*) April 62 to September 62 and October to March 63	...	40,000
(*b*) April to September 63	...	1,000
(*c*) October 13 to March 64	...	1,000
(*d*) Octobr 64 to March 65	...	100
(*e*) Barter Allotment April 1964 (M. Ton supply in 67-68)	...	2,730

	Minerals other than Iron and Steel		
	Copper	*Zinc*	*Tin*
(*a*) April 61—Sept. 61	1,200 Kg.	...	....
(*b*) October 61—March 62	1,200 M. Ton	...	...
(*c*) April 62-September 62	1,200 ,,	...	...
(*d*) October 62—April 63	...	2.00 M. Ton.	...
(*e*) April 63-September 63	2.00 ,,	2.00 ,,	0.50 Kg.
(*f*) October 63—March 64	2.00 ,,	2.00 ,,	0.50 ,,
(*g*) April 64-September 64	2.00 ,,	0.50 Kg.	0.50 ,,
(*h*) October 64—March 65	1.00 ,,	0.43 M. Ton	90 ,,
(*i*) January 66—April 66	4.00 ,,	0.20 ,,	0.050 M.Ton.

1966-67

Rs. 17,717

Rs. 35,434

(ii) M/s. Gemavat Corporation, 4-1 Platform Road, Bangalore-20.

Plastic Goods

64-65 Rs. 59,427-00

(iii) M/s. Baba Industries XII/45-A Brucepet, Bellary.

Aromatic Chemicals

63-64 Rs. 1,050-00

ಶ್ರೀ ಎಂ. ವಿ. ವೆಂಕಟಪ್ಪ.—ಕೈಗಾರಿಕಾ ಇಲಾಖೆಯ ಅಧಿಕಾರಿಗಳು ಬ್ಲಾಕ್ ಮಾರ್ಕೆಟ್ ಮಾಡುವವರಿಗೆ ಏನಾದರೂ ಸಹಾಯಕರಾಗಿದ್ದಾರೆಯೇ? ಹಾಗಿದ್ದರೆ ಅಂಥ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ ?

ಶ್ರೀ ಎ. ಪಿ. ಅಪ್ಪಣ್ಣ.—ಜನರಲ್ ಆಗಿ ಸಹಾಯಕರಾಗಿದ್ದಾರೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. There may be some black sheep in our Department at a lower level who may assist but we cannot trace so far who those people are who are assisting the blackmarketeers.

ಶ್ರೀ ಎಸ್. ಸಿ. ಕುಬಸದ್.—ಇಂಥ ಬೋಗಸ್ ಪರವಾನಗಿ ಕೊಟ್ಟಿದೆ ಎಂದು ತಿಳಿದ ಸಂದರ್ಭದಲ್ಲಿ ಅಂಥ ಪರವಾನಗಿಯನ್ನು ಯಾರು ಕೊಟ್ಟಿದ್ದಾರೆ ಅಂಥವರಮೇಲೆ ಏನು ಕ್ರಮ ಕೈಗೊಂಡಿದ್ದೀರಿ ?

ಶ್ರೀ ಎ. ಪಿ. ಅಪ್ಪಣ್ಣ.- ಇಂಪೋರ್ಟ್ ಕಂಟ್ರೋಲರ್ ಅವರು ಮೂರು ಬೋಗಸ್ ಇಂಡಸ್ಟ್ರೀಸ್ ಎಂದು ಡಿಕ್ಲೇರ್ ಮಾಡಿದರು. 1967-68 ಕೋಟ ಕೊಟ್ಟಮೇಲೆ ಅದು ನಮ್ಮ ರಾಜ್ಯ ಸರ್ಕಾರದ ಗಮನಕ್ಕೆ ಬಂದು ಇಂಪೋರ್ಟ್ ಕಂಟ್ರೋಲರ್ ಅವರಿಗೆ ನಾವು ರೆಕಮೆಂಡ್ ಮಾಡಿ ಅವರು ನಿರ್ಣಯ ತೆಗೆದುಕೊಂಡ ಪ್ರಕಾರ ಬೋಗಸ್ ಇಂಡಸ್ಟ್ರೀಸ್ ಎಂದು ಕೋಟಾ ನಿಲ್ಲಿಸಿದ್ದೇವೆ. 1968-69 ಕೋಟಾದಲ್ಲಿ ನಮ್ಮ ವ್ಯವಸ್ಥೆಯನ್ನು ಇನ್ನೂ ಹೆಚ್ಚಾಗಿ ಮಾಡಿ ಬೋಗಸ್ ಇಂಡಸ್ಟ್ರೀಸ್ ಹಿಡಿಯಬೇಕು ಎನ್ನುವ ಕ್ರಮ ತೆಗೆದುಕೊಂಡಮೇಲೆ 1968-69 ರಲ್ಲಿ 45 ಇಂಡಸ್ಟ್ರೀಸ್ ಹಿಡಿದಿದ್ದೇವೆ. ಇದನ್ನು ನಾವು ಇಂಪೋರ್ಟ್ ಕಂಟ್ರೋಲರವರಿಗೆ ರೆಕಮೆಂಡ್ ಮಾಡಿದ್ದೇವೆ. ಅವರು ನಮ್ಮ ರಿಪೋರ್ಟನ್ನು ವೆರಿಫೈ ಮಾಡಿ ಅದರಲ್ಲಿ ಎಷ್ಟು ಬೋಗಸ್ ಎನ್ನುವ ತೀರ್ಮಾನವನ್ನು ಅವರು ತೆಗೆದುಕೊಳ್ಳಬೇಕು. We cannot say at this stage that these 45 units are bogus. Ultimately it is the Import Controller who has to take a decision to that effect.

ಶ್ರೀ ಕೆ. ಎಸ್. ಚನ್ನಪ್ಪ.—1968-69ನೇ ಇಸವಿಯಲ್ಲಿ ಯಾರಿಗಾದರೂ ಈ ಮನೆಯ ಅಥವಾ ಕೆಳಮನೆಯ ಸದಸ್ಯರಿಗೆ ಅಥವಾ ಅವರ ಸಂಬಂಧೀಕರಿಗೆ ಕೋಟಾ ಕೊಡಲಾಗಿದೆಯೇ ?

ಶ್ರೀ ಎ. ಪಿ. ಅಪ್ಪಣ್ಣ.—ಸದಸ್ಯರಿಗೆ ಯಾರಿಗೂ ಕೊಟ್ಟಿಲ್ಲ. ಸದಸ್ಯರ ಸಂಬಂಧೀಕರು ಇರಬಹುದೋ ಏನೋ ಗೊತ್ತಿಲ್ಲ. ಕಂಪನಿಗಳ ಹೆಸರಿನಲ್ಲಿ ಅರ್ಜಿಗಳನ್ನು ಹಾಕುತ್ತಾರೆ. ಆದರಲ್ಲಿ ಸದಸ್ಯರು ಸಂಬಂಧೀಕರು ಪಾಲುದಾರರಾಗಿದ್ದರೆ ಅದು ನಮಗೆ ಗೊತ್ತಾಗುವುದಿಲ್ಲ. We cannot say whether they are relatives of the members or not; but I can assure the House that we have not given quota to any member.

ಶ್ರೀ ಕೆ. ಎಸ್. ಚನ್ನಪ್ಪ.—ಕೋಟ ಕೊಡುವಾಗ ಕಾರ್ಖಾನೆಯೆಲ್ಲಿದೆ, ಯಾವಾಗ ಪ್ರಾರಂಭವಾಯ್ತು ಎಂದು ಇನ್‌ವೆಸ್ಟಿಗೇಟ್ ಮಾಡಿ ಲೈಸೆನ್ಸ್ ಕೊಡಲಾಗಿದೆಯೇ ?

ಶ್ರೀ ಎ. ಪಿ. ಅಪ್ಪಣ್ಣ.—1968-69 ರಲ್ಲಿ ಕೋಟ ಕೊಡುವಾಗ ಸ್ಪೆಷಲ್ ಆಫೀಸರು ಮತ್ತು ಸಿಬ್ಬಂದಿ ಥರೋ ಇನ್‌ವೆಸ್ಟಿಗೇಷನ್ ಮಾಡಿ ಮಷೀನರಿ ಇದೆಯೇ, ಎಲೆಕ್ಟ್ರಿಕ್ ಪವರ್ ತೆಗೆದುಕೊಂಡಿರುವರೇ, ಫ್ಯಾಕ್ಟರಿ ಇದೆಯೇ ಎಂದು ನೋಡಿದ್ದಾರೆ. It is enough if a person invests only Rs. 10,000. He is well equipped for that factory. But after the quota is issued, he may use or may not use it or he may sell it in the blackmarket. That is why we have directed all the Assistant Directors that they have to check not only at the time of issuing the essentiality certificate but after the quota has been issued they must check whether the material has been utilised and a periodical report should be given.

ಶ್ರೀ ಎ. ಕೆ. ಸುಬ್ಬಯ್ಯ.—ಉತ್ತರದಲ್ಲಿ ಕೊಟ್ಟಿರುವಂತೆ ಮೋಸ ಮಾಡಿರುವ 3 ಸಂಸ್ಥೆಗಳ ವಿಚಾರ ಯಾವಾಗ ಗಮನಕ್ಕೆ ಬಂತು ? ಮತ್ತು ಅವುಗಳ ಮೇಲೇನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಎ. ಪಿ. ಅಪ್ಪಣ್ಣ.—ಆಗಲೇ ಹೇಳಿದೆ. 1967-68ರಲ್ಲಿ ಕೋಟ ಕೊಡುವಾಗ ಗಮನಕ್ಕೆ ಬಂತು. ಅನಂತರ ಒಡನೆಯೇ ಕೇಂದ್ರ ಸರಕಾರಕ್ಕೆ ಈ 3 ಸಂಸ್ಥೆಗಳ ಹೆಸರನ್ನು ತಿಳಿಸಲಾಗಿದೆ. ಅವರು ವೆರಿಫೈಮಾಡಿ ಕ್ರಮ ತೆಗೆದುಕೊಂಡಿದ್ದಾರೆ. They have banned these three industries from receiving any further quota of imported raw materials.

ಶ್ರೀ ಕೆ. ಚನ್ನಬಸವನಗೌಡ.—ಈಶ್ವರ ಐರನ್ ಫೌಂಡರಿಯವರು ಸೆಪ್ಟೆಂಬರ್ 1962 ರವರೆಗೆ ಮತ್ತು ಮಾರ್ಚ್ 1963 ರವರೆಗೆ 40 ಸಾವಿರ ರೂಪಾಯಿಗಳನ್ನು ಮಿಸ್‌ಯೂಸ್ ಮಾಡಿದ್ದಾರೆಂದು ಉತ್ತರದಲ್ಲಿದೆ. ಅಲ್ಲಿಂದೀಚೆಗೆ ಕ್ರಮ ಕೈಕೊಂಡಿರುವುದೇನು ? ಅಲ್ಲಿಂದೀಚೆಗೆ ಕೊಂಡಿಲ್ಲವೇ ?

ಶ್ರೀ ಎ. ಪಿ. ಅಪ್ಪಣ್ಣ.—1962–63 ರಲ್ಲಿ ಎಸೆನ್ಷಿಯಾಲಿಟಿ ಸರ್ಟಿಫಿಕೇಟ್ ಸಿಕ್ಕಿರಬೇಕು. ಅಲ್ಲಿಂದ ಮಾರಾಟದ ಲೈಸೆನ್ಸ್ ದೊರೆಯುವುದು. They took a lot of time. When the material is received by them, they must maintain accounts for having utilised the same. It is not possible to find out whether the quota allotted in a particular year has been utilised in that year itself because it takes lot of time to get the imported material. We can detect only two or three years after we have gone into the accounts.

ಶ್ರೀ ಎಂ. ವಿ. ವೆಂಕಟಪ್ಪ.—ಒಂದು ಸಲ ಕೋಟ ಕೊಟ್ಟಮೇಲೆ ಕೊಟ್ಟಿರುವುದನ್ನು ಸರಿಯಾಗಿ ಉಪಯೋಗ ಮಾಡಿರುವರೇ ಎಂಬುದನ್ನು ಚೆಕ್ ಮಾಡುವುದಿಲ್ಲವೇ ?

Sri A. P. APPANNA.—In each district there are Assistant Directors who are instructed to check these units and find out whether these materials have been used. They have to maintain accounts for having received the stocks, for having used it or for having sold it and bills must be produced. There are people who are clever enough to manipulate all these things and hoodwink and it is not as if this procedure is a foolproof one.

ಶ್ರೀ ಎಸ್. ಸಿ. ಕುಬಸದ್.—3 ಜನರು ದುರುಪಯೋಗ ಮಾಡಿದರೆಂದು ಗಮನಕ್ಕೆ ಬಂದಮೇಲೆ ತಪಾಸಣೆ ಮಾಡಿದರೇ ? ಮಾಡಿದ್ದರೆ ಅದರ ಫಲವೇನು ? ಅಧಿಕಾರಿಗಳು ತಮ್ಮ ಕರ್ತವ್ಯ ಮಾಡಿರುವರೇ ? Have they executed their duty properly ?

Sri A. P. APPANNA.—These three units were brought to light by our State officers after having gone into the accounts and found that they have not utilised the materials. Immediately the State Government referred the matter to the Import Controller who is the ultimate authority to take decisions.

ಶ್ರೀ ಎ. ಕೆ. ಸುಬ್ಬಯ್ಯ.—(ಅ) ಪ್ರಶ್ನೆಗೆ ಉತ್ತರವಾಗಿ ಮಾರಾಟ ಮಾಡಿ ಕಳ್ಳ ಸಂತೆಯಲ್ಲಿ ಹೇರಳವಾಗಿ ಹಣ ಸಂಪಾದನೆ ಮಾಡಿರುವುದಾಗಿ ತಿಳಿದುಬಂದಿರುವುದರಲ್ಲಿ ನಿಜಾಂಶವಿದೆಯೇ ಎಂದರೆ ಇದೆ ಎಂದು ಒಪ್ಪಿಕೊಂಡಿದ್ದೀರಿ. ಈ 3 ಸಂಸ್ಥೆಗಳು ಎಷ್ಟು ಹಣ ಈ ರೀತಿ ಸಂಪಾದನೆ ಮಾಡಿದ್ದಾರೆ ಎಂಬ ಮಾಹಿತಿ ಗೊತ್ತಿದೆಯೇ ?

Sri A. P. APPANNA.—We have given here the amount involved regarding the raw material as it is on the market, but we cannot assess what amount they got in the blackmarket. A material worth Rs. 40,000 in the market might have been sold for Rs. 80,000 in the blackmarket. We can only say that they have not utilised the material but have sold it in the blackmarket, but we cannot get at the amount at which it has been sold in the blackmarket because in the blackmarket the premium is sometimes two to three times.

Smt. M. R. LAKSHAMMA.—In regard to these 3 bogus companies may I know with what object they procured these raw materials ?

Sri A. P. APPANNA.—On the face of it, it is quite obvious that they procured it in order to sell it in the blackmarket.

Smt. M. R. LAKSHAMMA.—With what object they got these raw materials ?

Sri A. P. APPANNA.—When they apply for raw materials the State Government officers visit the factory to find out whether the factory is equipped for manufacture of the said products and whether they have the necessary machinery and whether they have got power connection, etc. But after receiving the material they may not use and they may sell it in the blackmarket because they may find it more profitable than manufacturing the product and selling it.

Smt. M. R. LAKSHAMMA.—Is it not possible for the representatives of the Industries Department to go and check these concerns often so that they may find out whether the factory is at work or whether it is just a bogus one and whether production is going on ?

Sri A. P. APPANNA.—It was on such checks only it was found out that these 3 units were not using the material. In 1968–69 we have found out about 45 units which are not using the materials and that those units are not well-equipped. The matter has been reported to the Import Controller and a decision on that has to be taken by the Import Controller.

ಶ್ರೀ ಎಂ. ವಿ. ವೆಂಕಟಪ್ಪ.—ಈ ಕೋಟಾ ಸಂಸ್ಥೆಗಳ ಇನ್‌ವೆಸ್ಟಿಗೇಷನ್ ಪ್ರಾರಂಭ ಮಾಡಿದ ಮೇಲೆ ಮಾನ್ಯ ಉಪಮಂತ್ರಿಗಳನ್ನು ಕೊಲೆ ಮಾಡುವುದಾಗಿ ಹೆದರಿಸಿದ್ದು ಪತ್ರಿಕೆಗಳಲ್ಲಿ ಬಂದಿತ್ತು. ಆ ರೀತಿ ಏನಾದರೂ ಪತ್ರ ತಮಗೆ ಬಂದಿದೆಯೇ? ಬಂದಮೇಲೆ ತಾವು ಸುಮ್ಮನಾಗಿಬಿಟ್ಟಿರಾ !

Sri A. P. APPANNA.—It is not only myself but most of our officers who were sent out for this invistigation have received such threatening letters. In fact, one of our Deputy Directors who was specially deputed in Bangalore District for checking of these units had to be given police protection because these industrialists had gone to the extent of threatening to kidnap his son who is going to school and so we had to provide police assistance to that boy also to go to school and come back home safe. It was by such intensive check that we unearthed 45 units in 1968–69 as against 3 units in 1967-68. This goes to show that we have intensified the check.

Smt. M. R. LAKSHAMMA.—The Hon. Deputy Minister just now stated that it is only after the accounts are furnished that it is possible to find out whether they are bogus companies or not. Is it not possible to find out much earlier prior to the accounts being furnished, whether the concerns are at work or not by appointing a special Intelligence Cell ?

Sri A. P. APPANNA.—At the time of application for essentiality certificate the unit is checked by our officers to find out whether the unit is well-equipped with machinery for the manufacture of such a product using that raw material, whether power connection has been given or not to enable the unit to make use of the raw material. After the essentiality certificate is issued and before receiving the material in the factory the time lag is sometimes more than two years and so there is no meaning in checking in between these two stages. It is only after the materials are received and entered in their books that we can check their accounts.

Public Sector Primary Schools placed under Education Department

24. Sri S. MUKUNDA RAO (Teachers' Constituency).—

Will the Minister for Education be pleased to state :—

(a) whether all Public Sector Primary Schools have been placed under the Education Department ;

(b) why Public Sector Secondary Schools have not been similarly brought under one management?

Sri N. M. KOTRABASAIAH SOGI (Deputy Minister for Education).—

(a) No ; primary schools managed by the Corporation of Bangalore, the Municipality in Mercara and the Cantonment Board in Belgaum, have not been placed und·r the Education Department. Besides, the take over of primary schools managed by the Municipal Councils and Panchayats in South Kanara and Bellary Districts has not taken place yet, though provisions in this behalf have been made in the Mysore Compulsory Primary Education (Amendment and Miscellaneous Provisions) Bill, 1969.

(b) The matter has not been examined yet.

Sri S. MUKUNDA RAO.—It is stated that the take over of the primary schools managed by the Municipal Councils and Panchayats in South Kanara and Bellary Districts has not taken place. What about District Board Primary Schools of South Kanara and Bellary?

† Sri N. M. KOTRABASAIAH SOGI.—Executive order is under issue for taking over those schools to Government.

Sri S. MUKUNDA RAO.—Supplementary to (b): Will Government ask the concerned Secretaries of the Department to submit a report to Government on the possibility of taking over these secondary schools to Government ?

Sri N. M. KOTRABASAIAH SOGI.—There is no proposal of taking over the secondary schools to Government. No special advantage is being considered for such taking over.

Reducing the Minimum Electric Charges for I.P. Sets

75. Sri K. CHANNABASAVANA GOWDA (Local Authorities' Constituency).—

Will the Chief Minister be pleased to state :—

(a) whether Government aware that raising of the minimum charge for I.P. Sets by Mysore State Electricity Board from Rs. 120

† indicates that the remarks or speeches have not been revised by the member concerned.

to 240 works as a great hardship to agriculturists who have insufficient water in their wells to work I.P. Sets ;

(*b*) whether there is any proposal to reduce the minimum charges for I.P. sets to its original level of Rs. 120 per annum ?

Sri D. PARAMESHWARAPPA (Deputy Minister for Major Irrigation and Electricity) [On behalf of SRI VEERENDRA PATIL (Chief Minister)].—

(*a*) Some representations to this effect have been received.

(*b*) This matter is being carefully examined.

ಶ್ರೀ ಕೆ. ಚನ್ನಬಸವನಗೌಡ.—ಇಲ್ಲಿ (ಅ) ಪ್ರಶ್ನೆಗೆ ಉತ್ತರವಾಗಿ ಕೆಲವು ಮನವಿಗಳು ಬಂದಿವೆ ಎಂದು ಹೇಳಿದ್ದಾರೆ. ಈಗ 240 ರೂಪಾಯಿಗಳಿಗೆ ಏರಿಸಿರತಕ್ಕ ದರವನ್ನು ಮೊದಲಿದ್ದ ಹಾಗೆ 120 ರೂಪಾಯಿಗಳಿಗೆ ಇಳಿಸುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ.—ಸರ್ಕಾರದವರು ಆ ವಿಚಾರವನ್ನು ಬಹಳ ತೀವ್ರವಾಗಿ ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಎಂ. ವಿ. ವೆಂಕಟಪ್ಪ.—ಈ ಬಗ್ಗೆ ಅವರು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಇನ್ನೂ ಎಷ್ಟು ದಿನಗಳು ಬೇಕು ?

ಶ್ರೀ ಡಿ. ಪರಮೇಶ್ವರಪ್ಪ.—ಅದಕ್ಕಾಗಿ ಒಂದು ಟ್ಯಾರೀಫ್ ಕಮಿಟಿಯನ್ನು ನೇಮಕ ಮಾಡಿದ್ದೇವೆ. ಅವರು ಆ ವಿಚಾರವನ್ನು ಪರಿಶೀಲನೆ ಮಾಡುತ್ತಿದ್ದಾರೆ. ಇನ್ನು 2-3 ತಿಂಗಳೊಳಗಾಗಿ ಅವರ ವರದಿ ಬರಬಹುದು. ಸರ್ಕಾರದವರು ಅದರ ನಿರೀಕ್ಷಣೆಯಲ್ಲಿದ್ದಾರೆ.

ಶ್ರೀ ಕೆ. ಚನ್ನಬಸವನಗೌಡ.—ಆ ಸಮಿತಿಯವರು ಆ ಹಿಂದೆ ಇದ್ದ ರೇಟನ್ನೇ ಒಪ್ಪಬೇಕೆಂದು ವರದಿ ಕಳುಹಿಸಿದ್ದಾರೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಅವರು ಇನ್ನೂ ಯಾವ ವರದಿಯನ್ನೂ ಸಲ್ಲಿಸಿಲ್ಲ.

ಶ್ರೀ ಕೆ. ಚನ್ನಬಸವನಗೌಡ.—ಆ ಟ್ಯಾರೀಫ್ ಕಮಿಟಿಯವರ ವರದಿ ಸರ್ಕಾರಕ್ಕೆ ಬರುವ ವರೆಗಾದರೂ ಇದನ್ನು ತಡೆಹಿಡಿಯುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ.—ಆ ವಿಚಾರವನ್ನು ದೀರ್ಘವಾಗಿ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಜಿ. ವಿ. ಆಂಜನಪ್ಪ.—ಆ ಟ್ಯಾರೀಫ್ ಸಮಿತಿಯನ್ನು ನೇಮಕ ಮಾಡಿದ್ದು ಯಾವಾಗ ?

ಶ್ರೀ ಡಿ. ಪರಮೇಶ್ವರಪ್ಪ.—ಇಲ್ಲಿಗೆ 2-3 ತಿಂಗಳ ಕೆಳಗೆ ಅದನ್ನು ನೇಮಕ ಮಾಡಲಾಯಿತು.

ಶ್ರೀ ಜಿ. ವಿ. ಆಂಜನಪ್ಪ.—ಕಡಮೆ ಮಾಡುತ್ತೇವೆ ಅಥವಾ ಇಲ್ಲ ಎಂದು ಯಾವುದನ್ನಾದರೂ ಒಂದನ್ನು ಖಚಿತವಾಗಿ ಏಕೆ ಹೇಳಬಾರದು ?

ಶ್ರೀ ಡಿ. ಪರಮೇಶ್ವರಪ್ಪ.—ಆದರೆ ಈ ಪ್ರಶ್ನೆ ಅಷ್ಟು ಸುಲಭವಾದುದಲ್ಲ.

ಶ್ರೀ ಕೆ. ಟಿ. ಶ್ಯಾಮಯ್ಯಗೌಡ.—ಹಿಂದೆ 120 ರೂಪಾಯಿಗಳು ಇದ್ದಾಗ ಬೋರ್ಡಿಗೆ ಇಂತಿಷ್ಟು ನಷ್ಟವಾಗಿದೆ ಎಂಬುದನ್ನೇನಾದರೂ ಅವರು ತಿಳಿಸಿದ್ದಾರೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಈ ಬಗ್ಗೆ ಮಾಹಿತಿ ಬೇಕಾದರೆ ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆಯನ್ನು ಹಾಕಿದರೆ ಉತ್ತಮ. ನನಗೆ ಗೊತ್ತಿರುವ ಹಾಗೆ ಸುಮಾರು 42 ಸಾವಿರ ಪಂಪು ಸೆಟ್ಟುಗಳಿವೆ. ಕನ್‌ಸಂಪ್ಷನ್ ಮಿನಿಮಂಗಿಂತ ಕಡಿಮೆಯಾಗುತ್ತದೆ.

ಶ್ರೀ ಕೆ. ಚನ್ನಬಸವನಗೌಡ.—ಕನಿಷ್ಠ ದರಗಳನ್ನು 240 ರೂಪಾಯಿಗಳಿಂದ 120 ರೂಪಾಯಿ ಗಳಿಗೆ ಇಳಿಸಿದರೆ, ಸರ್ಕಾರಕ್ಕೆ ಎಷ್ಟು ಖರ್ಚಾಗುತ್ತದೆ ?

ಶ್ರೀ ಡಿ. ಪರಮೇಶ್ವರಪ್ಪ.—ಆ ಲೆಕ್ಕ ನನ್ನಲ್ಲಿಲ್ಲ. ಬೇರೆ ಪ್ರಶ್ನೆ ಹಾಕಿದರೆ ಅದನ್ನು ಒದಗಿಸಬಹುದು.

ಶ್ರೀ ಎಸ್. ಸಿ. ಕುಬಸದ್.—ಈ ದರ ಕಡಿಮೆಮಾಡಬೇಕೆಂದು ಸರ್ಕಾರಕ್ಕೆ ಮನವಿಗಳು ಬಂದಿವೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಟ್ಯಾರೀಫ್ ಕಮಿಟಿಯವರು ಅಗ್ರಿಕಲ್‌ಚರಲ್ ರೆಪ್ರಸೆಂಟಟಿವ್ಸ್ ಯಾರು ಇದ್ದಾರೆಯೋ ಅಂತಹವರ ಮನವಿಗಳನ್ನು ಗಮನಕ್ಕೆ ತೆಗೆದುಕೊಂಡನಂತರ ಒಂದು ತೀರ್ಮಾನಕ್ಕೆ ಬರುತ್ತಾರೆ.

ಶ್ರೀ ಕೆ. ಟಿ. ಶಾಮಯ್ಯಗೌಡ.—ಲೆಕ್ಕ ಸದ್ಯಕ್ಕೆ ಇಲ್ಲವೆಂದು ಹೇಳಿದಿರಿ ಕನಿಷ್ಠ ದರವನ್ನು 120 ರೂ. ಗಳಿಂದ 240 ರೂ. ಗಳಿಗೆ ಅವರು ಯಾವ ಬೇಸಿಸ್ ಮೇಲೆ ಏರಿಸಿದರು ? ಇಷ್ಟು ಬೇಡಿಕೆಗಳು ಬಂದರೂ ಆ ರೀತಿ ಏರಿಸಲಿಕ್ಕೆ ಕಾರಣವೇನು ? ಅವರು ಸರ್ಕಾರದವರನ್ನು ಕೇಳಲಿಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ.—ಸರ್‌ಚಾರ್ಜನ್ನು ಪಂಪುಸೆಟ್ಟುಗಳ ಮೇಲೆ ಹಾಕಿಲ್ಲ. ಮಿನಿಮಂ ಚಾರ್ಜನ್ನನ್ನು ದ್ವಿಗುಣಮಾಡಿದ್ದೇವೆ. ಎರಡು ರೂಪಾಯಿ ಇದ್ದುದನ್ನು ನಾಲ್ಕು ರೂಪಾಯಿಗಳಿಗೆ ಏರಿಸಿದ್ದೇವೆ. ಈಗ ಅನ್‌ರಮ್ಯೂನರೇಟಿವ್ ಐ. ಪಿ. ಸೆಟ್ಟುಗಳು ಇರುವುದರಿಂದ ಬೋರ್ಡಿಗೆ ನಷ್ಟ ವಾಗುತ್ತಿದೆ.

ಶ್ರೀ ಜಿ. ವಿ. ಆಂಜನಪ್ಪ.—ಈಗ ಈ ರಾಜ್ಯದಲ್ಲಿರತಕ್ಕ ರೈತರಿಗೆ ಹೆಚ್ಚಿಗೆ ಆಹಾರಧಾನ್ಯಗಳನ್ನು ಪಡೆಯಲು ನಾನಾ ವಿಧವಾದ ಸೌಲಭ್ಯ ಹಾಗೂ ಸಹಕಾರಗಳನ್ನು ಕೊಡುವಾಗ ವಿದ್ಯುಚ್ಛಕ್ತಿದರ ವನ್ನು ಏತಕ್ಕೆ ಏರಿಸಿದ್ದೀರಿ ? ಇದರ ದರವನ್ನು ಏತಕ್ಕೆ ಕಡಿಮೆಮಾಡುವುದಿಲ್ಲ ? ಅದಕ್ಕೆ ತಕ್ಕ ಏರ್ಪಾಡು ಮಾಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಇದು ಒಳ್ಳೆಯ ಸಲಹೆ. ಈ ರಾಜ್ಯದಲ್ಲಿರತಕ್ಕ ಎಲ್ಲಾ ವ್ಯವಸಾಯಗಾರರಿಗೂ ಆದಷ್ಟು ಸವಲತ್ತುಗಳನ್ನು ಕೊಡಬೇಕೆಂಬುದು ಎಲ್ಲರ ಆಶೆ. ಒಂದು ಕಡೆ ಬೋರ್ಡಿನ ಕೆಲಸಕಾರ್ಯಗಳು ಸುಗಮವಾಗಿ ನಡೆಯಬೇಕು. ಏಕೆಂದರೆ, ಮುಂದೆ ಹಲವಾರು ರೈತರು ವ್ಯವಸಾಯ ಸಾಮಗ್ರಿಗಳನ್ನು ಪಡೆಯಲು ಮುಂದೆ ಬರುತ್ತಾರೆ. ಎಷ್ಟರಮಟ್ಟಿಗೆ ಬೋರ್ಡಿಗೆ ಹಣ ಒದಗಿಸಬೇಕೆನ್ನುವುದನ್ನು ಪರಿಶೀಲನೆ ಮಾಡಬೇಕಾಗಿದೆ. ಆದ್ದರಿಂದ ಒನ್‌ಸೈಡ್ ವ್ಯೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಸ್. ಚನ್ನಪ್ಪ.—ಟ್ಯಾರಿಫ್ ಕಮಿಟಿ ಹೋಗಿ ಅದನ್ನು ಎನ್‌ಕ್ವೈರಿ ಮಾಡುತ್ತಿದೆ ಎಂದು ಹೇಳಿದಿರಿ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ, ಟೌನಿನಲ್ಲಿಯೂ, ತಾಲ್ಲೂಕ್ ಕಚೇರಿ ಗಳಲ್ಲಿಯೂ ಕೆಲವರು ಸತ್ಯಾಗ್ರಹ ಮಾಡುತ್ತಿದ್ದಾರೆ. ರೈತರು ಆ ಕಮಿಟಿಯಿಂದ ತೀರ್ಮಾನ ಬರುವವರೆಗೂ ಡಿಪಾಜಿಟ್ಟುಗಳನ್ನು ಮಂತ್ಲಿ ಕೊಡುವುದಿಲ್ಲ. ಆದ್ದರಿಂದ ಮಿನಿಮಂ ಚಾರ್ಜನ್ನನ್ನು ಇಳಿಸುವುದಕ್ಕೆ ಸರ್ಕಾರ ಪ್ರಯತ್ನಪಡುತ್ತದೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಈಗಾಗಲೇ ತಿಳಿಸಿದ ಹಾಗೆ, ಟ್ಯಾರಿಫ್ ಕಮಿಟಿಯವರು ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಂಡಮೇಲೆ ಸರ್ಕಾರ ಇದರಲ್ಲಿ ಯಾವ ರೀತಿ ಹಾರ್ಡ್‌ಷಿಪ್ ಇದೆಯೆನ್ನುವ ಬಗ್ಗೆ ದೀರ್ಘವಾಗಿ ಯೋಚನೆಮಾಡಿ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ.

Sri KESHAVRAO NITTURKAR.—When the Tariff Committee report is being awaited, is it the view of the Government that it should accept the report of the Committee *in toto*?

Sri D. PARAMESWARAPPA.—Certainly not. Government has the discretion to accept it or not.

ಶ್ರೀ ಕೆ. ಚನ್ನಬಸವನಗೌಡ.—ನಮ್ಮ ಕಡೆ ನಾಲ್ಕು ವಾರದಿಂದ ಮಳೆ ಬರುತ್ತದೆ. ಆಷ್ಟೇ. ಕೆಲವು ರೈತರಿಗೆ ನೀರಿಲ್ಲದೆ ಪಂಪ್ ಸೆಟ್ಟನ್ನು ಸರಿಯಾಗಿ ಉಪಯೋಗ ಕೂಡ ಮಾಡುವುದಕ್ಕಾಗುವುದಿಲ್ಲ. ಅದು ಸರ್ಕಾರಕ್ಕೆ ಗೊತ್ತಿದೆ. ಆದ್ದರಿಂದಲಾದರೂ ದರಗಳನ್ನು ಇಳಿಸುವುದಕ್ಕೆ ಪ್ರಯತ್ನ ಮಾಡು ತ್ತೀರಾ ?

Sri D. PARAMESHWARAPPA.—The Government has taken into consideration all these factors and is actively considering the issue.

ಶ್ರೀ ವೈ. ಎಸ್. ಪಾಟೀಲ್.—ನೆರೆಹೊರೆಯ ರಾಜ್ಯಗಳಲ್ಲಿಯ ರೈತರಿಗಿಂತ ನಮ್ಮ ರಾಜ್ಯ ದಲ್ಲಿರುವ ರೈತರಿಗೆ ವಿದ್ಯುತ್‌ದರ ಜಾಸ್ತಿ ಇದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಡಿ. ಪರಮೇಶ್ವರಪ್ಪ.—ನೆರೆಹೊರೆಯ ರಾಜ್ಯಗಳಿಗೆ ಸರ್ಪ್ಲಸ್ ಪವರ್ ನಾವು ಕೊಡುತ್ತಿದ್ದೇವೆ.

ಶ್ರೀ ವೈ. ಎಸ್. ಪಾಟೀಲ್.—ನಾನು ಕೇಳಿದ್ದು ನೆರೆಹೊರೆಯ ರಾಜ್ಯದ ರೈತರಿಗೆ ಅಲ್ಲಿ ಕೊಡುವುದಕ್ಕಿಂತ ಇಲ್ಲಿ ವಿದ್ಯುತ್‌ದರ ಜಾಸ್ತಿ ಇದೆಯಲ್ಲವೇ ಎಂದು.

ಶ್ರೀ ಡಿ. ಪರಮೇಶ್ವರಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಯಾವ್ಯಾವ ರಾಜ್ಯದಲ್ಲಿ ಎಷ್ಟೆಷ್ಟು ದರ ಇದೆಯೆಂಬುದನ್ನು ಈಗಾಗಲೇ ಮಾನ್ಯ ಸಭೆಗೆ ತಿಳಿಸಿದ್ದೇವೆ. ನಮ್ಮ ರಾಜ್ಯದಲ್ಲಿ ಎಲ್ಲಕ್ಕಿಂತಲೂ ಕಡಿಮೆ ದರವೆಂದು ತಿಳಿದಿದ್ದೇನೆ.

ಶ್ರೀ ಜಿ. ವಿ. ಅಂಜನಪ್ಪ.—ಹೊಸ ಹೊಸ ಕೈಗಾರಿಕೆಗಳಿಗೆ ಎಲ್ಲಾ ವಿಧವಾದ ಸೌಲಭ್ಯಗಳೊಂದಿಗೆ ವಿದ್ಯುತ್‌ನ್ನು ಕಡಿಮೆ ದರದಲ್ಲಿ ಕೊಡುತ್ತಿದ್ದಾರೆ. ಅಂಥ ಸಂದರ್ಭದಲ್ಲಿ ಅನ್ನವನ್ನು ಕೊಡತಕ್ಕ ರೈತರಿಗೆ ಹಿಂದಿನ ದರದಲ್ಲೇ ಕೊಡುವುದಕ್ಕೆ ಏನು ಕಷ್ಟ ?

ಶ್ರೀ ಡಿ. ಪರಮೇಶ್ವರಪ್ಪ.—ಈ ಸಭೆಯಲ್ಲಿ ಮತ್ತು ಕೆಳಮನೆಯಲ್ಲಿ ಕೂಡ ಆಗಾಗ್ಗೆ ನಮ್ಮ ರಾಜ್ಯ ಕೈಗಾರಿಕೆಯಲ್ಲಿ ಹಿಂದುಳಿದಿದೆ ಎಂದು ಹೇಳುತ್ತಿದ್ದರು. ಆ ದೃಷ್ಟಿಯಿಂದ ಕೈಗಾರಿಕೆಗಳಿಗೆ ಉತ್ತೇಜನ ಕೊಡುವ ಉದ್ದೇಶದಿಂದ, ಅವರಿಗೆ ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಬಹುಶಃ ಮಾನ್ಯ ಸದಸ್ಯರೆಲ್ಲರ ಅಭಿಪ್ರಾಯ ಅವುಗಳಿಗೆ ಕೂಡ ದರ ಹೆಚ್ಚು ಮಾಡಬೇಕೆಂದು ಬಂದರೆ, ಅದನ್ನು ಎಷ್ಟು ಮಟ್ಟಿಗೆ ಸಾಧ್ಯವಾಗುತ್ತದೆಂಬುವನ್ನು ಪರಿಶೀಲನೆ ಮಾಡಬೇಕಾಗುತ್ತದೆ.

Director of Physical Education in the Collegiate Education Department

99. Sri S. P. RAJANNA (Teachers' Constituency).—

Will the Minister for Education be pleased to state :—

(*a*) whether there is a Director for Physical Education in the Department of Collegiate Education ;

(*b*) the number of Assistant Directors working in that Department ;

(*c*) if these posts are not existing now, what happened to the posts of one Director and two Assistant Directors which existed previously ;

(*d*) the number of Physical Education Instructors now working in that Department ?

Sri N. M. KOTRABASAIAH SOGI (Deputy Minister for Education).—

(*a*) No.

(*b*) None.

(*c*) Number of post of Director of Physical Education existed previously. There were three posts of Assistant Directors of Physical Education previously, out of which one post has been transferred to the Central College which is under the control of Bangalore University and the remaining two posts have been equated with the post of Physical Culture Instructors' Grade I.

(*d*) Twenty-six.

ಶ್ರೀ ಎಸ್. ಪಿ. ರಾಜಣ್ಣ.—(ಸಿ)ಗೆ ಉತ್ತರವಾಗಿ ಒಂದು ಬೆಂಗಳೂರು ಯೂನಿವರ್ಸಿಟಿಗೆ ವರ್ಗಾಯಿಸಲಾಗಿದ್ದು ಉಳಿದ ಎರಡು ಪ್ರಥಮ ದರ್ಜೆಯ ದೈಹಿಕ ಶಿಕ್ಷಣಾಧಿಕಾರಿಗಳ ಹುದ್ದೆಗೆ ನಮೀಕರಿಸಲಾಗಿದೆ ಎಂದು ಹೇಳಿದ್ದೀರಿ. ಡೈರೆಕ್ಟರ್ ಆಫ್ ಫಿಸಿಕಲ್ ಎಜುಕೇಶನ್ ಏನಾಯಿತು?

†ಶ್ರೀ ಎನ್. ಎಮ್. ಕೊಟ್ರಬಸಯ್ಯ ಸೋಗಿ.—ಡೈರೆಕ್ಟರ್ ಪೋಸ್ಟಿಲ್ಲ. ಅದರಲ್ಲಿ ಒಂದು ಸಣ್ಣ ತಪ್ಪು ಇದೆ. "ನೋ" ಎಂಬಲ್ಲಿ ನಂಬರ್ ಎಂದು ಬಿದ್ದಿದೆ. ಇಟ್ ಈಸ್ ಎ ಮಿಸ್ಟೇಕ್.

ಶ್ರೀ ಎಂ. ವಿ. ವೆಂಕಟಪ್ಪ.—ಈ ದೈಹಿಕ ಶಿಕ್ಷಣ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲೇ ಇರುವುದೋ ಅಥವಾ ರಾಜ್ಯ ಇತರ ಕಡೆಗಳ ವಿಶ್ವವಿದ್ಯಾನಿಲಯದಲ್ಲಿಯೂ ಇದೆಯೋ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಬೇರೆ ವಿಶ್ವವಿದ್ಯಾನಿಲಯಗಳಲ್ಲೂ ಇದೆ.

ಶ್ರೀ ಎಸ್. ಪಿ. ರಾಜಣ್ಣ.—ಈಗ ಎರಡು ಅಸಿಸ್ಟೆಂಟ್ ಡೈರೆಕ್ಟರ್ ಪೋಸ್ಟು ಗ್ರೇಡ್ ಒಂದಕ್ಕೆ ಮರ್ಜ್ ಆಗಿದೆ. ಈ 26 ಯಾವ ಗ್ರೇಡಿನಲ್ಲಿ ಇದೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಫಸ್ಟ್ ಗ್ರೇಡಿನಲ್ಲಿ ಎರಡು, ಸೆಕೆಂಡ್ ಗ್ರೇಡಿನಲ್ಲಿ 4 ಪೋಸ್ಟು, ಮೂರನೇ ಗ್ರೇಡಿನಲ್ಲಿ 20 ಪೋಸ್ಟು ಇದೆ.

ಶ್ರೀ ಎಸ್. ಪಿ. ರಾಜಣ್ಣ.—ಈ ಫಸ್ಟ್ ಗ್ರೇಡ್ ಏನಿದೆ, ಅವರಿಗೆ ಸೂಪರ್‌ವೈಸರಿ ಪವರ್ ಇದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ಕಾಲೇಜುಗಳಲ್ಲಿರುವ ಮತ್ತು ಹೈಸ್ಕೂಲುಗಳಲ್ಲಿರುವ ಹೆಣ್ಣು ಮಕ್ಕಳಿಗೆ ದೈಹಿಕ ಶಿಕ್ಷಣ ಕೊಡುವುದಕ್ಕೆ ಏರ್ಪಾಡು ಮಾಡಿದ್ದೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಕಾಲೇಜುಗಳಲ್ಲಿ ಅವರಿಗೂ ಫಿಸಿಕಲ್ ಎಜುಕೇಷನ್ ಫೆಸಿಲಿಟೀಸ್ ಇದೆ.

ಶ್ರೀ ಎಸ್. ಪಿ. ರಾಜಣ್ಣ.—ಡೈರೆಕ್ಟರ್ ಪೋಸ್ಟು ಇಲ್ಲವೆಂದು ಹೇಳಿದ್ದಾರೆ. ಮೊದಲು ಇತ್ತು. ಈಗ ಅಸಿಸ್ಟೆಂಟ್ ಡೈರೆಕ್ಟರ್ ಪೋಸ್ಟು ಹೋದಮೇಲೆ, ಅಲ್ಲಿ ಸೂಪರ್‌ವೈಸರ್ ಇಲ್ಲದೆ, ಸ್ಪೋರ್ಟ್ಸ್ ಆಕ್ಟಿವಿಟೀಸ್ ನಿಂತುಹೋಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

3-00 P.M.

ಶ್ರೀ ಎಸ್. ಪಿ. ರಾಜಣ್ಣ.—ಕಾಲೇಜು ಶಿಕ್ಷಣ ಇಲಾಖೆಯಲ್ಲಿರುವ ದೈಹಿಕ ಶಿಕ್ಷಣದ ಸಂಬಂಧದಲ್ಲಿ ಮೊದಲಿಗಿಂತ ಖರ್ಚು ಜಾಸ್ತಿಯಾಗುತ್ತಿದೆ. ಆದರೆ ಕೆಲಸ ಮೊದಲನಂತೆ ನಡೆಯುತ್ತಿಲ್ಲ. ಅಲ್ಲಿ ಈಗ ಕಾಲೇಜು ಹುಡುಗರಿಗೆ ಸಂಬಂಧಪಟ್ಟಹಾಗೆ ಏನೇನು ಆಕ್ಟಿವಿಟೀಸ್ ನಡೆಯುತ್ತಿದೆ ಅವು ಸ್ಟೇಟ್ ಅಸೋಸಿಯೇಷನ್ ಮೂಲಕ ನಡೆಯುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಸೋಸಿಯೇಷನ್‌ನವರಿಂದ ಒಳ್ಳೆಯ ಕೆಲಸ ಆಗುತ್ತಿದೆ. ಅದಕ್ಕೆ ನಾವು ಆಭಾರಿಯಾಗಿದ್ದೇವೆ. ಅಲ್ಲಿ ನಡೆಯತಕ್ಕ ಕೆಲಸಗಳು ಸುಧಾರಣೆಯಾಗಬೇಕೆಂಬುದನ್ನು ನಾನು ಒಪ್ಪುತ್ತೇನೆ. ದೈಹಿಕ ಶಿಕ್ಷಣಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ ಅಲ್ಲಿ ನಡೆಯತಕ್ಕ ಕೆಲಸಗಳನ್ನು ಉತ್ತಮಪಡಿಸುವುದಕ್ಕೆ ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಪಿ. ರಾಜಣ್ಣ.—ಸ್ಪೋರ್ಟ್ಸ್‌ಗ್ರೌಂಡ್ ಸರಿಯಾಗಿ ಮೇಂಟೇನ್ ಮಾಡುತ್ತಿಲ್ಲ. ಸರಿಯಾದ ಸೂಪರ್‌ವಿಜನ್ ಇಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇಷ್ಟೊತ್ತು ಅನೇಕ ಮಾನ್ಯ ಸದಸ್ಯರುಗಳಿಗೆ ಗೊತ್ತಿರಬಹುದು. ಈಗಿನ ಶಾಲಾಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಓದತಕ್ಕ ಚಟುವಟಿಕೆಗಳಿಗಿಂತ ದೈಹಿಕಶಿಕ್ಷಣ ಆಟಪಾಟಗಳು ಇವುಗಳ ಕಡೆ ಹೆಚ್ಚು ಮಗ್ನರಾಗಿ ಅದರಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿದ್ದಾರೆ. ವಿದ್ಯಾರ್ಥಿಗಳು ದೈಹಿಕ ಶಿಕ್ಷಣದಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಿ ಅವರು ಅದರಲ್ಲಿ ಮುಂದುವರಿಯುವುದಕ್ಕೆ ಸಾಕಷ್ಟು ಅವಕಾಶವನ್ನು ಕಲ್ಪಿಸಲಾಗಿದೆ.

ಶ್ರೀ ಎಸ್. ಪಿ. ರಾಜಣ್ಣ.—ಅದರಿಂದ ಉಪಯೋಗ ಸರಿಯಾಗಿ ಆಗದೇ ಇದ್ದರೂ ಕೂಡ ಖರ್ಚು ಮಾತ್ರ ಮೊದಲಿಗಿಂತ ಡಬಲ್ ಖರ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರುಬಸಯ್ಯ ಸೋಗಿ.—ಖರ್ಚು ಆಗುತ್ತದೆ. ಅದಕ್ಕೆ ತಕ್ಕಹಾಗೆ ಅನುಕೂಲತೆಗಳೂ ಆಗುತ್ತವೆ.

ಶ್ರೀ ಎಸ್. ಪಿ. ರಾಜಣ್ಣ.—ಈಗ ಸರ್ಕಾರದವರು ದೈಹಿಕ ಶಿಕ್ಷಣಕ್ಕಾಗಿ ಎಷ್ಟೇ ಹಣವನ್ನು ಖರ್ಚು ಮಾಡಿದರೂಕೂಡ ಸರಿಯಾದ ಸೂಪರ್‌ವಿಷನ್ ಇಲ್ಲದೇ ಇರುವುದರಿಂದ ಹುಡುಗರಿಗೆ ಸರಿಯಾದ ಆಟಪಾಟಗಳು ನಡೆಯುತ್ತಾಇಲ್ಲ. ಆದುದರಿಂದ ಅವರಲ್ಲಿ ಅನ್‌ರೆಸ್ಟ್ ಹೆಚ್ಚಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರುಬಸಯ್ಯ ಸೋಗಿ.—ವಿದ್ಯಾರ್ಥಿಗಳಲ್ಲಿ ಕ್ಷೋಭೆ ಉಂಟಾಗುವುದಕ್ಕೆ ಅದು ಒಂದೇ ಕಾರಣವಲ್ಲ. ಅದಕ್ಕೆ ಅನೇಕ ಕಾರಣಗಳು ಇವೆ. ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜುಗಳಲ್ಲಿ ಆಟಪಾಟಗಳಿಗೆ, ದೈಹಿಕ ಶಿಕ್ಷಣಕ್ಕೆ ಏನು ಅನುಕೂಲತೆಗಳನ್ನು ಒದಗಿಸಬೇಕೋ ಅದನ್ನು ಒದಗಿಸುವುದು ಅವಶ್ಯ. ಆದ್ದರಿಂದ ಅದನ್ನು ಒದಗಿಸಲಾಗಿದೆ.

ಶ್ರೀ ಎಸ್. ಪಿ. ರಾಜಣ್ಣ.—ಕಾಲೇಜು ಶಿಕ್ಷಣ ಇಲಾಖೆಯಲ್ಲಿ ದೈಹಿಕ ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಒಂದು ಡೈರೆಕ್ಟರ್ ಪೋಸ್ಟ್ ಎರಡು ಅಸಿಸ್ಟೆಂಟ್ ಡೈರೆಕ್ಟರುಗಳ ಪೋಸ್ಟ್ ಅನ್ನು ಕ್ರಿಯೇಟ್ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರುಬಸಯ್ಯ ಸೋಗಿ.—ಡೈರೆಕ್ಟರ್ ಮತ್ತು ಅಸಿಸ್ಟೆಂಟ್ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿದರೆ ವಿದ್ಯಾರ್ಥಿಗಳಲ್ಲಿರತಕ್ಕ ಅನ್‌ರೆಸ್ಟ್ ಹೋಗುತ್ತದೆ ಎನ್ನುವ ನಂಬಿಕೆಯನ್ನು ಮಾನ್ಯ ಸದಸ್ಯರು ಹೊಂದಿದ್ದರೆ ಅದನ್ನು ನಾನು ಒಪ್ಪುವುದಕ್ಕೆ ಸಿದ್ಧವಿಲ್ಲ.

Housing Problem of Teachers

172. Sri KESHAVA RAO NITTURKAR (Teachers' Constituency).

Will the Minister for Education be pleased to state:—

(*a*) whether there is any effective solution under the consideration of Government for solving housing problem of Teachers in Rural areas ;

(*b*) if so, the financial implications thereof ?

Sri N. M. KOTRABASAIAH SOGI (Deputy Minister for Education).—

(*a*) No.

(*b*) Does not arise.

Sri KESHAVRAO NITTURKAR.—Is it not the duty of the Government to provide ordinary normal shelter for teachers required to serve in rural areas if they are to work satisfactorily ?

†Sri N. M. KOTRABASIAH SOGI.— I fully agree with the hon. Member. But the pity is that we have not yet been able to provide sufficient buildings for schools in the rural areas.

Sri KESHAVRAO NITTURKAR.—Is the Government aware as there are no proper shelters many teachers are put to great inconveniences and thereby the education of students has suffered ?

Sri N. M. KOTRABASAIAH SOGI.—I do not fully agree with the hon. Member. For all Government servants there is the problem of accommodation. But education has not suffered due to non-availability of accommodation to teachers in their working places, and it has not inconvenienced the teachers to any extent. But I quite sympathise with the hon. Member who is so much interested in providing shelters to the teachers.

ಶ್ರೀ ಎಸ್. ಪಿ. ರಾಜಣ್ಣ.—ಉಪಾಧ್ಯಾಯರುಗಳು ಶಾಲೆಗಳು ಇರುವಲ್ಲಿಯೇ ವಾಸ ಮಾಡಬೇಕೆಂದು ಸರ್ಕಾರದ ಒಂದು ಆರ್ಡರ್ ಸಹ ಇದೆ. ಈ ರೀತಿ ಇದ್ದರೂ ಕೂಡ ಕೆಲವು ಉಪಾಧ್ಯಾಯರುಗಳು ಸೈಕಲ್‌ಗಳಲ್ಲಿ ಬಸ್‌ಗಳಲ್ಲಿ 10-12 ಮೈಲಿಗಳಿಂದ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಶಾಲೆಗಳು ಇರುವಲ್ಲಿಯೇ ಉಪಾಧ್ಯಾಯರು ಇರಬೇಕೆಂದು ಸರ್ಕಾರದ ಆಜ್ಞೆ ಇದೆ. ಅನಾನುಕೂಲತೆ ಇರುವವರು ಬೇರೆ ಊರುಗಳಿಂದ ಬರುತ್ತಿದ್ದಾರೆ. ಅದನ್ನು ತಡೆಗಟ್ಟುವುದಕ್ಕೆ ಕ್ರಮ ಕೈಕೊಳ್ಳುತ್ತೇವೆ. ಉಪಾಧ್ಯಾಯರುಗಳು ಬೇರೆ ಊರುಗಳಿಂದ ಶಾಲೆಗಳಿಗೆ ಬಂದು ಪಾಠ ಮಾಡುತ್ತಿರುವುದು ವಸತಿ ಸೌಕರ್ಯ ಇಲ್ಲದೆ ಇರುವ ಒಂದು ಕಾರಣದಿಂದಲೇ ಅಲ್ಲ, ಬೇರೆ ಕಾರಣಗಳು ಇರಬಹುದು. ಎಲ್ಲಾ ಉಪಾಧ್ಯಾಯರುಗಳಿಗೂ ಸಹ ಒಂದೇ ಸಲ ವಸತಿ ಸೌಕರ್ಯವನ್ನು ಒದಗಿಸಿಕೊಡುವಷ್ಟು ಸರ್ಕಾರ ಶ್ರೀಮಂತವಾಗಿಲ್ಲ. ಈಗ ಒಂದೂವರೆ ಲಕ್ಷದಷ್ಟು ಉಪಾಧ್ಯಾಯರು ಇದ್ದಾರೆ. ಎಲ್ಲರಿಗೂ ಒದಗಿಸಿಕೊಡುವುದು ಎಂದರೆ ಸರ್ಕಾರಕ್ಕೆ ಒಂದು ದೊಡ್ಡ ಹೊರೆಯಾಗುತ್ತದೆ. ಇದಕ್ಕೂ ಮೊದಲು ಎಲ್ಲಾ ಕಡೆಗಳಲ್ಲಿಯೂ ಶಾಲಾ ಕಟ್ಟಡಗಳನ್ನು ಮೊದಲು ಕಟ್ಟಿಸಿಕೊಡುವುದು ಸರ್ಕಾರದ ಪ್ರಾಮುಖ್ಯವಾದ ವಿಷಯವಾಗಿದೆ.

ಶ್ರೀ ವೈ. ಎಸ್. ಪಾಟೀಲ್.—ಕೆಲವು ಹಳ್ಳಿ ಶಾಲೆಗಳಲ್ಲಿ ಉಪಾಧ್ಯಾಯರುಗಳು ಶಾಲೆಗಳಲ್ಲಿಯೇ ವಾಸ ಮಾಡುತ್ತಿರುವುದು, ಮತ್ತು ಸಂಸಾರ ಹೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಬಸವರಾಜ ಕಟ್ಟೀಮನಿ.—ಪೋಲೀಸ್ ಇಲಾಖೆಯ ನೌಕರರಿಗೆ ಮತ್ತು ಲೋಕೋಪಯೋಗಿ ಇಲಾಖೆ ನೌಕರರಿಗೆ ವಸತಿ ಸೌಕರ್ಯ ಒದಗಿಸಿಕೊಟ್ಟಿರುವಾಗ ಇವರಿಗೇಕೆ ಒದಗಿಸಿಕೊಡುತ್ತಿಲ್ಲ ? ಇವರೇನು ಸವತಿ ಮಕ್ಕಳೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಸಾಹಿತಿಗಳಾಗಿದ್ದಾರೆ. ಅವರಿಗೂ ಗೊತ್ತಿರಬಹುದು. ಪೋಲೀಸ್ ಇಲಾಖೆಯ ನೌಕರರಾಗಲೀ, ಲೋಕೋಪಯೋಗಿ ಇಲಾಖೆಯ ನೌಕರರಾಗಲೀ, ಒಂದು ತಾಲ್ಲೂಕ್‌ಗೆ 10–20 ಮಂದಿ ಇರಬಹುದು. ಆದರೆ ಉಪಾಧ್ಯಾಯರುಗಳು ಒಂದು ತಾಲ್ಲೂಕ್‌ಗೆ ಸಾವಿರಗಟ್ಟಲೆ ಇರುತ್ತಾರೆ. ಪ್ರತಿಯೊಂದು ಹಳ್ಳಿಗೂ 3 ರಿಂದ 5 ಜನದವರೆಗೆ ಉಪಾಧ್ಯಾಯರುಗಳು ಇರುತ್ತಾರೆ. ಎಲ್ಲಾ ಉಪಾಧ್ಯಾಯರುಗಳಿಗೂ ವಸತಿ ಸೌಕರ್ಯ ಒದಗಿಸಿಕೊಡುವುದಕ್ಕಿಂತ ಮುಖ್ಯವಾಗಿ ಶಾಲಾ ಕಟ್ಟಡಗಳನ್ನು ಮೊದಲು ಕಟ್ಟಿಸಿಕೊಟ್ಟರೆ ಒಳ್ಳೆಯ ಸಾರ್ಥಕವಾಗುತ್ತದೆಂದು ಕಾಣುತ್ತದೆ.

Sri KESHAVARAO NITTURKAR.—Will the Government make it an obligatory duty upon the local authorities to provide at least tolerable hutments to teachers serving in rural areas ?

Sri N. M. KOTRABASAIAH SOGI.—We have been requesting the local bodies and they are also trying to provide some accommodation or residential facilities for teachers on rental basis and in this regard I may tell the hon. Member that we have been trying to provide accommodation for lady teachers and we have constructed quarters also in some rural areas for providing accommodation to lady teachers.

ಶ್ರೀ ಕೆ. ಎಸ್. ಚನ್ನಪ್ಪ.—ಎಲ್ಲಾ ಉಪಾಧ್ಯಾಯರುಗಳಿಗೂ ವಸತಿ ಸೌಕರ್ಯ ಕಟ್ಟಿಸಿಕೊಡುವ ಬಗ್ಗೆ ಏನಾದರೂ ಎಸ್ಟಿಮೇಟ್ ತಯಾರು ಮಾಡಿದ್ದೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂತಹ ಅಂದಾಜೇನೂ ಮಾಡಿಲ್ಲ. ಉಪಾಧ್ಯಾಯರು ಮನೆಕಟ್ಟಿಸಿಕೊಳ್ಳುವುದಕ್ಕಾಗಿ ಹೌಸ್ ಬಿಲ್ಡಿಂಗ್ ಲೋನ್ ಕೊಡುತ್ತಿದ್ದೇವೆ. ಹೌಸ್ ಬಿಲ್ಡಿಂಗ್ ಸೊಸೈಟಿಯಿಂದ ಸಾಲ ಕೊಡಲಾಗುತ್ತಿದೆ. ಇದರ ಜೊತೆಗೆ ತಾಲ್ಲೂಕ್ ಬೋರ್ಡಿನವರು ಮತ್ತು ಮುನಿಸಿಪಾಲಿಟಿಯವರು ಉಪಾಧ್ಯಾಯರುಗಳಿಗೆ ವಸತಿ ಸೌಕರ್ಯ ಒದಗಿಸಿಕೊಡುವುದಕ್ಕೆ ಬೇಕಾದ ಅನುಕೂಲಗಳನ್ನು ಮಾಡಿಕೊಡಬೇಕೆಂದು ನಿಯಮ ಇದೆ.

ಶ್ರೀ ಕೆ. ಎಸ್. ಚನ್ನಪ್ಪ.—ಸ್ಕೂಲ್ ಕಟ್ಟಡಗಳನ್ನು ಕಟ್ಟಿಸುವಾಗ ಉಪಾಧ್ಯಾಯರುಗಳ ವಾಸಕ್ಕೆ ಮನೆಗಳನ್ನು ಸಹ ಕಟ್ಟಿಸಬೇಕೆಂದು ನಿಯಮ ಇದೆ ಅಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಹೌದು.

ಶ್ರೀ ಎಸ್. ಪಿ. ರಾಜಣ್ಣ.—ಮೊದಲು ವಸತಿ ಸೌಕರ್ಯವನ್ನು ಉಚಿತವಾಗಿ ಒದಗಿಸಲಾಗುತ್ತಿತ್ತು. ಈಗ ಉಪಾಧ್ಯಾಯರುಗಳಿಂದ 5 ರಿಂದ 1 ಪರ್ಸೆಂಟ್‌ವರೆಗೆ ಬಾಡಿಗೆ ವಸೂಲಿ ಅದರಿಂದ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಯಾರಿಗೂ ಉಚಿತವಾಗಿ ವಸತಿ ಸೌಕರ್ಯವನ್ನು ಒದಗಿಸಿಕೊಡುವ ಪದ್ಧತಿ ಇಲ್ಲ. ಸರ್ಟನ್ ಪರ್ಸೆಂಟೇಜನ್ನು ಬಾಡಿಗೆ ರೂಪದಲ್ಲಿ ತೆಗೆದುಕೊಳ್ಳಬೇಕೆಂಬ ನಿಯಮ ಇದೆ.

ಶ್ರೀ ಎಸ್. ಪಿ. ರಾಜಣ್ಣ.—ಸೆಂಟ್ರಲ್ ಸ್ಕೀಮ್ ಪ್ರಕಾರ ಉಚಿತವಾಗಿ ಮನೆಗಳನ್ನು ಕೊಡಬೇಕೆಂದು ಕಟ್ಟಿಸಲಾಗಿದೆ. ಈ ವಿಚಾರ ಗೊತ್ತಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಉಚಿತವಾಗಿ ಕೊಡಬೇಕೆಂದು ಇಲ್ಲ. ಹತ್ತನೇ ಒಂದು ಭಾಗದ ರೆಂಟ್ ಮೇಲೆ ಕೊಡಬೇಕೆಂದು ನಿಯಮ ಇದೆ.

Sri KESHAVRAO NITTURKAR.—May I know why the Government should not advance loans to the Local Authorities to enable them to construct small quarters to the Teachers ?

Sri N. M. KOTRABASAIAH SOGI.—It is for the Local Bodies to provide such facilities. We are not coming into the picture. We have requested them to provide such facilities.

Sri KESHAVA RAO NITTURKAR.—House rent allowance is permitted in certain areas. But in rural areas, the house rent allowance is not being given to teachers and all other Government officials. Is it not discriminatory that no house rent allowance is allowed to these people in the rural areas ?

Sri N. M. KOTRABASAIAH SOGI.—The House rent allowance is being provided to every Government servant in the rural areas.

Issue of Arrack in bulk quantity to vendors

193. Sri K. T. SHAMAIAH GOWDA (Local Authorities' Constituency).—

Will the Minister for Finance, Planning and Youth Welfare be pleased to state :—

(*a*) the rules prescribed for issue of Arrack to the Vendors from the Bonded depot ;

(SRI K. T. SHAMAIAH GOWDA)

(*b*) whether it is not a fact that the Excise Department in contravention of the rules is issuing Arrack by barrels to the vendors direct from the bonded depot ;

(*c*) whether it has come to the notice of the Government that in issuing Arrack by bulk in barrels, the Government is sustaining heavy loss and also the same is leading to the sale of sub-standard quality of Arrack which is harmful to the drinking persons ?

Sri RAMAKRISHNA HEGDE (Minister for Finance, Planning and Youth Welfare).—

(*a*) The Mysore Excise (Arrack Vend Special Conditions of Licences) Rules, 1967.

(*b*) Rules do not prohibit issue of arrack in barrels.

(*c*) No.

Sri K. T. SHAMAIAH GOWDA.—Under Mysore Excise Rules, 1967 it is stated like this :

> "Every licensee licensed to vend arrack by retail sale shall sell only arrack of prescribed strength."

In Excise Manual Volume I, Section II, it is stated like this :

> "(4) Persons who purchuse group of shops may, with the special permission of the Excise Commissioner and under license by competent authority open a depot......"

ಇದರಲ್ಲಿ ಪ್ರವೇಟು ಡಿಪೋಗಳಿಗೆ ಕೊಡಲಿಕ್ಕೆ ಏನಾದರು ನಿಯಮ ಇದೆಯೇ ? ಲೈಸನ್ಸ್ ಇಲ್ಲದೆ 8–10 ಬ್ಯಾರೆಲ್‌ಗಳನ್ನು ಕೊಡುತ್ತಿರುವುದು ಗಮನಕ್ಕೆ ಬಂದಿದೆಯೇ ?

Sri RAMAKRISHNA HEGDE.—If they want liquor in large quantity, they have to take licence. The hon. Member is asking whether it is permissible under the rules to supply arrack in barrels. That is what I understood from what the Hon'ble Member is saying. Such supplies in barrels are permitted. We are allowing it to be sold on cash payment. It is perfectly permissible under the rules.

ಶ್ರೀ ಕೆ. ಟಿ. ಶಾಮಯ್ಯ ಗೌಡ.—ಹಿಂದೆ ಈ ರೀತಿ ಇರಲಿಲ್ಲ. ಈ ವರ್ಷದಿಂದ ಮಾತ್ರ ಬ್ಯಾರಲ್‌ಗಳಲ್ಲಿ ಕೊಡುತ್ತಿದ್ದಾರೆ. ಒಬ್ಬರಿಗೆ ಸುಮಾರು 8-10 ಬ್ಯಾರಲ್ಸ್‌ಗಳನ್ನು ಹಾಗೇ ಕೊಡುತ್ತಿದ್ದಾರೆ. ಇದರಲ್ಲಿ ಪ್ರಿಸ್‌ಕ್ರೈಬ್ಡ್ ಸ್ಟ್ರೆಂಗ್ತ್ ಎಂದರೆ ಎಷ್ಟು ? ಇದಕ್ಕೇನಾದರೂ ನಿಯಮ ಇದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಬ್ಯಾರಲ್ಗಳಿಗೂ ಸ್ಟ್ರೆಂಗ್ತ್‌ಗೂ ಸಂಬಂಧ ಇಲ್ಲ. ಇದರಲ್ಲಿ ಅರ್ರ್ಯಾಕಿನ ಸ್ಟ್ರೆಂಗ್ತ್ ಸುಮಾರು 35 ಇರುತ್ತೆ, 30 ಇರುತ್ತೆ. ಇದನ್ನೆಲ್ಲಾ ನೋಡಿ ಗವರ್ನಮೆಂಟಿನವರು ಬ್ಯಾರಲ್ಗಳಲ್ಲಿ ಕೊಡುವಾಗ ಬ್ಯಾರಲ್ಸ್‌ಗಳ ದುಡ್ಡನ್ನು ವರ್ತಕರಿಂದ ಕಟ್ಟಿಸಿಕೊಂಡು ಕೊಡುತ್ತಿದ್ದರು. ಕೆಲವು ವೇಳೆ ಬ್ಯಾರಲ್ಸ್‌ಗಳ ಸಂಖ್ಯೆ ಕಡಿಮೆಯಾದಾಗ ಖಾಸಗಿಯವರಿಂದಲೇ ಬ್ಯಾರಲ್‌ಗಳನ್ನು ತರಬೇಕೆಂದು ಹೇಳಿ ಅವರಿಗೆ ತುಂಬಿ ಕೊಡುತ್ತಿದ್ದಾರೆ. ಇದರ ಮೇಲೆ ಲಿಕ್ಕರ್ ಪಡೆಯಲು ಲೈಸನ್ಸ್ ಪಡೆದೇ ತೆಗೆದುಕೊಳ್ಳುತ್ತಾರೆ ಎಂದು ನನ್ನ ಅಭಿಪ್ರಾಯ.

ಶ್ರೀ ಎಂ. ವಿ. ವೆಂಕಟಪ್ಪ.—ಸಾರಾಯಿಯನ್ನು ಕಂಟ್ರಾಕ್ಟರು ತೆಗೆದುಕೊಂಡು ಮಾರುವಾಗ ಅದಕ್ಕೆ ಇನ್ನೇನೋ ಮಿಕ್ಸ್ ಮಾಡಿ ಮಾರುತ್ತಾರೆಂದು ಹೇಳುತ್ತಾರೆ. ಇದನ್ನೆಲ್ಲಾ ಸರಿಯಾಗಿ ಚೆಕ್ ಮಾಡಿ ನೋಡಲು ಏರ್ಪಾಡು ಮಾಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಇದಕ್ಕಾಗಿ ಸಿಬ್ಬಂದಿ ಇದೆ. ಏನಾದರೂ ದೂರು ಬಂದರೆ ಕೂಡಲೇ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಕೆ. ಟಿ. ಶಾಮಯ್ಯ ಗೌಡ.—ರೀಟೇಲ್ ವೆಂಡಾರಗಳಿಗೆ ಲೈಸನ್ಸ್ ತೆಗೆದುಕೊಂಡು ಪ್ರತಿಯೊಂದು ಷಾಪಿನಲ್ಲೂ ಮಾರಬೇಕೆಂದು ಇದೆ. ಈ ಸಾರಿಯಿಂದ ಬ್ಯಾರಲ್ಸ್‌ಗಳಲ್ಲಿ ಸಪ್ಲೈ ಮಾಡುತ್ತಿದ್ದಾರೆ. ಪ್ರತಿ ವರ್ಷ ಕೊಡುತ್ತಿರಲಿಲ್ಲ. ನಿಮ್ಮ ರೂಲ್ಸ್‌ನಲ್ಲೇ ಇದು ಇದೆ: "The excise vendor under licence by a competent authority can open a depot". ಇಲ್ಲ 8-10 ಬಾರಲ್ಸ್‌ಗಳಲ್ಲಿ ಕೊಡುತ್ತಾರೆ ಎಂದರೆ ಇದು ರೀಟೇಲ್ ಆಗಿಯೋ ಇಲ್ಲವೇ ಹೋಲ್ ಸೇಲ್ ಆಗಿ ಕೊಡುತ್ತಿದ್ದಾರೋ ?

ಶ್ರೀ ರಾಮಕೃಷ್ಣ ಹೆಗಡೆ.—ಪ್ರತಿಯೊಬ್ಬ ಕಾಂಟ್ರಾಕ್ಟರೂ ಒಂದು ತಿಂಗಳಿಗೆ ತಮಗೆ ಇಷ್ಟು ಲಿಕ್ಕರು ಹಾಗೂ ಸಾರಾಯಿ ಬೇಕೆಂದು ಕೇಳುತ್ತಾರೆ ಮತ್ತು ಅದು ಭದ್ರವಾದ ಬ್ಯಾರಲ್‌ಗಳಲ್ಲಿ ಮಾರಬೇಕೆಂದು ನಮಗೆ ಇಷ್ಟು ಬ್ಯಾರಲ್ಸ್‌ಗಳು ಸಪ್ಲೈ ಮಾಡಬೇಕೆಂದು ಕೇಳುತ್ತಾರೆ. ಇದರಂತೆ ಒಂದು ಸಲವೋ ಇಲ್ಲವೇ ಎರಡು ಸಲವೋ ಸಪ್ಲೈ ಮಾಡುತ್ತಾರೆ. According to the availability of the liquor, the quantity will be determined to be upplied to each contractor.

ಶ್ರೀ ಕೆ. ಎಸ್. ಚೆನ್ನಪ್ಪ.—ಅರೇಕ್ ಕಂಟ್ರಾಕ್ಟರ್ಸ್ ಏನು ಇದ್ದಾರೋ ಅವರವರಲ್ಲೇ ಹೈಪೋಟಿ ಇರುವುದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅವರಲ್ಲಿರುವ ಹೈಪೋಟಿಯನ್ನು ತಡೆಗಟ್ಟುವುದಕ್ಕೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಟಿ. ಶಾಮಯ್ಯ ಗೌಡ.—ಸ್ವಾಮಿ, ಒಂದೊಂದು ಷಾಪಿಗೂ ಒಂದೊಂದು ದಿವಸ ಅರ್ರ್ಯಾಕ್ ಕೊಡುತ್ತಾ ಇದ್ದೀರಿ. ಒಂದೊಂದು ಷಾಪಿಗೆ 40 ಲೀಟರ್‌ಮೇಲೆ ಕೊಡಕೂಡದು ಎಂದು ಮಾಡಿದ್ದೀರಿ. ಪ್ರೈವೇಟ್ ಷಾಪ್‌ನವರಿಗೂ ಕೊಡದೆ ಅವರನ್ನು ಹಿಂದಕ್ಕೆ ಕಳಿಸಿದ್ದುದು ರೆಫ್ಯೂಸ್ ಮಾಡಿದ್ದು ನಿಜವೇ ?

ಶ್ರೀ ರಾಮಕೃಷ್ಣ ಹೆಗಡೆ.—1968 ನೇ ಇಸವಿ ಜನವರಿ, ಫೆಬ್ರವರಿ, ಮಾರ್ಚಿ ತಿಂಗಳಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸರಿಯಾದ ಹೊತ್ತಿಗೆ ಅರ್ರ್ಯಾಕ್ ಸಪ್ಲೈ ಆಗದೇ ಇದ್ದುದರಿಂದ ಸಾಕಷ್ಟು ಪ್ರಮಾಣದಲ್ಲಿ ಅವರಿಗೆ ಕೊಡಲಿಲ್ಲ ಮತ್ತು ಇದರಿಂದಾಗಿ ನಮಗೂ ಲಾಸ್ ಆಗುತ್ತಾ ಇತ್ತು. ಅನಂತರ ಕಂಟ್ರಾಕ್ಟರು ಲೀಗಲ್ ನೋಟೀಸ್ ಕೊಟ್ಟರು. ಸಾಮಾನ್ಯವಾಗಿ ಗ್ರೂಪ್ ಆಫ್ ಷಾಪ್ಸ್ ಇದ್ದರೆ ಅವರ ರಿಕ್ವೈರ್‌ಮೆಂಟ್ ನೋಡಿಕೊಂಡು ನಮ್ಮಲ್ಲಿ ಬಲ್ಕ್ ರಿಕ್ವೈರ್‌ಮೆಂಟ್ ಇದ್ದರೆ ಬ್ಯಾರೆಲ್ ಮುಖಾಂತರ ಅವರಿಗೆ ಕೊಟ್ಟು ಅನಂತರ ಸಣ್ಣ ಸಣ್ಣ ಷಾಪುಗಳಿಗೆ ಅವರ ರಿಕ್ವೈರ್‌ಮೆಂಟ್ ನೋಡಿಕೊಂಡು ಅವರಿಗೂ ಕೊಡುತ್ತಾ ಇದ್ದೆವು. ಅವರಿಗೂ ಕೂಡ ಗೌರ್ನಮೆಂಟ್ ಬಾಂಡೆಡ್ ಡಿಪೋವಿನಿಂದಲೇ ಕೊಡುತ್ತಾ ಇತ್ತು.

ಶ್ರೀ ಜಿ. ವಿ. ಆಂಜನಪ್ಪ.—ಸ್ವಾಮಿ, ಇಲ್ಲಿಯವರೆಗೂ ಸಾರಾಯಿಯನ್ನು ಅಳತೆ ಮಾಡಿ ಕೊಡುವ ಪದ್ಧತಿ ಇದ್ದುದನ್ನು ಈ ವರ್ಷ ತಪ್ಪಿಸಿ ಬ್ಯಾರೆಲ್ ಮುಖಾಂತರ ಕೊಡುತ್ತಾ ಇರುವುದಕ್ಕೆ ಕಾರಣ ಏನು ? ಮತ್ತು ಅಳತೆ ಮಾಡಿಕೊಡದೆ ಇರುವ ಉದ್ದೇಶ ಏನು ?

ಶ್ರೀ ರಾಮಕೃಷ್ಣ ಹೆಗಡೆ.—ಈಗಲೂ ಸಹ ಅಳತೆ ಮಾಡಿಕೊಡುತ್ತೇವೆ. ಬ್ಯಾರೆಲ್‌ನಲ್ಲಿ ಎಷ್ಟು ಲೀಟರ್ ಇರುತ್ತದೆ ಆ ಅಳತೆಯನ್ನೇ ಅವರಿಗೆ ಕೊಡುತ್ತೇವೆ. ಅವರ ರಿಕ್ವೈರ್‌ಮೆಂಟ್ ಹೆಚ್ಚಿಗೆ ಇದ್ದರೆ ಬ್ಯಾರೆಲ್‌ನಿಂದ ಹೆಚ್ಚಿಗೆ ಲೀಟರ್ಸ್‌ನ್ನು ತೆಗೆದುಕೊಂಡು ಅದಕ್ಕೆ ಹಾಕುತ್ತೇವೆ.

ಶ್ರೀ ಕೆ. ಟಿ. ಶಾಮಯ್ಯ ಗೌಡ.—ಸ್ವಾಮಿ, ಯಾವ ಕಾಲದಲ್ಲೂ ಬಾಂಡೆಡ್ ಡಿಪೋವಿನಿಂದ ಬ್ಯಾರೆಲ್‌ಗಳಲ್ಲಿ ಕೊಡಬೇಕು ಎನ್ನುವ ಕಾನೂನು ಇರಲಿಲ್ಲ. ಈ ವರ್ಷ ಬ್ಯಾರೆಲ್‌ನಲ್ಲಿ ಕೊಡುವ ನೀತಿ ಅನುಸರಿಸಿದ್ದೀರಿ ಮತ್ತು ಪ್ರೈವೇಟ್ ಬಾಂಡೆಡ್ ಷಾಪ್‌ನವರು ಲೈಸನ್ಸ್ ಕೂಡ ತೆಗೆದುಕೊಳ್ಳಬೇಕಾಗಿದೆ. ಅದೂ ಅಲ್ಲದೆ ತಾಲ್ಲೂಕುವಾರು ಹರಾಜು ಇಟ್ಟಿದ್ದೀರಿ. ಮತ್ತು ಪ್ರತಿಯೊಂದು ಷಾಪಿಗೂ ಕೂಡ ಕೊಡಬೇಕಾದಷ್ಟನ್ನು ಜೂನ್ ತಿಂಗಳಿನಲ್ಲಿ ಕೊಟ್ಟಿಲ್ಲ. ಸರ್ಕಾರಕ್ಕೆ ಅದರಿಂದ ಏನು ನಷ್ಟವಾಗುತ್ತಿತ್ತು ? For the question "whether it is not a fact that the

(ಶ್ರೀ ಕೆ. ಟಿ. ಶಾಮಯ್ಯ ಗೌಡ)

Excise Department in contravention of the rules is issuing Arrack by barrels to the vendors direct from the bonded depot'' you have stated 'No . But rules do not provide for issue of arrack in barrels. The Government is sustaining heavy loss on account of the sub-standard arrack supplied ಇವನ್ನು ರೂಲ್ ಪ್ರಕಾರ ಪ್ರೊಹಿಬಿಟ್ ಮಾಡಿಲ್ಲವೇ? ಹಾಗೆಂದಮೇಲೆ ಈ ದಿವಸ ಬ್ಯಾರೆಲ್‌ಗಳ ಮುಖಾಂತರ ಎಲ್ಲರಿಗೂ ಕೊಡುವುದರ ಅರ್ಥವೇನಿದೆ? To my question, whether there was a strong objection from the public and the Excise contractors for amending the Rules, you have stated 'No'. ಬ್ಯಾರೆಲ್ ಮುಖಾಂತರ ಕೊಡುತ್ತಾ ಇರುವುದರಿಂದ 30 ಪರ್ಸೆಂಟು ನೀರು ಹಾಕಿ ಪೌಡರ್ ಮಿಕ್ಸ್ ಮಾಡಿ ಮಾರಾಟ ಮಾಡುವುದರಿಂದ 10 ಪರ್ಸೆಂಟು ಕಡಿಮೆ ಆಗುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ರಾಮಕೃಷ್ಣ ಹೆಗಡೆ.—ಟಾಡಿಗೆ ಮಿಕ್ಸ್ ಮಾಡಿ ಮಾರಾಟ ಮಾಡುತ್ತಾರೆಂದು ನಾನು ಕೇಳಿದ್ದೇನೆ. ಇದಕ್ಕೆ ಪೌಡರ್ ಮಿಕ್ಸ್ ಮಾಡಿ ಮಾರಾಟ ಮಾಡುತ್ತಾರೆಂದು ನಾನು ಕೇಳಲಿಲ್ಲ. ಟಾಡಿಗೆ ಮಿಕ್ಸ್ ಮಾಡುವ ಉದ್ದೇಶ ಅದು ಬಹಳ ಸ್ಟ್ರಾಂಗ್ ಎಂದು ಕಾಣುತ್ತದೆ. ಆದರೆ ಮಾನ್ಯ ಸದಸ್ಯರು ಇದರಲ್ಲೂ ಸಬ್‌ಸ್ಟಾಂಡರ್ಡ್ ಬರುತ್ತದೆ, ಪೌಡರ್ ಮಿಕ್ಸ್ ಮಾಡುತ್ತಾರೆ, ಎಂದು ಹೇಳುತ್ತಾರೆ. ಆರೀತಿ ಮಿಕ್ಸ್ ಮಾಡುವುದಾದರೆ ಬ್ಯಾರಲ್‌ನಿಂದಲೇ ಕೊಟ್ಟರೆ ಮಿಕ್ಸ್ ಮಾಡುತ್ತಾರೆ ಎಂದು ಹೇಳುವುದು ಸರಿಯಲ್ಲ ಯಾವ ರೀತಿಯಾಗಿ ಕೊಟ್ಟರೂ ಮಿಕ್ಸ್ ಮಾಡುತ್ತಾರೆ. 1000 ಲೀಟರ್ ಕೊಟ್ಟರೂ ಕೂಡ, ಮಿಕ್ಸ್ ಮಾಡುತ್ತಾರೆ, 50 ಲೀಟರ್ ಕೊಟ್ಟರೂ ಕೂಡ ಮಿಕ್ಸ್ ಮಾಡುತ್ತಾರೆ. ಆದುದರಿಂದ ನಾವು ಕ್ರಮೇಣವಾಗಿ 2-3 ವರ್ಷದೊಳಗೆ ಬಾಟಲ್‌ನಲ್ಲಿ ಸೀಲ್ ಮಾಡಿಕೊಡುವ ಪದ್ಧತಿಯನ್ನು ಅನುಸರಿಸಬೇಕೆಂದು ಮಾಡಿದ್ದೇವೆ. ಒಂದೇ ಸಲ ಇಡೀ ರಾಜ್ಯದ ತುಂಬ ಈ ಪದ್ಧತಿಯನ್ನು ಜಾರಿಗೆ ತರತಕ್ಕದ್ದು ಸಾಧ್ಯವಿಲ್ಲ. ಎಷ್ಟು ಬೇಗ ತರುವುದಕ್ಕೆ ಸಾಧ್ಯವಿದೆ ಅಷ್ಟು ಬೇಗ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಟಿ. ಶಾಮಯ್ಯ ಗೌಡ.—ಹಿಂದೆ ಜಾಡಿಗಳಲ್ಲಿ ಅಳತೆ ಮಾಡಿ ಇಷ್ಟು ಲೀಟರ್ ಎಂದು ಕೊಡುತ್ತಿದ್ದರು. ಈಗ ಬ್ಯಾರಲ್‌ನಲ್ಲಿ ಕೊಡುವುದರಿಂದ ಅದಕ್ಕೆ ನೀರು ಹಾಕಿದರೆ ಒಂದೆರಡು ಯು. ಪಿ. ಏರುಪೇರು ಆದರೂ ಗೊತ್ತಾಗುವುದಿಲ್ಲ. ಒಂದು ಲೀಟರ್ ಬೆಲೆ ನಾಲ್ಕು ರೂಪಾಯಿ ಇರುವುದರಿಂದ 200 ಲೀಟರ್ ಇರುವ ಬ್ಯಾರಲ್‌ಗೆ 15 ಲೀಟರ್ ನೀರು ಹಾಕಿದರೆ ಸರ್ಕಾರಕ್ಕೆ ನಷ್ಟವಾಗುವುದಿಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.—ಬ್ಯಾರಲ್ ಕೊಡುವುದರಿಂದ ನಷ್ಟವಾಗುತ್ತದೆ ಎಂದು ಹೇಳುವುದು ನಮ್ಮ ದೃಷ್ಟಿಗೆ ಬಂದಿಲ್ಲ. ಮೊದಲು ಸಬ್ ಸ್ಟಾಂಡರ್ಡ್ ಎಂದು ಹೇಳಿದರು, ಈಗ ನಷ್ಟವಾಗುತ್ತಿದೆ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ. ಎಸ್. ಚನ್ನಪ್ಪ.—ಶಿವಮೊಗ್ಗದಲ್ಲಿ ಕಂಟ್ರಾಕ್ಟರುಗಳ ಮಧ್ಯೆ ಏನೋ ಜಿದ್ದಾಜಿದ್ದಿನಿಂದ ರಗಳೆ ಬಂದಿರಬಹುದು. ಅವಕ್ಕೆ ಮಾನ್ಯ ಸದಸ್ಯರು ಪ್ರಶ್ನೆ ಕಳಿಸಿದ್ದಾರೆಂದು ಕಾಣುತ್ತದೆ. ಮಾನ್ಯ ಮಂತ್ರಿಗಳು ಇದನ್ನು ಏನಾದರೂ ಸರಿಪಡಿಸುತ್ತಾರೆಯೇ, ಸ್ವಾಮಿ?

ಶ್ರೀ ರಾಮಕೃಷ್ಣ ಹೆಗಡೆ.—ಯಾವ ಜಿದ್ದಾಜಿದ್ದು, ಯಾವ ಗಲಾಟೆ ಎನ್ನುವುದು ನನಗೆ ಗೊತ್ತಿಲ್ಲ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಸಾರಾಯಿ ಸೇವನೆ ಮತ್ತು ಅದರ ಮಿತಿಮೀರಿದ ಮಾರಾಟದಿಂದ ಜನರ ಆರೋಗ್ಯ ಕೆಡುವುದಲ್ಲದೆ ಸಣ್ಣ ಉಳಿತಾಯಕ್ಕೆ ತೊಂದರೆ ಬರುವುದರಿಂದ ಇದರ ಮಾರಾಟ ಆದಷ್ಟೂ ಕಡಮೆ ಇರುವ ಹಾಗೆ ಏರ್ಪಾಡು ಮಾಡುತ್ತಾರೆಯೇ?

ಶ್ರೀ ರಾಮಕೃಷ್ಣ ಹೆಗಡೆ.—ಸಣ್ಣ ಉಳಿತಾಯಕ್ಕೂ ಸಾರಾಯಿಗೂ ಯಾವ ಸಂಬಂಧವಿದೆ ಎನ್ನುವುದು ಗೊತ್ತಿಲ್ಲ. ಗೋಕುಲಾಷ್ಟಮಿಗೂ ಇಮಾಂ ಸಾಹೇಬರಿಗೂ ಸಂಬಂಧವಿದ್ದ ಹಾಗೆ ಇದೆ.

ಶ್ರೀ ಕೆ. ಟಿ. ಶಾಮಯ್ಯ ಗೌಡ.—ಬ್ಯಾರಲ್‌ನಲ್ಲಿ ಕೊಡುವುದರಿಂದ ನಷ್ಟವಿಲ್ಲ ಎಂದು ಹೇಳಿದ್ದಾರೆ. ಹಿಂದೆ ತಹಸೀಲ್ದಾರರು ಇಷ್ಯೂ ಮಾಡುತ್ತಿದ್ದರು, ಶಿರಸ್ತೇದಾರರು ಕೊಡುತ್ತಿದ್ದರು.

ಒಂದೊಂದು ಬಾಂಡೆಡ್ ಡಿಪೋದಲ್ಲಿಯೂ ಒಬ್ಬ ಎಕ್ಸೈಸ್ ಸೂಪರ್‌ವೈಸರ್, ಇಬ್ಬರು ಮೇಸ್ತ್ರಿಗಳು, ಇಬ್ಬರು ಜವಾನರು, ಇಬ್ಬರು ಗುಮಾಸ್ತರು ಇದ್ದಾರೆ. ಈ ಸಿಬ್ಬಂದಿಯನ್ನಾದರೂ ಕಡಮೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಸಿಬ್ಬಂದಿಯನ್ನು ತೆಗೆದುಹಾಕಲಿಕ್ಕೆ ಆಗುವುದಿಲ್ಲ. ಇದರ ಹೊರತಾಗಿ ಅವರಿಗೆ ಬೇರೆ ಕೆಲಸವಿರುತ್ತದೆ. ಎಲ್ಲರಿಗೂ ಬ್ಯಾರಲ್‌ಗಳಲ್ಲಿ ಕೊಡುವ ಅಗತ್ಯ ವಿರುವುದಿಲ್ಲ. ಎಲ್ಲ ಕಡೆಗೂ ಪಾನನಿರೋಧವನ್ನು ತೆಗೆದುಹಾಕಿದ್ದರಿಂದ ಬೇಡಿಕೆ ಹೆಚ್ಚಾಗುತ್ತದೆ. ಒಂದು ತಾಲ್ಲೂಕಿನಲ್ಲಿ ಒಬ್ಬ ಕಂಟ್ರಾಕ್ಟರಿಗೆ ಹೆಚ್ಚು ಡಿಮಾಂಡ್ ಇರುತ್ತದೆ. ಕೆಲವು ಕೇಂದ್ರಗಳಲ್ಲಿ ಹೆಚ್ಚು ಬೇಡಿಕೆ ಇರುತ್ತದೆ, ಕೆಲವು ಕಡೆ ಹೆಚ್ಚಾಗಿ ಇರುವುದಿಲ್ಲ.

Amendment of Rules regarding sale price for Arrack and Toddy

194. Sri K. T. SHAMAIAH GOWDA (Local Authorities' Constituency).—

Will the Minister for Finance, Planning and Youth Welfare be pleased to state :—

(a) whether the Government has amended the Rules with regard to the fixation of maximum and minimum sale price for arrack and toddy ;

(b) whether there was a strong objection from the public and the Excise Contractors for amending the Rules ;

(c) the extraordinary circumstances that forced Government to amend these rules ?

Sri RAMAKRISHNA HEGDE (Minister for Finance, Planning and Youth Welfare).—

(a) Yes.

(b) No.

(c) For administrative reasons.

ಶ್ರೀ ಕೆ. ಟಿ. ಶಾಮಯ್ಯಗೌಡ.—(ಎ) ಪ್ರಶ್ನೆಯಲ್ಲಿ "whether the Government has amended the rules with regard to fixation of maximum and minimum price for toddy" ಯೆಸ್ ಎಂದು ಉತ್ತರ ಕೊಟ್ಟಿದ್ದೀರಿ. ಹಿಂದೆ ಈ ರೀತಿ ರೂಲ್ ಇತ್ತು:

"The Deputy Commissioner shall have the right to fix the maximum and minimum retail price if he considers it necessary in the interest of the State and to check unhealthy competition among the licencees."

ಅದನ್ನು ಪೂರ್ಣವಾಗಿ ಒಪ್ಪಿ 21 ನೆಯ ಕ್ಲಾಜನ್ನು ಮಾತ್ರ ತೆಗೆದಿರುವುದಕ್ಕೆ ಕಾರಣವೇನು ?

Sri RAMAKRISHNA HEGDE.—In actual practice, it is never observed. Sometimes, some contractors used to sell it at a price higher than the maximum and sometime some contractors used to sell less than the maximum. Therefore, in a free competition, it is not desirable to fix either the maximum or the minimum price.

ಶ್ರೀ ಕೆ. ಟಿ. ಶಾಮಯ್ಯಗೌಡ.—ರೂಲ್ಸ್ ತಿದ್ದುಪಡಿ ಮಾಡಲು ಕಾರಣ ಅಡ್ಮಿನಿಸ್ಟ್ರೇಟಿವ್ ರೀಸನ್ಸ್ ಎಂದು ತಿಳಿಸಿರಾಗಿದೆ. ಕಾಂಪಿಟೀಷನ್ನಿಗೆ ಅವಕಾಶ ಕೊಟ್ಟರೆ ಲಾಭ ಬರುವುದು ಎಂದು ಈಗ ಹೇಳಿದರು. ಇದರಲ್ಲಿ ಯಾವುದು ಸರಿ ?

ಶ್ರೀ ರಾಮಕೃಷ್ಣ ಹೆಗಡೆ.—ಎರಡೂ ಸರಿ. ಅಡ್ಮಿನಿಸ್ಟ್ರೇಟೀವ್ ರೀಸನ್ಸ್ ಎಂದು ಹೇಳುವು ಬೇಕೆಂದರೆ ಮ್ಯಾಕ್ಸಿಮಂ ಪ್ರೈಸಸ್ ಫಿಕ್ಸ್ ಮಾಡದೆ ಎನ್‌ಫೋರ್ಸ್ ಮಾಡುವುದು ಕಷ್ಟ. ಪ್ರತಿಯೊಂದು ಅಂಗಡಿಗೂ ಹೋಗಿ ಯಾವ ಬೆಲೆಯಲ್ಲಿ ಮಾರಾಟವಾಗುತ್ತಿದೆ ಎಂದು ನೋಡುವುದಕ್ಕಾಗುವುದಿಲ್ಲ. ತಾಲ್ಲೂಕುವಾರು ಮಾರುವುದರಿಂದ ಕೆಲವು ಕಂಟ್ರಾಕ್ಟರುಗಳೇನು ನೊಂದಿದ್ದಾರೆ ಅವರಿಗೆ ಅನುಕೂಲವಾಗುವುದು.

ಶ್ರೀ ಕೆ. ಟಿ. ಶಾಮಯ್ಯಗೌಡ.—ತಾಲ್ಲೂಕುವೈಜ್ ಮಾಡಬೇಕೆಂದು ಹೇಳಿದಮೇಲೆ ಮಾಡಿದ್ದಾರೆ. ಆದರೆ ಮನಾಪಲಿಸ್ಟ್ಸ್ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಬ್ಯಾರಲ್ ತೆಗೆದುಕೊಂಡುಹೋಗಿ ಸಣ್ಣ ಕಂಟ್ರಾಕ್ಟರುಗಳನ್ನು ಕೊಲೆ ಮಾಡಲಿ ಎಂಬ ಉದ್ದೇಶದಿಂದ ಹಿಂದಿನ ಸರಕಾರ ಮಾಡಿದೆ. ಅದರಿಂದ ಸರಕಾರಕ್ಕೆ ಉತ್ಪತ್ತಿ ಬರುವುದು. ಆದುದರಿಂದ ಸಣ್ಣ ಕಂಟ್ರಾಕ್ಟರುಗಳನ್ನು ತೆಗೆದುಕೊಳ್ಳುವುದು ಅನುಕೂಲವಲ್ಲವೇ ?

Sri RAMAKRISHNA HEGDE.—It is a double-edged weapon. It can cut both sides. It is practically the survival of the fittest. ಇದರಿಂದ ಸಣ್ಣ ಕಂಟ್ರಾಕ್ಟರುಗಳಿಗೆ ಸಹಾಯವೇ ಆಗುವುದು. ದೊಡ್ಡ ಕಂಟ್ರಾಕ್ಟರುಗಳು ಮನಸ್ಸು ಮಾಡಿದರೆ ಬಹಳ ಕಾಂಪಿಟೀಷನ್ನಿಗೆ ಅವಕಾಶ ಕೊಡುವುದಿಲ್ಲ.

ಶ್ರೀ ಕೆ. ಟಿ. ಶಾಮಯ್ಯಗೌಡ.—ಈ ವರ್ಷ ಹರಾಜಿನಲ್ಲಿ ಸೇಕಡ 75 ಭಾಗ ಸಣ್ಣ ಕಂಟ್ರಾಕ್ಟರುಗಳಿಗೆ ಅವಕಾಶವಾಗಿರುವುದರಿಂದ ತಾನೆ ಉತ್ಪತ್ತಿ ಹೆಚ್ಚಿರುವುದು ?

ಶ್ರೀ ರಾಮಕೃಷ್ಣ ಹೆಗಡೆ.—ಹೇಗೆ ಹೇಳಲಿ ? ಕೆಲವು ಕಡೆ ಅವರು, ಬೇರೆ ಕಡೆ ಬೇರೆಯವರು ಹೆಚ್ಚು ಮಾರಿರಬಹುದು. ಇದಕ್ಕೆ ಕಾರಣ ಗೊತ್ತಾಗುವುದಿಲ್ಲ.

ಉಪಸಭಾಪತಿಯವರು.—ಶ್ರೀ ಹೆಚ್. ಕೆ. ಶಿವರುದ್ರಪ್ಪನವರು ಶ್ರೀ ಎಂ. ಲಿಂಗಣ್ಣನವರ ಪರವಾಗಿ ಪ್ರಶ್ನೆ ನಂ. 216 ಹಾಕಬಹುದು.

Construction of a New Bridge across Kabini near Nanjangud

216. Sri M. LINGANNA (Local Authorities' Constituency) :—

Will the Minister for Public Works be pleased to state:—

(*a*) whether an estimate has been prepared to construct a new bridge across Kabini near Nanjangud Town in place of the old one;

(*b*) if so, the estimated cost of the same ;

(*c*) when the work will be taken up ?

Sri K. LAKKAPPA (Minister for Public Works).—

(*a*) Yes.

(*b*) Rs. 16.00 lakhs.

(*c*) After the approval of Government of India is received.

ಶ್ರೀ ಎಚ್. ಕೆ. ಶಿವರುದ್ರಪ್ಪ.—16 ಲಕ್ಷಕ್ಕೆ ಯಾವ ಇಸವಿಯಲ್ಲಿ ಅಂದಾಜು ಮಾಡಿರುವುದು ?

† ಶ್ರೀ ಕೆ. ಲಕ್ಕಪ್ಪ.—1967 ರಲ್ಲಿ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಭಾರತ ಸರ್ಕಾರದ ಅನುಮತಿಗಾಗಿ ಕಳುಹಿಸಿರುವುದಕ್ಕೆ ಕಾರಣವೇನು ?

ಶ್ರೀ ಕೆ. ಲಕ್ಕಪ್ಪ.—ಇದು ಬಹಳ ಮುಖ್ಯವಾದ ರಸ್ತೆ. ಎಕಾನಮಿ ದೃಷ್ಟಿಯಿಂದ ಮತ್ತು ಇಂಟರ್‌ಸ್ಟೇಟ್ ದೃಷ್ಟಿಯಿಂದು ಕೇಂದ್ರ ಸರಕಾರಕ್ಕೆ ಬರೆದರೆ ಅವರಿಂದ ಅರ್ಧಭಾಗದ ಹಣ ಸಹಾಯ ದೊರೆಯುವುದು. ಅದನ್ನು ಪಡೆಯಲು ಕೇಂದ್ರ ಸರಕಾರಕ್ಕೆ ಕಳುಹಿಸಿದೆ.

3-30 P.M.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಸೇತುವೆಯಲ್ಲಿ ರೈಲು ಮತ್ತು ವಾಹನಗಳು ಹೆಚ್ಚಾಗಿ ಪ್ರಯಾಣ ಮಾಡುತ್ತಿರುವುದು ಗೊತ್ತೇ ?

ಶ್ರೀ ಕೆ. ಲಕ್ಕಪ್ಪ.—ಗೊತ್ತಿದೆ. ಎರಡು ಉದ್ದೇಶದಿಂದ ಸೇತುವೆ ಕಟ್ಟಿದ್ದಾರೆ. ಇದು ಕೇವಲ 13 ಅಡಿ ಅಗಲ ಮಾತ್ರ ಇದ್ದು ಗಾಡಿಯಾಗಲಿ, ವಾಹನವಾಗಲಿ ಕ್ರಾಸ್ ಆಗುವುದಕ್ಕೆ ಅವಕಾಶ ವಾಗುತ್ತಿಲ್ಲ, ಬಹಳ ಅನಾನುಕೂಲವಾಗಿದೆ ಎಂಬುದನ್ನು ಪೂರ್ಣವಾಗಿ ಮನಗಂಡಿದ್ದೇವೆ. ಈ ದೃಷ್ಟಿಯಿಂದ ಪ್ರತ್ಯೇಕವಾದ ಸೇತುವೆ ಕಟ್ಟಬೇಕೆಂದು ಎಸ್ಟಿಮೇಟ್ ತಯಾರು ಮಾಡಿ ಕೇಂದ್ರ ಸರ್ಕಾರದಿಂದ ಅನುಮತಿ ನಿರೀಕ್ಷೆ ಮಾಡುತ್ತಾ ಇದ್ದೇವೆ.

ಶ್ರೀ ಕೆ. ಸುಬ್ಬಯ್ಯ.—ಭಾರತ ಸರ್ಕಾರದ ಅನುಮತಿ ದೊರಕಿಸಿಕೊಳ್ಳುವಲ್ಲಿ ಸರ್ಕಾರ ಏನು ವ್ಯವಹಾರ ಮಾಡಿದೆ ಮತ್ತು ಈ ವ್ಯವಹಾರ ಯಾವ ಮಟ್ಟದಲ್ಲಿ ಇದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಎಕಾನಮಿಕ್ ಅಂಡ್ ಇಂಟರ್ ಸ್ಟೇಟ್ ಇಂಪಾರ್ಟೆನ್ಸ್ ರೋಡ್ ಅಂತ 1967 ರಲ್ಲಿ ಒಂದು ಲಿಸ್ಟ್ ತಯಾರು ಮಾಡಿ ಈ ಸೇತುವೆ ಮತ್ತು ಇನ್ನೂ ಅನೇಕ ಸೇತುವೆಗಳನ್ನು ಸೇರಿಸಿ ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೆವು. 31-11-1968 ರಲ್ಲಿ ಇದನ್ನು ಜರೂರಾಗಿ ತೆಗೆದು ಕೊಳ್ಳಬೇಕು ಅದಕ್ಕೆ ಒಪ್ಪಿಗೆ ಕೊಡಬೇಕೆಂದು ಅವರಲ್ಲಿ ವ್ಯವಹರಿಸಿದ್ದೇವೆ. ಅದಕ್ಕೆ ಪ್ರತಿಯಾಗಿ 19-3-1969 ರಲ್ಲಿ ಕೇಂದ್ರಸರ್ಕಾರದ ಒಪ್ಪಿಗೆ ಕೊಡುವವರೆಗೂ ಇದನ್ನು ಪ್ರಾರಂಭ ಮಾಡಬೇಡಿ ಎಂದು ಬರೆದಿದ್ದರು. ಕೆಲವು ತಿಂಗಳುಗಳ ಹಿಂದೆ ನಾನು ಡೆಲ್ಲಿಗೆ ಹೋಗಿದ್ದಾಗ ಖುದ್ದಾಗಿ ಈ ವಿಷಯವನ್ನು ಒತ್ತಾಯ ಮಾಡಿದ್ದೇನೆ. ಪದೇಪದೇ ಈ ಸಂಬಂಧವಾಗಿ ಪತ್ರ ವ್ಯವಹಾರ ನಡೆಯುತ್ತಾ ಇದೆ. ಇದುವರೆಗೂ ಅವರ ಕಡೆಯಿಂದ ಜವಾಬು ಬಂದಿಲ್ಲ, ಜವಾಬು ಬಂದಮೇಲೆ ಒಪ್ಪಿಗೆ ಸಿಕ್ಕಿದ ಮೇಲೆ ಇದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಸೇತುವೆಯನ್ನು ಎಲ್ಲಿ ಕಟ್ಟಬೇಕೆಂದು ಅಂದಾಜು ತಯಾರಾಗಿದೆ ?

ಶ್ರೀ ಕೆ. ಲಕ್ಕಪ್ಪ.—ಈಗಿರುವ ಜಾಗದಲ್ಲಿ ಅಲ್ಲ, ಪ್ರತ್ಯೇಕವಾದ ಜಾಗದಲ್ಲಿ ಕಟ್ಟಬೇಕೆಂದು ಯೋಚನೆ ಮಾಡಿದ್ದೇವೆ. ಈ ಸೇತುವೆಗೆ ಎರಡು ಪಕ್ಕದಲ್ಲೂ ಸುಮಾರು ಐದೂವರೆ ಅಡಿ ಅಗಲದ ಫುಟ್ ಪಾತ್ ಮಾಡಬೇಕೆಂದು ಅಂದಾಜಾಗಿದೆ ಮತ್ತು ಇದು 24 ಅಡಿ ಅಗಲ ಇರುತ್ತದೆ.

SHORT NOTICE QUESTION AND ANSWER

Hubli-Dharwar Municipal Corporation Schools are under the Government Control

6. Sri Y. S. PATIL (Graduates' Constituency).—

Will the Minister for Education be pleased to state :—

(a) whether it is a fact that all Primary Schools that were under the control of Hubli-Dharwar Municipal Corporation School Board were taken over by Government on 21st May 1969 under its administrative control ;

(Sri Y. S. Patil)

(*b*) if so, whether all the Primary Teachers working in those schools have come to be considered as Government Servants;

(*c*) whether Government is aware that the District Education Officer is effecting recovery of festival advance, cycle advance and G.P. Fund, etc., from present salary bills of the teachers towards the advances that they drew prior to 21st May 1969 ;

(*d*) whether Government is aware that District Educational Officer is not passing any receipts towards the amount recovered from their salary bills ;

(*e*) whether there is any order from the Government to effect recoveries of the said amount from their salaries for the months of June and July 1969 if so, under what head of account the said amount has been credited by the Assistant Education Officer ;

(*f*) the total amount recovered from the salary bill for the months of June and July 1969 ?

Sri N. M. KOTRABASAIAH SOGI (Deputy Minister for Education).—

(*a*) Yes.

(*b*) Yes.

(*c*) It is normal to effect recoveries of loans advanced to Government servants.

(*d*) Since recoveries are effected in their salary bills, no separate receipt is necessary.

(*e*) No Government Orders are necessary for the recoveries of loans. The amounts of recoveries are credited to the Budget head "Q. Loans and Advances by State and Union Territory Governments and B. Loans to Government Servants".

(*f*) If necessary, this information will be furnished after obtaining the same from the District Educational Officer, Dharwar.

ಶ್ರೀ ವೈ. ಎಸ್. ಪಾಟೀಲ್.--ಶಿಕ್ಷಕರ ಪಗಾರದಲ್ಲಿ ಪ್ರಾವಿಡೆಂಟ್ ಫಂಡ್ ಮೇಲೆ ತೆಗೆದು ಕೊಂಡಂತಹ ಸಾಲ ವಸೂಲು ಮಾಡುವುದು ಯೋಗ್ಯವೇ ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ರೀತಿ ಮಾಡಿದ್ದರೆ ಅದನ್ನು ಪ್ರಾವಿಡೆಂಟ್ ಫಂಡಿಗೆ ಸೇರಿಸಲಾಗುತ್ತದೆ.

ಶ್ರೀ ವೈ. ಎಸ್. ಪಾಟೀಲ್.—ನನ್ನ ಮೂಲ ಪ್ರಶ್ನೆ ಇರುವುದು ಪ್ರಾವಿಡೆಂಟ್ ಫಂಡ್ ಸಾಲ ತೆಗೆದುಕೊಂಡಂತಹ ಸಂದರ್ಭದಲ್ಲಿ ಅದನ್ನು ಯಾವುದೇ ರೀತಿಯಿಂದ ವಸೂಲು ಮಾಡುವ ಹಾಗಿಲ್ಲ ಅವರವರೇ ಬಡ್ಡಿಸಹಿತ ಕೊಡಬೇಕೆಂದು ರೂಲ್ ಇದೆ. ಹಾಗಿದ್ದರೂ ಸಹಿತ ಪಗಾರದಲ್ಲಿ ಕಟ್ ಮಾಡುತ್ತಾ ಇದ್ದಾರಲ್ಲಾ ಅದನ್ನು ಕೇಳುತ್ತಾ ಇದ್ದೇನೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಯಾವುದಾದರೂ ಈಚೆಗೆ ತೆಗೆದುಕೊಂಡಿದ್ದರೆ ಅದನ್ನು ಪಗಾರದಲ್ಲಿ ಕಟ್ ಮಾಡಿರಬಹುದು.

ಶ್ರೀ ವೈ. ಎಸ್. ಪಾಟೀಲ್.—ಹಾಗೆ ಕಟ್ ಮಾಡಿದ ಭಾಗವನ್ನು ಪಗಾರದ ಬಿಲ್‌ನಲ್ಲಿ ತೋರಿಸಿಲ್ಲ, ಅಕೌಂಟ್ ಅಡ್ಜಸ್ಟ್‌ಮೆಂಟ್ ಮಾಡಿಲ್ಲ ಅಂತ ಹೇಳಿ ತಿಳಿದು ಬಂದಿದೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಉತ್ತರದಲ್ಲೇ ಹೇಳಿದೆ, ಸ್ಯಾಲರಿ ಬಿಲ್‌ನಲ್ಲಿ ಫೆಸ್ಟಿವಲ್ ಅಡ್ವಾನ್ಸ್ ಎಷ್ಟು, ಇತರ ಸಾಲಗಳು ಎಷ್ಟು ಬರಬೇಕೆಂಬುದು ನಮೂದಾಗಿರುತ್ತದೆ ಆ ಪ್ರಕಾರ ಕಟ್ ಮಾಡುತ್ತಾರೆ.

ಶ್ರೀ ವೈ. ಎಸ್. ಪಾಟೀಲ್.—ಬಿಲ್‌ನಲ್ಲಿ ನಮೂದ್ ಮಾಡಿಲ್ಲ ಎಂದು ರೆಪ್ರಸೆಂಟೇಷನ್ ಬಂದಿದೆ ಬೇಕಾದರೆ ತೋರಿಸುತ್ತೇನೆ. ಸ್ಯಾಲರಿ ಬಿಲ್‌ನಲ್ಲಿ ನಮೂದು ಮಾಡದೇ ಕಟ್ ಮಾಡಿ, ತಮ್ಮ ಪ್ರೈವೇಟ್ ಡೈರಿಯಲ್ಲಿ ಬರೆದುಕೊಳ್ಳುತ್ತಾ ಇದ್ದಾರೆ. ಆ ಪ್ರಕಾರ ಕಟ್ ಮಾಡಿದ ಹಣ ಎಷ್ಟು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸ್ಯಾಲರಿ ಬಿಲ್‌ನಲ್ಲಿ ನಮೂದು ಮಾಡಿರುತ್ತಾರೆ ಮತ್ತು ಟ್ರೆಜರಿ ಅಕೌಂಟ್ ಕ್ಯೂ ಲೋನ್ಸ್ ಅಂಡ್ ಅಡ್ವಾನ್ಸಸ್ ಟು ಗವರ್ನಮೆಂಟ್ ಸರ್ವೆಂಟ್ಸ್ ಅಂತ ಅನ್ನುವ ಹೆಡ್‌ನಲ್ಲಿ ಕ್ರೆಡಿಟ್ ಆಗಿರುತ್ತದೆ.

ಶ್ರೀ ಎ. ಕೆ. ಸುಬ್ಬಯ್ಯ.—ಸ್ಯಾಲರಿ ಬಿಲ್‌ನಲ್ಲಿ ನಮೂದು ಮಾಡಿಲ್ಲ ಎಂದು ಹೇಳಿ ಮಾನ್ಯ ಸದಸ್ಯರು ಶ್ರೀಮಾನ್ ವೈ. ಎಸ್. ಪಾಟೀಲ್‌ರವರು ಸಚಿವರ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ಪರಿಶೀಲಿಸುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ (ವಿದ್ಯಾಶಾಖೆಯ ಮಂತ್ರಿಗಳು).—ಅಂಥಾದ್ದು ಯಾವುದಾದರೂ ಕಾನ್‌ಕ್ರೀಟ್ ಇನ್‌ಸ್ಟೆನ್ಸಸ್ ಇದ್ದರೆ ಬರೆದುಕೊಡಿ, ನಾನು ವಿಚಾರ ಮಾಡಿಸುತ್ತೇನೆ.

ಶ್ರೀ ವೈ. ಎಸ್. ಪಾಟೀಲ್.—ಈಗಾಗಲೇ ಡಿ.ಇ.ಓ.ರವರು 25-30 ರೂಪಾಯಿನಂತೆ ಕಟ್ ಮಾಡಿ ತಮ್ಮ ಸ್ವಂತ ಹೆಸರಿನಲ್ಲಿ ಬ್ಯಾಂಕಿನಲ್ಲಿ ಇಟ್ಟುಕೊಂಡಿದ್ದಾರೆ, ಅವರು 4-6 ತಿಂಗಳಿನಲ್ಲಿ ರಿಟೈರ್ ಆಗುತ್ತಾರೆ, ರಿಟೈರ್ ಆದಮೇಲೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಅಗತ್ಯವಿದ್ದಲ್ಲಿ ಮಾಹಿತಿಯನ್ನು ಒದಗಿಸಲಾಗುವುದು ಎಂದು ಹೇಳಿದ್ದೀರಿ, ಅಗತ್ಯವಿದ್ದಲ್ಲಿ ಎಂಬುದರ ಅರ್ಥವೇನು ?

Mr. DEPUTY CHAIRMAN.—The Hon. Minister for Education has pointed out that the hon. Member may write to him giving concrete instances and that he will look into the matter. The hon. Member cannot expect the Hon. Minister to answer questions without any notice.

ಶ್ರೀ ವೈ. ಎಸ್. ಪಾಟೀಲ್.—ಪ್ರಶ್ನೆ ಕೊಟ್ಟು 8 ದಿವಸ ಆಯಿತು. ಧಾರವಾಡದಿಂದ ತಿಳಿದುಕೊಳ್ಳಬೇಕಾದರೆ ಫೋನ್ ಮಾಡಿದರೆ 5 ನಿಮಿಷದಲ್ಲಿ ತಿಳಿಯುತ್ತದೆ. ಇದನ್ನು ಹೋಲ್ಡ್ ಓವರ್ ಮಾಡಿ ನಾಳೆಯಾದರೂ ವಿಷಯಗಳನ್ನು ತಿಳಿಸಲು ಪ್ರಯತ್ನ ಮಾಡುತ್ತೀರಾ ?

Sri K. V. SHANKARA GOWDA.—My information is that it is included in the bill. His contention is that it is not included in the salary bill. If it is not included, let him give concrete instances; I will see that it is included. If it has not been included, I will take action against the person concerned.

ಉಪಸಭಾಪತಿಯವರು.—ಈಗ ಪ್ರಶ್ನೋತ್ತರಗಳ ವೇಳೆ ಮುಗಿಯಿತು.

Hunger Strike by the Students' Representative of the Bangalore University

ಶ್ರೀ ಎಂ. ವಿ. ವೆಂಕಟಪ್ಪ (ಪದವೀಧರರ ಕ್ಷೇತ್ರ) —ಬೆಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಪ್ರತಿನಿಧಿ, ಉಪವಾಸ ಸತ್ಯಾಗ್ರಹ ಮಾಡುತ್ತಿರುವ, ಗಂಗರಾಜು ಅವರ ಆರೋಗ್ಯ ಪರಿಸ್ಥಿತಿ ಉತ್ಕಟವಾಗಿದೆ ಎಂದು ಪತ್ರಿಕೆಗಳಲ್ಲಿ ಓದಿದೆ. ವಿದ್ಯಾ ಮಂತ್ರಿಗಳು ಕೆಳಮನೆಯಲ್ಲಿ ಹೇಳುತ್ತಾ ಕಾಲ ಪಕ್ವವಾಗಿಲ್ಲ ಆದಾಗ ಇಂಟರ್‌ಫಿಯರ್ ಮಾಡುತ್ತೇನೆ ಎಂದು ಹೇಳಿದ್ದರು. ವೈಸ್‌ಚಾನ್ಸಲರ್‌ರವರು

(ಶ್ರೀ ಎಂ. ವಿ. ವೆಂಕಟಪ್ಪ)

ಮತ್ತು ಸಿಂಡಿಕೇಟ್ ಸದಸ್ಯರು ಏನಾದರೂ ಒಂದು ತೀರ್ಮಾನ ಕೈಕೊಂಡಿದ್ದಾರೆಯೋ! ಹಾಗೆ ಕೈಕೊಳ್ಳದಿದ್ದರೆ ತಾವು ದಯವಿಟ್ಟು ಇಂಟರ್‌ಫಿಯರ್ ಮಾಡಿ ಯಾವುದಾದರೂ ಒಂದು ತೀರ್ಮಾನ ಕೈಗೊಳ್ಳಬೇಕೆಂದು ಅರಿಕೆ ಮಾಡುತ್ತೇನೆ.

ಶ್ರೀ ಕೆ. ವಿ. ಶಂಕರಗೌಡ.—ಅದನ್ನು ಪರಿಶೀಲಿಸೋಣ.

Representation from the Assistant Teachers of Bijapur District whose Services were broken since April, 1969

ಶ್ರೀ ವೈ. ಎಸ್. ಪಾಟೀಲ್.—1969ನೇ ಏಪ್ರಿಲ್‌ನಲ್ಲಿ ಬಿಜಾಪುರ ಜಿಲ್ಲೆಯಲ್ಲಿ ನೂರಾರು ಶಿಕ್ಷಕರ ಸರ್ವಿಸಸ್ ಬ್ರೇಕ್ ಮಾಡಿ ಅವರನ್ನು ಕೆಲಸದಿಂದ ತೆಗೆದುಹಾಕಿದರು. ಮತ್ತೆ ಮೇ ನಲ್ಲಿ ಸ್ಕೂಲ್ ಪ್ರಾರಂಭವಾದ ಕೂಡಲೆ ಅವರು ನಮ್ಮನ್ನು ಕೆಲಸಕ್ಕೆ ತೆಗೆದುಕೊಳ್ಳಿರಿ ಎಂದರೆ ಶಾಲೆ ನಮ್ಮ ಕೈಯಲ್ಲಿ ಇಲ್ಲ ಸರಕಾರದ ಅಧೀನದಲ್ಲಿದೆ ಎಂದು ಹೇಳಿದ್ದರ ಸಲುವಾಗಿ ಇಂದು ನೂರಾರು ಜನ ಶಿಕ್ಷಕರು ಕೆಲಸವಿಲ್ಲದೇ ಅಲೆಯುತ್ತಾ ಇದ್ದಾರೆ. ಕೂಡಲೇ ಸರ್ಕಾರದವರು ಈ ಕಡೆಗೆ ಗಮನ ಕೊಟ್ಟು ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಹಾಗೂ ನನಗೆ ಒಂದು ಮನವಿ ಪತ್ರ ಬಂದಿದೆ; ಅದನ್ನು ಮಾನ್ಯ ಸಭಾಪತಿಯವರಿಗೆ ಸಲ್ಲಿಸುತ್ತೇನೆ.

Mr. DEPUTY CHAIRMAN.—I shall forward the representation to Government.

ಶ್ರೀ ವಿ. ಎಸ್. ಹಿರೇಗೌಡರ್.—ರೈತರಿಗೆ ಅತಿ ತ್ವರಿತವಾಗಿ ಒದಗಿಸಬೇಕಾಗಿರತಕ್ಕ ಗೊಬ್ಬರವನ್ನು ಕೊಳ್ಳತಕ್ಕ ಬಗ್ಗೆ ಡಿ.ಸಿ.ಸಿ. ಬ್ಯಾಂಕಿಗೆ ಹಣವನ್ನು ಒದಗಿಸತಕ್ಕ ಬಗ್ಗೆ ನಾನು ಒಂದು ಷಾರ್ಟ್‌ನೋಟೀಸ್ ಕೊಶ್ಚನ್ ಕಳುಹಿಸಿ ಬಹಳ ದಿನಗಳಾಯಿತು. ಅಧಿವೇಶನ ಮುಕ್ತಾಯವಾಗುತ್ತಾ ಬಂದಿದ್ದಾಗ್ಯೂ ಅದಕ್ಕೆ ಉತ್ತರವನ್ನು ಒದಗಿಸಲಿಲ್ಲ. ಅಧ್ಯಕ್ಷರು ದಯವಿಟ್ಟು ಸರ್ಕಾರದವರಿಂದ ಉತ್ತರವನ್ನು ಬೇಗ ತರಿಸಿ ಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

Mr. DEPUTY CHAIRMAN.—Government will expedite reply.

ಶ್ರೀ ಜಿ. ವಿ. ಆಂಜನಪ್ಪ.—ನಾನು ಮತ್ತು ಶ್ರೀ ಡಿ. ರಾಜಗೋಪಾಲ್ ಇಬ್ಬರೂ ಸೇರಿ ವಿದ್ಯುಚ್ಛಕ್ತಿ ದರವನ್ನು ಹೆಚ್ಚಿಸಿರತಕ್ಕ ಬಗ್ಗೆ ರೈತರಿಗುಂಟಾಗಿರತಕ್ಕ ತೊಂದರೆಯನ್ನು ಚರ್ಚೆ ಮಾಡುವುದಕ್ಕೆ ಮತ್ತು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಉಪವಾಸ ಮುಷ್ಕರವನ್ನು ಹೂಡಿರುವುದರ ಬಗ್ಗೆ ಸರ್ಕಾರದವರ ಗಮನ ಸೆಳೆಯುತಕ್ಕ ನೋಟೀಸನ್ನು ಕಳುಹಿಸಿದ್ದೆವು. ಒಂದಕ್ಕೂ ಉತ್ತರವಿಲ್ಲ. ಹೀಗಾದರೆ ಹೇಗೆ ?

ಶ್ರೀ ಕೆ. ವಿ. ಶಂಕರ ಗೌಡ.—ವಿಶ್ವವಿದ್ಯಾನಿಲಯದ ವಿಚಾರವನ್ನು ನಾಡಿದ್ದು ತೆಗೆದುಕೊಳ್ಳೋಣ.

Sri JIVARAJ HIRACHAND SHAH.—Sir, what about my question ?

Mr. DEPUTY CHAIRMAN.—Through the Leader of the House the Chair will pursue the matter. The Legislature Office will request the Government that as far as possible all the questions are answered. Regarding discussion on the Electricity Board, the Business Advisory Committee has allotted two hours. Next item.

Papers laid on the Table

Mr. SECRETARY.—I lay on the Table :

(i) The Mysore Appropriation (No. 5) Bill, 1969, as passed by the Legislative Assembly.

(ii) The Mysore Appropriation (No. 6) Bill, 1969, as passed by the Legislative Assembly.

Sri ALUR HANUMANTHAPPA.—I beg to lay on the Table :

A copy of the Report of the enquiry officer appointed for the purpose of enquiring into the fire accident in respect of the Bhagawati Valley Forest Fire on 2nd March 1967.

Mr. DEPUTY CHAIRMAN.—The report is laid on the Table.

Non-Official Resolution

(i) *re* : Constitution of a Committee to assess the benefits made available to Harijans and Girijans in the State since Independence

Debate Continued

†ಶ್ರೀ ಎ. ಕೆ. ಸುಬ್ಬಯ್ಯ (ಪದವೀಧರರ ಕ್ಷೇತ್ರ).—ಸ್ವಾಮಿ, ಭಾರತವು ಸ್ವಾತಂತ್ರವನ್ನು ಗಳಿಸಿದ ನಂತರ ರಾಜ್ಯಗಳಲ್ಲಿ ಹರಿಜನ ಗಿರಿಜನರ ಏಳಿಗೆಗಾಗಿ ರಾಜ್ಯ ಸರ್ಕಾರಗಳು ನಾನಾ ರೀತಿಯಲ್ಲಿ ಹಣವನ್ನು ಒದಗಿಸಿ ಅವರಿಗೆ ಸೌಲಭ್ಯಗಳನ್ನು ಒದಗಿಸುವುದಕ್ಕೆ ಪಟ್ಟ ಪ್ರಯತ್ನಗಳು ಎಷ್ಟರಮಟ್ಟಿಗೆ ಸಫಲವಾಗಿವೆ, ಪ್ರಗತಿಯನ್ನು ಸಾಧಿಸಿವೆ ಎನ್ನುವುದನ್ನು ಕುರಿತು ಸರ್ಕಾರಕ್ಕೆ ಒಂದು ವರದಿಯನ್ನು ಒಪ್ಪಿಸತಕ್ಕ ಬಗ್ಗೆ ಸರ್ಕಾರದವರ ಮತ್ತು ಸಾರ್ವಜನಿಕರನ್ನು ಒಳಗೊಂಡ ಒಂದು ರಾಜ್ಯ ಮಟ್ಟದ ಸಮಿತಿಯನ್ನು ನೇಮಕ ಮಾಡಬೇಕೆಂದು ನಾನು ಒಂದು ಖಾಸಗೀ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸಿದ್ದೆ. ಅದು ಈಗಾಗಲೇ ಇಲ್ಲಿ ಚರ್ಚೆಯಾಗಿದೆ. ಆದರೆ ಅದಕ್ಕೀಗ ಉತ್ತರ ರೂಪದಲ್ಲಿ ನಾಲ್ಕು ಮಾತುಗಳನ್ನು ಆಡುವುದಕ್ಕಾಗಿ ನಿಂತಿದ್ದೇನೆ.

ಈ ನಿರ್ಣಯದಲ್ಲಿ ಭಾಗವಹಿಸಿದ ಎಲ್ಲಾ ಸದಸ್ಯರುಗಳೂ ಈ ನಿರ್ಣಯವನ್ನು ಸ್ವಾಗತ ಮಾಡಿದ್ದಾರೆ. ಮಾನ್ಯ ಮಂತ್ರಿಗಳೂ ಕೂಡ ನಿರ್ಣಯದಲ್ಲಿ ಅಡಕವಾಗಿರುವ ತತ್ವವನ್ನು ಒಪ್ಪಿದಂಥ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ನಾನು ಸೂಚಿಸಿರುವಂಥ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂಬ ಉದ್ದೇಶ ಸರ್ಕಾರದವರಿಗೂ ಇದೆಯೆಂಬುದಾಗಿ ಹೇಳಿದ್ದಾರೆ. ಆದರೆ ಅವರು ಹೇಳುತ್ತಿರುವ ಅಭಿಪ್ರಾಯದ ಪ್ರಕಾರ ಇಲ್ಲಿರತಕ್ಕ ಮಾನ್ಯ ಶಾಸಕರೆಲ್ಲರೂ ಸಾರ್ವಜನಿಕರ ಪ್ರತಿನಿಧಿಗಳೇ ಆಗಿರುವುದರಿಂದ ಈ ಶಾಸನ ಸಭೆಗಳ ಸದಸ್ಯರನ್ನು ಒಳಗೊಂಡಂಥ ಒಂದು ಸಮಿತಿಯನ್ನು ನೇಮಕ ಮಾಡಿದರೆ ಸಾಕು. ಅಂಥ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂಬ ಉದ್ದೇಶ ಸರ್ಕಾರದವರಿಗೂ ಇದೆ ಎಂಬುದಾಗಿ ಉತ್ತರದಲ್ಲಿ ಸರ್ಕಾರದವರು ಹೇಳಿದ್ದಾರೆ. ಆ ಒಂದು ಭರವಸೆಯಮೇಲೆ ನಿರ್ಣಯವನ್ನು ಮಂಡಿಸಿರತಕ್ಕ ಸದಸ್ಯರು ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ ನಾನು ಈ ಒಂದು ನಿರ್ಣಯವನ್ನು ಮಂಡಿಸಿದ್ದು ಇಲ್ಲಿ ಸರ್ಕಾರವನ್ನು ಟೀಕೆಮಾಡಬೇಕೆಂಬ ಉದ್ದೇಶದಿಂದಲ್ಲ. ಅಲ್ಲದೆ ಇದನ್ನು ಒಂದು ಪೋಸ್ಟ್‌ಮಾರ್ಟಂ ಎಗ್ಸಾಮಿನೇಷನ್ ಮಾಡಬೇಕೆಂತಲೂ ಅಲ್ಲ. ನಮಗೆ ಸ್ವರಾಜ್ಯಬಂದು ಇಲ್ಲಿಗೆ 22 ವರ್ಷಗಳಾಯಿತು. ಅಲ್ಲಿಂದ ಇಲ್ಲಿಯವರೆಗೂ ಹರಿಜನ ಗಿರಿಜನರಿಗೆ ಒದಗಿಸಿರತಕ್ಕ ನಾನಾ ಬಗೆಯ ಸೌಲಭ್ಯಗಳು ಯಾವರೀತಿ ಉಪಯೋಗವಾಗಿದೆ ಎಂಬುದಕ್ಕೆ ಈ ನಿರ್ಣಯ ಸೀಮಿತವಾಗಿಲ್ಲ. ಸರ್ಕಾರದವರು ಹರಿಜನ ಗಿರಿಜನರಿಗೆ ಒದಗಿಸಿರತಕ್ಕ ಆ ಸೌಲಭ್ಯಗಳೇನಿವೆ ಅವು ಅವರಿಗೆ ಹೋಗಿ ಮುಟ್ಟಲೇ ಇಲ್ಲ.

(ಶ್ರೀ ಎ. ಕೆ. ಸುಬ್ಬಯ್ಯ)

ಅವುಗಳನ್ನು ಮಧ್ಯದಾರಿಯಲ್ಲಿನ ದಳ್ಳಾಳಿಗಳೇನಿದ್ದಾರೆ ಅವರೇ ಆ ಸೌಲಭ್ಯಗಳನ್ನು ನುಂಗಿ ಹಾಕಿದ್ದಾರೆ. ಹಾಗೆ ಯಾರು ಆ ಸೌಲಭ್ಯಗಳನ್ನು ನುಂಗಿಹಾಕಿದ್ದಾರೋ ಅಂಥವರನ್ನು ಪತ್ತೆಮಾಡಿ ಅವರಿಗೆ ಉಗ್ರಶಿಕ್ಷೆ ವಿಧಿಸಬೇಕು ಎಂಬುದು ನನ್ನ ನಿರ್ಣಯದ ಮೂಲೋದ್ದೇಶ. Guilty men of public life should not go scot free. They should be punished. ಹೀಗೆ ಅವರಿಗೆ ಶಿಕ್ಷೆ ವಿಧಿಸಬೇಕಾದ್ದು ಬಹಳ ಪ್ರಾಮುಖ್ಯವಾದದ್ದು. ಕಳೆದ 22 ವರ್ಷಗಳಿಂದಲೂ ಹೀಗೆ ಆ ಹರಿಜನ ಗಿರಿಜನರಿಗೆ ಕೊಟ್ಟ ಸೌಲಭ್ಯಗಳನ್ನು ನಾವು ನುಂಗಿಹಾಕಿದರೆ ಸರ್ಕಾರದವರು ಕೇಳವುದಿಲ್ಲ, ನಾವು ಏನು ಬೇಕಾದರೂ ಮಾಡಿ ಈ ಸರ್ಕಾರದಲ್ಲಿ ದಕ್ಕಿಸಿಕೊಳ್ಳಬಹುದು ಎಂಬ ಭಾವನೆ ಜನರಲ್ಲಿ ಉಂಟಾದ ಹಾಗೆ ನನಗೆ ಕಂಡುಬರುತ್ತಿದೆ. ತಾವು ಏನು ಬೇಕಾದರೂ ಮಾಡಬಹುದು, ದರೋಡೆ ಕಳವು ಹೀಗೆ ಏನೇ ಮಾಡಿದರೂ ದಕ್ಕಿಸಿಕೊಳ್ಳಬಹುದೆಂಬ ಭಾವನೆ ಜನರಲ್ಲಿ ಬಲವಾಗಿ ನಿಂತಮೇಲೆ ಸರ್ಕಾರದವರು ಇನ್ನು ಮುಂದಕ್ಕೆ ಈ ಹರಿಜನ ಗಿರಿಜನರ ಬಗ್ಗೆ ಎಷ್ಟೋ ಕೋಟಿಗಟ್ಟಲೆ ಹಣವನ್ನು ಖರ್ಚುಮಾಡಿದರೂ ಅದರಿಂದೇನೂ ಸಾರ್ಥಕವಾಗುವುದಿಲ್ಲ. ಏಕೆಂದರೆ ಈ ದಿವಸ ಸಮಾಜದಲ್ಲಿ ಅಂತ ಘಾತಕರಿದ್ದಾರೆ. ಸರ್ಕಾರದವರಿಗೆ ಈ ಜನರ ಅಭಿವೃದ್ಧಿಯ ಬಗ್ಗೆ ಕಳಕಳಿಯಿಲ್ಲ ಎಂದು ನಾನು ಹೇಳುತ್ತಿಲ್ಲ. ಅವರು ಈ ಜನಾಂಗಗಳ ಅಭಿವೃದ್ಧಿಗಾಗಿ ಶ್ರಮಿಸಲಿಲ್ಲ ಎಂದು ಹೇಳುವುದಿಲ್ಲ. ಆದರೆ ಸ್ವಜನ ಪಕ್ಷಪಾತಕ್ಕೆ ಹೆಸರಾಗಿರತಕ್ಕ ಈ ಸರ್ಕಾರದಲ್ಲಿ ಈ ಹರಿಜನ ಗಿರಿಜನರಿಗೆ ಸರ್ಕಾರದವರು ಒದಗಿಸತಕ್ಕ ಸೌಲಭ್ಯಗಳನ್ನು ನುಂಗಿಹಾಕಿದರೆ ಅಂಥವರೆಲ್ಲಾ ಮಂತ್ರಿಗಳಿಗೆ ಸಮೀಪವರ್ತಿಯ ಜನರಾಗಿರುವುದರಿಂದ ಅವರನ್ನು ಪತ್ತೆಮಾಡಿ ಅವರನ್ನು ದಂಡಿಸತಕ್ಕಂಥ ಧೈರ್ಯ ಈ ಮಂತ್ರಿಗಳಿಗಿಲ್ಲ. ಜನರಲ್ಲಿ ಅಂಥ ಒಂದು ನಂಬಿಕೆ ಬೇರೂರಿರುವಾಗ ಇನ್ನು ಸರ್ಕಾರದವರು ಎಷ್ಟು ಕೋಟಿ ಖರ್ಚುಮಾಡಿದರೂ ಏನು ಫಲ? ಎಂದು ಈ ಸರ್ಕಾರ ಸಮಾಜ ಘಾತಕರನ್ನು ಉಗ್ರಶಿಕ್ಷೆಗೆ ಗುರಿಮಾಡುತ್ತದೋ ಅಂದೇ ಈ ಜನರಿಗೆ ಸ್ವಲ್ಪ ಅನುಕೂಲವಾಗಬಹುದು ಎಂಬುದು ನನ್ನ ನಂಬಿಕೆ. ಇಂಥ ಒಂದು ಭೀತಿಯನ್ನು ಸರ್ಕಾರದವರು ಆ ಸಮಾಜ ಘಾತಕರಲ್ಲಿ ಉಂಟುಮಾಡಬೇಕು. ಅದಕ್ಕಾಗಿ ಅವರನ್ನು ಪತ್ತೆಮಾಡಿ ದಂಡಿಸಬೇಕೆಂದು ಒತ್ತಾಯಮಾಡುತ್ತಿದ್ದೇನೆ. ಹಾಗೆ ಮಾಡಿದರೆ ಆಗ ಇವರಿಗೆ ಒದಗಿಸತಕ್ಕ ಸೌಲಭ್ಯಗಳು ಸ್ವಲ್ಪಮಟ್ಟಿಗೆ ಅವರ ಕೈಸೇರಿ ಅವರು ಮುಂದಕ್ಕೆ ಬಂದಾರು. ನಾನು ಈ ಬಗ್ಗೆ ಬಹಳ ವಿವರವಾದ ತನಿಖೆಗಳನ್ನು ನಡೆಸಿದ್ದೇನೆ. ಆ ಜನರಿಗೆ ಒದಗಿಸಿದ ಸೌಲಭ್ಯಗಳಲ್ಲಿ 100 ರಲ್ಲಿ 88 ಅವರ ಕೈಸೇರಿಲ್ಲ. ಇನ್ನು ಕೇವಲ 12 ಅವರ ಕೈಸೇರಿರಬಹುದು. ಸವಲತ್ತುಗಳು ಅನೇಕ ರೀತಿ ಇವೆ. ಅವರಿಗೆ ಜಮೀನು ಒದಗಿಸುವುದು, ಉದ್ಯೋಗಗಳನ್ನು ಕೊಡುವುದು, ಮನೆಗಳನ್ನು ಕಟ್ಟಿಸುವುದು— ಹೀಗೆ ಅನೇಕ ರೀತಿ ಇವೆ. ದಕ್ಷಿಣ ಕನ್ನಡ ಜಿಲ್ಲೆಯ ನೇತ್ರಾವತಿ ದಂಡೆಯ ಮೇಲೆ ಅತ್ಯಂತ ಸೌಂದರ್ಯದಿಂದ ಕೂಡಿದಂಥ 80 ಎಕರೆ ಭೂ ಪ್ರದೇಶದಲ್ಲಿ ಹರಿಜನರ ಮತ್ತು ಗಿರಿಜನರ ಕಾಲೋನಿಯನ್ನು ಮಾಡುತ್ತೇವೆಂದು ಆ ಪ್ರದೇಶವನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡರು. ಅದಕ್ಕೋಸ್ಕರ 17 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಬೇಕಾದಷ್ಟು ಕಾಗದಪತ್ರದಲ್ಲಿ ತೋರಿಸಿದ್ದಾರೆ. ನಾನು ಮಾನ್ಯ ಮಂತ್ರಿಗಳಿಗೆ ಹೇಳುವುದಾದರೆ ಅಲ್ಲಿ ಯಾವ ಜನನಿವಾಸವೂ ಇಲ್ಲ. ಆ 17 ಸಾವಿರ ರೂಪಾಯಿ ಎಲ್ಲಿ ಹೋಯಿತು ? ಅದೆಲ್ಲಿದೆಯೋ ಪತ್ತೆ ಮಾಡಬೇಕು. ಇನ್ನೊಂದು ಉದಾಹರಣೆ. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಇಂದುಬೆಟ್ಟು ಹತ್ತಿರ ಒಂದು ಹರಿಜನ ಕಾಲೋನಿಯನ್ನು ಮಾಡಿ ಸುಮಾರು 15 ಸಂಸಾರದವರಿಗೆ ಮನೆಗಳನ್ನು ಕಟ್ಟುವುದಕ್ಕೆ 77 ಎಕರೆ ಜಮೀನನ್ನು ತೆಗೆದುಕೊಂಡು ಎಷ್ಟೋ ಸಾವಿರ ರೂಪಾಯಿಗಳನ್ನು ಖರ್ಚುಮಾಡಿದರು. ಅಲ್ಲಿಯೂ ಜನನಿವಾಸವೇ ಇಲ್ಲ. ಹರಿಜನರ ವಾಸವೂ ಇಲ್ಲ. ಈ ರೀತಿ ದುರುಪಯೋಗವಾಗಿದೆ. ಎಲ್ಲಿ ನೋಡಿದರೂ ದುರುಪಯೋಗ ನಡೆದಿದೆ. ಜಮೀನು ಕೊಟ್ಟರೆ ನಿಮ್ಮ ವರ್ಗದವರು ಮಾರುತ್ತಾರೆ. ಆ ರೀತಿ ಮಾರುವ ಹಾಗೆ ಕೆಲವು ಜನ ಪುಢಾರಿಗಳು ಕ್ರಮ ತೆಗೆದುಕೊಳ್ಳುತ್ತಾರೆ. ಎತ್ತು ಕೊಟ್ಟರೂ ಮಾರಾಟಮಾಡುತ್ತಾರೆ. ಗಾಡಿ ಕೊಟ್ಟರೆ ಮಾರಾಟಮಾಡುತ್ತಾರೆ. ಆದ್ದರಿಂದ ಸರ್ಕಾರದವರು ವಿದ್ಯಾವಂತ ಹರಿಜನ ಗಿರಿಜನರಿಗೆ ಉದ್ಯೋಗಗಳನ್ನು ಕೊಟ್ಟರೆ ಒಳ್ಳೆಯದು. ಅದನ್ನು ಮಾರುವುದಕ್ಕಾಗುವುದಿಲ್ಲ. ಅದನ್ನು ಎಲ್ಲರೂ ಉಳಿಸಿಕೊಳ್ಳುತ್ತಾರೆ. ಏಕೆಂದರೆ, ಈಗಾಗಲೇ ಸೇಕಡ 18ರಷ್ಟು ಹುದ್ದೆಗಳನ್ನು ಹರಿಜನರಿಗೆ ಮತ್ತು ಗಿರಿಜನರಿಗೆ ಮೀಸಲಾಗಿಟ್ಟಿದ್ದಾರೆಂದು ಸರ್ಕಾರದವರು ಒಂದು ಪ್ರಕಟಣೆ ಹೊರಡಿಸಿದ್ದಾರೆ. ಪತ್ರಿಕೆಗಳಲ್ಲಿ ಬೇಕಾದಷ್ಟು ಪ್ರಚಾರ ಸಿಕ್ಕಿದೆ. ಆದರೆ ವಾಸ್ತವಿಕವಾಗಿ ಅನೇಕ ರೀತ್ಯ ಕಾರ್ಯಕ್ರಮಗಳು, ಪ್ರದರ್ಶನಗಳು ಮತ್ತು ಪತ್ರಿಕಾ ಪ್ರಚಾರಗಳು ಅದರ

ಬಗ್ಗೆ ನಡೆಯುತ್ತಾ ಇವೆಯೋ ಅಂದರೆ, ವಾಸ್ತವಿಕವಾಗಿ ಅವು ಯಾವ ಇಲಾಖೆಯಲ್ಲಿಯೂ ನಡೆಯುತ್ತಾ ಇಲ್ಲ. ಇದು ನಮ್ಮ ಗಮನಕ್ಕೆ ಬಂದಿದೆ.

Smt. M. R. LAKSHAMMA.—On a point of information, Sir. According to the Rules of Procedure, on a discussion of a non-official resolution, the duration of a speech is half-an-hour. We have been listening to the hon. Member's speech with indulgence. Can he now make another speech?

Mr. DEPUTY CHAIRMAN.—I hope the hon. Member will conclude.

Sri A. K. SUBBIAH.—I require ten minutes more.

Mr. DEPUTY CHAIRMAN.—The House will now ndjourn to meet again at 4-30 P.M. and the hon. Member Sri Subbiah will take another five minutes more.

The House rose for Tea at Four of the Clock and reassembled at Thirty Minutes past Four of the Clock.

[MR. DEPUTY CHAIRMAN in the Chair]

ಶ್ರೀ ಎ. ಕೆ. ಸುಬ್ಬಯ್ಯ.—ಸರ್ಕಾರದವರು ಇದೇ ರೀತಿ ಒಂದು ಸಮಿತಿಯನ್ನು ಮಾಡಲಿಕ್ಕೆ ಇಚ್ಛೆಪಟ್ಟಿದ್ದಾರೆ, ಅದಕ್ಕೋಸ್ಕರ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಯವರು ಹೇಳಿದರು. ಆದರೆ ಅವರು ಇದನ್ನು ಸ್ಪಷ್ಟಪಡಿಸಲಿಲ್ಲ. ಸರ್ಕಾರದವರು ನೇಮಿಸಲು ಇಚ್ಛಿಸಿರತಕ್ಕ ಸಮಿತಿಯಲ್ಲಿ ಇಲ್ಲಿ ಚರ್ಚೆಯಾದಂತಹ ಈ ನಿರ್ಣಯದಲ್ಲಿ ಅಡಕವಾಗಿರುವ ತತ್ವವು ಅಡಕವಾಗಿದೆಯೇ, ಮತ್ತು ಅದೆ ರೀತಿ ಟರ್ಮ್ಸ್ ಆಫ್ ರೆಫರೆನ್ಸ್ ಕೊಡಲಾಗುತ್ತದೆಯೇ ಎಂಬುದನ್ನು ಹೇಳಿಲ್ಲ.

Mr. DEPUTY CHAIRMAN.—As far as the Chair knows the House will consider that question and they will be electing members to this Committee. It will be a Parliamentary Committee of the Legislature.

ಶ್ರೀ ಎ. ಕೆ. ಸುಬ್ಬಯ್ಯ.—ಸಮಿತಿ ಮಾಡುತ್ತಾರೆಂಬುದು ಸ್ಪಷ್ಟ. ಆ ಸಮಿತಿಯಲ್ಲಿ ಅಡಕವಾಗಿರತಕ್ಕಂತಹ ಅದರ ಕಾರ್ಯಕ್ಷೇತ್ರವನ್ನು ಸ್ಪಷ್ಟಪಡಿಸಲಿಲ್ಲ. ಇಂದು ಸರ್ಕಾರದವರು ಕೂಡ ಈ ನಿರ್ಣಯದಲ್ಲಿ ಅಡಕವಾಗಿರುವ ತತ್ವಗಳನ್ನು ಒಪ್ಪಿಕೊಂಡಿರಬೇಕಾದರೆ, ಈ ನಿರ್ಣಯವನ್ನು ಮಂಜೂರು ಮಾಡಿ ಒಪ್ಪಿಕೊಳ್ಳುವುದರಲ್ಲಿ ಏನು ಅಭ್ಯಂತರ ಇದೆ ? ಇದು ಒಳ್ಳೆಯ ನಿರ್ಣಯವೆಂದೂ ಹೇಳಿದ್ದಾರೆ; ಈ ರೀತಿಯ ಸಮಿತಿಯ ಅಗತ್ಯತೆ ಇದೆ ಎಂಬುದನ್ನೂ ಒಪ್ಪಿದ್ದಾರೆ. ಆದ್ದರಿಂದ ಇದನ್ನು ಒಪ್ಪಿಕೊಳ್ಳುವುದರಲ್ಲಿ ಅಡ್ಡಿ ಏನು ?

ಶ್ರೀ ತೇಜ್‌ಸಿಂಗ್ ರಾತೋಡ್.—ನೀವು ಶೆಡ್ಯೂಲ್ಡ್ ಕ್ಯಾಸ್ಟ್ ಶೆಡ್ಯೂಲ್ ಟ್ರೈಬ್ಸ್ ಎಂದು ತಂದಿದ್ದೀರಿ. ಅವರಲ್ಲಿ ಡಿನೋಟಿಫೈಡ್ ಟ್ರೈಬ್ಸ್ ಸೇರುತ್ತಾರೆಯೇ ? ಅವರೂ ಅದರಲ್ಲಿ ಸೇರಿದರೆ ಒಳ್ಳೆಯದು.

---

* * * * Matter expunged as ordered by the Chair.

ಶ್ರೀ ಎ. ಕೆ. ಸುಬ್ಬಯ್ಯ.—ನಮ್ಮ ರಾಜ್ಯದಲ್ಲಿ ಹರಿಜನ ಅಂದರೆ, ಹಿಂದುಳಿದ ಎಲ್ಲಾ ಪಂಗಡದವರೂ ಸೇರುತ್ತಾರೆ. ನಮ್ಮ ರಾಜ್ಯದ ಹೈಕೋರ್ಟಿನವರೂ ಅದನ್ನು ಹಾಗೆ ಹೇಳಿದ್ದಾರೆ. ಹೈಕೋರ್ಟಿನವರು ಹೇಳಿದಮೇಲೆ, ಅದರಲ್ಲಿ ಹಿಂದುಳಿದ ಪಂಗಡವೂ ಬರುತ್ತದೆ. ಆ ದೃಷ್ಟಿಯಿಂದ ನಾನು ಎಲ್ಲಾ ಪಂಗಡಗಳವರು ಅದರಲ್ಲಿ ಸೇರುತ್ತಾರೆಂದು ತಿಳಿದುಕೊಂಡು, ಆ ರೀತಿಯ ಪದವನ್ನು ಉಪಯೋಗಿಸಿಕೊಂಡು ನಿರ್ಣಯ ಕಳಿಸಿದ್ದೇನೆ. ಟರ್ಮ್ಸ್ ಆಫ್ ರೆಫರೆನ್ಸ್ ಆ ಕಮಿಟಿಗೆ ಯಾವ ರೀತಿ ಇದೆಯೆಂಬುದು ನಿರ್ಣಯವಾಗಿಲ್ಲ. ಈ ನಿರ್ಣಯ ಒಪ್ಪಿಕೊಳ್ಳುವುದರಲ್ಲಿ ಯಾವ ರೀತಿಯ ಅಭ್ಯಂತರವೂ ಇಲ್ಲ. ಆದ್ದರಿಂದ ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ನಿರ್ಣಯವನ್ನು ಎಲ್ಲರೂ ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ, ಸರ್ಕಾರದವರೂ ಕೂಡ ಒಪ್ಪಿಕೊಂಡಿದ್ದಾರೆ; ತಾವೆಲ್ಲರೂ ಒಪ್ಪಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

Mr. DEPUTY CHAIRMAN.—The question is:

"That this House is of the opinion that a State Level Committee be constituted consisting of Legislators and other men of public life to examine and report as to how the benefits made available to Harijans and Girijans in the State have been utilised since independence and the net result achieved thereon."

The Resolution was negatived.

(ii) *re*: Encouraging Theatre Art in the State and providing funds in the State Budget

Smt. M. R. LAKSHAMMA (Graduates' Constituency).—I beg to move:

"That this Council recommends to Government that with a view to encouraging theatre arts including feature plays, opera, etc., a sum of at least Rs. 5 lakhs be provided in the State Budget every year for giving a subsidy of Rs. 50,000 for deserving plays by professional companies and institutions and instituting a prize of Rs 50,000 each for the best three plays of the year."

Mr. DEPUTY CHAIRMAN.—Resolution moved:

"That this Council recommends to Government that with a view to encouraging theatre arts including feature plays, opera, etc., a sum of at least Rs. 5 lakhs be provided in the State Budget every year for giving a subsidy of Rs. 50,000 for deserving plays by professional companies and institutions and instituting a prize of Rs. 50,000 each for the best three plays of the year."

† ಶ್ರೀಮತಿ ಎಂ. ಆರ್. ಲಕ್ಷಮ್ಮ.—ಮಾನ್ಯ ಸಭಾಪತಿಗಳೇ, ಈ ಒಂದು ನಿರ್ಣಯದ ಬಗ್ಗೆ ಯಾರಿಗೂ ಅನುಮಾನ ಬರಬೇಕಾದ್ದಿಲ್ಲ. ಕನ್ನಡ ರಾಜ್ಯದಲ್ಲಿ ಕನ್ನಡ ನಾಟಕಗಳಿಗೆ ಕನ್ನಡ ನಾಟಕ ಕಂಪನಿಗಳಿಗೆ ಮಾತ್ರ ಉತ್ತೇಜನ ಕೊಡಬೇಕು. ಈ ದೃಷ್ಟಿಯಿಂದ ನಾನು ಇಲ್ಲಿ ನಿರ್ಣಯವನ್ನು ತಂದಿದ್ದೇನೆ. ಆಂಗ್ಲಭಾಷೆಯ ನಾಟಕಕ್ಕಾಗಲೀ, ಅಥವಾ ಮತ್ತೆ ಯಾವುದೇ ಭಾಷೆಯ ನಾಟಕಕ್ಕಾಗಲೀ ಉತ್ತೇಜನವನ್ನು ಕೊಡುವುದಕ್ಕಾಗಿ ನಾನು ಈ ನಿರ್ಣಯವನ್ನು ಈ ಸಭೆಯ ಮುಂದೆ

ತಂದಿಲ್ಲ ಎಂದು ಸ್ಪಷ್ಟಪಡಿಸಿ ಈ ನಿರ್ಣಯದ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ. ಷೇಕ್ಸ್‌ಪಿಯರ್ ಎಂಬ ಕವಿಯು ಇಡೀ ಪ್ರಪಂಚವೇ ಒಂದು ನಾಟಕ ಮಂದಿರ ವಾಗಿ ಜನತೆಯೇ ಪ್ರೇಕ್ಷಕರು ಮತ್ತು ಪಾತ್ರವಹಿಸುವವರು ಆಗಿದ್ದಾರೆ ಎಂದು ಹೇಳಿದ್ದಾನೆ. ಪ್ರತಿಯೊಬ್ಬ ಮಾನವನೂ ಈಗಿನ ಮಹಾ ನಾಟಕದಲ್ಲಿ ಭಾಗಿಯಾಗಿದ್ದಾನೆ. ಇದು ತಪ್ಪು ಭಾವನೆ ಯಲ್ಲ. ಈ ಒಂದು ವಿಶಾಲ ವ್ಯಾಪ್ತಿಯ ಭಾವನೆಯಿಂದ ರಂಗಮಂಟಪಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡುವುದಾದರೆ ಈ ನಾಟಕ ಕಲೆ ಏನಿದೆ ಇದರಲ್ಲಿ ಮನುಷ್ಯನ ಪ್ರತಿಯೊಂದು ಭಾವನೆ ಗಳನ್ನೂ ಪ್ರತಿಬಿಂಬಿಸುತ್ತದೆ. ನಾಟಕ ಕಲೆ ಎಲ್ಲಾ ಭಾವನೆಗಳಿಂದ ಎಲ್ಲಾ ರಸಗಳಿಂದ ಎಂದರೆ ಶೃಂಗಾರ ರಸ, ಭೀಭತ್ಸ, ಕರುಣ, ರೌದ್ರರಸ, ಹಾಸ್ಯ ರಸ ಇತ್ಯಾದಿ ನವರಸಗಳಿಂದ ಕೂಡಿರುತ್ತದೆ. ಈ ದೃಶ್ಯ ಭಾವನೆಗಳ ಒಳತೋಟವನ್ನು ಮನನೀಯವಾಗಿ ಪ್ರತಿಬಿಂಬಿಸಬಲ್ಲ ನಟ ಅದನ್ನು ನಿಜಕ್ಕೂ ಹೆಚ್ಚಿನ ಮಾಯೆಯಿಂದ ರೂಪಿಸಬಲ್ಲ. ಈ ನಾಟಕಗಳು ಜನರ ಮನೋರಂಜನೆಗಾಗಿ ಜನರ ಜೀವ ನಕ್ಕೆ ಉಪಯುಕ್ತವಾಗಿದೆ. ಅತ್ಯುನ್ನತ ಮಟ್ಟದ ನಾಟಕ ಕಲೆಗೆ ಸಂಬಂಧಪಟ್ಟಹಾಗೆ ನಮ್ಮ ದೇಶ ದಲ್ಲಿ ಹಾಗೂ ನಮ್ಮ ರಾಷ್ಟ್ರದಲ್ಲಿ ಪಾತ್ರಭಾಷೆಯಲ್ಲಿ, ಅಥವಾ ತಾಯ್ನುಡಿಯಲ್ಲಿ ಉಚ್ಚಮಟ್ಟದ ನಾಟಕಗಳನ್ನು ಬರೆದಿದ್ದಾರೆ, ಅವುಗಳನ್ನು ಆಡಿ ಹರಡಿರುವಂತಹ ಇತಿಹಾಸಗಳು ನಮ್ಮಲ್ಲಿ ಇವೆ. ಶೃಂಗಾರ ರಸಕ್ಕೆ ಪ್ರಧಾನವಾದ ಕಾಳಿದಾಸನು ಶಾಕುಂತಲ, ವೇಣಿ ಸಂಹಾರ, ಮಾಳವಿಕಾಗ್ನಿ ಮಿತ್ರ ಎಂಬ ಮೂರು ನಾಟಕಗಳನ್ನು ಬರೆದಿದ್ದಾನೆ. ಶ್ರೀಹರ್ಷನು ರಾಜಕೀಯ ಪ್ರಧಾನವಾದ ನಾಗಾನಂದ, ರತ್ನಾವಳಿ, ಪ್ರಿಯದರ್ಶಿನಿ, ಮುದ್ರಾರಾಕ್ಷಸ ಎನ್ನುವ ನಾಟಕಗಳನ್ನೂ ಬರೆದಿದ್ದಾನೆ ಹೀಗೆ ಅನೇಕ ಕವಿಗಳು ನಮ್ಮ ದೇಶದಲ್ಲಿ ಬಹಳ ಉನ್ನತ ಮಟ್ಟದ ನಾಟಕಗಳನ್ನು ಬರೆದಿದ್ದಾರೆ. ಅವುಗಳನ್ನು ಆಡುವಂತಹ ಪ್ರಯತ್ನಗಳು ನಮ್ಮ ದೇಶದಲ್ಲಿ ನಡೆದಿವೆ. ನಾಟಕದ ಒಟ್ಟು ಪರಿಣಾಮ ವನ್ನು ನೋಡಿದವರು ಸಂಸ್ಕೃತದಲ್ಲಿ ಕಾವ್ಯೇಷು ನಾಟಕಂ ರಮ್ಯಂ ರಸೋಪ್ಯೈನಃ ಎಲ್ಲಾ ಕಾವ್ಯ ಗಳಲ್ಲಿಯೂ ನಾಟಕವೇ ಪರಮೋತ್ಕೃಷ್ಟವಾದುದು ಎಂದು ಹೇಳಿದ್ದಾರೆ. ಈಗ ಸಂಸ್ಕೃತ ನಾಟಕ ಗಳನ್ನು ತೆಗೆದುಕೊಂಡರೆ ಅಲ್ಲಿ ಬರತಕ್ಕಂಥ ಕೆಲವೊಂದು ದೃಶ್ಯಗಳನ್ನು ನೋಡಿದರೆ ಅವುಗಳನ್ನು ಯಾರೂ ಮನನ ಮಾಡಿಕೊಳ್ಳದೇ ಇರಲಾರರು. ಇದರಲ್ಲಿ ಶಾಕುಂತಳ ನಾಟಕವನ್ನು ನೋಡಿದರೆ ಅದು ನವರಸಭರಿತವಾಗಿದೆ. ಕಣ್ವ ಮಹರ್ಷಿಗಳು ತಮ್ಮ ಮಗಳಾದ ಶಕುಂತಳೆಯನ್ನು ತಮ್ಮ ಆಶ್ರಮದಿಂದ ತಮ್ಮ ಅಳಿಯನಾದ ದುಷ್ಯಂತನ ಮನೆಗೆ ಎಂದರೆ ಗಂಡನ ಮನೆಗೆ ಕಳುಹಿಸುವಂತಹ ಸಂದರ್ಭದಲ್ಲಿ ಅವರು ಎಷ್ಟು ಮನನೊಂದುಕೊಳ್ಳುತ್ತಾರೆ ಅದು ಬಹಳ ಮನನೀಯವಾದ ದೃಶ್ಯ. ಯಾವ ಕಾಲಕ್ಕೂ ಮನಸ್ಸಿನಲ್ಲಿ ನಿಲ್ಲುವಂತಹ ದೃಶ್ಯ. ಈ ಒಂದು ನಾಟಕವನ್ನು ನೋಡಿದರೆ ಅದು ಎಷ್ಟು ನಿತ್ಯನೂತನವಾಗಿದೆ ಎಂಬುದು ಗೊತ್ತಾಗುತ್ತದೆ. ಶಕುಂತಳೆಯು ಸಖಿಯರೊಡನೆ ಸರೋವರಕ್ಕೆ ನೀರು ಕುಡಿಯುವುದಕ್ಕೆ ಹೋದಾಗ ಆಕೆಯ ಉಂಗುರ ಹೇಗೋ ಆಕಸ್ಮಿಕವಾಗಿ ಕಳಚಿ ಸರೋವರಕ್ಕೆ ಬಿದ್ದಾಗ ಅದನ್ನು ಮೀನು ನುಂಗುತ್ತದೆ. ಆ ಮೀನು ಒಬ್ಬ ಜಾನುಕನೆಂಬ ಬೆಸ್ತನ ಕೈಗೆ ಸಿಕ್ಕಿ ಆ ಮೀನಿನ ಹೊಟ್ಟೆಯಲ್ಲಿ ಇದ್ದಂತಹ ಶಕುಂತಳೆಯ ಉಂಗುರವು ಬೆಸ್ತನಿಗೆ ಸಿಕ್ಕುತ್ತದೆ. ಆ ಬೆಸ್ತನು ಶಕುಂತಳೆಯ ಉಂಗುರವನ್ನು ಮಾರಾಟ ಮಾಡುವುದಕ್ಕೆ ಹೋದಾಗ ಅವನನ್ನು ಅರಮನೆಯ ಕಾವಲುಗಾರರು ಅರಮನೆ ಅಧಿಕಾರಿಯಾದ ಶಾಲಕನಿಗೆ ಒಪ್ಪಿಸುತ್ತಾರೆ. ಶಾಲಕನು ಬೆಸ್ತ ಜಾನಕನನ್ನು ಬೆದರಿಸುತ್ತಾನೆ. ನಂತರ ಆ ಬೆಸ್ತನನ್ನು ಉಂಗುರ ಸಮೇತ ದುಷ್ಯಂತ ಮಹಾರಾಜನ ಹತ್ತಿರ ಕರೆದುಕೊಂಡು ಹೋಗಿ ಒಪ್ಪಿಸಿದಾಗ ಆ ಉಂಗುರವನ್ನು ನೋಡಿದ ದೊರೆಗೆ ಶಾಪವಿಮೋಚನೆಯಾಗಿ ಶಕುಂತಳೆಯ ಜ್ಞಾಪಕ ಬರುತ್ತದೆ. ಆಗ ದೊರೆಯು ಸಂತೋಷಗೊಂಡು ಉಂಗುರವನ್ನು ತಂದಿದ್ದ ಜಾನುಕ ಬೆಸ್ತನಿಗೆ ಬಹುಮಾನವನ್ನು ಕೊಡುತ್ತಾನೆ.

ಶ್ರೀ ಎ. ಕೆ. ಸುಬ್ಬಯ್ಯ.—ಸ್ವಾಮಿ, ನಾನೊಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಮಾನ್ಯ ಸದಸ್ಯರು ಮಾತನಾಡುವುದಕ್ಕೂ, ಈಗ ಈ ಸಭೆಯಲ್ಲಿ ಚರ್ಚೆಯಾಗುತ್ತಿರುವ ನಿರ್ಣಯಕ್ಕೂ ಏನು ಸಂಬಂಧ ಇದೆ? ಮಾನ್ಯ ಸದಸ್ಯರು ಏನೇನೋ ಪುರಾಣವನ್ನು ಹೇಳುವುದಕ್ಕೆ ಹೊರಟಿದ್ದಾರೆ.

ಉಪಸಭಾಪತಿಯವರು.—ಮಾನ್ಯ ಸದಸ್ಯರು ನಿರ್ಣಯಕ್ಕೆ ಸಂಬಂಧಪಟ್ಟಹಾಗೆ ನಾಟಕ ಕಲೆಗೆ ಪ್ರೋತ್ಸಾಹ ಕೊಡಬೇಕೆಂಬ ಬಗ್ಗೆ ಹೇಳಿದರೆ ಒಳ್ಳೆಯದು.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಒಂದೇ ವಾಕ್ಯದಲ್ಲಿ ನಾಟಕ ಕಲೆಗೆ ಪ್ರೋತ್ಸಾಹವನ್ನು ಕೊಡಬೇಕು ಎಂದು ಹೇಳುವುದಕ್ಕಿಂತ ಅದರ ಹಿನ್ನೆಲೆಯನ್ನು ವಿವರಿಸಿ ಹೇಳುವುದು ಒಳ್ಳೆಯದು ಆದ್ದರಿಂದ ಹಿನ್ನೆಲೆಯ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ. ನಿತ್ಯನೂತನವಾದ

*****Matter expunged as ordered by the Chair.

(ಶ್ರೀಮತಿ ಎಂ. ಆರ್. ಲಕ್ಷಮ್ಮ)

ಉತ್ತಮ ನಾಟಕಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಸರ್ಕಾರದವರು ಕೊಡಬೇಕಾಗುತ್ತದೆ. ಅದೇನು ದುರ್ದೈವವೋ ಗೊತ್ತಿಲ್ಲ, ಭಾರತದಲ್ಲಿ ಕನ್ನಡ ನಾಡಿನಲ್ಲಿ ನಾಟಕ ಕಲೆಗೆ ಶ್ರೀಮಂತ ಪರಂಪರೆ ಇದ್ದರೂ ಕನ್ನಡದಲ್ಲಿ ನಾಟಕಗಳು ಅಷ್ಟಾಗಿ ಬೆಳೆದು ಬಂದಿಲ್ಲ. ಇದಕ್ಕೂ ಮುಂಚೆ ಕನ್ನಡ ನಾಡಿನಲ್ಲಿ ನಾಟಕ ಪ್ರಯೋಗಗಳು ಆರಂಭವಾಗಿದ್ದರೂ ಕೂಡ ಸಾಧಾರಣವಾಗಿ ಯಕ್ಷಗಾನ, ಬಯಲು ಆಟ ಮತ್ತು ದೇಶೀಯ ನಾಟಕಗಳನ್ನು ಆಡುತ್ತಿದ್ದರೂ ಕೂಡ ಕಂಪನಿಗಳು ಯಾವುದೇ ಪ್ರಯೋಗರೂಪವಾದ ನಾಟಕಗಳನ್ನು ಹೆಚ್ಚಿಗೆ ಆಡುತ್ತಾ ಇರಲಿಲ್ಲ. ಅದು ಇತ್ತೀಚೆಗೆ ಬೆಳೆದು ಬರಲಿಲ್ಲ. 17ನೇ ಶತಮಾನದಲ್ಲಿ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಒಬ್ಬರು ಮಿತ್ರವಿಂದಾಗೋವಿಂದಾ ಎಂಬ ಆಸ್ಥಾನ ಕವಿ ಸಿಂಗರಾಚಾರ್ಯ ಎನ್ನುವರು ಒಂದು ನಾಟಕವನ್ನು ಬರೆದಿದ್ದಾರೆ. ಅದು ಕನ್ನಡ ಭಾಷೆಯಲ್ಲಿ ಕನ್ನಡಕ್ಕೆ ಮೊದಲ ಕಾಣಿಕೆ. ಪ್ರಯೋಗಗಳು ಯಾವ ರೀತಿ ಆಯಿತು ಎಂಬುದನ್ನು ನಾನು ಮೊದಲು ಹೇಳಿ ನಂತರ ಕಂಪನಿಗಳು ಯಾವ ರೀತಿ ಹುಟ್ಟಿದವು ಎಂಬುದನ್ನು ಹೇಳುತ್ತೇನೆ. ಮೊದಮೊದಲು ಬಯಲಾಟ ಮತ್ತು ಯಕ್ಷಗಾನಗಳು ಪ್ರಾರಂಭವಾದವು. ಇವುಗಳಿಗೆ ಮುಮ್ಮಡಿಕೃಷ್ಣರಾಜ ಒಡೆಯರ ಕಾಲದಲ್ಲಿ ತುಂಬ ಪ್ರೋತ್ಸಾಹ ಸಿಕ್ಕಿತು. ನಂತರ ಮಂಗಳೂರಿನವರು ದಶಾವತಾರ ಎಂಬ ನಾಟಕವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ ಸಮ್ಮುಖದಲ್ಲಿ ಅರಮನೆಯಲ್ಲಿ ಆಡಿದರಂತೆ. ನಂತರ ದ್ರೌಪತಿ ಸ್ವಯಂವರ ಎಂಬ ನಾಟಕವನ್ನು ಆಡಿದರು. ಈ ರೀತಿ ನಾಟಕಗಳಿಗೆ ಒಂದು ಹೊಸ ರೂಪ ಬಂದಿತು. ಚಾಮರಾಜ ಒಡೆಯರ ಕಾಲದಲ್ಲಿ ಒಳ್ಳೆಯ ನಾಟಕ ಕಂಪನಿಗಳು ಪ್ರಾರಂಭವಾದವು. ಯಳಂದೂರು ಕಂಪನಿ ಎಂಬುದು ಹೊಸದಾಗಿ ಪ್ರಾರಂಭವಾಯಿತು. ಈ ಬಗೆಯ ನಾಟಕಗಳು ಜನರಿಗೆ ಮನರಂಜನೆಯನ್ನು ಒದಗಿಸಿದವು. ಜನರಿಗೆ ನಾಟಕದ ಅರ್ಥ ಏನು ಎಂಬುದು ತಿಳಿಯಿತು. ಮತ್ತು ನಾಟಕದ ಸವಿಯನ್ನು ಸವಿಯಬೇಕು ಎಂಬ ಅಭಿರುಚಿ ಜನರಲ್ಲಿ ಹುಟ್ಟಿತು. ಇದೇ ಕಾಲಕ್ಕೆ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ ಎಂಬ ಕಂಪನಿಯು ಪ್ರಾರಂಭವಾಯಿತು. ಆಸ್ಥಾನಕವಿಗಳಾದ ಶ್ರೀ ಬಸಪ್ಪಶಾಸ್ತ್ರಿಗಳು ಶಾಕುಂತಲ ನಾಟಕವನ್ನು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದ ಮಾಡಿದರು. ಕನ್ನಡದಲ್ಲಿ ಶಾಕುಂತಲ ಅದ್ವಿತೀಯ ರೀತಿಯಲ್ಲಿ ಅವತರಿಸಿದರು ಎಂದು ಹೇಳಬಹುದು. ಆಗಿನ ಕಾಲದಲ್ಲಿ ಮೈಕ್ ಇರಲಿಲ್ಲ. ನಾಟಕದಲ್ಲಿ ಪಾರ್ಟ್ ಮಾಡುವವರಿಗೆ ಶಾರೀರಕ ಸಂಪತ್ತು ಚೆನ್ನಾಗಿ ಇರಬೇಕಾಗಿತ್ತು. ಚುಂಜೋತಿ ರಂಗಾಚಾರ್ಯ ಎಂಬ ಕಲಾವಿದರು ಆಗ ಇದ್ದರಂತೆ. ಅವರು ಕಲಾಶೇಖರ, ಕಲಾವಂಶ ಎಂಬ ಹೆಸರನ್ನು ಪಡೆದಿದ್ದರು. ಗಾನದೇವಿಯೂ ಕೂಡ ಭಲೆ ಎನ್ನುವ ರೀತಿಯಲ್ಲಿ ಒಳ್ಳೆಯ ಶಾರೀರವನ್ನು ಪಡೆದಿದ್ದರಂತೆ. ಅದಕ್ಕೆ ತಕ್ಕ ಸಂಗೀತ ಪ್ರೌಢಿಮೆ ಇತ್ತು. ಮೈಸೂರಿನ ಸಂತೇಪೇಟೆಯಲ್ಲಿ ನಾಟಕವಾಡಲು ಚಪ್ಪರ ಹಾಕಿದ್ದರೆ ಅಲ್ಲಿ ಇವರು ಹಾಡಿದ ಹಾಡು ಅರ್ಧ ಮೈಲಿಯವರೆಗೂ ಸಹ ಕೇಳಿಸುತ್ತಿತ್ತು ಎಂದು ಪ್ರತೀತಿ. ಇಂಥ ನಟರು ಅವತರಿಸಿ ಜನರ ಮನಸ್ಸನ್ನು ಈ ಕಲೆಯ ದಿಶೆಗೆ ಸೆಳೆಯತೊಡಗಿದರು. ನಾಟಕವು ಸಾಮಾನ್ಯ ಜನತೆಗೂ ಸಹ ಎಟುಕುವ ರೀತಿಯ ವಿಲಾಸ ವಸ್ತುವಾಯಿತು. ಮತ್ತು ಪ್ರಿಯವಾಯಿತು.

1907ರಲ್ಲಿ ವರದಾಚಾರ್ಯರ ರತ್ನಾವಳಿ ಎಂಬ ಕಂಪನಿ ಪ್ರಾರಂಭವಾಯಿತು. ರತ್ನಾವಳಿ ಎಂಬ ನಾಟಕಕ್ಕೆ ಒಳ್ಳೆಯ ದೆಸೆ ಬಂದಿತು. ಮತ್ತು ಹೆಸರು ಪಡೆಯಿತು. ಅದೇ ಕಂಪನಿಯವರು ಗುಲೇಬಕಾವಲಿ, ಕಲಾವತಿ, ಪ್ರಭಾವತಿ ಪರಿಣಯ ಮತ್ತು ನಿರುಪಮಾ ಎಂಬ ನಾಟಕಗಳನ್ನು ಆಡತೊಡಗಿದರು. ವರದಾಚಾರ್ಯರು ನಾಟಕದ ಇತಿಹಾಸದ ಒಂದು ಹೊಸ ಅಧ್ಯಾಯಕ್ಕೆ ಒಂದು ಹೊಸ ಹೆಸರನ್ನು ಕೊಡುವಷ್ಟರಮಟ್ಟಿಗೆ ಉನ್ನತನಾಯಕರಾಗಿದ್ದರು. ಮತ್ತು ನಾಟಕದ ಯುಗ ಪುರುಷರಾಗಿದ್ದರು. ಇವರ ನಾಟಕವನ್ನು ಕವಿ ರವೀಂದ್ರರೂ ಸಹ ಮೆಚ್ಚಿದ್ದರಂತೆ. ಇವರಿಗೆ ಒಳ್ಳೆಯ ಮಧುರವಾದ ಕಂಠ ಇತ್ತು. ಒಳ್ಳೆಯ ಗಾನ ಕಲಾಪ್ರೌಢಿಮೆ ಇತ್ತು. ಬಲಿಷ್ಠವಾದ ಕಂಠದಿಂದ ಅವರು ಕಂದವೃತ್ತವನ್ನು ಹಾಡತೊಡಗಿದರೆ ಜನ ಮೈಮರೆತು ಕೇಳುತ್ತಿದ್ದರು. ರಂಗಮಂದಿರ ಎಷ್ಟು ಪ್ರಧಾನವೋ ರಂಗಸಜ್ಜಿಕೆಯು ಅಷ್ಟೇ ಪ್ರಧಾನವಾದ ಒಂದು ಅಂಗವಷ್ಟೆ. ವರದಾಚಾರ್ಯರು ರಂಗಸಜ್ಜಿಕೆಯಲ್ಲಿ ಒಂದು ಹೊಸ ಕ್ರಾಂತಿಯನ್ನೇ ಉಂಟುಮಾಡಿದರು. ಹಿರಣ್ಯಕಶಿಪು ಪಂಚೆಯುಟ್ಟು ಬರುವಂತೆ ದೃಶ್ಯವನ್ನು ಮಾರ್ಪಾಡು ಮಾಡಿದರು. ಅಂದರೆ ದೇಶೀಯ ಉಡುಪು ಉಪಯೋಗ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಇವತ್ತಿನದಿವಸ ನಮ್ಮ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ವೆಂಕಾಜಿರಾವ್ ಅವರ ಬಂಧು ಶ್ರೀ ಕೃಷ್ಣಮೂರ್ತಿ ಮತ್ತು ಶ್ರೀ ಜಯರಾವ್ ಅವರುಗಳು ಅನೇಕ ವಿಧವಾದ ಪಾತ್ರಗಳನ್ನು ನಾಟಕದಲ್ಲಿ ವಹಿಸುತ್ತಿದ್ದರು.

ಒಳ್ಳೆಯ ಹೆಸರಾಂತ ನಾಟಕ ಕಾಲವದು. ಬರಬರುತ್ತಾ "ಸಾಹಿತಿಗಳ ಸಮಾರಾಧನ, ಸಂಗೀತಗಾರರ ಹಬ್ಬದೂಟ, ಪಾಮರರ ರಸಕವಳದಂತೆ" ನಾಟಕಗಳು ಪರಿಣಾಮಗೊಂಡು ನಾಲ್ಕಾಣೆಯ ಪ್ರಭುವಿನಿಂದ ಹಿಡಿದು ಎಲ್ಲರೂ ಕೂಡ ನಾಟಕಗಳನ್ನು ಇಷ್ಟದಿಂದ ನೋಡುವಂತಾಯಿತು. ಎಲ್ಲರೂ ಅದರಿಂದ ಪ್ರಭಾವಿತರಾದರು. ಮೊದಲು ಉತ್ತರ ಕರ್ಣಾಟಕದಲ್ಲಿ ನಾಟಕ ಕಂಪನಿ ಇರಲಿಲ್ಲ. ನಂತರ ಧಾರವಾಡದ ಶೇಷಗಿರಿರಾಯರು ಕನ್ನಡದಲ್ಲಿ ಶಾಕುಂತಲ ನಾಟಕವನ್ನು ಬರೆದರು. ಇವರಿಂದ ಮಹಾರಾಷ್ಟ್ರದ ಅಣ್ಣಾಸಾಹೇಬರು ಪ್ರಚೋದನೆ ಪಡೆದರೆಂದು ಹೇಳಲಾಗಿದೆ. ಇದೇ ಕಾಲಕ್ಕೆ ಸಿರಹಟ್ಟಿ ಎಂಬ ಕಂಪನಿ ಪ್ರಾರಂಭವಾಯಿತು. ಈ ಕಂಪನಿಯವರು ಒಳ್ಳೆಯ ನಾಟಕಗಳನ್ನು ಆಡಿದರು. ಮತ್ತು ಇಡೀ ಕರ್ನಾಟಕದಲ್ಲಿಯೇ ಈ ಕಂಪನಿ ಪ್ರಖ್ಯಾತಿ ಪಡೆಯಿತು. ಜನಾದರಣೆ ಪಡೆಯಿತು. ಇದೆಲ್ಲಾ ಒಂದು ಹಂತವಾಯಿತೆಂದರೆ ಇದರ ನಂತರ ಪಾಶ್ಚಿಮಾತ್ಯ ಸಂಸ್ಕೃತಿಯಿಂದ ಪ್ರಭಾವಿತರಾದಂಥ ಕೆಲವು ಅಮೆಚೂರ್ ನಾಟಕ ಕಂಪನಿಗಳು ಪ್ರಾರಂಭವಾದವು. ಮತ್ತು ನಾಟಕ ಕಂಪನಿಗಳಿಗೆ ಮತ್ತೊಂದು ಹೊಸ ರೂಪು ಬಂದಿತು. ಬಳ್ಳಾರಿಯ ರಾಘವಾಚಾರ್ಯರು ಸಹ ಒಳ್ಳೆಯ ಉನ್ನತ ಮಟ್ಟದ ನಟರೆಂದು ಹೆಸರನ್ನು ಪಡೆದಿದ್ದರು. ಇವರು ಐತಿಹಾಸಿಕ ನಾಟಕಗಳಾದ ಶಿವಾಜಿ, ರಾಮದಾಸ್, ವಿಜಯನಗರ ಮುಂತಾದ ನಾಟಕಗಳನ್ನು ಆಡಿದರು. ಈ ಮೂಲಕ ಅಭಿನಂದನೀಯ ಅಮೆಚೂರ್ ನಾಟಕಗಳ ಪರಂಪರೆ ಆರಂಭಗೊಂಡಿತು. ಇವರು ಆಡಿದ ಐತಿಹಾಸಿಕ ನಾಟಕಗಳನ್ನು ಮುಂದೆ ಯಾವ ಕಂಪನಿಯವರೂ ಸಹ ಯಾಕೋ ಆಡಲಿಲ್ಲ. ಇದೇ ಕಂಪನಿಯವರು ಮುಂದೆ ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದವರು ಪಾಲುಗೊಂಡು ಗರುಡ ಸದಾಶಿವರಾಯರು ಬರೆದ ಎಚ್ಚಮ್ಮನಾಯಕ ಎಂಬ ನಾಟಕವನ್ನು ಆಡಿದರು. ಅಮೆಚೂರ್ ಬಳಗದಿಂದಾಗಿ ನಾಟಕದ ನೂತನ ಯುಗ ಪ್ರಾರಂಭವಾಯಿತು. 1930ರ ಸಮಯದಲ್ಲಿ ಚಾಮುಂಡೇಶ್ವರಿ ನಾಟಕ ಸಭಾ ಎಂಬ ಕಂಪನಿ ಪ್ರಾರಂಭವಾಯಿತು. ಇದರಲ್ಲಿ ಹೊಸ ಹೊಸ ಸೀನರಿಗಳನ್ನು ಉಪಯೋಗ ಮಾಡಿದರು. ನಾಗೇಂದ್ರರಾಯರು ದ್ರೌಪತಿ ಪಾತ್ರವನ್ನು ಎಷ್ಟರಮಟ್ಟಿಗೆ ವಹಿಸುತ್ತಿದ್ದರೆಂದರೆ ಇವರು ಗಂಡಸು ಎಂಬ ಗುರುತು ಯಾರಿಗೂ ಹತ್ತುತ್ತಿದ್ದಿಲ್ಲ. ಅಂದರೆ ಹುಡುಗಿಯರಿಗೂ ಸಹ ಮೇಲೆನಿಸುವ ರೀತಿಯಲ್ಲಿ ಪಾತ್ರ ವಹಿಸುತ್ತಿದ್ದರು. ಅವರ ಕಂಠ ಅಷ್ಟೇ ಮಾರ್ದವವಾಗಿತ್ತು. 1921ರ ಸಮಯದಲ್ಲಿ ಗುಬ್ಬಿ ಕಂಪನಿ ಪ್ರಾರಂಭವಾಯಿತು. ಮಹಾಜನರು ನಾಟಕಗಳ ಬಗ್ಗೆ ಒಳ್ಳೆಯ ಅಭಿರುಚಿಯನ್ನು ತಳೆದಿದ್ದರಿಂದ ಈ ಕಂಪನಿಯೂ ಮತ್ತು ಹೊಸ ಹೊಸ ನಾಟಕ ಕಂಪನಿಗಳು ಪ್ರಾರಂಭವಾಗುವುದಕ್ಕೆ ಅವಕಾಶವಾಯಿತು. ಮತ್ತು ನಾಟಕಗಳಿಗೆ ಒಳ್ಳೆಯ ಪ್ರೋತ್ಸಾಹ ಸಿಗುತ್ತಿತ್ತು. ಗುಬ್ಬಿವೀರಣ್ಣನವರ ನೇತೃತ್ವದಲ್ಲಿ ಗುಬ್ಬಿಕಂಪನಿ ಆರಂಭವಾಯಿತು. ಗುಬ್ಬಿವೀರಣ್ಣನವರು ನಾಟಕ ಕಂಪನಿಯ ನಿರ್ವಹಣೆಯ ವಿಷ–ಅಮೃತ ಎರಡನ್ನೂ ಪಡೆದು "ಕೊನೆಗೆ ಅಮೃತವನ್ನು ಸೇವಿಸಿ ಅಮರರಾಗಿದ್ದಾರೆ." ಸದಾರಮೆ ನಾಟಕದಲ್ಲಿ ವೀರಣ್ಣನವರು ಕಳ್ಳನ ಪಾತ್ರವನ್ನು ವಹಿಸಿ ಎಲ್ಲರನ್ನೂ ನಗೆಗಡಲಲ್ಲಿ ಮುಳುಗಿಸುತ್ತಿದ್ದರು. ನಗಿಸುವ ಕಲೆ, ಶಕ್ತಿ ಅವರಿಗೆ ದೈವದತ್ತವಾಗಿ ಬಂದಿದೆ.

ಇನ್ನು ಕೊಡಗಿನ ವಿಚಾರ. 1868ರಲ್ಲಿ ನಾಪೋಕ್ಲು ಸಮೀಪದ ಕಿರುಂತಾಡು ಗ್ರಾಮದಲ್ಲಿ ಹುಟ್ಟಿದ ಅಪ್ಪೆನರವಂತ ಕುಟುಂಬದ ಅಪ್ಪಚ್ಚು ಎಂಬುವರು ಕೆಲವಾರು ನಾಟಕಗಳನ್ನು ಸುಂದರವಾಗಿ ಬರೆದಿದ್ದಾರೆ. ಇವರೇ ಕೆಲವು ನಾಟಕಗಳಲ್ಲಿ ಪಾತ್ರ ವಹಿಸಿ ಕೀರ್ತಿಯನ್ನು ಸಹ ಪಡೆದರು. 1908ರ ಹೊತ್ತಿಗೆ ಒಳ್ಳೆಯ ನಟನೂ ಆದ. ಕೀರ್ತಿಯ ಜೊತೆಗೆ ಧನ ಮಾತ್ರ ಲಭಿಸಲಿಲ್ಲ. 1890ರ ಸುಮಾರಿನಲ್ಲಿ ತಿಪಟೂರಿನ ನಾಟಕ ಮಂಡಲಿಯವರು ಕೊಡಗಿಗೆ ಬಂದು ಮಡಕೇರಿಯ 'ಓಂಕಾರೇಶ್ವರ ದೇವಸ್ಥಾನದ ಬಳಿ ರಂಗಭೂಮಿಯನ್ನು ರಚಿಸಿ ಆಡಿದ್ದೇ ಕೊಡಗಿನ ಮೊಟ್ಟಮೊದಲು ನಾಟ್ಯ ಕಲಾ ಪ್ರದರ್ಶನ. ಇದು ಸುಧಾರಿತ ರೀತಿಯ ಮತ್ತು ಉನ್ನತಮಟ್ಟದ ಬಯಲಾಟವೆಂದರೂ ಕೂಡ ಸಲ್ಲುವುದು. ಈ ಮೂಲಕ ಕೊಡಗಿನ ಜನರಿಗೆ ನಾಟಕಗಳಲ್ಲಿ ಆಸಕ್ತಿ ಹುಟ್ಟಿತು. ಜನಪ್ರಿಯವಾಯಿತು. ಸಾವಿತ್ರಿ ಎಂಬ ನಾಟಕ ಮೊದಲು ಕನ್ನಡದಲ್ಲಿ ಇರಲಿಲ್ಲ. ಇದು ಕೊಡವ ಭಾಷೆಯಲ್ಲಿ ಇತ್ತು. ಇದನ್ನು ಈಗ ಕನ್ನಡಕ್ಕೆ ಭಾಷಾಂತರ ಮಾಡಲಾಗಿದೆ. ಈ ಕಂಪನಿಯ ನಾಟಕಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ಯಶಸ್ವಿಯಾದುವು.

ಇನ್ನು ನಾಟಕಗಳ ಬರವಣಿಗೆ. ಮೊದಮೊದಲು ಎಲ್ಲಾ ನಾಟಕಗಳೂ ಸಹ ಸಂಸ್ಕೃತದಲ್ಲಿ ಇದ್ದವು. ಬಸವಶಾಸ್ತ್ರಿಗಳು ಸಂಸ್ಕೃತದಿಂದ ಕನ್ನಡಕ್ಕೆ ಅನೇಕ ನಾಟಕಗಳನ್ನು ಭಾಷಾಂತರ ಮಾಡಿದ್ದಾರೆ. ಕನ್ನಡದಲ್ಲಿಯೇ ನಾಟಕಗಳನ್ನು ಬರೆದು ಆಡಬೇಕು, ಎಂಬುದನ್ನು ಆರಂಭಿಸಿದವರು ಶ್ರೀ ಬಿ. ಎಂ. ಶ್ರೀಕಂಠಯ್ಯನವರು. ಇವರು ಕನ್ನಡ ನಾಟಕದ ಬಗ್ಗೆ ಒಂದು ಹೊಸ ಕ್ರಾಂತಿ ಕಹಳೆಯನ್ನೇ ಎಬ್ಬಿಸಿದರು. ವೀರರಸವತ್ತಾದ ಕನ್ನಡ ನಾಟಕಗಳನ್ನು ಬರೆದರು.

(ಶ್ರೀಮತಿ ಎಂ. ಆರ್. ಲಕ್ಷಮ್ಮ)

ಏನೇ ಕಷ್ಟ ಬರಲಿ, ಏನೇ ತೊಂದರೆ ಬರಲಿ ಎಲ್ಲರೂ ಕನ್ನಡದಲ್ಲಿ ಬರೆದ ನಾಟಕಗಳನ್ನು ಆಡಬೇಕೆಂದು ಸಾರಿದರು. ಹಲವರು ಇಂಗ್ಲೀಷ್ ನಾಟಕಗಳನ್ನು ಭಾಷಾಂತರಿಸತೊಡಗಿದರು. ಶ್ರೀಕಂಠೇಗೌಡರು ಮ್ಯಾಕ್‌ಬತ್ ಎಂಬ ನಾಟಕವನ್ನೂ ಕನ್ನಡಕ್ಕೆ ಅನುವಾದ ಮಾಡಿದರು. ಪ್ರತಾಪರುದ್ರದೇವ ಎಂಬ ನಾಟಕವನ್ನೂ ಬರೆದರು. ಎಸ್. ಜಿ. ಶಾಸ್ತ್ರಿ ಎಂಬುವರ ಇಬ್‌ಸನ್ ನಾಟಕಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿದರು. ಈ ಮೂಲಕ ಕನ್ನಡದಲ್ಲಿ ಅನೇಕ ನಾಟಕಗಳನ್ನು ಭಾಷಾಂತರವಾದವು. ಕನ್ನಡದಲ್ಲಿಯೇ ಮೂಲವನ್ನು ಹುಡುಕಬೇಕೆಂಬ ಹಂಬಿಕೆ ಆರಂಭ ಮಾಡಿದವರು ಶ್ರೀ ಬಿ. ಎಂ. ಶ್ರೀಕಂಠಯ್ಯನವರು. ಆದರೆ ಮುಖ್ಯವಾಗಿ ಸುಖಾಂತವಾದ ನಾಟಕಗಳಾಗಬೇಕು ದುರಂತ ನಾಟಕಗಳಾಗಬಾರದು ಎಂದಿದ್ದ ಪದ್ಧತಿಯನ್ನು ಮಾರ್ಪಾಡು ಮಾಡಿದವರು ಎಂದರೆ ಬಿ. ಎಂ. ಶ್ರೀಯವರು. ಇವರು ಮಾಡಿದ ಒಂದು ಹೊಸ ಪ್ರಯೋಗದತ್ತವಾಗಿ ವೀರ ಶೋಕರಸ ಪ್ರಧಾನವಾದ ಗದಾಯುದ್ಧ, ಅಶ್ವತ್ಥಾಮ ಲಭಿಸಿದವು. ಇನ್ನು ಜನರ ರೀತಿನೀತಿಗಳು ಸಮಾಜದಲ್ಲಿರುವ ಕಟ್ಟುಪಾಡುಗಳು ಇವುಗಳಮೇಲೆ ಬೆಳಕು ಚೆಲ್ಲಿ ತಿದ್ದಬಲ್ಲ ವಿಧಾನದಲ್ಲಿ ಹಾಸ್ಯಕ್ಕೂ ಒಂದು ಸ್ಥಾನವಿದೆ ಎಂದು ಸಾಕ್ಷಾತ್ಕರಿಸಿ ಹಾಸ್ಯದ ತೆರೆಯ ಹಿನ್ನೆಲೆಯಲ್ಲಿ ಸಮಾಜದ ಕಟು ಸತ್ಯಕ್ಕೆ ಕನ್ನಡಿ ಹಿಡಿದವರು ಕರ್ಣಾಟಕದ ಹಾಸ್ಯ ಪ್ರಪಿತಾಮಹರಾದ ಶ್ರೀಮಾನ್ ಟಿ. ಪಿ. ಕೈಲಾಸಂರವರು. ಹಾಸ್ಯದಿಂದ ಸಮಾಜದ ರೀತಿ ನೀತಿಗಳನ್ನು ತಿದ್ದಬಹುದು ಎಂಬ ಅವರ ಎಣಿಕೆ ಸಾರ್ಥಕವಾಯಿತು. ಪೋಲೀ ಕಿಟ್ಟಿ ಅಮ್ಮಾವರ ಗಂಡ, ಎಂಬ ನಾಟಕಗಳನ್ನು ಅವರು ಬರೆದು ಅದನ್ನು ಅವರೇ ಸ್ವತಃ ಪಾತ್ರವಹಿಸಿ, ತೋರಿಸಿದರು. ಇದೇ ರೀತಿ ಅನೇಕ ಪ್ರಯೋಗಗಳನ್ನು ಮಾಡಿ ಯಶಸ್ವಿಯಾದರು.

ಹೀಗೆ ಏಕಾಂಕ ನಾಟಕಗಳು, ಪೌರಾಣಿಕ ನಾಟಕಗಳು, ಐತಿಹಾಸಿಕ ನಾಟಕಗಳು, ಸಾಮಾಜಿಕ ನಾಟಕಗಳು ನಾಟಕ ಕಲೆಯ ಸಂಪತ್ತನ್ನು ಅಭಿವೃದ್ಧಿ ಮಾಡಿದವು. ಈ ದಿಸೆಯಲ್ಲಿ ಆಧುನಿಕ ನಾಟಕ ಕೃತ್ಯಗಳನ್ನು ಈ ರೀತಿ ಇದರಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿದ ಕವಿ, ನಾಟಕಕಾರ ಎಂದರೆ ನಮ್ಮ ರಾಜ್ಯದ ಶ್ರೇಷ್ಠ ಸಾಹಿತಿ ಶ್ರೀ ಕುವೆಂಪುರವರು. ಇವರು ಒಂದು ಹೊಸದಾದ ಪ್ರಯೋಗವನ್ನು ಅವರು ಬರೆದಿರುವ ಜಲಗಾರ' 'ಬಲಿದಾನ' ಹಾಗೂ 'ನನ್ನ ಗೋಪಾಲ' ಇತ್ಯಾದಿ ನಾಟಕಗಳಲ್ಲಿ ನಾವು ಕಾಣಬಹುದು. ಇದರಲ್ಲಿ ಜನತೆಯ ಮೇಲೆ ಒಂದು ರೀತಿಯಾದ ದಿವ್ಯ ಪರಿಣಾಮವಾಗುವಂತೆ ಮಾಡಿದ್ದಾರೆ. ಬಲಿದಾನ ಎನ್ನುವ ನಾಟಕವನ್ನು ಆಡುವಾಗ ಒಂದು ರೀತಿಯಾಗಿ ಈ ನಾಟಕ ಕತ್ತಲೆಯಲ್ಲಿ ಆರಂಭವಾಗುತ್ತದೆ. ಮಬ್ಬುಗತ್ತಲಿನಲ್ಲಿ ಭಾರತ ಮಾತೆಯು ಬರುವಂತೆ ಇನ್ನೊಂದು ದೃಶ್ಯದಲ್ಲಿ ಈ ಮಬ್ಬುಗತ್ತಲು ಇರುವಾಗಲೇ ಅಜ್ಞಾನರೂಪೀ ಗೂಬೆಯೊಂದು ಹಾರಿ ಹೋಗುವಂತೆ ಕಿಂಡಿಯೊಂದರಿಂದ ಜ್ಞಾನದ ಬೆಳಕು ಬರುವಂತೆ ಅಲ್ಲಿ ಆಶೆಯ ಕಿರಣ ಬೆಳಗಿಸಿದಂತೆ ತೋರಿಸುತ್ತಾರೆ. ನಂತರ ವಂದೇ ಮಾತರಂ ಹಾಡು ದೂರದಿಂದ ಕೇಳಿ ಬರುತ್ತದೆ. ಬರ ಬರುತ್ತಾ ನಾದ ಹತ್ತಿರ ಬರುತ್ತದೆ ಮತ್ತು ನಿನಾದಿಸುತ್ತದೆ.

"ಕೋಟಿ ಕೋಟಿ ಕಂಠ ಕಲಶ ಕಲ ಕಲ ನಿನಾದೇ ಕರಾಳೇ ಬಹುಬಲ ಧಾರಿಣೀಂ, ನಮಾಮಿ ತಾರಿಣೀಂ ರಿಪುಬಲ ವಾರಿಣೀಂ ಮಾತರಂ" ಹೀಗೆ ಹೊಸ ಹೊಸ ಪ್ರಯೋಗಗಳನ್ನು ಮಾಡಿ ಜನತೆಗೆ ನಾವೀನ್ಯತೆಯು ಹಿಂದೆ ಕಾಣದ ಆನಂದವನ್ನು ಉಂಟುಮಾಡುವ ಪ್ರಯೋಗಗಳಿವೆ. ಯಾರೇ ಆಗಲೀ ಇಂತಹ ದೇಶ ಪ್ರೇಮಭರಿತ ನಾಟಕಗಳನ್ನು ನೋಡಿದಾಗ ಅವರ ಮೈಯ್ಯಲ್ಲಿ ಪುಳುಕಿತವಾಗದೇ ಇರದು. ಧಂಮೋಮಯವಾದ ಗೀತಾ ನಾಟಕಗಳನ್ನು ಹೆಚ್ಚು ಹೆಚ್ಚಾಗಿ ಬರೆದವರು ಎಂದರೆ ಕುವೆಂಪು, ಬೇಂದ್ರೆ, ಹಾಗೂ ಶ್ರೀನಿವಾಸ. ಶ್ರೀ ಶ್ರೀರಂಗರವರು ವಿಡಂಬನ ನಾಟಕಗಳನ್ನು ಹೆಚ್ಚಾಗಿ ಬರೆದಿದ್ದಾರೆ.

ಕೆಲವು ಅಪೂರ್ವ ಪ್ರಯೋಗಗಳಿಗೆ ಎಂದರೆ ದೃಶ್ಯ ನಾಟಕಗಳಿಗೆ ವಿಶೇಷವಾದ ರಂಗ ಸಜ್ಜಿಕೆ ಬೇಕಾಗಿ ಬರುತ್ತದೆ. ಸರಿಯಾದ ಸಜ್ಜಿಕೆಗಳಿಲ್ಲದೆ ಇಂತಹ ನಾಟಕವಾಡಿದರೆ ಅದು ಶೋಭಿಸುವುದಿಲ್ಲ. ಜನರೂ ಪ್ರಭಾವಗೊಳ್ಳುವುದಿಲ್ಲ. ಇಂತಹ ಒಂದು ಕಾಲ ಇಂದು ಸನ್ನಿಹಿತವಾಗಿದೆ. ಈಚೆಗೆ ಇಲ್ಲಿ ಎಐಸಿಸಿ ನಡೆಯಿತಷ್ಟೇ. ಆಗ ಇಲ್ಲಿ ಒಂದು ಅಪೂರ್ವ ನಾಟಕ ದೃಶ್ಯ ಪ್ರಯೋಗವಾಯಿತು. ಇದನ್ನು ನಮ್ಮ ಈ ಸಭೆಯ ಮಾನ್ಯ ಸದಸ್ಯರು ನೋಡಿದರೋ ಇಲ್ಲವೋ ನನಗೆ ತಿಳಿಯದು, ಡ್ಯಾನ್ಸ್ ಡ್ರಾಮಾ ಆಫ್ ಇಂಡಿಯನ್ ಕಲ್‌ಚರಲ್ ಸೆಂಟರ್, ಬೊಂಬಾಯಿ ಇವರಿಂದ ಈ ಪ್ರಯೋಗ ನಡೆಯಿತು. ಈ ನಾಟಕದ ಪ್ರಯೋಗದಲ್ಲಿ ಸಿನಿಮಾದಂತೆಯೇ, ಗೀತೆ, ನಾಟಕ ಹಾಗೂ ನರ್ತನ ಇವೆಲ್ಲವನ್ನೂ ಒಂದುಗೂಡಿಸಿ, ಬೆಳಕು ನೆಳಲುಗಳ ಮೋಡಿ ಮಾಡಿದರು. ಆದಿಮಾನವ ಸೃಷ್ಟಿಯಾದ

ಹೊಸತರಲ್ಲಿ ಯಾವ ಬದುಕನ್ನು ಬಾಳಿದ, ಪರಸ್ಪರರಲ್ಲಿ ಸ್ನೇಹ, ಭ್ರಾತೃವರ್ಗದವರಲ್ಲಿ ಕಲಹ, ತಾಯಿ ಮಕ್ಕಳಲ್ಲಿ ವಾತ್ಸಲ್ಯ, ಅಣ್ಣತಮ್ಮಂದಿರ ಸ್ನೇಹ ಶಿಲಾಯುಗದಿಂದ ಮಾನವ ಹೇಗೆ ಪ್ರವರ್ಧಮಾನಕ್ಕೆ ಬಂದ, ಆಗ ಯಾದವೀ ಕಲಹಗಳು ಯಾವ ರೀತಿ ಇತ್ತು, ಮಾನವನ ವಿಕಸನ ಹೇಗೆ ಸಾಗಿತು, ಇತ್ಯಾದಿ ಹೊಸ ಪ್ರಯೋಗಗಳನ್ನು ಇದರಲ್ಲಿ ಅಳವಡಿಸಿದ್ದರು. ನೂತನವಾದ ಸೌಂಡ್‌ಟ್ರ್ಯಾಕ್ ಮೂಲಕ ಕತ್ತಿ ವರಸೆಯ ನೋರದೊಂದಿಗೆ ಅದರ ಝಣತ್ಕಾರವನ್ನು ಅನುಭವಿಸುವಂತೆ ಅಳವಡಿಸಿ ಪ್ರದರ್ಶನ ಮಾಡಿದರು. ಈ ಚೇತೋಹಾರಿಯಾಗಿತ್ತು. ಇದನ್ನು ನೋಡಿದ ನಮ್ಮ ಮುಖ್ಯಮಂತ್ರಿಗಳು ನಮ್ಮ ಕನ್ನಡ ನಾಡಿನಲ್ಲೂ ಇಂತಹ ಗೀತರೂಪಕ ನಾಟಕಗಳನ್ನು ತೋರಿಸುವಂತೆ ಪ್ರಯತ್ನ ಮಾಡಬೇಕು ಎಂಬ ಆಶಯ ವ್ಯಕ್ತಪಡಿಸಿದರು. ಈ ನಾಟಕದಲ್ಲಿ ರಂಗ ಸಜ್ಜಿಕೆ ಹೇಗೆ ಅಣಿಗೊಳಿಸಿದ್ದರೆಂದರೆ ಕಣ್ಣು ಮುಚ್ಚಿ ಕಣ್ಣು ತೆರೆಯುವುದರಲ್ಲಿ ಬೇರೆ ಒಂದು ಸೀನರಿ ಸಜ್ಜಾಗುತ್ತಿತ್ತು. ಬೆಳಕು ಹೀಗೆ ಸರಿಸುವುದರೊಳಗೆ ಬೇರೆ ದೃಶ್ಯ ಕಂಡುಬರುತ್ತಿತ್ತು. ಸಿನಿಮಾ ಟೆಕ್ನೀಕ್ ಯಾವ ರೀತಿಯಲ್ಲಿದೆ, ಅಂಥವೇ ಇಲ್ಲೂ ಅಳವಡಿಸಿಕೊಂಡು ಹೊಸ ರೀತಿಯ ನಾಟಕದ ಪ್ರಯೋಗಗಳನ್ನು ಮಾಡಿ ತೋರಿಸಿದುದನ್ನು ನಾನೆಂದಿಗೂ ಮರೆಯಲಾರೆ.

ನಮ್ಮ ಜನ ಜೀವನಕ್ಕೆ ಇಂತಹ ನಾಟಕಗಳು ಬಹಳ ಪ್ರಾಮುಖ್ಯವಾಗಿವೆ. ಒಬ್ಬರು ಹೀಗೆ ಹೇಳಿದ್ದಾರೆ : Drama is Education and Cinema is Entertainment. ನಾಟಕ ಒಂದು ರೀತಿಯಾದ ಬೌದ್ಧಿಕ ಹೃದಯವಂತಿಕೆಯ ಶಾಶ್ವತ ತಿಳುವಳಿಕೆ ಕೊಡುತ್ತದೆ. ಸಿನಿಮಾವನ್ನು ಒಂದು ಸಲ ತೆರೆಯಮೇಲೆ ನೋಡಿ ಬಂದರೆ ಮಾತ್ತ ಮರೆತು ಹೋಗುವ ಸಂಭವ ಹೆಚ್ಚು. ಏಕೆಂದರೆ ನಾಟಕದಲ್ಲಿ ಸಜೀವವಾಗಿ ಮನುಷ್ಯರೇ ಪಾತ್ರ ವಹಿಸಿ ಆಡುವುದರಿಂದಾಗಿ ಪ್ರೇಕ್ಷಕರಲ್ಲಿ ಒಂದು ರೀತಿಯಾದ ಶಾಶ್ವತ ಚಿತ್ರದ ಅನುಭವ ಉಳಿಯಲು ಅವಕಾಶವಾಗುತ್ತದೆ ಮತ್ತು ಮನಸ್ಸಿನ ಮೇಲೆ ಗಾಢ ಪರಿಣಾಮವುಂಟಾಗುತ್ತದೆ. ನಾನು ಒಂದು ಸಾರಿ ದೆಹಲಿಗೆ ಹೋಗಿದ್ದಾಗ (ಆಗ ಶ್ರೀ ನೆಹರೂರವರು ಜೀವಂತರಾಗಿದ್ದರು) ಪ್ರಧಾನಿಯವರ ಮನೆ ತೋಟದಲ್ಲಿ ಒಂದು ಹಿಂದೀ ನಾಟಕ ನಡೆಯಿತು. ಶ್ರೀಮತಿ ಇಂದಿರಾ ಗಾಂಧಿಯವರು ಹೋಸ್ಟೆಸ್ ಆಗಿ ನಮ್ಮನ್ನೆಲ್ಲಾ ಸ್ವಾಗತಿಸಿ ರಂಗಮಂದಿರದ ಮುಂದೆ ಕರೆದುಕೊಂಡು ಹೋದರು. ಬಯಲಲ್ಲಿ ನಾವು ಕುಳಿತೆವು. ಬಯಲಿನಲ್ಲೇ ಸಂಗೀತಗಾರರೂ ಪಾತ್ರಧಾರಿಗಳೂ ಉಪವೇಷ್ಟಿತರಿದ್ದರು. ಗೀತಾ ನಾಟಕ ಅದು. ರಾಮ ಕಥೆ. ಸಂಸ್ಕೃತ ಶ್ಲೋಕಗಳನ್ನು ನಡುವೆ ಅಳವಡಿಸಿದ್ದರು. ಒಂದು ರೀತಿಯಾದ ಸರ್ಚ್ ಲೈಟುಗಳ ಬೆಳಕು ಬಿಟ್ಟಂತೆ ಬೇಕಾದ ಸೀನರಿಗೆ ಬೆಳಕು ಬಂದು ಹಿಂದಿನ ಸೀನರಿ ಮರೆಯಾಗುತ್ತಿತ್ತು. ಇದು ಎಂತಹ ಆಕರ್ಷಣೀಯವಾಗಿತ್ತು, ಮನಮೋಹಕವಾಗಿತ್ತು ಎಂದು ನಾನು ವರ್ಣಿಸಲಾರೆ. ಇಂಥ ದೃಶ್ಯ ನಾಟಕವನ್ನು ನಾನು ಎಂದೂ ನೋಡಿರಲಿಲ್ಲ. ಅಂದು ನೆರೆದ ಜನರ ಹೃದಯದಲ್ಲಿ ಅಲೌಕಿಕ ಆನಂದದ ಪರಾಕಾಷ್ಠತೆಯನ್ನೇ ಮುಟ್ಟಿತ್ತು ಎಂದರೆ ಅತಿಶಯೋಕ್ತಿಯಲ್ಲ. ಇಂತಹ ಪ್ರಯೋಗಗಳು ನಡೆಯಬೇಕಾದರೆ ವಿಶೇಷ ಹಣ ಬೇಕು ಮತ್ತು ಉತ್ತೇಜನ ಬೇಕು, ಪರಿಶ್ರಮ ಬೇಕು ಮತ್ತು ಕಲಾವಂತಿಕೆ ಬೇಕು. ಇನ್ನು ಎರಡೇ ಎರಡು ವಿಚಾರಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಾನು ಹಿಂದೆ ಅಮೆರಿಕಕ್ಕೆ ಹೋಗಿದ್ದಾಗ ಅಲ್ಲಿ ಒಂದು ದೊಡ್ಡ ಪಟ್ಟಣವಾದ ನ್ಯೂಯಾರ್ಕ್‌ಗೆ ಹೋಗಿದ್ದೆ. ಅಲ್ಲಿ ಜಪಾನಿಗೆ ಸಂಬಂಧಿಸಿದ ಒಂದು ನಾಟಕದ ಪ್ರಯೋಗ : The House in Augustus Moon. ಎನ್ನುವುದು ನಡೆಯುತ್ತಿತ್ತು. ಇದು ಸುಮಾರು ಎರಡು ವರ್ಷಗಳಿಂದ ಒಂದೇ ಸಮನೆ ಮುಂದುವರಿಯುತ್ತಿತ್ತಂತೆ. ಇದನ್ನು ನೋಡಬೇಕೆಂದು ನಾನು ಶ್ರಮಿಸಿದೆ. ಟಿಕೆಟ್ಟು ಸಿಗುವುದೇ ಕಷ್ಟವಾಯಿತು. ಕೊನೆಗೆ ನಾನು ಯುಗೋಸ್ಲೇವಿಯಾ ಎಂಬೆಸಿ ಮುಖೇನ ಟಿಕೆಟ್ಟು ಪಡೆದು ನಾಟಕವನ್ನು ನೋಡಿ ಬಂದೆ. ಇದು ಎಷ್ಟು ಚೆನ್ನಾಗಿತ್ತು ಎಂಧು ಹೇಳಲಿಕ್ಕೇ ಬರುವುದಿಲ್ಲ. ಇದು ಜನರ ಮನಸ್ಸಿನಮೇಲೆ ಅಗಾಧ ಪರಿಣಾಮ ಬೀರುವಂತಹ ನಾಟಕವಾಗಿತ್ತು. ಲಾಸ್ ಏಂಜಲ್ಸ್ ಎಂಬಲ್ಲಿ KING and I ಎಂಬ ನಾಟಕವನ್ನು ನೋಡಿ ಬಂದೆ. ನಾಟಕ ಕಲೆಯಲ್ಲಿ ವಿದೇಶೀ ಜನ ಎಷ್ಟು ಮುಂದುವರೆದಿದ್ದಾರೆ ಎಂಬುದು ವೇದ್ಯವಾಯಿತು. ಇದು ಒಂದು ಕಲಾತ್ಮಕವಾದ, ಕ್ರಿಯಾತ್ಮಕವಾದ ಜನಕ್ಕೆ ದೀಪನವಾಗುತ್ತದೆ. ಇಂತಹ ನಾಟಕಗಳನ್ನು ಆಡುವುದಕ್ಕೆ ಅನುವಾಗಲು ನಮ್ಮ ದೇಶದಲ್ಲಿ ಸಂಸ್ಕೃತಿಗೆ ಏನೂ ಕಡಿಮೆ ಇಲ್ಲ; ನಟರಿಗೆ ಏನೂ ಕಡಿಮೆ ಇಲ್ಲ. ನಮ್ಮ ಜನರಲ್ಲಿ ಉತ್ಸಾಹವೂ ಏನೂ ಕಡಿಮೆ ಇಲ್ಲ, ಸಾಮಾನ್ಯವಾಗಿ ನಾವು ನೋಡುವುದಾದರೆ ಭಾಷಣ ಕೇಳುವುದಕ್ಕೆ 20 ಜನ ಬಂದರೆ ನಾಟಕ ನೋಡುವುದಕ್ಕೆ ಬರುವವರು 2 ಸಾವಿರ ಜನ ಇರುತ್ತಾರೆ. ನಾಟಕ ಇಲ್ಲದೇ ಹೋದರೆ ಭಾಷಣ ಮಾಡುವ ಮಹನೀಯರು ಇದ್ದರೂ ಕೂಡ ಯಾರೂ ಅಲ್ಲಿ ಇರುವುದಿಲ್ಲ. ಇದರಿಂದ ಏನು ಗೊತ್ತಾಗುತ್ತದೆ ಎಂದರೆ ನಮ್ಮ ಜನತೆಗೆ ನಾಟಕದಲ್ಲಿ ಎಷ್ಟರಮಟ್ಟಿಗೆ ಶ್ರದ್ಧೆ, ಪ್ರೀತಿ, ವಿಶ್ವಾಸಗಳನ್ನು ಬೆಳೆಸಿಕೊಂಡಿದ್ದಾರೆ ಎಂದು

(ಶ್ರೀಮತಿ ಎಂ. ಆರ್. ಲಕ್ಷಮ್ಮ)

ಪೂರ್ಣವಾಗಿ ಅರಿವಾಗುತ್ತದೆ. ಜನ ಬಯಸುತ್ತಾ ಇರುವ ನಾಟಕಕ್ಕೆ ಸರ್ಕಾರದವರು ಸಹಾಯ ಮಾಡಬೇಕಾದ್ದು ಆದ್ಯ ಕರ್ತವ್ಯ ಎಂದು ನಾನಾದರೂ ಭಾವಿಸುತ್ತೇನೆ. ಸರ್ಕಾರದವರೂ ಸಹ ಇದಕ್ಕೆ ಸಹಾಯ ಮಾಡುವವರಾಗಿದ್ದಾರೆ. ಏಕೆಂದರೆ ಶ್ರೀಮಾನ್ ಶಂಕರಗೌಡರು ಸ್ವತಃ ಕಲಾ ಪ್ರಿಯರು, ಹಿಂದೆ ಗರುಡ ಸದಾಶಿವರಾವ್ ದಶರಥನ ಪಾತ್ರ ಅತ್ಯಪೂರ್ವವಾಗಿ ಮಾಡುತ್ತಿದ್ದರಂತೆ. ಅದನ್ನು ನಾನು ಕಾಣೆ. ಆದರೆ ಶ್ರೀ ಶಂಕರಗೌಡರು ಹಿಂದೆ ಗರುಡ ಸದಾಶಿವರಾವ್ ದಶರಥನ ಪಾತ್ರವನ್ನು ಹಾಕಿ ತೋರಿಸಿದ್ದುದನ್ನು ನಾನು ಮರೆಯಲಾರೆ.

ನಮ್ಮ ದೇಶದಲ್ಲಿ ಎಲ್ಲ ಪ್ರಾಜ್ಞ ಪಾಮರ ಜನತೆಯೂ ನಾಟಕಗಳನ್ನು ಮೆಚ್ಚಿರುವಾಗ ಈ ಬಾಬಿಗೆ ಇದಕ್ಕೆ 5 ಲಕ್ಷ ರೂಪಾಯಿ ಕೊಡಬೇಕೆಂದು ಕೇಳುತ್ತೇನೆ. ಕೋಟ್ಯಾಂತರ ರೂಪಾಯಿ ವೆಚ್ಚವಾಗುವಂಥ ಸರ್ಕಾರದ ಬೊಕ್ಕಸಕ್ಕೆ ಈ 5 ಲಕ್ಷ ರೂಪಾಯಿಯನ್ನು ಸಬ್ಸಿಡಿಯಾಗಿ ಕೊಡುವುದು ಹೆಚ್ಚೇನೂ ಅಲ್ಲ. 3 ನಾಟಕಗಳಿಗೆ 50,000 ರೂಪಾಯಿ ಬಹುಮಾನ ವಿನಿಯೋಗಕ್ಕಾಗಿ ಕೊಡಬೇಕು ಎಂದು ನಾನು ಹೇಳುತ್ತೇನೆ. ನನ್ನ ಮುಖ್ಯ ಉದ್ದೇಶ ಈ ಒಂದು ನಾಟಕದ ಕಲೆಗೆ ಪ್ರೋತ್ಸಾಹ ಕೊಡಬೇಕೆಂದು ಇದೆ. ಇತ್ತೀಚೆಗೆ ನಾಟಕದ ಸುಧಾರಣೆಯೂ ಕಡ ಆಗುತ್ತಿದೆ. ಉದಾಹರಣೆಗೆ ಹಿರಣ್ಣಯ್ಯ ಮಿತ್ರ ಮಂಡಲಿಯವರು ನಾಟಕದಲ್ಲಿ ಸ್ವಲ್ಪ ಸುಧಾರಣೆ ಮಾಡಿ ಕೆಲವು ಆಟಗಳನ್ನು ಪ್ರದರ್ಶಿಸಿದ್ದಾರೆ ಅದರಲ್ಲಿ ಅತ್ಯಾಚಾರ ನಾಟಕವನ್ನು ಆಡಿ ತೋರಿಸಿದ್ದಾರೆ. ಆ ನಾಟಕಕ್ಕೆ ನಾನೂ ಹೋಗಿದ್ದೆ. ಅದರಲ್ಲಿ ಕೆಲವು ನೂತನ ಪ್ರಯೋಗಗಳನ್ನು ಮಾಡಿರುವುದನ್ನು ತೋರಿಸಿದರು. ಅದು ಏನೆಂದರೆ ಯಾವ ಒಂದು ಮತಕ್ಕೂ ನೋವಾಗಬಾರದು ಎನ್ನುವ ರೀತಿಯಲ್ಲಿ ಮುದ್ರೆಯವರಿಗೆ, ವಿಭೂತಿಯವರಿಗೆ, ನಾಮದವರಿಗೆ ಯಾವುದೇ ಮತದವರಿಗೆ ಅವರವರ ಹಣೆಯಲ್ಲಿ ಕೊಶ್ಚನ್ ಮಾರ್ಕ್ ಹಾಕಿರುತ್ತಾರೆ. ಇದರ ಅರ್ಥ ಯಾರು ಯಾವ ಮತವೆಂದಾದರೂ ಭಾವಿಸಬಹುದು.

ಇನ್ನೊಂದು ಉದಾಹರಣೆ ಹೇಳುವುದಾದರೆ ಲಂಚದ ವಿಷಯದ ಬಗ್ಗೆ ಪಾತ್ರಧಾರಿ ಶ್ರೀಮಾನ್ ನರಸಿಂಹಮೂರ್ತಿಯವರು, ಯಾವುದೋ ವಿಷಯವಾಗಿ ''ನಾನು ವಿಧಾನಸೌಧದಲ್ಲೇ ಲಂಚ ಅಂತ ಮಾಡಿದ್ದೆ ಇಲ್ಲೂ ಇದೆಯೋ'' ಎಂದು ಸೋಜಿಗ ಪಡುವಂತೆ ಅರ್ಥ ಬರುವ ರೀತಿಯಲ್ಲಿ ಬಹಳ ಸೂಕ್ಷ್ಮ ಕಲಾರೀತಿಯಲ್ಲಿ ಮಾಡಿದಿದ್ದಾರೆ. ಇದರಿಂದ ಜನತೆಗೆ ಒಂದು ಜಾಗ್ರತಿ ಉಂಟುಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಹೀಗೆ ನಾಟಕಗಳ ಮೂಲಕ ಜನತೆಗೆ ತಮ್ಮ ಕುಂದು ಕೊರತೆಗಳು ಮತ್ತು ಇತರ ಸ್ವಭಾವ ವೈಚಿತ್ರ್ಯಗಳು ಇವನ್ನು ಜಾಣ್ಮೆಯಿಂದ ಕಲ್ಪಿಸಿಕೊಟ್ಟಂತಾಗುತ್ತವೆ. ಆರೀತಿ ಆಡಿದಂಥ ನಾಟಕಗಳಿಗೆ 50 ಸಾವಿರ ರೂಪಾಯಿ ಸಬ್ಸಿಡಿಯನ್ನೇ ಕೊಡಬೇಕಾದುದು ಸೂಕ್ತ. ಇದರಿಂದ ಅವರಿಗೆ ಬೇಕಾದ ಎಕ್ವಿಪ್‌ಮೆಂಟ್ಸ್ ಇನ್ನು ಇತರ ಸಾಮಾನುಗಳನ್ನು ಅಣಿ ಮಾಡಿಕೊಳ್ಳುವುದಕ್ಕೆ ಅನುಕೂಲವಾದೀತು. ಈ ರೀತಿ ಉತ್ಕೃಷ್ಟ ನಾಟಕಕ್ಕೆ ಪ್ರೋತ್ಸಾಹ ಕೊಡಬೇಕೆಂದೇ ಈ ನಿರ್ಣಯವನ್ನು ತಂದಿದ್ದೇನೆ. ಇದಕ್ಕೆ ''ಬ್ಯಾಲೆಟ್'' ನಲ್ಲಿ ಎರಡನೇ ಸ್ಥಾನ ಹೊಂದಿರುವುದು ಬಹಳ ಸಂತೋಷ. ಇದುವರೆಗೆ ನಾನು ಯಾವ ನಿರ್ಣಯವನ್ನು ತೆಗೆದುಕೊಂಡು ಬಂದರೂ ಕೂಡ ಅದು ಸ್ಥಾನದಲ್ಲಿ ಕಡೆಯದಾಗಿರುತ್ತಿತ್ತು; ಇಲ್ಲವೇ ಲಾಸ್ಟ್ ಬಟ್ ಒನ್ ಸ್ಥಾನ ದೊರಕುತ್ತಿತ್ತು. ಈಗ ಇದಕ್ಕೆ ಎರಡನೇ ಸ್ಥಾನ ದೊರಕಿರುವುದು ನನ್ನ ಅದೃಷ್ಟವೋ, ನಾಟಕದ ಅದೃಷ್ಟವೋ, ಅಂತೂ ದೊರಕಿದೆ. ಅದೂ ಅಲ್ಲದೆ ಸಾಮಾನ್ಯವಾಗಿ ಈ ಮೇಲ್ಮನೆಯ ಸದಸ್ಯತ್ವದ ರಚನೆಯನ್ನು ವಿಚಾರ ಮಾಡಿದರೆ, ಸರಕಾರದಿಂದ ನಾಮಕರಣ ಮಾಡುವಂತಹ ವಿಶಿಷ್ಟ ಹಕ್ಕು ಕಂಡುಬರುತ್ತದೆ. ಆ ರೀತಿ ನಾಮಕರಣ ಆಗತಕ್ಕ ಸದಸ್ಯರು ವಾಣಿಜ್ಯ ಇಲ್ಲವೇ ವ್ಯಾಪಾರ ಧುರೀಣರೋ ಇಲ್ಲವೇ ಯಾವುದರಲ್ಲಾದರೂ ಒಂದು ಕಲೆಯಲ್ಲಿ ಸಿದ್ಧಿ ಪಡೆದುಕೊಂಡವರೇ ಇರುತ್ತಾರೆ. ನಮಗೆಲ್ಲಾ ಗೊತ್ತಿರುವ ಹಾಗೆ ಹಿಂದೆ ಈ ಮೇಲ್ಮನೆಯಲ್ಲಿ ದಿವಂಗತ ಚೌಡಯ್ಯನವರು ಇದ್ದರು ಮತ್ತು ಗುಬ್ಬಿ ವೀರಣ್ಣ, ರುಮಾಲೆ ಚೆನ್ನಬಸವಯ್ಯ ಇವರುಗಳೆಲ್ಲಾ ಇಲ್ಲಿ ನಾಮಕರಣ ಸದಸ್ಯರಾಗಿದ್ದರು. ಕಲೆಗೆ ಈ ಮೇಲ್ಮನೆಯಲ್ಲಿ ಎಂತಹ ವಿಶೇಷ ಸ್ಥಾನ, ವಿಶೇಷ ಪ್ರತಿಷ್ಠೆ ಇದೆ ಎನ್ನುವುದು ಗೊತ್ತಾಗುತ್ತದೆ. ಆದುದರಿಂದ ಈ ನಿರ್ಣಯಕ್ಕೆ ಎಲ್ಲಾ ಸದಸ್ಯ ಮಹನೀಯರಿಂದಲೂ ಸಮರ್ಥನೆ ದೊರಕುತ್ತದೆ ಎಂದು ನನ್ನ ಭಾವನೆ. ಕಲೆಯನ್ನು ಇದುವರೆಗೆ ನಾನಾರೀತಿಯಲ್ಲಿ ಪೋಷಿಸಿರುವುದಕ್ಕಾಗಿ ಸರ್ಕಾರವನ್ನು ಅಭಿನಂದಿಸಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಸಭಾಪತಿಗಳಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಕಟ್ಟೀಮನಿ (ನಾಮನಿರ್ದೇಶ ಹೊಂದಿದವರು).—ಸನ್ಮಾನ್ಯ ಸಭಾಪತಿಯವರೇ, ಈ ಸದನದ ಮಾನ್ಯ ಮಹಿಳಾ ಸದಸ್ಯರು ಮಂಡಿಸಿದಂಥ ನಿರ್ಣಯವನ್ನು ಸೌಜನ್ಯಕ್ಕಾದರೂ ವಿರೋಧ ಮಾಡಬಾರದು, ಸ್ವಾಗತಿಸಬೇಕು. ಈ ನಿರ್ಣಯದ ಆಶಯವೇನೋ ಸ್ತುತ್ಯ ಸ್ವಾಗತಾರ್ಹ. ಆದರೆ ಈ ನಿರ್ಣಯದ ಬರವಣಿಗೆ ಓದಿದರೆ ಅದು ವ್ಯಾವಹಾರಿಕವಾಗಿ ಸಾಧ್ಯ ಎಂದು ಅನಿಸುವುದಿಲ್ಲ. ಇದನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡುವುದಕ್ಕೆ ನನ್ನ ಮನಸ್ಸು ಒಪ್ಪುತ್ತಾ ಇಲ್ಲ. ಮನಸ್ಸಿಗೆ ವಿರೋಧವಾದಾಗ, ಇದನ್ನು ಸ್ವಾಗತ ಮಾಡುವುದು ಸರಿಯಲ್ಲ ಎಂದು ನನ್ನ ಅಭಿಪ್ರಾಯ. ಆದುದರಿಂದ ಈ ನಿರ್ಣಯದ ಸ್ವರೂಪವನ್ನು ವಿರೋಧಿಸಬೇಕಾಗಿದೆ.

ಈ ನಿರ್ಣಯವನ್ನು ಮಂಡಿಸಿದ ಶ್ರೀಮತಿ ಲಕ್ಷಮ್ಮನವರು ಬಹಳ ಸೊಗಸಾಗಿ ಭಾಷಣ ಮಾಡಿದ್ದಾರೆ. ನಾಟಕ ಕಲೆ, ನಾಟಕ, ನಟರು, ಇವರ ಬಗ್ಗೆ ಅನೇಕಾನೇಕ ಉಪಯುಕ್ತವಾದ ಅಂಶಗಳನ್ನು ಕಲೆಹಾಕಿ ನಮ್ಮ ಎದುರಿಗೆ ಮಂಡಿಸಿದ್ದಾರೆ. ಅವರ ಈ ಭಾಷಣ ನಾಟಕ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಮಾಡಿದ ಭಾಷಣವಾಗಿದ್ದರೆ ಅದು ಬಹಳ ಉಚಿತವಾಗಿರುತ್ತಿತ್ತು. ಆದರೆ ನಮ್ಮ ಎದುರಿಗೆ ಇರುವ ನಿರ್ಣಯದ ಬಗ್ಗೆ ಮಾತ್ರ ಹೇಳಬೇಕಾದರೆ ರಂಗಭೂಮಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಸರ್ಕಾರದವರು ಪ್ರತಿ ವರ್ಷ ಅಂದಾಜು ಪತ್ರಿಕೆಯಲ್ಲಿ ಕಡೇ ಪಕ್ಷ ಐದು ಲಕ್ಷ ರೂಪಾಯಿಗಳನ್ನು ಒದಗಿಸಬೇಕು ಎನ್ನುವುದು ನಿರ್ಣಯದ ಆಶಯ. ಐದು ಲಕ್ಷ ರೂಪಾಯಿಗಳನ್ನು ಒದಗಿಸತಕ್ಕ ವಿಷಯ ನಮ್ಮ ರಾಜ್ಯದ ಇಂದಿನ ಪರಿಸ್ಥಿತಿಯಲ್ಲಿ ಎಷ್ಟರಮಟ್ಟಿಗೆ ಸಾಧ್ಯವಿದೆ ಮತ್ತು ವ್ಯಾವಹಾರಿಕವಾಗಿದೆ ಎನ್ನುವುದನ್ನು ನಾವು ಕೂಲಂಕಷವಾಗಿ ಆಲೋಚನೆ ಮಾಡಬೇಕಾಗುತ್ತದೆ. ರಂಗಭೂಮಿಗೆ ಪ್ರೋತ್ಸಾಹ ಕೊಡಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ರಂಗಭೂಮಿಗೆ ಅಷ್ಟೇ ಅಲ್ಲ, ಪ್ರತಿಯೊಂದು ಲಲಿತ ಕಲೆಗೂ ಸರ್ಕಾರ ಪ್ರೋತ್ಸಾಹ ಕೊಡಬೇಕು, ಅದು ಸರ್ಕಾರದ ಕರ್ತವ್ಯ. ತನ್ನ ಕಾರ್ಯದ ಅರಿವು ನಮ್ಮ ಸರ್ಕಾರಕ್ಕೆ ಇದೆ. ರಂಗಭೂಮಿ, ಚಲನಚಿತ್ರ, ಸಾಹಿತ್ಯ, ಸಂಗೀತ, ಈ ಎಲ್ಲ ಲಲಿತ ಕಲೆಗಳಿಗೆ ಸಹಾಯ ಮಾಡುವುದಕ್ಕಾಗಿಯೇ ನಮ್ಮ ರಾಜ್ಯದಲ್ಲಿ ಸಾಹಿತ್ಯ ಅಕಾಡೆಮಿ, ಲಲಿತಕಲಾ ಅಕಾಡೆಮಿ, ಸಂಗೀತ ನಾಟಕ ಅಕಾಡೆಮಿ ಎಂಬ ಮೂರು ಅಕಾಡೆಮಿಗಳಿವೆ. ಅವು ಅನೇಕ ವರ್ಷಗಳಿಂದ ವ್ಯವಸ್ಥಿತವಾದ ರೀತಿಯಲ್ಲಿ ಕಾರ್ಯ ಮಾಡುತ್ತಿವೆ. ಪ್ರತಿ ವರ್ಷ ಲಕ್ಷಾಂತರ ರೂಪಾಯಿಗಳನು ಈ ಅಕಾಡೆಮಿಗಳಿಗಾಗಿ ಸರ್ಕಾರ ಮುಂಗಡ ಪತ್ರದಲ್ಲಿ ಇಡುತ್ತಿದೆ. ಸಾಹಿತ್ಯ ಕೃತಿಗಳಿಗೆ ಮತ್ತು ನಟರಿಗೆ, ನಾಟಕಕರ್ತರಿಗೆ, ಸಾಹಿತಿಗಳಿಗೆ ಸಹಾಯವನ್ನು ನೀಡುತ್ತಿದೆ. ಈ ರಾಜ್ಯದಲ್ಲಿ ತಯಾರಾಗುವ ಪ್ರತಿಯೊಂದು ಚಲನ ಚಿತ್ರಕ್ಕೂ 50 ಸಾವಿರ ರೂಪಾಯಿಗಳನ್ನು ಸಹಾಯ ಧನವಾಗಿ ಕೊಡಲಾಗುತ್ತಿದೆ. ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಬೇಕಾದರೆ ಚಲನಚಿತ್ರವೂ ಒಂದು ಕಲೆ, ಸಾಹಿತ್ಯವೂ ಒಂದು ಕಲೆ, ನಾಟಕವೂ ಒಂದು ಕಲೆ, ಸಂಗೀತವೂ ಒಂದು ಕಲೆ, ಚಿತ್ರಕಲೆಯೂ ಒಂದು ಕಲೆ. ಅಂದಮೇಲೆ ಸಾಹಿತ್ಯ, ಚಿತ್ರಕಲೆ, ಸಂಗೀತಕಲೆ, ನಾಟಕ ಕಲೆ ಇವುಗಳಿಗೆ ಮಾತ್ರ ಎಷ್ಟೋ ಸ್ವಲ್ಪ ಹಣವನ್ನು ಕೊಟ್ಟು ಚಲನಚಿತ್ರಗಳಿಗೆ ಮಾತ್ರ 50 ಸಾವಿರ ರೂಪಾಯಿ ಸಹಾಯ ಧನ ಕೊಡುವುದು ಅಷ್ಟು ಸಮಂಜಸವಾಗಿ ತೋರುವುದಿಲ್ಲ. ಈ 50 ಸಾವಿರ ರೂಪಾಯಿಗಳನ್ನು ಸಹಾಯಧನವಾಗಿ ಕೊಡುವ ಯೋಜನೆ ಆರಂಭವಾದ ಮೇಲೆ ಪರಿಸ್ಥಿತಿ ಏನಾಗಿದೆ ಎಂದರೆ 50 ಸಾವಿರ ರೂಪಾಯಿಗಳನ್ನು ಗಳಿಸುವುದಕ್ಕಾಗಿ ನಾಯಿಕೊಡೆಗಳ ಹಾಗೆ ಚಲನಚಿತ್ರಗಳು ತಯಾರಾಗುತ್ತಿವೆ. ಈ ಚಲನಚಿತ್ರಗಳಲ್ಲಿ ಒಂದು ಒಳ್ಳೆಯ ಕಥೆ ಇರುವುದಿಲ್ಲ, ಒಳ್ಳೆಯ ಅಭಿನಯವಿರುವುದಿಲ್ಲ, ಒಳ್ಳೆಯ ನಿರ್ದೇಶನವಿರುವುದಿಲ್ಲ, ಏನೂ ಇರುವುದಿಲ್ಲ. ಅಲ್ಲಿ ಕಲೆಗೆ ಬದಲಾಗಿ ಕಲೆಯ ಕೊಲೆಯಾಗುತ್ತಿದೆ. ಇದೆಲ್ಲ ಏಕೆ ಎಂದರೆ ಏನಾದರೂ ಮಾಡಿ, ಹೇಗಾದರೂ ಮಾಡಿ 50 ಸಾವಿರ ರೂಪಾಯಿ ಸಹಾಯಧನವನ್ನು ಗಿಟ್ಟಿಸುವುದಕ್ಕಾಗಿ. ಹೀಗೆ ಸರ್ಕಾರದವರು ಪ್ರತಿಯೊಂದು ಚಲನಚಿತ್ರಕ್ಕೂ 50 ಸಾವಿರ ರೂಪಾಯಿ ಸಹಾಯಧನ ಕೊಡುವ ಯೋಜನೆಯನ್ನು ಜಾರಿಗೆ ತಂದಮೇಲೆ ಕನ್ನಡ ಚಲನಚಿತ್ರಗಳ ಮಟ್ಟ ನಾವು ನಿರೀಕ್ಷಿಸಿದ ಹಾಗೆ ಮೇಲಕೆ ಏರಲಿಲ್ಲ, ಅದು ಕೆಳಕ್ಕೆ ಇಳಿಯುತ್ತಿದೆ.

ಈಗ ಶ್ರೀಮತಿ ಲಕ್ಷಮ್ಮನವರ ನಿರ್ಣಯದ ಆಶಯದ ಪ್ರಕಾರ ನಾಟಕಗಳಿಗೆ ಅಥವಾ ಮೂರು ಅತ್ಯುತ್ತಮ ನಾಟಕಗಳಿಗೆ 50 ಸಾವಿರ ರೂಪಾಯಿ ಬಹುಮಾನವನ್ನು ನೀಡುವ ಯೋಜನೆಯನ್ನು ಜಾರಿಗೆ ತಂದರೆ ಏನಾಗುತ್ತದೆ ಎನ್ನುವುದನ್ನು ಸ್ವಲ್ಪ ಯೋಚನೆ ಮಾಡೋಣ ನಾಟಕಗಳಿಗೆ 50 ಸಾವಿರ ರೂಪಾಯಿ ಬಹುಮಾನ ನೀಡುವುದು ಬೇರೆ ಪ್ರಶ್ನೆ. ಏಕೆಂದರೆ ನಾನು ಈಗಾಗಲೇ ಹೇಳಿದ ಹಾಗೆ ಸಾಹಿತ್ಯ, ಸಂಗೀತ, ಚಿತ್ರಕಲೆ, ನಾಟಕಕಲೆ, ಚಲನಚಿತ್ರಕಲೆ ಇವುಗಳೆಲ್ಲವನ್ನೂ ನಮ್ಮ ಸರ್ಕಾರ ಸಮಾನದೃಷ್ಟಿಯಿಂದ ಕಂಡು ಅವುಗಳಿಗೆ ಸಮಾನ ರೀತಿಯಿಂದ ಸಹಾಯ ಮಾಡುತ್ತಿದೆ. ಹೀಗಿರುವಾಗ ಬರೀ ನಾಟಕಗಳಿಗೆ ಮಾತ್ರ 50 ಸಾವಿರ ರೂಪಾಯಿ ಬಹುಮಾನವನ್ನು ಕೊಟ್ಟರೆ, ಕಥೆ, ಕಾದಂಬರಿ, ಕವಿತೆ, ಇವುಗಳಿಗೂ ಏಕೆ 50 ಸಾವಿರ ರೂಪಾಯಿ ಕೊಡ

(ಶ್ರೀ ಬಸವರಾಜ ಕಟ್ಟೀಮನಿ)

ಬಾರದು ಎಂದು ಸಾಹಿತಿಗಳು, ಕವಿಗಳು ಕೇಳಬಹುದು. ನಾಟಕ ಪ್ರಪಂಚಕ್ಕೆ ಸಹಾಯಬೇಕು. ಆದರೆ ಅದು ಈ ರೀತಿಯಾಗಿ ಅಲ್ಲ. ಸಂಗೀತ ನಾಟಕ ಅಕಾಡೆಮಿ ಇದೆ. ಅದಕ್ಕೆ ಇನ್ನೂ ಸ್ವಲ್ಪ ಹೆಚ್ಚು ಹಣವನ್ನು ಕೊಟ್ಟು, ಆ ಅಕಾಡೆಮಿ ಮೂಲಕ ನಾಟಕಗಳಿಗೆ ಪ್ರೋತ್ಸಾಹ ಕೊಡಬೇಕು.

ಶ್ರೀಮತಿ ಲಕ್ಷಮ್ಮನವರು ಹಿಂದಿನ ನಾಟಕಗಳ ವಿಚಾರವನ್ನು ಬಹಳ ಸ್ವಾರಸ್ಯವಾಗಿ ತಿಳಿಸಿದ್ದಾರೆ. ಅದು ನನಗೆ ಒಪ್ಪಿಗೆ. ಆದರೆ ಇಂದಿನ ರಂಗಭೂಮಿಯ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎನ್ನುವುದನ್ನು ನಾವು ನೋಡಿದರೆ ಬಹಳ ವ್ಯಸನವಾಗುತ್ತದೆ. ವರದಚಾರ್ಯರ ಕಾಲದ ರಂಗಭೂಮಿ ಇಂದು ಇದೆಯೇ? ಪೀರ್ ಸಾಹೇಬರ ಕಾಲದ ರಂಗಭೂಮಿ ಈ ಹೊತ್ತು ಇದೆಯೇ? ಅಥವಾ ಗುಬ್ಬಿ ವೀರಣ್ಣನವರ ಕಾಲದ ರಂಗಭೂಮಿ ಈ ಹೊತ್ತು ಇದೆಯೇ? ಅಂಥ ನಟರು ಎಲ್ಲಿದ್ದಾರೆ? ಅಂಥ ನಾಟಕಗಳು ಎಲ್ಲಿವೆ? ಎಲ್ಲಿ ನೋಡಿದರೂ ಯಾವ ಊರಿನಲ್ಲಿ ನೋಡಿದರೂ, ಬೆಂಗಳೂರಿನಲ್ಲಿ, ಧಾರವಾಡದಲ್ಲಿ, ಮಂಗಳೂರಿನಲ್ಲಿ ಎಲ್ಲಿ ಬೇಕಾದರೂ ನೋಡಬಹುದು, ವರದಾಚಾರ್ಯರ, ಪೀರ್ ಸಾಹೇಬರ ಅಥವಾ ಗುಬ್ಬಿ ವೀರಣ್ಣನವರ ಕಾಲದ ನಾಟಕಗಳಿಗೆ ಸರಿಸಮಾನವಾದ ಅಥವಾ ಅವುಗಳಿಗಿಂತಲೂ ಮೇಲಿನ ಮಟ್ಟದಲ್ಲಿ ಇರತಕ್ಕ ನಾಟಕಗಳು ಈ ಹೊತ್ತು ಕಣ್ಣಿಗೆ ಬೀಳುತ್ತಿಲ್ಲ ಎನ್ನುವುದು ಸತ್ಯ ಸಂಗತಿ. ಈ ಹೊತ್ತು ರಂಗ ಭೂಮಿಯಲ್ಲಿ ಏನಾಗಿದೆ ಎಂದರೆ, ನಾನು ಸ್ಪಷ್ಟವಾಗಿ ಹೇಳಬೇಕಾದರೆ, ರಂಗಭೂಮಿ ಈ ಹೊತ್ತು ಮಂಗಭೂಮಿಯಾಗಿದೆ. ರಂಗಭೂಮಿಯ ಘನತೆ, ರಂಗಭೂಮಿಯ ಪಾವಿತ್ರ್ಯ, ರಂಗಭೂಮಿಯ ಆದರ್ಶ ಇವುಗಳೆಲ್ಲ ಮರೆಯಾಗಿ ಏನಾದರೂ ಒಂದು ಯದ್ವಾ ತದ್ವಾ ಕಥೆಯನ್ನು ರಂಗದ ಮೇಲೆ ತೆಗೆದುಕೊಂಡು ಬಂದು ಮಂಗನ ಹಾಗೆ ನರ್ತನ ಮಾಡಿ ಜನರಿಂದ ಹಣ ಸೆಳೆಯುವುದೇ ಇಂದಿನ ರಂಗಭೂಮಿಯ ವಾಸ್ತವ ಪರಿಸ್ಥಿತಿಯಾಗಿದೆ. ಒಳ್ಳೆಯ ನಾಟಕಗಳಂತೂ ಇಲ್ಲವೇ ಇಲ್ಲ. ಒಳ್ಳೆಯ ನಾಟಕಗಳನ್ನು ಬರೆದರೆ ಅವುಗಳನ್ನು ರಂಗಭೂಮಿಗೆ ತರುವುದಕ್ಕೆ ಕಂಪೆನಿಯವರು ಸಿದ್ಧರಿಲ್ಲ. ಶಿಕ್ಷಣ ಸಂಸ್ಥೆ, ಶಾಲಾ ಕಾಲೇಜು ಇತ್ಯಾದಿಗಳ ವಾರ್ಷಿಕೋತ್ಸವಗಳಲ್ಲಿ ಒಳ್ಳೆಯ ನಾಟಕಗಳನ್ನು ಆಡುವುದಕ್ಕೂ ಯಾರೂ ಸಿದ್ಧರಿಲ್ಲ. ಏಕೆಂದರೆ ಜನರಿಗೆ ಈ ಹೊತ್ತು ನಿಜವಾದ ಕಲೆಯಲ್ಲಿ, ನಿಜವಾದ ಸಾಹಿತ್ಯದಲ್ಲಿ ಇರತಕ್ಕ ಗೌರವ, ಅಭಿಮಾನ ಹೋಗಿದೆ. ಅಗ್ಗದ ಚಲನಚಿತ್ರಗಳ ದುಷ್ಟ ಪ್ರಭಾವದಿಂದ ನಮ್ಮ ಜನ ಮತ್ತು ನಮ್ಮ ತರುಣರು ಬರೀ ತಾತ್ಪೂರ್ತಿಕವಾದ ಮನರಂಜನೆಯನ್ನು ಅಪೇಕ್ಷೆ ಮಾಡುತ್ತಿದ್ದಾರೆಯೇ ಹೊರತು ಶ್ರೇಷ್ಠವಾದ ನಾಟಕ, ಶ್ರೇಷ್ಠವಾದ ಕಲೆ, ಶ್ರೇಷ್ಠವಾದ ಅಭಿನಯ ಎಂದರೆ ಏನು ಎನ್ನುವುದನ್ನು ಈ ಹೊತ್ತು ನಾವು ಕಾಣುತ್ತಿಲ್ಲ.

5-30 P.M.

ಇವತ್ತೇನಾಗಿದೆಯೆಂದರೆ ಒಳ್ಳೆಯ ಸಂಗೀತ ಎಂದೋ ಹೋಯಿತು, ಎಲ್ಲೂ ಕಾಣುವುದಿಲ್ಲ. 50 ಪೈಸೆಯ ಪ್ರೇಕ್ಷಕರಿಂದ ಚಪ್ಪಾಳೆ, ಶಾಬಾಸ್‌ಗಿರಿ ಪಡೆದು ರಂಗದ ಮೇಲೆ ಬಂದು ಭಾಷಣ ಮಾಡುವವರು ಮಹಾನಟರೆಂದು ಅನ್ನಿಸಿಕೊಳ್ಳುತ್ತಿದ್ದಾರೆ. ಇದು ವಾಸ್ತವವಾದ ಸ್ಥಿತಿ. ಆದುದರಿಂದ ನಾಟಕಗಳನ್ನು ಪ್ರೋತ್ಸಾಹಿಸುವುದಕ್ಕೆ ಸರಕಾರದವರು ಪ್ರತಿ ವರ್ಷ 5 ಲಕ್ಷ ರೂಪಾಯಿಗಳನ್ನು ತೆಗೆದಿಡಬೇಕೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ನಮ್ಮ ದೇಶದಲ್ಲಿ ಪರಿಸ್ಥಿತಿ ಬಹಳ ಕಷ್ಟವಾಗಿದೆ, ಸರಕಾರದ ಹಣ ಇದಕ್ಕೆ ಕೊಡಬೇಕೆಂದು ಹೇಳುವುದು ಹುಡುಗಾಟವಲ್ಲ, ನಮ್ಮದೇ ಹಣ ಅದು. ಅದನ್ನು ಸರಕಾರದವರು ಬಹಳವಾಗಿ ಯೋಚಿಸಿ ನ್ಯಾಯವಾದ ವಿಷಯಗಳಿಗೆ ಮಾತ್ರ ಖರ್ಚು ಮಾಡಬೇಕು. ನಮ್ಮ ರಾಜ್ಯದಲ್ಲಿ ಲಕ್ಷಾಂತರ ಜನರಿಗೆ ತಿನ್ನುವುದಕ್ಕೆ ಸರಿಯಾದ ಕೂಳಿಲ್ಲ, ಹೊದ್ದುಕೊಳ್ಳುವುದಕ್ಕೆ ಸರಿಯಾದ ಬಟ್ಟೆಯಿಲ್ಲ, ಇರುವುದಕ್ಕೆ ಸರಿಯಾದ ಮನೆಯಿಲ್ಲ, ಅವರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಿಲ್ಲ. ಇಂಥ ಪರಿಸ್ಥಿತಿ ಇರುವಾಗ ಸರಕಾರದ ಮೊದಲನೆಯ ಕರ್ತವ್ಯ ಏನೆಂದರೆ ಬಡ ಜನರಿಗೆ ಅನ್ನ ಕೊಡಬೇಕು, ಬಟ್ಟೆ, ವಾಸಕ್ಕೆ ಮನೆ ಒದಗಿಸಬೇಕು, ಮಕ್ಕಳಿಗೆ ವಿದ್ಯೆ ಕೊಡಬೇಕು. ಸರಕಾರದ ಕೈಲಿರುವ ಪ್ರತಿಯೊಂದು ಕಾಸೂ ಕೂಡ ಬಡವರಿಗಾಗಿ ಖರ್ಚಾಗಬೇಕು. ಮೊದಲು ಇದನ್ನು ಮಾಡೇ ಉಳಿದಿರುವುದನ್ನು ಆಮೇಲೆ ಮಾಡಲಿ. ಬಡವರ ಕಷ್ಟ ಪರಿಸ್ಥಿತಿಯಲ್ಲಿರುವಾಗ ನಾಟಕಗಳಿಗೆ 5 ಲಕ್ಷ ರೂಪಾಯಿಗಳನ್ನು ಪ್ರತಿ ವರ್ಷ ಕೊಡಬೇಕೆಂದರೆ ಅದು ನ್ಯಾಯವಲ್ಲ ಎನಿಸುವುದು.

ನಾನು ಸಾಹಿತಿಯಾಗಿ ಸ್ವಂತ ಅನುಭವದಿಂದ ಹೇಳಬೇಕಾದರೆ ಸಾಹಿತ್ಯ, ಸಂಗೀತ, ಚಿತ್ರಕಲೆ ಅಥವ ಯಾವುದೇ ಕಲೆ ಇರಲಿ, ಕಲೆ ಯಾರ ಸಹಾಯವನ್ನೂ ಅಪೇಕ್ಷಿಸುವುದಿಲ್ಲ. ನಿಜವಾದ ಕಲೆ ವನಸುಮದ ಹಾಗೆ ಬೆಳೆಯುವುದು, ಅರಳುವುದು, ಪುಷ್ಪವನ್ನು ಯಾರಾದರೂ ನೋಡಿದರೂ

ಅಷ್ಟೆ, ನೋಡದಿದ್ದರೂ ಅಷ್ಟೆ ಯಾರಾದರೂ ಮುಡಿದರೂ ಅಷ್ಟೆ ಮುಡಿಯದಿದ್ದರೂ ಅಷ್ಟೆ, ಅದು ಫನಸುಮ, ಅದೇ ನಿಜವಾದ ಕಲೆ. ಯಾವುದೇ ಒಂದು ನಿರ್ಬಂಧವಿಲ್ಲದೆ ಇದ್ದಾಗ ಮಾತ್ರ ಕಲೆ ತನ್ನಪಾಡಿಗೆ ತಾನು ಚೆನ್ನಾಗಿ ಅರಳುವುದು. ಇದೇ ನಿಜವಾದ ಶ್ರೇಷ್ಠವಾದ ಕಲೆ. ಜಗತ್ತಿನಲ್ಲಿ ಆಗಿಹೋದ ಮಹಾಕಲಾವಿದರು, ಮಹಾಸಾಹಿತಿಗಳು, ಮಹಾ ನಾಟಕಕಾರರು ಈ ರೀತಿ ತಮ್ಮ ಪ್ರತಿಭೆಯಿಂದ ಮುಂದೆ ಬಂದಿದ್ದಾರೆಯೇ ಹೊರತು, ತಮ್ಮಲ್ಲಿರುವ ದೈವದತ್ತವಾದ ಕಲೆಯಿಂದ ಜನರಿಗೆ ಸಂತೋಷವನ್ನುಂಟುಮಾಡಿದ್ದಾರೆಯೇ ಹೊರತು, ಯಾರೋ ರಾಜಮಹಾರಾಜರ ಆಶ್ರಯ ದಿಂದಾಗಲಿ ಅಥವಾ ಯಾರದೇ ಸಹಾಯದಿಂದಾಗಲಿ ಮುಂದೆ ಬಂದಿಲ್ಲ. ಆದುದರಿಂದ ಸಾಹಿತಿ. ಗಳಿಗೆ ಸರಕಾರದ ಸಹಾಯ ಅಪೇಕ್ಷೆಯಿರಬಾರದು, ಕಲಾವಿದರಿಗೆ, ನಟರಿಗೆ, ನಾಟಕಕಾರರುಗಳಿಗೆ ಯಾರಿಗೂ ಯಾರದೇ ಸಹಾಯದ ಅಪೇಕ್ಷೆ ಇರಬಾರದು. ಆದರೆ ಕರ್ತವ್ಯ ಎಂಬ ದೃಷ್ಟಿಯಿಂದ ಸರಕಾರದವರೇ ಸಹಾಯಮಾಡುವರೋ ಅದನ್ನು ಸ್ವೀಕರಿಸಬಹುದು. ಸರಕಾರದ ಸಹಾಯ ನಮ್ಮ ಕಲೆಗೆ ಬಾಧಕವಾಗಬಾರದು, ಮಾರಕವಾಗಬಾರದು. ಸಹಾಯ ಆ ರೀತಿ ಬರಬಹುದು. ಇವತ್ತು ನಮ್ಮ ನಾಟಕ ಪುರಾತನ ಕಾಲದಲ್ಲಿ ಅಂದರೆ 50 ಅಥವ 30 ವರ್ಷಗಳ ಹಿಂದಿದ್ದಹಾಗೆ ಇಲ್ಲ. ಇಂದು ಈ ನಾಟಕಗಳನ್ನು ನೋಡಿದರೆ ನಾಚಿಕೆಯಿಂದ ತಲೆ ತಗ್ಗಿಸಬೇಕಾಗುವುದು. ಇಂಥ ಪರಿಸ್ಥಿತಿ ಇದೆ. ಆದುದರಿಂದ ಒಳ್ಳೆಯ ನಾಟಕ ಬೆಳೆಯಬೇಕಾದರೆ ಒಳ್ಳೆಯ ನಟರು ಮೊದಲು ಬರಬೇಕು. ಅವರು ಬಂದು ತಮ್ಮ ಒಳ್ಳೆಯ ಕಲೆಯನ್ನು ಪ್ರದರ್ಶನಮಾಡಿದಾಗ ಜನರೇ ಸಹಾಯಮಾಡುವರು, ಜನರೇ ನಿಜವಾದ ಪೋಷಕರು. ನಾಟಕಗಳು ಉತ್ತಮಸ್ಥಿತಿಗೆ ಬಂದಾಗ ಜನರೇ ಸ್ವಾಗತಿಸುವರು, ಅವರ ಮೇಲೆ ಸರಕಾರದಿಂದ ಮನ್ನಣೆ ಸಿಕ್ಕಬಹುದು. ಆ ದೃಷ್ಟಿ ಯಿಂದ ಶ್ರೀಮತಿ ಲಕ್ಷಮ್ಮನವರ ನಿರ್ಣಯವನ್ನು ಅದರ ಆಶಯವೆಷ್ಟೇ ಒಳ್ಳೆಯದಾಗಿದ್ದರೂ ಕೂಡ ಈ ಸಂದರ್ಭದಲ್ಲಿ ವ್ಯವಹಾರಿಕವಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ ವಿರೋಧಿಸುತ್ತೇನೆ.

† ಶ್ರೀ ಕೆ. ಸೂರ್ಯನಾರಾಯಣ ಅಡಿಗ (ಸ್ಥಾನೀಯ ಪ್ರಾಧಿಕಾರಿಕ್ಷೇತ್ರ).—ಮಾನ್ಯ ಸಭಾಧ್ಯಕ್ಷರೇ, ಶ್ರೀಮತಿ ಲಕ್ಷಮ್ಮನವರು ಕಳಿಸಿರುವ ನಿರ್ಣಯದ ಕನ್ನಡ ಪ್ರತಿ ನನ್ನ ಕೈಲಿದೆ. ಇಂಗ್ಲೀಷು ಮತ್ತು ಕನ್ನಡ ಪ್ರತಿಗಳಿಗೆ ವ್ಯತ್ಯಾಸ ಇರುತ್ತದೆ. ಕನ್ನಡ ಪ್ರತಿ ನೋಡಿ ನಾನು ಹೇಳುವುದು. ಶ್ರೀ ಕಟ್ಟೀಮನಿಯವರು ಹೇಳಿದಂತೆ ಇದರ ಉದ್ದೇಶವನ್ನು ನಾನು ಸಮರ್ಥಿಸು ತ್ತೇನೆ. ಆದರೆ ಅವರ ಠರಾವು ವ್ಯವಹಾರ ರೀತಿಯಲ್ಲ. ಏಕೆಂದರೆ ಇದರಿಂದ ಯಾವ ಉದ್ದೇಶ ಸಫಲವಾಗುವುದು ? 50 ಸಾವಿರ ರೂಪಾಯಿಗಳನ್ನು ಹಂಚುವ ಉದ್ದೇಶವಿಲ್ಲ. ನಾಟಕ ಕಲೆಯನ್ನು ಪ್ರೋತ್ಸಾಹಿಸಬೇಕು, ನಾಟಕ ಸಂಸ್ಥೆಗಳಿಗೆ ಬೆಂಬಲ ನೀಡಬೇಕು ಎಂಬ ಘನೋದ್ದೇಶದಿಂದ ನಾನು ಬೆಂಬಲಿಸುತ್ತೇನೆ. ಈ ಠರಾವಿನಲ್ಲೇನು ಲೋಪದೋಷವಿದೆಯೆಂದರೆ, ಇಂದು 50 ಸಾವಿರ ರೂಪಾಯಿ ಕೊಡಬೇಕೆಂದು ಹೇಳಿದ್ದಾರೆ. ಯಾರಿಗೆ ಅಂದರೆ ನಾಟಕ ವೃತ್ತಿಯಲ್ಲಿ ತೊಡಗಿ ರುವವರಿಗೆ, ಅರ್ಹವಾದ ನಾಟಕಗಳಿಗೆ ಕೊಡಬೇಕು. ಏಕೆ ? 50 ಸಾವಿರ ರೂಪಾಯಿಗಳ ಸಹಾಯಧನ ಕೊಟ್ಟರೆ ಏನಾಗುವುದು ? ನಾಟಕ ಎಂಬ ಶಬ್ದವಿದೆಯೇ ಹೊರತು ಅವಾರ್ಡು ಅಥವಾ ಬಹುಮಾನ ಎಂಬ ಶಬ್ದವಿಲ್ಲ. ಶ್ರೀ ಕಟ್ಟೀಮನಿಯವರ ಸಾಹಿತ್ಯ ರಚನೆಗೆ ರಷ್ಯಾ ಸರಕಾರ ಬಹುಮಾನ ನೀಡಿತು. ಪುಸ್ತಕಗಳನ್ನು ಯಾರು ಬೇಕಾದರೂ ಓದಬಹುದು. ಇದು ಹಾಗಲ್ಲ. ಒಳ್ಳೆಯ ನಾಟಕಕ್ಕೆ 50 ಸಾವಿರ ರೂಪಾಯಿ ಕೊಟ್ಟರೆ ಆಮೇಲೆ ಆ ನಾಟಕವನ್ನು ಆಡುವುದೇ ಇಲ್ಲ. ಅದರಿಂದೇನು ಪ್ರಯೋಜನವಾದಂತಾಯಿತು ? ಅದೇ ನಾಟಕವನ್ನು ಮುಂದೆ ಸಹ ಆಡಬೇಕು, ಜನರು ನೋಡಲು ಅವಕಾಶವಾಗಬೇಕು, ಹಾಗಾದರೆ ಅದೊಂದು ರೀತಿ. ಆದುದರಿಂದ ಠರಾವಿ ನಲ್ಲಿ ಸರಿಯಾದ ಬದಲಾವಣೆಯಾಗಬೇಕು. ಪ್ರತಿಯೊಂದು ನಾಟಕಕ್ಕೂ 50 ಸಾವಿರ ಬಹುಮಾನ ಕೊಡಬೇಕೆಂದರೆ ಯಾವುದಕ್ಕೆ ಕೊಡಬೇಕು ? ಹಿಂದೆ ಯಾವ ರೀತಿ ನಾಟಕ ಆಡಿದರು ಎಂಬುದನ್ನು ಹೇಳಿದರು. ವರದಾಚಾರ್ಯರು, ಪೀರ್, ಪೀರಣ್ಣ ಮುಂತಾದವರ ಹೆಸರನ್ನು ಹೇಳಿ, ಅವರು ಪಾತ್ರವಹಿಸುತ್ತಿದ್ದ ನಾಟಕಗಳು ಚೆನ್ನಾಗಿದ್ದುವು ಎಂದು ತಿಳಿಸಿದರು. ಯಾವ ರೀತಿ ಹಿಂದೆ ನಾಟಕ ಕಂಪೆನಿಗಳಿದ್ದುವೆಂದು ಹೇಳಿದರು. ಹಿಂದೆ ಕಾಳಿದಾಸನ ನಾಟಕಗಳನ್ನು ಕನ್ನಡದಲ್ಲಿ ಬರೆದು ಆಡಿರುವ ಕಂಪೆನಿಗಳಿವೆ. ಇಂಗ್ಲೀಷ್ ನಾಟಕಗಳನ್ನೂ ಕನ್ನಡಕ್ಕೆ ತರ್ಜುಮೆಮಾಡಿದ್ದಾರೆ. ಅವನ್ನೂ ಆಡಿದ್ದಾರೆ. ಕನ್ನಡದಲ್ಲಿ ನಗಿಸುವ ಕೈಲಾಸಂ ನಾಟಕಗಳಿವೆ. ಇದರಲ್ಲಿ ಯಾವುದಕ್ಕೆ ಹಣ ಕೊಡಬೇಕು. ನಿರ್ಣಯ ತಂದವರ ಉದ್ದೇಶ ಗೊತ್ತಾಗುವುದಿಲ್ಲ. ನಗಿಸುವ ನಾಟಕವೆಂದರೆ ಯಾವುದು ? ಜನರನ್ನು ನಗಿಸುವುದೇ ? ನಮ್ಮ ವಿಷಯ ಮಾತನಾಡಿದರೆ ಬೇಸರ ಬರುವುದು ಇನ್ನೊಬ್ಬರು ಲಂಚ ತೆಗೆದುಕೊಳ್ಳುವರು ಎಂದು ಹೇಳಿದರೆ ಖುಷಿಯಾಗುವುದು. ಷೇಕ್ಸ್‌ಪೀಯರ ನಾಟಕ, ಮೃಚ್ಛಕಟಿಕ ನಾಟಕ ಆಡಿದಕ್ಕೆ ಹಣಕೊಡಬೇಕೇ ? ಈಗ ಮೈಸೂರಿನಲ್ಲಿ ಎರಡು ನಾಟಕ ಮಂಡಲಿಗಳಿವೆ. ನಾಗರತ್ನಮ್ಮನವರ ನಾಟಕಮಂಡಲಿ ಇದೆ. ಅವರು ಆಡುವುದಕ್ಕೆ ಕೊಡಬೇಕೇ ?

(ಶ್ರೀ ಕೆ. ಸೂರ್ಯನಾರಾಯಣ ಅಡಿಗ)

ಒಂದು ವಿಷಯ ಈ ಮನೆಯಲ್ಲಿ ಚರ್ಚೆಗೆ ಬಂದು ಸರ್ಕಾರದ ಗಮನವನ್ನು ಸೆಳೆದಿದ್ದಾರೆ ಅದಕ್ಕಾಗಿ ಮಾನ್ಯ ಸದಸ್ಯರನ್ನು ಅಭಿನಂದಿಸಬೇಕಾಗಿದೆ. ನಾಟಕ ಹೇಗೆ ಇರಬೇಕೆಂಬುದನ್ನು ಬಸವರಾಜ ಕಟ್ಟೀಮನಿಯವರು ಹೇಳಿದರು. ಬೊಂಬಾಯಿ ಕರ್ಣಾಟಕದಲ್ಲೂ ಸಹ ಸ್ತ್ರೀಯರೇ ಪಾತ್ರ ವಹಿಸುವಂತಹ ನಾಟಕ ಕಂಪನಿಗಳು ಇದ್ದವು, ಉಚ್ಚಮಟ್ಟದ ನಾಟಕಗಳನ್ನು ಆಡುತ್ತಾ ಇದ್ದರು, ಇವತ್ತು ಅಂತಹ ನಾಟಕ ಕಂಪೆನಿಗಳು ಕೆಲವೇ ಉಳಿದಿವೆ ಎಂಬುದನ್ನು ಕಟ್ಟೀಮನಿಯವರು ಹೇಳಿದ್ದಾರೆ ಏಕೆ ಹೀಗಾಯಿತು ? ಎಂಬ ವಿಚಾರವನ್ನೂ ಕೂಡ ನಾವು ಯೋಚನೆ ಮಾಡಬೇಕು. ನಾಟಕ ಆಡುವವರು ಹೆಚ್ಚಿನವರು ಕಲೆಯ ಉದ್ಧಾರಕ್ಕೆ ನಾಟಕ ಆಡುವವರಲ್ಲ, ಜೀವನ ವೃತ್ತಿಯಾಗಿ ಆಡುತ್ತಾ ಇದ್ದರು. ಯಾವುದರಿಂದ ಹೆಚ್ಚಿನ ಸಂಪಾದನೆಯಾಗುತ್ತದೆಯೋ ಅಂತಹ ನಾಟಕಗಳನ್ನು ಆಡಬೇಕು-ಶಕುಂತಲಾ ನಾಟಕ ಆಡುವುದಕ್ಕೆ ಆಕ್ಷೇಪಣೆ ಇಲ್ಲ, ಹೌಸ್ ಫುಲ್ ಆಗುತ್ತದೆ ಎಂದರೆ ಆಡುತ್ತಿದ್ದರೇ ಹೊರತು ಇಲ್ಲವೇ ಇದ್ದರೆ ಇಲ್ಲ, ಈಗ ಶಕುಂತಲಾ ಆಗಲಿ, ಮೃಚ್ಛಕಟಿಕ ಆಗಲಿ ಆಡುವುದಕ್ಕೆ ಯಾರೂ ತಯಾರಾಗಿಲ್ಲ, ಕಾರಣ ಅದಕ್ಕೆ ಜನ ಬರುವುದಿಲ್ಲ. ಸಾಮಾನ್ಯ ಜನರಲ್ಲ ಅದರ ಅಭಿರುಚಿ ಹಾಳಾದ್ದರಿಂದ ಈ ಕಂಪೆನಿಗಳು ಬದುಕುವುದು ಕಷ್ಟವಾಗಿದೆ. ಆದ್ದರಿಂದ ಜನರಿಗೆ ಯಾವುದರಲ್ಲಿ ಆಸಕ್ತಿ ಇದೆಯೋ, ತಮಗೆ ಯಾವ ನಾಟಕವನ್ನಾಡುವುದರಿಂದ ಚೆನ್ನಾಗಿ ಸಂಪಾದನೆ ಆದೀತೋ ಅಂತಹ ನಾಟಕಗಳನ್ನು ಆಡುತ್ತಾ ಇದ್ದಾರೆ. ಇದಕ್ಕೆ ಅವರನ್ನು ದೂರಬಾರದು. ಅಂತೂ ಈ ರೀತಿಯಲ್ಲಾದರೂ ನಾಟಕದ ಕಂಪೆನಿಗಳು ಉಳಿದಿವೆಯಲ್ಲಾ ಅಂತ ಹೇಳಿ ಸಂತೋಷಪಡಬೇಕು, ಅವರನ್ನು ಅಭಿನಂದಿಸಬೇಕು. ಹಿಂದಿನ ಮಟ್ಟದ ನಾಟಕ ಕಂಪೆನಿಗಳು ಇವತ್ತು ಇಲ್ಲ ಅದನ್ನು, ಒಪ್ಪುತ್ತೇನೆ, ಅಮೆಚೂರ್ಸ್ ನಾಟಕ ಇರಬಹುದು. ಹಿಂದಿನ ಸಾಮರ್ಥ್ಯವನ್ನು ಕಳೆದುಕೊಂಡಿದ್ದೇವೆ ಅಂತ ಅಲ್ಲ, ಉತ್ತಮ ನಟರು ಇದ್ದಾರೆ. ನಾಗರತ್ನಮ್ಮನವರ ನಾಟಕ ಕಂಪೆನಿ ತೆಗೆದುಕೊಳ್ಳಿ, ಇವುಗಳಿಗೆ ಪ್ರೋತ್ಸಾಹ ಎಷ್ಟು ಇದೆ ಎಂಬುದನ್ನು ನೋಡಬೇಕು. ನಾಟಕ ಆಡುವಂತಹ, ಶಕ್ತಿ ಇರುವಂತಹ ಜನ ಇದ್ದಾರೆ ಆದರೆ ಏಕೆ ಮುಂದೆ ಬರುವುದಿಲ್ಲ ಎಂದರೆ ಅವರಿಗೆ ಆರ್ಥಿಕ ಬೆಂಬಲ ಸಿಕ್ಕುವುದಿಲ್ಲ. ಅವರ ಕರುಣಾಜನಕ ಸ್ಥಿತಿಯನ್ನು ಕೇಳಿದರೆ ಕಣ್ಣಿನಲ್ಲಿ ನೀರು ಬರುತ್ತದೆ. ಇವತ್ತು ಬೆಂಗಳೂರಿನಲ್ಲಿ ಹೊರಡತಕ್ಕ ವಾರದ ಮ್ಯಾಗ್ಜೈನ್ ಸುಧಾದಲ್ಲಿ ಇವರ ಬಗ್ಗೆ ಒಂದೊಂದು ಆರ್ಟಿಕಲ್ ಬರೆಯುತ್ತಾ ಇರುವುದನ್ನು ನಾನು ಓದುತ್ತಾ ಇದ್ದೇವೆ. ಬಣ್ಣದ ಬದುಕು ಅಂತ ಹೇಳಿ ರಂಗ ಭೂಮಿಯಲ್ಲಿ ಹೆಸರು ಪಡೆದವರ ಜೀವನ ಕಥೆಯನ್ನು ಪ್ರಕಟಪಡಿಸುತ್ತಾ ಇದ್ದಾರೆ. ಗುಬ್ಬಿ ವೀರಣ್ಣನವರ ಸಂಪೂರ್ಣ ಜೀವನ ಕಥೆಯನ್ನು ಪ್ರಕಟಪಡಿಸಿದರು, ಕೊಟ್ಟೂರಪ್ಪನವರ ಸಂಪೂರ್ಣ ಜೀವನ ಕಥೆಯನ್ನು ಪ್ರಕಟಪಡಿಸಿದರು. ಅದನ್ನು ನೋಡಿದರೆ ಕಣ್ಣೀರು ಬಂತು, ಅಷ್ಟು ಕಷ್ಟದಲ್ಲಿ ಕಂಪೆನಿ ನಡೆಸಬೇಕಾಗಿ ಬಂತು, ಮೈಸೂರು ರಂಗಭೂಮಿಯ ಮಟ್ಟ ದಕ್ಷಿಣ ಹಿಂದೂಸ್ಥಾನದಲ್ಲೇ ಇತರ ರಂಗಭೂಮಿಗಳ ಮಟ್ಟಕ್ಕಿಂತ ಉತ್ತಮ ಮಟ್ಟದಲ್ಲಿತ್ತು. ಅವರು ಒಂದು ಉದಾತ್ತ ಧ್ಯೇಯವನ್ನಿಟ್ಟುಕೊಂಡು ನಾಟಕವನ್ನಾಡುತ್ತಾ ಇದ್ದರು. ಇವತ್ತು ಅಂತಹ ಧ್ಯೇಯವನ್ನಿಟ್ಟುಕೊಂಡು ಕಂಪೆನಿ ಕಟ್ಟಬೇಕೆಂದು ಇಚ್ಛೆಯುಳ್ಳವರು ಮುಂದೆ ಬಂದಿದ್ದಾರೆ ಆದರೆ ಅವರು ಮುಂದುವರಿಯಲಿಕ್ಕೆ ಸಾಧ್ಯವಿಲ್ಲ ಕಾರಣ ಆರ್ಥಿಕ ಪರಿಸ್ಥಿತಿಯ ಜೊತೆಗೆ ಸಿನಿಮಾಗಳ ಕಾಂಪಿಟಿಷನ್‌ನ್ನು ಅವರು ಎದುರಿಸಲಿಕ್ಕೆ ಅಸಮರ್ಥರಾಗಿದ್ದಾರೆ. ಇವತ್ತು ನೋಡುತ್ತಾ ಇದ್ದೇವೆ ಬೆಂಗಳೂರು ನಗರದಲ್ಲಿ ಕೆಲವು ಸಿನಿಮಾಗಳ ವಾಲ್‌ಪೋಸ್ಟರ್ಸ್ ನೋಡಿದರೆ ಎಲ್ಲರಿಗೂ ಗೊತ್ತಾಗುತ್ತದೆ, ಅಂತಹ ಸಿನಿಮಾಗಳಿಗೇ ಪ್ರೋತ್ಸಹ ಜಾಸ್ತಿ, ತಾಯಿ ಗರ್ಭದಿಂದ ಬರುವಾಗ ಯಾವ ರೀತಿ ಇರುತ್ತೇವೆಯೋ ಆ ರೀತಿ ಸ್ತ್ರೀಯರ ಚಿತ್ರಗಳನ್ನು ಪ್ರದರ್ಶನ ಮಾಡುತ್ತಾರೆ. ಅದು ಕಾಲೇಜು ಹುಡುಗರನ್ನೆ ಅಲ್ಲ ನಮ್ಮಂಥ ವಯಸ್ಸಾದವರ ಮನಸ್ಸನ್ನೂ ಸಹ ಸೆಳೆಯುತ್ತದೆ, ಆ ಮಟ್ಟಕ್ಕೆ ಇವತ್ತು ಜನ ಬಂದಿದ್ದಾರೆ. ಹೀಗಾಗಿ ಇವತ್ತು ನಮ್ಮ ರಂಗಭೂಮಿಯ ಮಟ್ಟ ಇಳಿದಿದೆ, ಇದು ವ್ಯಸನಕರವಾದ ವಿಷಯ. ನಾನು ಮದ್ರಾಸಿನಲ್ಲಿ ವಿದ್ಯಾರ್ಥಿಯಾಗಿದ್ದೆ, ಅಲ್ಲಿಗೆ ಬಂದ ನಾಟಕಗಳಲ್ಲಿ ಅನೇಕ ನಾಟಕಗಳು ಉತ್ತಮ ಮಟ್ಟದವಾಗಿದ್ದವು, ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿಯ ಸುಬ್ಬಯ್ಯನಾಯ್ಡುರವರು ನಾಗೇಂದ್ರರಾಯರು ಬಂದಾಗ ಅವರನ್ನು ನೋಡಲಿಕ್ಕೆ ಹೋದರೆ ಟಿಕೆಟ್ ಇಲ್ಲ, ಅಷ್ಟು, ಶ್ರೀಮತಿ ಲಕ್ಷಮ್ಮನವರು ಹೇಳಿದ ಹಾಗೆ, ಅತ್ಯಾಧುನಿಕ ರಂಗ ಸಜ್ಜಿಕೆಗಳನ್ನು ಅಳವಡಿಸಿಕೊಂಡಿದ್ದರು.

ನಮ್ಮಲ್ಲಿ ಪ್ರಖ್ಯಾತಿಯಾದಂಥ ನೂರು ನೂರೈವತ್ತು ಮಂದಿ ಶ್ರೇಷ್ಠ ನಟ ನಟಿಯರಿದ್ದರು. ಆ ಹಿಂದಿನ ಕಾಲದ ನಟರು ಈಗಿನಷ್ಟು ಟೆಕ್ನಿಕ್‌ನಲ್ಲಿ ಮುಂದುವರಿಯದಿದ್ದರೂ ನಾಟಕಗಳ ಪ್ರದರ್ಶನದಲ್ಲಿ ಬಹಳ ಉತ್ತಮ ಮಟ್ಟವನ್ನು ತಲುಪಿದ್ದರು. ಶ್ರೀ ಕಟ್ಟೀಮನಿಯವರು

ಸರ್ಕಾರದವರು ಸಾರ್ವಜನಿಕರ ಹಣವನ್ನು ಬಹಳ ಜಾಗರೂಕತೆಯಿಂದ ಖರ್ಚುಮಾಡಬೇಕೆಂದು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಕೆಳಮಟ್ಟದಲ್ಲಿರತಕ್ಕಂಥ ನಾಟಕ ಮಂಡಲಿಗಳು ಮೇಲು ಮಟ್ಟಕ್ಕೇರಿಬೇಕಾದರೆ ಅವುಗಳಿಗೆ ನಾವು ಸಹಾಯವನ್ನು ಮಾಡಲೇಬೇಕಾಗಿದೆ. ನಾವು ರಂಗಭೂಮಿಯ ಮಟ್ಟವನ್ನು ಎತ್ತಬೇಕು. ಹಿಂದೆ ಇದಕ್ಕೆ ರಾಜಾಶ್ರಯವಿತ್ತು. ವಿಶ್ವ ನೇಮಕದಲ್ಲಿ ನಾವು ಯಾವುದನ್ನೆ ನೋಡಲಿ ಒಂದಕ್ಕೆ ಮತ್ತೊಂದರ ಆಶ್ರಯ ಬೇಕೇ ಬೇಕೆಂಬುದಾಗಿ ನಮಗೆ ಕಂಡುಬರುತ್ತದೆ. ಮಗು ಎಳೆಯದಾಗಿದ್ದಾಗ ಅದಕ್ಕೆ ತಾಯಿಯ ಆಶ್ರಯಬೇಕೇಬೇಕು. ಒಂದು ಪೈರು ಬೆಳೆಯಬೇಕಾಗಿದ್ದರೆ ಅದಕ್ಕೆ ಮತ್ತೊಂದು ಗಿಡದ ಆಶ್ರಯಬೇಕು. ಹಿಂದೆ ಮೈಸೂರಿನಲ್ಲಿದ್ದ ಶ್ರೀ ವರದಚಾರ್ ಅವರ ಚಾಮುಂಡೇಶ್ವರಿ ನಾಟಕಮಂಡಲಿಗೆ ರಾಜಾಶ್ರಯ ವಿತ್ತು. ಅಂಥ ಒಂದು ಸಹಾಯ-ಪ್ರೋತ್ಸಾಹಗಳಿಲ್ಲದೆ ಈ ಕಲೆಯು ಬೆಳೆಯಬೇಕಾದರೆ ಬಹಳ ಕಷ್ಟವಿದೆ. ಹಿಂದೆ ಆ ರಾಜರುಗಳಿಗೆ ಇದ್ದ ಅಧಿಕಾರವನ್ನು ಈ ದಿವಸ ನಾವು ತೆಗೆದುಕೊಂಡಿದ್ದೇವೆ. ಆದ್ದರಿಂದ ನಾವು ಅವುಗಳಿಗೆ ಈ ದಿವಸ ಸಹಾಯವನ್ನು ನೀಡಬೇಕಾಗಿದೆ. ಆದರೆ ನಾವು ನೀಡತಕ್ಕ ಸಹಾಯ ಎಷ್ಟಿರಬೇಕು ಯಾವ ರೂಪದಲ್ಲಿರಬೇಕು ಎಂಬುದು ಮತ್ತೆ ಪರಿಶೀಲನೆ ಮಾಡಬೇಕಾದ ವಿಚಾರ. ಶ್ರೀಮತಿ ಲಕ್ಷಮ್ಮನವರು ಇದಕ್ಕೆ 5 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಸಾಕೆಂದು ಹೇಳಿದರು. ಅವರು ಅವನ್ನು ಒಬ್ಬ ಉತ್ತಮ ಗೃಹಿಣಿಯು ತನ್ನ ಸಂಸಾರದ ಆಡಳಿತವನ್ನು ಒಂದು ಅಚ್ಚುಕಟ್ಟಾದ ಚೌಕಟ್ಟಿನಲ್ಲಿ ನಡೆಸತಕ್ಕ ಅನುಭವದ ಆಧಾರದಮೇಲೆ ಹೇಳಿದ್ದಾರೆಂದು ನಾನು ಭಾವಿಸಿದ್ದೇನೆ........

ಶ್ರೀಮತಿ ಎಂ. ಆರ್. ಲಕ್ಷಮ್ಮ.—ನಾನು ಎಲ್ಲಿ ಇನ್ನು ಶ್ರೀಮಾನ್ ಬಸವರಾಜ ಕಟ್ಟೀಮನಿ ಯವರು ಕೋಪ ಮಾಡಿಕೊಳ್ಳುತ್ತಾರೋ ಎಂದು ಐದು ಲಕ್ಷ ರೂಪಾಯಿಗಳನ್ನಾದರೂ ಕೊಡಬೇಕೆಂದು ಹೇಳಿದೆ ..

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಈ ದಿವಸ ಜನರಿಗೆ ತಿನ್ನಲು ಆಹಾರವಿಲ್ಲ, ಉಡುವುದಕ್ಕೆ ಬಟ್ಟೆಯಿಲ್ಲ ಮತ್ತು ವಾಸಮಾಡುವುದಕ್ಕೆ ಮನೆಗಳಿಲ್ಲ ಎಂದು ನಾವೆಲ್ಲರೂ ಹೇಳುತ್ತಿದ್ದೇವೆ. ಆದರೆ ನಾವುಗಳು ಯಾರು ಇಲ್ಲಿ ಬಂದು ಟೆಂಟುಗಳಲ್ಲಿ ವಾಸಮಾಡುತ್ತಿಲ್ಲ. ನಾವೆಲ್ಲರೂ ಫ್ಯಾನ್ ಇರತಕ್ಕ ರೂಮುಗಳನ್ನೇ ಕೇಳುತ್ತೇವೆ. ನಮ್ಮ ಶಾಸಕರ ಭವನದಲ್ಲಿ ಯಾವುದಕ್ಕೇನು ಕೊರತೆಯಿದೆ? ನಮ್ಮ ಗಮನ ಸರ್ವತೋಮುಖವಾದ ಅಭಿವೃದ್ಧಿಯಾಗಬೇಕು ಎಂಬುದು. ಸರ್ಕಾರದವರು ಈ ದಿವಸ ಸಿನೀಮಗಳಿಗೇಕೆ ಸಹಾಯ ಮಾಡಬೇಕು? ಹಾಗೆ ಅವರಿಗೆ ಕೊಡತಕದ್ದು ಉಚಿತವೆಂದು ಇವರಿಗೆ ಕಂಡುಬಂದಿದ್ದರೆ ಅಷ್ಟೇ ಸಹಾಯವನ್ನು ಈ ನಾಟಕ ಕಂಪೆನಿಯವರಿಗೂ ಮಾಡಬೇಕು. ಈ ನಾಟಕ ಮಂಡಲಿಗಳೂ ಕೂಡ ಒಂದು ರೀತಿಯಲ್ಲಿ ಸಮಾಜದಲ್ಲಿ ಜನರಿಗೆ ನೀತಿ ಬೋಧೆ ಮತ್ತು ಧರ್ಮಗಳನ್ನು ಪ್ರಚಾರ ಮಾಡತಕ್ಕ ಏಜನ್ಸಿಗಳಾಗಿರುತ್ತವೆ. ಈ ನಾಟಕಗಳಿಗೆಲ್ಲಾ ಬೇಕಾದುದೇನು? ಒಂದು ಕಥಾ ವಸ್ತು ಮತ್ತು ನೋಡತಕ್ಕ ಜನರು. ಇಷ್ಟಾದರೆ ಸಾಕು. ಈ ದಿವಸ ಜನರಿಗೆ ಈ ನಾಟಕಗಳಲ್ಲಿ ಅಭಿರುಚಿ ಕಡಮೆಯಾಗುತ್ತಿದೆ. ಅದಕ್ಕೆ ಕಾರಣಗಳು ಅನೇಕ. ಹಿಂದೆ ಇವುಗಳಿಗೆ ಬೇಕಾದಂಥ ಕಥಾ ವಸ್ತುಗಳನ್ನು ಭಾರತ, ರಾಮಾಯಣ ಇಂಥ ಗ್ರಂಥಗಳಿಂದ ಎತ್ತಿಕೊಳ್ಳುತ್ತಿದ್ದರು. ಆದರೆ ಈ ದಿವಸದ ನಾಟಕಗಳ ಕಥಾ ವಸ್ತುವಿನಲ್ಲಿ ಬಂಡವಾಳವೇ ಇರುವುದಿಲ್ಲ. ಉತ್ತಮ ಮಟ್ಟದ ಗವಾಯಿಗಳೆಲ್ಲಾ ನಾಟಕ ಕಂಪೆನಿಗಳನ್ನು ಬಿಟ್ಟು ಸಿನೀಮಾಗಳಿಗೆ ಇಳಿದುಬರುತ್ತಿದ್ದಾರೆ. ಇಲ್ಲಿ ನಿವೃತ್ತ ನಟರಿಗೆ ಸಹಾಯಮಾಡಬೇಕು. ಆ ಸಹಾಯವನ್ನು ಸರ್ಕಾರ ಕೊಡಬೇಕು. ಈ ರಂಗಭೂಮಿಯಲ್ಲಿ ಬಹಳ ವರ್ಷಗಳ ಕಾಲ ಸೇವೆಮಾಡಿ ಜನರಿಗೆ ಮನರಂಜನೆ ಹಾಗೂ ನೀತಿ ಧರ್ಮಗಳನ್ನು ಪ್ರಚಾರ ಮಾಡಿದ ಜನರಿಗೆ ಸರ್ಕಾರದವರು ಸಹಾಯ ಮಾಡುವುದರಲ್ಲಿ ತಪ್ಪೇನಿದೆ? ಈ ದಿವಸ ನಮ್ಮಲ್ಲಿ ಉತ್ತಮವಾದ ನಾಟಕ ಕಂಪೆನಿಗಳು ಬೆಳೆಯಬೇಕಾದರೆ ಅವುಗಳಿಗೆ ಸಹಾಯ ಅತ್ಯಗತ್ಯ. ನಮ್ಮ ಹಿಂದೂ ಧರ್ಮದ ಧವಳಕೀರ್ತಿಯನ್ನು ನಾವು ಎತ್ತಿಹಿಡಿಯಬೇಕಾಗಿದ್ದರೆ ನಾವು ಈ ನಾಟಕ ಕಂಪೆನಿಗಳಿಗೆ ಹೆಚ್ಚು ಸಹಾಯ ನೀಡಬೇಕಾದ್ದು ಅಗತ್ಯವೆಂದು ಹೇಳಬಯಸುತ್ತೇನೆ. ಹಿಂದಿನ ಕಾಲದಲ್ಲಿ ರಾಜಮಹಾರಾಜರುಗಳಿಂದ ಈ ಕಲೆಗೆ ಬಹಳ ಪ್ರೋತ್ಸಾಹವಿತ್ತು. ಆ ಕಾಲದಲ್ಲಿ ಒಬ್ಬ ಭೋಜರಾಜನು ಇಲ್ಲದಿದ್ದರೆ ಬಹುಶಃ ಕಾಳಿದಾಸನೂ ಇರುತ್ತಿದ್ದನೋ ಇಲ್ಲವೋ ಗೊತ್ತಾಗುವುದಿಲ್ಲ. ಅಂತೂ ಒಟ್ಟಿನಲ್ಲಿ ಒಬ್ಬರಿಗೆ ಇನ್ನೊಬ್ಬರ ಆಶ್ರಯ ಬೇಕೇ ಬೇಕು. ಈ ದಿವಸ ಕಮ್ಯುನಿಷ್ಟ ರಾಷ್ಟ್ರವಾದ ರಷ್ಯಾದೇಶದಲ್ಲೂ ಕೂಡ ಥಿಯೇಟ್ರಿಕಲ್ ಕಂಪೆನಿಗಳವರಿಗೆ ಸಹಾಯ ಮಾಡಿ ತನ್ಮೂಲಕ ವಿದ್ಯಾಪ್ರಚಾರವನ್ನು ನಡೆಸುತ್ತಿದ್ದಾರಂತೆ. ಆ ದೇಶದಲ್ಲಿ 50 ಭಿನ್ನ ಭಿನ್ನ ಭಾಷೆಯ ನೂರು ನಾಟಕ ಮಂಡಳಿಗಳಿವೆಯಂತೆ. ನಾನು ಅಲ್ಲಿಗೇನೂ ಹೋಗಿ ನೋಡಿಕೊಂಡು ಬಂದವನಲ್ಲ. ಪುಸ್ತಕಗಳನ್ನು ಓದಿರತಕ್ಕ ಅನುಭವದಿಂದ ಇದನ್ನು ಹೇಳುತ್ತಿದ್ದೇನೆ. ಆದರೆ ಈ

(ಶ್ರೀ ಕೆ. ಸೂರ್ಯನಾರಾಯಣ ಅಡಿಗ)

ವಿಚಾರ ರಷ್ಯಾದೇಶದಲ್ಲಿ ಪ್ರವಾಸ ಮಾಡಿಕೊಂಡು ಬಂದಿರತಕ್ಕ ಶ್ರೀಮಾನ್ ಕಟ್ಟೀಮನಿಯವರಿಗೆ ಇನ್ನೂ ಹೆಚ್ಚಿಗೆ ಗೊತ್ತಿರಬಹುದು. ಈ ದಿವಸ ಬಯಲು ನಾಟಕಗಳವರೂ ಕೂಡ ಟೆಂಟುಗಳನ್ನು ಹಾಕಿ ಬಯಲಾಟಕ್ಕೂ ಜನರಿಂದ ದುಡ್ಡನ್ನು ವಸೂಲ್ಮಾಡುತ್ತಿದ್ದಾರೆ. ಹಿಂದಿನ ಕಾಲದಲ್ಲಿ ಊರಲ್ಲಿರತಕ್ಕ ದೊಡ್ಡ ದೊಡ್ಡ ಮನುಷ್ಯರು ಆ ಬಯಲಾಟಕ್ಕೆ ಬೇಕಾದ ಖರ್ಚುಗಳನ್ನು ಕೊಟ್ಟು ಊರಿನ ಜನರಿಗೆ ಮನರಂಜನೆಯನ್ನು ಉಚಿತವಾಗಿ ದೊರೆಯುವಂತೆ ಮಾಡುತ್ತಿದ್ದರು. ಈ ದಿವಸ ಅಂಥ ದಾತರು ಕಡಮೆಯಾಗುತ್ತಿದ್ದಾರೆ. ಅನ್ನ ಹೊಟ್ಟೆ ಬಟ್ಟೆಗಿಲ್ಲದ ಜನರು ಈ ನಾಟಕಗಳನ್ನು ನೋಡುವುದಕ್ಕಾದರೂ ಎಲ್ಲಿ ಸಾಧ್ಯವಿದೆ. ಮಲೆನಾಡಿನಲ್ಲಿ ಬಯಲಾಟ ಯಕ್ಷಗಾನಗಳಿಗೆ ಬಹಳ ಆಕರ್ಷಣೆಯಿತ್ತು. ಬಯಲಾಟ ಮತ್ತು ಯಕ್ಷಗಾನಗಳ ಮೂಲಕ, ಹಿಂದಿನ ಕಾಲದಲ್ಲಿ ಜನರು ಸತ್ಯ ಧರ್ಮಗಳಿಗಾಗಿ ಹೇಗೆ ಹೋರಾಟಗಳನ್ನು ನಡೆಸಿದ್ದಾರೆ ಎಂಬುದನ್ನು ಜನರಿಗೆ ಬೋಧಿಸುವುದರ ಜೊತೆಗೆ ಮನರಂಜನೆಯನ್ನೂ ಕೂಡ ಒದಗಿಸುತ್ತಿದ್ದರು. ಹಿಂದಿನ ಕಾಲದಲ್ಲಿ ಹೀಗೆ ಒಂದು ರೀತಿಯಲ್ಲಿ ಧರ್ಮಪ್ರಸಾರ ಕಾರ್ಯ ನಡೆಯುತ್ತಿತ್ತು. ಆದರೆ ಇತ್ತೀಚೆಗೆ ನಮ್ಮ ಸರ್ಕಾರದವರು ನಾಲ್ಕನೇ ಪಂಚವಾರ್ಷಿಕ ಯೋಜನೆಯ ಯಶಸ್ಸಿಗಾಗಿ ಕೆಲವು ಅಮೆಚೂರು ನಾಟಕ ಸಂಘಗಳಿಗೆ ಹಣವನ್ನು ಕೊಟ್ಟು ಪ್ರೋತ್ಸಾಹಿಸುತ್ತಿದ್ದಾರೆಂದು ಕೇಳುತ್ತಿದ್ದೇನೆ. ಅದೇ ರೀತಿಯಲ್ಲಿ ಈಗಿರುವಂಥ ಥಿಯೇಟರುಗಳ ಕಂಪನಿಗಳು ಎಷ್ಟಿವೆ ಎಂಬುದನ್ನು ನೋಡಿ ಅವುಗಳಿಗೂ ಸಹಾಯ ಕೊಟ್ಟರೆ ನಿಜವಾಗಿ ರಂಗಭೂಮಿಗಳಿಗೂ ಹೆಚ್ಚಿನ ಸಹಾಯ ಮಾಡಲಿಕ್ಕೆ ಆಗುತ್ತದೆನ್ನುವುದನ್ನು ನಾನು ಸರ್ಕಾರಕ್ಕೆ ಸಲಹೆ ಕೊಡಬಯಸುತ್ತೇನೆ.

6-00 P.M.

ಶ್ರೀ ಎಂ. ವಿ. ವೆಂಕಟಪ್ಪ.—ಹರಿಕಥೆ ಮಾಡುವವರಿಗೆ ?

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಅವರೂ ಕೂಡ ತಮ್ಮ ಕೈಲಾದಷ್ಟು ಪ್ರಸಾರ ಮಾಡುತ್ತಿದ್ದಾರೆ. ಇವತ್ತು ನಾಟಕದ ಮಟ್ಟಿಗೆ ಮಾತ್ರ ಹೇಳುತ್ತಿದ್ದೇನೆ. ಇನ್ನೊಂದು ದಿವಸ ಹರಿಕಥೆ ಮಾಡುವವರ ವಿಷಯ ಹೇಳೋಣ. ನಮ್ಮ ಯಕ್ಷಗಾನದ ವಿಷಯದಲ್ಲಿ ಹೇಳುವುದಾದರೆ, ಅಲ್ಲಿ ಕತ್ತಲಲ್ಲಿಯೇ ಕುಣಿದಾಡುತ್ತಾ ಹಾಡುತ್ತಿರುತ್ತಾರೆ. ನಾಟಕದ ಕಂಪೆನಿಗಳಿಗೆ ರಂಗ ಮಂದಿರಗಳು ಬೇಕು. ಇವತ್ತು ನಮ್ಮ ರಾಜ್ಯದಲ್ಲಿ ಪ್ರಪ್ರಥಮವಾಗಿ ಪರ್ಮನೆಂಟಾಗಿರತಕ್ಕ ಥಿಯೇಟರುಗಳೇ ಇಲ್ಲ. ಎಲ್ಲವನ್ನೂ ನಾಟಕದ ಕಂಪೆನಿಗಳೇ ಮಾಡಿಕೊಳ್ಳಬೇಕೆಂದರೆ ಬಹಳ ಕಷ್ಟ. ಅವರೇ ಕುರ್ಚಿಗಳನ್ನು ಮಾಡಿಸಬೇಕು, ಅವರೇ ಅದಕ್ಕೆ ಬೇಕಾದಂಥ ಪ್ರದರ್ಶನ ಮಾಡಿಕೊಳ್ಳಬೇಕು ಮತ್ತು ಊರಿಂದ ಊರಿಗೆ ಎಲ್ಲ ಸಾಮಾನುಗಳನ್ನು ಸಾಗಿಸಿಕೊಂಡು ಎತ್ತಿಕೊಂಡು ಹೋಗಬೇಕಾದರೆ ಅವರಿಗೆ ಬಹಳ ಅನಾವಶ್ಯಕವಾದ ಖರ್ಚುಗಳು ಆಗುತ್ತವೆ. ಆದ್ದರಿಂದ ಸರ್ಕಾರದವರು ಎಲ್ಲಾ ಕಡೆಗಳಲ್ಲಿ ಥಿಯೇಟರುಗಳನ್ನು ಕಟ್ಟಿಸಿಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಅವುಗಳನ್ನು ಟೂರಿಂಗ್ ಥಿಯೇಟರ್‌ಗಳ ಕಂಪೆನಿಯವರಿಗೆ ಇಷ್ಟೇ ಬಾಡಿಗೆ ಎಂಬುದಾಗಿ ನಿರ್ಧರಿಸಿ ಬಾಡಿಗೆರೂಪದಲ್ಲಿ ಅವರಿಗೆ ಕೊಡಬೇಕು. ಆ ರೀತಿ ಮಾಡುವುದಕ್ಕೆ ಸಾಧ್ಯವಿದೆ. ಮಂಗಳೂರಿನಲ್ಲಿ ಒಂದು ಸುಂದರವಾದ ಟೌನ್ ಹಾಲ್ ಕಟ್ಟಿಸಿದ್ದಾರೆ. ಅದು ಇಲ್ಲಿನ ಪುಟ್ಟಣ್ಣಶೆಟ್ಟಿ ಟೌನ್ ಹಾಲ್ ಇದ್ದ ಹಾಗೆ ಇದೆ. ಅಲ್ಲಿ ನಗರಸಭೆಯವರು ಇನ್ನುಮುಂದೆ ಅಲ್ಲಿನ ಟೌನ್‌ಹಾಲಿನಲ್ಲಿ ನಾಟಕ ಪ್ರದರ್ಶನ ಮಾಡಿದರೆ, ಒಂದು ನಾಟಕಕ್ಕೆ 360 ರೂಪಾಯಿಗಳನ್ನು ಕೊಡಬೇಕೆಂದು ನಿಗದಿಮಾಡಿದ್ದಾರೆ. ಮೈಸೂರಿನ ಮಾನ್ಯ ಶ್ರೀಮತಿ ನಾಗರತ್ನಮ್ಮನವರೇ 'ಸ್ತ್ರೀ ನಾಟಕ ಮಂಡಲಿ' ಎಂಬುವರನ್ನು ಅಲ್ಲಿಗೆ ಕರೆದುಕೊಂಡು ಬಂದರು. ಅವರಿಗೆ ಸಾಕಷ್ಟು ಹಣದ ತೊಂದರೆ ಇದ್ದುದರಿಂದ, ಅವರು ನಾಟಕವಾಡದೆ ಹಿಂದಕ್ಕೆ ಹೋಗಬೇಕಾದ ಪ್ರಸಂಗ ಬಂತು. ಆ ರೀತಿಯಾದರೆ ಕಲೆಗೆ ಪ್ರೋತ್ಸಾಹ ಹೇಗೆ ಕೊಟ್ಟಂತಾಯಿತು ? ರಾಜ್ಯ ಸರ್ಕಾರದವರು ಇದೇ ರೀತಿಯಾಗಿ ಪ್ರತಿಯೊಂದು ವರ್ಷವೂ ಕಲೆಗೆ ಪ್ರೋತ್ಸಾಹ ಕೊಡುತ್ತಿದ್ದೇವೆಂದು ಹೇಳುತ್ತಲೇ ಇದ್ದಾರೆ. ಮಾನ್ಯ ಶ್ರೀ ಕಡಿದಾಳ್ ಮಂಜಪ್ಪನವರು ಮುಖ್ಯಮಂತ್ರಿಯಾಗಿದ್ದಾಗಲೂ ಸಹ ನಾವು ಪತ್ರಿಕೆಗಳಲ್ಲಿ ಇಂತಹ ಕಲೆಗಳಿಗೆ ಪ್ರೋತ್ಸಾಹ ಸರ್ಕಾರದವರು ಕೊಡುತ್ತಿದ್ದಾರೆಂದು ಹೇಳಿರುವುದನ್ನು ಓದಿದ್ದೇವೆ. ಹಳೆಯ ಮೈಸೂರು ಹೋಯಿತು, ಹೊಸ ಮೈಸೂರು ಆಯಿತು ಥಿಯೇಟರುಗಳನ್ನು ಕಟ್ಟಿಸುತ್ತೇವೆಂದು ಹೇಳಿ ಎಷ್ಟೋ ವರ್ಷಗಳು ಆದವು. ಈಗ ಮಾನ್ಯ ಶ್ರೀ ಶಂಕರಗೌಡರು ಬಂದರು. ಅವರೂ ಹೇಳುತ್ತಿದ್ದಾರೆ. ಆದರೆ ಥಿಯೇಟರುಗಳನ್ನು ಒಟ್ಟಿಗೆ ಕಟ್ಟಬೇಕೆಂದು ಹೇಳುವುದಿಲ್ಲ.

ಶ್ರೀ ವಿ. ವೆಂಕಟಪ್ಪ.—ಓಪನ್ ಥಿಯೇಟರ್ ಮಾಡಬೇಕೆಂದಿದ್ದಾರೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಈ ಸಾರಿ ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಾಗೆ ವಿದ್ಯಾಮಂತ್ರಿಗಳು ಮಂಡ್ಯಾ ಜಿಲ್ಲೆಯಲ್ಲಿ ಒಂದು ಥಿಯೇಟರನ್ನು ಕನ್‌ಸ್ಟ್ರಕ್ಟ್ ಮಾಡಿದರೆ ಒಳ್ಳೆಯದಾಗುತ್ತದೆ. ಹೀಗೆ ಒಂದೊಂದು ಜಿಲ್ಲೆಯಲ್ಲಿ ಸರ್ಕಾರದವರು ಒಂದೊಂದು ಥಿಯೇಟರ್ ಮಾಡಿ ಕೊಡಬೇಕು. ಆ ರೀತಿ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಇಂಗ್ಲೆಂಡ್‌ನಲ್ಲಿ ಮತ್ತು ಯುನೈಟೆಡ್ ಕಿಂಗ್‌ಡಂಗಳಲ್ಲಿ ಸಿವಿಕ್ ಥಿಯೇಟರುಗಳು ಬಹಳವಾಗಿವೆ. ಒಂದಕ್ಕಿಂತ ಕಡಿಮೆ ಇಲ್ಲದ ಊರು ಇಲ್ಲ. ಟೂರಿಂಗ್ ಥಿಯೇಟರುಗಳು ಅಲ್ಲಿಗೆ ಬಂದರೆ, ಅಲ್ಲಿರುವವರು ಬಹಳ ಕಡಿಮೆ ದರದಲ್ಲಿ ನಾಟಕಗಳನ್ನು ಆಡಬಹುದು. ಅಲ್ಲಿ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಮಾಡುವ ಅವಶ್ಯಕತೆ ಇಲ್ಲ. ಈಗ ಇಂಗ್ಲೆಂಡಿನಲ್ಲಿಯೂ ನಾಟಕದ ಕಂಪೆನಿಗಳು ಕಡಿಮೆಯಾಗುತ್ತಾ ಇವೆ. ಎಂಬ ಪ್ರಸ್ತಾಪ ಬಂತು. ಅಲ್ಲಿನ ಅಂಕಿ ಅಂಶಗಳಿಂದ ಆ ರೀತಿ ತಿಳಿದುಬಂದಿದೆ. 1920ನೇ ಇಸವಿಯಲ್ಲಿ 250 ಟೂರಿಂಗ್ ಥಿಯೇಟರುಗಳಿದ್ದುವು. 1960ನೇ ಇಸವಿಯಲ್ಲಿ 20 ಆದವು. ನಾಟಕದ ಮೇಲೆ ವ್ಯಾಮೋಹ ಕಡಿಮೆಯಾಗಿ ಅಲ್ಲಿಯೂ ಸಿನಿಮಾ ಹುಚ್ಚು ಟೆಲಿವಿಷನ್ನಿನಲ್ಲಿ ಮಾನ್ಯತೆ ಹೆಚ್ಚಿಗೆ ಕಾಣುತ್ತಿದೆ. ಗ್ರೇಟ್ ಬ್ರಿಟನ್ನಿನಲ್ಲಿ ನಾನ್ ಪ್ರಾಫಿಟ್ ಬೇಸಿಸ್ ಮೇಲೆ, ಅಂದರೆ ಹೆಚ್ಚಿನ ಲಾಭ ಇಲ್ಲದ ರೀತಿಯಲ್ಲಿ ಥಿಯೇಟರ್ಸ್‌ಗಳನ್ನು ಮಾಡಿ ಲಲಿತ ಕಲೆಯನ್ನು ಪುನರುಜ್ಜೀವನಗೊಳಿಸಿದ್ದಾರೆ. ಆ ನಮೂನೆ ಇಲ್ಲಿಯೂ ಮಾಡಬೇಕಾಗಿದೆ. ಹಿಂದೆ ಮಾನ್ಯ ಶ್ರೀ ಗುಬ್ಬಿ ವೀರಣ್ಣನವರು, ಮಾನ್ಯ ಶ್ರೀ ಗಂಗಾಧರ್‌ರಾವ್ ಅವರು, ಮತ್ತು ಮಾನ್ಯ ಪೀರ್ ಸಾಬ್ ಅಂತಹವರು ನಾಟಕ ಕಂಪೆನಿಯ ಬಗ್ಗೆ ಹೇರಳವಾಗಿ ಖರ್ಚು ಮಾಡಿದರು. ಮಾನ್ಯ ಶ್ರೀ ಪೃಥ್ವೀರಾಜ್ ಕಪೂರ್, ಪೃಥ್ವೀ ಥಿಯೇಟರಿನ ಸಂಬಂಧದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಲಾಸ್ ಮಾಡಿಕೊಂಡಿದ್ದಾರೆ. ಆದ್ದರಿಂದ ಇವತ್ತು ಪೃಥ್ವೀ ಥಿಯೇಟರ್ಸ್ ವೈಂಡಪ್ ಆಗಿದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಸರ್ಕಾರದವರು ಇಂಥಾದ್ದಕ್ಕೆ ಸಹಾಯ ಕೊಡುವುದು ಅವಶ್ಯಕವಿದೆ. ಅಮೇರಿಕಾ ದೇಶದಲ್ಲಿಯೂ ಕೂಡ ಇದೇ ರೀತಿಯಲ್ಲಿ ತುಂಬಾ ಸಹಾಯ ಮಾಡುತ್ತಿದ್ದಾರೆ. ಇನ್ನು ಅಮೇರಿಕಾದೇಶದಲ್ಲಿ ಯೂನಿವರ್ಸಿಟಿ ಥಿಯೇಟರ್ಸ್ ಮತ್ತು ಕಮ್ಯೂನಿಟಿ ಥಿಯೇಟರ್ಸ್ ಎಂಬುವು ಇವೆ. ಅಲ್ಲಿ ಟೂರಿಂಗ್ ಥಿಯೇಟ್ರಿಕಲ್ ಕಂಪೆನಿಗಳು ಮತ್ತು ಪ್ರಿಜನರ್ಸ್ ಥಿಯೇಟ್ರಿಕಲ್ ಕಂಪೆನಿಗಳು ಸುಮಾರು 56 ಇವೆ. ಆದರೆ ಅಲ್ಲರತಕ್ಕ ಸಿನಿಮಾ ಮತ್ತು ಟೆಲಿವಿಷನ್ನುಗಳಿಂದ ಈಗ ಅಲ್ಲಿನ ಟೂರಿಂಗ್ ಥಿಯೇಟರುಗಳಿಗೆ ಧಕ್ಕೆ ಬಂದಿದೆ. ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಕೂಡ ಇನ್ನು ಮುಂದೆ ಟೂರಿಂಗ್ ಥಿಯೇಟ್ರಿಕಲ್ ಕಂಪೆನಿಯವರಿಗೆ ಅಲ್ಲಿನ ಹಾಗೆ ಸಹಾಯ ಮಾಡುವ ಅವಶ್ಯಕತೆ ಇದೆಯೆಂದು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳಬಯಸುತ್ತೇನೆ. ಇವತ್ತು ಸಿನಿಮಾಗಳಿಗೆ ಸಹಾಯ ಕೊಡುತ್ತೀರಿ. ಅದು ಹೆಚ್ಚಿನ ಜನರಿಗೆ ಬೇಕು. ಸಿನಿಮಾ ಚಿತ್ರಗಳಿಗೆ ಸಹಾಯ ಕೊಡುವ ಔಚಿತ್ಯ, ಕಾರಣವೇನು ಎಂಬುದಾಗಿ ಹಿರಿಯ ಸಾಹಿತಿ ಮಾನ್ಯ ಶ್ರೀ ಕಟ್ಟೀಮನಿಯವರು ಹೇಳಿದರು. ಕನ್ನಡಪ್ರಭದಲ್ಲಿ ವಿದ್ಯಾಮಂತ್ರಿಗಳು ಹೇಳಿರುವ ಒಂದು ಮಾತು ಬಂದಿದೆ. ಸಬ್ಸಿಡಿ ಕೊಟ್ಟಮೇಲೆ ಕನ್ನಡ ಚಿತ್ರಗಳ ಮಟ್ಟ ಕೆಳಗೆ ಇಳಿಯುತ್ತಾ ಇದೆಯೆಂದೂ, ಇತ್ತೀಚೆಗೆ ಆ ಮಟ್ಟವೇ ಇಳಿದುಹೋಗುತ್ತಿದೆ ಎಂಬುದಾಗಿ ಅವರು ಹೇಳಿದ್ದಾರೆ. ಅವರು ಬಹಳ ಧೈರ್ಯಶಾಲಿ. ಯಾವುದೋ ಒಂದು ಸಿನಿಮಾವನ್ನು ಉದ್ಘಾಟನೆ ಮಾಡುವಾಗ ಆ ರೀತಿ ಹೇಳಿದ್ದಾರೆ. ಆದರೆ ಅವರು ಆ ರೀತಿ ಹೇಳಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ಕನ್ನಡ ಸಿನಿಮಾ ಚಿತ್ರಮಟ್ಟವಂತೂ ಕೆಳಗೆ ಇಳಿದಿದೆ. ಆದರೆ ಸಬ್ಸಿಡಿ ಕೊಡುವ ಉದ್ದೇಶವಾದರೂ ಏನೆಂದು ಮಾನ್ಯ ಶ್ರೀ ಕಟ್ಟೀಮನಿಯವರು ಒಂದು ಪ್ರಶ್ನೆಯನ್ನು ಹಾಕಿದ್ದಾರೆ. ಕನ್ನಡ ಚಿತ್ರಗಳನ್ನು ಮೇಲಕ್ಕೆ ಎತ್ತುವುದಕ್ಕೆ ಸಹಾಯ ಮಾಡುವುದೇ ಅದರ ಉದ್ದೇಶ. ಮೈಸೂರಿನಲ್ಲಿ ಯಾರಾದರೂ ಚಿತ್ರ ತಯಾರು ಮಾಡಿದರೆ, ಅಂತಹವರಿಗೆ 50 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದರು. ಅದನ್ನು 5 ಲಕ್ಷ ರೂಪಾಯಿಗಳವರೆಗೂ ಹೆಚ್ಚಿಸಬೇಕೆಂದು ಮಾನ್ಯ ಶ್ರೀಮತಿ ಲಕ್ಷಮ್ಮನವರು ಹೇಳುತ್ತಿದ್ದಾರೆ. ಕೊನೆಯಪಕ್ಷ 100 ಸಾವಿರ ರೂಪಾಯಿಗಳನ್ನು ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. ಒಬ್ಬನ ಮುಖಕ್ಕೆ ಬಣ್ಣ ಹಚ್ಚದ ಷೂಟಿಂಗ್ ಮಾಡಿ ಅದಷ್ಟು ಸುಲಭದಲ್ಲಿ ಚಿತ್ರಗಳನ್ನು ತಯಾರು ಮಾಡಬೇಕೆಂದು ಹೇಳಿದ್ದಾರೆ. ಆದರೂ ಎಲ್ಲಾ ಕನ್ನಡ ಚಿತ್ರಗಳ ಮಟ್ಟ ಇತ್ತೀಚೆಗೆ ಬಹಳ ಕೆಳಮಟ್ಟಕ್ಕೆ ಬಂದಿದೆ. 10–11 ಚಿತ್ರಗಳಿಗೆ 50 ಸಾವಿರ ರೂಪಾಯಿ ಕೊಟ್ಟಿದ್ದಾರೆ. ಇವತ್ತು ಅದರ ಮಟ್ಟ ಕೆಳಗೆ ಇಳಿದಿದೆ. ಹಾಗಾದರೆ ನಮ್ಮ ನಾಟಕ ತಯಾರಕರು ನಾಟಕವನ್ನು ಮಾಡಿದರೂ ಅವರಿಗೂ ಹಣ ಕೊಡಬೇಕು ; ಯಾರು ಪುಸ್ತಕ ಬರೆದರೂ ಕೊಡಬೇಕೆಂದು ಬರಬಹುದು. ಸ್ವಲ್ಪ ಏನಾದರೂ ಕಾಂಟ್ರಿಬ್ಯೂಷನ್ ಆದರೂ ಕೊಡಬೇಕಾಗಬಹುದು. ನನಗೆ ಚಲನಚಿತ್ರಗಳಮೇಲೆ ಏನೂ ದ್ವೇಷವಿಲ್ಲ. ಅವರಿಗೆ ಕೊಡುತ್ತಿರುವ ಸಬ್ಸಿಡಿಯ ಧೋರಣೆ ಬದಲಾವಣೆ ಮಾಡಬೇಕು. ನಮ್ಮ ಮೈಸೂರು ರಾಜ್ಯದಲ್ಲಿ ಈ ಚಿತ್ರೋದ್ಯಮವನ್ನು ಬೆಳೆಸಬೇಕು, ಅದರಿಂದ ಮದ್ರಾಸಿನಲ್ಲಿ ತೆಗೆಯುವುದನ್ನು, ಇಲ್ಲಿ ತೆಗೆಯಬೇಕೆಂಬ ಒಂದು ಉದ್ದೇಶದಿಂದ ಈ ರೀತಿಯಲ್ಲಿ ಕೊಡುತ್ತಿದ್ದಾರೆ. ಮೊದಲು ಸ್ಟುಡಿಯೋ ಇರಲಿಲ್ಲ,

(ಶ್ರೀ ಕೆ. ಸೂರ್ಯನಾರಾಯಣ ಅಡಿಗ)

ಈಗ ಒಂದೆರಡು ಮೂರು ಸ್ಟುಡಿಯೋ ಇವೆ. ಇವತ್ತು ನಾಟಕ ಕಂಪೆನಿಯು ಕೂಡ ನಶಿಸಿ ಹೋಗುತ್ತದೆ. ಮಂಗಳೂರಲ್ಲಿ ಒಂದು ನಾಟಕ ಕಂಪೆನಿಯು ನಾಟಕವನ್ನು ಆಡಿ, ಅವರಿಗೆ ನಷ್ಟವಾಗಿ, ಕೊನೆಗೆ ಅಂಗಡಿಯ ದಿನಸಿ ಸಾಮಾನುಗಳ ದುಡ್ಡು ಕೊಡಲಾರದೆ, ಅವರ ಪರದೆ, ಮತ್ತು ಇತರ ಸಾಮಾನುಗಳನ್ನು ಒತ್ತೆ ಇಡಬೇಕಾಯಿತು. ಇವತ್ತೂ ಆ ಪರದೆಗಳು ಕೆಲವರ ಹತ್ತಿರ ಇವೆ. ಈ ರೀತಿಯಲ್ಲಿ ನಾಟಕ ಕಂಪೆನಿಯವರಿಗೆ ಆಗಬಾರದು. ಆಗ ನಮ್ಮ ರಾಜ್ಯದಲ್ಲಿ ಇರುವ ಕಂಪೆನಿಗಳು ಹೊರಗೆ ಹೋಗಬೇಕಾದ ಆವಶ್ಯಕತೆಯೂ ಇರುವುದಿಲ್ಲ. ಯಾವ ರೀತಿಯಿಂದ ಶಾಲೆಗೆ ಗ್ರಾಂಟು ಕೊಟ್ಟು ಉಪಾಧ್ಯಾಯರಿಗೆ ಸಂಬಳ ಕೊಡುತ್ತಾರೋ, ಅದೇ ರೀತಿ ಈ ನಾಟಕ ಕಂಪೆನಿಯವರಿಗೂ ಗ್ರಾಂಟ್ ಕೊಟ್ಟರೆ, ಅಲ್ಲಿನ ನಟ ನಟಿಯರಿಗೆ ಸಂಬಳ ಸಾರಿಗೆಗಳನ್ನು ಕೊಡಲು ಅನುಕೂಲವಾಗುತ್ತದೆ. ಮಟ್ಟ ಇಳಿದುದಕ್ಕೆ ಅಸಮರ್ಥತೆ ಕಾರಣವಲ್ಲ. ಜನರಿಗೆ ಟೇಸ್ಟ್ ಯಾವುದು ಎಂಬುದನ್ನು ನೋಡಿಕೊಂಡು ಹಣ ಮಾಡಬೇಕೆಂದು ಈ ರೀತಿಯ ಸಿನೆಮಗಳನ್ನು ಮಾಡುತ್ತಾರೆ. ಸರ್ಕಾರದವರು ಈಗ ಎಲ್ಲದಕ್ಕೂ ಪ್ರೋತ್ಸಾಹ ಕೊಡುತ್ತೇವೆಂದರೆ ಒಳ್ಳೆಯದಲ್ಲ. ಯಾವುದು ಉತ್ತಮವೆಂದು ಇದೆಯೋ, ಅದಕ್ಕೆ ಕೊಡಬೇಕು. ಅದೇ ರೀತಿ ನಾಟಕಕ್ಕೂ ಕೊಟ್ಟರೆ, ಕನ್ನಡ ರಂಗಭೂಮಿ ಹಿಂದೆ ಯಾವ ರೀತಿ ಇತ್ತೋ, ಆ ಕೀರ್ತಿಯನ್ನು ಪುನಃ ಗಳಿಸಿಕೊಂಡು, ಕನ್ನಡ ರಂಗಭೂಮಿಯಿಂದ ನಮ್ಮ ಸಾಹಿತಿಗಳು, ರಾಜಕಾರಣಿಗಳು ಏನು ಅಪೇಕ್ಷಿಸುತ್ತಾರೋ, ಅದು ದೊರಕಬಹುದು. ಅದನ್ನೆಲ್ಲಾ ನಮ್ಮ ನಟ ನಟಿಯರು ಮಾಡಿ ತೋರಿಸುವ ಶಕ್ತಿ ಇದೆ. ಅದನ್ನು ಸರ್ಕಾರದವರು ಮಾಡಿಸಿ ಕೊಡಬೇಕು. ಸೋವಿಯಟ್ ದೇಶದಲ್ಲೂ ಕೂಡ ಫ್ರೀ ಫಿಲಂ ಷೋವನ್ನು ಹಳ್ಳಿಗಾಡುಗಳಲ್ಲಿ ತೋರಿಸುತ್ತಾರಂತೆ. ಇವತ್ತು ನಮ್ಮ ಸರ್ಕಾರದವರೂ ಮಾಡುತ್ತಿದ್ದಾರೆ. ನಾಟಕಗಳ ಮೂಲಕ ಕೂಡ ಜನರಿಗೆ ಮನರಂಜನೆಯನ್ನು ಮಾಡುವುದು ಸರ್ಕಾರದ ಕರ್ತವ್ಯ, ಅದಕ್ಕೆ ಹಣವನ್ನು ಕೊಟ್ಟರೆ, ಕಟ್ಟೀಮನಿಯವರು ಆಕ್ಷೇಪ ಮಾಡಲಿಕ್ಕಿಲ್ಲವೆಂದು ನನ್ನ ಅಭಿಪ್ರಾಯ. ಕೇವಲ ನಾಟಕ ಅಕೆಡಮಿ ಮಾಡಿದ್ದಾರೆಂದು ಹೇಳಿದರೆ ಮಾಡಬೇಕಾದಂತಹುದನ್ನು ಮಾಡಿದ್ದಾರೆಂದು ಒಪ್ಪುವುದಕ್ಕಾಗುವುದಿಲ್ಲ. ಇಲ್ಲಿ ಕೆಲವು ನಮ್ಮ ರಾಜ್ಯದಲ್ಲಿ ಬೇರೆ ಬೇರೆ ಶಾಖೆಗಳು ಇವೆ. ನಾವು ಅಲ್ಲಿ ಏನೂ ಮಾಡುತ್ತಾ ಇಲ್ಲ. ಸರ್ಕಾರದವರು ಹಣ ಕೊಟ್ಟರೆ ನಾವು ಹಂಚುತ್ತೇವೆ. ಈ ಅಕೆಡೆಮಿಗಳು ಬೇರೆ ರಾಜ್ಯಗಳಲ್ಲೂ ಇವೆ. ನಮ್ಮಲ್ಲೂ ನ್ಯಾಷನಲ್ ಥಿಯೇಟರ್ ಆಗಬೇಕೆಂದು ಇದೆ. ನಾವು ರಾಜ್ಯ ಮಟ್ಟದಲ್ಲಿ ಇದನ್ನು ಮಾಡಬೇಕೆಂದು ಹೇಳುವುದು. ಈ ರೀತಿಯಲ್ಲಿ ನಾಟಕಗಳಿಗೆ ಒಂದು ಪ್ರೋತ್ಸಾಹ ಕೊಟ್ಟರೆ, ಹಿಂದೆ ಇದ್ದಂತಹ ನಾಟಕಗಳು ಬರಲಿಕ್ಕೆ ಸಾಧ್ಯವಿದೆ. ವಿದ್ಯಾಮಂತ್ರಿಗಳು ಅನಾವಶ್ಯಕವಾದ ವೆಚ್ಚಗಳನ್ನು ಉಳಿಸಿ ಈ ಕಡೆಗೆ ಪ್ರೋತ್ಸಾಹ ಕೊಡುವಂತೆ ಮಾಡಬಹುದು. ಸರ್ಕಾರಕ್ಕೆ ನಮ್ಮ ಅಭಿಪ್ರಾಯ ತಿಳಿಯುವ ಉದ್ದೇಶವಾದರೆ ಸಾಕು. ಇದರಿಂದ ಜನರಿಗೆ ಉತ್ತಮವಾದ ನಾಟಕಗಳು ಲಭಿಸುವಂತೆ ಮಾಡಿ ಕನ್ನಡ ರಂಗಭೂಮಿಯನ್ನು ಹಿಂದಿದ್ದ ಮಟ್ಟಕ್ಕಿಂತಲೂ ಉನ್ನತ ಸ್ಥಾನಕ್ಕೆ ಎತ್ತುವುದು ಸರ್ಕಾರದ ಕರ್ತವ್ಯ. ಆ ದೃಷ್ಟಿಯಿಂದ ನಾನು ಈ ನಿರ್ಣಯಕ್ಕೆ ಬೆಂಬಲವನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎ. ಕೆ. ಸುಬ್ಬಯ್ಯ (ಪದವೀಧರರ ಕ್ಷೇತ್ರ).—ಮಾನ್ಯ ಸಭಾಪತಿಯವರೇ, ಈ ದಿವಸ ಶ್ರೀಮತಿ ಎಂ.ಆರ್. ಲಕ್ಷ್ಮಮ್ಮನವರು ಮಂಡಿಸಿರತಕ್ಕಂತಹ ನಿರ್ಣಯದ ಸತ್ವವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈ ನಿರ್ಣಯದ ಮೇಲೆ ಮಾತನಾಡಿದಂತಹ ಮಾನ್ಯ ಸದಸ್ಯರು ಈ ನಿರ್ಣಯವನ್ನು ಅನುಷ್ಠಾನಕ್ಕೆ ತರುವುದರ ಬಗ್ಗೆ ಕೆಲವು ವ್ಯವಹಾರಿಕವಾದ ಅಡ್ಡಿ ಅತಂಕಗಳು ಬರುತ್ತವೆಂಬುದರ ಬಗ್ಗೆ ವಿಶ್ಲೇಷಣ ಮಾಡಿದರು. ಇಂಥ ನಿರ್ಣಯವನ್ನು ಮಾಡುವಾಗ ಪ್ರತಿಯೊಂದು ಶಬ್ದಕ್ಕೆ ಅರ್ಥ ಕಟ್ಟಿಕೊಂಡು ಮಾತನಾಡುವುದು ವ್ಯವಹಾರಿಕ ದೃಷ್ಟಿಯಲ್ಲಿ ಒಳ್ಳೆಯದಲ್ಲವೆಂದು ನನಗನಿಸುತ್ತದೆ. ಯಾವುದೇ ನಿರ್ಣಯದಲ್ಲಿ ಏನು ಸತ್ವ ಇದೆ, ಅದರ ಹಿನ್ನಲೆಯಲ್ಲಿರುವ ಸಿದ್ಧಾಂತವೇನೆಂಬುದನ್ನು ತಾವು ತಿಳಿದುಕೊಳ್ಳಬೇಕಾಗಿದೆ. ಇವತ್ತಿನ ಪರಿಸ್ಥಿತಿಯಲ್ಲಿ ಇಡೀ ದೇಶದ ಸಮಾಜದ ಒಂದು ಸಮಸ್ಯೆ ಏನೆಂದರೆ, ನೀತಿವಂತ ಜನತೆಯ ಅಭಾವ ಕಂಡು ಬರುತ್ತದೆ. ಜನತೆಯ ನೈತಿಕ ಮಟ್ಟ ಇಳಿಯುತ್ತಾ ಇದೆ ಈ ದೃಷ್ಟಿಯಿಂದ ಈ ನಿರ್ಣಯದ ಅರ್ಥವನ್ನು ಗ್ರಹಿಸುವುದಾದರೆ, ಜನರ ನೈತಿಕ ಮಟ್ಟವನ್ನು ಉನ್ನತಿಗೊಳಿಸುವ ನಾಟಕಗಳಿಗೆ ಬಹುಮಾನ ಕೊಡಬೇಕೆಂದು ಅರ್ಥವಾಗುವುದಿಲ್ಲ. ಒಟ್ಟಿನಲ್ಲಿ ಕನ್ನಡ ನಾಟಕಗಳಿಗೆ ಪ್ರೋತ್ಸಾಹ ಕೊಡಬೇಕೆಂಬುದನ್ನು ತಿಳಿದುಕೊಳ್ಳಬಹುದಾಗಿದೆ; ಮತ್ತು ಅರ್ಹ ನಾಟಕಗಳಿಗೆ ಸಹಾಯಧನ ಕೊಡಬೇಕೆಂಬುದು ಈ ನಿರ್ಣಯದಲ್ಲಿ ಸ್ಪಷ್ಟವಾಗುತ್ತದೆ.

ಅರ್ಹ ನಾಟಕಗಳಿಗೆ ಬಹುಮಾನ ಕೊಡಬೇಕು ಎಂದರೆ ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಅರ್ಹತೆ ಇದೆಯೆಂಬುದು ಅರ್ಥವಾಗಬಹುದು. ಶ್ರೀಮತಿ ಲಕ್ಷಮ್ಮ ಅವರು ಮಾಡಿದಂತಹ ಭಾಷಣವನ್ನು ಕೇಳಿದ ನಂತರ ನಮಗೆ ಗೊತ್ತಾಗುತ್ತದೆ, ಅರ್ಹತೆ ಎಂದರೆ ನಮ್ಮ ಜನತೆಯ ನೈತಿಕ ಮಟ್ಟವನ್ನು ಮೇಲೆ ಎತ್ತುವುದಕ್ಕೆ ಅನುಕೂಲವಾದಂತಹ ಕೆಲವು ಪೌರಾಣಿಕ ನಾಟಕಗಳು ಎಂದು. ಅಂತಹ ನಾಟಕಗಳು ಇವೆ. ಇತಿಹಾಸವನ್ನೂ ಮತ್ತು ಅದರ ಹಿನ್ನೆಲೆಯನ್ನು ವರ್ಣನೆ ಮಾಡುತ್ತಾ ಎಲ್ಲಾ ದೃಷ್ಟಿಯಿಂದಲೂ ನೋಡಿದರೆ ಸಮಾಜದಲ್ಲಿ ಜನಜೀವನದಲ್ಲಿ ಜನತೆಯ ಮನಸ್ಸಿನಲ್ಲಿ ಆಧ್ಯಾತ್ಮಿಕ, ನೀತಿ, ನಿಯಮ, ಸಂಸ್ಕೃತಿ ಮತ್ತು ಸಂಸ್ಕಾರವನ್ನುಂಟುಮಾಡತಕ್ಕಂಥ ಅರ್ಹ ನಾಟಕಗಳಿಗೆ ಉತ್ತೇಜನ ಕೊಡಬೇಕು ಎನ್ನುವುದು ಈ ನಿರ್ಣಯದ ಉದ್ದೇಶ ಎಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೋಸ್ಕರ ಈ ನಿರ್ಣಯಕ್ಕೆ ನಾನು ನನ್ನ ಬೆಂಬಲವನ್ನು ಕೊಡುತ್ತೇನೆ. ಜನಜೀವನದಲ್ಲಿ, ಜನತೆಯ ಮನಸ್ಸಿನಲ್ಲಿ ಒಂದು ಒಳ್ಳೆಯ ಪರಿಣಾಮವನ್ನು ಬೀರುವುದಕ್ಕೆ ನಾಟಕಗಳು ಹೆಚ್ಚಿನ ಸಹಕಾರಿಯಾಗಿವೆ. ಶ್ರೀಮಾನ್ ಅಡಿಗರು ಮಾತನಾಡುತ್ತಾ ರಷ್ಯಾ ದೇಶದಲ್ಲಿ ಗ್ರಾಮಗ್ರಾಮಗಳಲ್ಲಿಯೂ ನಾಟಕಗಳನ್ನು ಅಭಿನಯಿಸುವಂಥಾ ವ್ಯವಸ್ಥೆ ಇದೆ ಎಂದು ಹೇಳಿದರು. ಅಲ್ಲಿ ಆ ರೀತಿ ನಾಟಕವನ್ನು ಆಡುವಂತಹ ವ್ಯವಸ್ಥೆ ಬೇರೆ ದೃಷ್ಟಿಯಿಂದ ಒಳ್ಳೆಯದು ಇರಬಹುದು. ಆದರೆ ಅದರಿಂದ ಕಮ್ಯೂನಿಜಂ ನೀತಿಯನ್ನು ಜನಸಾಮಾನ್ಯರೆಲ್ಲರ ಮನಸ್ಸಿನಲ್ಲಿಯೂ ಹುಟ್ಟಿಸುವಂಥ ಒಂದು ಪ್ರಯತ್ನವನ್ನು ರಷ್ಯಾದಲ್ಲಿ ಮಾಡಿದ್ದಾರೆ. ಈ ನಾಟಕಗಳಿಂದ ಜನಸಾಮಾನ್ಯರ ಮನಸ್ಸಿನಲ್ಲಿ ಏನೊಂದು ಪರಿಣಾಮವನ್ನುಂಟುಮಾಡುತ್ತಾರೆ, ಅದೇ ವಾತಾವರಣದಲ್ಲಿ ಬೆಳೆದಂತಹವರಿಗೆ ಅದು ಸರಿಯಾಗಿ ಕಾಣುತ್ತದೆ. ಇಂಡೋನೇಷಿಯಾದಲ್ಲಿ ಇವೊತ್ತು ರಾಮಾಯಣ ಮಹಾಭಾರತವನ್ನು ಮನೆಮನೆಗೂ ಕಲಿಸುತ್ತಿದ್ದಾರೆ. ನಮ್ಮ ದೇಶದವರು ನಮ್ಮ ನಾಯಕರುಗಳು ವಿದೇಶ ಪ್ರವಾಸ ಹೋದಾಗ ರಾಮಾಯಣ ಮಹಾಭಾರತ ನಾಟಕಗಳನ್ನು ಆಡಿ ತೋರಿಸಿದ್ದಾರೆ. ಇದು ಪತ್ರಿಕೆಗಳಲ್ಲೂ ಕೂಡ ಬಂದಿದೆ. ಅಲ್ಲಿನ ಜನತೆ ರಾಮಾಯಣ ಮಹಾಭಾರತದ ಬಗ್ಗೆ ಹೆಚ್ಚಿನ ಅಭಿಮಾನವನ್ನು ಹೊಂದಿದ್ದಾರೆಂದು ಗೊತ್ತಾಗಿದೆ. ರಾಮಾಯಣ ಮಹಾಭಾರತವು ಜಾತ್ಯಾತೀತವಾಗಿದೆ. ರಾಮಾಯಣ ಮಹಾಭಾರತ ನಾಟಕಗಳನ್ನು ಪ್ರದರ್ಶನಮಾಡಿ ಅದರ ಮೂಲಕ ಜನತೆಯ ನೈತಿಕ ಮಟ್ಟವನ್ನು ಮೇಲಕ್ಕೆ ಎತ್ತಬಹುದು. ಆದ್ದರಿಂದ ರಾಮಾಯಣ ಮಹಾಭಾರತವನ್ನು ನಾಟಕಗಳ ಮೂಲಕ ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಪ್ರದರ್ಶನ ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಇದರಿಂದ ಜನಸಾಮಾನ್ಯರ ಮನಸ್ಸಿನಲ್ಲಿ ಒಂದು ಒಳ್ಳೆಯ ನೀತಿ ಮೂಡಿ ಬರುತ್ತದೆ. ಶ್ರೀರಾಮಚಂದ್ರ ಮತ್ತು ಭರತ ಇಬ್ಬರು ಸಹೋದರರು ಹೇಗೆ ಇದ್ದರು. ಅದರಿಂದ ಸಹೋದರರು ಹೇಗೆ ಇರಬೇಕು, ಭರತ ತನ್ನ ಅಣ್ಣನಾದ ಶ್ರೀರಾಮಚಂದ್ರನನ್ನು ಯಾವರೀತಿ ಪ್ರೀತಿಸುತ್ತಿದ್ದನು ಅದರಿಂದ ಅಣ್ಣತಮ್ಮಂದಿರು ಒಬ್ಬರನ್ನೊಬ್ಬರು ಯಾವರೀತಿ ಪ್ರೀತಿಸಬೇಕು ಎನ್ನತಕ್ಕಂಥ ವಿಚಾರ ಈ ನಾಟಕಗಳ ಪ್ರದರ್ಶನದಿಂದ ಜನತೆಗೆ ಮೂಡಿಬರುತ್ತದೆ. ನಾಟಕ ಮತ್ತು ಹರಿಕಥೆಗಳ ಮುಖಾಂತರ ರಾಮಾಯಣವನ್ನು ಪ್ರಚಾರ ಮಾಡುವುದರಿಂದ ಅಕ್ಷರ ಜ್ಞಾನ ಇಲ್ಲದೆ ಇರುವವರೂ ನಾಟಕವನ್ನು ನೋಡುವುದರಿಂದಲೂ ಹರಿಕಥೆಯನ್ನು ಕೇಳುವುದರಿಂದಲೂ ಒಳ್ಳೆಯ ನೀತಿಯನ್ನು ಕಲಿತುಕೊಳ್ಳುತ್ತಾರೆ. ಇದರಿಂದಾಗಿ ಜನತೆಯು ರಾಮಾಯಣದಲ್ಲಿ ಅಡಗಿರತಕ್ಕ ಮಹತ್ತರವಿಚಾರಗಳನ್ನು ಅರ್ಥಮಾಡಿಕೊಂಡು ಅದನ್ನು ಜೀವನದಲ್ಲಿ ಅನುಷ್ಠಾನಕ್ಕೆ ತರುವುದಕ್ಕೆ ಅದು ಅತ್ಯಂತ ಸಹಕಾರಿಯಾಗುತ್ತದೆ. ಆದಕಾರಣ ಜನಜೀವನವನ್ನು, ಜನತೆಯ ನೈತಿಕ ಮಟ್ಟವನ್ನು, ಮೇಲಕ್ಕೆ ಎತ್ತತಕ್ಕಂಥ ನಾಟಕಗಳಿಗೆ ಪ್ರೋತ್ಸಾಹವನ್ನು ಕೊಡಬೇಕು. ಈಗ ಸಂಗೀತಕ್ಕೆ ಪ್ರೋತ್ಸಾಹ ಕೊಡಲು ಸರ್ಕಾರದವರು ಅನೇಕ ಯೋಜನೆಗಳನ್ನು ಮಾಡಿದ್ದಾರೆ. ಮತ್ತು ಪಂಚವಾರ್ಷಿಕ ಯೋಜನೆಗಳಲ್ಲಿ ವಿದ್ಯಾಭ್ಯಾಸವನ್ನು ಮೇಲಕ್ಕೆ ಎತ್ತುವುದಕ್ಕಾಗಿ ಕೆಲವಾರು ಪ್ರಯತ್ನಗಳನ್ನು ಸರ್ಕಾರದವರು ಮಾಡಿದ್ದರೂ ಕೂಡ ಅದರಲ್ಲಿ ಅನೇಕ ಕಡೆ ನಾವು ವಿಫಲತೆಯನ್ನು ಕಾಣುತ್ತಿದ್ದೇವೆ. ಇದಕ್ಕೆ ಕಾರಣ ಇಷ್ಟೆ. ಯಾವ ಯೋಜನೆಗಳಾದರೂ ಕೂಡ ಒಳ್ಳೆಯ ಯೋಗ್ಯತೆ ಇರುವವರ ಮತ್ತು ಸತ್ಯಸಂಧರಾದಂತಹವರ ಕೈಯಲ್ಲಿ ಆ ಯೋಜನೆಗಳು ಹೋಗದೆ ಇದ್ದರೆ ಅವು ಸರಿಯಾದ ರೀತಿಯಲ್ಲಿ ಕಾರ್ಯಗತವಾಗುವುದಿಲ್ಲ. ಆದ್ದರಿಂದ ಯಾವ ಯೋಜನೆಯೇ ಆಗಲೀ ಅದನ್ನು ಕಾರ್ಯಗತ ಮಾಡುವುದಕ್ಕೆ ಒಳ್ಳೆಯ ಸತ್ಯಸಂಧರಾದಂತಹ, ಒಳ್ಳೆಯ ಯೋಗ್ಯರಾದಂತಹ ಜನರನ್ನು ನೇಮಿಸಬೇಕು, ಶ್ರೀಮಾನ್ ಅಡಿಗಾ ಅವರು ಮಾತನಾಡುತ್ತಾ ನಾಟಕಗಳ ಮಟ್ಟ ಉತ್ತಮವಾಗಬೇಕು, ಕಲೆಗೆ ಸಂಬಂಧಪಟ್ಟ ಹಾಗೆ ಜನತೆಗೆ ಉತ್ತೇಜನ ಕೊಡಬೇಕು ಎನ್ನತಕ್ಕಂಥ ವಿಚಾರವನ್ನು ಅವರು ಹೇಳಿದ್ದಾರೆ. ಕೆಲವು ಮಟ್ಟಿಗೆ ಅದು ಸತ್ಯ ಅನಿಸುತ್ತದೆ. ಈ ದಿವಸ ನಮಗೆ ಒಂದು ವಿಚಾರ ಗೊತ್ತಾಗುತ್ತದೆ, ಅಶ್ಲೀಲ ಸಾಹಿತ್ಯ ಮತ್ತು ಕೆಲವು ಅಶ್ಲೀಲ ನಾಟಕಗಳ ಮುಖಾಂತರ ಜನತೆಯನ್ನು ಜನಸಾಮಾನ್ಯರನ್ನು ತಪ್ಪುದಾರಿಗೆ ಕೊಂಡೊಯ್ಯುತ್ತಿದ್ದಾರೆ. ಇದರಿಂದಾಗಿ ಅನೇಕ ಜನಗಳಲ್ಲಿ ಇಂಥಾ ಒಂದು ಕೆಟ್ಟ ಅಭಿರುಚಿ ಬೆಳೆದು ಬಂದಿದೆ. ಆದ್ದರಿಂದ ಅದನ್ನು ತಡೆದು ಒಳ್ಳೆಯ ಸಾಹಿತ್ಯ ಮತ್ತು

(ಶ್ರೀ ಎ. ಕೆ. ಸುಬ್ಬಯ್ಯ)

ಒಳ್ಳೆಯ ನಾಟಕಗಳ ಮುಖಾಂತರ ಜನಗಳಿಗೆ ಒಳ್ಳೆಯ ಅಭಿರುಚಿಯನ್ನು ಹುಟ್ಟಿಸಿ ಜನತೆಯ ಮನಸ್ಸನ್ನು ಪರಿವರ್ತನೆ ಮಾಡಿ ಅವರನ್ನು ಒಳ್ಳೆಯ ದಾರಿಯಲ್ಲಿ ತರುವಂತಹ ಪ್ರಯತ್ನವನ್ನು ಮಾಡಬೇಕು. ಉತ್ತಮ ನಾಟಕಗಳು ಮತ್ತು ಉತ್ತಮ ಸಾಹಿತಿಗಳನ್ನೂ ಕಡೆಗಾಣಿಸಲಾಗಿದೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಹೇಳಿದಹಾಗೆ ಒಳ್ಳೆಯ ಮೇಧಾವಿಗಳು ಒಳ್ಳೆಯ ಯೋಗ್ಯತೆ ಇರತಕ್ಕವರು ಇಲ್ಲ ಎಂದಲ್ಲ. ಆದರೆ ಅವರಿಗೆ ಸರಿಯಾದ ಪ್ರೋತ್ಸಾಹ ಸಿಕ್ಕುತ್ತಾ ಇಲ್ಲ. ಜನತೆಗೆ ಅಭಿರುಚಿಯನ್ನು ಹುಟ್ಟಿಸತಕ್ಕಂಥ, ಜನರ ನೈತಿಕ ಮಟ್ಟವನ್ನು ಮೇಲಕ್ಕೆ ಎತ್ತತಕ್ಕಂಥ ನಾಟಕಗಳಿಗೆ ಮತ್ತು ಸಾಹಿತಿಗಳಿಗೆ ಸರ್ಕಾರದವರು ಹೆಚ್ಚಿನ ಉತ್ತೇಜನವನ್ನು ಕೊಡಬೇಕಾಗುತ್ತದೆ. ಶ್ರೀಮಾನ್ ಅಡಿಗರು ಭ್ರಷ್ಟಾಚಾರ, ಅತ್ಯಾಚಾರ, ಅನಾಚಾರ ಇಂಥಾ ನಾಟಕಗಳು ಏನಿವೆ ಇವು ಅಷ್ಟು ಸರಿಯಿಲ್ಲ ಎಂದು ಆಕ್ಷೇಪಣೆಯನ್ನು ಎತ್ತಿದರು. ಆದರೆ ನನಗೆ ಗೊತ್ತಿರುವಹಾಗೆ ಈ ನಾಟಕಗಳು ಜನತೆಯ ನೀತಿ ನಿಯಮವನ್ನು ಕೆಡಿಸತಕ್ಕಂಥಾದ್ದು ಕಂಡುಬರಲಿಲ್ಲ. ಈ ನಾಟಕಗಳು ಸಾಕಷ್ಟು ಜನತೆಯ ಸೇವೆಯನ್ನು ಮಾಡಿ ಜನತೆಗೆ ಮಾರ್ಗದರ್ಶನವಾಗಿವೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ನಾನು ಆ ನಾಟಕಗಳ ಬಗ್ಗೆ ಆಕ್ಷೇಪಣೆಯನ್ನು ಎತ್ತಲಿಲ್ಲ. ನಾನು ಭ್ರಷ್ಟಾಚಾರ ನಾಟಕವನ್ನು ನೋಡಿದ್ದೇನೆ ಅದರಲ್ಲಿ ಸಮಾಜವನ್ನು ತಿದ್ದತಕ್ಕ ಕೆಲವು ಅಂಶಗಳು ಇವೆ. ನಾನು ಹೇಳಿದ್ದು ಉತ್ತಮ ಮಟ್ಟದ ಹಾಗೂ ಸಮಾಜವನ್ನು ಸುಧಾರಣೆ ಮಾಡತಕ್ಕಂಥ ನಾಟಕಗಳನ್ನು ಆಡಬೇಕು ಎಂದು ಹೇಳಿದೆ.

ಶ್ರೀ ಎ. ಕೆ. ಸುಬ್ಬಯ್ಯ.—ಲಂಚಾವತಾರದ ನಾಟಕವನ್ನು ನಾನು ನೋಡಿದ್ದೇನೆ. ಅದರಲ್ಲಿ ರತಕ್ಕ ಒಂದೊಂದು ವಿಷಯವನ್ನು ತೆಗೆದುಕೊಂಡು ನೋಡಿದರೆ ನಮಗೆ ಗೊತ್ತಾಗುತ್ತದೆ. ಆ ಲಂಚಾವತಾರ ನಾಟಕದಲ್ಲಿ ತೋರಿಸತಕ್ಕಂಥ ದೃಶ್ಯವನ್ನು ನೋಡಿದರೆ ಲಂಚವನ್ನು ಸ್ವೀಕಾರ ಮಾಡುವ ವ್ಯಕ್ತಿಗೆ ನಾಚಿಕೆಯಾಗಿ ತಲೆತಗ್ಗಿಸುವಂಥಾ ಪ್ರಸಂಗ ಉಂಟಾಗುತ್ತದೆ. ನಾಟಕದಲ್ಲಿ ಸ್ವಲ್ಪ ಮಟ್ಟಿಗೆ ಬದಲಾವಣೆಯನ್ನು ಮಾಡಿಕೊಂಡು ಧಾರ್ಮಿಕ ಮತ್ತು ಪೌರಾಣಿಕ ಹಿನ್ನೆಲೆಯಿಂದ ಕೂಡಿದಂಥ ಅಗತ್ಯವಾದ ಪಾತ್ರಗಳನ್ನು ಅದರಲ್ಲಿ ನಿರ್ಮಿಸಿಕೊಂಡು ಅಂಥಾ ನಾಟಕಗಳನ್ನು ಪ್ರದರ್ಶನ ಮಾಡಿದರೆ ಅದರಿಂದ ಜನತೆಯ ನೈತಿಕ ಮಟ್ಟವನ್ನು ಮೇಲಕ್ಕೆ ಎತ್ತುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಇಂಥಾ ಅರ್ಹ ನಾಟಕಗಳಿಗೆ ಸರ್ಕಾರದವರು ಪ್ರೋತ್ಸಾಹವನ್ನು ಕೊಡಬೇಕು. ಅದಕಾರಣ ಶ್ರೀಮತಿ ಎಂ. ಆರ್. ಲಕ್ಷಮ್ಮನವರು ಈ ಸಭೆಯ ಮುಂದೆ ತಂದಿರತಕ್ಕ ನಿರ್ಣಯಕ್ಕೆ ನಾನು ಸ್ವಾಗತವನ್ನು ಬಯಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY CHAIRMAN.—The House will now adjourn and meet tomorrow at 2-30 P.M.

The House adjourned at Thirty Minutes past Six of the Clock to meet again at Thirty Minutes past Two of the Clock on Tuesday, the 9th September 1969.

W D 13616—GPB—600—30-5-1970

ಮೈಸೂರು ವಿಧಾನ ಪರಿಷತ್ತು

MYSORE LEGISLATIVE COUNCIL

Tuesday, 9th September 1969.

The House met in the Council Chamber, Vidhana Soudha, Bangalore, at Thirty Minutes past Two of the Clock.

MR. DEPUTY CHAIRMAN (SRI M. MADAIAH) in the Chair.

STARRED QUESTIONS

(to which oral answers were given)

Travellers Bungalow site at Channapatna

32. SRI M. L. VASUDEVA MURTHY (Nominated).—

Will the Minister for Public Works be pleased to state :—

(*a*) whether a 21 years old claim for compensation for a Travellers Bungalow Site at Channapatna, under Land Acquisition Act has costed the Government a considerable expenditure which otherwise could have been less if the land acquisition proceedings were initiated in time ;

(*b*) the reasons for this delay in initiating the case ;

(*c*) whether Government is intending to take any action on the official concerned for this delay and negligence for not taking legal opinion ?

SRI K. LAKKAPPA (Minister for Public Works).—

(*a*) Land was acquired for the Travellers Bungalow at Channapatna and Compensation was also paid for it in 1935-36. This land was fenced in 1938 when 22 guntas of private land also appear to have been fenced in.

(*b*) The owner brought this to light through a notice of suit in 1957. Acquisition proceedings were started and the award was passed on 1962 along with statutory allowances, interest at 6 per cent from the date of Notification. The fare rent had also to be paid from 1936 to 1960.

(*c*) No.

ಶ್ರೀ ಎಂ. ಎಲ್. ವಾಸುದೇವಮೂರ್ತಿ.—ಇದರಲ್ಲಿ ಸರಕಾರ ಕಾಂಪೆನ್ಸೇಷನ್ ಕೊಟ್ಟಿದ್ದರೆ ಎಷ್ಟು ಕೊಟ್ಟಿದೆ ?

ಶ್ರೀ ಕೆ. ಲಕ್ಕಪ್ಪ.—ಕಾಂಪೆನ್ಸೇಷನ್ ಸುಮಾರು 7,653 ರೂ. 25 ಪೈಸೆ ಕೊಡಲಾಗಿದೆ. ಇದರ ಜೊತೆಗೆ ಸುಮಾರು ಸೇಕಡ 6 ರಂತೆ ಬಡ್ಡಿ 1,020 ರೂ. 40 ಪೈಸೆ ಕೊಡಲಾಗಿದೆ. ಜಮೀನಿಗೆ ಫೇರ್ ರೆಂಟ್ ಸುಮಾರು 5,572 ರೂಪಾಯಿ ಕೊಡಲಾಗಿದೆ. ಒಟ್ಟು 14,245 ರೂಪಾಯಿ 65 ಪೈಸೆ ಕೊಡಲಾಗಿದೆ.

ಶ್ರೀ ಎಂ. ಎಲ್. ವಾಸುದೇವಮೂರ್ತಿ.—ಸುಮಾರು 21 ವರ್ಷದಿಂದ ಪಬ್ಲಿಕ್ ವರ್ಕ್ಸ್ ಇಲಾಖೆ ಸ್ವಾಧೀನದಲ್ಲಿತ್ತು. ನೋಟೀಸು ಕೊಟ್ಟಾಗ ಕೂಡಲೆ ಕ್ರಮ ತೆಗೆದುಕೊಂಡಿದ್ದರೆ ಎಷ್ಟೋ ಹಣ ಕಾಂಪೆನ್ಸೇಷನ್ ಕೊಡುವುದನ್ನು ಉಳಿಸಬಹುದಾಗಿತ್ತು. ಈಗ 14 ಸಾವಿರ ಚಿಲ್ಲರೆ ಹಣ ನಷ್ಟವಾಗಿರುವುದರಿಂದ ಆ ಕಾಲದಲ್ಲಿದ್ದ ಅಧಿಕಾರವರ್ಗ ತಪ್ಪು ಮಾಡಿರುವುದರಿಂದ ಅವರಿದ್ದರೆ ಅವರಿಂದ ವಸೂಲುಮಾಡಲಾಗುವುದೇ ?

ಶ್ರೀ ಕೆ. ಲಕ್ಕಪ್ಪ.—ನೋಟೀಸ್ ಕೊಟ್ಟಾಗ್ಗೆ ಪ್ರಾಯಶಃ ಲೀಗಲ್ ಒಪೀನಿಯನ್ ಕೇಳಿದ್ದ ಪಕ್ಷದಲ್ಲಿ ಯಾವ ರೀತಿ ಬರುತ್ತಿತ್ತೋ ಗೊತ್ತಿಲ್ಲ. ಆಗ ಕೇಳಿದರೋ ಇಲ್ಲವೊ ಗೊತ್ತಿಲ್ಲ, ಆತ ನನ್ನ ಸ್ವಾಧೀನಕ್ಕೆ ಸೇರಿದ್ದು ಎಂದು ಹೇಳಿದಮೇಲೆ ರೆವಿನ್ಯೂ ಡಿಪಾರ್ಟ್‌ಮೆಂಟಿನವರು ಯಾರು ಟೆಂಡರ್ ಕರೆದಿದ್ದರೋ ಆ ಪಿ. ಡಬ್ಲ್ಯು.ಡಿ. ಅಸಿಸ್ಟೆಂಟ್ ಇಂಜಿನಿಯರಿಗೆ ರೆಫರ್ ಮಾಡಿದ್ದರು, ಅವರು ವೆರಿಫಿಕೇಷನ್ ಮಾಡಿದಮೇಲೆ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ತೆಗೆದುಕೊಂಡು ಅವಾರ್ಡ್ ಮಾಡಿ, ಕಾಂಪೆನ್‌ಸೇಷನ್ ಕೊಡಬೇಕಾದ್ದನ್ನು ಕೊಟ್ಟಿದ್ದಾರೆ.

ಶ್ರೀ ಎಂ. ಎಲ್. ವಾಸುದೇವಮೂರ್ತಿ.—ಇದು ಕನ್‌ವರ್ಟೆಡ್ ಲ್ಯಾಂಡ್ ಅಂತ ಕೊಟ್ಟಿದೆ, ಕನ್‌ವರ್ಟ್ ಆಗದಿದ್ದರೆ ಆ ಹಣವನ್ನು ವಸೂಲು ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡಬಹುದೇ ?

ಶ್ರೀ ಕೆ. ಲಕ್ಕಪ್ಪ.—ಎಲ್ಲವನ್ನೂ ಯೋಚನೆ ಮಾಡಿ ಅದು ಸಾಧ್ಯವಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬಂದು ಅವಾರ್ಡ್ ಪ್ರಕಾರ ಅಷ್ಟು ಹಣವನ್ನು ಸರ್ಕಾರದವರು ಕೊಟ್ಟಿದ್ದಾರೆ.

Transfer of Villages in Anekal and Kanakapura Taluk under the administration to nearest Police Station

54. SRI D. MUNICHINNAPPA (Elected by L. A.).—

Will the Chief Minister be pleased to state :—

(a) the number and names of villages of Begur Hobli that come under the jurisdiction of Anekal Taluk Police Station ;

(b) whether the Government intend to bring the above villages under the jurisdiction of Madiwala Police Station which is nearer to Begur Hobli ;

(c) whether some of the villages of Uttarahalli Hobli which are included to Kanakapura taluk will be brought under the jurisdiction of Madivala Police Station as the villagers of the said villages are also put to trouble ?

SRI MANIK RAO PATIL (Deputy Minister for Home [On behalf of SRI VEERENDRA PATIL (Chief Minister)].—

(a) The names of these villages are given in the list appended.

(b) No.

(c) No.

List showing the names of villages of Begur Hobli in Bangalore South Taluk included in the jurisdiction of Anekal Police Station limits.

Hebbagodi Outpost

1 Konena Agrahara
2 Doddathogur
3 Chikkathogur
4 Vittasandra
5 Voddarapalya
6 Mylasandra
7 Begur
8 Dinne Begur
9 Bettadasanapura
10 Honjanahalli
11 Somasandrapalya
12 Endrapanapalya
13 Murgesha Mudaliarpalya
14 Nanjunda Mudaliarpalya
15 Naganathapura
16 Govindasettipalya
17 Doddanagamangala
18 Dasapura

Bannerghatta Outpost

1 Basavanapura
2 Hommadevanahalli
3 Doddakammanahalli
4 Chikkamanahalli
5 Kalana Agrahara
6 Gottigere
7 Pillayanahalli

ಶ್ರೀ ಡಿ. ಮುನಿಚಿನ್ನಪ್ಪ.—ಬೇಗೂರು ಹೋಬಳಿಯಲ್ಲಿರತಕ್ಕ ಸುತ್ತಮುತ್ತ ಗ್ರಾಮದವರು ಆನೇಕಲ್ಲಿಗೆ ಹೋಗಬೇಕಾದರೆ 25 ಮೈಲಿ ಆಗುತ್ತದೆ, ಏನಾದರೂ ತೊಂದರೆಯಾವರೆ ಅಲ್ಲಿಗೆ ಹೋಗಲು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈ ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಹತ್ತಿರ ಇರುವ ಮಡಿವಾಳ ಪೋಲೀಸ್ ಸ್ಟೇಷನ್‌ಗೆ ಸೇರಿಸಿ ಸಹಾಯ ಮಾಡುತ್ತೀರಾ?

Sri MANIK RAO PATIL.—There is no such proposal before the Government to make any readjustment in the jurisdiction of the police outposts.

ಶ್ರೀ ಡಿ. ಮುನಿಚಿನ್ನಪ್ಪ.—ಸರ್ಕಾರದ ಆಲೋಚನೆಯಲ್ಲದೆ ಎಂದು ಹೇಳುತ್ತಾ ಇದ್ದೀರಿ. ಆಲೋಚನೆ ಮಾಡುವುದಕ್ಕೆ ಏನು ತೊಂದರೆ ಇದೆ?

Sri MANIK RAO PATIL.—In fact, this problem was examined on the representation of the then M.L.A. Sri Srinivasa Reddy in 1963 and after examination it was decided that there was no necessity to change the jurisdiction of the existing outposts and police stations. This matter was examined under the Mysore Police Act. According to the Mysore Police Act, Bangalore City is defined as the area within the limits of the City of Bangalore as defined for the time being by the City of Bangalore Municipal Corporation Act, 1949. Under this definition, Government did not find any scope to change the jurisdiction of the area referred to by the hon. Member.

ಶ್ರೀ ಡಿ. ಮುನಿಚನ್ನಪ್ಪ.—ನನ್ನ ಇತರ ಎರಡು ಪ್ರಶ್ನೆಗಳಿಗೆ ಸಾಧ್ಯವಿಲ್ಲ ಎಂದು ಹೇಳಿದ್ದೀರಿ, ಹಾಗಾದರೆ ಜನಗಳ ಕಷ್ಟಸುಖ ನೋಡಬೇಕಾದ್ದು ಸರ್ಕಾರದ ಕರ್ತವ್ಯ ವಲ್ಲವೇ ?

Sri MANIK RAO PATIL.—No such instances have come to the notice of Government where people are facing difficulty in lodging complaints to the respective police stations. If at all any complaints were to come, Government will certainly give second though to the matter.

ಶ್ರೀ ಡಿ. ಮುನಿಚನ್ನಪ್ಪ.—ಸ್ವಾಮಿ, ನಾನೂ ಒಬ್ಬ ಜವಾಬ್ದಾರಿಯುತವಾದ ಮನುಷ್ಯ. ಅಲ್ಲಿ ಜನಕ್ಕೆ ತೊಂದರೆಯಿರುವುದರಿಂದಲೇ ನಾನು ಇದನ್ನು ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆ. ಅಲ್ಲಿ ಎಲ್ಲಾ ಗ್ರಾಮಗಳಿಗೂ ಒಂದು ಕೇಂದ್ರ ಪ್ರದೇಶವಾಗಿರುವುದರಿಂದ ಅಲ್ಲಿ ಒಂದು ಪೋಲೀಸ್ ಸ್ಟೇಷನ್ ಮಾಡುವುದಕ್ಕೇನು ತೊಂದರೆ ಇದೆ ? ಅಲ್ಲಿ ಒಂದು ಸ್ಟೇಷನ್ ಇಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri MANIK RAO PATIL.—Another aspect of maintaining the City Police Force is to deal with the problem of highly urbanised area of the City jurisdiction, and in such area, where the population exceeds more than a million or it is round about one million, a City Police Force is created with the Commissioner as the Head of the Department. If we go on including rural areas, it may become a bit difficult for the efficient discharge of their functions. Therefore, at this juncture, Government find it difficult to include all those areas surrounding Bangalore City into the City. In due course, at the appropriate time, Government will certainly give a second thought to the matter.

Sri G. V. GOWDA.—Why should not the Government reconsider the matter in view of the representation by the Hon. Member ?

Sri MANIK RAO PATIL.—Though the decision was taken in 1963, no major changes have occurred up till now.

Sri S. P. RAJANNA.—Many of the villages mentioned are close to Madiwala rather than Anekal Police Station. Is it not a fact ?

Sri MANIKA RAO PATIL.—The whole problem has been examined in consultation with the Superintendent of Police, Bangalore District, the Deputy Inspector-General of Police, Central Range and the Commissioner of Police, and the Government came to the conclusion that at present there is no necessity to make any change in the jurisdiction.

Sri G. V. GOWDA.—The question put is, some of the villages mentioned here are very near to Madiwala rather than Anekal. Is it not a fact?

Sri MANIK RAO PATIL.—Sir, I do not know the exact distance between the Police Stations and the villages mentioned by the hon. Member. It may be a fact. But, I don't think there is any administrative difficulty for the people to approach the respective Police Stations on account of the distance.

Sri S. P. RAJANNA.—Has it not come to the notice of the Government that Konappana Agrahara is only 2 firlongs from Madiwala and about 9 miles from Anekal Police Station ?

Sri MANIK RAO PATIL.—May be, but I don't think that the distance will come in the w y of discharging the duties of the Police Forse. Hon. Members should know that the jurisdiction of any office cannot be fixed on the distance. If we take only distance into consideration to fix up the Headquarters, the State Headquarters should be at Dharwar or somewhere else. I don't think there is any justification to claim the jurisdiction of any Police Station or Outpost on the basis of distance, and I also do not think that there is any real difficulty for the people, who need timely help from the Police Force in those areas.

ಶ್ರೀ ಡಿ. ಮುನಿಚಿನ್ನಪ್ಪ.—ಮಂತ್ರಿಗಳು ಸಿಟಿಯಲ್ಲಿ ರೂರಲ್ ಗ್ರಾಮಗಳು ಸೇರಿಲ್ಲವೆಂದು ಉತ್ತರ ಕೊಟ್ಟರು. ಹತ್ತಿರವಿರುವ ಗ್ರಾಮಗಳನ್ನು ಹತ್ತಿರವಿರತಕ್ಕ ಪೋಲೀಸ್ ಸ್ಟೇಷನ್ನುಗಳ ಆಡಳಿತಕ್ಕೆ ಸೇರಿಸುವುದಕ್ಕೇನು ತೊಂದರೆ ಇಲ್ಲ. ಅಂಥಾದ್ದನ್ನು ಮಾಡುವುದಕ್ಕೆ ಸರ್ಕಾರದವರು ಆಗುತ್ತಾ ಇಲ್ಲವೆಂದು ಹೇಳಿದರೆ ಹೇಗೆ? ಅದನ್ನು ಮಾಡದೇ ಅಲ್ಲಿರುವ ಜನಗಳಿಗೆ ತೊಂದರೆ ಮಾಡುವುದು ಏಕೆ?

Sri MANIK RAO PATIL.—Sir, I have already pointed out that this matter has been examined in consultation with the concerned officers, and neither there is any difficulty for the people nor is it inconvenient to the officers concerned. Therefore, the question of readjustment does not arise.

Sri S. P. RAJANNA.—Anekal Police Station comes under the jurisdiction of the Circle Inspector of Police, Hoskote. If there is any Sessions case, a person from Konappana Agrahara has to go to Anekal and from there to Hoskote. Is it a convenience to the public?

Sri MANIK RAO PATIL.—The hon. Members must also consider that the jurisdiction of the police station does not depend upon one factor. It is quite possible that some villages are far away from a police station. At the same time, administrative convenience also has to be considered while locating a police station in a particular place. Just because a village is far away from the police station, we cannot think of locating police stations in each and every village. Therefore, I do not think there is any necessity to bring these villages under the jurisdiction of Madiwala Police Station, as suggested by the hon. Members.

Plan Schemes under Primary Education and Secondary Education Heads

61. Sri M. G. HANDRAL (Teachers' Constituency).—

Will the Minister for Education be pleased to state :—

(*a*) the provisions for plan schemes under Primary Education and Secondary Education Heads separately from 1962-63 to 1968-69 (yearwise may be furnished);

(*b*) the savings, if any;

(*c*) the reasons for not fully utilising the amounts sanctioned?

Sri N. M. KOTRABASIAH SOGI (Deputy Minister for Education).—

(*a*) The provisions made for Primary and Secondary Education Heads for each year are as follows:

		Primary Education	Secondary Education
1962-63	...	1,20,38,500	35,90,000
1963-64	...	1,23,73,000	21,10,000
1964-65	...	98,85,000	48,89,500
1965-66	...	2,02,57,000	65,73,000
1966-67	...	80,00,000	45,09,000
1967-68	...	82,50,000	47,00,000
1968-69	...	94,50,000	52,22,000

(*b*) The yearwise savings under Primary Education and Secondary Education Heads are as follows:

1962-63	...	9,48,000	...	13,66,000
1963-64	...	Nil	...	Nil
1964-65	...	Nil	...	23,41,113
1965-66	...	Nil	...	14,92,003
1966-67	...	28,87,881	...	15,67,384
1967-68	...	77,857	...	16,94,449
1968-69	...	11,56,145	...	18,75,321

(*c*) 1. It takes some time by the time proposals are received from the Department agreed to by Government and implemented by the Department with the result that it may not be possible to utilise the provisions fully.

2. Lumpsum provisions are made for Centrally Sponsored Schemes on the assumption that these will be approved by the Government of India and necessary Central assistance released. At times it happens that either the schemes are not approved by the Government of India or are approved quite late in the year with reduced outlays with the result that the full provisions made for the schemes cannot be utilised.

3. Economy in expenditure had to be effected in accordance with general orders issued by Government from time to time.

ಶ್ರೀ ಎಂ. ಜಿ. ಹಂದ್ರಾಳ್.—ಪ್ಲಾನ್ಸ್ ಸ್ಕೀಮುಗಳಲ್ಲಿ ಈ ಮುಖ್ಯ ಐಟಮುಗಳು ಮೊದಲೇ ಗೊತ್ತುಪಡಿಸಲಾಗಿದೆ. ಹೀಗಿದ್ದರೂ ಕೂಡ ಇಲಾಖೆಗಳಿಂದ ಪ್ರೊಪೋಸಲ್ಸ್ ತರಿಸಿಕೊಳ್ಳುವುದಕ್ಕೆ, ಕೆಲವು ಕಂಟಿನ್ಯುಯೇಷನ್ ಸ್ಕೀಮುಗಳನ್ನು ತೀವ್ರವಾಗಿ ಸ್ಯಾಂಕ್ಷನ್ ಮಾಡುವುದಕ್ಕೆ ಏನು ತೊಂದರೆ, ಮತ್ತು ಕೊಟ್ಟ ಅಂಕಿಅಂಶಗಳಲ್ಲಿ ಬಹಳ ಹಣ ಉಳಿದಿದೆ. ಮೊದಲೇ ಯೋಜನೆಗೆ ಕಡಿಮೆ ಹಣ, ಕೊಟ್ಟ ಹಣವನ್ನು ಉಪಯೋಗಿಸಿಕೊಳ್ಳುವ ಹಾಗೆ ಮಂಜೂರು ಮಾಡಲು ತಕ್ಕ ಏರ್ಪಾಡನ್ನು ಮಾಡುತ್ತೀರಾ ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಖರ್ಚಾಗದೆ ಉಳಿದಿರತಕ್ಕ ಕಲಮುಗಳಲ್ಲಿ ಹೆಚ್ಚಿನವು ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮುಗಳು. ಇದರಲ್ಲಿ ಇಲಾಖೆಗಳಿಂದ ಅನೇಕ ವಿಧವಾದ ಪ್ರೊಪೋಸಲ್ಸ್ ತರಿಸಿಕೊಂಡು, ಇಲ್ಲಿ ಫಿನಾನ್ಸ್ ಡಿಪಾರ್ಟ್‌ಮೆಂಟ್ ಒಪ್ಪಿಕೊಂಡು, ಆಮೇಲೆ ಸೆಂಟ್ರಲ್ ಗೌರ್ನ್‌ಮೆಂಟಿಂದ ಹಣ ರಿಲೀಸ್ ಆಗುವುದಕ್ಕೆ ತಡವಾಗುತ್ತದೆ. ಕೇಂದ್ರ ಸರ್ಕಾರದಲ್ಲಿ ಡಿಲೇ ಆಗಿರುವುದರಿಂದ ಈ ರೀತಿಯಾಗುತ್ತದೆ. ಅದಲ್ಲದೆ ಅವರು ಕೊಡತಕ್ಕ ಹಣ ರಿಲೀಸ್ ಆಗತಕ್ಕದ್ದರಲ್ಲೂ ಡಿಲೇಯಾಗುತ್ತದೆ. ರಾಜ್ಯಸರ್ಕಾರದ ವತಿಯಿಂದ ಡಿಲೇ ಆಗುವುದಿಲ್ಲ. ಉದಾಹರಣೆಗೆ ಪ್ರೈಮರಿ ಟೀಚರ್ಸ್ ಟ್ರೈನಿಂಗ್ ಸ್ಕೂಲ್ ಆಗಬೇಕೆಂದು 20 ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಲಾಯಿತು. ಅದನ್ನು ಕೇಂದ್ರ ಸರ್ಕಾರದವರು ಒಪ್ಪದಿದ್ದುದರಿಂದ ಮಾಡಲಾಗಲಿಲ್ಲ.

Sri G. V. GOWDA.—Is it not the policy of the Government to receive the proposals in advance to avoid savings ?

Sri N. M. KOTRABASIAH SOGI.—Yes, Sir. I quite appreciate the feelings of the hon. Member. Our difficulty is that a scheme has to pass through various departments before it could be submitted to the Governmnnt. We are trying our best to see that the amount is fully utilised. Every time the Finance Department also has to apparove our schemes. That is why there would be delay.

Sri M. LINGANNA.—May I know how many Centrally sponsored schemes have been dropped for want of funds and how many schemes approved by the Government have been dropped due to the delay in submitting the proposals by the Department concerned ?

Sri N. M. KOTRABASIAH SOGI.—I do not have those details. If the hon. Member puts another question I will furnish the information.

Sri G. V. GOWDA.—Is it not a fact that before these schemes are agreed to by the Government, the officers of the State Government and the Government of India discuss them and come to an agreement as to which of the schemes are to be taken up and then amount is claimed from the Government of India ? When the Government of Madras and Maharashtra are fully utilising the Central Funds on these schemes, why not the Mysore Government utilise the funds available in this regard ?

---

†Indicates that the remarks or speeches have not been revised by the member concerned.

Sri N. M. KOTRABASIAH SOGI.—We are trying our best to expedite the matters. We have spent much of the amount and the unspent amount is very small. We will see that the amount is fully spent without leaving anything unspent.

Sri G. V. GOWDA.—What steps have the Government taken to rectify the mistakes as pointed out in the Report of the Public Accounts Committee regarding the delay in submitting the proposals for various schemes?

Sri N. M. KOTRABASIAH SOGI.—There is no mistake as such. It is the usual delay that is being experienced in the procedural matters. Anyway, we will try to see that procedural matters are expedited and the amount is fully utilised and spent.

Sri KESHAVARAO NITTURKAR.—What was the scheme particularly in the year 1968-69 in respect of the Secondary Education which came from the Government of India and which lead to the savings of this amount of Rs. 18,75,321?

Sri N. M. KOTRABASIAH SOGI.—I do not have details with regard to that. But one thing I would like to bring to the notice of the hon. Members and that is it is not only the procedural delay which results in savings, but the Government have taken certain measures to effect economy which also has been one of the reasons for not spending this amount fully.

Closure of K. C. T. Mill, Hubli

101. Sri Y. S. PATIL (Graduates' Constituency).—

Will the Minister for Development be pleased to state :—

(a) the date on which the K. C. T. Mills, Hubli was closed;

(b) the reasons for its closure;

(c) the total number of persons rendered unemployed by its closure;

(d) the amount invested by the Government in the Mill?

Sri P. M. NADGOUDA (Minister for Development).—

(a) (i) Weaving Section	...	5-12-1966
(ii) Spinning Section	...	1-7-1969

(b) The Mill was incurring heavy losses every year since 1959-60.

(c) (i) Weaving Section	...	671 workers.
(ii) Spinning Section	...	1,215 workers.
		1,886 workers.

(d) (i) Share capital contribution ... Rs. 40 lakhs

(ii) Loan ... Rs. 8 lakhs

(iii) Guarantee—

(1) To the Mysore State Co-opt. Apex Bank.

(i) Rs. 20 lakhs.

(ii) Rs. 5 lakhs.

(2) To the Karnatak Co-opt. Central Bank, Dharwar. ... Rs. 55 lakhs

Total guarantee ... Rs. 80 lakhs

ಶ್ರೀ ವೈ. ಎಸ್. ಪಾಟೀಲ್.—ಸ್ವಾಮಿ, 1959-60ರಿಂದ ಪ್ರತಿವರ್ಷವೂ ಈ ಹುಬ್ಬಳ್ಳಿಯ ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗೆ ನಷ್ಟವಾಗುತ್ತದೆ ಎಂದು ಹೇಳಿದ್ದೀರಿ, ಹಾಗಾದರೆ 1959-60 ರಿಂದ ಇಲ್ಲಿಯುವರೆಗೆ ಒಟ್ಟು ಎಷ್ಟು ನಷ್ಟವಾಯಿತು?

ಶ್ರೀ ಪಿ. ಎಂ. ನಾಡಗೌಡ.—1959-60 ರಿಂದ ಇಲ್ಲಿಯವರೆಗೆ ಒಟ್ಟು ಎಷ್ಟು ನಷ್ಟವಾಗಿದೆ ಎನ್ನತಕ್ಕ ಫಿಗರ್ಸ್ ಅನ್ನು ಟೋಟಲ್ ಮಾಡಿಲ್ಲ. ಆದರೆ 1959-60ನೇ ಸಾಲಿನಲ್ಲಿ 1,50,000 ರೂಪಾಯಿಗಳು ನಷ್ಟವಾಗಿದೆ, 1960-61ನೇ ಸಾಲಿನಲ್ಲಿ ಪ್ರಾಫಿಟ್ 1,559 ರೂಪಾಯಿಗಳು ಬಂದಿದೆ. 1961-62ನೇ ಸಾಲಿನಲ್ಲಿ ನಷ್ಟ 2,552 ರೂಪಾಯಿಗಳು. 1962-63ನೇ ಸಾಲಿನಲ್ಲಿ 8,30,000 ರೂಪಾಯಿಗಳು ನಷ್ಟವಾಗಿದೆ. 1963-64ನೇ ಸಾಲಿನಲ್ಲಿ 2,98,000 ರೂಪಾಯಿಗಳು ನಷ್ಟವಾಗಿದೆ. ಇದರ ಡೀಟೈಲ್ಸ್ ಬೇಕಾದರೆ ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಒಟ್ಟು ಲಾಸ್ 50,30,000 ರೂಪಾಯಿಗಳು.

ಶ್ರೀ ವೈ. ಎಸ್. ಪಾಟೀಲ್.—ಈ ರೀತಿಯಾಗಿ ಆ ಬಟ್ಟೆ ಗಿರಣಿಯಲ್ಲಿ ನಷ್ಟವಾಗಲು ಅಲ್ಲಿ ನಡೆಯತಕ್ಕ ದುರಾಡಳಿತ ಮತ್ತು ಅದಕ್ಷತೆ ಕಾರಣ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಪಿ. ಎಂ. ನಾಡಗೌಡ.—ಆ ಗಿರಣಿಯಲ್ಲಿ ಲಾಸ್ ಆಗಬೇಕಾದರೆ ಕಾರಣ ಇಷ್ಟೆ. 1956-57ನೇ ಇಸವಿಯಲ್ಲಿ ಕಲ್ಕತ್ತಾದ ಒಂದು ಪಾರ್ಟಿಯವರು ಆ ಮಿಲ್ಲನ್ನು ರನ್ ಮಾಡುತ್ತಿದ್ದರು. ಅವರಿಗೆ ಅದರಲ್ಲಿ ನಷ್ಟವಾಯಿತು ಎಂದು ಅವರು ಅದನ್ನು ಮುಚ್ಚುತ್ತಿದ್ದರು. ಆಗ ಅದನ್ನು ಮುಚ್ಚಿದರೆ ಆ ಮಿಲ್ಲಿನಲ್ಲಿ ಕೆಲಸಮಾಡತಕ್ಕ 18-19 ನೂರು ಜನ ಕೆಲಸಗಾರರು ಏನು ಇದ್ದಾರೆ ಅವರಿಗೆ ತೊಂದರೆಯಾಗುತ್ತದೆ ಎಂದು ಸರ್ಕಾರದ ಮೇಲೆ ಪ್ರೆಷರ್ ಬಂತು. ಆ ಸಂದರ್ಭದಲ್ಲಿ ಸರ್ಕಾರದವರು ಅದರಲ್ಲಿ ಇಂಟರ್‌ಫಿಯರ್ ಮಾಡಿ ಆ ಮಿಲ್ಲನ್ನು ಸಹಕಾರಿ ಬಟ್ಟೆ ಮಿಲ್ ಎಂದು ತೆಗೆದುಕೊಂಡು ಅದಕ್ಕೆ ಹಣಸಹಾಯ ಮಾಡಬೇಕಾದ ಪ್ರಸಂಗ ಬಂತು.

ಶ್ರೀ ಕೆ. ಚನ್ನಬಸವನಗೌಡ.—ಲಾಭ ಮತ್ತು ನಷ್ಟದ ದೃಷ್ಟಿಯಿಂದ ಸರ್ಕಾರದವರು ಗಿರಣಿಗಳನ್ನು ನಡೆಸುತ್ತಾರೋ ಅಥವಾ ನೌಕರಿ ಇಲ್ಲದವರಿಗೆ ನೌಕರಿ ಒದಗಿಸಬೇಕು ಎಂಬ ದೃಷ್ಟಿಯಿಂದ ಗಿರಣಿಗಳನ್ನು ನಡೆಸುತ್ತಾರೋ.

3-00 P. M.

ಶ್ರೀ ಪಿ. ಎಂ. ನಾಡಗೌಡ.—ಪ್ರಾಮುಖ್ಯವಾಗಿ ಕಾರ್ಮಿಕರಿಗೆ ತೊಂದರೆಯಾಗಬಾರದು ಎಂಬ ಮಾನವೀಯ ದೃಷ್ಟಿಯಿಂದ ಗಿರಣಿಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ.

ಶ್ರೀ ಜಿ. ವಿ. ಆಂಜನಪ್ಪ.—ಈ ಗಿರಣಿಗೆ 40 ಲಕ್ಷ ರೂಪಾಯಿಗಳಷ್ಟು ಷೇರುಬಂಡವಾಳ ಹಾಕಿದ್ದೀರಿ; ಮತ್ತು ಅನೇಕ ಬ್ಯಾಂಕುಗಳ ಮೂಲಕ ಧನಸಹಾಯ ಕೂಡ ಮಾಡಿದ್ದೀರಿ. ಸುಮಾರು ಒಂದು ಕೋಟಿ 30 ಲಕ್ಷದವರೆಗೆ ಧನಸಹಾಯ ಮಾಡಿದ್ದೀರಿ. ಈ ಗಿರಣಿ ಲುಕ್ಸಾನಿನಿಂದ ನಡೆಯುತ್ತಿದೆಯೆಂದು ತಿಳಿದಿದ್ದರೂ ಕೂಡ ಇಷ್ಟೊಂದು ಹಣವನ್ನು ಏತಕ್ಕೆ ಕೊಡಲಾಯಿತು?

ಶ್ರೀ ಪಿ. ಎಂ. ನಾಡಗೌಡ.—ಲುಕ್ಸಾನಿನ ಪ್ರಶ್ನೆ ಅಲ್ಲ. ಕಾರ್ಮಿಕರ ಸಲುವಾಗಿ ನಡೆಸಲಾಯಿತು. ಸರ್ಕಾರದವರು ನೇರವಾಗಿ ಕೊಟ್ಟಿರುವುದು 40 ಲಕ್ಷ ರೂಪಾಯಿಗಳನ್ನು ಮಾತ್ರ, ಉಳಿದ ಹಣವನ್ನು ವಿವಿಧ ಬ್ಯಾಂಕ್‌ಗಳಿಗೆ ಗ್ಯಾರಂಟಿ ಕೊಟ್ಟು ಕೊಡಿಸಿದ್ದೇವೆ. ಧಾರವಾಡದಲ್ಲಿರುವ ಕರ್ನಾಟಕ ಕೇಂದ್ರೀಯ ಬ್ಯಾಂಕ್‌ನವರು ಈ ಗಿರಣಿಗೆ ಮೊದಲು 50 ಲಕ್ಷ ರೂಪಾಯಿಗಳನ್ನು ಅಲ್ಪಕಾಲಾವಧಿ ಸಾಲ ಎಂದು ಕೊಟ್ಟಿದ್ದರು. ಈ ರೀತಿ ಕೊಟ್ಟಿದ್ದಕ್ಕೆ ಸರ್ಕಾರದವರು ಮತ್ತು ರಿಜರ್ವ್ ಬ್ಯಾಂಕ್‌ನವರು ತಕರಾರು ಮಾಡಿದರು. ವ್ಯವಸಾಯದ ಅಭಿವೃದ್ಧಿಗೆ ತೊಂದರೆಯಾಗಬಾರದೆಂದು ಅಲ್ಪಕಾಲಾವಧಿ ಸಾಲವನ್ನು ಮಧ್ಯಮಾವಧಿ ಸಾಲವೆಂದು ಟ್ರೀಟ್ ಮಾಡಲಾಯಿತು.

ಶ್ರೀ ಜಿ. ವಿ. ಅಂಜನಪ್ಪ.—ಇಷ್ಟೊಂದು ಹಣವನ್ನು ಸಹಾಯಮಾಡಿದ್ದರೂ ಕೂಡ ಈಗ ಈ ಗಿರಣಿಯನ್ನು ಮುಚ್ಚಲಾಗಿದೆ. ಸುಮಾರು 1,500 ಜನದವರೆಗೆ ನಿರುದ್ಯೋಗಿಗಳಾಗಿದ್ದಾರೆ ಮತ್ತು ನಿರ್ಗತಿಕರಾಗಿದ್ದಾರೆ. ಇವರಿಗೆ ಮತ್ತೆ ಉದ್ಯೋಗ ಕೊಡಿಸಲು ಏನು ಯೋಜನೆ ಹಾಕಿಕೊಂಡಿದ್ದೀರಿ ?

ಶ್ರೀ ಪಿ. ಎಂ. ನಾಡಗೌಡ.—ಇಂಡಸ್ಟ್ರೀಸ್ ಆಕ್ಟ್ ಪ್ರಕಾರ ಈ ನೌಕರರಿಗೆ ಕಾಂಪೆನ್‌ಸೇಷನ್ ಕೊಡಲಾಗಿದೆ. ಖಾಸಗೀಯವರು ಯಾರಾದರೂ ಮುಂದೆ ಬಂದು ಈ ಗಿರಣಿಯನ್ನು ನಡೆಸುತ್ತೇವೆ ಎಂದು ಹೇಳಿದರೆ ಅವರಿಗೆ ವಹಿಸಲು ತಯಾರಿದ್ದೇವೆ. ಮತ್ತು ಮಾನ್ಯ ಸದಸ್ಯರು ಇಷ್ಟೊಂದು ಹಣವನ್ನು ತೊಡಗಿಸಿದ್ದರೂ ಗಿರಣಿ ಮುಚ್ಚಲಾಯಿತು ಎಂದು ಹೇಳಿದರು. ಈಗ ನಾವು ಒಂದು ಕೋಟಿ 30 ಲಕ್ಷ ರೂಪಾಯಿಗಳನ್ನು ಏನು ತೊಡಗಿಸಿದ್ದೇವೆ, ಅಷ್ಟು ಆಸ್ತಿ ಆ ಗಿರಣಿಯಲ್ಲಿ ಇರುವುದರಿಂದ ನಮ್ಮ ಹಣಕ್ಕೆ ಏನೂ ತೊಂದರೆ ಬರುವುದಿಲ್ಲ.

ಶ್ರೀ ವೈ. ಎಸ್. ಪಾಟೀಲ್.—ಗಿರಣಿ ಮುಚ್ಚಲು ಕಾರಣವೇನು ಎಂಬುದನ್ನು ತಿಳಿಯಲು ಒಂದು ಜುಡಿಷಿಯಲ್ ಎನ್‌ಕ್ವೈರಿಯನ್ನು ನೇಮಕ ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಆ ರೀತಿ ನೇಮಕ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ಲಿಂಗಣ್ಣ.—ಖಾಸಗೀಯವರಿಂದ ಈ ಗಿರಣಿಯನ್ನು ಕೊಂಡುಕೊಳ್ಳುವುದಕ್ಕೆ ಎಷ್ಟು ಹಣ ಕೊಟ್ಟಿದ್ದೀರಿ ಮತ್ತು ಈಗ ಎಷ್ಟು ಕೊಟ್ಟಿದ್ದೀರಿ; ಆ ಹಣವೆಲ್ಲವೂ ಕೂಡ ಈಗ ಈ ಗಿರಣಿಯನ್ನು ಮಾರಿದರೆ ಬರುತ್ತದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಬರುತ್ತದೆ. ಆ ಗಿರಣಿಯಲ್ಲಿ ಮೂರು ನಾಲ್ಕು ತರಹದ ಆಸ್ತಿ ಇದೆ. ಕಲ್ಕತ್ತಾ ಪಾರ್ಟಿಯಿಂದ ಈ ಗಿರಣಿಯನ್ನು ಕೊಂಡುಕೊಂಡಾಗ ಸುಮಾರು 6,500 ಸ್ಪಿಂಡಲ್ಸ್ ಇದ್ದವು. ಈಗ ಮತ್ತೆ 12,000 ಸ್ಪಿಂಡಲ್ಸನ್ನು ಹೊಸದಾಗಿ ಕೊಂಡುಕೊಂಡಿರುವುದು ಇವೆ. ಈ ಗಿರಣಿ ಹುಬ್ಬಳ್ಳಿಯ ಒಳ್ಳೆಯ ಮಹತ್ವದ ಏರಿಯಾದಲ್ಲಿ ಇದೆ ಮತ್ತು ಕಟ್ಟಡ ಇದೆ. 1957 ರಿಂದ ಈ ಗಿರಣಿಯನ್ನು ಲುಕ್ಸಾನಾಗುತ್ತಿದ್ದರೂ ಕೂಡ ನಡೆಸಿಕೊಂಡುಬಂದು ಕಾರ್ಮಿಕರಿಗೆ ಜೀವದಾನ ಕೊಟ್ಟಿದ್ದೇವೆ. ಇವೆಲ್ಲಾ ಕಾರಣಗಳನ್ನು ನೋಡಿದರೆ ನಾವು ವಿನಿಯೋಗಿಸಿರುವ ಹಣ ಲುಕ್ಸಾನಾಗುವುದಿಲ್ಲ ಎಂದು ಹೇಳಬಹುದು.

ಶ್ರೀ ಎಸ್. ಸಿ. ಕುಬಸದ.—ಔಟ್‌ರೈಟ್ ಸೇಲ್ ಆಗಿ ತೆಗೆದುಕೊಳ್ಳುತ್ತಾರೋ ಇಲ್ಲವೇ ಲೀಸು ಮೇಲೆ ತಗೆದುಕೊಳ್ಳಲು ಬಂದಿದ್ದಾರೋ? ಮತ್ತು ಇದರ ಬಗ್ಗೆ ಪಾರ್ಟಿಗಳು ಕಮ್ಯೂನಿಕೇಷನ್‌ಗಳನ್ನು ಕಳುಹಿಸಿ ಎಷ್ಟು ದಿವಸಗಳಾದವು ?

ಶ್ರೀ ಪಿ. ಎಂ. ನಾಡಗೌಡ.—ಇದರಲ್ಲಿ ಸುಮಾರು 12 ಜನರು ಮುಂದೆ ಬಂದು ಸರ್ಕಾರಕ್ಕೆ ತಿಳಿಸಿದ್ದಾರೆ. ಇದರೊಂದಿಗೆ ನಮ್ಮ ಅಧಿಕಾರಿಗಳು ನೆಗೋಸಿಯೇಟ್ ಮಾಡುತ್ತಿದ್ದಾರೆ. ಈಗಾಗಲೇ ಸಾಕಷ್ಟು ಕೆಲಸಗಳು ನಡೆದಿವೆ. ಸರಕಾರ ಕೂಡ ಆತುರವಾಗಿದೆ. ಏಕೆಂದರೆ ಇದರಲ್ಲಿರುವ ಲೇಬರುಗಳಿಗೆ ಸ್ವಲ್ಪಮಟ್ಟಿನ ಅನುಕೂಲವಾದರೂ ಸಿಗಲಿ ಎಂದು ಬೇಗನೆ ಕೆಲಸ ಮಾಡುತ್ತಿದ್ದೇವೆ.

ಶ್ರೀ ವೈ. ಎಸ್. ಪಾಟೀಲ್.- ಹೊಸದಾಗಿ ಕೊಂಡುಕೊಳ್ಳುವ ಗಿರಣಿ ಮಾಲೀಕರು ಇಲ್ಲಿರುವ ಕೆಲಸಗಾರರುಗಳನ್ನೇ ಮುಂದೆ ಅವರು ಗಿರಣಿ ಆರಂಭ ಮಾಡುವಾಗ ತಗೆದುಕೊಳ್ಳಬೇಕೆಂದು ಷರತ್ತು ಹಾಕಿಕೊಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಇವನ್ನು ಈಗಲೇ ಹೇಗೆ ಹೇಳುವುದು ? ನೆಗೋಷಿಯೇಟು ಮಾಡುತ್ತಿದ್ದೇನೆ. ಇದರಲ್ಲಿರುವ ಮುಖ್ಯ ಪ್ರಶ್ನೆ ಸರಕಾರ ಹಾಕಿರುವ ಹಣಕ್ಕೆ ನಷ್ಟವಾಗದ ರೀತಿಯಲ್ಲಿ ನೋಡಿಕೊಂಡು ಸರಕಾರದ ಹಣವನ್ನು ಉಳಿಸಬೇಕು. ನಂತರ ಇದನ್ನೆಲ್ಲಾ ಮಾನವೀಯ ದೃಷ್ಟಿಯಿಂದ ಪರಿಶೀಲಿಸಬೇಕೆಂದು ಪರಸ್ಪರ ನೆಗೋಸಿಯೇಷನ್ ಮಾಡಬಹುದು. ಆದರೆ ಇದರ ಬಗ್ಗೆ ಈಗ ಯಾವೊಂದು ಆಶ್ವಾಸನೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಬಸವರಾಜ ಕಟ್ಟೀಮನಿ.—ಸಹಕಾರ ಗಿರಣಿ ಮ್ಯಾನೇಜಿಂಗ್ ಡೈರಕ್ಟರು ಯಾರು ಇದ್ದರು?

ಶ್ರೀ ಪಿ. ಎಂ. ನಾಡಗೌಡ.—ಶ್ರೀ ರಾಜಶೇಖರನ್ ಎನ್ನುವವರು ಇದ್ದರು.

ಶ್ರೀ ಸಿ. ಎಸ್. ಬಾಲಕೃಷ್ಣ ಗೌಡ.—ಸಹಕಾರದ ಮಿಲ್ಲುಗಳನ್ನು ತೆರೆಯುವಂತೆಯೇ ಕೊಳ್ಳೇಗಾಲದಲ್ಲಿರುವ ಸಿಲ್ಕ್ ಫಿಲೇಚರಿನಂತಹ ಸಂಸ್ಥೆಗಳನ್ನು ಸರಕಾರ ಮುಚ್ಚಿದೆ. ಇದರ ಬಗ್ಗೆ ಕೂಡ ಮಾನವೀಯ ದೃಷ್ಟಿ ಸರಕಾರ ಇಟ್ಟು ಪರಿಶೀಲಿಸುತ್ತದೆಯೇ?

Mr. DEPUTY CHAIRMAN.—If the Hon. Member has got any supplementary arising out of this question, he may put it. Otherwise Supplementaries which are not related to the main question cannot be allowed.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಇದರಲ್ಲಿ ಮಿಲ್ಲು ಮುಚ್ಚಿರುವಂತೆಯೇ ಬೇರೆ ಕಡೆ ಕೂಡ ಸರಕಾರ ಮಿಲ್ಲುಗಳನ್ನು ಮುಚ್ಚುತ್ತಿದೆ ಅದರಲ್ಲಿ ಕೊಳ್ಳೆಗಾಲದ ಸಿಲ್ಕ್ ಫಿಲೇಚರೂ ಬರುತ್ತದೆ.

Mr. DEPUTY CHAIRMAN.—Supplementary relating to Kollegal Filatures does not arise out of this question.

Sri C. S. BALAKRISHNA GOWDA.—I want an answer from the Hon. Minister.

Mr. DEPUTY CHAIRMAN.—Hon. Member should put only supplementaries arising out of this question.

Sri C. S. BALAKRISHNA GOWDA.—I asked a question. It is for the Hon. Minister for Co-operation to answer.

Mr. DEPUTY CHAIRMAN.—The hon. Member is persisting. Hon. Member may resume his seat.

Sri C. S. BALAKRISHNA GOWDA.—I will resume Sir, but I must get an answer to my question.

Mr. DEPUTY CHAIRMAN.—I am very sorry. The hon. Member cannot put any condition to the Chair. The supplementary question is disallowed.

ಶ್ರೀ ಸಿ. ಬಂದೀಗೌಡ.—ಮಾನ್ಯ ಸಭಾಪತಿಯವರೇ, ಸದಸ್ಯರು ಯಾವ ಪ್ರಶ್ನೆ ಬೇಕಾದರೂ ಕೇಳಬಹುದು. ಆ ಪ್ರಶ್ನೆಗೆ ಉತ್ತರ ಹೇಳಬೇಕೇ, ಬೇಡವೇ ಎನ್ನುವುದನ್ನು ನಿರ್ಧರಿಸತಕ್ಕ ವಿಷಯ ಅಧ್ಯಕ್ಷರಿಗೆ. ಅಧ್ಯಕ್ಷರ ಅನುಮತಿಇಲ್ಲದೆ ಮಂತ್ರಿಗಳು ಉತ್ತರ ಹೇಳುವುದಕ್ಕಾಗುವುದಿಲ್ಲ. ಅವರು ಏನು ಹೇಳುತ್ತಾರೆ ಎನ್ನುವುದು ಅವರು ಹೇಳುವವರೆಗೂ ತಿಳಿಯುವುದಕ್ಕಾಗುವುದಿಲ್ಲ. ಅಧ್ಯಕ್ಷರಿಗೆ ಗೊತ್ತಾಗುವುದು ಅವರು ಪ್ರಶ್ನೆ ಕೇಳಿದ ಮೇಲೆ. ಉತ್ತರ ಕೊಡುವುದು ಬೇಡ ಎಂದು ಭಾವನೆ ಇದ್ದರೆ ಆ ಪ್ರಶ್ನೆಗೆ ಉತ್ತರ ಕೊಡಬೇಕಾಗಿಲ್ಲ. ಇದರ ಬಗ್ಗೆ ಅಧ್ಯಕ್ಷರನ್ನು ಪ್ರಶ್ನಿಸುವುದು ಸರಿಯಲ್ಲ.

Sri A. B. PATIL.—Sir, is the Government contemplating to make good this amount which is guaranteed to these two Banks—the sum of Rs. 25 lakhs and Rs. 50 lakhs, which was given to this Mill under Government Guarantee?

Sri P. M. NADGOUDA.—We have given guarantee.

Sri G. V. GOWDA.—Would it not be possible to extend the huminatarian consideration that was available to the workers at Hubli to the labourers elsewhere also, Sir?

Sri P. M. NADGOUDA.—I require notice.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಸರ್ಕಾರ ಈ ಮಿಲ್ಲಿನ ಆಸ್ತಿಯನ್ನು ಲೆಕ್ಕ ಮಾಡಿ ಎಷ್ಟಿದೆ ಎಂದು ವಿಚಾರ ಮಾಡಿದೆಯೇ?

ಶ್ರೀ ಪಿ. ಎಂ. ನಾಡಗೌಡ.—ಮಾಡಿದೆ :

Fixed assets :	1,25,82,499.86
ಅದರ್ ಅಸೆಟ್ಸ್	17,566.58
Investment :	2,19,500
Closing stock	30,26,317
ಅಡ್ವಾನ್ಸಸ್	
Deposits—sundry debtors	10,15,000
Cash and bank balances	1,62,487
Loss :	49,10,000
Total	2,19,069

ಶ್ರೀ ಜಿ. ವಿ. ಆಂಜನಪ್ಪ.—ಈ ಮಿಲ್ಲಿನ ಬಂಡವಾಳವೆಷ್ಟು ಮತ್ತು ಅದರಲ್ಲಿ ಸರ್ಕಾರ ಹಾಕಿರುವ ಬಂಡವಾಳವೆಷ್ಟು ಮತ್ತು ಖಾಸಗಿಯವರದೆಷ್ಟು ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರದ ಷೇರು ಬಂಡವಾಳ 40 ಲಕ್ಷ ರೂಪಾಯಿ, 15 ಲಕ್ಷ ಚಿಲ್ಲರೆ ವ್ಯಕ್ತಿಗಳದ್ದು ಮತ್ತು ಸಹಕಾರ ಸಂಸ್ಥೆಗಳದ್ದು ಇದೆ.

Sri KESHAVA RAO NITTURKAR.—To avoid further loss, has Government fixed certain time limit within which to get rid of this Mill—lease out the mill or hand over to private party ?

Sri P. M. NADGOUDA.—Government has already taken action. The Mill has been closed on account of heavy losses and Government is now negotiating with 12 parties. They are being interviewed from yesterday and after that Government will take a decision.

ಶ್ರೀ ಜಿ. ವಿ. ಆಂಜನಪ್ಪ.—ಈ ಮಿಲ್ಲಿನಲ್ಲಿ ಹಾಕಿರುವ ಬಂಡವಾಳದಲ್ಲಿ ಸರ್ಕಾರದ ಪಾಲು ಹೆಚ್ಚಾಗಿದ್ದು ಕಾರ್ಖಾನೆಯ ಮೇಲ್ವಿಚಾರಣೆ ಸರ್ಕಾರದಲ್ಲಿಯೇ ಇತ್ತು. ಸರ್ಕಾರದ ಆಡಳಿತ ದಲ್ಲಿದ್ದಾಗ್ಯೂ ಸುಮಾರು 50 ಲಕ್ಷ ಲುಕ್ಸಾನಾಗುವುದಕ್ಕೆ ಕಾರಣವೇನು ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರದ ಆಡಳಿತದಲ್ಲಿ ಇರಲಿಲ್ಲ. ಸಹಕಾರ ಸಂಸ್ಥೆ ಮ್ಯಾನೇಜ್‌ಮೆಂಟಿನಲ್ಲಿತ್ತು. ಸರ್ಕಾರದಿಂದ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರನ್ನು ಕೊಟ್ಟಿತ್ತು.

ಶ್ರೀ ವೈ. ಎಸ್. ಪಾಟೀಲ್.—ಈಗ ತೆಗೆದುಹಾಕಿರುವ 1886 ಕಾರ್ಮಿಕರಿಗೆ ಮಾನವೀಯತೆಯ ದೃಷ್ಟಿಯಿಂದ ಬೇರೆಲ್ಲಿಯಾದರೂ ನೌಕರಿ ಒದಗಿಸಿಕೊಡುವಂಥ ಜವಾಬ್ದಾರಿಯನ್ನು ಸರ್ಕಾರ ಹೊತ್ತುಕೊಂಡು ವ್ಯವಸ್ಥೆಯನ್ನು ಮಾಡುವುದೇ ?

ಶ್ರೀ ಪಿ. ಎಂ. ನಾಡಗೌಡ.—ಇಂಡಸ್ಟ್ರಿಯಲ್ ಆಕ್ಟ್ ಪ್ರಕಾರ ಸರ್ಕಾರದ ಜವಾಬ್ದಾರಿ ಏನಿತ್ತು ಅದನ್ನೆಲ್ಲ ಪೂರ್ಣ ಮಾಡಿದ್ದೇವೆ. ಅವರಿಗೆ ಏನು ವೇಜಸ್ ಬರಬೇಕು, ಪ್ರಾವಿಡೆಂಟ್ ಫಂಡ್ ಬರಬೇಕು ಅದನ್ನೆಲ್ಲ ಕೊಟ್ಟು ಒಂದು ತಿಂಗಳ ವೇಜಸ್ ಕೊಟ್ಟಿದ್ದಾರೆ. ಇಂಡಸ್ಟ್ರಿಯಲ್ ಆಕ್ಟ್ ಪ್ರಕಾರ ಏನು ಸವಲತ್ತುಗಳಿವೆ ಅದನ್ನು ಕೊಡಲಿಕ್ಕೆ ಬದ್ಧರಿದ್ದಾರೆ. ಬಾಕಿಯದು ನಮಗೆ ಬಾಧ್ಯತೆ ಇಲ್ಲ. ಆ ಕಾರ್ಖಾನೆಯನ್ನು ಯಾರಾದರೂ ತೆಗೆದುಕೊಂಡು ನಡೆಸಿದರೆ ಆ ವೇಳೆಗೆ ಮಾನವೀಯತೆಯ ದೃಷ್ಟಿಯಿಂದ ನೋಡಿ ಸಹಾಯ ಮಾಡಬಹುದು.

Representation for Diversion of Yagachi River

122. Sri CHANNAIAH WADEYAR (Local Authorities, Constituency).—

Will the Chief Minister be pleased to state :—

(a) whether the atchkatdars of V. V. Sagar, Hiriyur Taluk have presented a Memorandum to the Chief Minister on 18th July 1969 requesting to divert Yagachi river to V. V. Sagar ;

(b) whether plans and estimates have been prepared in that behalf ;

(c) the estimated cost of the Project ;

(d) the steps taken by the Government to implement the Scheme ?

SRI D. PARAMESHWARAPPA (Deputy Minister for Major Irrigation and Electricity) [On behalf of SRI VEERENDRA PATIL) (Chief Minister)].—

(a) Yes.

(b) Yes.

(c) Rs. 147 lakhs.

(d) The Project has been sent to C.W. P.C. for technical clearance.

ಶ್ರೀ ಚನ್ನಯ್ಯ ಒಡೆಯರ್.—ಯಗಚಿ ನದಿ ನೀರಿನ್ನು ವಾಣಿವಿಲಾಸ ಸಾಗರಕ್ಕೆ ತಿರುಗಿಸುವ ವಿಚಾರದಲ್ಲಿ ಕ್ರಮ ಕೈಕೊಂಡಿರುವುದೇನು ?

ಶ್ರೀ ಡಿ. ಪರಮೇಶ್ವರಪ್ಪ.—ಸ್ಕೀಂ ಇನ್‌ವೆಸ್ಟಿಗೇಟ್ ಮಾಡಿ ಎಸ್ಟಿಮೇಟ್ ವಗೈರೆ ಮಾಡುತ್ತಿದ್ದೇವೆ.

ಶ್ರೀ ಚನ್ನಯ್ಯ ಒಡೆಯರ್.—ಎಷ್ಟು ವರ್ಷದಿಂದ ಈ ಬಗ್ಗೆ ಮನವಿ ಸಲ್ಲಿಸುತ್ತಿದ್ದಾರೆ ?

ಶ್ರೀ ಡಿ. ಪರಮೇಶ್ವರಪ್ಪ.—1963ರಿಂದ.

ಶ್ರೀ ಚನ್ನಯ್ಯ ಒಡೆಯರ್.—ಇಲ್ಲಿಯವರೆಗೂ ಏಕೆ ಕ್ರಮ ಕೈಕೊಂಡಿಲ್ಲ ?

ಶ್ರೀ ಡಿ. ಪರಮೇಶ್ವರಪ್ಪ.—ಈ ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ. ಸಾಕಷ್ಟು ಹಣ ದೊರೆಯದೆ ತೆಗೆದುಕೊಳ್ಳುವುದು ನಿಧಾನವಾಗಿದೆ.

ಶ್ರೀ ಚನ್ನಯ್ಯ ಒಡೆಯರ್.—ಹತ್ತು ವರ್ಷಗಳಿಂದ ಅಲ್ಲಿ ಅಚ್ಚುಕಟ್ಟುದಾರರಿಗೆ ಕೋಟಿಗಟ್ಟಲೆ ನಷ್ಟವಾಗಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಮಾನ್ಯ ಸದಸ್ಯರು ಎಗ್ಸಾಗರೇಟ್ ಮಾಡುತ್ತಿದ್ದಾರೆ. ಆದರೆ ಮಳೆ ಕಡಮೆಯಾದಾಗ ವಾಣಿವಿಲಾಸ ಸಾಗರ ತುಂಬದೆ ಟೈಲ್ ಎಂಡ್ ಲ್ಯಾಂಡಿನವರಿಗೆ ತೊಂದರೆಯಾಗಿದೆ.

ಶ್ರೀ ಚನ್ನಯ್ಯ ಒಡೆಯರ್.—ಹಾಗಾದರೆ ಮನವಿ ಹತ್ತು ವರ್ಷಗಳಿಂದ ಬರುತ್ತಿದೆ, ಆವಶ್ಯಕತೆ ಇದೆ ಎಂಬುದನ್ನು ಒಪ್ಪುವಿರಿ. ಏಕೆ ಮನಗಂಡಿದ್ದರೂ ಕಾರ್ಯಕ್ರಮ ತೆಗೆದುಕೊಳ್ಳದ ಯೋಜನೆ ಮಂಜೂರು ಮಾಡದೆ ಇರುತ್ತೀರಿ ?

ಶ್ರೀ ಡಿ. ಪರಮೇಶ್ವರಪ್ಪ.—ಸರಕಾರಕ್ಕೆ ಮನವಿ ಬಂದಕೂಡಲೆ ಸಾಧಕ ಬಾಧಕಗಳನ್ನು ತಿಳಿಯದೆ ಮಂಜೂರು ಮಾಡುವುದಕ್ಕಾಗುವುದಿಲ್ಲ. ಯಗಚಿ ನದಿಯ ನೀರನ್ನು ವಾಣಿವಿಲಾಸ ಸಾಗರಕ್ಕೆ ತಿರುಗಿಸಿದರೆ ಆದರಿಂದಾಗುವ ಪರಿಣಾಮವೇನು, ಸಾಧಕಬಾಧಕಗಳೇನು ಎಂದು ಪರಿಶೀಲಿಸಿ ಯಾವುದಾದರೂ ಒಂದು ಕ್ರಮ ಕೈಕೊಳ್ಳಬೇಕು. ಈಗ ಈ ವಿಚಾರ ಅಂತಿಮ ಮಟ್ಟದಲ್ಲಿದೆ.

Training facilities for Urdu Primary School Teachers

134. **Sri M. G. HANDRAL** (Teachers' Constituency).—

Will the Minister for Education be pleased to state :—

(*a*) whether the Government is aware the training facilities for Urdu Primary School Teachers are not adequate ;

(*b*) if so, the programme thought of for increasing existing facilities for training of Urdu Primary School Teachers in the State ?

Sri N. M. KOTRABASAIAH SOGI (Deputy Minister for Education).—

(*a*) No.

(*b*) Does not arise.

ಶ್ರೀ ಎಂ. ಜಿ. ಹಂದ್ರಾಳ್.—ಉತ್ತರದಲ್ಲಿ ಉರ್ದು ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ಟ್ರೈನಿಂಗ್ ಸೌಲಭ್ಯ ಕಡಮೆ ಇರುವುದು ಗೊತ್ತಿಲ್ಲ ಎಂದು ತಿಳಿಸಿವೆ. ಅನೇಕ ಉಪಾಧ್ಯಾಯರಿಗೆ 8—10 ವರ್ಷಗಳ ಟ್ರೈನಿಂಗ್ ಆಗಿದ್ದರೂ ಕೂಡ ಟ್ರೈನಿಂಗಿಗೆ ಅವಕಾಶ ಸಿಕ್ಕಿಲ್ಲ, ಮತ್ತು ಇನ್‌ಕ್ರಿಮೆಂಟ್ ಕೊಟ್ಟಿಲ್ಲ ಮತ್ತು ಅವರನ್ನು ಕನ್‌ಫರ್ಮ್ ಮಾಡಿಲ್ಲ. ಈ ರೀತಿ ಅನ್ಯಾಯವಾಗಿರುವ ಉಪಾಧ್ಯಾಯರುಗಳು ಅನೇಕರಿದ್ದಾರೆ. ಇದನ್ನು ಪರಿಶೀಲಿಸಿ 3 ವರ್ಷಗಳಿಗಿಂತ ಹೆಚ್ಚು ಸರ್ವಿಸ್ ಆದವರಿಗೆ ಟ್ರೈನಿಂಗ್ ಆಗಿಲ್ಲದಿರುವುದನ್ನು ಗಮನಿಸಿ ಈಗ ಟ್ರೈನಿಂಗಿನ ಅನುಕೂಲವಿರುವ ಕಡೆ ಹೆಚ್ಚು ಸೆಕ್ಷನ್ನುಗಳನ್ನಾದರೂ ತೆರೆದು ಟ್ರೈನಿಂಗ್ ಕೊಡಲು ಅವಕಾಶ ಮಾಡುತ್ತೀರಾ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೊಗಿ.—ಈಗ ಉರ್ದು ಪ್ರೈಮರಿ ಶಾಲೆ ಉಪಾಧ್ಯಾಯರಿಗೆ ಟ್ರೈನಿಂಗ್ ಕೊಡಲು ಅನುಕೂಲವಿದೆ. ಬಿಜಾಪುರ, ಮೈಸೂರು, ಧಾರವಾಡ ಮುಂತಾದ ಕಡೆಗಳಲ್ಲಿ ಟ್ರೈನಿಂಗ್ ಕಾಲೇಜುಗಳಿವೆ. ಇವಲ್ಲದೆ ಧಾರವಾಡದಲ್ಲಿ ಮಹಿಳಾ ಉಪಾಧ್ಯಾಯರಿಗೆ ಟ್ರೈನಿಂಗ್ ಕೊಡಲು ಅವಕಾಶವಿದೆ. ಗುಲ್ಬರ್ಗದಲ್ಲಿ ಸುಮಾರು 60 ಮೆನ್ ಉಪಾಧ್ಯಾಯರಿಗೆ, ಸುಮಾರು 50 ಜನ ಮಹಿಳಾ ಉಪಾಧ್ಯಾಯರಿಗೆ ಅವಕಾಶ ಮಾಡಲಾಗಿದೆ. ಇದಲ್ಲದೆ ಧಾರವಾಡದಲ್ಲಿ ಈವನಿಂಗ್ ಇನ್ ಸರ್ವಿಸ್ ಟ್ರೈನಿಂಗ್ ಸೆಂಟರ್ ಸಹ ಇದೆ. ಹೀಗೆ ಅನೇಕ ಕಡೆ ಅನುಕೂಲ ಮಾಡಲಾಗಿದೆ. ಆದರೆ ಎಲ್ಲರಿಗೂ ಒಂದೇ ವರ್ಷ ಟ್ರೈನಿಂಗ್ ಕೊಡುವುದು ಕಷ್ಟ. ವರ್ಷೇವರ್ಷೇ ಸಾಧ್ಯವಾದಷ್ಟು ಜನರಿಗೆ ಟ್ರೈನಿಂಗ್ ಕೊಡಲು ವ್ಯವಸ್ಥೆ ಮಾಡಲಾಗುವುದು.

ಶ್ರೀ ಎಂ. ಜಿ. ಹಂದ್ರಾಳ್.—ಹೆಚ್ಚು ವರ್ಷಗಳ ಸರ್ವಿಸ್ ಆದವರಿಗೆ ಟ್ರೈನಿಂಗ್ ಇಲ್ಲದಿರುವುದನ್ನು ನೋಡಿ ಅಂಥವರಿಗಾದರೂ ಒಂದು ಸೆಕ್ಷನ್ ತೆರೆದು ಮುಂದಿನ ವರ್ಷ ಟ್ರೈನಿಂಗ್ ಕೊಡಲು ಪ್ರಯತ್ನ ಮಾಡುವಿರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೊಗಿ.—ಅದೇ ಪ್ರಕಾರ ಈಗ ಮಾಡುತ್ತಿರುವುದು. ಹೆಚ್ಚು ಸರ್ವಿಸ್ ಆಗಿರುವವರಿಗೆ ಆದ್ಯತೆ ಕೊಡಲಾಗುವುದು.

ಶ್ರೀ ಜಿ. ವೆಂಕಟೇಗೌಡ.—ಎಷ್ಟು ಪ್ರೈಮರಿ ಉರ್ದು ಶಾಲೆಗಳಿವೆ? ಮತ್ತು ಉರ್ದು ಉಪಾಧ್ಯಾಯರಿಗೆ ಟ್ರೈನಿಂಗ್ ಕೊಡುವ ಕೇಂದ್ರಗಳೆಷ್ಟಿವೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೊಗಿ.—ಶಾಲೆಗಳ ವಿಚಾರ ನನ್ನ ಬಳಿ ಇಲ್ಲ. ಟ್ರೈನಿಂಗ್ ಶಾಲೆಗಳೆಷ್ಟಿವೆ ಎಂಬುದನ್ನು ಹೇಳಿದ್ದೇನೆ. ಈಗ ಬಿಜಾಪುರ, ಮೈಸೂರು, ಧಾರವಾಡಗಳಲ್ಲಿ ಉರ್ದು ಉಪಾಧ್ಯಾಯರುಗಳಿಗೆ ಟ್ರೈನಿಂಗಿಗೆ ಅವಕಾಶವಿದೆ. ಗುಲ್ಬರ್ಗದಲ್ಲಿ ಸುಮಾರು 60 ಮೆನ್ ಟೀಚರ್ಸ್‌ಗೆ 50 ಜನ ಲೇಡಿ ಉಪಾಧ್ಯಾಯರಿಗೆ ಅವಕಾಶವಿದೆ. ಧಾರವಾಡದಲ್ಲಿ ಈವನಿಂಗ್ ಇನ್ ಸರ್ವಿಸ್ ಟ್ರೈನಿಂಗ್ ಸೆಂಟರ್ ಸಹ ಮಾಡಲಾಗಿದೆ.

ಶ್ರೀ ಎಸ್. ಪಿ. ರಾಜಣ್ಣ.—ಈಗ 45 ವರ್ಷವಾಗಿರುವ ಉರ್ದು ಉಪಾಧ್ಯಾಯರಿಗೆ ಟ್ರೈನಿಂಗ್ ಆಗದಿದ್ದರೆ ಇನ್‌ಕ್ರಿಮೆಂಟ್ ಕೊಡುವಂತೆ ನಾನ್ ಎಸ್.ಎಸ್.ಎಲ್.ಸಿ. ಉಪಾಧ್ಯಾಯರಿಗೂ ಉರ್ದು ಭಾಷೆಯವರಿಗೆ ಅನುಕೂಲ ಕಲ್ಪಿಸಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಕಾಯಿದೆ ಕಾನೂನು ಉರ್ದು ಟೀಚರ್ಸ್ ಅಂತ ಪ್ರತ್ಯೇಕವಾಗಿ ಇಲ್ಲ. ಎಲ್ಲಾ ಟೀಚರ್ಸ್‌ಗೆ ಇರತಕ್ಕ ನಿಯಮಾವಳಿಯೇ ಅವರಿಗೂ ಅನ್ವಯಿಸುತ್ತದೆ.

ಶ್ರೀ ವಿ. ಎಸ್. ಹಿರೇಗೌಡರ್.—ಉರ್ದು ಶಾಲೆಗಳಲ್ಲಿ ಅನ್‌ಟ್ರೈನ್ಡ್ ಟೀಚರ್ಸ್ ಎಷ್ಟು? ಅವರೆಲ್ಲರನ್ನೂ ಪೂರ್ತಿ ಟ್ರೈನ್ ಮಾಡಲಿಕ್ಕೆ ಎಷ್ಟು ಕಾಲಾವಕಾಶ ಬೇಕು?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನೋಟೀಸ್.

Mutation register entries in the Revenue Department

174. Sri KESHAV RAO NITTURKAR (Teachers' Constituency).—

Will the Minister for Revenue be pleased to state :—

(a) whether it has come to the notice of the Government that certain irregularities exist in granting the Mutation Register entries by the Revenue Inspectors ;

(b) whether it has come to the notice of Government that the Tahsildars have been rendered ineffective and helpless spectators once an entry has been certified by the Revenue Inspectors ;

(c) whether there is any proposal to effect needful changes in the Rules and procedure to empower Tahsildars as the first appellate and checking authority in respect of Mutation entries certified by the touring Revenue Inspectors ?

Sri H. V. KOUJALGI (Minister for Revenue).—

(a) No.

(b) No. There is a provision for appeal.

(c) No.

Sri KESHAV RAO NITTURKAR.—What reasons goaded the Government to avoid the supervisory and correcting powers of the Tahsildar in respect of mutations sanctioned by the Revenue Inspector and vesting those powers in the Assistant Commissioner and complicating matters and putting the aggrieved to huge expenditure and delayed justice ?

Sri H. V. KOUJALGI.—Entries are too many and more than one Officer is necessary to certify them. If only the Tahsildar is appointed to certify them, the work will be too heavy for one Officer.

Sri KESHAV RAO NITTURKAR.—Then, will the Government consider the proposal to amend rules and provide therein that no sooner a touring Revenue Inspector certifies about the mutation entry, he should inform the Tahsildar by sending a copy of that entry within a week ?

Sri H. V. KOUJALGI.—The procedure suggested by the hon. Member is not practical. If the person concerned is aggrieved, he could have it remedied in appeal.

Sri KESHAV RAO NITTURKAR.—Will the Government consider the suggestion that the first appeal may lie to the Tahsildar and not to the A. C. ?

Sri H. V. KOUJALGI.—No, Sir. I have already stated that more than one Officer is required to certify the entries and one appellate authority is quite sufficient. From practical experience it has been found that the present arrangement is quite correct.

Water supply scheme to Davangere City

230. Sri A. H. SHIVANANDASWAMY (Elected by L.A.).—

Will the Minister of State for Municipal Administration be pleased to state ;—

(a) when the comprehensive water supply scheme was proposed and sanctioned for Davangere City ;

(b) when it was revised and for the revised amount ;

(c) when it will be completed ;

Sri B. M. PATIL (Minister of State for Municipal Administration).—

(a) (i) The original scheme was proposed in the year 1957 ;

(ii) It was sanctioned in the year 1968.

(b) It was revised in the year 1968 and the revised amount is Rs. 49.00 lakhs.

(c) The revised scheme is being approved by Government. As such it is not possible to state the exact period by which it will be completed ?

ಶ್ರೀ ಜಿ. ವಿ. ಅಂಜನಪ್ಪ.—ಈ ಎಸ್ಟಿಮೇಟ್‌ನ್ನು ಮಂಜೂರು ಮಾಡಲಿಕ್ಕೆ ಹತ್ತು ವರ್ಷಗಳ ಕಾಲ ಏಕೆ ಬೇಕಾಯಿತು ?

† ಶ್ರೀ ಬಿ. ಎಂ. ಪಾಟೀಲ್.—ಮೊದಲು ಗವರ್ನಮೆಂಟ್ ಆಫ್ ಇಂಡಿಯಾದವರು ಮಾಡಬೇಕು, ಅವರಿಂದ ಹಣ ಪಡೆಯಬೇಕೆಂದು ವಿಚಾರ ಮಾಡಲಾಗಿತ್ತು. ಅವರಿಂದ ಹಣ ಸಿಕ್ಕಲಿಲ್ಲ ವಿಳಂಬವಾಯಿತು. ಅದಾದಮೇಲೆ ಲೈಫ್ ಇನ್‌ಷ್ಯೂರನ್ಸ್ ಕಾರ್ಪೋರೇಷನ್‌ಗೆ ಬರೆಯಬೇಕಾಯಿತು. ಈ ರೀತಿಯಿಂದ ನಗರ ಪಾಲಿಕೆ ಆರ್ಥಿಕ ಸ್ಥಿತಿ ಮತ್ತು ಡಿವಿಜನಲ್ ಕಮಿಷನರ ರಿಪೋರ್ಟ್ ಇವನ್ನು ವಿಚಾರ ಮಾಡುವುದಕ್ಕೆ ಇಷ್ಟು ವೇಳೆ ಹಿಡಿಯಿತು.

ಶ್ರೀ ಜಿ. ವಿ. ಅಂಜನಪ್ಪ.—ಮೊದಲು ಮಾಡಿದ್ದು ಅಂದಾಜೆಷ್ಟು ? ಇತ್ತೀಚೆಗೆ ರಿವೈಜ್ ಮಾಡಿದ ಅಂದಾಜ ಎಷ್ಟು ?

ಶ್ರೀ ಬಿ. ಎಂ. ಪಾಟೀಲ್.—196. ರಲ್ಲಿ ಮಾಡಿದ್ದ ಅಂದಾಜ 32 ಲಕ್ಷ ರೂಪಾಯಿಗಳು. ಇತ್ತೀಚೆಗೆ ರಿವೈಜಾದ ಅಂದಾಜ 49 ಲಕ್ಷ ರೂಪಾಯಿಗಳು.

ಶ್ರೀ ಜಿ. ವಿ. ಅಂಜನಪ್ಪ.—1967ರಲ್ಲಿ ಮೊಟ್ಟಮೊದಲಿಗೆ ಮಾಡಿದ್ದ ಅಂದಾಜೆಷ್ಟು ?

ಶ್ರೀ ಬಿ. ಎಂ. ಪಾಟೀಲ್.—ಆ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ಜಿ. ವಿ. ಅಂಜನಪ್ಪ.—ಮೊದಲು 32 ಲಕ್ಷಕ್ಕೆ ಅಂದಾಜಾಗಿದ್ದದ್ದು 49 ಲಕ್ಷಕ್ಕೆ ಏರಲು ಕಾರಣಗಳೇನು ?

ಶ್ರೀ ಬಿ. ಎಂ. ಪಾಟೀಲ್.—ಅದಕ್ಕೇನು ಕಾರಣಗಳು ಎಂಬುದನ್ನು ವಿವರವಾಗಿ ಚೀಫ್ ಇಂಜಿನಿಯರವರ ವರದಿಯಲ್ಲಿ ನಮೂದಿಸಿದೆ. ಅದು ಬಹಳ ದೊಡ್ಡ ವರದಿ. ಅದನ್ನು ಓದಲೇ ಬೇಕೆಂದರೆ ಓದುತ್ತೇನೆ. ಮುಖ್ಯವಾಗಿ ಅಂದಾಜ ಹೆಚ್ಚುವುದಕ್ಕೆ ಕಾರಣವೇನೆಂದರೆ ಮೊದಲಿನ ಸ್ಕೀಮಿನ ಪ್ರಕಾರ ನೀರನ್ನು ಭದ್ರಾರಿಜರ್ವಾಯರ್ ಮೂಲಕ ತೆಗೆದುಕೊಳ್ಳಬೇಕೆಂದಿತ್ತು. ಅದನ್ನು ಈಗ ಬದಲಾವಣೆ ಮಾಡಿ ಭದ್ರಾ ಹೈಲೆವಲ್ ಕೆನಾಲಿನಿಂದ ತೆಗೆದುಕೊಳ್ಳಬೇಕೆಂದು ಸ್ಕೀಮಾಗಿದೆ. ಇದರಿಂದ ಅದು ಹೆಚ್ಚಾಗಿದೆ.

ಶ್ರೀ ಜಿ. ವಿ. ಅಂಜನಪ್ಪ.—ಇದನ್ನು ಪೂರ್ಣಗೊಳಿಸುವುದಕ್ಕೆ ಇನ್ನೂ ಎಷ್ಟು ವರ್ಷಗಳ ಕಾಲ ಬೇಕು ?

ಶ್ರೀ ಬಿ. ಎಂ. ಪಾಟೀಲ್.—ಬಹಳ ವೇಳೆ ಬೇಕಾಗಿಲ್ಲ. ಇನ್ನು ಎರಡು ವರ್ಷಗಳೊಳಗೇ ಮಾಡಲಾಗುತ್ತದೆ.

Mr. DEPUTY CHAIRMAN.—Question Hour is over.

3-30 P.M.

Supply of rice to the MICO Employees Consumers' Co-operative Society

ಶ್ರೀ ವೈ. ಎಸ್. ಪಾಟೀಲ್ (ಪದವೀಧರರ ಕ್ಷೇತ್ರ).—ಮೈಕೋ ವರ್ಕರ್ಸ್ ಕನ್‌ಸ್ಯೂಮರ್ಸ್ ಕೋ-ಆಪರೇಟಿವ್ ಸೊಸೈಟಿಯವರಿಗೆ ಬೆಂಗಳೂರು ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಸೊಸೈಟಿ ಅವರು ಕೊಟ್ಟಿರತಕ್ಕ ಅಕ್ಕಿಯಲ್ಲಿ ಕಲ್ಲು, ಧೂಳು, ಹುಳ ಎಲ್ಲ ತುಂಬಿಕೊಂಡಿದೆ. ಅದು ಜನರು ಬಳಸುವುದಕ್ಕೆ ಯೋಗ್ಯವಾಗಿಲ್ಲ. ಅದನ್ನು ಜನರು ತಿಂದರೆ ಈ ಲೋಕದಲ್ಲೇ ಇರುತ್ತಾರೋ ಅಥವಾ ಪರಲೋಕಕ್ಕೆ ಯಾತ್ರೆ ಮಾಡುತ್ತಾರೋ ಅನ್ನುವ ಭಯ ಉಂಟಾಗಿದೆ. ಕೂಡಲೇ ಸರ್ಕಾರದವರು ಇದನ್ನು ವಿಚಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆ ಅಕ್ಕಿಯ ಸ್ಯಾಂಪಲನ್ನು ತಮ್ಮ ಮೂಲಕ ಸರ್ಕಾರಕ್ಕೆ ಕೊಡುತ್ತೇನೆ.

Taking up the notice of adjournment motion *re:* the affairs of Bangalore University

†ಶ್ರೀ ಜಿ. ವಿ. ಅಂಜನಪ್ಪ.—ಅಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ಒಂದು ಬಹಳ ಪ್ರಾಮುಖ್ಯವಾದ ವಿಷಯವನ್ನು ತರಬಯಸುತ್ತೇನೆ. ಅದು ಬಹಳ ಗಹನವಾದ ವಿಷಯ. ನಾನು ಈ ವಿಚಾರವನ್ನು ಇಲ್ಲಿ ಚರ್ಚೆ ಮಾಡಬೇಕೆಂದು 3-4 ದಿನಗಳಿಂದಲೂ ಪ್ರಯತ್ನ ಮಾಡುತ್ತಿದ್ದೇನೆ. ಸಾಧ್ಯವಾಗಿಲ್ಲ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಳೆದ 6 ದಿವಸಗಳಿಂದಲೂ ಗಂಗರಾಜ್ ಎನ್ನತಕ್ಕ ವಿದ್ಯಾರ್ಥಿ ಉಪವಾಸ ಮಾಡುತ್ತಿದ್ದಾನೆ. ಈ ದಿವಸ ಅವನ ದೇಹಪರಿಸ್ಥಿತಿ ಬಹಳ ವಿಷಮಿಸಿದೆ. ಪರಿಸ್ಥಿತಿ ತೀರ ಹದಗೆಡತಕ್ಕ ಮಟ್ಟಕ್ಕೆ ವಿಷಯವನ್ನು ಬಿಡಬಾರದೆಂದು ನಾನು ಈ ದಿವಸ ಒಂದು ಗಂಟೆಯಲ್ಲಿ ಕೂಡ ಅಲ್ಲೇ ಇದ್ದೆ. ಸುಮಾರು ಅಲ್ಲಿ 20 ಸಾವಿರ ವಿದ್ಯಾರ್ಥಿಗಳು ಗುಂಪು ಸೇರಿದ್ದಾರೆ. ಆದಾಗ್ಯೂ ಅವರು ಯಾವ ಒಂದು ಹೀನ ಕೃತ್ಯಕ್ಕೂ ಕೈಹಾಕದೆ ಬಹಳ ಶಾಂತರೀತಿಯಿಂದ ವರ್ತಿಸುತ್ತಿದ್ದಾರೆ. ಮಾನ್ಯ ವಿದ್ಯಾಸಚಿವರು ಅಲ್ಲಿ ಈ ದಿವಸ ವಿದ್ಯಾರ್ಥಿಗಳನ್ನು ಕುರಿತು ಭಾಷಣಮಾಡಿದರು. ಆದರೆ ಅವರ ಭಾಷಣದಲ್ಲಿ ಅದೇ ಹಳೆ ಪಲ್ಲವಿಯನ್ನು ಹಾಡಿದ್ದರಿಂದ ಅದು ವಿದ್ಯಾರ್ಥಿಗಳಿಗೆ ಸೊಗಸಲಿಲ್ಲ. ಅಲ್ಲಿ ಇಂಥ ಒಂದು

(ಶ್ರೀ ಜಿ. ವಿ. ಅಂಜನಪ್ಪ)

ಭೀಕರ ಪ್ರಸಂಗ ನಡೆಯುತ್ತಿದ್ದರೂ ಸರ್ಕಾರದವರು ಕಂಡರೂ ಕಾಣದಂತೆ ಕಣ್ಣುಮುಚ್ಚಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಇನ್ನು ಈ ವಿಶ್ವವಿದ್ಯಾನಿಲಯದ ಹುಡುಗರ ಜೊತೆಗೆ ಹೈಸ್ಕೂಲಿನ ವಿದ್ಯಾರ್ಥಿಗಳು ಸೇರಿದರೆ ಆ ಸಂಖ್ಯೆ ಇನ್ನೂ ಜಾಸ್ತಿಯಾಗಬಹುದು. ಆಗ ಹತೋಟಿ ಮೀರಿ ಕೆಲಸಗಳು ನಡೆಯಬಹುದು. ಅನೇಕ ಕಷ್ಟನಷ್ಟಗಳು ಇದರಿಂದ ಉಂಟಾಗತಕ್ಕ ಸಂಭವ ಇದೆ. ಆ ವಿಶ್ವವಿದ್ಯಾನಿಲಯದ ಆವರಣದಲ್ಲಿ ಮಿಶ್ಚೀವಸ್ ಎಲಿಮೆಂಟುಗಳು ಸೇರಿ ಸರ್ಕಾರದ ಆಸ್ತಿಗೆ ಧಕ್ಕೆಯನ್ನುಂಟುಮಾಡಬಹುದು. ಈಗಾಗಲೇ ಪೋಲೀಸಿನವರು ವಿಶ್ವವಿದ್ಯಾನಿಲಯ ದೊಳಗೆ ನುಗ್ಗಿ ಟೀರ್ ಗ್ಯಾಸನ್ನು ಬಳಸುತ್ತಿದ್ದಾರೆಂದು ವರ್ತಮಾನ ಕೇಳುತ್ತಿದ್ದೇನೆ. ಅದರಿಂದ ಅಲ್ಲಿ ಟೆನ್‌ಷನ್ ಇನ್ನೂ ಹೆಚ್ಚಬಹುದು. ಆದ್ದರಿಂದ ಇದನ್ನು ಚರ್ಚೆಮಾಡುವುದಕ್ಕೆ ರೂಲ್ ನಂ. 49ರ ಪ್ರಕಾರ ನೋಟೀಸ್ ಕೊಟ್ಟಿದ್ದೇನೆ. ಅದಕ್ಕೆ ಅಧ್ಯಕ್ಷರು ಅವಕಾಶ ಮಾಡಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ.—ಇತ್ತೀಚೆಗೇನು ನಡೆಯಿತು ಎನ್ನತಕ್ಕ ಬಗ್ಗೆ ಮಾನ್ಯ ವಿದ್ಯಾ ಮಂತ್ರಿಗಳು ಒಂದು ಹೇಳಿಕೆಯನ್ನು ನೀಡಿದರೆ ಅನುಕೂಲವೆಂದು ನಾನು ತಿಳಿಸುತ್ತೇನೆ.

ಉಪಸಭಾಪತಿಯವರು.—ಶ್ರೀ ಅಂಜನಪ್ಪನವರು ಕಳುಹಿಸಿರತಕ್ಕ ನೋಟೀಸು ನಮ್ಮ ಆಫೀಸನ್ನು ಸೇರಿದೆ. ಅದನ್ನು ಪರಿಶೀಲನೆ ಮಾಡಲಾಗುತ್ತಿದೆ. ಅನ್ನಸತ್ಯಾಗ್ರಹ ಎಲ್ಲರ ಗಮನವನ್ನೂ ಸೆಳೆಯತಕ್ಕ ವಿಷಯವೆಂದು ಹೇಳಿರತಕ್ಕದ್ದೇನೋ ಸರಿಯೆ. ಆ ವಿಚಾರದಲ್ಲಿ ಈಗಾಗಲೆ ಮಾನ್ಯ ವಿದ್ಯಾಮಂತ್ರಿಗಳು ಆ ಚರ್ಚೆಯನ್ನು ನಡೆಸುವುದಕ್ಕೆ ಅವಕಾಶ ಕೊಡುವುದಾಗಿ ಒಪ್ಪಿದ್ದಾರೆ. I would like to know the opinion of the Leader of the House.

ಶ್ರೀ ಕೆ. ವಿ. ಶಂಕರಗೌಡ (ವಿದ್ಯಾ ಶಾಖೆಯ ಮಂತ್ರಿಗಳು). ಸ್ವಾಮಿ, ಈ ವಿವರ ನಿಲುವಳಿ ಸೂಚನೆಯಾಗುವುದಕ್ಕೆ ಅರ್ಹವಾದುದಲ್ಲ. ನಾಳೆ ಇದನ್ನು ಹಾಫ್ ಅನ್ ಅವರ್ ಡಿಬೇಟನ್ನಾಗಿ ತೆಗೆದುಕೊಂಡು ಚರ್ಚೆಮಾಡೋಣ ಎಂದು ಹೇಳಿದ್ದೇನೆ.

ಶ್ರೀ ಜಿ. ವಿ. ಅಂಜನಪ್ಪ.—ಅಷ್ಟರಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗಿ ಈಗಾಗಲೇ ವಿದ್ಯಾ ಸಚಿವರ ಕಾರಿಗೆ ವಿದ್ಯಾರ್ಥಿಗಳು ಜಖಂ ಮಾಡಿದ್ದಾರೆ. ಕಾರಿನ ಗಾಜನ್ನು ಒಡೆದಿದ್ದಾರೆ. ಸರ್ಕಾರದವರು ಈಗಲಾದರೂ ಎಚ್ಚರಿಕೆಯನ್ನು ವಹಿಸಿ ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ಉಂಟಾಗ ತಕ್ಕ ನಷ್ಟವನ್ನು ತಡೆಗಟ್ಟಬೇಡವೇ? ಇದನ್ನು ಸರ್ಕಾರದವರು ಅಷ್ಟು ಲಘುವಾಗ ಭಾವಿಸುವುದಕ್ಕಾಗುವುದಿಲ್ಲ. ನಾವು ಕಣ್ಣುಮುಚ್ಚಿಕೊಂಡು ಈ ದಿವಸ ಕೂತುಕೊಂಡರೆ ಅದಿನ್ನೂ ಪ್ರಕೋಪಕ್ಕೆ ಹೋಗುತ್ತದೆ.

ಶ್ರೀ ಕೆ. ವಿ. ಶಂಕರಗೌಡ.—ಇದರಲ್ಲಿ ತಾತ್ಸಾರ ಮನೋಭಾವವಿಲ್ಲ. ಎಲ್ಲಾ ಪ್ರಯತ್ನ ಗಳನ್ನೂ ಮಾಡುತ್ತಿದ್ದೇವೆ. ಅದಕ್ಕೆ ಮಾನ್ಯ ಶ್ರೀ ಅಂಜನಪ್ಪನವರೇ ಸಾಕ್ಷಿಯಾಗಿದ್ದಾರೆ. ನೆನ್ನೆ ದಿವಸ ನನ್ನ ಜೊತೆಯಲ್ಲಿ ವಿದ್ಯಾರ್ಥಿ ಮುಖಂಡರು ಚರ್ಚೆಮಾಡಿದ್ದಾರೆ. ಅವರ ಆಪಾದನೆಗಳು ಯೂನಿವರ್ಸಿಟಿ ಗ್ರಾಂಟ್ ಕಮಿಷನ್ನಿನ ವಿಚಾರಣೆಗೆ ಹೋಗುತ್ತವೆಂದು ಹೇಳಿದೆ. ನಾವು ನಾಳೆ ಚರ್ಚೆಮಾಡುತ್ತೇವೆಂದು ಹೇಳಿದೆ. ಆದರೂ ನೀವು ಬಂದು ವಿದ್ಯಾರ್ಥಿಗಳ ಸಭೆಯಲ್ಲಿ ಭಾಷಣ ಮಾಡಬೇಕೆಂದು ನನ್ನನ್ನು ಕೇಳಿದರು. ಅದರಂತೆ ನಾನು ಅಲ್ಲಿಗೆ ಹೋದೆ. ನನ್ನ ಕಾರಿಗೆ ಹೊಡೆ ದಿದ್ದಾರೆ. ಆದರೂ ನಮಗೆ ಅವರಲ್ಲಿ ತಾತ್ಸಾರ ಮನೋಭಾವನೆಯೇನೂ ಇಲ್ಲ. ಎಲ್ಲ ವಿಚಾರ ಗಳನ್ನೂ ಶ್ರದ್ಧೆಯಿಂದ ಪರಿಶೀಲನೆ ಮಾಡುತ್ತಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು ಪ್ರಜಾಪ್ರಭುತ್ವದಲ್ಲಿ ಆಗತಕ್ಕದ್ದು ಸ್ವಾಭಾವಿಕ. ಆದ್ದರಿಂಧ ಇದು ನಿಲುವಳಿ ಸೂಚನೆಗೆ ಅರ್ಹವಾದುದಲ್ಲವೆಂದು ನಾನು ಮತ್ತೊಮ್ಮೆ ಈ ಸಭೆಯಲ್ಲಿ ಸೂಚಿಸುತ್ತೇನೆ.

Mr. DEPUTY CHAIRMAN.—According to rule 51, a motion for adjournment shall not anticipate a matter which has been previously appointed for consideration. This matter will come up for discussion tomorrow for two and a half hours. So, the adjournment motion anticipates a matter which has been previously appointed and therefore the Chair does not consider it necessary to allow it.

SRI G. V. ANJANAPPA.—Accepting the ruling of the Chair, I would like to represent that what the Hon. Leader of the House wants to discuss is entirely a different matter from what my adjournment motion seeks to discuss. I would like to discuss the situation arising from the students' hunger strike whereas the Hon. Leader of the House has no objection to discuss the charges levelled by the students against the University. The matter is entirely different and if the Government is not prepared to allow my adjournment motion to be discussed right now, I protest and walk out.

(The Member withdrew from the House)

Papers laid on the Table

SECRETARY.—Sir, as required by Rule 100 of the Rules of Procedure, I beg to lay on the Table of the House, the Mysore Sales Tax (Second Amendment) Bill, 1969, as pased by the Legislative Assembly.

Mysore Appropriation (No. 4) Bill, 1969

(as passed by the Legislative Assembly)

Motion to consider—(Debate continued).

†ಶ್ರೀಮತಿ ಎಂ. ಆರ್. ಲಕ್ಷಮ್ಮ (ಪದವೀಧರರ ಕ್ಷೇತ್ರ).—ಮಾನ್ಯ ಅಧ್ಯಕ್ಷರೇ, ಈ ಡಿಮ್ಯಾಂಡ್ ಮೇಲೆ ಚರ್ಚೆಯಾಗುವ ಕಾಲದಲ್ಲಿ ಯಾರ್ಯಾರಿಗೆ ಮಾತನಾಡುವುದಕ್ಕೆ ಅವಕಾಶ ದೊರೆಯಲಿಲ್ಲವೋ ಅಂತಹವರಿಗೆ ಅಪ್ರೋಪ್ರಿಯೇಷನ್ ಬಿಲ್ಲಿನಮೇಲೆ ಮಾತನಾಡಲು ಅವಕಾಶ ದೊರಕುತ್ತದೆ ಎಂಬುದಾಗಿ ತಾವು ಆಶ್ವಾಸನೆಯನ್ನು ಕೊಟ್ಟಿದ್ದೀರಿ.

ಉಪಸಭಾಪತಿಗಳು.—ಯಾರ್ಯಾರು ಡಿಮ್ಯಾಂಡ್‌ಮೇಲೆ ಮಾತನಾಡಲಿಲ್ಲವೋ ಅಂತಹವರುಗಳು ಮಾತ್ರ ತಮ್ಮ ಹೆಸರನ್ನು ಈಗ ಸೂಚಿಸಬೇಕೆಂದು ನಾನು ಹೇಳುತ್ತೇನೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಅದಕ್ಕೆ ಮೊದಲು ನಾನು ಒಂದು ವಿಷಯವನ್ನು ಹೇಳಬೇಕೆಂದಿದ್ದೇನೆ. ನಾನು ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಬಂದಾಗ್ಗೆ ಮಾತನಾಡಬೇಕೆಂದಿದ್ದೆ. ಆ ಸಮಯದಲ್ಲಿ ಮಾನ್ಯ ಅಧ್ಯಕ್ಷರು ಒಂದು ಸಲಹೆಯನ್ನು ಕೊಟ್ಟಿದ್ದರಿಂದ ಮತ್ತು ಮುಂದೆ ಮಾತನಾಡುವುದಕ್ಕೆ ಅನುಮತಿ ಕೊಟ್ಟಿದ್ದರಿಂದ ನಾವು ಅದರಂತೆ ತಟಸ್ಥರಾಗಿದ್ದೆವು. ಈಗ ಮೂರು ಮೊತ್ತಸೂರು ಅಪ್ರೋಪ್ರಿಯೇಷನ್ ಬಿಲ್‌ಗಳು ನಮ್ಮ ಮುಂದೆ ಇವೆ. ಇದು ಸಮಗ್ರ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಆದ್ದರಿಂದ ನಾನು ಅಧ್ಯಕ್ಷರಿಗೆ ಕೇಳುವುದೇನೆಂದರೆ, ಈ ಮೂರು ಅಪ್ರೋಪ್ರಿಯೇಷನ್ ಬಿಲ್‌ಗಳಮೇಲೂ ಯಾರೂ ಮಾತನಾಡುವುದಿಲ್ಲ. ಯಾವುದು ಮುಖ್ಯವೆಂದು ನಮಗೆ ಕಾಣುತ್ತದೋ ಅದರಮೇಲೆ ಅಲ್ಪ ಸಮಯದಲ್ಲಿ ನಾವು ಮಾತನಾಡುವುದಕ್ಕೆ ಅವಕಾಶಕೊಡಬೇಕೆಂದು ಹೇಳುತ್ತೇನೆ.

ಉಪಸಭಾಪತಿಗಳು.—ಈಗ ಲಿಸ್ಟ್ ಆಫ್ ಬಿಜಿನೆಸ್ ಪ್ರಕಾರ ಪರಿಶೀಲನೆಮಾಡಿ ನೋಡಿದರೆ ಮೊದಲು ಅಪ್ರೋಪ್ರಿಯೇಷನ್ ಬಿಲ್ ನಂ. 4, ನಂತರ ಹೈಕೋರ್ಟ್ ಅಮೆಂಡ್‌ಮೆಂಟ್ ಬಿಲ್, ಅನಂತರ ಅಪ್ರೋಪ್ರಿಯೇಷನ್ ಬಿಲ್ ನಂ. 5 ಮತ್ತು ನಂ. 6 ಬರುತ್ತವೆ.

Sri RAMAKRISHNA HEGDE (Minister for Finance, Planning and Youth Welfare).—Sir, these are Bills and not resolutions. Therefore, all the three Bills cannot be moved together and discussed together. Secondly, Appropriation (No. 4) Bill is in respect of Supplementary Demands placed before the House and several members have already participated in that discussion. Appropriation Bill Nos. 5 and 6 are in respect of Excess Grants for the early years. Therefore, I request the hon. Member not to mix up these two things. If those members who did not have any occasion to participate on the Supplementary Demands want to speak, they are welcome to offer their remarks.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಮಾನ್ಯ ಸಭಾಪತಿಗಳೇ, ಮೈಸೂರು ಅಪ್ರೋಪ್ರಿಯೇಷನ್ ಬಿಲ್ ನಂ 4ರ ಮೇಲೆ ಒಂದೆರಡು ಮಾತುಗಳನ್ನಾಡಲು ನಾನು ಇಚ್ಛಿಸುತ್ತೇನೆ. ಮೊದಲನೆಯದಾಗಿ ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಬಗ್ಗೆ ನನಗೆ ಒಂದು ಅಂಶದ ಮಟ್ಟಿಗೆ ಸಮಾಧಾನವಾಗಿದೆ. ಅಂದರೆ, ಇದುವರೆಗೆ ಇದ್ದಂಥ ಅನೇಕ ಡಿಮ್ಯಾಂಡ್ಸ್ ಅಸಮರ್ಪಕವಾದುವು. ಈ ಸಾರಿ ಬಹಳಮಟ್ಟಿಗೆ ಇದನ್ನು ಪರಿಶೋಧಿಸಿ ಹಣಕಾಸಿನ ನಿಯಮಾವಳಿ ರೀತ್ಯ ಅದಷ್ಟು ಮಟ್ಟಿಗೆ ಕಡಿಮೆ ಬೇಡಿಕೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆಂದು ನೋಡಿ ನನಗೆ ಸಮಾಧಾನವಾಯಿತು. ಇಷ್ಟೇ ಅಲ್ಲ. ಈ ಡಿಮ್ಯಾಂಡ್ ಎಷ್ಟರಮಟ್ಟಿಗೆ ಉಪಯೋಗವಾಗುತ್ತದೆಂದು ನಾನು ಹೇಳುವುದಕ್ಕಾಗುವುದಿಲ್ಲ. ಇದಕ್ಕೆ ಬರತಕ್ಕ ಹಣ ಎಲ್ಲೆಲ್ಲಿ ಸಿಗುತ್ತದೋ ಅದನ್ನು ಹಣಕಾಸಿನ ಸಚಿವರಿಂದ ತಿಳಿದಮೇಲೆ ಬಹಳಮಟ್ಟಿಗೆ ತೃಪ್ತಿಯಾಯಿತು. ಅದಕ್ಕೆ ಸಂಬಂಧಪಟ್ಟ ಹಾಗೆ ಕೆಲವೊಂದು ಸೇವಿಂಗ್ಸ್ ಉಳಿತಾಯವಾಗುವುದು, ಕೆಲವೊಂದು ಟೋಕನ್ ಗ್ರಾಂಟ್ 100 ರೂಪಾಯಿ ಎಂದು ಈ ರೀತಿಯಾಗಿ ಬೇಡಿಕೆಗಳನ್ನು ಇಟ್ಟು, ಅದನ್ನೂ ಕೂಡ ಎಷ್ಟರಮಟ್ಟಿಗೆ ಕಡಿಮೆಮಾಡಬಹುದೆಂದು ಹಣಕಾಸಿನ ಸಚಿವರು ಹೇಳಿದ್ದಾರೆ. ಇನ್ನು ಒಂದೇ ಒಂದು ಖೇದಕರವಾದುದು ಅಂದರೆ, 5ನೇ ಹಣಕಾಸಿನ ಆಯೋಗವೇನಿದೆ, ಅದು ಕೊಟ್ಟರತಕ್ಕ ಹಣ ಎಷ್ಟರಮಟ್ಟಿಗೆ ಅತೃಪ್ತಿಕರವಾಗಿದೆಯೆಂದು ಹೇಳಿದರೆ, ಆ ಎಲ್ಲಾ ಕಾರ್ಯಕ್ರಮಗಳನ್ನೂ ಸರ್ಕಾರದವರು ಏನು ಹಾಕಿಕೊಂಡಿದ್ದಾರೆಯೋ ಅವನ್ನು ನಿರ್ವಹಿಸುವುದಕ್ಕೆ ತೃಪ್ತಿಕರವಾಗಿ ಸಾಧ್ಯವಾಗುತ್ತದೆಯೋ ಎಂಬ ಸಂಶಯ ಬರುತ್ತಿದೆ. ಈ ಸಂದರ್ಭದಲ್ಲಿ ಮಾನ್ಯ ಅರ್ಥ ಸಚಿವರ ಹೇಳಿಕೆಯನ್ನು ನೋಡುವಾಗ ಅವರು ಪುಟ 2ರಲ್ಲಿ 101.80 ಲಕ್ಷ ರೂಪಾಯಿಗಳು ಏನಿದೆಯೋ ಅದರಲ್ಲಿ ಪೇ ರಿವಿಷನ್‌ಗೆ ಎಕ್ಸ್‌ಟ್ರ ಕಾಸ್ಟ್, ಕಂಪೆನ್ಸೇಷನ್, ಸಬ್ಸಿಡಿ ಮತ್ತು ಪ್ರೊಹಿಬಿಷನ್ ಪ್ರಯೋಗ ಮಾಡಿದ ಪಕ್ಷದಲ್ಲಿ ಲಾಸ್‌ಆಫ್ ರೆವಿನ್ಯೂ ಎಲ್ಲವನ್ನೂ ಸೇರಿಸಿದ್ದಾರೆ. ಈಗ ಅದನ್ನು ಸೇರಿಸದಿದ್ದರೆ ಕಮಿಟೆಡ್ ಎಕ್ಸ್‌ಪೆಂಡಿಚರ್ ಆಗುತ್ತಿತ್ತೆಂದು ತಿಳುವಳಿಕೆ ಕೊಟ್ಟಿದ್ದಾರೆ. ನನ್ನ ತಿಳುವಳಿಕೆಯ ಪ್ರಕಾರ ಬೇರೆ ರಾಜ್ಯದವರು ಯಾವ ರೀತಿಯಲ್ಲಿ ಪ್ರಾಬಬಲ್ ಎಕ್ಸ್‌ಪೆಂಡಿಚರ್ ಸಹ ಸೇರಿಸಿ, ಅವರು ಹೆಚ್ಚಿನ ಸಹಾಯವನ್ನು ಪಡೆದಿದ್ದಾರೋ, ಹಾಗೆ ನಾವು ಪಡೆಯಲಿಲ್ಲ.

Sri RAMAKRISHNA HEGDE.—May I clear a misunderstanding? No State Government has raised its pay scales to the level of the pay scales of the Central Government.

ಶ್ರೀಮತಿ ಎಂ ಆರ್. ಲಕ್ಷಮ್ಮ.—ಲ್ಯಾಂಡ್ ರೆವಿನ್ಯೂ ವಜಾ ಮಾಡಿದೆ ಲೆಕ್ಕಾಚಾರ ಸೇರಿಸಿಬಿಟ್ಟಿದ್ದಾರೆ. 5ನೇ ಫೈನಾನ್ಸ್ ಕಮಿಷನ್ ಶಿಫಾರಸು ಏನಿದೆ, ಇದು ಏನೂ ಒಂದು ಆಖೈರು ಶಿಫಾರಸು ಎಂದೆನಿಸುವುದಿಲ್ಲ. ಅದು ವೇದಕ್ಕೆ ಸಮಾನ, ಅದನ್ನು ಅಕ್ಷರಶಃ ಸರ್ಕಾರದವರು ಒಪ್ಪಿಕೊಳ್ಳಬೇಕೆಂದು ಏನೂ ಇಲ್ಲ. ಅದು ರಾಷ್ಟ್ರಾಧ್ಯಕ್ಷರ ಮುಂದೆ ಹೋಗುವಾಗ, ಪಾರ್ಲಿಮೆಂಟ್ ಸದಸ್ಯರನ್ನು ಒಲಿಸಿಕೊಂಡು, ಈಗಲಾದರೂ ಮೈಸೂರು ರಾಜ್ಯಕ್ಕೆ ನ್ಯಾಯ ದೊರಕುವ ಹಾಗೆ ಮಾಡುವುದು ಮುಖ್ಯ. ಏಕೆಂದರೆ ಮೈಸೂರು ಸರ್ಕಾರವನ್ನು ಕೇಂದ್ರಸರ್ಕಾರದವರು ಬಹಳ ಉಗ್ರವಾದ ದೃಷ್ಟಿಯಲ್ಲಿ ಕಾಣುತ್ತಿದ್ದಾರೆ. ಪುಣ್ಯಕೋಟಿ ದನದ ಕತೆಯ ಹಾಗೆ ಆಗಿದೆ ನಮ್ಮ ಮೈಸೂರು ರಾಜ್ಯದ ಪರಿಸ್ಥಿತಿ. ಮುಂದೆ ಬಂದರೆ ಹಾಯಬೇಡಿ, ಹಿಂದೆ ಬಂದರೆ ಒದೆಯಬೇಡಿ ಎಂದು ಹೇಳಿದ ಹಾಗಿದೆ ಅದು. ಹಾಗೆ ನಮಗೆ ಹಿಂದುಳಿದ ರಾಜ್ಯ ಎಂದು ಕೂಡ ಸಹಾಯಧನ ಕೊಡುತ್ತಾ ಇಲ್ಲ. ಹೀಗೆ ನಾವು ಅವರ ಕ್ರೂರ ದೃಷ್ಟಿಗೆ ಗುರಿಯಾಗಿದ್ದೇವೆ, ಅದನ್ನು ನಮ್ಮ ಸರ್ಕಾರದವರು ಬದಲು ಮಾಡಲು ಪ್ರಯತ್ನ ಮಾಡಬೇಕಾಗಿದೆ. ಎಂ. ಎಂ. ಡಿ. ಸಿ. ಯವರ ದೃಷ್ಟಿಕೋನ ನೋಡಿದರೆ ಅವರು ನಮ್ಮ ರಾಜ್ಯಕ್ಕೆ ಸಹಾಯಕವಾಗಿಲ್ಲ. ಪಾಂಡೆ ಉಪಸಮಿತಿಯವರು

ಕೂಡ, ನಮ್ಮ ರಾಜ್ಯ ಕೈಗಾರಿಕೆಯಲ್ಲಿ ಮುಂದುವರಿದಿದೆ, ಆದ್ದರಿಂದ ಸಹಾಯಧನವನ್ನು ಕೊಡಬಾರದು ಎಂದು ಹೇಳುತ್ತಾರೆ. ಇತ್ತ ಕಡೆ, ಮಹಾಜನ್ ತೀರ್ಪು ಕೂಡ ಅಲ್ಲೇ ನಿಂತಿದೆ. ಅತ್ತ ಕಡೆ ಪ್ಲಾನಿಂಗ್ ಕಮಿಷನ್ ರಿಪೋರ್ಟು ಕೂಡ ಹಾಗೆ. 56 ಕೋಟಿ ರೂಪಾಯಿ ಕಡಿಮೆ ನಾವು ಒಪ್ಪುವುದಿಲ್ಲವೆಂದು ಮಂತ್ರಿಯವರು ಹೇಳಿದರು. ಆದರೆ ನಮಗೆ ಕೊಡತಕ್ಕಂತಹ ಸಹಾಯ ಧನ ಈಗ 30 ಕೋಟಿಗೆ ಇಳಿದಿದೆ ಎಂಬುದನ್ನು ನೋಡಿದರೆ, ನಮಗೆ ಬಹಳ ಖೇದವಾಗುತ್ತದೆ. ನಾವು ಕನ್ನಡಿಗರು, ಬಹಳ ಸಾತ್ವಿಕರು ಆಗಿರುವಾಗ, ಈ ರೀತಿ ಅನ್ಯಾಯ ಮಾಡುವುದೆಂದರೆ ಅದು ಬಹಳ ವ್ಯಸನಪಡಬೇಕಾದ ವಿಚಾರ. ಇದನ್ನು ಹೋಗಲಾಡಿಸಲು ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಂಡರೂ ಅದಕ್ಕೆ ನಮ್ಮೆಲ್ಲರ ಬೆಂಬಲವಿದೆಯೆಂದು ಹೇಳುತ್ತೇನೆ. ಇನ್ನು ಪರ್ ಕ್ಯಾಪಿಟಾ ಇನ್‌ಕಂ ಬಗ್ಗೆ ಎನ್. ಸಿ. ಎ. ಇ. ಆರ್. ನಲ್ಲಿ ಹೇಳಿದ್ದಾರೆ. ಅಂದರೆ ಪರ್ ಕ್ಯಾಪಿಟಾ ಇನ್‌ಕಂ, ಅದು ಒಂದೇ ತೆಗೆದುಕೊಳ್ಳಬಾರದು. ಹಿಂದಿನ ಮಾಹಿತಿ ಎಲ್ಲಾ ನೋಡುವುದಾದರೆ, ನಮ್ಮ ರಾಷ್ಟ್ರದಲ್ಲಿ ಪರ್ ಕ್ಯಾಪಿಟಾ ಕನ್‌ಸಂಪ್ಷನ್ ಆಫ್ ಎನರ್ಜಿ, ವರದಿ ತಯಾರಾದಾಗ ಮಹಾರಾಷ್ಟ್ರ ಮತ್ತು ಮದ್ರಾಸ್ ರಾಜ್ಯಗಳಲ್ಲಿ 50 ಅಥವಾ 60 ಪರ್ ಕ್ಯಾಪಿಟಾ ಎನರ್ಜಿ ಇತ್ತು. ನಮ್ಮ ರಾಜ್ಯದಲ್ಲಿ ಕೇವಲ 38 ಇತ್ತು. ಈಗ ಹೆಚ್ಚಿದರೂ ಕೂಡ, ಆ ರಾಜ್ಯಗಳಿಗೆ ಸಮಾನವಾಗಿ ಬಂದಿರಲಿಕ್ಕಿಲ್ಲ. ಅದೇ ರೀತಿಯಲ್ಲಿ ಬಿಸಿನೆಸ್, ಟ್ರೇಡ್ ಮತ್ತು ಟ್ರಾನ್ಸ್‌ಪೋರ್ಟು ಈ ದೃಷ್ಟಿಯಿಂದ ನೋಡುವುದಾದರೆ, ರಾಷ್ಟ್ರದ ಮಟ್ಟ 100ಕ್ಕೆ 15.9, ನಮ್ಮ ರಾಜ್ಯದಲ್ಲಿ 13 ಪರ್‌ಸೆಂಟ್ ಮಾತ್ರ. ಯಾವ ದೃಷ್ಟಿಯಲ್ಲಿ ನೋಡಿದರೂ ಕೂಡ ಕಡಿಮೆ ಇದೆ. ನೀರಾವರಿ ವ್ಯವಸಾಯವನ್ನು ತೆಗೆದುಕೊಂಡರೆ, ರಾಷ್ಟ್ರದ್ದು 18.3, ನಮ್ಮ ರಾಜ್ಯದ್ದು 7.5 ಪರ್‌ಸೆಂಟ್ ಇದೆ. ಇಷ್ಟಾದರೂ ಕೂಡ ಪರ್ ಕ್ಯಾಪಿಟಾ ಇನ್‌ಕಂ ಏಕೆ ಜಾಸ್ತಿಯಾಯಿತು ? ನಮ್ಮ ದೇಶದಲ್ಲಿ ಹಲವಾರು ಸೆಂಟ್ರಲ್ ಕಾರ್ಖಾನೆಗಳು ಇವೆ. ಅವುಗಳ ಉತ್ಪನ್ನ ಕೂಡ ಸೇರಿಸಿದ್ದಾರೆಂದು ನಾನು ತಿಳಿದಿದ್ದೇನೆ. ಅಂಥ ಕೈಗಾರಿಕೆಗಳು ನಮ್ಮ ದೇಶದಲ್ಲಿ ಇರಲಿ. ಕೈಗಾರಿಕೆಗಳಿಗೆ ನಮ್ಮ ಸರ್ಕಾರದವರು ಬೇಕಾದಷ್ಟು ಸವಲತ್ತುಗಳನ್ನು ಕೊಟ್ಟಿದ್ದಾರೆ. ವ್ಯಸನ ಪಡಬೇಕಾದ ಅಂಶವೇನೆಂದರೆ, ಆ ಕೈಗಾರಿಕೆಗಳಲ್ಲಿ ಎಷ್ಟು ಜನ ಕನ್ನಡಿಗರು ಇದ್ದಾರೆ, ಎಷ್ಟು ಜನ ಕನ್ನಡಿಗರಿಗೆ ಅದರಿಂದ ಪ್ರಯೋಜನ ಲಭಿಸುತ್ತಿದೆ ಎಂಬುದರ ಅಂಕಿ ಅಂಶಗಳನ್ನು ಕೊಟ್ಟಿಲ್ಲ. ಕೆಲಸಗಾರರ ಮಟ್ಟದಲ್ಲಾಗಲಿ, ತಾಂತ್ರಿಕ ಕೆಲಸ ಮಟ್ಟದಲ್ಲಾಗಲಿ, ಕನ್ನಡಿಗರ ಸಂಖ್ಯೆ ಬಹಳ ಕಡಿಮೆ ಎಂದು ನಾನು ತಿಳಿದಿದ್ದೇನೆ. ನಮ್ಮ ಕೇಂದ್ರದ ಪ್ರಧಾನ ಮಂತ್ರಿಯವರು ಎಲ್ಲಾ ರಾಜ್ಯಗಳ ಸ್ಥಿತಿಗತಿಗಳನ್ನು ತಿಳಿದುಕೊಂಡಿದ್ದಾರೆ. ಸದ್ಯದಲ್ಲೇ ಅವರು ಇಲ್ಲಿ ಬರುವವರಿದ್ದಾರೆ. ಆಗ ಬಂದ ಸಮಯಕ್ಕೆ ನಮ್ಮ ವಿಚಾರವನ್ನೆಲ್ಲಾ ಹೇಳಬೇಕು. ಮತ್ತು ನ್ಯಾಯವನ್ನು ದೊರಕಿಸಿಕೊಳ್ಳಬೇಕು. ಏಕೆಂದರೆ, ಷೇಕ್ಸ್‌ಪಿಯರ್ ಕೂಡ ತನ್ನ ನಾಟಕದಲ್ಲಿ ನ್ಯಾಯದೇವತೆಯ ಪಾತ್ರವನ್ನು ಪೋರ್ಶಿಯಾಳಿಗೆ ಕೊಟ್ಟು ನಾಟಕ ನಿರ್ಮಿಸಿದ್ದಾರೆ. ಆದ್ದರಿಂದ ಸ್ತ್ರೀಯರು ಧರ್ಮದೇವತೆಗೆ ಸಮಾನ. ಆಕೆ ಇಲ್ಲಿ ಬಂದಾಗ ಅಥವಾ ಅದಕ್ಕೆ ಮುಂಚೆ ಪಾರ್ಲಿಮೆಂಟ್ ಸದಸ್ಯರ ಮೂಲಕ ಇದನ್ನು ಪುನರ್ವಿಮರ್ಶೆ ಮಾಡಿಸಿ, ನಮ್ಮ ರಾಜ್ಯಕ್ಕೆ ನ್ಯಾಯ ದೊರಕುವಂತೆ ಸರ್ಕಾರದವರು ಮಾಡುತ್ತಾರೆಂದು ನಾನು ನಂಬಿದ್ದೇನೆ. ಇನ್ನು ಎರಡನೆಯ ವಿಷಯವೇನೆಂದರೆ, ಚಿತ್ರದುರ್ಗ ಜಿಲ್ಲೆಯಲ್ಲಿ ವಜ್ರ ಎಂಬ ಒಂದು ಗ್ರಾಮದಲ್ಲಿ ಕಟ್ಟಣದ ಅದಿರು ದೊರಕುತ್ತಾ ಇದೆ ಎಂದು ನಾನು ತಿಳಿದಿದ್ದೇನೆ.

Mr. DEPUTY CHAIRMAN.—The House will now rise for tea and meet after half-an-hour.

The House rose for Tea at Four of the Clock and re-assembled at Thirty Minutes past Four of the Clock.

[MR. DEPUTY CHAIRMAN in the Chair]

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಮಾನ್ಯ ಸಭಾಪತಿಗಳೇ, ಈ ದೇಶದ ನೀರಾವರಿ ಯೋಜನೆ ಬಹಳ ಪ್ರಾಮುಖ್ಯವಾದದ್ದು. ಈಗ ಇರತಕ್ಕಂಥ ಮೇಜರ್, ಮೀಡಿಯಂ ಇರಿಗೇಷನ್ ಯೋಜನೆಗಳೆಲ್ಲವನ್ನೂ ಸೇರಿಸಿ ಕಾರ್ಯಗತ ಮಾಡಿದರೂ ಕೂಡ ಅದರಲ್ಲಿ ಸಾಗಿಗೆ ಯೋಗ್ಯವಾದ ಭೂಮಿ ಒಟ್ಟು ವಿಸ್ತೀರ್ಣದಲ್ಲಿ $\frac{1}{3}$ ಭಾಗದಷ್ಟು ಆಗಬಹುದು ಎಂದು ತಜ್ಞರು ಹೇಳಿದ್ದಾರೆ.

(ಶ್ರೀಮತಿ ಎಂ. ಆರ್. ಲಕ್ಷಮ್ಮ)

ಎ. ಸಿ. ಮಿತ್ರ ಎನ್ನುವವರು ಈ ಬಗ್ಗೆ ಒಂದು ವರದಿಯನ್ನು ಸಲ್ಲಿಸಿದ್ದಾರೆ. ಅದರಲ್ಲಿ ಒಂದು ವಾಕ್ಯವನ್ನು ಹೇಳುತ್ತೇನೆ. ಅದು ಈ ರೀತಿ ಇದೆ:

> "It is imperative that the irrigation projects under Cauvery, Krishna and Godavari should be brought into operation as quickly as possible. High priority must be given for the construction of major and medium irrigation projects."

ಇದು ಅತ್ಯಂತ ಪ್ರಾಮುಖ್ಯವಾದದ್ದು. ಇವೊತ್ತು ಈ ಯೋಜನೆಗಳಿಂದ ಕಾವೇರಿ ಬೇಸಿನ್‌ನಲ್ಲಿರತಕ್ಕ ಜನಗಳಿಗೆ ಆಗಲೀ, ಕೃಷ್ಣಾ ಬೇಸಿನ್‌ನಲ್ಲಿರತಕ್ಕ ಜನಗಳಿಗೇ ಆಗಲೀ, ಗೋದಾವರಿ ಬೇಸಿನ್‌ನಲ್ಲಿರತಕ್ಕ ಜನಗಳಿಗೇ ಆಗಲೀ, ಯಾರಿಗೇ ನೀರಾವರಿ ಸೌಲಭ್ಯ ಜೀವನದಿಗಳಿಂದ ದೊರೆತರೆ ನಮ್ಮ ದೇಶದ ಜನಗಳು ಹೆಚ್ಚು ಬೆಳೆಯನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ಅರ್ಥಿಕ ಮಂತ್ರಿಗಳು ಬಹಳ ಯಶಸ್ವಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ದೇಶದ ನೀರಾವರಿ ಸಂಪತ್ತಿನ ಪ್ರಯೋಜನವನ್ನು ಪಡೆಯಕೊಳ್ಳಬೇಕು ಎನ್ನುವ ಉದ್ದೇಶದಿಂದ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅವರಿಗೆ ನಾನು ನನ್ನ ಸಂಪೂರ್ಣವಾದ ಯಶಸ್ಸನ್ನು ಕೋರುತ್ತೇನೆ. ನಾಳೆ ರಿಸೋರ್ಸಸ್ ಸಮಿತಿಯವರ ಶಿಫಾರಸ್ಸಿನಂತೆ ದೇಶದಲ್ಲಿ ಹಣವನ್ನು ಎತ್ತುವಂಥಾ ಸಂದರ್ಭದಲ್ಲಿ ಅದಕ್ಕೆ ಪ್ರತಿಯೊಬ್ಬ ಪ್ರಜೆಯೂ ಮತ್ತು ಪ್ರತಿಯೊಬ್ಬ ಕನ್ನಡಿಗರೂ ಒಂದಾಗಿ ಆ ಕಾರ್ಯದಲ್ಲಿ ಎಲ್ಲರೂ ನೆರವು ನೀಡಬೇಕೆಂದು ಜನತೆಯನ್ನು ನಾನು ಮಾನ್ಯ ಸಭಾಪತಿಯವರ ಮೂಲಕ ಪ್ರಾರ್ಥಿಸುತ್ತೇನೆ.

ಮೂರನೆಯದಾಗಿ ಈಗ ಸರ್ಕಾರದವರು ಮಾರ್ಕೆಟಿಂಗ್ ಡೆವಲಪ್‌ಮೆಂಟ್ ಬೋರ್ಡ್ ಎನ್ನತಕ್ಕಂಥ ಒಂದು ಯೋಜನೆಯನ್ನು ಮಾಡಿದ್ದಾರೆ. ಇದು ಬಹಳ ಪ್ರಾಮುಖ್ಯವಾದುದು. ಹಾಗೆಯೇ ನ್ಯಾಷನಲೈಜೇಷನ್ ಆಫ್ ಬ್ಯಾಂಕ್ಸಿಂದ ಜನಗಳಿಗೆ ಸಹಾಯವನ್ನು ಕೊಡುವುದು ಬಹಳ ಒಳ್ಳೆಯದು. ರೈತ ಉತ್ಪಾದನೆ ಮಾಡಿದಂತಹ ಸಾಮಾನುಗಳಿಗೆ ಒಳ್ಳೆಯ ಬೆಲೆಯನ್ನು ದೊರಕಿಸಿಕೊಡುವ ದೃಷ್ಟಿಯಿಂದ ಮಾರ್ಕೆಟಿಂಗ್ ಫೆಸಿಲಿಟೀಸ್ ಕೊಡುವಂಥಾ ಯೋಜನೆ ಬಹಳ ಮುಖ್ಯವಾದುದು. ಆದ್ದರಿಂದ ಈ ಯೋಜನೆ ಬಹಳ ಅಭಿನಂದನಾರ್ಹವಾದದ್ದು ಎಂದು ನಾನು ತಿಳಿದುಕೊಂಡಿದ್ದೇನೆ.

ಕೊನೆಯದಾಗಿ ವಜ್ರ ಮತ್ತು ಹೊಸದುರ್ಗದಲ್ಲಿ ಶ್ರೇಷ್ಠವಾದ ಕಬ್ಬಿಣದ ಅದುರು ಸಿಕ್ಕುತ್ತದೆ. ಆದರೆ ಈಗ ನಮ್ಮ ದೇಶದಲ್ಲಿ ಖನಿಜದ ಉತ್ಪತ್ತಿಗೆ ಸರ್ಕಾರದವರು ಸಾಕಷ್ಟು ಪ್ರೋತ್ಸಾಹ ಕೊಡುತ್ತಿಲ್ಲ ಎನಿಸುತ್ತದೆ. ವಜ್ರಾ ಎನ್ನುವ ಕಡೆ ಸಿಕ್ಕಂಥ ಕಬ್ಬಿಣದ ಅದುರಿನ ಸಂಶೋಧನೆಗೆ ಸಾಕಷ್ಟು ಹಣವನ್ನು ಆದಷ್ಟು ಜಾಗ್ರತೆ ಕೊಟ್ಟು ಅದನ್ನು ತಜ್ಞರು ಪರಿಶೀಲನೆ ಮಾಡುವುದಕ್ಕೆ ಸರ್ಕಾರದವರು ಏರ್ಪಾಡು ಮಾಡಬೇಕೆಂದು ನಾನು ಹೇಳುತ್ತೇನೆ.

ಕೇಂದ್ರದ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಹೆಚ್ಚು ಹೆಚ್ಚು ಉದ್ಯೋಗಗಳನ್ನು ಕೊಡಬೇಕು. ಆ ಕೈಗಾರಿಕೆಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕನ್ನಡಿಗರು ನೇಮಕವಾಗಬೇಕು. 100ಕ್ಕೆ 30ರಷ್ಟು ಇಂಜಿನಿಯರುಗಳು ನಮ್ಮ ದೇಶದಿಂದ ಬೇರೆ ಕಡೆಗೆ ಹೋಗುತ್ತಿದ್ದಾರೆ. ಆದ್ದರಿಂದ ನಮ್ಮ ದೇಶದಲ್ಲಿರತಕ್ಕ ಕೈಗಾರಿಕೆಗಳಲ್ಲಿ ಮೇಲ್ಮಟ್ಟದ ಹುದ್ದೆಗಳಲ್ಲಿ 100ಕ್ಕೆ 50ರಷ್ಟು, 60ರಷ್ಟು ಜನಗಳು ನಮ್ಮ ಕನ್ನಡಿಗರು ಕೆಲಸಮಾಡುವಂತೆ ಮಾಡಬೇಕು. ನಾಡಿನ ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಇತರರಿಗೂ ಪ್ರೋತ್ಸಾಹ ಕೊಡಬೇಕು. ಈ ಒಂದು ನೀತಿಯ ಮುದ ಪ್ರಕಾರ ನಮ್ಮ ರಾಜ್ಯದಲ್ಲಿ ಬೇರೆ ಕೈಗಾರಿಕೆಗಳು ಉಳಿಯಬೇಕು. ಇಷ್ಟು ಮಾತ್ರ ನಾನು ಹೇಳುತ್ತೇನೆ. ಸರ್ಕಾರದವರು ಮಾಡತಕ್ಕಂಥ ಎಲ್ಲಾ ಕೆಲಸಕಾರ್ಯಗಳಿಗೂ ಎಲ್ಲರೂ ಸಹಕಾರವನ್ನು ನೀಡಬೇಕು ಎಂದು ಹೇಳಿ ನನಗೆ ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಸಭಾಪತಿಯವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†SRI G. V. GOWDA (Legislative Assembly Constituency).—Mr. Chairman, Sir, the debt position of the State is very much alarming and it is a matter of great concern. The outstanding debts are to the tune of 3 to 4 hundred crores and it may even go up to 5 hundred crores of rupees

by 1974-75. I do not know whether we would be able to have more industrial production in the State, to enable the Government to repay the public debts. I feel that before the Government of Mysore accepted the liability of these public debts, they should have been very careful about the assets created by these debts. For instance, the debt allocation has been made on the basis of population.. In Hyderabad, the Nizams had deposited their money not only in India, but even in London and the Hyderabad Government has claimed their share out of it. Similarly the Mysore Government could also claim its share. On re-organisation of States some areas were allotted to Mysore State from erstwhile Hyderabad State but the amount of debts has not been allocated properly. We are equally entitled to claim a portion of the assets created out of the loans borrowed by the erstwhile States. That aspect has not been looked into by the Mysore Government. The failure of the Government in claiming its legitimate share from the erstwhile States on the assets created by common efforts of the people, has badly affected the financial position of the State. It is not enough if we apportion merely the projects between the States. Take for instance, the Salar Jung Museum which has been built by common efforts and we are equally entitled to claim a portion out of its assets. There are so many other assets also created out of common efforts for which we are equally entitled to claim our due share. The failure of Government in not claiming its legitimate share shows the way in which the Government has tried to safeguard the interests of new Mysore State in obtaining respective shares on behalf of different integrated units of the erstwhile States ! When we own a debt should we not claim the assets ?

Sri K. SURYANARAYANA ADIGA.—The Government of Mysore after re-organisation is in no way responsible if a claim has not been made at the proper time.

Sri G. V. GOWDA.—I am charging the Government of Mysore for not claiming the due share. When it has owned the debts on population basis why should they not claim the assets created out of those debts previously ? Supposing 2 crores of rupees are transferred to Madras-Karnatak area, the Government should know whether that has been properly utilised ; whether it has been spent in the area to which it has been transferred ; what is the assets created ; whether a claim has been made by the Mysore Government to the share of the assets due to it, etc. In Madras, if a court building was constructed, it was not that only Tamilians have put their efforts, but even the Kannadigas have put their efforts to construct that building. The debt position and the financial position of our State is very much alarming. It is said that the outlay of the Mysore Plan is Rs. 327 croses and the Central assistance in this regard is too meagre. We have not been able to raise necessary resources to meet the demands like construction of projects, increased salaries of employees. We have not been able to do anything due to the financial crisis. In this state of affairs of the State's finances,

(SRI G. V. GOWDA)

is it possible to implement the plan schemes successfully? Hon. Member Smt. Lakshamma stated that we have so many resources and irrigation potentialities. But what is the use of these resources when we are unable to utilise the potentialities available?

We are yet to utilise the waters available in the Cauvery basin. We require about 120 crores of rupees to utilise the water available in the Cauvery basin. If we do not utilise this water before 1974, we may lose our rights to utilise it thereafter. So far as non-scheduled rivers are concerned it could be seen from the agreement that it has not been subjected to any clause even after 1974 and we can take up projects. But the thing is we have got to see whether water would be available after 1974. It would not be available for the reason that in K. R. S. so many rivers join Cauvery. Over and above that, the Cauvery water is being utilised by the Madras Government and they have developed nearly 20 lakh acres, while the Mysore Government has been able to develop only about 2 lakh acres under the Krishnaraja Sagar. After 1974 when they seek for re-allocation of waters, what will be the result? The Madras Government will say at least allow the water required for irrigating 22 lakhs acres of land and then if there is any surplus water available we will devide it. Naturally that would be the stand of the Madras Government. The water that would be available in Cauvery after 1974 is just enough to irrigate 22 lakhs acres of land. If that is so, where is the water available to develop our areas further? I request the Government to see that projects on non-scheduled rivers that join down below, are included in the Fourth Plan and see that they are executed. If they are taken up and executed, more than lakhs of acres could be irrigated. Therefore, the Hon. Finance Minister will kindly see that these projects are included in the Fourth Plan and somehow find out the finance required for them. He may kindly see that the assistance from the Government of India is got for them just as the Government of Andhra has got Rs. 16 crores of assistance for Nagarjuna Sagar from the Government of India. In addition to taking the assistance of the Government of India you can avoid unnecessary expenditure wherever possible and see that the legitimate claims of the people of that region are safeguarded. Thank you, Sir.

† ಶ್ರೀ ವಿ. ವೆಂಕಟಪ್ಪ (ವಿಧಾನಸಭಾ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಜನರಲ್ ಅಡ್ಮಿನಿಸ್ಟ್ರೇಷನ್‌ಮೇಲೆ ಮಾತನಾಡುತ್ತಾ ಅನೇಕರು ರಾಜಭವನಕ್ಕೆ ಖರ್ಚು ಮಾಡತಕ್ಕದ್ದನ್ನು ಬಹಳ ಮಟ್ಟಿಗೆ ವಿರೋಧಿಸುತ್ತಿದ್ದಾರೆ. ಶ್ರೀಮಾನ್ ಹೆಗಡೆಯವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಹಳ ಯಶಸ್ವಿಯಾದ ಪಾತ್ರವನ್ನು ವಹಿಸಿದಂತಹ ಸಂಸಾರಕ್ಕೆ ಸೇರಿದವರು, ಬಹಳ ತ್ಯಾಗವನ್ನೂ ಮಾಡಿದ್ದಾರೆ. ಅವರು ಮಹಾತ್ಮ ಗಾಂಧಿಯವರ ಆಸೆ ಏನಿತ್ತು ಎನ್ನುವುದು ಚೆನ್ನಾಗಿ ಗೊತ್ತಿರತಕ್ಕಂತಹವರು. ಮಹಾತ್ಮಾ ಗಾಂಧಿಯವರ ಹೆಸರು ಹೇಳಿ ನಾವು ಸ್ವಾತಂತ್ರ್ಯ ಸಂಪಾದನೆ ಮಾಡಿದ್ದರೂ ಕೂಡ ಮಹಾತ್ಮಾ ಗಾಂಧಿಯವರ ಹೆಸರಿನಲ್ಲೇ ಈ ರಾಜ್ಯವನ್ನು ನಡೆಸುತ್ತೇವೆ ಎಂದು ಅಂದುಕೊಂಡು ನಡೆಸುವವರು ಇಷ್ಟೊಂದು ಆಡಂಬರದ ಕೆಲಸವನ್ನು ಏಕೆ ಮಾಡುತ್ತಾರೆ ಎನ್ನುವುದು ನನಗೆ ಗೊತ್ತಾಗುವುದಿಲ್ಲ. ನಮ್ಮ ದೇಶದಲ್ಲಿ ಗವರ್ನರರಾಗಿ ಬರತಕ್ಕವರು ಎಲ್ಲರೂ ಈ ಜನರೇಷನ್‌ಗೇನೇ ಸೇರಿದವರು. ಇವರೆಲ್ಲರೂ ಮಹಾತ್ಮಾ ಗಾಂಧಿಯವರ ತತ್ವವನ್ನು ಅರಿತಂತಹವರು.

ಮಹಾತ್ಮಾ ಗಾಂಧಿಯವರು ಯಾವ ಆಡಂಬರವೂ ಇಲ್ಲದೆ ನೇಕೆಡ್ ಫಕೀರರಂತೆ ಇದ್ದು ಪ್ರಪಂಚದಲೆಲ್ಲಾ ಅತ್ಯಂತ ಗೌರವವಾದ ಸ್ಥಾನವನ್ನು ಸಂಪಾದನೆ ಮಾಡಿದರು. ಇಂತಹವರ ಹೆಸರನ್ನು ಅನುಸರಿಸಿಕೊಂಡು ಅಧಿಕಾರ ಸ್ಥಾನಕ್ಕೆ ಬರುವವರು ಆಡಂಬರಗಳಿಲ್ಲದಿದ್ದರೆ ಗೌರವ ಇರುವುದಿಲ್ಲ ಎಂದು ಹೇಳುವುದನ್ನು ಒಪ್ಪುವುದಕ್ಕೆ ಸಾಧ್ಯ ಇಲ್ಲ. ಆದುದರಿಂದ ಬಹುಮಟ್ಟಿಗೆ ಆಡಂಬರಗಳನ್ನು ಕಡಿಮೆ ಮಾಡುವುದು ಅಗತ್ಯ. ಈ ದೃಷ್ಟಿಯಿಂದ ಇದುವರೆಗೆ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಮಾತನಾಡಿರತಕ್ಕ ಮಿತ್ರರು ಕೆಳಮನೆಯಲ್ಲಿ ಮತ್ತು ಇಲ್ಲಿ ಮಾಡಿರತಕ್ಕ ಟೀಕೆಗಳಲ್ಲಿ ಗವರ್ನರವರಿಗೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಡಬಾರದು ಎಂದಿಲ್ಲ. ಅವಶ್ಯಕವಿದ್ದಷ್ಟು ಅನುಕೂಲಗಳನ್ನು ಕಲ್ಪಿಸಿಕೊಟ್ಟು ಅವರ ಕಾರ್ಯ ನಡೆಸುವುದಕ್ಕೆ ಅವಕಾಶಮಾಡುವುದು ಸೂಕ್ತ. ಬ್ರಿಟಿಷ್ ರೂಲ್ ಎಂದು ಹಿಂದೆ ಇದ್ದಾಗ ಆಗಿನ ಇಂಗ್ಲಿಷಿನವರು ಅನುಸರಿಸುತ್ತಿದ್ದಂತಹ ಹೆಚ್ಚು ಆಡಂಬರಗಳನ್ನು ಈಗಲೂ ಅನುಸರಿಸಬೇಕೇ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಇದರೊಳಗೆ ಇಷ್ಟು ಹೆಚ್ಚು ಹಣವನ್ನು ಖರ್ಚು ಮಾಡತಕ್ಕದ್ದು ಅನವಶ್ಯ ಎಂದು ನನಗೆ ತೋರುತ್ತದೆ.

ಇನ್ನು ವ್ಯವಸಾಯದ ಬಗ್ಗೆ ಇದರಲ್ಲಿರುವ 20ನೇ ಡಿಮ್ಯಾಂಡು ಬಗ್ಗೆ ಬಹಳ ಹೆಚ್ಚಿನ ಹಣದ ಬೇಡಿಕೆಗಾಗಿ ಇಲ್ಲಿ ಕೇಳುತ್ತಿದ್ದಾರೆ. ಅಷ್ಟೇ ಅಲ್ಲ, ಬಹಳ ಹೆಚ್ಚು ಹಣವನ್ನು ವ್ಯವಸಾಯದ ಇಲಾಖೆಗಾಗಿ ಖರ್ಚು ಮಾಡುತ್ತಿದ್ದಾರೆ. ಬಹಳ ಜನ ಆಸೆ ಇಟ್ಟುಕೊಂಡು ದೇಶದಲ್ಲಿ ನಮ್ಮ ವ್ಯವಸಾಯದ ಅಭಿವೃದ್ಧಿಯಾಗಬೇಕು ಎನ್ನುವ ದೃಷ್ಟಿಯಿಂದ ಬಹಳ ಹಣ ಖರ್ಚು ಮಾಡುತ್ತಿದ್ದಾರೆ. ಆದರೆ ಇದರಿಂದ ಸಾಕಷ್ಟು ಜನರಿಗೆ ಪ್ರಯೋಜನವಾಗುತ್ತಿದೆಯೇ ಎನ್ನುವುದನ್ನು ವಿಮರ್ಶೆ ಮಾಡಬೇಕಾದುದು ಅಗತ್ಯ. ಬಹುಮಟ್ಟಿಗೆ ಹಿಂದೆ ಒಬ್ಬರೇ ಒಬ್ಬರು ಡೈರೆಕ್ಟರು ಎಷ್ಟು ಕೆಲಸಗಳನ್ನು ಮಾಡುತ್ತಿದ್ದರೋ ಅದಕ್ಕಿಂತ ಹೆಚ್ಚಿನ ಕೆಲಸಗಳನ್ನು ಮಾಡಬೇಕಾಗಿವೆ ಎಂದು ಇಷ್ಟೊಂದು ಜನ ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆ. ಈಗ ಒಂದೊಂದು ತಾಲ್ಲೂಕಿನಲ್ಲಿಯೂ ಇದಕ್ಕೆ ಸಂಬಂಧಪಟ್ಟ ಹತ್ತಾರು ಜನ ಅಧಿಕಾರಿಗಳಿದ್ದಾರೆ. ಇವರು ರೈತರಲ್ಲಿ ಹೋಗಿ ಅವನು ಹೇಗೆ ಫಸಲನ್ನು ಬೆಳೆಯುತ್ತಾನೆ ಎನ್ನುವುದನ್ನು ವಿಚಾರ ಮಾಡಿ ಅವರಿಗೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಡುತ್ತಾರೆಯೇ ಎಂದು ನೋಡಿದರೆ ಅವರಿಗೇನೂ ಗೊತ್ತಿಲ್ಲ. ಈಗ ಬಿತ್ತನೆ ಕಾಲ ಬಂತು. ಅದರಲ್ಲೂ ವ್ಯವಸಾಯದ ಬಗ್ಗೆ ರೇಡಿಯೋ ಮೂಲಕ ತಿಳುವಳಿಕೆ ಎಂದು ಹೇಳುವುದನ್ನು ಕೇಳಿ ಕೇಳಿ ನಮಗೆ ಬಹಳ ಬೇಜಾರು ಆಗಿಬಿಟ್ಟಿದೆ ಮತ್ತು ಅವರು ಹೇಳುವಂತೆ ಎರಡು ಹೊಸ ಉತ್ತಮ ತಳಗಳು ಬಂದಿವೆ ಎಂದು ಹೇಳುತ್ತಾರೆ ಮತ್ತು ಒಂದಕ್ಕೆರಡರಷ್ಟು ಫಸಲಾಗುತ್ತದೆ ಎಂದು ಹೇಳುತ್ತಾರೆ. ಆದರೆ ಅಂತಹ ಬೀಜಗಳನ್ನು ರೈತ ಎಲ್ಲಿಗೆ ಹೋಗಿ ಕೇಳಿದರೂ ಸಿಗುವುದಿಲ್ಲ. ಬಿತ್ತನೆ ಬೀಜಗಳೇ ಇಲ್ಲದೆ ಇಂತಹ ಪ್ರಾಪೋಗ್ಯಾಂಡಾ ಏತಕ್ಕಾಗಿ ಮಾಡಬೇಕು ಎಂದು ನಾನು ಕೇಳುತ್ತೇನೆ. ನಮಗಂತೂ ರೇಡಿಯೋ ಪ್ರಚಾರ ಕೇಳಿ ಕೇಳಿ ಸಾಕಾಗಿ ಹೋಗಿದೆ. ಇನ್ನು ಈಚೆಗೆ ವೀಡ್ ಕಿಲರ್ ಎನ್ನುವ ಔಷಧಿಗಳು ಬಂದಿದೆ, ಇದನ್ನು ಎಲ್ಲ ವಿಧವಾದ ಫಸಲಿಗೂ ಉಪಯೋಗ ಮಾಡಬಹುದು. ರಾಗಿ ಫಸಲಿಗೆ ಭತ್ತದ ಫಸಲಿಗೆ ಹಾಗೂ ಇನ್ನಿತರ ಫಸಲಿಗೆ ಎಲ್ಲಿ ಹುಳುಗಳ ಕಾಟ ಹೆಚ್ಚಾಗಿದೆಯೋ ಅಲ್ಲಿ ಇಂತಹ ವೀಡ್‌ಕಿಲರ್ ಎನ್ನುವ ಔಷಧಿ ಉಪಯೋಗ ಮಾಡಿದರೆ ಫಸಲು ಚೆನ್ನಾಗಿ ಬರುತ್ತದೆ ಎಂದು ರೇಡಿಯೋ ಮೂಲಕ ದೊಡ್ಡದಾಗಿ ಪ್ರಚಾರ ಮಾಡಿದರು, ಆದರೆ ಇದು ರೈತರಿಗೇ ಸಿಗುವುದೇ ಇಲ್ಲ. ಇದರ ಬಗ್ಗೆ ನಾನು ಒಂದು ಸಾರಿ ಇಲ್ಲಿರುವ ಮುಖ್ಯ ಅಧಿಕಾರಿಗಳನ್ನು ಕರೆದು ಕೇಳಿದಾಗ ಅದು ಇನ್ನೂ ಎಕ್ಸ್‌ಪೆರಿಮೆಂಟು ಸ್ಟೇಜಿನಲ್ಲಿದೆ ಎಂದರು. ಹೀಗೆ ಕೃತಿಯಲ್ಲಿ ಒಂದು ಬಾಯಲ್ಲಿ ಒಂದು ಹೇಳಿದರೆ ಯಾರಿಗೆ ಇದರಿಂದ ಉಪಯೋಗವಾಗುತ್ತದೆ ಎನ್ನುವುದು ನಮಗಂತೂ ಅರ್ಥವಾಗುವುದಿಲ್ಲ. ಒಂದೊಂದು ತಾಲ್ಲೂಕಿನಲ್ಲೂ ಒಬ್ಬರು ಡೆಮಾನ್‌ಸ್ಟ್ರೇಟರು ಹಾಗೂ ಟ್ರೇನಿಂಗು ಕೊಟ್ಟ ಗ್ರಾಮ ಸೇವಕರು ಎಂದು ಕಳುಹಿಸಿರುತ್ತಾರೆ. ಇವನು ರೈತರ ಹತ್ತಿರ ಹೋಗಿ ಅವರು ಹೇಗೆ ಬೆಳೆ ಮಾಡುತ್ತಾರೆ ಎನ್ನುವುದನ್ನು ನೋಡಿ ಸರಿಯಾಗಿ ತಿಳುವಳಿಕೆ ಕೂಡ ಕೊಡುವುದಿಲ್ಲ. ಒಂದು ಸಾರಿ ಇವನನ್ನು ನಾವು ಕರೆದು ಕೇಳಿದಾಗ ಸುಮಾರು 45 ಕೆ.ಜಿ. ರಾಗಿ ಬಿತ್ತನೆ ಬೀಜವನ್ನು ಎಷ್ಟು ಎಕರೆಗೆ ಹಾಕಬಹುದು ಎಂದು ಕೇಳಿದ್ದಕ್ಕೆ ಅವನು ಎಕರೆಗೆ ಹತ್ತು ಕೆ.ಜಿ. ಯಂತೆ ಹಾಕಬಹುದು ಎಂದು ಹೇಳಿದರು. ಇವನು ಬಹಳ ಬುದ್ಧಿವಂತ ಎಂದು ನಾನು ತಿಳಿದುಕೊಂಡೆ. ಇಂತಹವರಿಂದ ವ್ಯವಸಾಯಕ್ಕೆ ಹೆಚ್ಚು ಮಹತ್ವ ಬರುತ್ತಿದೆ. ಇವರು ಎಷ್ಟುಮಟ್ಟಿಗೆ ಬುದ್ಧಿವಂತರಾಗಿದ್ದಾರೆ ಎಂದರೆ ರೈತರಿಗೆ ಯಾವ ಕಾಲದಲ್ಲಿ ಸಹಾಯ ಮಾಡಬೇಕೋ ಆಗ ಮಾಡುವುದಿಲ್ಲ. ನಮ್ಮಲ್ಲಿ ಎಲ್ಲಾ ತಾಲ್ಲೂಕುಗಳಲ್ಲೂ ಅಗ್ರಿಕಲ್‌ಚರು ಎ.ಇ.ಓ. ಎಂದು ಒಬ್ಬರು ಮತ್ತು ಅಗ್ರಿಕಲಚರಲ್ ಎಕ್ಸ್‌ಟೆನ್‌ಷನ್ ಆಫೀಸರು ಎಂದು ಒಬ್ಬರು ಇದ್ದಾರೆ ಇವರಿಗೆಲ್ಲಾ ವ್ಯವಸಾಯದ ಕೆಲಸ ಹೇಳುವವರು ಆಯಾ ತಾಲ್ಲೂಕುಗಳಲ್ಲಿರುವ ಬಿ.ಡಿ.ಓ. ಗಳು.ಬಿ.ಡಿ.ಓ. ಗಳು ಏನು ಮಾಡುತ್ತಾರೆ ಎಂದರೆ ಒಂದೊಂದು ಸಾರಿ ಅಗ್ರಿಕಲ್‌ಚರು ಎಕ್ಸ್‌ಟೆನ್‌ಷನ್

(ಶ್ರೀ ಎ. ವೆಂಕಟಪ್ಪ)

ಆಫೀಸರನ್ನು ಅಲ್ಲಿ ಸೆನ್ಸಸನ ಲೆಕ್ಕ ಬರೆಯುವುದಕ್ಕೆ ಉಪಯೋಗಮಾಡಿಕೊಳ್ಳುತ್ತಿದ್ದಾರೆ. ಇದು ಬತ್ತನೆ ಸೀಸನ್ ಇಲ್ಲಿ ಅಗ್ರಿಕಲಚರು ಎಕ್ಸ್‌ಟೆನ್ಷನ್ ಆಫೀಸರರ ಅಗತ್ಯ ಇದೆ ಎಂದು ಅವರ ಸಹಾಯ ಕೇಳಿದರೆ ಆಗ ಇವರು ನಾವು ಸೆನ್‌ಸಸ್ ಲೆಕ್ಕ ಮಾಡುತ್ತಿದ್ದೇವೆ, ಇಧನ್ನು ಮುಗಿಸಿ ಅನಂತರ ನಮ್ಮ ಕೆಲಸ ಮಾಡಬೇಕಾಗಿದೆ ಎಂದು ಹೇಳುತ್ತಾರೆ.

ಹೀಗೆ ವಿವಿಧ ಇಲಾಖೆಯಲ್ಲಿ ಎಷ್ಟರಮಟ್ಟಿನ ಪ್ರಯೋಜನವಾಗಬೇಕೋ ಅಷ್ಟರಮಟ್ಟಿನ ಪ್ರಯೋಜನ ಆಗುತ್ತಾ ಇಲ್ಲ ಎಂದು ಹೇಳುತ್ತೇನೆ. ನಾನು ಅನೇಕ ವೇಳೆ ಹೇಳಿದ್ದೇನೆ. ಹಿಂದೆ ಟಿ. ಜಿ. ರಾಮಯ್ಯ ಎಂಬುವರೊಬ್ಬರು ಈ ಇಲಾಖೆಯ ಮುಖ್ಯಸ್ಥರಾಗಿದ್ದಾಗ ಎಷ್ಟು ಕೆಲಸ ಮಾಡಿದರೋ ಅಷ್ಟು ಕೆಲಸ ಬಹಳ ಜನರು ಸೇರಿಕೊಂಡು ಮಾಡುತ್ತಾ ಇದ್ದರೂ ಆಗುತ್ತಾ ಇಲ್ಲ. ಇದಕ್ಕೆ ಇಷ್ಟೋ ಹಣ ಖರ್ಚು ಮಾಡುತ್ತೀರಿ. ಎಷ್ಟರಮಟ್ಟಿಗೆ ಪ್ರಾಪಗ್ಯಾಂಡ ಆಗುತ್ತಿದ್ದರೂ ಸಾಕಷ್ಟು ಪ್ರಯೋಜನ ಆಗುತ್ತಾ ಇಲ್ಲ. ಇದನ್ನು ನೋಡಿದರೆ ಇನ್ನೂ ಶ್ರಮವಹಿಸಿ ಕೆಲಸ ಮಾಡಬೇಕೆಂದು ಹೇಳುತ್ತೇನೆ.

5-00 P.M.

ಫ್ಯಾಮಿನ್ ರಿಲೀಫ್‌ಗೆ ಬಹಳ ಹಣ ಖರ್ಚು ಮಾಡುತ್ತಿದ್ದೀರಿ. ಈ ಸಮಯದಲ್ಲಿ ಖರ್ಚಾಗುವುದು ಏನೋ ಆವಶ್ಯಕ. ಆದರೆ ಅದು ಸರಿಯಾಗಿ ಉಪಯೋಗವಾಗುತ್ತಾ ಇಲ್ಲ. ಪೋಲಾಗದಂತೆ ನೋಡಿಕೊಳ್ಳುವಂಥಾದ್ದು ಬಹಳ ಆಗತ್ಯ. ಇದರಿಂದ ಮಧ್ಯಸ್ಥಗಾರರು ತಿನ್ನುವಂತಾಗುತ್ತದೆ ಅಷ್ಟೇ ಅಲ್ಲದೆ ಮಾಡಿದಂಥ ಕೆಲಸವನ್ನೂ ಕೂಡ ಮುಂದುವರಿಸಿಕೊಂಡು ಹೋಗದೇ ಇದ್ದರೆ ಎಲ್ಲವೂ ಹಾಳಾಗುತ್ತದೆ. ಈಗ ಒಂದು ರೋಡ್ ಕೆಲಸವನ್ನೇ ತೆಗೆದುಕೊಳ್ಳಿ. ರೋಡ್‌ನಲ್ಲೆಲ್ಲಾ ಮಣ್ಣು ಎತ್ತಿ ಹಾಕುತ್ತಾರೆ. ಆಮೇಲೆ ಪುನಃ ನಿಲ್ಲಿಸಿಬಿಡುತ್ತಾರೆ. ಇದರಿಂದ ಮಾಡಿದಂಥ ಕೆಲಸವೂ ಕೂಡ ಹೋಗುತ್ತದೆ. ಇದಕ್ಕೆ ಸರಿಯಾದಂಥ ಮೆಟಲ್ ಹಾಕಿ ಇದ್ದ ಹಣದಲ್ಲೇ ಖರ್ಚು ಮಾಡಿ ಸರಿಯಾದ ರೋಡು ಆಗುವಂತ ಮಾಡಬೇಕು. ಈ ರೀತಿ ಅನೇಕ ವಿಧದಲ್ಲಿ ಅಪವ್ಯಯವಾಗುತ್ತಿದೆ. ಅದೇ ರೀತಿ ಫ್ಯಾಮಿನ್ ರಿಲೀಫ್‌ನಲ್ಲೂ ಸಹ ಅಪವ್ಯಯವಾಗುವುದನ್ನು ತಪ್ಪಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† Sri S. MUKUNDA RAO (Teachers' Constituency).—Sir, I want to speak on only one topic—Demand No. 17 item 3—proposal of the Government to create a directorate of text-books.

Sir, many complaints have been voiced in this House and outside about the publication of text-books—what we call nationalised text-books in the State. I am not against this policy of nationalising text-books. But we must see what the defects are and how to remove them. The main defect in my opinion is that this work of printing and publishing these text-books is placed in the hands of departmental officers who may be very good as teachers and inspectors, but not as printers and publishers. This is an aspect of business. The Text book Department may not be a business concern and I know it does not work on no profit no loss basis. But still this is an aspect which requires expert knowledge about printing and publishing and distribution of text books. We hear loud complaints from parents and students that text-books are not made available at the proper time. The excuse put forward by the authorities in charge of this work is that some unscrupulous book-sellers corner the text-books and create artificial scarcity. I request Government not to be taken in by these excuses from this Department. Sir, there may be some book-sellers who may want to sell their guides in preference to the text books. But

there is a large number of book-sellers who are keen on selling books and have a larger turnover. I know for instance in my district there are several booksellers who have advanced money to the Department and indented for certain number of books. But they do not get them in the right time. If the demand is for 20,000 books, he gets, 1,000 or 1500 and the depot people are asked to distribute them evenly. So the indentor gets some 5 per cent or 4 per cent of his indent and as a result there is scaricity created throughout the district.

Another difficulty with this printing and publishing is, the Government Text Book Press in Mysore is not capable of printing all the text-books in the right time. The Department has bitten more than it can chew. They have therefore now called upon private printers to print books for them. They give this work to the bigger presses in the State. The bigger presses take upon themselves the work which they cannot finish in time. Therefore, they in turn sub-let this work. I have seen with my own eyes Government text books promised to be printed by the bigger presses, being printed in the smaller presses. The printers name will be that of the bigger press. But actually it is being printed in the smaller presses. As a result, one book will be composed and printed in 10 different places and it takes so much time. When they know that the demand is for thousands of copies, if they had only prepared stereos after the first composing, they could have printed in the larger presses in very much shorter time than they take now.

Secondly, when they are printed, instead of asking the printers straightaway to send 3000 copies to Mangalore, 4000 copies to Bangalore, 2000 copies to Dharwar, all the printed stuff is brought to Bangalore and from there it is distributed to various depots. That takes more time. On the other hand they could very easily get from the Headmasters the approximate number of text-books for each class in the month of January or February for the next academic year. You print 75 per cent of the demand by June. That would be satisfactory. But that is not done. You can even supply directly to the schools instead of through book-sellers if you do not trust them. There are a number of high schools where there are stationery societies which buy books from the market and sell them to the students. Why do not the depots directly deal with the high school primary school, teachers' associations? They do not do that, but they blame the book-sellers.

There is a complaint that there are mistakes in text-books. These mistakes arise in the method followed in preparing these text-books which is very curious. The usual method followed everywhere is, one expert who is in touch with teaching is asked to write out a book according to syllabus and a committee reviews it – 6 or 10 people may review it, point out the mistakes, correct the whole thing and finally copies are sent to the press. Here, once a committee is appointed to prepare a text book, they share the work among themselves— A is asked to write two chapters, B is asked to write 3 chapters and C four chapters—like that so that each man gets a particular share in the

(SRI S. MUKUNDA RAO)

business of writing and the Chairman of this Committee usually is a heavily worked Departmental officer, a Joint Director or Deputy Director. He has no time to attend to his normal work. Added to that, he has to run to Bangalore every 8-10-15 days to preside over these committee meetings and also write certain chapters. There is disjointed work and review is not properly done. Mistakes creep in, because they are prepared in a hurry. That is why, so many mistakes both in facts and printing appear. And that is why, this proposal of the Government to have a separate Directorate for Text-Book Printing has arisen. From the details given, it cannot be known whether they are going to appoint a Director or an Assistant Director. They have not stated what his salary is and what the scale is. The word 'Director' is misleading. So far as our Education Department is concerned, the Director of the Science Institute is of the grade of the Deputy Director. The Director of the State Education Institute at Dharwar is of the grade of Joint Director. I would like to know whether this gentleman will be of Deputy Director's Grade or Joint Director's grade or of Director's grade or something like an Additional Director. I would suggest to the Government to appoint a gentleman not from the Department but to recruit somebody from outside who has got experience of printing, publication and distribution trade; and make it a very efficient business concern. If there is any profit, it can be used to print and publish classics and other good books at cheap rates. We are now doiog it through the cultural and other activities and that can be financed through any little profit that the Government can get from this.

One other defect I find here. If you look at the size of the text-books, even for the higher classes that size is not used anywhere in the world. There they use octavo size. Here they use quarto size and unnecessary large margins are left and the printing takes twice the space. If it is one-eighth size, 16 pages can be printed at one stroke. Here 8 pages are printed. So more time is taken; more money is given to the printer; more time is wasted.

Since the Chair is not pleased to give any more time, I cannot give any more details. I would like to submit to the Government to look into this business more seriously and see that it is run on business lines.

† ಶ್ರೀ ಸಿ. ಬಂಡೀಗೌಡ (ಉಪಾಧ್ಯಾಯರ ಕ್ಷೇತ್ರ).—ಮಾನ್ಯ ಅರ್ಥ ಮಂತ್ರಿಗಳು ಈ ಸಭೆಯಲ್ಲಿ ತಂದಿರುವ ಹಣ ವಿನಿಯೋಗ ನಾಲ್ಕನೇ ಅನುಕ್ರಮದ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಅವರು ತಮ್ಮ ಪ್ರಾರಂಭ ಭಾಷಣದಲ್ಲಿ ತಿಳಿಸಿದಂತೆ ಈ ಅಂದಾಜುಗಳಲ್ಲಿ ಬರುವ ವೆಚ್ಚದ ಹೆಚ್ಚಳ ಕೇವಲ 1,03,64,000 ರೂಪಾಯಿ. ಆದರೆ ಈ ಸಭೆಯ ಮುಂದೆ ಬಂದಿರುವ ಬೇಡಿಕೆ 39,43,28,000 ರೂಪಾಯಿ ಎನ್ನುವುದು ಕೂಡ ನಾವು ಮರೆಯುವಂತಿಲ್ಲ. ಮಾನ್ಯ ಸಚಿವರು ಅನೇಕವೇಳೆ ಈ ರೀತಿಯ ಪೂರಕ ಅನುದಾನಗಳನ್ನು ಮಂಡಿಸುವ ಸಮಯದಲ್ಲಿ ಹೆಚ್ಚು ಬೇಡಿಕೆಗಳನ್ನು ಸಪ್ಲಿಮೆಂಟರಿಯಾಗಿ ತರುವುದು ಅನಿವಾರ್ಯ ಎಂದು ತಿಳಿಸಿದರು. ಒಂದೆರಡು ಸಂದರ್ಭಗಳಲ್ಲಿ ಆ ಮಾತು ನಿಜ. ಒಂದು ನಿದರ್ಶನವನ್ನು ತೆಗೆದುಕೊಳ್ಳುವುದಾದರೆ ಕೃತಕ ಗೊಬ್ಬರಗಳ ಸಾಗಾಣಿಕೆಗೆ 1,50,00,000 ರೂಪಾಯಿಗಳನ್ನು 1967-1968ರಲ್ಲಿ ರಾಜ್ಯದ ಬೊಕ್ಕಸದಿಂದ ಖರ್ಚುಮಾಡಿ ಅನಂತರ ಭಾರತ ಸರ್ಕಾರದಿಂದ ಆ ಹಣವನ್ನು ವಾಪಸು ತೆಗೆದು

ಕೊಳ್ಳಬೇಕು ಎನ್ನತಕ್ಕ ಒಂದು ಪದ್ಧತಿ ಇತ್ತು. ಆದರೆ ಅಕೌಂಟೆಂಟ್ ಜನರಲ್ ಅವರು ಹಿಂದಿನ ಎರಡು ವರ್ಷಗಳಲ್ಲಿ ಆ ರೀತಿ ಮಾಡಬೇಕಾದ ಪ್ರಮೇಯವಿಲ್ಲ, ಪೇ ಅಂಡ್ ಅಕೌಂಟ್ಸ್ ಆಫೀಸರ್ ಸಸ್‌ಪೆನ್ಸ್‌ಗೆ ಅದನ್ನು ತೋರಿಸಿಬಿಡಿ ಎಂದು ಹೇಳಿದ್ದರಿಂದ ಹಾಗೆ ಮಾಡಿದೆವು. ಈಗ ಪುನಃ ಆ ಕ್ರಮ ಸರಿಯಲ್ಲ, ಅಕ್ರಮವಾಗುತ್ತದೆ, ಮೊದಲು ಮಾಡುತ್ತಿದ್ದ ಹಾಗೆಯೇ ಮಾಡಿ ಎಂದು ಹೇಳಿದರು. ಆ ಕಾರಣದಿಂದ ಮತ್ತೆ 1,50,00,000 ರೂಪಾಯಿಗಳನ್ನು ಪೂರಕ ಅಂದಾಜಿನಲ್ಲಿ ಸೇರಿಸಬೇಕಾಯಿತು ಎಂದು ಹೇಳಿದರು. ಅದನ್ನು ನಾನು ಒಪ್ಪಿದೆ. ಹೀಗೆ ತರಬಹುದಾದ ಬಾಬುಗಳು ಹೆಚ್ಚಿಲ್ಲ. ಶರಾವತಿ ಮತ್ತು ಭದ್ರ ವಿದ್ಯುಚ್ಛಕ್ತಿ ಯೋಜನೆಗಳಿಗಾಗಿ ಈಗ ಖರ್ಚು ಮಾಡಿರತಕ್ಕ 15 ಕೋಟಿ 61 ಲಕ್ಷ ರೂಪಾಯಿಗಳು ಈ ವರ್ಗಕ್ಕೆ ಸೇರುವುದಿಲ್ಲ. ಆಯವ್ಯಯ ಅಂದಾಜುಗಳನ್ನು ಈ ಸಭೆಯ ಮುಂದೆ ತಂದಾಗಲೇ ಅವುಗಳನ್ನು ಸೇರಿಸುವುದಕ್ಕೆ ಸಾಧ್ಯವಿತ್ತು. ಅದೇ ರೀತಿ ವಿದ್ಯುಚ್ಛಕ್ತಿ ಮಂಡಳಿಗೆ ಕೊಡತಕ್ಕ 7 ಕೋಟಿ 32 ಲಕ್ಷ ರೂಪಾಯಿ ಸಾಲ. ಇವೆಲ್ಲ ಬರೀ ಪುಸ್ತಕದ ಲೆಕ್ಕಗಳ ಹೊಂದಾಣಿಕೆ ಎನ್ನುವುದು ನಿಜ. ವಿದ್ಯುಚ್ಛಕ್ತಿ ಮಂಡಳಿಯವರು ಸರ್ಕಾರಕ್ಕೆ ಕೊಡಬೇಕಾದ ಹಣವನ್ನು ಕೊಡುವುದಕ್ಕಾಗಿಲ್ಲ, ಅವರಿಂದ ತೆಗೆದುಕೊಳ್ಳುವುದಕ್ಕೆ ಆಗಿಲ್ಲ, ಅದಕ್ಕೋಸ್ಕರ ಬರಬೇಕಾದ ಹಣಕ್ಕೆ ಬದಲಾಗಿ ಸಾಲ ಕೊಟ್ಟಿದ್ದೇವೆ ಎಂದು ಲೆಕ್ಕ ತೋರಿಸುವುದು ಎಲ್ಲ ನಿಜ. ಇದನ್ನು ಸರ್ಕಾರದವರು ಸ್ವಲ್ಪ ಜಾಗರೂಕತೆಯಿಂದ ಪರಿಶೀಲಿಸಿ ಆಯವ್ಯಯ ಅಂದಾಜನ್ನು ಮಂಡಿಸತಕ್ಕ ಸಮಯದಲ್ಲಿ ಇದೆಲ್ಲವನ್ನೂ ನಮೂದಿಸಿ ಈಗ ಪೂರಕ ಅನುದಾನಗಳಿಗೆ ಒಪ್ಪಿಗೆ ಪಡೆಯುತಕ್ಕ ಸಮಯದಲ್ಲಿ ಕೇವಲ ಒಂದೆರಡು ಕೋಟಿಗೆ ಇಳಿಸಬಹುದಾಗಿತ್ತು ಎನ್ನುವುದು ನನ್ನ ಅಭಿಪ್ರಾಯ. ಕೆಲವು ಔದ್ಯಮಿಕ ಸಂಸ್ಥೆಗಳಿಗೆ ಕೊಟ್ಟಂಥ ಹಣ ಅದನ್ನು ವಿನಿಯೋಗಿಸಿದ ಷೇರು ಬಂಡವಾಳ ಇದೆಲ್ಲ ಆಗಿ ಮೂರು ನಾಲ್ಕು ವರ್ಷವಾಗಿವೆ. ಆ ವರ್ಷದ ಪೂರಕ ಅಂದಾಜುಗಳಲ್ಲಿ ತರಬಹುದಾಗಿತ್ತು; ಆಯವ್ಯಯ ಅಂದಾಜು ಪತ್ರಿಕೆಯಲ್ಲಿ ತರಬಹುದಾಗಿತ್ತು. ಆದರೂ ಕೂಡ ಇಲ್ಲಿಯವರೆಗೂ ತಡಮಾಡಿ ಈಗ ಏಕೆ ತಂದರು ಎನ್ನುವುದು ನನಗೆ ಅರ್ಥವಾಗಲಿಲ್ಲ.

ಮಾನ್ಯ ಸಹಕಾರ ಸಚಿವರಿದ್ದಾರೆ. ಅವರ ಗಮನಕ್ಕೆ ತರಬೇಕಾದ ಎರಡು ಅಂಶಗಳಿವೆ. ಪೂರಕ ಅಂದಾಜುಗಳಲ್ಲಿ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೋಟ್ಯಾಂತರ ರೂಪಾಯಿಗಳ ವೆಚ್ಚವನ್ನು ತೋರಿಸಲಾಗಿದೆ. ಬೇಡಿಕೆ 44 ರಲ್ಲಿ ಬಂಡವಾಳ ವೆಚ್ಚವೆಂದು ಇದೆ. ಅದರಲ್ಲಿ ಮೈಸೂರು ರಾಜ್ಯ ಸಹಕಾರ ಮಾರಾಟ ಸಂಘಕ್ಕೆ 65 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಇದೇರೀತಿ ನಾಲ್ಕು ಪ್ರದೇಶಗಳಲ್ಲಿ ರಾಯಚೂರು, ಬೆಳಗಾಂ, ಭದ್ರಾವತಿ, ಚಿಕ್ಕೋಡಿ, ಇಲ್ಲಿ ಗ್ರಾನುಲರ್ ಪ್ಲಾಂಟ್ಸ್ ಎನ್ನುವ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದಕ್ಕೆ 33 ಲಕ್ಷ ರೂಪಾಯಿಗಳನ್ನು ಕೇಳಲಾಗಿದೆ. ಮತ್ತೆ ಇದೇ ರಾಜ್ಯ ಸಹಕಾರ ಮಾರಾಟ ಸಂಘದ ಮೂಲಕ ಗೊಬ್ಬರಗಳ ಸಾಗಾಣಿಕೆಗೆ 1 ಕೋಟಿ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇನ್ನೂ ಅನೇಕ ಕಡೆ ಉಗ್ರಾಣಗಳ ಸ್ಥಾಪನೆಗಾಗಿ, ಸಹಕಾರ ಸಂಘಗಳ ಸಂಚಾಲನೆಯ ವೆಚ್ಚಕ್ಕಾಗಿ ಷೇರು ಬಂಡವಾಳ, ಸಹಾಯಧನ, ಸಾಲ ಇತ್ಯಾದಿ ರೂಪದಲ್ಲಿ ಅವುಗಳಿಗೆ ಒದಗಿಸತಕ್ಕ ಸೌಕರ್ಯಗಳಿಗಾಗಿ ವರ್ಷೇ ವರ್ಷೇ ಕೋಟ್ಯಾಂತರ ರೂಪಾಯಿಗಳ ವೆಚ್ಚವಾಗುತ್ತಿದೆ. ಈಗಲೂ ಪೂರಕ ಅಂದಾಜುಗಳಲ್ಲಿ ಕೂಡ ಒಟ್ಟಿನಲ್ಲಿ ಸಹಕಾರ ಸಂಸ್ಥೆಗಳಿಗೆ ಕೋಟ್ಯಾಂತರ ರೂಪಾಯಿ ವೆಚ್ಚವಾಗುತ್ತಿದೆ. ಆದರೆ ಒಂದು ವಿಷಯವನ್ನು ವ್ಯಥೆಯಿಂದ ಹೇಳಬೇಕಾಗಿದೆ. ಅನೇಕ ಸಂಸ್ಥೆಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಮಾನ್ಯ ಅರ್ಥ ಮಂತ್ರಿಗಳು ಹಿಂದೆ ಸಹಕಾರ ಸಚಿವರಾಗಿದ್ದಾಗ ಮತ್ತೆ ಅನಂತರವೂ ಹಲವಾರು ಬಾರಿ ಈ ಸಭೆಯಲ್ಲಿ ಹೇಳಿದ್ದಾರೆ, ಸಹಕಾರ ಕ್ಷೇತ್ರ ನಾವು ನಿರೀಕ್ಷಿಸಿದಷ್ಟು ಒಳ್ಳೆಯ ಮಟ್ಟದಲ್ಲಿ ಕೆಲಸ ಮಾಡುತ್ತಿಲ್ಲ, ನಿಜವಾಗಿ ನನಗೆ ಆಶಾಭಂಗವಾಗಿದೆ ಎನ್ನುವುದನ್ನು, ಅವರ ಮನಸ್ಸಿನಲ್ಲಿದ್ದ ವ್ಯಥೆಯನ್ನು ಅವರು ಈ ಸಭೆಯಲ್ಲಿ ತೋಡಿಕೊಂಡಿದ್ದಾರೆ. ಈ ಸಂಸ್ಥೆಗಳಲ್ಲಿ ನಡೆಯುತ್ತಿರತಕ್ಕ ಕಾರ್ಯದ ಪ್ರಮಾಣ ಈಗ ನಾಲ್ಕಾರು ವರ್ಷಗಳ ಹಿಂದೆ ಇದ್ದುದಕ್ಕಿಂತ ಒಂದಕ್ಕೆ ಹತ್ತು ಪಟ್ಟು ಏರಿದೆ. ಎಲ್ಲೆಲ್ಲಿ ಆ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡಲಿಲ್ಲವೋ ಅಲ್ಲಿ ಆಗತಕ್ಕ ನಷ್ಟದ ಪ್ರಮಾಣ ಕೂಡ ಒಂದಕ್ಕೆ ಹತ್ತರಷ್ಟು ಆಗುತ್ತಿದೆ. ಈಗ ಒಂದು ಗಂಟೆಯ ಮುಂಚೆ ಹುಬ್ಬಳ್ಳಿಯಲ್ಲಿರುವ ಸಹಕಾರಿ ಗಿರಣಿಯು ಮುಚ್ಚಲ್ಪಟ್ಟಿದೆ, ಅದರ ಬಂಡವಾಳ 48 ಲಕ್ಷ, ಸರಕಾರದಿಂದ ಜಮಾ ಆಗಿರುವುದು 80 ಲಕ್ಷ. ಒಟ್ಟು 1 ಕೋಟಿ 28 ಲಕ್ಷ ಗುಂಡಿಯಲ್ಲಿ ಹಾಕಿದೆ ಎಂದು ಸಹಕಾರ ಸಚಿವರು ಹೇಳಿದರು. ನಮ್ಮ ದುರಾದೃಷ್ಟವೋ ಏನೋ ನಮ್ಮಲ್ಲಿ ಸರಕಾರಿ ಉದ್ಯಮಗಳು ಸರಿಯಾಗಿ ಕೆಲಸಮಾಡುತ್ತಿಲ್ಲ, ಅವುಗಳ ಮೇಲ್ವಿಚಾರಣೆಗೆ ದೊಡ್ಡ ದೊಡ್ಡ ಅಧಿಕಾರಿಗಳಿದ್ದರೂ ಅವರು ನಂಬಿಕೆಯಿಲ್ಲದವರಾಗಿರುವುದರಿಂದ ನಾವು ಅಸಹಾಯಕರಾಗಿದ್ದೇವೆ ಎಂದು ಮಾನ್ಯ ಆರ್ಥಿಕ ಸಚಿವರು ಹೇಳಿದರು. ನೇರವಾಗಿ ಬಂಡವಾಳ ಹಾಕದಿದ್ದರೂ ಸರಕಾರ ಸಹಾಯ

(ಶ್ರೀ ಸಿ. ಬಂದೀಗೌಡ)

ಮಾಡಲು ಹೋಗಿ ಗುಲ್ಬರ್ಗ ಕಾರ್ಖಾನೆ ಮುಂತಾದ ಸಂಸ್ಥೆಗಳಿಂದ ಕೈ ಸುಟ್ಟುಕೊಂಡಿದೆ. ಸಹಕಾರಿ ಕ್ಷೇತ್ರಗಳು ಅಧೋಗತಿಗೆ ಬರುತ್ತಿವೆ. ಸಹಕಾರಿ ಕ್ಷೇತ್ರದಲ್ಲಿ ಬಹಳ ನಂಬಿಕೆಯಿಟ್ಟು, ಶ್ರದ್ಧೆಯಿಟ್ಟು ಒಳ್ಳೆಯ ಉದ್ದೇಶದಿಂದ ಕೋಟಿಗಟ್ಟಲೆ ಬಂಡವಾಳ ಹಾಕಿರುವಾಗ ಈ ದಿವಸ ವಿಫಲತೆ ಕಂಡುಬರುತ್ತಿದೆ. ಇದಕ್ಕೆ ಮುಖ್ಯವಾದ ಕಾರಣ ಸರಕಾರದವರೆಷ್ಟು ಉಸ್ತುವಾರಿ ವಹಿಸಬೇಕೋ ಅಷ್ಟು ವಹಿಸದಿರುವುದು, ಇದು ದೊಡ್ಡ ಕಾರಣ. ಮಾನ್ಯ ಸಚಿವರು ಕೊಟ್ಟ ಉತ್ತರದಿಂದ ಸಮಾಧಾನವಾಗಿಲ್ಲ, ಬಟ್ಟೆ ಗಿರಣಿಯಲ್ಲಿ ಬೇಕಾದವರನ್ನು ಮ್ಯಾನೇಜಿಂಗ್ ಡೈರೆಕ್ಟರ್ ಮಾಡಿದರು, ಅವರು ನೋಡಿಕೊಳ್ಳುವರು ಎಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಸರಕಾರದ ಹೊಣೆ ಬಹಳ ದೊಡ್ಡದಿದೆ. ಎಲ್ಲೆಲ್ಲಿ ಸರಿಯಾದ ನಾಯಕತ್ವವಿದೆ, ಕಾರ್ಯಸಾಧನೆ ಎಲ್ಲ ಮಾಡಬಲ್ಲರು ಎಂಬುದನ್ನು ಸರಕಾರ ಬಹಳ ಜಾಗರೂಕತೆಯಿಂದ ವಿಚಾರಮಾಡಿ ಅಂಥ ಸಂದರ್ಭಗಳಲ್ಲಿ ಮಾತ್ರ ಸಹಕಾರ ಸಂಘಗಳಿಗೆ ಮತ್ತು ದೊಡ್ಡ ದೊಡ್ಡ ಉದ್ಯಮಗಳಿಗೆ ಅವಕಾಶ ಕೊಡಬೇಕೇ ಹೊರತು ಜನ ಮುಂದೆ ಬಂದರು, ಕೊಡೋಣ, ಭಾರತ ಸರಕಾರ ಸಹಾಯ ಮಾಡುವುದು ಎಂದು ಹೇಳಿದರೆ ನಾಳೆ ಅದು ಅಣಬೆಯಾಗುವುದು. ಸಹಕಾರ ಸಂಸ್ಥೆಗಳಿಗೆ ಸರಕಾರ 9 ಲಕ್ಷ ರೂಪಾಯಿಗಳ ಸಾಲ ಕೊಟ್ಟಿದೆ. ಏಕೆ ? ಕನ್ನಡದಲ್ಲಿ ಎಳೆಯರಿಗೆ ಒಂದು ವಿಶ್ವಕೋಶ ಪ್ರಕಟಿಸಲಾಗಿದೆ. ಸಹಕಾರ ಸಂಸ್ಥೆ ಎಂದರೆ ಏನು ? ಅದನ್ನು ನಡೆಸುವವರು ಸರ್ವಶಕ್ತರೋ ? ಆ ಸಂಸ್ಥೆ ದೇವತೆಯೋ ಅಥವಾ ಅಪರಾವತಾರವೊ ? ಗೊತ್ತಿಲ್ಲ. ಹಿಂದೆ ವಿಶ್ವಕೋಶವನ್ನು ರಚಿಸುವ ಹೊಣೆ ಸಾಹಿತ್ಯ ಪರಿಷತ್ತಿಗಿತ್ತು. ಈಗ ಈ ಕೆಲಸವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಹಿಸಿದ್ದಾರೆ, ಆ ವಿಶ್ವವಿದ್ಯಾನಿಲಯದವರು ಅದರ ಕೆಲಸ ಮಾಡುತ್ತಿದ್ದಾರೆ. ಇಂಥ ಕೆಲಸವನ್ನು ನಿನ್ನೆ ಸ್ಥಾಪಿತವಾದ ಸಹಕಾರ ಸಂಸ್ಥೆ ಮಾಡುತ್ತದೆ ಎಂದು ಹೇಳಿದರೆ ಅದನ್ನು ನಂಬುವುದಕ್ಕೆ ಸಾಧ್ಯವಿಲ್ಲ. ಸರಕಾರ ಹೀಗೆ ಸಹಕಾರ ಸಂಸ್ಥೆಗೆ ಸಹಾಯಮಾಡುವಾಗ ಸ್ವಲ್ಪ ಹುರಿದುಂಬಿಸಬೇಕು ಪ್ರೋತ್ಸಾಹ ಕೊಡಬೇಕು ಎಂದು ಹೀಗೆ ವೆಚ್ಚ ಮಾಡುವುದು ಸರಿಯಲ್ಲ.

ಸರಕಾರದವರು ಪಠ್ಯಪುಸ್ತಕಗಳನ್ನು ಬರೆಸಿದರು, ಅವನ್ನು ಸರಿಯಾಗಿ ಅಚ್ಚುಹಾಕಿಸಿ ಹಂಚುವುದಕ್ಕೆ ಸಾಧ್ಯವಾಗಿಲ್ಲ ಎಂದು ಶ್ರೀ ಮುಕುಂದರಾಯರು ಹೇಳುತ್ತಿದ್ದರು. ಸರಕಾರ ಸರಿಯಾಗಿ ಕೆಲಸಮಾಡಲು ಸಾಧ್ಯವಿಲ್ಲದಂಥ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡುವುದಕ್ಕೆ ಬದಲಾಗಿ ಸರಕಾರವೇ ಕೆಲಸಮಾಡಿ ಪುಸ್ತಕಗಳನ್ನು ಪ್ರಕಟಿಸಬೇಕಾಗಿದೆ. ಹಾಗೆ ಮಾಡುವಾಗ ತಕ್ಷಣ ದೊರೆಯುವಂತೆ ಮಾಡಬೇಕು, ಎಳೆಯರ ವಯಸ್ಸಿಗನುಗುಣವಾಗಿ ಜ್ಞಾನ ಭಂಡಾರ, ಜ್ಞಾನಕೋಶ ನಿರ್ಮಾಣಮಾಡಿ ಅದನ್ನು ರಾಜ್ಯದಾದ್ಯಂತ ಸರಿಯಾಗಿ ಹಂಚಬೇಕು, ಕೈಲಾಗದವರಿಗೆ ಇದನ್ನು ವಹಿಸುವುದು ಸರಿಯಲ್ಲ.

ಕೊನೆಯದಾಗಿ ಒಂದು ಮಾತು. ಇತ್ತೀಚೆಗೆ ಸಹಕಾರಿ ಕ್ಷೇತ್ರದಲ್ಲಿ ಪ್ರಮುಖ ಸ್ಥಾನಗಳಲ್ಲಿ ಬೇಕಾದವರನ್ನು ಹಾಕಲಾಗುತ್ತಿದೆ. ಮಂಡ್ಯ ಜಿಲ್ಲೆಯ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಅಧ್ಯಕ್ಷರು ರೈತರ ಕಬ್ಬಿಗೆ ಹೆಚ್ಚು ಬೆಲೆ ಬರಲು ಕಾರಣರಾದರೂ 4 ಲಕ್ಷ ರೂಪಾಯಿಗಳ ಒಂದು ನಿಧಿಯನ್ನು ಕಬ್ಬು ಒದಗಿಸುವ ರೈತರಿಂದ ವಸೂಲುಮಾಡಿ ಅಧ್ಯಕ್ಷರು ಸ್ವಂತ ಪ್ರಯೋಜನಕ್ಕೆ ಉಪಯೋಗಿಸುವ ಪರಿಸ್ಥಿತಿ ಇದೆ. ಈ ಸಂದರ್ಭದಲ್ಲಿ ಆ ಪ್ರದೇಶದ ಸದಸ್ಯರು ಇಂಥ ವರ್ತನೆಯನ್ನು ಖಂಡಿಸಿ ಮನವಿಮಾಡಿದ್ದಾರೆ. ರೈತರು ಸರಕಾರಕ್ಕೆ ದೂರು ಕೊಟ್ಟಿದ್ದಾರೆ ಹೀಗೆ ಎಲ್ಲಿ ಇಂಥ ದೂರುಗಳು ಬರುವುವೋ ಅಲ್ಲಿ ಪರಿಶೀಲನೆ ಮಾಡಬೇಕು ಮತ್ತು ಸರಿಯಾದ ಕ್ರಮ ತೆಗೆದುಕೊಳ್ಳಬೇಕು, ಇದು ಅಗತ್ಯವಾಗಿದೆ.

ಉಪಸಭಾಪತಿಯವರು.—ಅದು ಬಹಳ ಗುರುತರವಾದ ಆಪಾದನೆ.

ಶ್ರೀ ಸಿ. ಬಂದೀಗೌಡ.—ಹೌದು, ಹೊಣೆಯರಿತು ಹೇಳುತ್ತಿದ್ದೇನೆ, ಗಮನಿಸಬೇಕು. ಸರಕಾರ ಕಣ್ಣುಮುಚ್ಚಿ ಹೀಗೆಯೇ ಬಿಟ್ಟರೆ ನಾಳೆ ಎಲ್ಲಾ ಸಂಘಗಳಲ್ಲೂ ಇದೇ ಪ್ರವೃತ್ತಿ ಬೆಳೆದು ಸಮಾಜಘಾತಕ ವ್ಯಕ್ತಿಗಳ ಕೈಲಿ ಸಂಸ್ಥೆಗಳು ಸಿಕ್ಕಿ ನರಳಬೇಕಾಗುತ್ತದೆ. ಆದುದರಿಂದ ಆದಷ್ಟು ಬೇಗ ಸಹಕಾರ ಸಂಸ್ಥೆಗಳಲ್ಲಿ ಅಧಿಕಾರ ಸ್ಥಾನಗಳಲ್ಲಿರುವವರು ತಪ್ಪುಮಾಡಿದಾಗ, ಅಪರಾಧ ಮಾಡಿದಾಗ ಅವರಿಗೆ ಸರಿಯಾದ ದಂಡನೆ ವಿಧಿಸಲು ತಕ್ಕ ಕಾನೂನನ್ನು ಮಾಡಿ ಹತೋಟಿಗೆ ತರುವುದು ಅಗತ್ಯ ಎಂದು ತಿಳಿಸಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

† ಶ್ರೀ ವಿ. ಎಸ್. ಹಿರೇಗೌಡರ್ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಸನ್ಮಾನ್ಯ ಸಭಾಪತಿಗಳೇ, ಈ ಹೆಚ್ಚುವರಿ ಬೇಡಿಕೆ ಮತ್ತು ಅಂದಾಜು ಪತ್ರಿಕೆ ಬಗ್ಗೆ ಮಾತನಾಡುತ್ತಾ ನನಗಾದ ಅಪಾರ ವ್ಯಸನವನ್ನು ವ್ಯಕ್ತಮಾಡುತ್ತೇನೆ. ಕಾರಣ ಇಷ್ಟೆ: ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಪ್ರಥಮ ವರ್ಷದಲ್ಲಿ ನಿರೀಕ್ಷಿಸಲಾರದ ಮತ್ತು ಚೇತರಿಸಿಕೊಳ್ಳಲು ಅವಕಾಶವಿಲ್ಲದಿರುವ ಆಗುಹೋಗುಗಳು ಜರಿಗಿವೆ. ಮಾನ್ಯ ಸದಸ್ಯರು ಮಾತನಾಡುತ್ತಾ ನೀರಾವರಿ ಯೋಜನೆಗಳನ್ನು ಕೈಕೊಳ್ಳಬೇಕು, ನಿರುದ್ಯೋಗ ಸಮಸ್ಯೆಯ ನಿರ್ಮೂಲನವಾಗಬೇಕಾದರೆ ಯೋಜನಾಬದ್ಧವಾದ ಇಂಡಸ್ಟ್ರೀಸ್‌ನಲ್ಲಿ ಮೈಸೂರಿನವರಿಗೆ ಹೆಚ್ಚಿನ ಅವಕಾಶ ಕಲ್ಪಿಸಬೇಕು ಎಂಬುದಾಗಿ ಹೇಳಿದ್ದಾರೆ. ಮುಖ್ಯವಾಗಿ ಇದನ್ನು ಮಾಡಬೇಕು ಎಂಬ ಬೇಡಿಕೆ, ಒತ್ತಾಯ ಸರಕಾರದಮೇಲೆ ಬರುತ್ತಿದೆ. ಸರಕಾರದ ದೃಷ್ಟಿಯಿಂದ ಇದರ ಅಂಗವಾಗಿ ವಿಚಾರ ಮಾಡುವಾಗ ಐದನೆಯ ಆರ್ಥಿಕ ಆಯೋಗದ ವರದಿ ಮೇಲೆ ನಮ್ಮ ಆರ್ಥಿಕ ಮಂತ್ರಿಗಳು ಅತ್ಯಂತ ಶೀಘ್ರವಾಗಿ ಚಿಕ್ಕದಾದರೂ ಕೂಡ ಸರ್ವರಿಗೂ ಅರ್ಥವಾಗುವ ಒಂದು ಚೊಕ್ಕವಾದ ಹೇಳಿಕೆಯನು ಕೊಟ್ಟಿದ್ದಾರೆ. ಅದನ್ನು ನೋಡಿದರೆ ಈ ನಾಲ್ಕನೆ ಯೋಜನೆಯಲ್ಲಿ ನಮ್ಮ ಅಭಿವೃದ್ಧಿ ಎಷ್ಟುಮಟ್ಟಿಗೆ ಕುಂಠಿತವಾಗಬಹುದು ಎಂದು ಅಂದಾಜು ಮಾಡಿದರೆ, ನಮ್ಮ ಅಂದಾಜು, ಈ ಹೆಚ್ಚುವರಿ ಬೇಡಿಕೆ ಕಡಮೆ ಬೇಡಿಕೆಯಾಗಬಹುದು ಎಂದು ಅನ್ನಿಸುವುದು.

5–30 P.M.

ಈ ಮಾತನ್ನು ನಾನು ಅತ್ಯಂತ ವಿಷಾದದಿಂದ ಹೇಳಬೇಕಾಗಿದೆ. ಕಾವೇರಿ ನದಿ ನೀರಾವರಿ ಯೋಜನೆಯನ್ನು ಇವತ್ತು ಅವಶ್ಯವಾಗಿ ಮಾಡಬೇಕಾಗಿದೆ. ಅದೇ ರೀತಿ ಕೃಷ್ಣಾ ಮತ್ತು ಗೋದಾವರಿ ಯೋಜನೆಗಳನ್ನೂ ಗಮನದಲ್ಲಿ ಇಡಬೇಕಾಗಿದೆ. ನಮ್ಮ ರಾಜ್ಯದ ರೈತರ ಆರ್ಥಿಕಾಭಿವೃದ್ಧಿಯಾಗಿ ಆಹಾರದ ಸಮಸ್ಯೆ ನಿವಾರಣೆಯಾಗಬೇಕಾಗಿರುವಾಗ ಸಾಕಾದಷ್ಟು ಹಣವನ್ನು ಈ 20 ವರ್ಷಗಳಲ್ಲಿ ಪೂರೈಸದೇ ಇರುವಾಗ 5ನೇ ಆರ್ಥಿಕ ಆಯೋಗದವರು ನಮ್ಮ ರಾಜ್ಯದ ಬೊಕ್ಕಸಕ್ಕೆ ಬರಬೇಕಾದಷ್ಟು ಹಣವನ್ನು ಅಲ್ಲಸಲ್ಲದ ಅಂಕಿಅಂಶಗಳ ಆಧಾರದಮೇಲೆ ಅದನ್ನೇ ಆಧಾರವಾಗಿಟ್ಟುಕೊಂಡು ಕೊಡದೇ ಬಹಳ ಅನ್ಯಾಯ ಮಾಡಿದ್ದಾರೆ. ಅವರ ಅವಾರ್ಡ್‌ನ್ನು ಕೇಂದ್ರಸರ್ಕಾರದವರು ಸ್ವೀಕಾರ ಮಾಡಿದ್ದಾರೆ. ಆದರೂ ನಮ್ಮ ರಾಜ್ಯ ಸರ್ಕಾರದವರು ಸಾಕಾದಷ್ಟು ಹಣವನ್ನು ಒದಗಿಸಿಕೊಡಬೇಕೆಂದು ಒತ್ತಾಯ ಮಾಡುತ್ತಾ ಇದ್ದಾರೆ. ಬೇಕೆಂದು ಕೇಳಿದರೆ ಕೊಡುವಂತಹ ಕಾಲ ಹೋಯಿತು, ಆ ಸೌಹಾರ್ದತೆ ಇವತ್ತು ರಾಜ್ಯ ಮತ್ತು ಕೇಂದ್ರಸರ್ಕಾರದಲ್ಲಿ ಕಾಣುತ್ತಿಲ್ಲ. ಕೇರಳ ಸರ್ಕಾರದವರು ಈಗಾಗಲೇ ಕೇಂದ್ರಸರ್ಕಾರದ ಮೇಲೆ ಒಂದು ಒತ್ತಾಯ ತಂದಿದ್ದಾರೆ, ಅದರಂತೆ ಮದ್ರಾಸ್ ಸರ್ಕಾರದವರೂ ಕೂಡ ಪ್ರತಿಭಟನೆ ಮಾಡಿದ್ದಾರೆ. ನಮ್ಮ ರಾಜ್ಯಸರ್ಕಾರದವರು ನಮ್ಮ ಉಭಯ ಸದನಗಳ ಬೆಂಬಲದಿಂದ, ಸೂಕ್ತವಾದ ರೀತಿಯಲ್ಲಿ ಒತ್ತಾಯ ಮಾಡಬೇಕು, ಪ್ರಸಂಗ ಬಿದ್ದರೆ ಹೋರಾಟಕ್ಕಾದರೂ ತಯಾರಾಗಿರಬೇಕೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಡಿಮ್ಯಾಂಡ್ ವಿಚಾರದಲ್ಲಿ ಹೇಳಬೇಕಾದರೆ ಸಚಿವರು ಬೇಡಿಕೆ ಬಂದ ಬಂದಹಾಗೆ ಹಣ ಕೇಳುತ್ತಾ ಇರುವುದನ್ನು ನೋಡಿದರೆ ತಜ್ಞರು ಇವರ ಕೈ ಕೂಸಾಗಿರುವ ಹಾಗೆ ಕಾಣುತ್ತದೆ. ಲೆಕ್ಕಾಚಾರ ಆಡಳಿತದಲ್ಲಿ ಇಲ್ಲ, ಇಂತಹ ಒಂದು ದೋಷ ಕಂಡುಬರುತ್ತಿದೆ. ಈ ರೀತಿ ಪದೇ ಪದೇ ಹೆಚ್ಚುವರಿ ಬೇಡಿಕೆಯನ್ನು ತರುವುದರ ಬದಲು ಕೇಂದ್ರದಿಂದ ನಮಗೆ ನ್ಯಾಯವಾಗಿ ಬರಬೇಕಾದ ಹಣವನ್ನು ಪಡೆಯಲಿಕ್ಕೆ ಮನಸ್ಸು ಮಾಡಬೇಕೆಂದು ಹೇಳುತ್ತೇನೆ.

ಶ್ರೀಮತಿ ಲಕ್ಷಮ್ಮನವರು ಹೇಳಿದಹಾಗೆ ನಮ್ಮ ಮಕ್ಕಳು ವಿದ್ಯಾವಂತರಾಗಿ ನಿರುದ್ಯೋಗಿಗಳಾಗುವಂತಹ ಒಂದು ಪ್ರಸಂಗ ಈಗ ಒದಗಿಬಂದಿದೆ. ಅವರಿಗೆ ಯಾವುದಾದರೂ ಉದ್ಯೋಗ ದೊರೆಯದಿದ್ದರೆ ಮದುವೆಗೆ ತಯಾರಾದಂತಹ ಹೆಣ್ಣುಗಳು ಸಿಕ್ಕುವುದೂ ಕೂಡ ಕಷ್ಟವಾಗುತ್ತದೆ. ಹೀಗಾದರೆ ವಿದ್ಯಾವಂತ ನಿರುದ್ಯೋಗಿಗಳ ಪಾಡೇನು? ಆದ್ದರಿಂದ ಈ ದಿಶೆಯಲ್ಲಿ ಸರ್ಕಾರದವರು ಒಂದು ಸರಿಯಾದ ಯೋಜನೆಯನ್ನು ಮಾಡಬೇಕು ಮತ್ತು ಅತ್ಯಾವಶ್ಯಕವಾದ ನೀರಾವರಿ ಯೋಜನೆಗಳನ್ನು ತ್ವರಿತಗತಿಯಿಂದ ಮುಂದುವರಿಸಿ 4ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಅವುಗಳನ್ನೆಲ್ಲಾ ಮುಕ್ತಾಯಗೊಳಿಸಲು ಪ್ರಯತ್ನ ಮಾಡಬೇಕೆಂದು ಹೇಳಿ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಸೂರ್ಯನಾರಾಯಣ ಅಡಿಗ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಮಾನ್ಯ ಆರ್ಥಿಕ ಮಂತ್ರಿಗಳು ತಂದಿರುವಂತಹ ಈ ಮಸೂದೆಗೆ ನನ್ನ ಬೆಂಬಲ ಸೂಚಿಸಿ ಕೆಲವು ಮಾತುಗಳನ್ನು ಆಡಲಿಚ್ಛಿಸುತ್ತೇನೆ. ಆರಂಭದಲ್ಲಿ ಗಾಂಧಿ ಅವರ ಹೆಸರಿನಲ್ಲಿ ಆಡಳಿತ ನಡೆಸುವಂತಹವರು ಗವರ್ನರ್‌ರವರ ಮನೆಗೆ ಆಡಂಬರ ಮಾಡಿ ಹಣ ಖರ್ಚು ಮಾಡುತ್ತಿದ್ದೀರಿ ಅಂತ ಹೇಳಿ ಹಿರಿಯ ಶಾಸಕರಾದ ವೆಂಕಟಪ್ಪನವರು ಪ್ರಶ್ನಿಸಿದ ವಿಷಯದಲ್ಲಿ ಎರಡು ಮಾತುಗಳನ್ನು ಹೇಳುತ್ತೇನೆ. ಗವರ್ನರ್‌ರವರ ಮನೆಗೆ ಆಡಂಬರ ಏಕೆ ಮಾಡಿದಿರಿ ? ಸ್ಥಳಾವಕಾಶ ಕಡಮೆ ಆಯಿತು ಅಂತ ಹೇಳಿ ತಿಳಿಸಿದ್ದೀರಿ. ಗವರ್ನರನ್ನು ನೋಡುವುದಕ್ಕೆ ಬರುವವರಿಗೆ ಅನುಕೂಲ ಒದಗಿಸಿಕೊಡಬೇಕು, ಅದಕ್ಕೋಸ್ಕರ ಹಣ ಖರ್ಚು ಮಾಡಬೇಕಾಗುತ್ತದೆ. ಹಾಗಾದರೆ ವಿಧಾನ ಸೌಧವನ್ನು ಇಷ್ಟು ದೊಡ್ಡದಾಗಿ ಏಕೆ ಕಟ್ಟಬೇಕಾಗಿತ್ತು ! ಅದಕ್ಕೂ ಒಂದು ಕಾರಣ ಇದೆ. ಬಡವರ ಮನೆಯ ಹಾಗೆ ಮಾಡಬಹುದಾಗಿತ್ತು. ಆಯಿತು ಒಂದು ಭವ್ಯವಾದ ಭವನ ಕಟ್ಟಿದಮೇಲೆ ಇಂತಹ ಪೀಠೋಪಕರಣಗಳೇಕೆ ? ಬರೀ ಹಲಗೆ ಹಾಕಬಹುದಲ್ಲಾ ! ಅದರೂ ಈ ರೀತಿ ಮಾಡಿದ್ದಾರೆ ಅಂದ ಮಾತ್ರಕ್ಕೆ ಬರುತ್ತಾಇದ್ದೇನೆ.

ಡಿಮ್ಯಾಂಡ್ ನಂಬರ್ 10ರಲ್ಲಿ ನೀರಿನ ವಿವಾದಕ್ಕೆ ಸಂಬಂಧಪಟ್ಟಂತೆ ಕೆಲವು ಜನ ವಕೀಲರನ್ನು ಸರ್ಕಾರ ನೇಮಕ ಮಾಡಿದೆ. ಒಬ್ಬರು ನಿವೃತ್ತ ಹೈಕೋರ್ಟ್ ಜಡ್ಜರು ಅವರನ್ನು ಪಬ್ಲಿಕ್‌ವರ್ಕ್ಸ್ ಅಂಡ್ ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟಿನಲ್ಲಿ ಸ್ಪೆಷಲ್ ಆಫೀಸರಾಗಿ ತಿಂಗಳಿಗೆ 3,500 ರೂಪಾಯಿಗಳ ಸಂಬಳದಮೇಲೆ ಒಂದು ವರ್ಷದ ಅವಧಿಯವರೆಗೆ ನೇಮಕ ಮಾಡಿದ್ದೀರಿ. ಇನ್ನೊಬ್ಬರು ಟೆಕ್ನಿಕಲ್ ಕನ್‌ಸಲ್‌ಟೆಂಟರನ್ನು ನೇಮಕ ಮಾಡಿದ್ದೀರಿ. ಇದಲ್ಲದೇ ಒಬ್ಬರು ಲೀಗಲ್ ಕೌನ್ಸಿಲರ್ ಅಂತ ಹೇಳಿ ನೇಮಕ ಮಾಡಿದ್ದಾರೆ, ದಿನಕ್ಕೆ ಅವರಿಗೆ ಎರಡೂವರೆ ಸಾವಿರ ರೂಪಾಯಿ ಹೆಡ್‌ಕ್ವಾರ್ಟರ್ಸ್ ಮದ್ರಾಸ್‌ನಿಂದ ಹೊರಗೆ ಹೋದಾಗ ಮತ್ತು 25 ಸಾವಿರ ರೂಪಾಯಿ ರೀಡಿಂಗ್ ಫೀ ಅಂತ ಹೇಳಿದ್ದೀರಿ. ಅವರು ಎಂ. ಕೆ. ನಂಬಿಯಾರ್‌ರವರು ಇರಬಹುದು. ಅವರ ಹಾಗೇ ಇನ್ನು ಇಬ್ಬರು ವಕೀಲರು ವಾದಿಸಲಿಕ್ಕೆ ಅವರಿಗೆ ಸಹಾಯ ಕೊಡಲಿಕ್ಕೆ ಇದ್ದಾರೆ, ಅವರು ಯಾರು ಅನ್ನುವಂತಹ ಪ್ರಶ್ನೆ ಬರುತ್ತದೆ. ಒಬ್ಬರಿಗೆ ಟ್ರಿಬ್ಯೂನಲ್ ಮುಂದೆ ಅಪಿಯರ್ ಆದಾಗ ದಿನ ಒಂದಕ್ಕೆ 400 ರೂಪಾಯಿ, ಇವತ್ತು ಸುಪ್ರೀಂ ಕೋರ್ಟ್ ಅಡ್ವೋಕೇಟು, ಮೇನ್ ಲೀಗಲ್ ಕೌನ್ಸಿಲ್‌ಗೆ ಸಹಾಯಕರು. ಇನ್ನೊಬ್ಬರು ಮದ್ರಾಸಿನ ಅಡ್ವೋಕೇಟರು, ಇವರೂ ಕೂಡ ಮೇನ್ ಲೀಗಲ್ ಕೌನ್ಸಿಲ್‌ಗೆ ಸಹಾಯಕರು, ಇವರಿಗೆ ರೀಡಿಂಗ್ ಮತ್ತು ಇತರ ಕೆಲಸಗಳಿಗೆ 2 ಸಾವಿರ ರೂಪಾಯಿ ಫೀಜು, ಮದ್ರಾಸಿನಿಂದ ಹೊರಗೆ ಹೋದಾಗ ದಿನ ಒಂದಕ್ಕೆ 500 ರೂಪಾಯಿ. ಇದನ್ನು ನೋಡಿದರೆ ಪೆಟ್ರನೇಜ್ ಮೇಲೆ ಯಾರಿಗೋ ಸಹಾಯ ಮಾಡುವುದಕ್ಕೆ ಈ ರೀತಿಯಾಗೆಲ್ಲಾ ಮಾಡಿದಂತೆ ಭಾಸವಾಗುತ್ತಾಇದೆ. ಈ ರೀತಿಯಿಂದ ಮಾಡುವುದು ಸರಿಯಲ್ಲ, ನಮ್ಮ ಕೇಸಿಗೆ ಇದರಿಂದ ಸಹಾಯ ಸಿಕ್ಕುವಂತಹ ಸಂಭವ ಇಲ್ಲ ಎಂದು ನನಗೆ ಅನಿಸುತ್ತದೆ. ಆದ್ದರಿಂದ ಸರ್ಕಾರದವರು ಇದನ್ನು ಪುನರ್ವಿಮರ್ಶೆ ಮಾಡಿ ಹಣವನ್ನು ಉಳಿಸುವಂತಹುದು ಒಳ್ಳೆಯದು ಎಂದು ಹೇಳುತ್ತೇನೆ.

ಇನ್ನು ಪಠ್ಯ ಪುಸ್ತಕಗಳ ಬಗ್ಗೆ ಶ್ರೀ ಮುಕುಂದರಾಯರು ಎಲ್ಲ ವಿಚಾರಗಳನ್ನೂ ಸವಿಸ್ತಾರವಾಗಿ ಹೇಳಿದ್ದಾರೆ. ವರ್ಷಾರಂಭದಲ್ಲಿ ಶಾಲೆಗಳು ಪ್ರಾರಂಭವಾದ ಕೂಡಲೆ ಮನೆಯಲ್ಲಿ ಮಕ್ಕಳು ಪೀಡೆ ಕೊಡಲಿಕ್ಕೆ ಪ್ರಾರಂಭಮಾಡುತ್ತಾರೆ. ಕಾರಣ ಪಠ್ಯಪುಸ್ತಕ ಕಮಿಟಿಯವರು ಸಾಕಷ್ಟು ಪಠ್ಯ ಪುಸ್ತಕಗಳನ್ನು ಸಕಾಲಕ್ಕೆ ಒದಗಿಸುತ್ತಿಲ್ಲ. ನಾವು ಇಲ್ಲಿ ಬೆಂಗಳೂರಿಗೆ ಬಂದು ಸೆಂಟ್ರಲ್ ಬುಕ್ ಡಿಪೋದಲ್ಲಿ ಕೇಳಿದರೂ ನಮಗೆ ಪಠ್ಯಪುಸ್ತಕಗಳು ಸಿಕ್ಕುತ್ತಿಲ್ಲ. ಇದ್ದರೂ ನಮಗೆ ಅವರು ಕೊಡುವುದಿಲ್ಲ. ನಾವು ಇಲ್ಲಿ ಹೇಳತಕ್ಕ ಇಂಥ ವಿಚಾರಗಳನ್ನು ಸರ್ಕಾರದವರು ಕೂಡಲೆ ನೋಟ್ ಮಾಡಿಕೊಂಡು ಅವರ ಬಗ್ಗೆ ಕಾರ್ಯಕ್ರಮ ಕೈಗೊಳ್ಳುತ್ತಾರೋ ಇಲ್ಲವೋ ಅನ್ನುವ ಅನುಮಾನ ಬಂದಿದೆ. ಪಠ್ಯಪುಸ್ತಕಗಳನ್ನು ಈಗ ಸರ್ಕಾರದವರು ಮನಾಪಲಿ ಮಾಡಿಕೊಂಡಿದ್ದಾರೆ. ಆದ್ದರಿಂದ ಇವರೆಷ್ಟು ಬೇಕಾದರೂ ಪ್ರಿಂಟ್ ಮಾಡಿಸಬಹುದು. ಅವು ಈ ವರ್ಷದಲ್ಲಿ ಖರ್ಚಾಗದಿದ್ದರೆ ಮುಂದಿನ ವರ್ಷ ಖರ್ಚಾಗುತ್ತವೆ.

ಇನ್ನು ಡಿಮ್ಯಾಂಡ್ ನಂಬರ್ 54ಕ್ಕೆ ಬಂದರೆ, ಇಲ್ಲಿ ನಾವು ಮುಖ್ಯವಾಗಿ ಕಾಣತಕ್ಕ ವಿಚಾರ ಏನೆಂದರೆ ಅನೇಕ ಬಾಬುಗಳಿಗೆ ಸಾಲವನ್ನು ಕೊಟ್ಟಿದ್ದಾರೆ. ಇಲ್ಲಿ ಕಂಠೀರವ ಸ್ಟೇಡಿಯಂಗೆ 12 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿದ್ದಾರೆ. ಈ ಸ್ಟೇಡಿಯಂಗಳಿಗೆ ಸಾಲವನ್ನು ಕೊಡಬೇಡ ಎಂದು ನಾನು ಹೇಳತಕ್ಕವನಲ್ಲ. ಸ್ಟೇಟ್ ಎಯ್ಡ್ ಟು ಇಂಡಸ್ಟ್ರೀಸ್ ಪರಿಮಿತಿಯಲ್ಲಿ ಬರತಕ್ಕ ಅನೇಕ ಬಾಬುಗಳಿಗೆ ಸಾಲವನ್ನು ಕೊಟ್ಟಿದ್ದಾರೆ. ಆ ಸಂಬಂಧದಲ್ಲಿ ಸರ್ಕಾರದವರೇನು ಎಚ್ಚರಿಕೆ ವಹಿಸಬೇಕು ಅನ್ನುವುದನ್ನಾಗಲೇ ನಾನು ಹೇಳಿದ್ದೇನೆ. ನಾವು ಯಾವುದೇ ಒಂದು ಸಂಸ್ಥೆಗೆ

ಸಾಲವನ್ನು ಕೊಡಬೇಕಾದರೆ ಅದಕ್ಕೆ ಏನು ಆಸ್ತಿಯಿದೆ, ಅದಕ್ಕೆ ಸಾಲವನ್ನು ತೀರಿಸತಕ್ಕ ಶಕ್ತಿ ಇದೆಯೇ ಎಂಬುದನ್ನು ನೋಡಬೇಕು. ಕೆಲವು ಫಿಲಂ ಪ್ರೊಡಕ್ಷನ್ ಸಂಸ್ಥೆಗಳಿಗೂ ಸಾಲವನ್ನು ಕೊಟ್ಟಿದ್ದಾರೆ. ಆದರೆ ಅವು ಲಾಭ ಗಳಿಸತಕ್ಕ ಸ್ಥಿತಿಯಲ್ಲಿ ಇವೆಯೇ ಎಂಬುದನ್ನು ನೋಡದೆ ಸಾಲ ಕೊಡುವುದು ಅಷ್ಟು ಸಾಧುವಾದ್ದಲ್ಲ. ಅಲ್ಲದೆ ನಾವು ಕೊಡತಕ್ಕ ಸಾಲಕ್ಕೆ ಅಲ್ಲಿ ಸಾಕಷ್ಟು ಸೆಕ್ಯೂರ್ಟಿ ಇದೆಯೇ ಎಂಬುದನ್ನು ನೋಡಬೇಕು. ಆದರೆ ಇಂಥ ಸಾಲದ ರೂಪದಲ್ಲಿ ಸಹಾಯವನ್ನು ನೀಡುವುದಾದರೂ ಸರ್ಕಾರದವರು ಎಂಥವರಿಗೆ ಆ ಸಾಲ ನೀಡುತ್ತಾರೆಂದರೆ ಒಳ್ಳೆ ಶ್ರೀಮಂತರಾಗಿರತ್ಕವರಿಗೇ ನೋಡಿ ಸಹಾಯ ಮಾಡುತ್ತಾರೆ. ಹಾಗಲ್ಲದೆ ಸಾಮಾನ್ಯ ಮನುಷ್ಯನಿಗೆ ಸತ್ಯ ಧರ್ಮಗಳಿಂದ ನಡೆಯುತಕ್ಕ ಮನುಷ್ಯನಿಗೆ ಸಹಾಯ ಸಿಕ್ಕುತ್ತಿಲ್ಲ. ಈ ದಿವಸ ನಮ್ಮಲ್ಲಿ ಪಕ್ಷಿರಾಜ ಸ್ಟುಡಿಯೋ ಮತ್ತು ಹಾಸನದಲ್ಲಿ ಬಾಲಕೃಷ್ಣ ಅಭಿಮಾನ ಸ್ಟುಡಿಯೋ ಇವೆಲ್ಲಾ ಇವೆ. ಈ ಬಾಲಕೃಷ್ಣ ಅಭಿಮಾನ ಸ್ಟುಡಿಯೋ ಪ್ರೊಪ್ರೈಟರ್ ಬಹಳ ನ್ಯಾಯವಂತ-ಪ್ರಾಮಾಣಿಕ. ಇವನು ಒಬ್ಬೊಬ್ಬರಿಂದಲೂ 100 ರೂಪಾಯಿಗಳ ಷೇರನ್ನು ಕಲೆಕ್ಟ್ ಮಾಡಿ ಫಿಲಂ ಪ್ರಡ್ಯೂಸ್ ಮಾಡುತ್ತಿದ್ದಾನೆ. ಅಂಥ ಬಡವನಿಗೆ ಸಹಾಯ ಸಿಕ್ಕುತ್ತಿಲ್ಲ.

ಇನ್ನು ಸೊಸೈಟಿಗಳ ವಿಚಾರಕ್ಕೆ ಬಂದರೆ ಇಲ್ಲಿಯೂ ಅಷ್ಟೇ. ಸಾಲ ಕೊಡತಕ್ಕ ಪ್ರತಿಯೊಂದು ಸಂದರ್ಭದಲ್ಲೂ ಅದರ ಯೋಗ್ಯತೆಯನ್ನು ನೋಡಿ ಸಾಲ ಮಂಜೂರು ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಸರ್ಕಾರ ಮೀನುಗಾರಿಕೆ ಒಂದು ಐಸ್ ಪ್ಲಾಂಟನ್ನು ತರಲು ಸಾಲ ನೀಡಿದೆ. ಅಂಥ ಒಂದು ಐಸ್‌ಪ್ಲಾಂಟನ್ನು ತಂದು ಮೀನುಗಾರಿಕೆ ನಡೆಸುವುದಕ್ಕೆ ಯಾರಿಗೆ ಸಾಧ್ಯವಿರಲಿಲ್ಲವೋ ಅಂಥವರಿಗೆ ಈ ಸಾಲ ಕೊಟ್ಟಿದ್ದರೆ ಅದನ್ನು ನಾನು ಬೇಡವೆನ್ನುತ್ತಿರಲಿಲ್ಲ. ಆದರೆ ಆ ಸಾಲವನ್ನು ಒಬ್ಬ ಉಳ್ಳಾಳದಲ್ಲಿರತಕ್ಕ ಶ್ರೀಮಂತನಿಗೆ ಕೊಟ್ಟಿದ್ದಾರೆ. ಅಷ್ಟೇ ಅಲ್ಲ. ಆತನಿಗೆ ಮೀನು ವ್ಯಾಪಾರ ಏನೆಂಬುದೇ ಗೊತ್ತಿಲ್ಲ. ಹೀಗೆ ಅತಿ ಶ್ರೀಮಂತರಿಗೇ ಈ ಸಹಾಯಗಳೆಲ್ಲಾ ದೊರೆತಪಕ್ಷದಲ್ಲಿ ಇನ್ನು ನಿಜವಾಗಿಯೂ ಬಡವನಾಗಿ ಆ ಪ್ರೊಫೆಷನ್ನಿನಲ್ಲಿರತಕ್ಕ ವ್ಯಕ್ತಿ ಸಹಾಯಕ್ಕೆ ಎಲ್ಲಿಗೆ ಹೋಗಬೇಕು? ಆ ಫಿಲಂ ಕಂಪೆನಿಗಳಿಗೆ ಸಾಲ ಕೊಡತಕ್ಕ ವಿಚಾರದಲ್ಲೂ ಹೀಗೇ ಮಾಡಿದ್ದಾರೆ. ಆದರೆ ಸ್ಟೇಟ್ ಎಯ್ಡ್ ಟು ಇಂಡಸ್ಟ್ರೀಸ್ ಬಾಬಿನಲ್ಲಿ ಸ್ಟೇಡಿಯಂ ಕಟ್ಟುವುದಕ್ಕೆ ಸಾಲ ಕೊಟ್ಟಿರತಕ್ಕದ್ದು ಸರಿಯಲ್ಲ. ಇದಕ್ಕೆ ಸಾಲ ಕೊಡತಕ್ಕ ಅವಶ್ಯಕತೆಯಿರಲಿಲ್ಲ ಎಂದು ಹೇಳುತ್ತೇನೆ. ಇನ್ನು ಹುಬ್ಬಳ್ಳಿ ಸೊಸೈಟಿ ಒಂದಕ್ಕೆ ಸಾಲ ಕೊಟ್ಟಿದ್ದಾರೆ. ಈ ಸಾಲ ಹಿಂದಕ್ಕೆ ಬರಲು ಏನು ರಹಾ ಇದೆ ಎಂಬುದನ್ನು ನೋಡಿ ಕೊಡಲಾಗಿದೆಯೇ ಎಂದು ಕೇಳುತ್ತೇನೆ?

ಇನ್ನು ವಿಜ್ಞಾನ ಪ್ರಪಂಚ ಎಂಬ ಪುಸ್ತಕವನ್ನು ಪ್ರಿಂಟ್ ಮಾಡಿಸತಕ್ಕ ಬಗ್ಗೆ ಒಂದು ಕೋಆಪರೇಟೀವ್ ಸೊಸೈಟಿಯವರಿಗೆ 9 ಲಕ್ಷ ರೂಪಾಯಿಗಳನ್ನು ಸಾಲ-ಕೊಟ್ಟಿದ್ದಾರೆ. ಹೀಗೆ ಸಾಲವನ್ನು ಕೊಡತಕ್ಕ ಕಾಲದಲ್ಲಿ ಸರ್ಕಾರದವರು ಆಲೋಚನೆ ಮಾಡಿ ಸಾಲಗಳನ್ನು ಕೊಡುತ್ತಿರುವಂತೆ ಕಂಡುಬರುತ್ತಿಲ್ಲ. ಹಿಂದೆ ಪದ್ಮಭೂಷಣ ಶಿವರಾಮ ಕಾರಂತರು ಮೊಟ್ಟಮೊದಲನೆಯದಾಗಿ ಬಾಲ ಪ್ರಪಂಚ ಎಂಬ ಪುಸ್ತಕವನ್ನು ಬರೆದರು. ಅವರಿಗೆ ಯಾರೂ ಸಹಾಯವನ್ನು ಮಾಡಲಿಲ್ಲ. ಪುಸ್ತಕ ಬೇಕಾದವರು ದುಡ್ಡನ್ನು ಕೊಟ್ಟು ಆ ಪುಸ್ತಕವನ್ನು ಕೊಂಡುಕೊಳ್ಳುತ್ತಾರೆ. ಆದರೆ ಇಲ್ಲಿಯೂ ಅಷ್ಟು ಪುಸ್ತಕವನ್ನು ಪ್ರಿಂಟ್ ಮಾಡುವುದಕ್ಕೆ ಸಾಲಕೊಡತಕ್ಕದ್ದು ಸರಿಯಲ್ಲ. ಸರ್ಕಾರದವರ ಉದ್ದೇಶವೇನೋ ಒಳ್ಳೆಯದಿರಬಹುದು. ಆದರೆ ಅರ್ಹರಾದವರಿಗೆ ಸಹಾಯ ದೊರೆಯಬೇಕೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri JIVRAJ HIRACHAND SHAH (Legislative Assembly Constituency).—Sir, I wholeheartedly support this Bill because a major portion of the supplementary demands represent only book adjustment and does not involve any outgo of cash. All these items of book adjustment were not contemplated at the time of framing the budget. Whenever the Government undertake any New Service and draw money from the Consolidated Fund of the State, it is necessary for the Government to come before the House with supplementary demands for making the necessary book adjustment for reappropriation.

Our Hon'ble Finance Minister is an expert, he is a scholar in Economics and he does things in a proper way. I congratulate him for his efficient work.

(SRI JEEVARAJ HIRACHAND SHAH)

Our Government is very liberal in giving loans to industries, electricity undertakings, etc. They have given loan to M. S. K. Mills which has spent One crore and thirty lakhs of rupees so far—Rs. 50 lakhs towards new machinery. This item has come before this House as a 'New Service'. I want to know the progress made in the M. S. K. Mills so far. Out of Rs. 162 lakhs given to this Mill, Rs. 90 lakhs is as equity capital and the remaining is as loan. I want to know the steps taken by this Mill to make good the loss, and whether there is any future prospect for these Mills.

I congratulate the Government for their enthusiasm in the development of education, agriculture, etc.

Coming to co-operatives, I request the Hon'ble Minister for Co-operation to have strict control over the Co-operative marketing societies, and I hope our Hon'ble Finance Minister will look into this matter very carefully.

With regard to 'Vishwakosha', I suggest that the 'Vishwakosha' work should be entrusted to the University.

With these few words, I thank the Chair.

† ಶ್ರೀ ಎ. ಕೆ. ಸುಬ್ಬಯ್ಯ (ಪದವೀಧರರ ಕ್ಷೇತ್ರ). —ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಅರ್ಥ ಸಚಿವರಾದಂಥ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಈ ಸದನದ ಮುಂದೆ ಮಂಡಿಸಿರತಕ್ಕ ಹಣ ವಿನಿಯೋಗದ ಮಸೂದೆಯನ್ನು ಒಪ್ಪಲಿಕ್ಕೆ ಯಾವ ದಿಕ್ಕಿನಿಂದ ನೋಡಿದರೂ ನನಗೆ ಸಾಧ್ಯ ವಾಗುತ್ತಾ ಇಲ್ಲ. ಈ ಸದನದ ಅನೇಕ ಮಾನ್ಯ ಸದಸ್ಯರು ಮಾತನಾಡುತ್ತಾ ಅದನ್ನು ಸ್ವಾಗತಿಸಿದರು. ಅವರು ಮಾತನಾಡಿದ್ದು ನೋಡಿದರೆ ಕೇವಲ ಏನೋ ಒಂದು ರೀತಿಯಿಂದ ಸ್ವಾಗತಿಸಿದ್ದಾರೆಯೇ ವಿನಹ ನಿಜವಾಗಿ ಸರಿಯಾದ ರೀತಿಯಲ್ಲಿ ಸ್ವಾಗತಿಸಲಿಲ್ಲವೆಂದು ನಾನು ಅರ್ಥಮಾಡಿಕೊಂಡಿದ್ದೇನೆ. ಇವತ್ತು ನಮ್ಮ ಮುಂದೆ 39 ಕೋಟಿ ರೂಪಾಯಿಗಳ ವಿನಿಯೋಗದ ಮಸೂದೆ ಏನಿದೆಯೋ ಅದು ಹೆಚ್ಚುವರಿ ಬೇಡಿಕೆಯಾಗಿ ಇದೆ. ಆ ರೀತಿ ಹೆಚ್ಚುವರಿ ಬೇಡಿಕೆಯನ್ನು ಇಲ್ಲಿ ತರುವುದಕ್ಕೆ ನಮ್ಮ ರಾಜ್ಯಾಂಗದ ಆರ್ಟಿಕಲ್ 205 ರಲ್ಲಿ ಅವಕಾಶವಿದೆ. ಆರ್ಟಿಕಲ್ 205ನ್ನು ನೋಡಿದರೆ ಅದರಲ್ಲಿ ಏನಿದೆಯೆಂದರೆ ಎಲ್ಲೆಲ್ಲಿ ಅನಿವಾರ್ಯವಾಗಿ ಸರ್ಕಾರಕ್ಕೆ ಮುಂಚೆಯೇ ಅದನ್ನು ಆಲೋಚನೆಮಾಡಿ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗದ ಸಂದರ್ಭದಲ್ಲಿ ಹೆಚ್ಚುವರಿ ಖರ್ಚುಮಾಡಬೇಕಾಗಿ ಬರುತ್ತದೆ. ಅಂತಹ ಸಂದರ್ಭದಲ್ಲಿ ಮಾತ್ರ ಹೆಚ್ಚುವರಿ ಬೇಡಿಕೆಯನ್ನು ಉಭಯ ಸದನಗಳಲ್ಲಿ ಮಂಡಿಸಲು ಅವಕಾಶವಿದೆ. ಈ ಬೇಡಿಕೆಯಲ್ಲಿ ಇಂಟ್ರಡಕ್ಟರಿ ಮೆಮೊರ್ಯಾಂಡಂನಲ್ಲಿ ಹೀಗೆ ಹೇಳಿದ್ದಾರೆ :

"Article 205 of the Constitution of India provides that if the amount authorised by the Appropriation Act to be expended for a Particular Service for the current year is *found to be insufficient* for the purpose of that year."

ಹೀಗೆ ಇನ್‌ಸಫಿಷಿಯನ್ಸಿ ಇದೆಯೆಂದು ಹೆಚ್ಚುವರಿ ಬೇಡಿಕೆಗಳ ವಿಚಾರ ಅನೇಕಸಾರಿ ಬರುವುದಿಲ್ಲ. ನ್ಯೂ ಸರ್ವಿಸ್ ಕೆಳಗೆ ಯಾವ ರೀತಿ ಖರ್ಚು ಮಾಡಬೇಕೆಂದರೆ "when a need has arisen during the *current financial year* for the supplementary or additional expenditure upon some new service not contemplated in the Annual Financial Statement for that year." ಈ ಸಂದರ್ಭದಲ್ಲಿಯೂ ಕೂಡ ಹೆಚ್ಚುವರಿ ಬೇಡಿಕೆಯನ್ನು ತರುವುದಕ್ಕೆ ಸಾಧ್ಯವಿದೆ. ಆದರೆ ಕಳೆದ ಮಾರ್ಚ್ ತಿಂಗಳಲ್ಲಿ ನಮ್ಮ ಮುಂಗಡ ಪತ್ರವನ್ನು ನಾವು ಅಂಗೀಕರಿಸಿದ್ದೇವೆ. ಮಾರ್ಚ್ ತಿಂಗಳಲ್ಲಿ ಮುಂಗಡ ಪತ್ರವನ್ನು ಅಂಗೀಕರಿಸಿದಾಗ ಈ

ಪೂರಕ ಬೇಡಿಕೆಯಲ್ಲಿ ಅಡಕವಾಗಿರತಕ್ಕ ಅನೇಕ ವಿಷಯಗಳನ್ನು ಅದರಲ್ಲಿ ಸೇರಿಸಬಹುದಾಗಿತ್ತು. ಆಗಲೇ ಈ ಬೇಡಿಕೆಯನ್ನು ಕೂಲಂಕಷವಾಗಿ ಮಂಡಿಸಿ ಈ ಸಭೆಯಲ್ಲಿ ಚರ್ಚೆಗೆ ಇಡುವುದಕ್ಕೆ ಅವಕಾಶವಾಗುತ್ತಿತ್ತು.

6-00 P.M.

Deputation of Secretariat Officials to Bangalore University

51. Sri G. V. ANJANAPPA.—(Graduates' Constituency).—

Will the Minister for Education be pleased to state.—

(*a*) the number of Secretariat officials deputed to the Bangalore University ;

(*b*) when they were deputed and the period of deputation ;

(*c*) whether they are there beyond their term ;

(*d*) if so, the reason for not calling them back to their original place ;

(*e*) the compelling reasons for their over-stay ?

SRI N. M. KOTRABASAIAH SOGI (Deputy Minister for Education).—

(*a*) Six.

(*b*)

	Sriyuths	*Desigaation*	*Period of deputation*
1.	S. S. Patil ...	Section Officer ...	8-10-1964 to 15-7-1970
2.	G. Nanjappa ...	do ...	29-7-1964 to 31-7-1969
3.	S. S. Kulkarni ...	Sr. Assistant ...	21-7-1964 to 15-7-1970
4.	S. R. Nayak ...	do ...	29-7-1964 to 31-7-1969
5.	P. N. Rama Iyengar	Stenographer ...	1-8-1964 to 15-7-1970
6.	K. S. Venkatachalam	Typist (now—Jr. Assistant) ...	10-7-1964 to 20-7-1968

(*c*) No.

(*d*) Does not arise.

(*e*) Does not arise.

ಶ್ರೀ ಜಿ. ವಿ. ಆಂಜನಪ್ಪ.—ವಿಶ್ವವಿದ್ಯಾನಿಲಯಕ್ಕೆ ಎರವಲಾಗಿ ಕೊಟ್ಟಿದ್ದ ಜನರನ್ನು ಎಷ್ಟು ಅವಧಿಯತನಕ ಎಂದು ಮೊದಲು ನಿಗದಿ ಮಾಡಲಾಗಿತ್ತು ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮೊದಲು ಮೂರು ವರ್ಷಗಳಿಗೆಂದು ನಿಗದಿ ಮಾಡಲಾಗಿತ್ತು. ಈಗಾಗಲೇ ಯಾರ ಅವಧಿ ಪೂರೈಸಿದೆಯೋ ಅಂಥವರಲ್ಲಿ ಕೆಲವರು ವಾಪಸ್ ಬಂದಿದ್ದಾರೆ.

ಶ್ರೀ ಜಿ. ವಿ. ಆಂಜನಪ್ಪ.—ಇಲ್ಲಿ ಕೆಲವರ ಟರ್ಮನ್ನು ಮುಂದುವರಿಸಲಾಗಿದೆ ಎಂದು ಹೇಳಿರುವುದರ ಬಗ್ಗೆ ಇದ್ದ ಅಂಥ ಪ್ರಬಲವಾದ ಕಾರಣಗಳೇನು ?

---

†Indicates that the remarks or speeches have not been revised by the member concerned.

Sri N. M. KOTRABASAIAH SOGI.—Most of them have been repatriated to Government after their deputation period. I think the term of two or three Officers has been extended up to 15th July 1970 as per the request of the University.

ಶ್ರೀ ಜಿ. ವಿ. ಅಂಜನಪ್ಪ.—ಹಾಗೆ ಅವರ ಸೇವೆಯನ್ನು ಮುಂದುವರಿಸಬೇಕೆಂದು ವಿಶ್ವವಿದ್ಯಾನಿಲಯದವರು ಕೇಳಿಕೊಂಡಿದ್ದರೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಹೌದು.

ಶ್ರೀ ಜಿ. ವಿ. ಅಂಜನಪ್ಪ:—ಯಾವ ಆಧಾರದಮೇಲೆ ಅವರು ಆ ಮನವಿಗಳನ್ನು ಮಾಡಿಕೊಂಡಿದ್ದರು ಎಂಬುದಕ್ಕೆ ವಿವರಗಳನ್ನು ಸಭೆಯ ಮುಂದೆ ಮಂಡಿಸುವರೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಆ ವಿವರಗಳಿಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡಲಾಗುತ್ತದೆ.

ಶ್ರೀ ಎಸ್. ಪಿ. ರಾಜಣ್ಣ.—ಟರ್ಮ್ ಮುಗಿದಿರತಕ್ಕ ಮೂರು ಜನ ಅಧಿಕಾರಿಗಳನ್ನು ವಾಪಸ್ ಕರೆಸಿಕೊಳ್ಳುವುದಕ್ಕೇನು ತೊಂದರೆ ಇದೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂಥವರನ್ನಾಗಲೇ ವಾಪಸ್ ಕರೆಸಿಕೊಂಡಿದ್ದೇವೆ.

Sri G. V. GOWDA.—If these posts are necessary, why did not the Government advise the University when they wanted their extension to sanction those posts and recruit people according to rules?

Sri N. M. KOTRABASAIAH SOGI.—When the University was newly started; they got the officials from various sources *viz.*, from Government, other Universities and other offices. These are the officials who were deputed in the beginning. Now, they have been recruiting their own personnel.

ಶ್ರೀ ಜಿ. ವಿ. ಅಂಜನಪ್ಪ.—ವಿಶ್ವವಿದ್ಯಾನಿಲಯದವರಿಗೆ ಎರವಲು ತೆಗೆದುಕೊಳ್ಳತಕ್ಕ ಪದ್ಧತಿ ಮೊದಲು ಪ್ರಾರಂಭದಲ್ಲಿ 5 ವರ್ಷಗಳಿಗೆಂದು ಪ್ರಾರಂಭವಾದದ್ದು ಇದೀಗ 50 ವರ್ಷಗಳಾದರೂ ಮುಗಿಯುವುದಿಲ್ಲ ಅಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮೊದಲು ಮೂರುವರ್ಷಗಳಿಗೆಂದು ಕೇಳಿದ್ದರು. ಅನಂತರ ಒಬ್ಬೊಬ್ಬರನ್ನು ಮತ್ತೆ ಅವರ ಸೇವೆಯನ್ನು ಮುಂದುವರಿಸುವಂತೆ ವಿಶ್ವವಿದ್ಯಾನಿಲಯದವರು ಪ್ರಾರ್ಥಿಸಿದ್ದರಿಂದ ಅವರ ಸೇವೆಯನ್ನು ಮುಂದುವರಿಸಲಾಯಿತು. ಇದರಲ್ಲಿ 50 ವರ್ಷದ ಪ್ರಶ್ನೆಯೇ ಇಲ್ಲ.

ಶ್ರೀ ಜಿ. ವಿ. ಅಂಜನಪ್ಪ.—ದಕ್ಷರಾದ ಅಧಿಕಾರಿಗಳನ್ನು ಹೀಗೆ ಎರವಲು ಕೊಟ್ಟರೆ ಇಲ್ಲಿನ ಕೆಲಸಕ್ಕೆ ಅಡಚಣೆ ಆಗುವುದಿಲ್ಲವೇ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದೂ ಕೂಡ ಬೆಳೆಯಬೇಕಾದಂಥ ಒಂದು ಸಂಸ್ಥೆ. ಅಲ್ಲಿಯೂ ಕೂಡ ದಕ್ಷರ ಅಗತ್ಯ ಅವಶ್ಯಕವಾಗಿತ್ತು. ಅದಕ್ಕಾಗಿ ಅವರ ಸೇವೆಯನ್ನು ಅವರು ಬೇಡಿದ್ದರು.

ಶ್ರೀ ಎಸ್. ಪಿ. ರಾಜಣ್ಣ.—ಈಗ ಮೂವರನ್ನು ವಾಪಸ್ಸು ತೆಗೆದುಕೊಂಡಿದ್ದೀರಿ. ಅವರ ಡೆಪ್ಯುಟೇಷನ್ ಅವಧಿ ಎಷ್ಟು ? ಮುಂದೆ ಅವರನ್ನು ಎಕ್ಸ್‌ಟೆಂಡ್ ಮಾಡುವ ವಿಷಯ ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರ ಟರ್ಮನ್ನು ಎಕ್ಸ್‌ಟೆಂಡ್ ಮಾಡಿಲ್ಲ. ಕೆಲವರು ಇನ್ನೂ ಲೀವ್‌ನಲ್ಲಿದ್ದಾರೆ.

Courses provided in the Government Sanskrit College, Bangalore

64. Sri M. G. HANDRAL (Teachers' Constituency).—

Will the Minister for Education be pleased to state:

(a) the courses provided in Government Sanskrit College, Bangalore;

(b) the number of students for each course;

(c) the staff provided for each course;

(d) the expenditure incurred annually [information from (a) to (d) may be supplied for the last three years]?

Sri N. M. KOTRABASAIAH SOGI (Deputy Minister for Education).—

(a) The information is furnished in Annexure I.

(b) The information is furnished in Annexure II.

(c) The information is furnished in Annexure III.

(d)	*1966-67*	*1967-68*	*1968-69*
Rs.	1,31,169-81	1,46,113-24	1,52,102-30

ANNEXURE I

I College Department

1 Alankara
2 Vyakarna
3 Tarka
4 Adwaita
5 Dwaita
6 Visistadwaita
7 Saktivisistadwaita
8 Jainasiddanta

II High School and Primary Department

1 Sahitya
2 Kavya
3 Primary
4 Jaina Agama (Part-time)
5 Rigveda
6 Krishna Yajurveda
7 Shukla Yajurveda
8 Samaveda

(SRI N. M. KOTRABASAIAH SOGI)

ANNEXURE II

I.			1967-68	1968-69	1969-70
1	Alankara	...	7	8	8
2	Vyakarana	...	3	6	5
3	Tarka	...	5	5	7
4	Adwaita	...	8	6	6
5	Dwaita	...	5	4	7
6	Visistadwaita	...	2	2	3
7	Saktivisistadwaita	...	2	5	6
8	Jainasiddanta	...	3	7	9
II.					
1	Sahitya	...	16	38	42
2	Kavya	...	31	17	25
3	Primary	...	57	77	33
4	Jaina Prayoga	...	26	13	13
5	Rigveda	...	27	24	26
6	Krishna Yajurveda	...	24	21	24
7	Suklayajurveda	...	15	20	19
8	Samaveda	...	5	4	5

ANNEXURE III

1 *Alankara* :				
Professor	...	1	4	4
Assistant Professor	...	3	Nil	Nil
		4		
2 *Vyakarana* :				
Professor	...	1	Nil	Nil
Assistant Professor	...	3	4	4
		4		
3 *Tarka* :				
Professor	...	1	Nil	Nil
Assistant Professor	...	2	3	3
		3		

			1967–68	*1968–69*	*1969–70*
4	*Adwaita* :				
	Professor	...	1	Nil	Nil
	Assistant Professor	...	1	2	2
			2		
5	*Dwaita :*				
	Professor	...	1	Nil	Nil
	Assistant Professor	...	1	2	2
			2		
6	*Visistadwaita* :				
	Professor	...	1	1	1
7	*Saktivisistadwaita* :				
	Professor	...	1	Nil	Nil
	Assistant Professor	...	1	2	2
			2		
8	*Jainasiddanta* :				
	Professor	...	1	Nil	Nil
	Assistant Professor	...	1	2	2
			2		
9	English Department for Sahitya, Kavya and Primay English.		3	3	3
	Teachers :				
10	Literature Assistants for Mandyama and Uttama.		2	2	2
11	Rigveda Professor	...	1	1	1
12	*Krishna Yajurveda* :				
	Professor	...	1	Nil	Nil
	Assistant Professor	...	2	3	3
			3		

(SRI N. M. KOTRABASAIAH SOGI)

			1967-68	*1968-69*	*1969 70*
13	*Sukla Yajurveda* :				
	Assistant Professor	...	2	2	2
14	*Samaveda* :				
	Professor	...	1	Nil	Nil
	Assistant Professor	...	1	2	2
			2		
15	Jainagama Part-time on Rs. 50 per month.		1	1	1
16	Yogasana Part-time on Rs. 50 per month.		1	1	1

ಶ್ರೀ ಎಂ. ಜಿ. ಹಂದ್ರಾಳ್.—ಸಂಸ್ಕೃತ ಕಾಲೇಜಿಗೆ ಈ ವರ್ಷ ಒಂದೂವರೆ ಲಕ್ಷ ರೂಪಾಯಿಗಳ ವೆಚ್ಚ ಇದೆ. ಕೋರ್ಸಸ್ ನೀವು ಏನು ಇಟ್ಟಿದ್ದೀರಿ ಅದು ಅಪೆಂಡಿಕ್ಸ್ (3) ರಲ್ಲಿ ಕೊಟ್ಟಿದ್ದೀರಿ ಮೂರು ವರ್ಷಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಏನೆಂಬುದನ್ನು ಅಪೆಂಡಿಕ್ಸ್ (2) ರಲ್ಲಿ ಕೊಟ್ಟಿದ್ದೀರಿ ಅಲಂಕಾರ ಪರೀಕ್ಷೆಗೆ 67-68ರಲ್ಲಿ 7 ವಿದ್ಯಾರ್ಥಿಗಳು 68-69ರಲ್ಲಿ 8 ವಿದ್ಯಾರ್ಥಿಗಳು 1969-70 ರಲ್ಲಿ 8 ವಿದ್ಯಾರ್ಥಿಗಳು ಇದ್ದಾರೆ. ಆದರೆ ಸಿಬ್ಬಂದಿಯನ್ನು ನೋಡಿದರೆ ಅದಕ್ಕೆ ಪ್ರೊಫೆಸರ್ ಒಬ್ಬರು, ಅಸಿಸ್ಟೆಂಟ್ ಪ್ರೊಫೆಸರ್ ಮೂವರು. ಹೀಗೆ 4 ಜನ ಉಪಾಧ್ಯಾಯರುಗಳಿದ್ದಾರೆ! ಮೂರು ವರ್ಷಗಳ ಅವಧಿಯಲ್ಲಿ 8 ಕ್ಕಿಂತ ಜಾಸ್ತಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಲ್ಲ. ಹೀಗೆ 4 ಮಂದಿ ಉಪಾಧ್ಯಾಯರನ್ನು ಕೊಟ್ಟರೆ ಸರ್ಕಾರಕ್ಕೆ ಭಾರವಾಗುವುದಿಲ್ಲವೇ? ಕೋರ್ಸಸ್ ನೋಡಿದರೆ 1 ರಿಂದ 16 ವರೆಗೆ ಇದೆ. ಸಿಬ್ಬಂದಿ ನೋಡಿದರೆ 3-4 ತರಹಗಳಿವೆ. ಆದ್ದರಿಂದ ಸಿಬ್ಬಂದಿಯನ್ನು ಕಡಿಮೆ ಮಾಡಿ ವೆಚ್ಚವನ್ನು ಕಡಿಮೆ ಮಾಡಬೇಕು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು ಮಾಡಬೇಕು. ಈ ರೀತಿಯಾಗಿ ಪರಿಶೀಲಿಸುವುದಕ್ಕೆ ಈಗ ಸರ್ಕಾರದವರು ಏನೂ ಯೋಜನೆ ಮಾಡಲಿಲ್ಲವೇ!

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರ ಸಲಹೆ ಸೂಕ್ತವಾದುದು ಸಿಬ್ಬಂದಿಯನ್ನು ಸಬ್ಜೆಕ್ಟ್‌ವೈಜ್ ನೇಮಕ ಮಾಡುತ್ತಿದ್ದೇವೆ. ಸ್ಟೂಡೆಂಟ್ಸ್‌ವೈಜ್ ಮಾಡುವುದಕ್ಕಾಗುವುದಿಲ್ಲ. ಒಂದೊಂದು ವಿಷಯದಲ್ಲಿ ಪ್ರತ್ಯೇಕ ಸಿಬ್ಬಂದಿ ಬೇಕು. ವಿದ್ಯಾರ್ಥಿಗಳ ಸಂಖ್ಯೆ ಸಾಕಷ್ಟು ಇರಲಿ, ಕಡಿಮೆ ಇರಲಿ, ಆ ತರಹ ಸಿಬ್ಬಂದಿಯನ್ನು ಕೊಟ್ಟಿದ್ದೇವೆ. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವುದರಿಂದ ನಾವೇನೂ ಮಾಡುವುದಕ್ಕಾಗುವುದಿಲ್ಲ. ಹೆಚ್ಚು ವಿದ್ಯಾರ್ಥಿಗಳನ್ನು ತರುವುದಕ್ಕೆ ಸರ್ಕಾರ ಯಾವ ರೀತಿ ಪ್ರಯತ್ನ ಮಾಡಬೇಕೋ ನನಗೆ ತಿಳಿಯುವುದಿಲ್ಲ.

ಶ್ರೀ ಎಂ. ಜಿ. ಹಂದ್ರಾಳ್.—ಒಂದೊಂದು ವಿಷಯಕ್ಕೆ ಪ್ರತ್ಯೇಕ ಸಿಬ್ಬಂದಿಬೇಕು ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಒಂದೇ ವಿಷಯವನ್ನು ಕಲಿಯತಕ್ಕ ವಿದ್ಯಾರ್ಥಿಗಳ ಸಂಖ್ಯೆಗೆ ಅದೇ ವಿಷಯದ ಪ್ರಾಧ್ಯಾಪಕರುಗಳ ಸಂಖ್ಯೆ ಜಾಸ್ತಿ ಏಕೆ? ಒಂದು ವಿಷಯಕ್ಕೆ ಇರತಕ್ಕ 7 ಜನ ವಿದ್ಯಾರ್ಥಿಗಳಿಗೆ 4 ಜನ ಉಪಾಧ್ಯಾಯರುಗಳು ಬೇಕೇ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ವಿದ್ಯಾರ್ಥಿಗಳು ಒಂದೇ ವಿಷಯವನ್ನು ಕಲಿಯುವುದಿಲ್ಲ. ಒಂದೇ ಕ್ಲಾಸಿನಲ್ಲಿ ಅನೇಕ ವಿಷಯಗಳು ಇರುತ್ತವೆ. ಆಯಾ ವಿಷಯಗಳಲ್ಲಿ ತಜ್ಞರಾದಂಥವರನ್ನು ನೇಮಿಸಬೇಕು. ವಿದ್ಯಾರ್ಥಿಗಳು 10 ಜನರಿರಲಿ ಅಥವಾ 100 ಜನರಿರಲಿ ಆ ರೀತಿಯಾಗಿ ನೇಮಿಸಬೇಕು.

ಶ್ರೀ ಎಸ್. ಪಿ. ರಾಜಣ್ಣ.—ಪ್ರೊಫೆಸರ್‌ಗೆ ಕೆಲಸವಿಲ್ಲದೇ ಇರುವಾಗ ಅಸಿಸ್ಟೆಂಟ್ ಪ್ರೊಫೆಸರನ್ನು ನೇಮಕಮಾಡುವ ಅವಶ್ಯಕತೆ ಇದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೊಗಿ.—ಕೆಲಸವಿಲ್ಲವೆಂದು ಹೇಳುವುದು ಮಾನ್ಯ ಸದಸ್ಯರ ಅಭಿಪ್ರಾಯವಿರಬಹುದು. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಎಂದು ಅವರಿಗೆ ಕೆಲಸವಿಲ್ಲವೆಂದು ಹೇಳುವ ಹಾಗೆ ಇಲ್ಲ. ಸಬ್ಜೆಕ್ಟ್ಸ್ ಇರುವ ಹಾಗೆ ಉಪಾಧ್ಯಾಯರನ್ನು ನೇಮಿಸಬೇಕಾಗುತ್ತದೆ.

ಶ್ರೀ ಎಸ್. ಪಿ. ರಾಜಣ್ಣ.—ಒಂದು ವಿಷಯಕ್ಕೆ 4 ಜನ ಸಿಬ್ಬಂದಿಯನ್ನು ಇಟ್ಟುಕೊಂಡಿದ್ದೀರಿ. ಅವರಲ್ಲಿ ಒಬ್ಬರು ಪ್ರೊಫೆಸರ್ ಮತ್ತು ಮೂವರು ಅಸಿಸ್ಟೆಂಟ್ ಪ್ರೊಫೆಸರ್ಸ್ ಅಲ್ಲಿ ಒಬ್ಬ ಲೆಕ್ಚರರ್ ಇಲ್ಲ. ಆದಕ್ಕೋಸ್ಕರ ಅವರನ್ನೂ ಸಹ ನೇಮಕ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೊಗಿ.—ಅಂತಹ ಆವಶ್ಯಕತೆ ಕಂಡುಬಂದರೆ ಅವರನ್ನೂ ಸಹ ನೇಮಕ ಮಾಡಬಹುದು. ಸದ್ಯಕ್ಕೆ ಈಗಿರುವ ಪರಿಸ್ಥಿತಿಯಲ್ಲಿ ಅಂತಹ ಅವಶ್ಯಕತೆ ಕಂಡು ಬರಲಿಲ್ಲ.

Mr. DEPUTY CHAIRMAN.—Next, question No. 81 by Sri S. D. Gaonkar. Sri M. L. Vasudeva Murthy is permitted to put the question on behalf of Sri S. D. Gaonkar.

Exploitation of ore by the Mysore Minerals, Ltd.

Sri M. L. VASUDEVA MURTHY (Nominated) [on behalf of SRI S. D. GAONKAR (Local Authorities' Constituency)].—

Will the Minister for Industries, Information and Publicity be pleased to state :—

(*a*) the area so far exploited by the Mysore Minerals Ltd., in the State and the quantity of ore produced ;

(*b*) the quantity of ore that is lying at Karwar, Yellapur and at other places unsold ;

(*c*) the shipments so far made by the Mysore Minerals Ltd., and the profits earned ?

Sri A. P. APPANNA (Deputy Minister for Industries). —

(*a*) Exploited area : 2,000 acres. Quantity produced : 1,74,'31 tonnes.

(*b*) The quantity of ore lying unsold at —

(i) Karwar Port	28,993 tons as on 30th June 1969.
(ii) Yellapur	8,052 tons as on 30th June 1969.
(iii) All other places	1,01,990 tons on 30th June 1969.

(*c*) 4,03,451 tonnes. Profits cannot be assessed as accounts are yet to be finalised.

Sri M. L. VASUDEVA MURTHY.—You have furnished the quantity of ore lying unsold. May I know the different types of ore that are lying Sir ?

Sri A. P. APPANNA.—It consists of various types of ore and the majority of it is manganese iron ore and chromite. In 1968-69 we have raised aluminium clay to 9,000 and odd tonnes, China clay to 4,000 and odd, manganese to 20,000 and odd tonnes, and iron ore in various mines about 1 lakh 13 thousand. Thus in all, we have raised 1 lakh 74 thousand tonnes.

Sri KESHAVA RAO NITTURKAR.—What is the total area that is expected to be brought under exploitation and the quantity expected to be produced ?

Sri A. P. APPANNA.—Actually there is no question of the area being exploited. We have thought of bringing under exploitation, certain areas. We are going slowly because of the fact that the Board of Mineral Development had to indulge in indiscriminate mining without considering the economics of it and they went on extending the areas and thereby incurred heavy losses. Now the Mysore Minerals and Trading Corporation is examining the areas. So far we have taken up only about 2,000 acres and the other remaining areas are being examined and if we find the other ores econmical then we will take it up.

ಶ್ರೀ ಜಿ. ವಿ. ಆಂಜನಪ್ಪ.—ತಾವು ಇಲ್ಲಿಯವರೆಗೂ ಪ್ರೊಡ್ಯೂಸ್ ಮಾಡಿರತಕ್ಕ ಓರ್ಸ್ ಒಂದು ಲಕ್ಷ 74 ಸಾವಿರ ಟನ್, ಆದರೆ ಶಿಪ್‌ಮೆಂಟ್ ಮಾಡಿರತಕ್ಕದ್ದು 4 ಲಕ್ಷ ಮೂರು ಸಾವಿರ ಟನ್ ಎಂದು ಹೇಳಿದ್ದೀರಿ. ಎಕ್ಸ್‌ಪ್ಲಾಯಿಟ್ ಮಾಡಿದ್ದಕ್ಕಿಂತ ಹೆಚ್ಚು ಶಿಪ್‌ಮೆಂಟ್ ಆಗಿದೆ. ಇದಕ್ಕೆ ಕಾರಣವೇನು ?

Sri A. P. APPANNA.—Actually the Mysore Minerals produced 1,74,000 tonnes. But when Mysore Minerals Trading Corporation was formed the assets of the B.M.D. amounting to Rs. 65 lakhs were also transferred to Mysore Minerals Trading Company. Even to-day after clearing all the assets the quantity that is still to be sold is to the extent of 3 lakhs. The stocks that have been accumulated is still there which we are trying to dispose of.

ಶ್ರೀ ಜಿ. ವಿ. ಆಂಜನಪ್ಪ.—ಈಗ ಬಂದರಲ್ಲಿ ಇರತಕ್ಕಂತದ್ದು ಒಂದು ಲಕ್ಷ 37 ಸಾವಿರ ಟನ್ಸ್. ಇನ್ನು ಉಳಿದಿರತಕ್ಕಂತದ್ದು ಎಲ್ಲಿ ಇದೆ ?

Sri A. P. APPANNA.—These stocks are in the Mine heads and Port heads. Mostly, we have disposed of the stocks that are easily access ble, *i.e.*, the stocks lying in the port and in railway junctions. Now we are moving into the stock that is accumulated in the pit heads.

Sri M. L. VASUDEVA MURTHY.—May I know the total area that is reserved ?

Sri A. P. APPANNA.—There is no question of reserving any area for the Mysore Minerals Trading Corporation. The M.M.T.C. or the National Mineral Development Corporation are entitled to apply and get the areas, reserved for the Mysore State. Preference will be given only to these two Corporations which are public sector companies.

Sri A. K. SUBBAIAH.—There is a huge quantity of ore unsold. What is the reason for that ? Is it a fact that there is no demand for that ? What is the quantity of such Ore ?

Sri A. P. APPANNA.—The B.M.D. had exploited certain ores which are not marketable. They were all low grade ores. We have come to know of all these things when the assets and liabilities of the B.M.D. were taken over. Now we are in the process of assessing what amount of such ore could be sold. We are not in a position to know what is the amount of ore that cannot be sold. We are assessing it now. We will be able to know after some time.

ಶ್ರೀ ಜಿ. ವಿ. ಆಂಜನಪ್ಪ.—ತಾವು ನಾಲ್ಕು ಲಕ್ಷ 3 ಸಾವಿರ ಟನ್ ಅದುರನ್ನು ಷಿಪ್‌ಮೆಂಟ್ ಮಾಡಿದ್ದೇವೆ ಎಂದು ಹೇಳಿದ್ದೀರಿ, ಆದರೆ ಅದಕ್ಕೆ ತಗಲುವ ವೆಚ್ಚ ಎಷ್ಟು ಎಂಬುದು ತಿಳಿಯದೆ ಅದನ್ನು ಹೇಗೆ ಮಾರಾಟ ಮಾಡಿದ್ದೀರಿ, ಎಷ್ಟರಮಟ್ಟಿಗೆ ಅದರಲ್ಲಿ ಲಾಭ ಅಥವಾ ಲುಕ್ಸಾನು ಆಗುತ್ತದೆ ಎಂಬುದನ್ನು ತಿಳಿಯದೇ ಹೇಗೆ ಅದನ್ನು ಷಿಪ್‌ಮೆಂಟ್ ಮಾಡಿದ್ದೀರಿ ?

ಶ್ರೀ ಎ. ಪಿ. ಅಪ್ಪಣ್ಣ.—ಬಿ.ಎಂ.ಡಿ.ಯವರು 65 ಸಾವಿರ ಟನ್ ಓರನ್ನು ತಯಾರು ಮಾಡಿ ಕೊಟ್ಟಮೇಲೆ ಅದನ್ನು ಇಂಟರ್‌ನ್ಯಾಷನಲ್ ಮಾರ್ಕೆಟ್ಟಿಗೆ ಮಾರಬೇಕು ಅದನ್ನು ಇಟ್ಟುಕೊಂಡು ಪ್ರಯೋಜನ ಇಲ್ಲ. ಆದ್ದರಿಂದ ಅವರು ಅದನ್ನು ಇಂಟರ್‌ನ್ಯಾಷನಲ್ ಮಾರ್ಕೆಟ್ಟಿಗೆ ಎಂ.ಎಂ.ಟಿ.ಸಿ.ಗೆ ಮಾರಿದ್ದಾರೆ. There is no question of bargaining on the price because most of the Iron and Manganese ore go to M.M.T.C. and we cannot direct the parties to sell.

ಶ್ರೀ ಜಿ. ವಿ. ಆಂಜನಪ್ಪ.—ಈಗ ತಾವು ರಫ್ತು ಮಾಡಿರತಕ್ಕ ನಾಲ್ಕು ಲಕ್ಷ ಮೂರು ಸಾವಿರ ಟನ್ ಅದುರಿನಲ್ಲಿ ಪ್ರಾಫಿಟ್ ಎಷ್ಟು ಬಂದಿದೆ, ಅದನ್ನು ರಫ್ತು ಮಾಡುವುದಕ್ಕೆ ಎಷ್ಟು ವೆಚ್ಚ ತಗಲುತ್ತದೆ, ಅದನ್ನು ಮಾರಾಟ ಮಾಡುವುದರಿಂದ ಪ್ರಾಫಿಟ್ ಬರುತ್ತದೆಯೇ ಅಥವಾ ನಷ್ಟವಾಗುತ್ತದೆಯೇ ಎನ್ನುವುದನ್ನು ತಿಳಿದುಕೊಳ್ಳದೇ, ಬೆಲೆಯನ್ನು ನಿರ್ಧಾರ ಮಾಡದೇ ನಾಲ್ಕು ಲಕ್ಷ ಮೂರು ಸಾವಿರ ಟನ್ ಓರನ್ನು ಹೇಗೆ ಷಿಪ್‌ಮೆಂಟ್ ಮಾಡಿದಿರಿ ?

Sri A. P. APPANNA.—The accounts for the year 1968-69 are being audited. There is no question of seeing the cost of production because it is already purchased from B.M.D. without looking into the cost of production. The dead stock was acquired. If it is uneconomic, we have to sell it.

Sri G. V. ANJANAPPA.—At what rate you have sold the ore so far and whether you have incurred loss or profit in this business?

Sri A. P. APPANNA.—So for as the minerals that are exploited are concerned, we are looking into the cost of production and fix up the price to sell. So far as this dead stock is concerned, there is no question of fixing the cost of production.

Sri G. V. GOWDA.—May I know the control the Government is having over the M.M.T.C. which is authorised to exploit the ore ?

Sri A. P. APPANNA.—Formerly the B.M.D. was the part of the Department. Now M.M.T.C. is a company formed for this purpose. There is a share capital of Rs. 50 lakhs and a loan of Rs. 50 lakhs was given by the Government. Rs. 50 lakhs was given in the form of assets of B.M.D.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—4,03,451 ಟನ್ನುಗಳನ್ನು ಹಡಗಿನ ಮೂಲಕ ರವಾನೆ ಮಾಡಲಾಗಿದೆ ಎಂದು ಹೇಳಿದ್ದೀರಿ. ಈ ಅದುರನ್ನು ಯಾವ ರೇಟಿನಲ್ಲಿ ಮಾರಾಟ ಮಾಡಿದ್ದೀರಿ ?

Sri A. P. APPANNA.—There are various shipments and the total quantity is 4,03,451 tonnes. But all these have to be sold through M.M.T.C. at a uniform rate.

ಶ್ರೀ ಎ. ಕೆ. ಸುಬ್ಬಯ್ಯ.—ಮಾರಾಟವಾಗದಿರುವ ಅದಿರು ಎಷ್ಟು ಸಮಯದಿಂದ ಉಳಿದಿದೆ ?

ಶ್ರೀ ಎ. ಪಿ. ಅಪ್ಪಣ್ಣ.—ಸುಮಾರು ಒಂದೂವರೆ ವರ್ಷದಿಂದ ಮಾರಾಟವಾಗದೆ ಉಳಿದಿದೆ.

ಶ್ರೀ ಕೆ. ಚೆನ್ನಬಸವನಗೌಡ.—ಆ ರೀತಿ ಮಾರಾಟವಾಗದಿರುವುದಕ್ಕೆ ಏನು ಕಾರಣ, ಅದಕ್ಕೆ ಯಾರು ಕಾರಣ ಎಂಬುದನ್ನು ತಿಳಿದುಕೊಂಡು ಸಂಬಂಧಪಟ್ಟವರಮೇಲೆ ಕ್ರಮ ತೆಗೆದು ಕೊಂಡಿದ್ದೀರಾ ?

Sri A. P. APPANNA.—The Government has authorised the then Divisional Commissioner of Bangalore, now the Chief Secretary to Government, to investigate this matter and submit a report to the Government.

Refusal to Forward Pension Papers of a Retired High School Headmaster in South Kanara District

130. Sri S. MUKUNDA RAO (Teachers' Constituency).—

Will the Minister for Education be pleased to state :—

(*a*) whether it has come to the notice of Government that the Executive Officer of Taluk Development Board, Karkal, South Kanara has refused to forward the pension papers of a retired High School Headmaster stating that T.B.S. Rules are not applicable to T.D.B. High Schools ;

(*b*) whether the Education Department had made it clear to that Board that so long as aid was being received by the T.D.B. High Schools they should follow the T.B.S. Rules also ;

(*c*) the action taken by Government to get the Teachers' pension sanctioned and also action against the Executive Officer for refusing to forward pension papers ?

Sri N. M. KOTRABASAIAH SOGI (Deputy Minister for Education).—

(*a*) Yes.

(*b*) No.

(*c*) The matter is under consideration of Government.

ಶ್ರೀ ಎಸ್. ಮುಕುಂದರಾವ್.—(ಆ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಒಂದು ವರ್ಷದ ಹಿಂದೆ ಮಾನ್ಯ ವಿದ್ಯಾ ಮಂತ್ರಿಗಳು ಇದೇ ಪ್ರಶ್ನೆ ಬಂದಾಗ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಪ್ರೌಢಶಾಲೆಯವರು ಸಹಾಯ ಧನವನ್ನು ಪಡೆಯುವವರೆಗೂ ತ್ರಿಲಾಭ ಯೋಜನೆಯ ನಿಯಮಗಳನ್ನು ಪಾಲಿಸಬೇಕೆಂದು ಹೇಳಿದ್ದು ನಿಜವೇ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈ ಬಗ್ಗೆ ವಿದ್ಯಾ ಖಾತೆಯ ಅಭಿಪ್ರಾಯ ಸ್ಪಷ್ಟವಾಗಿದೆ. ಆದರೆ ತಾಲ್ಲೂಕ್ ಅಭಿವೃದ್ಧಿ ಮಂಡಲಿಯವರು ಈ ಬಗ್ಗೆ ಒಪ್ಪಿಕೊಂಡಿಲ್ಲವಾದ್ದ

ರಿಂದ ವಿದ್ಯಾಖಾತೆಯವರು ಡಿ.ಎಚ್.ಪಿ.ಸಿ. ಅವರ ಮತ್ತು ಲಾ-ಇಲಾಖೆಯವರ ಅಭಿಪ್ರಾಯ ಕೇಳಿದ್ದಾರೆ. ಅವರ ಅಭಿಪ್ರಾಯ ತಿಳಿದನಂತರ ಮುಂದಿನ ಕ್ರಮ ಕೈಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಮುಕುಂದರಾವ್.—ಪ್ರೌಢಶಾಲೆಯ ಮುಖ್ಯೋಪಾಧ್ಯಾಯರೊಬ್ಬರು ರಿಟೈರ್ ಆಗಿ ಕೆಲವು ತಿಂಗಳಾಯಿತು. ಅವರ ವಿಶ್ರಾಂತಿ ವೇತನ ಇನ್ನೂ ನಿಶ್ಚಯವಾಗಿಲ್ಲ. ಆದ್ದರಿಂದ ಆದಷ್ಟು ಬೇಗ ಅವರ ವಿಶ್ರಾಂತಿ ವೇತನವನ್ನು ನಿಶ್ಚಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈ ಕೇಸ್ ಸರ್ಕಾರದಿಂದ ತಡವಾಗಿಲ್ಲ ಮತ್ತು ಸರ್ಕಾರದವರು ಮಾಡುವುದಕ್ಕಾಗುವುದಿಲ್ಲ. ತಾಲ್ಲೂಕ್ ಬೋರ್ಡಿನವರು ತೀವ್ರವಾದ ಕ್ರಮ ಕೈಕೊಳ್ಳದಿರುವುದರಿಂದ ನಿಧಾನವಾಗಿದೆ.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—(ಇ) ಪ್ರಶ್ನೆಗೆ ಉತ್ತರವಾಗಿ 'ಈ ವಿಷಯವು ಸರ್ಕಾರದವರ ಪರಿಶೀಲನೆಯಲ್ಲಿದೆ' ಎಂದು ಹೇಳಿದ್ದೀರಿ. ಅಂದರೆ ನಿರ್ವಹಣಾಧಿಕಾರಿಯವರದ್ದು ತಪ್ಪಾಗಿದೆ ಎಂಬುದನ್ನು ಒಪ್ಪಿಕೊಂಡಿದ್ದೀರಿ. ಈ ಬಗ್ಗೆ ಅವರ ಮೇಲೆ ಎಕ್ಸ್‌ಪ್ಲನೇಷನ್ ಕಾಲ್‌ಫಾರ್ ಮಾಡಿದ್ದೀರಾ ಅಥವಾ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇಲ್ಲಿ ನಿರ್ವಹಣಾಧಿಕಾರಿಯವರದ್ದು ಏನೂ ತಪ್ಪಿಲ್ಲ. ಮುಖ್ಯೋಪಾಧ್ಯಾಯರ ವಿಶ್ರಾಂತಿ ವೇತನಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ಕಳುಹಿಸದಂತೆ ತಾಲ್ಲೂಕ್ ಬೋರ್ಡಿನ ಅಧ್ಯಕ್ಷರು ನಿರ್ಣಯ ತೆಗೆದುಕೊಂಡಿದ್ದಾರೆ. ಮತ್ತು ಸರ್ಕಾರದ ನಿಯಮಾವಳಿಯನ್ನೇ ಪ್ರಶ್ನಿಸಿದ್ದಾರೆ. ಇದು ಮೂಲಭೂತವಾದ ಪ್ರಶ್ನೆಯಾದ್ದರಿಂದ ಕಾನೂನು ಇಲಾಖೆಯ ಸಲಹೆಯನ್ನು ಕೇಳಿದ್ದೇವೆ. ಅವರ ಸಲಹೆ ಬಂದನಂತರ ತೀವ್ರವಾದ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಎಸ್. ಮುಕುಂದರಾವ್.—ವಿದ್ಯಾ ಇಲಾಖೆಯ ಅಭಿಪ್ರಾಯವಲ್ಲ ಈ ನಿಯಮಗಳು ತಾಲ್ಲೂಕ್ ಅಭಿವೃದ್ಧಿ ಮಂಡಲಿಯವರು ನಡೆಸುತ್ತಿರುವ ಪ್ರೌಢಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳಿಗೆ ಅನ್ವಯಿಸುವುದಿಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ವಿದ್ಯಾ ಇಲಾಖೆಯ ನಿಯಮಾವಳಿಯ ಪ್ರಕಾರ ಧನ ಪಡೆಯುವಂತಹ ಎಲ್ಲಾ ಸಂಸ್ಥೆಗಳೂ ಸಹ ಅನುಸರಿಸಬೇಕೆಂದು ಇದೆ. ಆದರೆ ಈ ಕಾರ್ಕಳ ತಾಲ್ಲೂಕ್ ಅಭಿವೃದ್ಧಿ ಮಂಡಲಿಯವರು ತಮ್ಮ ರೂಲ್ಸ್‌ನಲ್ಲಿ ಈ ಬಗ್ಗೆ ಪ್ರಾವಿಜನ್ ಇಲ್ಲ ಎಂದು ಪ್ರಶ್ನೆ ಮಾಡಿರುವುದರಿಂದ ನಾವು ಕಾನೂನು ಇಲಾಖೆಯ ಮತ್ತು ಡಿ.ಎಚ್.ಪಿ.ಸಿ.ಯ ಒಪ್ಪಿಗೆ ಪಡೆಯಬೇಕಾಗಿದೆ.

Construction of New Building for the Mysore High Court

178. Sri K. SURYANARAYANA ADIGA (Local Authorities' Constituency).—

Will the Minister for Law, Labour and Parliamentary Affairs be pleased to state :—

(*a*) whether any representation has been made to the Government for constructing a new and elegant building for the Mysore High Court ;

(*b*) whether it has come to the notice of the Government that the Bangalore Advocates Association represented in July 1969 to the Union Home Minister, requesting for a new building for the High Court ;

(SRI K. SURYANARAYANA ADIGA)

(c) whether the Government think it proper to construct a new and beautiful building for the Mysore High Court ?

Sri K. PUTTASWAMY (Minister for Law, Labour and Parliamentary Affairs).—

(a) No.

(b) Yes. An oral representation was made.

(c) No.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ದಿವಂಗತ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಹೊಂಬೇಗೌಡರು ರಾಜ್ಯದ ಶ್ರೇಷ್ಠ ನ್ಯಾಯಾಲಯಕ್ಕೆ ಪ್ರತ್ಯೇಕವಾದ ಒಂದು ಕಟ್ಟಡವನ್ನು ಮಾಡಬೇಕೆನ್ನುವ ಆಸೆ ಹೊಂದಿದ್ದರು ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಹಾಗೆ ಹೇಳಿದರು ಎಂದು ಗೊತ್ತಾಗಿದೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಹೈಕೋರ್ಟಿಗೆ ಒಂದು ಪ್ರತ್ಯೇಕವಾದ ಕಟ್ಟಡವನ್ನು ಕಟ್ಟಿಸಿ ಕೊಡುವುದರಿಂದ ಈಗ ಇರುವ ಹಳೆಯ ಕಟ್ಟಡದಲ್ಲಿ ಬಾಡಿಗೆಯಲ್ಲಿರುವ ಎಲ್ಲಾ ಸರಕಾರದ ಕಚೇರಿಗಳನ್ನೂ ಒಂದೇ ಕಡೆ ಇರುವಂತೆ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರ ಸಲಹೆ ಉಚಿತವಾದುದೇ ಆಗಿದೆ. ಆದರೆ ಹೈಕೋರ್ಟು ಕಟ್ಟಡವನ್ನು ಕಟ್ಟುವುದಕ್ಕೆ ಯೋಗ್ಯವಾದ ನಿವೇಶನ ಇದುವರೆಗೂ ದೊರತಿಲ್ಲ. ಆ ಕಾರಣದಿಂದ ದಿವಂಗತ ಹೊಂಬೇಗೌಡರು ಈಗಿರುವ ಹೈಕೋರ್ಟು ಬಿಲ್ಡಿಂಗನ್ನೇ ಬಡಾಯಿಸಿ ಹೈಕೋರ್ಟಿಗೆ ಸಾಕಾಗುವಷ್ಟು ಕಟ್ಟಡವನ್ನು ಕಟ್ಟಬೇಕೆಂದು ಅವರು ಅಭಿಲಾಷೆ ಹೊಂದಿದ್ದರು.

3–00 P.M.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—(ಎ) ಗೆ ಉತ್ತರವಾಗಿ "ನೋ" ಎಂದಿದೆ. ಆದರೆ ನಾನು ಇದೇ ಮಾನ್ಯ ಸಭೆಯಲ್ಲಿ ಎರಡು ಸಾರಿ ಸರಕಾರಕ್ಕೆ ರೆಪ್ರಸೆಂಟೇಷನ್ ಮಾಡಿದ್ದೆ. ಇದು ರೆಪ್ರಸೆಂಟೇಷನ್ ಆಗುವುದಿಲ್ಲವೇ ? ಇದಕ್ಕೆ ಪ್ರತ್ಯೇಕವಾದ ರೆಪ್ರಸೆಂಟೇಷನ್ ಎಂದು ಕೊಡಬೇಕಾಗಿತ್ತೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ರೆಪ್ರಸೆಂಟೇಷನ್ ಎಂದು ಭಾವನೆ ಮಾಡಿದ್ದಾರೆ. ಅವರು ಕೊಟ್ಟಂತಹದ್ದು ಸಲಹೆಗಳು ಎಂದು ಸರಕಾರ ಗಮನಕ್ಕೆ ತೆಗೆದುಕೊಳ್ಳುತ್ತಾರೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ನಿವೇಶನ ತೋರಿಸಿದರೆ ಹೈಕೋರ್ಟಿಗೆ ಪ್ರತ್ಯೇಕವಾದ ಕಟ್ಟಡ ಕಟ್ಟಿಸಿ ಕೊಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೇಷ್ಠ ನ್ಯಾಯಾಲಯ ಹಾಗೂ ಉಳಿದ ಜಿಲ್ಲಾ ನ್ಯಾಯಾಲಯಗಳು ಇವೆರಡೂ ಒಂದೇ ಕಡೆ ಇರಲು ಹೈಕೋರ್ಟು ಅಷ್ಟು ಒಪ್ಪುವುದಿಲ್ಲ. ಪ್ರತ್ಯೇಕವಾದ ಜಾಗದಲ್ಲಿ ಹೈಕೋರ್ಟು ಕಟ್ಟಬೇಕೆಂದು ಅವರ ಅಪೇಕ್ಷೆ. ಮತ್ತು ಈಚೆಗೆ ಇವರ ಬಗ್ಗೆ ವಿಚಾರ ಮಾಡಲಾಗಿ ಈಗಿರತಕ್ಕ ಜಾಗದಲ್ಲೇ ಪ್ರತ್ಯೇಕವಾದ ಅನುಕೂಲಗಳನ್ನು ಮಾಡಲು ಕಟ್ಟಡ ಕಟ್ಟಿಸಿಕೊಡಬೇಕೆಂದು ಹೈಕೋರ್ಟಿನವರ ಅಭಿಪ್ರಾಯ ಎಂದು ಗೊತ್ತಾಗಿದೆ.

ಶ್ರೀ ಎಸ್. ಪಿ. ರಾಜಣ್ಣ.—ಎಲ್ಲಾ ಕೋರ್ಟುಗಳೂ ಒಂದೇ ಕಡೆ ಇರಬೇಕೆಂದು ಕೇಳಿದರೆ ಇದಕ್ಕೆ ಹೈಕೋರ್ಟಿನವರು ಒಪ್ಪುವುದಿಲ್ಲ ಎಂದರೆ ಅವರಿಗಿರತಕ್ಕ ಅನಾನುಕೂಲಗಳೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೇಷ್ಠ ನ್ಯಾಯಾಲಯ ಬಿಟ್ಟು ಬಾಕೀ ಕೋರ್ಟುಗಳೆಲ್ಲಾ ಒಂದೇ ಕಡೆ ಇರಬೇಕೆಂದು ಇಲ್ಲಿರುವ ಅಡ್ವೋಕೇಟ್ಸ್ ಅಸೋಷಿಯೇಷನ್ನವರು ಸರಕಾರದವರನ್ನು ಕೇಳಿದ್ದಾರೆ.

Interest Free Loans for the Sufferers in Communal Disturbances

188. SRI K. S. N. ADIGA (Local Authorities' Constituency).—

Will the Minister for Revenue be pleased to state :—

(a) whether it is a fact that some persons in Mangalore City have been given interest free loan for alleged loss suffered by destruction of property during the last communal disturbances ;

(b) if so, who are those persons (names), the loan claimed by each of them and the amount of loan sanctioned to each of them ;

(c) the basis on which the loans were sanctioned ;

(d) the reasons for some persons who have suffered heavy loss by arson during the said disturbances not been paid as yet the interest free loan in an adequate manner ?

SRI H. V. KOUJALGI (Minister for Revenue).—

(a) Yes.

(b) *Vide* Statement enclosed.

(c) The loans were sanctioned considering the following facts :—

1. The actual loss suffered by the applicant in the communal disturbances as reported by the Enquiry Officer and after taking into consideration the quantum of assistance the applicant had received from other sources.

2. The value of property offered as security/collateral security.

3. The availability of funds allotted.

(d) In some cases, applicants have not yet been paid the interest free loan as they have not produced the relevant documents and some cases are pending enquiry with the local officers.

(SRI H. V. KOUJALGI)

STATEMENT

Showing the particulars of Interest Free Loan Sanctioned to the sufferers of communal disturbances in Mangalore City during April 1968.

Sl. No.	Name and address of the Loanee	Amount of Loan claimed by the applicant.	Amount of Loan Sanctioned.
1	2	3	4
		Rs.	Rs.
1	Sri Mohammad, S/o Moidine Beary, Mosque Compound, Dongerkeri, Mangalore.	3,000	1,000
2	Sri Moidine Beary, S/o Hussane Beary, Dongerkere, Mangalore.	5,000	3,000
3	Sri M. Moidin Kutty, S/o Kunha Ahamad, Prop. Ritz Refreshment House, Kodibail, Mangalore.	7,000	5,000
4	Sri Muhammad Usman, S/o B. Aboobaker Saheb "Marine View" Bolar, Mangalore.	500	500
5	Sri B. Ahmed Bava, S/o B. Cheyyabba near Ice Factory, Bolar, Mangalore.	5,000	4,000
6	M/s. A. Abdul Khader Hajee Ismail & Co., Represented by Sri U. M. Iddinabba, Goods Shed, Road, Mangalore.	10,000	5,000
7	Sri K. Hussain, S/o Gulam Goush, Beedi Contractor, Karabala Cross Road, Mangalore	3,000	3,000
8	Sri B. Hassanabba, S/o Iddinabba, Merchant, near Govt. Ice Factory, Bolar, Mangalore.	4,000	3,000
9	Sri M. Hassannabba, Alias Unhi, S/o Abdulla, Fire wood Merchant, Attavar, Mangalore.	5,000	4,000
10	Sri B. Balakrishna Rao, S/o Subba Rao, Fair Price Shop, Bockapatna, Mangalore.	1,000	800
11	Sri M. Mohideen, S/o Hajee M. Abdulla, Prop. Liberty Foot Wear, Bhavanthi Street, Mangalore.	6,000	4,000

1	2	3	4
		Rs.	Rs.
12	Sri M. Abdul Khadar, S/o Mohammed, Grocery Shop Keeper, Kondak, Mangalore.	5,000	3,000
13	Sri U. M. Yusuf, S/o U. M. Ismail, Thokkot, Ullal, Mangalore.	5,000	3,000
14	Sri C. Mohamad, S/o Colambo Abdulla, New Chand Cycle Shop, Kodialboil, Mangalore.	5,000	1,000
15	Sri S. Hasanabba, S/o Iddinabba, Petty Bunk Shop Keeper, Kodialbail, Mangalore.	500	400
16	Sri K. Abbas, S/o Mohammed, Prop., State Hotel, Kankanady, Mangalore.	8,000	5,000
17	Sri P. K. Abubaker, S/o Haji J. Puthabba, Grocery Merchant, Bolar, Mangalore.	5,000	3,000
18	Sri B. S. Hassanabba, S/o Sri Hydros, Grocery Shop Keeper, Bolar, Mangalore.	4,0000	3,000
19	Sri U. K. Abdulla, S/o P. K. Moidin, Prop., Grant Oriental Hotel, Bibi Alabi Road, Mangalore.	8,000	4,000
20	Sri N. Gopal, S/o Channappa, Poojary, N. S. Tailoring House, Kandak, Mangalore.	1,000	1,000
21	Sri K. Madav, s/o Shanker, Cold House, near Municipal Officer, Bunder, Mangalore.	2,000	2,000
22	Sri K. Chabu Beary, S/o Pakeera Beary, Nezarath Compound, Bijai, Mangalore.	4,000	3,000
23	Janab M. Mauri *Alias* Ummar, S/o Iddinabba, Pioneer Stores, Market Road, Mangalore Town.	6,000	4,00
24	B. Abdul Rahiman, S/o Badava Beary, Bolar, Mangalore.	5,000	5,000
25	Sri Sheik Mahamood, S/o Dawood Saheb, Karbala Road, Mangalore.	5,000	5,000
26	Sri Mahava Puthran, S/o Ramappa Amin, Bockapatna, Mangalore.	2,000	1,600
27	Sri K. Ramachandra Rao, Partner, M/s Kalbavi Venkata Rao & Bros., Mangalore.	38,000	30,000
28	Sri B. M. Abubaker Ismail, S/o Ismail, Merchant, Goods shed Road, Mangalore.	50,000	30,000

(SRI H. V. KOUJALGI)

1	2	3	4
		Rs.	Rs.
29	Sri B. Mohammad Kunhi, S/o B. Abdul Rahiman, Timber Merchant, Ashoknagar, Mangalore.	50,000	40,000
30	Sri S. Devaraya Ranga Kamath, Merchant, Bunder, Mangalore.	3,00,000	35,000
31	Sri K. Moidin Bava, Managing Partner, M/s. Hajee Abdulkader Bava & Sons, Mangalore.	1,25,000	35,000
32	Sri Basti Gopal Ram Shenoy, Merchant, Bunder, Mangalore.	1,25,000	35,000
33	Sri M. Srinivasa Baliga, S/o Sri Rama Baliga, Prop., New Rupavani Restaurant, Mangalore.	30,000	20,000
34	Sri Mahammad Shaffee, Emmekere, Cross Road, Bolar, Mangalore.	4,000	3,5000
35	Sri K. M. Zaihaluddin, S/o K. Mohammed Ismail, Prop., Zain & Co., Bhavanthi St., Mangalore.	20,000	14,000
36	Smt. M. Dilshed Manaff, W/o U. A. Munaff, Kambla Road, Mangalore.	3,000	3,000
37	Sri Basti Mukunda Shenoy, S/o Basti Ramaiah Shenoy, Dongerkery, Mangalore.	12,500	12,000
38	Sri Basti Mohan Shenoy, S/o Basti Ramayya Shenoy, Dongerkery, Mangalore.	8,500	8,000
39	M/s. Pai, Partner, M/s. S. M. S. Pai & Co., Mangalore.	18,500	15,000
40	Sri A. Seetharama Shetty, S/o Sheena Shetty, Garden Hotel, Mangalore.	15,000	12,000
41	Sri B. Hasanabba, S/o K. Bavaq Vessl, Owner and Broker, Bolar, Mangalore.	10,000	9,000
42	Sri U. R. Datt, Merchant, Bunder, Mangalore.	10,000	10,000
43	Sri D. M. Mohammed, S/o Iddine Beary, Merchant, Jumma Masjid Road, Mangalore.	12,000	10,000
44	Sri K. Bhava, S/o Mohammad Kandak, Mangalore.	2,000	800
	Total ...		3,99,600

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಒಂದು ಸೇರಿ ಸರಕಾರ ಲೋನು ಮುಂಜೂರು ಮಾಡಿ ಕೊಟ್ಟಿರುವುದನ್ನು ಮತ್ತೆ ಹಿಡಿಯಲು ಕಾರಣವೇನು ?

ಶ್ರೀ ಎಚ್. ವಿ. ಕೌಜಲಗಿ.—ಯಾವುದಾದರೂ ನಿರ್ದಿಷ್ಟವಾಗಿ ಪ್ರಶ್ನೆ ಕೇಳಿದರೆ ಆಗ ಅದರ ಬಗ್ಗೆ ಎನ್‌ಕ್ವೈರಿ ಮಾಡಬಹುದು.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಸ್ವಾಮಿ, ಮಂಗಳೂರಿನಲ್ಲಿ ಮತ್ತೀಯ ಗಲಭೆಗಳಲ್ಲಿ ಆಸ್ತಿಪಾಸ್ತಿಗಳಿಗೆ ನಷ್ಟ ಸಂಭವಿಸಿತೆಂಬ ಕಾರಣಕ್ಕಾಗಿ ತೊಂದರೆಗೀಡಾದ 44 ಜನಕ್ಕೆ ಬಡ್ಡಿರಹಿತ ಸಾಲಗಳನ್ನು ಕೊಟ್ಟಿದ್ದೀರಿ. ಈ 44 ಜನರೂ ಕೂಡ ನ್ಯಾಯವಾಗಿ ಮತ್ತೀಯ ಗಲಭೆಗಳಲ್ಲಿ ತೊಂದರೆಗೀಡಾಗಿದ್ದಾರೆಯೋ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗೆ ಬಡ್ಡಿ ರಹಿತ ಸಾಲಗಳನ್ನು ಪಡೆದುಕೊಂಡವರಲ್ಲಿ ಯಾರಾದರೂ ಗಲಭೆಯಲ್ಲಿ ತೊಂದರೆಗೀಡಾಗದೆ ಇರುವವರಿಗೆ ಇದ್ದರೆ ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಹೆಚ್. ವಿ. ಕೌಜಲಗಿ.—ಅವರು ನ್ಯಾಯವಾಗಿ ತೊಂದರೆಗೆ ಈಡಾಗದೆ ಆರೀತಿ ಸಾಲ ಪಡೆದುಕೊಡಿದ್ದರೆ ಮಾನ್ಯ ಸದಸ್ಯರು ಅದನ್ನು ತಿಳಿಸಿದರೆ ವಿಚಾರ ಮಾಡುತ್ತೇನೆ.

ಶ್ರೀ ಜಿ. ವಿ. ಆಂಜನಪ್ಪ.—ತಾವು 44 ಜನಕ್ಕೆ ಬಡ್ಡಿರಹಿತ ಸಾಲ ಕೊಟ್ಟಿದ್ದೀರಿ. ಕೆಲವರಿಗೆ 500 ರೂಪಾಯಿಗೆ, 500 ಪೂರ್ತಿ ಕೊಟ್ಟಿದ್ದೀರಿ, 1,000 ರೂಪಾಯಿ ಕೇಳಿದರ 1,000 ರೂಪಾಯಿ ಯನ್ನೂ ಕೊಟ್ಟಿದ್ದೀರಿ ಮತ್ತೆ ಕೆಲರಿಗೆ 1,000 ರೂಪಾಯಿ ಕೇಳಿದರೆ 800 ರೂಪಾಯಿ ಕೊಟ್ಟಿದ್ದೀರಿ. ಅದೇ ರೀತಿ 500 ರೂಪಾಯಿ ಕೇಳಿದರ 400 ರೂಪಾಯಿ ಕೊಟ್ಟಿದ್ದೀರಿ. ಈ ರೀತಿ ತಾರತಮ್ಯ ತೋರಿಸುವುದಕ್ಕೆ ಕಾರಣ ಏನು ?

ಶ್ರೀ ಎಚ್. ವಿ. ಕೌಜಲಗಿ.—ಇದಕ್ಕೆ ಉತ್ತರವಾಗಿ (ಸಿ) ನಲ್ಲಿ ಹೇಳಿದೆ.

ಶ್ರೀ ಎ. ಕೆ. ಸುಬ್ಬಯ್ಯ.—ಮಂಗಳೂರು ಗಲಭೆಯಲ್ಲಿ ನೊಂದವರಿಗೆ ಬಡ್ಡಿರಹಿತ ಸಾಲ ಕೊಟ್ಟಿದ್ದೀರಲ್ಲಾ ಇದಕ್ಕೆ ಸರ್ಕಾರದವರು ಇಷ್ಟು ಎಂದು ನಿಗದಿ ಮಾಡಿದ್ದೀರಾ ? ಹಾಗೆ ನಿಗದಿ ಮಾಡಿದ್ದರ ಎಷ್ಟು ಮೊಬಲಗು ನಿಗದಿ ಮಾಡಿದ್ದೀರಿ ?

ಶ್ರೀ ಹೆಚ್. ವಿ. ಕೌಜಲಗಿ.—ಇದಕ್ಕೆ 4 ಲಕ್ಷ ರೂಪಾಯಿ ಎಂದು ನಿಗದಿ ಮಾಡಿದೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಸ್ವಾಮಿ, ತಾವು ಕೊಟ್ಟಿರುವ ಪಟ್ಟಿಯಲ್ಲಿ 44 ಹೆಸರುಗಳು ಇವೆ. ಅದರಲ್ಲಿ 30 ನೇ ನಂಬರಿನವರಿಗೆ ಕಡಿಮೆ ಕೊಟ್ಟಿದ್ದೀರಿ, ಮತ್ತು 31 ನೇ ನಂಬರಿನವರಿಗೆ ಸ್ವಲ್ಪ ಹೆಚ್ಚು ಕೊಟ್ಟಿದ್ದೀರಿ. ಈ ರೀತಿ ಮಂಜೂರು ಆಗಿದೆ. ಆದರೆ 31 ಮತ್ತು 31 ನೇ ನಂಬರಿನವರಿಗೆ ನ್ಯಾಯವಾಗಿಯೂ ಬಹಳ ನಷ್ಟವಾಗಿದೆ. ಸರ್ಕಾರದಿಂದ ಇದಕ್ಕೆ 4 ಲಕ್ಷ ರೂಪಾಯಿ ಮಂಜೂರಾಗಿದ್ದರೂ ಕೂಡ ಶೇಕಡ 30 ಕಿಂತ ಹೆಚ್ಚು ಜನರಿಗೆ ಬಹಳ ಕಡಿಮೆ ಬಂದಿದೆ. ಅವರು ನಿಜವಾಗಿಯೂ ತೊಂದರೆಯಲ್ಲಿದ್ದಾರೆ. ಆದುದರಿಂದ ಅವರುಗಳಿಗೆ ಹೆಚ್ಚು ಕೊಡುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಅವರ ಪರಿಸ್ಥಿತಿಗನುಗುಣವಾಗಿ ಲೋಕಲ್ ಆಫೀಸರ್ಸ್ ಡಿಸ್ಕ್ರಿಷನ್ ಯೂಸ್ ಮಾಡಿ ಅವರು ರೆಕಮೆಂಡೇಷನ್ ಮಾಡುತ್ತಾರೆ. ಆ ಪ್ರಕಾರ ಕೊಟ್ಟಿದ್ದೇವೆ.

Sri A. K. SUBBAIAH.—How many applications for interest-free loans are still pending disposal ?

Sri H. V. KOUJALGI.—About Six.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಸ್ವಾಮಿ, ಈ ಪಟ್ಟಿಯಲ್ಲಿ ಕೊಟ್ಟಿರುವ ಪ್ರಕಾರ ಐಟಂ ನಂಬರ್ 30 ಕ್ಕೆ ಕಡಮೆ ಕೊಟ್ಟಿದ್ದಾರೆ, ಹಾಗೆಯೇ ಐಟಂ. ನಂಬರ್ 31, 32 ಕ್ಕೂ ಕೂಡ ಶೇಕಡ 50 ಪರ್ಸೆಂಟಿಗಿಂತಲೂ ಕಡಿಮೆ ಮಂಜೂರು ಮಾಡಿದ್ದಾರೆ. ಹಾಗೆ ಕಡಿಮೆ ಕೊಟ್ಟಿದ್ದವರಿಗೆ ಡಿವಿಷನಲ್ ಕಮೀಷನರ್ ಹೆಚ್ಚು ಕೊಡಬೇಕೆಂದು ರೆಕಮೆಂಡೇಷನ್ ಮಾಡಿದ್ದರೂ ನಮ್ಮಲ್ಲಿ ಅಲಾಟ್‌ಮೆಂಟ್ ಇಲ್ಲ ಎಂದು ಕಡಿಮೆ ಕೊಟ್ಟಿದ್ದಾರೆ. ಇದನ್ನು ಕನ್ಸಿಡರ್ ಮಾಡುತ್ತೀರಾ ?

Sri H. V. KOUJALGI.— I will consider this specially.

Programme for the Guidance of the Youths

190. Sri K. SURYANARAYANA ADIGA (Local Authorities. Constituency).—

Will the Minister for Finance, Planning and Youth Welfare be pleased to state :—

(*a*) whether the Department of Youth Affairs has any programme for the guidance of our Youth ; if so, which are they ;

(*b*) whether it has come to the notice of Government that the lack of adequate play ground for recreation purposes is one of the reasons for the youths succumbing to objectionable distraction ;

(*c*) whether the Government is aware that play fields in several towns are being converted and utilised for purposes other than recreation;

(*d*) whether there is any proposal before Government to take immediate steps to ban the conversion or assignment of any land which was once used as a play field, so that these play grounds may be used for the advancement of our Youths ?

Sri RAMAKRISHNA HEGDE (Minister for Finance, Planning and Youth Welfare).—

(*a*) Yes. (*Vide* statement enclosed).

(*b*) Lack of adequate playgrounds could contribute to youth succumbing to objectionable distractions.

(*c*) Specific instances have not come to the notice of Government.

(*d*) Government have taken necessary steps.

Statement out-lining the Youth Programme

The aim of the Youth Service is to train the Young during their leisure hours to become citizens who are fit in mind, body and spirit to be citizens of a free Democratic State. This is sought to be achieved through various character building programmes like N.C.C. and Scouting, Youth Festivals, Sports and other recreational activities.

The following provisions have been made for Youth Welfare Programmes during 1969-70 :

Non-plan Budget		Rs.
1	N. C. C. ...	73,17,200
2	Mysore State Sports Council ...	5,00,000
3	Bharath Scouts and Guides ...	2,00,000
4	Seva Dal ...	50,000
5	Grants to Rural Youth Clubs ...	10,00,000
6	Students Homes ...	5,00,000
7	Youth Festivals ...	2,00,000
8	Youth Camps for construction Programmes ...	5,00,000

Plan Budget :

			Rs.
1	Grants to the Sports Council and Grants to Bharat Scouts and Guides	...	3,40,000
2	NCC/NSC/NSO	...	1,00,000
3	Youth Welfare	...	6,00,000

To evolve co-odinated programmes for promoting the welfare of student and non-student youth, a State Youth Welfare Board has been constituted at the State Level and District Youth Welfare Boards have been constituted for each of the Revenue Districts of the State at the District Level.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಸ್ವಾಮಿ, "Whether there is any proposal before the Government to take immediate steps to ban the conversion or assignment of any land which was once used as a play field, so that these play grounds may by used for the advancement of our Youths" ಎಂದು ಕೇಳಿದಕ್ಕೆ "Government have taken necessary steps" ಎಂದು ಹೇಳಿದ್ದೀರಿ. ಹಾಗಾದರೆ ರಿಕ್ರಿಯೇಷನ್ ಗ್ರೌಂಡ್ಸ್‌ಗೆ ಮತ್ತು ಪ್ಲೇ ಗ್ರೌಂಡ್ಸ್‌ಗೆ ಇದ್ದ ಸ್ಥಳವನ್ನು ಬೇರೆ ಯಾರಿಗೂ ಕೊಡಬಾರದು ಎಂದು ಸರ್ಕಾರ ಹುಕುಂ ಹೊರಡಿಸಿದೆಯೇ ?

†ಶ್ರೀ ರಾಮಕೃಷ್ಣ ಹೆಗಡೆ.—ಪ್ಲೇಗ್ರೌಂಡ್ ಆಗಲಿ ಓಪನ್ ಗ್ರೌಂಡ್ ಆಗಲಿ ಮುನಿಸಿಪಲ್ ಸರಹದ್ದಿನಲ್ಲಿರತಕ್ಕಂಥ ಸ್ಥಳವನ್ನು ಬೇರೆ ಯಾವುದಕ್ಕೂ ಉಪಯೋಗಿಸಕೂಡದು ಎಂದು ಸರ್ಕಾರ ನಿರ್ದೇಶನ ಕೊಟ್ಟಿದೆ. ಮತ್ತು ಮೈಸೂರು ರಾಜ್ಯದಲ್ಲಿ ಮೈಸೂರು ಟವನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟ್ ಇದು 1961 ನೇ ಇಸವಿಯಿಂದಲೂ ಜಾರಿಯಲ್ಲಿದೆ. ಇದರ ಕಲಂ ನಂಬರ್ 5 ಮತ್ತು 8 ರಲ್ಲೂ ಕೂಡ ನಿಬಂಧನೆಗಳು ಇವೆ. ಈ ಸಂಬಂಧದಲ್ಲಿ ಪಬ್ಲಿಕ್ ಓಪನ್ ಸ್ಪೇಸನ್ನು ಪ್ರಿಸರ್ವ್ ಮಾಡಬೇಕೆಂದು ಇದೆ. ಮೈಸೂರು ಮುನಿಸಿಪಲ್ ಆಕ್ಟ್ 1964 ಅದರಲ್ಲೂ ಕೂಡ ಇದಕ್ಕೆ ಸಂಬಂಧಪಟ್ಟ ಪ್ರಾವಿಸೋ ಇದ್ದೇ ಇದೆ. ಮತ್ತು ಮುನಿಸಿಪಲ್ ಪಂಚಾಯತ್ ಆಕ್ಟ್ ಅದರಲ್ಲೂ ಪ್ರಾವಿಸೋ ಇದೆ. ಮತ್ತು ಸರ್ಕಾರ ಎಲ್ಲಾ ಡಿವಿಷನಲ್ ಕಮೀಷನರಿಗೂ ಮತ್ತು ಡೆಪ್ಯೂಟಿ ಕಮೀಷನರಿಗೂ ಈಗ ಇರತಕ್ಕಂಥ ಆಟದ ಬಯಲನ್ನಾಗಲೀ ಓಪನ್ ಸ್ಪೇಸ್ ಆಗಲಿ ಬೇರೆ ಯಾವುದಕ್ಕೂ ಉಪಯೋಗಿಸಕೂಡದು ಮತ್ತು ಅಕ್ವೈರ್ ಕೂಡ ಮಾಡಕೂಡದು ಎಂದು ನಿರ್ದೇಶನ ಕೊಟ್ಟಿದೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಮಂಗಳೂರು ನಗರದಲ್ಲಿ ಕೆಲವು ಸಂಘಸಂಸ್ಥೆಗಳು, ಕೆಲವು ಕ್ಲಬ್ಬುಗಳು ಜಿಲ್ಲಾಧಿಕಾರಿಗಳನ್ನು ಒಂದು ಸಮಾರಂಭ ಏರ್ಪಡಿಸಿ, ಅಲ್ಲಿಗೆ ಅವರನ್ನು ಕರೆಸಿ ಹಾರ ಹಾಕಿ ಅಲ್ಲಿರುವಂಥ ಮಕ್ಕಳ ಆಟದ ಬಯಲನ್ನು ಆ ಸಂಘ ಸಂಸ್ಥೆಗಳಿಗೆ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲಿಯವರೆಗೂ ನನ್ನ ಗಮನಕ್ಕೆ ಬಂದಿಲ್ಲ. ಆ ರೀತಿ ಏನಾದರೂ ಆಗಿದ್ದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಜಿ. ವಿ. ಆಂಜನಪ್ಪ.—ಯುವಜನ ಕಲ್ಯಾಣ ಕಾರ್ಯಕ್ರಮದ ಅಂಗವಾಗಿ ಪ್ಲಾನ್ ಬಜೆಟ್ಟಿನಲ್ಲಿ ಯುವಜನ ಕಲ್ಯಾಣಕ್ಕೋಸ್ಕರ ಆರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಅಶಾಂತಿಯುಂಟಾಗಿ ಮುಷ್ಕರ, ಚಳುವಳಿ ಎಲ್ಲ ಮಾಡುತ್ತಿದ್ದಾರೆ. ಅದಕ್ಕೆ ಒಂದಿಷ್ಟು ಹಣವನ್ನು ಖರ್ಚು ಮಾಡಿ ವಿದ್ಯಾರ್ಥಿಗಳನ್ನು ಕರೆಸಿ ಅವರಿಗೆ ಏಕೆ ಬುದ್ಧಿವಾದ ಹೇಳಬಾರದು ?

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ಒದಗಿಸಿರತಕ್ಕ ಹಣ ವಿದ್ಯಾರ್ಥಿಗಳು ಮುಷ್ಕರ ಹೂಡಲಿಕ್ಕೆ ನೆರವು ಕೊಡಲಿಕ್ಕಲ್ಲ ; ಅದಕ್ಕೆ ಅಸಿಸ್ಟೆನ್ಸ್ ಕೊಡಲಿಕ್ಕಲ್ಲ; ವಿದ್ಯಾರ್ಥಿಗಳ ಭೌತಿಕ, ಶಾರೀರಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮತ್ತು ರಚನಾತ್ಮಕ ಕಾರ್ಯ ಕ್ರಮಗಳಲ್ಲಿ ಸಹಾಯ ಮಾಡುವುದಕ್ಕೆ ಒದಗಿಸಿದೆ.

ಶ್ರೀ ಜಿ. ವಿ. ಆಂಜನಪ್ಪ.—ಯುವಜನ ಕಲ್ಯಾಣ ಸಚಿವರು ಮುಷ್ಕರ ಹೂಡಿರುವ ವಿದ್ಯಾರ್ಥಿಗಳನ್ನು ಕರೆಸಿ, ಹೀಗೆಲ್ಲ ಮಾಡಬಾರದು, ಭೌತಿಕ, ಶಾರೀರಕ ಬೆಳವಣಿಗೆ ಆಗಬೇಕು, ಹೆಚ್ಚು ಹೆಚ್ಚು ವಿದ್ಯಾಭ್ಯಾಸ ಮಾಡಬೇಕು ಎಂದು ಏಕೆ ಹಿತೋಪದೇಶ ಮಾಡಬಾರದು ?

Sri RAMAKRISANA HEGDE.—No doubt it is a suggestion for action, but the dispute is between the students and the University. The matter has to be decided by the Hon. Education Minister. He is already at it and there is no need for me to interfere in it.

ಶ್ರೀ ಬಸವರಾಜ ಕಟ್ಟೀಮನಿ.—ಅನೇಕ ಯುವಕರು ಆಟದ ಮೈದಾನದ ಕಡೆಗೆ ಸುಳಿಯದೆ ಸೀರೆ ಅಂಗಡಿಗಳ ಮುಂದೆ, ಸುರೆ ಅಂಗಡಿಗಳ ಮುಂದೆ ಸುಳಿದಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಒಂದು ವೇಳೆ ಬಂದಿದ್ದರೆ ಅದನ್ನು ತಪ್ಪಿಸಲು ಸರ್ಕಾರ ಏನಾದರೂ ಕಾರ್ಯಕ್ರಮ ಕೈಗೊಳ್ಳುವುದೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಬಹಳ ಕಷ್ಟದ ವಿಷಯ. ಅದನ್ನು ತಪ್ಪಿಸಲು ಎಂಡು ರೀತಿಯಿಂದ ಸಾಧ್ಯವಿದೆ ಎಂದು ಕಾಣುತ್ತದೆ. ಆಟಪಾಟ, ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆ ಹೆಚ್ಚಿನ ಸೌಲಭ್ಯವನ್ನು ಒದಗಿಸಿಕೊಡತಕ್ಕದ್ದು, ಲೈಬ್ರರಿ ಮತ್ತು ಇನ್ನಿತರ ಸೌಲಭ್ಯಗಳನ್ನು ಒದಗಿಸಿಕೊಡತಕ್ಕದು ಮತ್ತು ಕಾಲೇಜಿನಲ್ಲಿ ಪಾಠದ ಮುಖಾಂತರ ಅವರಿಗೆ ಅದರಿಂದ ಆಗತಕ್ಕ ದುಷ್ಪರಿಣಾಮಗಳ ಬಗ್ಗೆ ತಿಳಿಸಿ ಹೇಳುವುದು.

Sri D. RAJAGOPAL.—Out of Rupees one crore and odd for planned programme for the youths, ethical and aesthetic studies constitute 95 per cent whereas constructive programmes like youth camps, etc. comprise only Rs. 5 lakhs. Would the Government consider increasing expenditure on the latter programme rather than others ?

Sri RAMAKRISHNA HEGDE.—As the hon. Member may see the bulk of this expenditure is in relation to the N. C. C. programmes. That itself accounts for Rs. 74 to 75 lakhs. The N. C. C. Programme is very important both from the point of view of inculcating sense of discipline among the students as well as providing physical training. I do not think it would be desirable to cut the provision made for NCC.

Sri D. RAJAGOPAL.—At least in future would they increase the expenditure for constructive activities ?

Sri RAMAKRISHNA HEGDE.—Constructive activities are also important. But I do not know whether the Hon. Member has fully appreciated by what we have meant here by constructive activities. Constructive activity means providing opportunities to students in batches to work for a specific project and the cost of the project will be borne by the Government under a separate account. It need not be provided here. We have to provide certain incidental expenditure that is incurred for this programme.

Sri KESHAV RAO NITTURKAR.—As I see it, the aim of the Youth Service is just to train the young in physical training and discipline. Will the Government consider the desirability of providing this physical training and discipline to inculcate healthy ideologies in the students ?

Sri RAMAKRISHNA HEGDE.—It all depends upon the ideology. Political ideology can be taught for theoretical purposes for knowing the various principles in political thought. But the students should not get themselves involved in any political activity.

ಶ್ರೀ ಜಿ. ವಿ. ಅಂಜನಪ್ಪ.—ಸ್ಟೂಡೆಂಟ್ಸ್ ಹೋಂಗೆ ನಾನ್‌ಪ್ಲಾನ್ ಬಜೆಟ್ಟಿನಲ್ಲಿ 5 ಲಕ್ಷ ರೂಪಾಯಿ ಕೊಡಲಾಗಿದೆ. ಅದರ ವಿವರವೇನು ? ಎಲ್ಲಿ ಕಟ್ಟುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಕಬ್ಬನ್ ಪಾರ್ಕಿನಲ್ಲಿ ರಿಸರ್ವ್ ಬ್ಯಾಂಕ್ ಬಿಲ್ಡಿಂಗ್‌ಗೂ ನ್ಯೂ ಪಬ್ಲಿಕ್ ಆಫೀಸ್ ಬಿಲ್ಡಿಂಗಿಗೂ ಮಧ್ಯೆಇರುವ ಜಾಗದಲ್ಲಿ ಸ್ಟೂಡೆಂಟ್ಸ್ ಹೋಂ ಕಟ್ಟಬೇಕೆಂದಿದೆ.

ಶ್ರೀ ಎಸ್. ಪಿ. ರಾಜಣ್ಣ.—ನಿನ್ನೆ ಉತ್ತರ ಕೊಟ್ಟಿರುವುದಕ್ಕೂ ಅಂದರೆ ವಿದ್ಯಾ ಇಲಾಖೆಗೆ ಸಂಬಂಧಪಟ್ಟಹಾಗೆ ಹೇಳಿದ ಉತ್ತರಕ್ಕೂ ಇಂದು ಕೊಟ್ಟಿರುವ ಉತ್ತರಕ್ಕೂ ವ್ಯತ್ಯಾಸವಿದೆ ಇದರಲ್ಲಿ ಯಾವುದು ಸರಿ ?

ಶ್ರೀ ರಾಮಕೃಷ್ಣ ಹೆಗಡೆ.—ನಿನ್ನೆ ಏನು ಉತ್ತರ ಕೊಟ್ಟರೆಂಬುದು ನನ್ನೆದುರಿಗಿಲ್ಲ. ಆಟ ಪಾಟಗಳಿಗೆ ಸಾಕಷ್ಟು ಅನುಕೂಲ ಮಾಡಿಕೊಡದಿದ್ದರೆ ಯುವಕರ ಅಹಿತಕರ ಚಟುವಟಿಕೆಗಳಿಗೆ ಅವಕಾಶವಾಗುವುದು. ಅವರು ಯಾವಾಗಲೂ ಓದುವುದಕ್ಕಾಗುವುದಿಲ್ಲ, ಸ್ವಲ್ಪ ಮನರಂಜನೆ ಬೇಕು. ಸರಿಯಾದ ದಾರಿಯನ್ನು ತೋರಿಸದಿದ್ದರೆ ಕೆಟ್ಟ ದಾರಿಯನ್ನು ಹಿಡಿಯುವರು.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ನಾನ್‌ಪ್ಲಾನ್ ಬಜೆಟ್ಟಿನಲ್ಲಿ 73 ಲಕ್ಷ ಚಿಲ್ಲರೆ ಎನ್.ಸಿ.ಸಿ.ಗೆ ರಿಸರ್ವ್ ಮಾಡಿದ್ದೀರಿ. ಅದನ್ನು ಪ್ಲಾನ್ ಬಜೆಟ್ಟಿನಲ್ಲಿ ಸೇರಿಸುವುದಕ್ಕೆ ಅವಕಾಶ ವಾಗುವಂತೆ ಕೇಂದ್ರ ಸರಕಾರಕ್ಕೆ ಬರೆದು ಹಳ್ಳಿಗಳಲ್ಲಿರುವ ಯುವಕರಿಗೆ ಅನುಕೂಲ ಮಾಡಿಕೊಡು ವುದಕ್ಕಾಗುವುದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಅದು ರೆಕರಿಂಗ್ ಎಕ್ಸ್‌ಪೆಂಡಿಚರ್, ಪ್ಲಾನ್‌ನಲ್ಲಿ ಸೇರಿಸು ವುದಕ್ಕಾಗುವುದಿಲ್ಲ.

Peripatetic Dramatic Troupes in the State

19. Sri K. SURYANARAYANA ADIGA (Local Authorities' Constituency).—

Will the Minister for Education be pleased to state :—

(*a*) the number of professional peripatetic dramatic torupes functioning in the State ;

(*b*) whether the Government is aware that these dramatic troupes were responsible for building up in the past a very high tradition for the Kannada stage ;

(*c*) whether it has come to the notice of Government that most of these troupes even now, are trying to continue the past tradition and providing educative recreation to the public ;

(*d*) whether it has come to the notice of Government that on the face of the Competition from the cinema most of these dramatic troupes are finding it difficult to survive ;

(*e*) if so, whether Government has any proposal to see that these dramatic troupes and artistes, are nursed, wherever and whenever necessary, with financial aid from the State with a view to encourage and preserve the dramatic art ;

(*f*) whether the Government has been giving any financial aid to dramatic troupes or artistes ?

Sri N. M. KOTRABASAIAH SOGI (Deputy Minister for Education).—

(*a*) Nine.

(*b*) Yes.

(*c*) Yes.

(*d*) Yes, in cities and towns where cinemas exist.

(*e*) The matter is under examination.

(*f*) Financial aid to artistes in old age and indigent circumstances is being given.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ರಾಜ್ಯದಲ್ಲಿ ಇರುವ ಸಂಚಾರಿ ನಾಟಕ ಮಂಡಲಿಗಳು ಯಾವುವು ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಶಾರದ ಸಂಗೀತ ನಾಟಕ ಮಂಡಲಿ, ಚನ್ನ ಬಸವೇಶ್ವರ ನಾಟಕ ಮಂಡಲಿ—ಗುಬ್ಬಿ, ಹಿರಣ್ಣಯ್ಯ ಮಿತ್ರ ಮಂಡಲಿ, ಕಲಾ ವೈಭವ ಮಂಡಲಿ, ಶ್ರೀ ನಾಟಕ ಮಂಡಲಿ—ಬೆಂಗಳೂರು, ಕುಮಾರ ವಿಜಯ ನಾಟಕ ಮಂಡಲಿ—ಚಿತ್ರದುರ್ಗ, ಹೊನ್ನಪ್ಪ ಭಾಗವತರ ನಾಟಕ ಮಂಡಲಿ, ಶ್ರೀಕಂಠೇಶ್ವರ ನಾಟಕ ಮಂಡಲಿ—ಮೈಸೂರು ಮುಂತಾದುವು.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಸಿನೀಮಾಗಳಿಗೆ 50 ಸಾವಿರ ರೂಪಾಯಿ ಸರಕಾರ ಕೊಡುವಂತೆ ಆ ಹಿನ್ನೆಲೆಯಲ್ಲೇ ಒಳ್ಳೆಯ ನಾಟಕ ಮಂಡಲಿಗಳಿಗೆ ಧನ ಸಹಾಯ ಕೊಡುವ ಯೋಚನೆ ಸರಕಾರದಲ್ಲಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ವಿಚಾರ ಸರಕಾರದಲ್ಲಿದೆ. ಆದರೆ ಈಗ ತತ್ಕಾಲದಲ್ಲಿ ಸಂಗೀತ-ನಾಟಕ ಅಕ್ಯಾಡಮಿ ಸಹಾಯ ನೀಡುತ್ತಿದೆ. ನಾಟಕ ಸಂಸ್ಥೆಗಳಲ್ಲಿ ಹೆಚ್ಚು ಖಾಸಗಿ ಸಂಸ್ಥೆಗಳಿರುವುದರಿಂದ ಅವು ಸರಕಾರದ ಸಹಾಯ ಪಡೆಯಬೇಕಾದರೆ ರಿಜಿಸ್ಟರ್ ಮಾಡಿರ ಬೇಕು. ಸರಿಯಾದವರ ಮಾಲೀಕತ್ವದಲ್ಲಿರಬೇಕು, ಸಾರ್ವಜನಿಕರಿಂದ ಮನ್ನಣೆ ಪಡೆಯುವಂತಿರ ಬೇಕು. ಆದುದರಿಂದ ಸಹಾಯ ಮಾಡುವುದು ಕಷ್ಟ. ಆದರೂ ಕೂಡ ಸಹಾಯ ಈಗ ಕೆಲಮಟ್ಟಿಗೆ ದೊರೆಯುತ್ತಿದೆ.

ಶ್ರೀ ಜಿ. ವಿ. ಗೌಡ.—ಈ ಅಕ್ಯಾಡಮಿ ಅವರು ಉತ್ತಮ ಕಲಾವಿದರಿಗೆ ಸಹಾಯವನ್ನು ಒದಗಿಸುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂತಹ ಯಾವ ಆರೋಪವೂ ಬಂದಿಲ್ಲ. ನಾಟಕ ಕಲೆಯಲ್ಲಿ ಪರಿಣತರಾದವರಿಗೆ, ಕಲಾವಿದರಿಗೆ ಅಮೆಚ್ಯೂರ್ ನಾಟಕ ಕಂಪೆನಿಗಳಿಗೆ ಸಹಾಯ ನೀಡುತ್ತಾ ಇದ್ದಾರೆ, ಅದಕ್ಕೆ 3 ಲಕ್ಷ ರೂಪಾಯಿ ನಿಗಧಿ ಮಾಡಲಾಗಿದೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಈ ನಾಟಕದ ಕಂಪನಿಗಳಿಗೆ ಧನ ಸಹಾಯ ಮಾಡುವಂತಹ ಅಗತ್ಯತೆಯನ್ನು ಮಂತ್ರಿಮಂಡಲದ ಮೇಲೆ ತರುತ್ತೀರಾ ?

ಶ್ರೀ ಎನ್. ಎಂ. ಕೊಟ ಬಸಯ್ಯ ಸೋಗಿ.—ಈ ಬಗ್ಗೆ ಮೊನ್ನೆ ಇದೇ ಸದನದಲ್ಲಿ ಸಾಕಾದಷ್ಟು ಚರ್ಚೆಯಾಗಿದೆ. ಚಲನ ಚಿತ್ರಗಳಿಗೆ ಕೊಟ್ಟಂತೆ ನಾಟಕ ಕಂಪೆನಿಗಳಿಗೂ ಸಹಾಯ ಮಾಡತಕ್ಕದ್ದು ಹೇಗೆ ಅಂತ ವಿಚಾರ ಮಾಡಿ ಸಾಧ್ಯವಿದ್ದರೆ ಆ ಒಂದು ಸಹಾಯವನ್ನು ಮಾಡಬೇಕೆಂಬುದು ಮಂತ್ರಿಮಂಡಲದ ಪರಿಶೀಲನೆಯಲ್ಲಿದೆ. ಅದಕ್ಕೆ ಮಂತ್ರಿಮಂಡಲದ ಒಪ್ಪಿಗೆ ದೊರೆತು, ಹಣಕಾಸಿನ ಖಾತೆಯ ಒಪ್ಪಿಗೆ ದೊರೆತ ಕೂಡಲೇ ಆ ಒಂದು ಯೋಜನೆಯನ್ನು ಜಾರಿಗೆ ತರಲು ಪ್ರಯತ್ನ ಪಡುತ್ತೇವೆ.

ಶ್ರೀ ಜಿ. ವಿ. ಅಂಜನಪ್ಪ.—ಮೈಸೂರು ರಾಜ್ಯದಲ್ಲಿ ಎಷ್ಟು ಜನ ನಟರುಗಳಿಗೆ ಆರ್ಥಿಕ ಸಹಾಯವನ್ನು ನೀಡಲಾಗುತ್ತಿದೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗಾಗಲೇ ಸುಮಾರು 150ಕ್ಕೂ ಮೇಲ್ಪಟ್ಟು ಅಂತಹ ಕಲಾವಿದರಿಗೆ ಮಾಸಾಶನ ಕೊಡುತ್ತ ಇದ್ದೇವೆ. ಅದಲ್ಲದೆ ಸಂಗೀತ ನಾಟಕ ಅಕಾಡೆಮಿಯವರು ಪ್ರತಿ ವರ್ಷ, ವರ್ಷಕ್ಕೆ ಹತ್ತು ಜನರಂತೆ ಈಗಾಗಲೇ 6-7 ವರ್ಷಗಳಿಂದ ಅವರಿಗೆ ಪ್ರಶಸ್ತಿಗಳನ್ನು ನೀಡುತ್ತಾ ಇದ್ದಾರೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಈ ನಾಟಕ ಕಂಪೆನಿಗಳು ಪ್ರತಿ ವರ್ಷ ಒಂದೊಂದಾಗಿ ದಿವಾಳಿ ತೆಗೆದು ಹೋಗುತ್ತಾ ಇವೆ. ಅದರ ಬಗ್ಗೆ ಏನಾದರೂ ಅಂಕಿ ಅಂಶ ಇಟ್ಟುಕೊಂಡಿದ್ದೀರಾ? ಮತ್ತು ಈ ನಾಟಕ ಕಂಪೆನಿಗಳು ಕಲಾವಿದರನ್ನು ತರಬೇತು ಮಾಡತಕ್ಕ ಕೇಂದ್ರಗಳಾಗಿರುವುದರಿಂದ ಕೊನೆ ಪಕ್ಷ ನೂರು ನಾಟಕಗಳನ್ನು ಬೇರೆ ಬೇರೆ ಕಡೆ 25 ಸ್ಥಳಗಳಲ್ಲಿ ಪ್ರದರ್ಶನ ಮಾಡಿದ್ದರೆ ಅಂತಹವರಿಗೆ ಸಿನಿಮಾದವರಿಗೆ ಕೊಡುವಂತ ಸಂಭಾವನೆ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಕಂಪೆನಿಯವರ ಸ್ಥಿತಿ ಕಷ್ಟವಾಗಿರುವುದು ಬರೀ ಹಣಕಾಸಿನ ಪರಿಸ್ಥಿತಿಯಿಂದ ಎಂದು ಹೇಳಲಿಕ್ಕೆ ಬರುವುದಿಲ್ಲ. ಒಳ್ಳೆಯ ನಾಟಕ ಕಂಪೆನಿಗಳು ಇವತ್ತಿಗೂ ಕೂಡ ಗ್ರಾಮೀಣ ಮತ್ತು ನಗರದಲ್ಲೂ ಸಹ ಹೆಚ್ಚು ಜನಾಕರ್ಷಣೆಯನ್ನು ಮಾಡಿ ಪ್ರಸಿದ್ಧಿ ಪಡೆಯುತ್ತಾ ಇವೆ. ರಾಷ್ಟ್ರೀಯ ಮನೋಭಾವ ಬರತಕ್ಕ ರಾಷ್ಟ್ರೀಯ ತತ್ವಪಾಗಿರತಕ್ಕ ಹರಿಜನೋದ್ಧಾರ ಮತ್ತು ಭಾವೈಕ್ಯತೆಗೆ ಸಂಬಂಧಪಟ್ಟ ವಿಷಯಗಳ ಮೇಲೆ ನಾಟಕಗಳನ್ನು ಮತ್ತು ಸ್ಕ್ರಿಪ್ಟ್‌ನ್ನು ಬರೆಸಿ ಅವನ್ನು ತಜ್ಞರಿಂದ ಪರಿಶೀಲನೆ ಮಾಡಿಸಿ ನಾಟಕ ಕಂಪೆನಿಯವರು ಆ ನಾಟಕಗಳನ್ನು ಆಡುವುದಕ್ಕೆ ಒಂದು ಅನುಕೂಲತೆ ಮಾಡಿಕೊಟ್ಟು ಯಾವ ಕಂಪೆನಿಗಳವರು ಆ ನಾಟಕಗಳನ್ನು ಆಡುತ್ತಾರೋ ಅವರಿಗೆ ಪ್ರತಿದಿನಕ್ಕೆ 150 ರೂಪಾಯಿಗಳು ಮತ್ತು ಬೆಂಗಳೂರು ನಗರದಲ್ಲಿ ಆಡಿದರೆ 7 ಸಾವಿರ ರೂಪಾಯಿಗೆ ಹೆಚ್ಚಾಗದಂತೆ, ಗ್ರಾಮೀಣ ಪ್ರವೇಶದಲ್ಲಾದರೆ 5 ಸಾವಿರ ರೂಪಾಯಿಗಳಿಗೆ ಹೆಚ್ಚಾಗದಂತೆ ಸಹಾಯ ಮಾಡಬೇಕೆಂಬ ಒಂದು ಯೋಜನೆ ಸಿದ್ಧವಾಗಿದೆ, ಅದು ಮಂತ್ರಿಮಂಡಲದ ಪರಿಶೀಲನೆಯಲ್ಲಿ ಇದೆ.

ಶ್ರೀ ಬಸವರಾಜ ಕಟ್ಟೀಮನೆ.—ಸುರಾಮೃತ ಮತ್ತು ಅಧಾರಾಮೃತ ಇವುಗಳನ್ನು ಸೇವೆ ಮಾಡಿ ತರುಣರು ತಮ್ಮ ತಾರುಣ್ಯದಲ್ಲಿಯೇ ಮುಪ್ಪಾದವರಿಗೂ ನಿವೃತ್ತಿ ವೇತನ ಅಥವಾ ಸಹಾಯ ಮಾಡತಕ್ಕ ಅಂಶವನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದು ಮಾನ್ಯ ಸದಸ್ಯರ ಅಭಿಪ್ರಾಯ.

ಶ್ರೀ ಕೆ. ಚನ್ನಬಸವನಗೌಡ.—ಹಿಂದೆ ಬಯಲಾಟ ಮತ್ತು ದೊಡ್ಡಾಟ ಇವುಗಳಿಗೆ ಆ ಸಂಸ್ಕೃತಿ ಪ್ರಚಾರ ಇಲಾಖೆಯವರು ಸಹಾಯ ಧನವನ್ನು ಹಳ್ಳಿಹಳ್ಳಿಗೂ ನೀಡುತ್ತಿದ್ದರು. ಈಗಲೂ ಅದೇ ರೀತಿ ಸಹಾಯವನ್ನು ಕೊಡತಕ್ಕದ್ದನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸರ್ಕಾರದವರು ಈಗ ಯಕ್ಷಗಾನ, ಬಯಲಾಟ ಇತ್ಯಾದಿ ಎಲ್ಲಾ ಕಲೆಗಾರರನ್ನೂ ಸೇರಿಸಿ ಒಂದು ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಅದರಲ್ಲಿ ವಿಜಯಶಾಲಿಗಳಾದವರಿಗೆ ಬಹುಮಾನ ವಿತರಣೆಯನ್ನು ಮಾಡತಕ್ಕ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ.

SHORT NOTICE QUESTIONS AND ANSWERS

Closure of Siddeswara Textile Mills, Davangere

7. Sri A. H. SHIVANANDASWAMY (Elected by L. A.).—

Will the Minister for Law, Labour and Parliamentary Affairs be pleased to state :—

(*a*) whether it is a fact that Sree Siddeswara Textile Mills (Private) Limited, Davangere has been closed down recently due to Labour trouble ;

(SRI A. H. SHIVANANDA SWAMY)

(*b*) the number of workers that have gone on strike ;

(*c*) whether it has resumed production ?

Sri K. PUTTASWAMY.—(Minister for Law, Labour and Parliamentary Affairs).—

(*a*) Yes.

(*b*) About 1,000 workers.

(*c*) The Mills is partially working with about 200 workers.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ದಾವಣಗೆರೆಯಲ್ಲಿರತಕ್ಕ ಸಿದ್ದೇಶ್ವರ ಬಟ್ಟೆ ಗಿರಣಿಯಲ್ಲಿ ಕೆಲಸಗಾರರು ಕೆಲಸ ನಿಲ್ಲಿಸಿ ಎಷ್ಟು ದಿನಗಳಾಯಿತು ?

Sri K. PUTTASWAMY.—The workers went on strike on 25th June 1969.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ವಿವಾದವನ್ನು ಬಗೆಹರಿಸುವುದಕ್ಕಾಗಿ ಸರ್ಕಾರದವರು ಕೈಗೊಂಡ ಕಾರ್ಯಕ್ರಮಗಳೇನು ?

Sri K. PUTTASWAMY.—That is given in the reply to the question. The Government have referred the dispute for adjudication on 23rd July 1969 and have prohibited the strike.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—1 ಸಾವಿರಜನ ಕೆಲಸಗಾರರಲ್ಲಿ ಕೇವಲ 200 ಜನ ಮಾತ್ರ ಕೆಲಸಕ್ಕೆ ಹೋಗದೆ ನಿಂತಿದ್ದಾರೆ. ಅವರನ್ನೂ ಏಕೆ ಕೆಲಸಕ್ಕೆ ಬರಮಾಡಿಕೊಳ್ಳಬಾರದು ?

Sri K. PUTTASWAMY.—The workers are to return to work. There is no impediment for their returning to work.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಅಲ್ಲಿ ಕೆಲಸ ನಡೆಯದೆ ನಿಲ್ಲಲು ಕಾರಣವೇನು ?

Sri K. PUTTASWAMY.—The workers have not returned to duty.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಅಲ್ಲಿ ನಿತ್ಯವೂ ಹಿಂಸಾಕೃತ್ಯಗಳು ನಡೆಯುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಬಂದಿಲ್ಲ.

Sri G. V. GOWDA.—May I know the nature of settlement between the labour and the management ?

Sri K. PUTTASWAMY.—That has been referred to adjudication.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಮುಷ್ಕರವನ್ನು ತಡೆಗಟ್ಟುವುದಕ್ಕೆ ತಕ್ಷಣ ಪ್ರಯತ್ನ ಮಾಡುತ್ತೀರಾ ?

Sri K. PUTTASWAMY.—The Government have prohibited the strike. Legally, anybody continuing on strike is committing an offence. We have not taken action against them under law. Even now I wou'd advise the workers to return to duty.

Hunger Strike by Government Soap Factory Workers, Bangalore

9. Sri A. K. SUBBAIAH (Graduate's Constituency).—

Will the Minister for Law, Labour and Parliamentary Affairs be pleased to state :—

(a) whether the Government is aware of the protest hunger strike commenced by the workers of the Government Soap Factory within the campus of Vidhana Soudha;

(b) if so, the reason for such strike;

(c) the steps taken by the Government to avert further developments in the matter?

Sri K. PUTTASWAMY (Minister for Law, Labour and Parliamentary Affairs).—

(a) Yes.

(b) The workers who are members of the workers and staff Association of the Government Soap Factory have resorted to hunger strike as a protest against the settlement signed by the Management with the Government Soap Factory Employees' Union.

(c) The Government is watching the situation and will take appropriate steps at the appropriate time.

Sri A. K. SUBBAIAH.—May I know when they resorted to strike and whether the strike is still continuing?

Sri K. PUTTASWAMY.—The Government Soap Factory Employees Union accepted all the terms of settlement and signed it on 16th August. Thereafter 200 persons are working and others are continuing the strike.

Sri A. K. SUBBAIAH.—In answer to (c) you have stated 'appropriate time'. May I know what exactly is the appropriate time in the mind of the Government?

Sri K. PUTTASWAMY.—The situation is not considered to be abnormal. Two hundred persons are working and it is only some of the staff members are on hunger strike. According to the Government the situation has not reached a stage where the Government should take any precipitate action.

Sri A. K. SUBBAIAH.—Is it not a fact that the workers' union and staff association of the Government Soap Factory are recognised by the management under the Code of Discipline?

3-30 P.M.

Sri K. PUTTASWAMY.—I have no information on that point.

ಶ್ರೀ ಜಿ. ವಿ. ಆಂಜನಪ್ಪ.—ಅರ್ಜೆನ್ಟ್ ಮೀಟಿಂಗಿನಲ್ಲಿ ಎಷ್ಟು ಜನ ಸದಸ್ಯರುಗಳು ಹಾಜರಿದ್ದರು ಎನ್ನುವುದನ್ನು ಹೇಳುವುದಕ್ಕಾಗುತ್ತದೆಯೇ ?

Sri B. M. PATIL.—I do not have that information with me just now. If the hon. Member wants that information, I will get it and furnisq it.

Mr. DEPUTY CHAIRMAN.—Now Question No. 121 for the Supplementary 15th list of Questions and Answers.

Supersession of Chitradurga Municipal Council

121. Sri CHANNAIAH WADEYAR (Local Authorities' Constituency).—

Will the Minister of State for Municipal Administration be pleased to state :—

(*a*) the reason for superseding the Municipal Council, Chitradurga Town after the expiry of the extended term ;

(*b*) the action taken by Government against the unauthorised disposal of public sites by the President of Chitradurga Municipal Council ;

(*c*) whether the Government has given sanction to all the grants made by the President under Section 72 of Municipal Act, 1964 ;

(*d*) whether the Chitradurga Municipal Council has run for a period of one year without transacting any business at monthly meetings. If so, the action, the Deputy Commissioner has taken to set right the affairs of the Council when the matter was brought to his notice by the members of the Council ;

(*e*) the person responsible for the unauthorised expenditure without convening the budget meeting and obtaining sanction of the Council for the budget ;

(*f*) the reasons for not appointing an Enquiry Officer to enquire into the allegations levelled against the Municipal Chief Officer and the Municipal President by the Members of the Municipal Council ?

Sri B. M. PATIL (Minister of State for Municipal Administration).—

(*a*) Details furnished in the Statement (appended).

(*b*) The Deputy Commissioner, Chitradurga will take necessary action wherever the sites are disposed of unauthorisedly.

(SRI B. M. PATIL)

(*c*) No.

(*d*) No.

(*e*) The President and the Council.

(*f*) The Deputy Commissioner after carefully examining some of the allegations has come to the conclusion that there is no substance in the allegations. He is still conducting enquiry into other allegations. His findings are awaited.

ANNEXURE

Statement of Reasons for the order of supersession.

1 The Town Municipal Council, Chitradurga has practically failed in discharging the mandatory function of conducting monthly meetings of the Municipal Council as envisaged under Section 47 (1) of the Mysore Municipalities Act, 1964 for one year from 1st April 1968 to 31st March 1969.

2 Cesses, royalty and audit charges due to Government from 1959-60 amounting to Rs. 82,405 have not been paid by the Town Municipal Council in spite of observations made during the inspections of the office and in spite of circular instructions issued both from Government and the Divisional Commissioner.

3 There are very heavy Mohatarfa and other arrears amounting to Rs. 2,33,143 to be collected by the Town Municipal Council, which have been outstanding for years and the Town Municipal Council has failed to review the work of collection staff and step up the collection of arrears to improve the financial position of the Town Municipal Council during 1968-69.

4 There are overdue loans to the extent of Rs. 10,37,514 as on 31st March 1969 and the Municipal Council on account of the differences among the Councillors, have failed to convene meetings and make adequate provisions to repay the loan at least to the extent provided in the Budget for 1968-69.

5 The Town Municipal Council in its present state of affairs will not be able to complete the comprehensive water supply scheme from V. V. Sagar, taken up at an estimated cost of Rs. 87 lakhs raising a loan from the Life Insurance Corporation of India, Bombay on the guarantee given by Government and public will be deprived of the due need of water supply, the Town Municipal council has to pay Rs. 83,750 towards principal and interest during April, 1969 and make provision for a sum of Rs. 6 lakhs towards repayment of loan for 1969-70 and the Town Municipal Council has not sent the Budget Estimates for 1969-70 so far, in spite of several instructions issued.

6 The Town Municipal Council has not taken timely action to renew the leases that expire on 31st March 1969 resulting in heavy loss to the Municipality.

Sri A. K. SUBBAIAH.—In answer (*d*) t is isaid :

"The Deputy Commissioner, Chitradurga, will take Necessary action wherever the sites are disposed of unauthorisedly."

How many cases of such unauthorised disposal have been reported to Government ?

Sri B. M. PATIL.—So far no unauthorised allotment has been reported to Government. But the Deputy Commissioner is still investigating into the irregularities and allegations made. If any unauthorised allotment is made, certainly the Deputy Commissioner will take proper action in the matter.

Mobile Soil Testing Laboratories

164. Smt. M. R. LAKSHAMMA (Graduates' Constituency).—

Will the Minister for Agriculture be pleased to state :—

whether the Agricultural Department intends to provide itself with a dozen or so of Mobile soil testing Laboratories equipped with essential instruments and technical staff so as to be of assistance to the farmers of the State ?

Sri B. RACHAIAH (Minister for Agriculture).—

No.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಉತ್ತರದಲ್ಲಿ ಇಲ್ಲ ಎಂದು ಇದೆ. ಇದರ ಉದ್ದೇಶವೇನು ಎನ್ನುವುದನ್ನು ತಿಳಿಸುತ್ತಾರೆಯೇ ?

† ಶ್ರೀ ಬಿ. ರಾಚಯ್ಯ.—12 ಪ್ರಯೋಗ ಶಾಲೆಗಳು ಎಂದು ಕೇಳಿದುದಕ್ಕೆ ಇಲ್ಲ ಎಂದು ಹೇಳಲಾಗಿದೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಈಗ ಎಷ್ಟು ಇದೆ ?

ಶ್ರೀ ಬಿ. ರಾಚಯ್ಯ.—ಒಂದು ಮಾತ್ರ ಇದೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಬೇಸಾಯಗಾರರಿಗೆ ಅನುಕೂಲವಾಗುವಂತೆ ಮಣ್ಣು ಪ್ರಯೋಗ ಪರೀಕ್ಷಾ ಕೇಂದ್ರಗಳನ್ನು ಎಲ್ಲೆಲ್ಲಿ ಮಾಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಈಗ ಎರಡು ಜಿಲ್ಲೆಗಳಿಗೆ ಒಂದರಂತೆ ಪ್ರಯೋಗ ಕೇಂದ್ರಗಳನ್ನು ಮಾಡಿದೆ. ಇದನ್ನು ಇನ್ನೂ ಹೆಚ್ಚು ಮಾಡಬೇಕೆಂದು ಇದೆ. ಒಟ್ಟು ಈಗ ಒಂಬತ್ತು ಮಣ್ಣು ಪ್ರಯೋಗ ಕೇಂದ್ರಗಳಿವೆ. ಇನ್ನೂ ಒಂದನ್ನು ಹೆಚ್ಚಿಸಬೇಕು ಎಂದು ಇದೆ ಮತ್ತು ಮುಂದೆ ಇದನ್ನು ಜಿಲ್ಲೆಗೊಂದರಂತೆ ಮಾಡಬೇಕು ಎಂದು ಸರಕಾರದ ಉದ್ದೇಶವಾಗಿದೆ.

ಶ್ರೀ ಪಿ. ಎಚ್. ಶಿವಾನಂದಸ್ವಾಮಿ.—ಮಣ್ಣು ಪ್ರಯೋಗಾ ಪರೀಕ್ಷಾ ಕೇಂದ್ರಗಳಲ್ಲಿ ಆಯಾಯ ಪ್ರದೇಶದಲ್ಲಿರುವ ಸರ್ವೆ ನಂಬರುಗಳ ಮಣ್ಣುಗಳನ್ನು ತೆಗೆದು ಪರೀಕ್ಷೆ ಮಾಡಿ ಆಯಾಯ ಸ್ಥಳಗಳಲ್ಲಿರುವ ರೈತರ ತಿಳುವಳಿಕೆಗಾಗಿ ಒಂದು ಪಟ್ಟಿ ತಯಾರು ಮಾಡಿ ರೈತರು ಹೆಚ್ಚು ಬೆಳೆ ಬೆಳೆಯಲು ಅನುಕೂಲವಾಗುತ್ತದೆ. ಇದರ ಬಗ್ಗೆ ಸರಕಾರ ಯೋಚನೆ ಮಾಡಿದೆಯೇ ?

ಶ್ರೀ ಬಿ. ರಾಚಯ್ಯ.—ಸಾಯಿಲ್ ಟೆಸ್ಟಿಂಗ್ ಲ್ಯಾಬರೇಟರಿಯಲ್ಲಿ ಒಂದೊಂದು ತಾಲ್ಲೂಕು ಕೇಂದ್ರಗಳಲ್ಲಿ ಇರುವ ಮಣ್ಣನ್ನು ಪರೀಕ್ಷೆ ಮಾಡಿ ಅಲ್ಲಿ ಒಂದು ಭೂಪಟ ತಯಾರು ಮಾಡಿ ಹಾಕಿಟ್ಟಿದ್ದಾರೆ.

ಶ್ರೀ ಕೆ. ಎಸ್. ಚನ್ನಪ್ಪ.—ಹೆಬ್ಬಾಳಿನಲ್ಲಿರುವ ಮಣ್ಣು ಪರೀಕ್ಷಾ ಕೇಂದ್ರದಲ್ಲಿ ಮಣ್ಣನ್ನು ಪರೀಕ್ಷೆಗೆ ಕಳುಹಿಸಿದರೆ ವರ್ಷಾನುಗಟ್ಟಲೆಯಾದರೂ ಮಣ್ಣು ಪರೀಕ್ಷೆ ಮಾಡಿ ವಾಪಸು ಕಳುಹಿಸುತ್ತಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ರಿಪೋರ್ಟ್ ಕಳುಹಿಸಲು ವರ್ಷಾನುಗಟ್ಟಲೆ ಏನೂ ತೆಗೆದುಕೊಳ್ಳುತ್ತಿಲ್ಲ.

ಶ್ರೀ ಕೆ. ಟಿ. ಶಾಮಯ್ಯಗೌಡ.—ನಮ್ಮ ದೇಶದಲ್ಲಿ ಈಗ ಎಷ್ಟು ಸಾಯಿಲ್ ಟೆಸ್ಟಿಂಗ್ ಕೇಂದ್ರಗಳಿವೆ ?

ಶ್ರೀ ಬಿ. ರಾಚಯ್ಯ.—ಈಗಿರತಕ್ಕ ಕೇಂದ್ರಗಳು ಎಂಟು. ಇವನ್ನು ಎರಡು ಜಿಲ್ಲೆಗೆ ಒಂದರಂತೆ ಏರ್ಪಾಡು ಮಾಡಲಾಗಿದೆ. ಇನ್ನೂ ಎರಡು ಕೇಂದ್ರಗಳನ್ನು ತೆರೆಯಬೇಕೆಂದು ಮಾತಲಾಗಿದೆ. ಒಂದು ಶಿವಮೊಗ್ಗದಲ್ಲಿ ಇನ್ನೊಂದು ದಾವಣಗೆರೆಯಲ್ಲಿ ತೆರೆಯಲಾಗಿದೆ. ಮತ್ತೊಂದನ್ನು ಗುಲ್ಬರ್ಗದಲ್ಲಿ ತೆಗೆಯಬೇಕೆಂದು ಇದೆ. ಈಗ ಎರಡು ಜಿಲ್ಲೆಗೆ ಒಂದರಂತೆ ಮಾಡಿರುವುದನ್ನು ಮುಂದೆ ಪ್ರತಿ ಜಿಲ್ಲೆಗೂ ಒಂದರಂತೆ ಕೇಂದ್ರಗಳನ್ನು ಮಾಡಬೇಕೆಂದು ಇದೆ. ಇದೂ ಅಲ್ಲದೆ ಒಂದು ಸಂಚಾರಿ ಮಣ್ಣು ಪರೀಕ್ಷಾಕೇಂದ್ರ ಎಂದು ವಾಹನವನ್ನು ಒದಗಿಸಿ ರೈತರಿಗೆ ತಿಳುವಳಿಕೆ ಕೊಡುತ್ತಿದ್ದಾರೆ. ಇನ್ನೊಂದು ವಾಹನವನ್ನು ಕೇಂದ್ರದವರು ಕೊಡುವುದರಲ್ಲಿದ್ದಾರೆ. ಅದಕ್ಕೂ ಪ್ರಯತ್ನ ಮಾಡಿ ಎಲ್ಲ ಕಡೆಗೂ ಹಂಚಿ ಅನುಕೂಲ ಮಾಡಬೇಕೆಂದು ಇದೆ.

3-00 P.M.

ಶ್ರೀ ವೈ. ಎಸ್. ಪಾಟೀಲ್.—ಈ ಮಣ್ಣು ಪರೀಕ್ಷಿಸುವ ಕೆಲಸವನ್ನು ಅಲ್ಲಲ್ಲಿ ಇರುವ ವಿಜ್ಞಾನ ಮಂದಿರಗಳಿಗೆ ವಹಿಸಿಕೊಟ್ಟಿದ್ದೀರಾ ?

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ವಿಜ್ಞಾನ ರಿಸರ್ಚ್ ಸೆಂಟರ್ಸ್ ಎಂದು ಏನು ಹೇಳುತ್ತಾರೋ ಅದು ನನಗೆ ಅರ್ಥವಾಗುವುದಿಲ್ಲ. ಅವನ್ನು ಖಾಸಗಿಯಾಗಿ ಮಣ್ಣು ಪರೀಕ್ಷೆ ಮಾಡುವುದಕ್ಕೆ ಯಾರು ಮುಂದೆ ಬರುತ್ತಾರೋ ಅಂತಹ ಕಡೆ ಸಹಾಯಧನವನ್ನು ಕೊಡುತ್ತೇವೆ. ಅದೇ ರೀತಿ ಶಿರಸಿಯಲ್ಲಿ ಒಂದು ಸ್ಥಾಪನೆಯಾಗಿದೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಸ್ವಾಮಿ, ಮಣ್ಣು ಪರೀಕ್ಷಾ ಸಂಚಾರ ಪ್ರಯೋಗ ಶಾಲೆ ಇದೆ ಎಂದು ಏನು ಹೇಳಿದಿರಿ ಅದು ಅತ್ಯಾವಶ್ಯಕವಾಗಿರುವುದರಿಂದ ಸದ್ಯಕ್ಕೆ 12 ಆದರೂ ಪ್ರಾರಂಭಿಸುವುದಕ್ಕೆ ಎಷ್ಟು ಹಣ ಹೆಚ್ಚುವರಿ ಖರ್ಚಾಗುತ್ತದೆ ?

ಶ್ರೀ ಬಿ. ರಾಚಯ್ಯ.—ಸುಮಾರು 25-30 ಲಕ್ಷ ರೂಪಾಯಿ ಖರ್ಚಾಗುತ್ತದೆ.

ಶ್ರೀ ಟಿ. ಚೆನ್ನಬೈರೇಗೌಡ.—ಸ್ವಾಮಿ, ತಾಲ್ಲೂಕ್ ಬೋರ್ಡ್‌ನಲ್ಲಿ ಡೆವಲಪ್‌ಮೆಂಟ್ ಆಫೀಸರ್ಸ್ ಇದ್ದಾರೆ. ಅಲ್ಲಿ ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರು ಇದ್ದಾರೆ, ಅವರಮೇಲೆ ಅಗ್ರಿಕಲ್ಚರಲ್ ಆಫೀಸರ್ ಇದ್ದಾರೆ ಹೀಗೆಲ್ಲಾ ಇರುವುದರಿಂದ ಆ ತಾಲ್ಲೂಕಾ ಲೆವಲ್ಲಿನಲ್ಲೇ ಮುಖ್ಯ ಮುಖ್ಯವಾದ ಜಾಗಗಳಲ್ಲಿ ಭೂಮಿಯ ಗುಣ ಅದರ ಪರೀಕ್ಷೆ ಮಾಡಿ ಹೇಳಲು ಒಂದು ಛಾರ್ಟ್ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಯಾವ ಯಾವ ರೈತರು ಮಣ್ಣು ಪರೀಕ್ಷೆ ಮಾಡಬೇಕು ಎಂದು ಅಪೇಕ್ಷೆ ಪಡುತ್ತಾರೋ ಅದನ್ನು ತೆಗೆದುಕೊಂಡು ಬಂದರೆ ಹೇಳುತ್ತೇವೆ. ಈ ವಿಷಯದಲ್ಲಿ ಸಾಕಷ್ಟು ವಿವರಗಳನ್ನು ಕೊಡುತ್ತಾರೆ ಎಂದು ಹೇಳುತ್ತೇನೆ. ಮಣ್ಣು ಪರೀಕ್ಷಾ ಕೇಂದ್ರ ಏನು ಇವೆ ಅಲ್ಲಿಗೆ ಕಳುಹಿಸಿಕೊಟ್ಟರೆ ಪರೀಕ್ಷೆ ಮಾಡಿಕೊಡುತ್ತಾರೆ.

ಶ್ರೀ ಬಸವರಾಜ ಕಷ್ಟೀಮನಿ.—ಈ ಕೃಷಿ ಇಲಾಖಾ ಅಧಿಕಾರಿಗಳಿಗೆ ಮಣ್ಣು ಪರೀಕ್ಷೆ ಮಾಡುವ ವಿಚಾರದಲ್ಲಿ ಪ್ರತಿಯೊಬ್ಬ ಅಧಿಕಾರಿಗೂ ತರಪೇತಿ ಸಿಕ್ಕುತ್ತಿದೆಯೇ, ಸ್ವಾಮಿ ?

ಶ್ರೀ ಬಿ. ರಾಚಯ್ಯ.—ಸಿಕ್ಕುತ್ತದೆ, ಸ್ವಾಮಿ.

ಶ್ರೀ ಜಿ. ವಿ. ಅಂಜನಪ್ಪ.—ಮೊಬೈಲ್ ಸಾಯಿಲ್ ಟೆಸ್ಟಿಂಗ್ ಲ್ಯಾಬರೇಟರಿ ಅದು ಇಡೀ ರಾಜ್ಯದಲ್ಲಿ ಸಂಚಾರ ಮಾಡುತ್ತಿದೆಯೇ ಅಥವಾ 1-2 ಜಿಲ್ಲೆಯಲ್ಲಿ ಸಂಚಾರ ಮಾಡುತ್ತಿದೆಯೇ ?

ಶ್ರೀ ಬಿ. ರಾಚಯ್ಯ.—ಯಾವ ಜಿಲ್ಲೆಯಲ್ಲಿ ಮಣ್ಣು ಪರೀಕ್ಷಾ ಕೇಂದ್ರ ಇಲ್ಲವೋ ಅಂತಹ ಕಡೆ ಇದನ್ನು ಕಳುಹಿಸಬೇಕೆಂದು ಮಾಡುತ್ತೇವೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಒಂದು ಜಿಲ್ಲೆಗೆ ಪರೀಕ್ಷಾ ಪ್ರಯೋಗಾರ್ಥವಾಗಿ ಮೊಬೈಲ್ ವ್ಯಾನನ್ನು ಕಳುಹಿಸಿಕೊಟ್ಟಿದ್ದೇವೆ ಎಂದು ಹೇಳಿದಿರಲ್ಲಾ. ಆ ಜಿಲ್ಲೆ ಯಾವ ಜಿಲ್ಲೆ ಎಂದು ಹೇಳುತ್ತೀರಾ?

ಶ್ರೀ ಬಿ. ರಾಚಯ್ಯ.—ಇನ್ನೂ ಕಳುಹಿಸಿಕೊಟ್ಟಿಲ್ಲ ಈಗತಾನೇ ಬಂದಿದೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಜರಿ ರುಮಾಲು ಇರುವ ಸದಸ್ಯರು ಕೇಳಿದರು 9 ತಿಂಗಳು ಆದರೂ ಈ ಮಣ್ಣು ಪರೀಕ್ಷೆಗೆ ಕಳುಹಿಸಿಕೊಟ್ಟರೂ ಬರಲಿಲ್ಲ ಎಂದು. ಇನ್ನು ಸಾಧಾರಣ ರೈತ ಮಣ್ಣನ್ನು ಕಳುಹಿಸಿಕೊಟ್ಟರೆ ವರ್ಷಾನುಗಟ್ಟಲೆ ಆಗಬಹುದು. ಸರ್ಕಾರದವರು ಇದನ್ನು ಮನಗಂಡು ಆದಷ್ಟು ಶೀಘ್ರವಾಗಿ ಈ 12 ಮಣ್ಣು ಸಂಚಾರಿ ವಾಹನಗಳನ್ನು ಒಂದೊಂದನ್ನೂ ಒಂದೊಂದು ಜಿಲ್ಲೆಗೆ ಕಳುಹಿಸಲು ಏರ್ಪಾಡು ಮಾಡುತ್ತೀರಾ?

ಶ್ರೀ ಬಿ. ರಾಚಯ್ಯ.—ಈಗ ಇರತಕ್ಕಂಥ ಮಣ್ಣು ಪರೀಕ್ಷಾ ಕೇಂದ್ರಗಳಲ್ಲಿ ಒಂದು ವರ್ಷಕ್ಕೆ 30 ಸ್ಯಾಂಪಲ್ಸ್ ಪರೀಕ್ಷೆ ಮಾಡಬೇಕೆಂದು ಇದೆ. ಇದುವರೆಗೆ ಯಾವುದೂ ಆ ಗುರಿ ಮುಟ್ಟಿಲ್ಲ. ಇನ್ನು 9 ತಿಂಗಳು ತಡ ಆಗಿದೆ ಎಂದರೆ ಅದನ್ನು ನಾನು ವಿಚಾರಿಸಬೇಕಾಗುತ್ತದೆ. ಅಲ್ಲದೆ ಈ 12 ಮಣ್ಣು ಪರೀಕ್ಷಾ ವಾಹನಗಳನ್ನು ಒದಗಿಸಿಕೊಡಬೇಕಾದರೂ ಕೂಡ ಒಂದೇ ವರ್ಷದಲ್ಲಿ ಮಾಡಬೇಕು ಎಂದರೆ ಸಾಧ್ಯವಾಗುವುದಿಲ್ಲ. ಹಣ ಒದಗಿದಂತೆ ಪ್ರಿಯಾರಿಟಿ ಕೊಟ್ಟು ಮಾಡ ಬೇಕಾಗುತ್ತದೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಸ್ವಾಮಿ, ಮಣ್ಣು ಪ್ರಯೋಗ ಶಾಲೆಗಳನ್ನು ಹೆಚ್ಚು ಮಾಡಬೇಕಾದರೆ, ಪಾಲಿಟೆಕ್ನಿಕ್ ಇಂಜನಿಯರಿಂಗ್ ಕಾಲೇಜುಗಳು ಮತ್ತು ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್ಸ್ ಎಲ್ಲೆಲ್ಲಿ ಇವೆಯೋ ಅಲ್ಲಿ ಏನಾದರೂ ಒಂದೊಂದು ಭಾಗವನ್ನು ತೆರೆಯುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೆಯೇ?

ಶ್ರೀ ಬಿ. ರಾಚಯ್ಯ.—ಇಲ್ಲ. ಇದಕ್ಕೆ ಎಕ್ವಿಪ್‌ಮೆಂಟ್ಸ್, ಸ್ಥಳಾವಕಾಶ ಇವೆಲ್ಲಾ ಬೇಕಾಗುತ್ತದೆ. ಇದನ್ನು ಒಂದೇ ವರ್ಷದಲ್ಲಿ ಮಾಡುವುದಕ್ಕಾಗುವುದಿಲ್ಲ. ಕ್ರಮೇಣವಾಗಿ ಮಾಡ ಬೇಕಾಗುತ್ತದೆ.

ಶ್ರೀ ವಿ. ವೆಂಕಟಪ್ಪ.—ಸಂಚಾರಿ ಯೂನಿಟ್ ನಮ್ಮ ದೇಶದಲ್ಲಿ ತಯಾರಾಗುತ್ತದೆಯೋ ಅಥವಾ ಹೊರ ದೇಶಗಳಲ್ಲಿ ತಯಾರಾಗುತ್ತದೆಯೋ?

ಶ್ರೀ ಬಿ. ರಾಚಯ್ಯ.—ಅದನ್ನು ಹೊರದೇಶಗಳಿಂದ ತರಿಸಬೇಕಾಗುತ್ತದೆ.

ಶ್ರೀ ಜಿ. ವಿ. ಅಂಜನಪ್ಪ.—ಸಂಚಾರಿ ಮಣ್ಣು ಪರೀಕ್ಷೆ ಪ್ರಯೋಗ ಶಾಲೆ ಎಲ್ಲೆಲ್ಲಿ ರೈತರ ಬೇಡಿಕೆ ಇದೆ ಆ ಪ್ರದೇಶಕ್ಕೆ ಜಾಗ್ರತೆಯಾಗಿ ಹೋಗಿ ಪರೀಕ್ಷೆ ಮಾಡುತ್ತದೆಯೋ ಅಥವಾ ರೈತರೇ ಇದು ಇರುವ ಕಡೆಗೆ ಮಣ್ಣನ್ನು ಪರೀಕ್ಷೆಗೆ ಕಳಿಸಬೇಕೇ?

ಶ್ರೀ ಬಿ. ರಾಚಯ್ಯ.—ಸಂಚಾರಿ ಪ್ರಯೋಗ ಶಾಲೆ ಎಂದು ಹೇಳುವುದರಲ್ಲಿಯೇ ರೈತರಿರುವಲ್ಲಿಗೆ ಹೋಗುತ್ತದೆ ಎಂದು ಅರ್ಥವಾಗುತ್ತದೆ.

ಶ್ರೀ ಎಂ. ಲಿಂಗಣ್ಣ.—ಮಣ್ಣು ಪರೀಕ್ಷೆ ಕೇಂದ್ರಗಳನ್ನು ಸ್ಥಾಪನೆ ಮಾಡುವಾಗ ಸಹಕಾರ ಸಂಸ್ಥೆಗಳು ಮುಂದೆ ಬಂದರೆ ಅಲ್ಲಿ ಈ ಮಣ್ಣು ಪರೀಕ್ಷೆ ಕೇಂದ್ರವನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೆಯೇ?

ಶ್ರೀ ಬಿ. ರಾಚಯ್ಯ.—ನಾನು ಈಗಾಗಲೇ ಹೇಳಿದ್ದೇನೆ, ಒಂದು ವರ್ಷಕ್ಕೆ ಕನಿಷ್ಠ ಪಕ್ಷ ಅವರು 30 ಸಾವಿರ ಸ್ಯಾಂಪಲ್‌ಗಳನ್ನು ಪರೀಕ್ಷೆ ಮಾಡತಕ್ಕ ವ್ಯವಸ್ಥೆಯನ್ನು ಮಾಡಿಕೊಂಡರೆ ಕನಿಷ್ಠ ಪಕ್ಷ 20 ಸಾವಿರ ರೂಪಾಯಿಗಳನ್ನು ಸಬ್ಸಿಡಿಯಾಗಿ ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಸಂಚಾರಿ ಮಣ್ಣು ಪರಿಶೋಧನಾ ಯೂನಿಟ್ ತರಿಸುವಾಗ್ಗೆ ಒಂದೊಂದು ಜಿಲ್ಲೆಗೆ ಹೋಗಿ ಆ ಜಿಲ್ಲೆಯಲ್ಲಿರುವ ಪ್ರತಿಯೊಂದು ಭೂಮಿಯ ಮಣ್ಣನ್ನೂ, ಪ್ರತಿಯೊಂದು ಗ್ರಾಮದ ಮಣ್ಣನ್ನೂ ಪರಿಶೋಧಿಸಿ ಇಡೀ ಸಂಸ್ಥಾನದ ಮಣ್ಣು ಸಂಶೋಧನಾ ಮ್ಯಾಪ್ ತಯಾರಿಸುವ ಕಾರ್ಯಕ್ರಮವನ್ನು ಕೈಗೊಳ್ಳುವುದು ಯೋಗ್ಯವಲ್ಲವೇ?

ಶ್ರೀ ಬಿ. ರಾಚಯ್ಯ.—ಅದು ಒಳ್ಳೆಯ ಸಲಹೆ, ಸ್ವಾಮಿ.

ಶ್ರೀ ಕೆ. ಟಿ. ಶಾಮಯ್ಯ ಗೌಡ.—ಶಿವಮೊಗ್ಗ ಜಿಲ್ಲೆಯಲ್ಲಿ ಮಣ್ಣು ಪರೀಕ್ಷಾ ಕೇಂದ್ರವನ್ನು ಮಂಜೂರು ಮಾಡಿರುವುದಾಗಿ ಹೇಳಿದರು. ಅದು ಯಾವಾಗ ಬರಬಹುದು ? ಹೈ ಯೀಲ್ಡಿಂಗ್ ವೆರೈಟೀಸ್‌ನಲ್ಲಿ ಈಗ ಕಾಯಿಲೆ ಜಾಸ್ತಿಯಾಗಿದೆ. ಆದುದರಿಂದ ಮಣ್ಣು ಪರೀಕ್ಷಾ ಮಾಡಿಸುವುದಕ್ಕೆ ಪೂರ್ತಿಯಾಗಿ ಸಜ್ಜಿತವಾದ ಕೇಂದ್ರವನ್ನು ಸ್ಥಾಪನೆ ಮಾಡುತ್ತೀರೋ ಅಥವಾ ಮೂರು ಸಾವಿರ ರೂಪಾಯಿಗಳ ಒಂದು ಪರೀಕ್ಷೆ ಕೇಂದ್ರವನ್ನು ಮಾತ್ರ ಮಾಡುತ್ತೀರೋ ?

ಶ್ರೀ ಬಿ. ರಾಚಯ್ಯ.— ಸುಸಜ್ಜಿತವಾಗಿರುವ ಮಣ್ಣು ಪರೀಕ್ಷಾ ಕೇಂದ್ರವನ್ನು ಎರಡು ತಿಂಗಳಲ್ಲಿ ಪ್ರಾರಂಭ ಮಾಡುತ್ತೇವೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಮಣ್ಣು ಪರೀಕ್ಷಾ ಸಂಚಾರಿ ಪ್ರಯೋಗ ಶಾಲೆಗೆ ಎರಡೂವರೆ ಲಕ್ಷ ರೂಪಾಯಿ ಖರ್ಚಾಗುತ್ತದೆಂದು ಹೇಳಿದಿರಿ. ಇದರಲ್ಲಿ ವಾಹನಕ್ಕೆ ಎಷ್ಟು ಮತ್ತು ಇತರ ಉಪಕರಣಗಳಿಗೆ ಎಷ್ಟು ? ಈಗ ಸಿಕ್ ಲಿಸ್ಟಿನಲ್ಲಿರುವ ವಾಹನಗಳನ್ನು ಉಪಯೋಗ ಮಾಡಿ ಇದನ್ನು ಮಾಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಬಿ. ರಾಚಯ್ಯ.—ಈ ವಾಹನಗಳೂ ಕೂಡ ಸಿಕ್ ಆಗಿ ನಿಂತುಕೊಂಡರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಒಳ್ಳೆಯ ವಾಹನವನ್ನೇ ತರಿಸಬೇಕಾಗುತ್ತದೆ.

Haladi Irrigation Project

184. Sri S. N. ADIGA (Local Authorities' Constituency).—

Will the Chief Minister be pleased to state :—

(*a*) whether the Government is aware that a medium irrigation project pertaining to South Kanara District, known as the Haladi irrigation project was investigated and prepared by the Government of Madras before the recrganisation of States and when South Kanara formed part of the composite Madras State ;

(*b*) if so, the details of the said project regarding the area to be irrigated, the additional food producation expected and the cost ;

(*c*) whether the Government is aware that the said project was included in the first F. Y. P. of erstwhile Madras State ;

(*d*) after the reorganisation of State whether the said Haladi irrigation project was included iu the II F. Y. P. of the Mysore State ;

(*e*) the reason for not starting the work on the said project so far ?

Sri D. PARAMESWARAPPA (Depty Minister for Major Irrigation and Electricity) [On behalf of SRI VEERENDRA PAIIL (Chief Minister)].—

(*a*) Yes,

(*b*) (i) irrigation — 25,200 acres
(ii) Food production — 10,000 tons.
(iii) Cost — Rs. 262 laksh

(*c*) No.

(*d*) No.

(*e*) Alternative proposal is under investigation.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಮದ್ರಾಸ್ ರಾಜ್ಯದ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಪುಸ್ತಕವನ್ನು ತಯಾರು ಮಾಡಿ ಅವರ ಸ್ಕೀಮುಗಳನ್ನು ಅದರಲ್ಲಿ ಹಾಕಿದ್ದರು. ಆ ಪುಸ್ತಕದಲ್ಲಿ ಹಾಲಾಡಿ ಇರಿಗೇಷನ್ ಪ್ರಾಜೆಕ್ಟ್ ಹೆಸರು ಕೂಡ ಸೇರಿಸಲ್ಪಟ್ಟಿತ್ತು ಎಂದು ನಾನು ಹೇಳಿದರೆ ಅದನ್ನು ಸರ್ಕಾರ ನಂಬುತ್ತದೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಇದುವರೆಗೆ ಮದ್ರಾಸ್ ಸರ್ಕಾರದವರು ಇದನ್ನು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದರೋ ಬಿಟ್ಟಿದ್ದರೋ ಎನ್ನುವುದು ಸರ್ಕಾರಕ್ಕೆ ತಿಳಿದು ಬಂದಿಲ್ಲ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ ಹಾಗಿದ್ದರೆ ನಾನು ನೋಡಿದವನಿದ್ದು, ಈ ಶಾಸನ ಸಭೆಯ ಸದಸ್ಯನಾಗಿ ಹೇಳುವಂಥ ಮಾತನ್ನಾದರೂ ನಂಬುತ್ತೀರಾ ?

Sri D. PARAMESWARAPPA.—Even granting that it was included in the first five-years Plan of the Madras Government, after Irrigation that question does not arise. Fresh investigation has got to be made.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ರಾಜ್ಯಗಳ ಪುನರ್ವಿಂಗಡಣೆಯಾದನಂತರ ಮೈಸೂರು ರಾಜ್ಯದ ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಹಾಲಾಡಿ ಇರಿಗೇಷನ್ ಪ್ರಾಜೆಕ್ಟ್ ಸೇರಿಸಲಿಲ್ಲ. ಮೂರನೆ ಯೋಜನೆಯ ಡ್ರಾಫ್ಟ್ ಔಟಲೈನ್ ಸರ್ಕಾರದವರು ತಯಾರು ಮಾಡಿರುವಂತದ್ದರಲ್ಲಿ 25ನೇ ಪುಟದಲ್ಲಿ ಈ ತರಹ ಹೇಳಿದೆ :

> "In addition to the major schemes, there are 23 medium schemes, amongst them the biggest are Harangi in Coorg, Haladi reservoir in South Kanara, Bennithore in Gulbarga and another in Bijapur. Thesefour projects will spill-over in the Fourth Plan.

ಮೂರನೆಯ ಯೋಜನೆಯಲ್ಲಿ ತೆಗೆದುಕೊಂಡು ಪೂರೈಸದೆ ಇದ್ದರೆ ನಾಲ್ಕನೆ ಯೋಜನೆಗೆ ಹೋಗುತ್ತದೆ ಎನ್ನುವ ರೀತಿಯಲ್ಲಿ ಅಚ್ಚು ಹಾಕಿಸಿದ್ದಾರಲ್ಲವೇ ಸ್ವಾಮಿ ?

Sri D. PARAMESWARAPPA.—I cannot deny what is printed here.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಕಡೆಯ ಪ್ರಶ್ನೆಗೆ ಆಲ್ಟರ್ನೇಟಿವ್ ಪ್ರಪೋಸಲ್ ಒಂದು ಪರಿಶೀಲನೆಯಲ್ಲಿದೆ ಎಂದು ಉತ್ತರ ಕೊಡಲಾಗಿದೆ. ಆ ಪ್ರಪೋಸಲ್ ಇನ್‌ವೆಸ್ಟಿಗೇಷನ್ ಯಾವಾಗ ಆರಂಭವಾಯಿತು ? ಅದನ್ನು ಪೂರ್ಣಮಾಡುವುದಕ್ಕೆ ಎಷ್ಟು ಸಮಯ ಕಾಯಬೇಕು ? ಆ ಜಿಲ್ಲೆಯವರು ಎಷ್ಟು ಪಂಚವಾರ್ಷಿಕ ಯೋಜನೆ ಕಾಯಬೇಕು ?

ಶ್ರೀ ಡಿ. ಪರಮೇಶ್ವರಪ್ಪ.—ಆಲ್ಟರ್ನೇಟಿವ್ ಸ್ಕೀಂ ಎಂದರೆ ವಾರಾಹಿ ನದಿಗೆ ಒಡ್ಡು ನಿರ್ಮಾಣ ಮಾಡಿದರೆ ಮೊದಲನೆಯ ಹಂತದಲ್ಲಿ 5 ಸಾವಿರ ಎಕರೆ ನೀರಾವರಿ ಆಗುವುದು. ಎರಡನೆಯ ಹಂತದಲ್ಲಿ ವಾರಾಹಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟಿನಿಂದ ಹೊರಬೀಳುವ ನೀರಿನಿಂದ 30 ಸಾವಿರ ಎಕರೆ ನೀರಾವರಿಯಾಗುವುದು, ಈ ಬಗ್ಗೆ ಅತಿ ತೀವ್ರವಾಗಿ ಕಾರ್ಯಕ್ರಮ ಕೈಕೊಳ್ಳುವುದಕ್ಕೆ ಎಲ್ಲಾ ಪ್ರಯತ್ನವನ್ನೂ ಮಾಡುತ್ತಿದ್ದೇವೆ. ಎರಡನೆಯ ಹಂತದ ಪ್ರಾಜೆಕ್ಟ್ ಪರಿಶೀಲನೆಯಲ್ಲಿದೆ. ಅದಿನ್ನೂ ಕೂಡ ಫೈನಲೈಜ್ ಆಗಿಲ್ಲ. ಆದಷ್ಟು ತೀವ್ರವಾಗಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಫೈನಲೈಜ್ ಮಾಡಬೇಕೆಂದಿದ್ದೇವೆ.

ಶ್ರೀ ಕೆ. ಟಿ. ಶಾಮಯ್ಯಗೌಡ.—ಮಂತ್ರಿಗಳು ಹೇಳುವುದು ನೋಡಿದರೆ ಮಲೆನಾಡನ್ನು ಮುಳುಗಿಸಬೇಕೆಂದಿರುವಂತೆ ಕಾಣುತ್ತದೆ. ಮದ್ರಾಸು ಸರಕಾರ ಮಾಡಿರುವುದು ಸರಿಯಿಲ್ಲ ಎಂದು ಬೇರೆ ಪ್ರಪೋಸಲ್ ಮಾಡಿದ್ದೀರಾ ? ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳನ್ನು ಮುಳುಗಿಸಬೇಕೆಂಬ ಅಭಿಪ್ರಾಯವಿದೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಮದ್ರಾಸು ಸರಕಾರ ಸೂಚಿಸಿರುವುದನ್ನು ಕೈಬಿಡಬೇಕೆಂದಿಲ್ಲ. ಮತ್ತು ಮಲೆನಾಡನ್ನು ಮುಳುಗಿಸಬೇಕೆಂಬ ಅಭಿಪ್ರಾಯವೂ ಇಲ್ಲ. ಆದರೆ ನಮ್ಮ ಟೆಕ್ನಿಕಲ್ ಅಡ್ವೈಸರಿ ಕಮಿಟಿಯು ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಮೊದಲು ದಾಸನಕಟ್ಟೆ ಹತ್ತಿರ ಒಂದು ಪ್ರಾಜೆಕ್ಟ್ ಕಟ್ಟಬೇಕೆಂದು ಮಾಡಿದರು. ಅದರ ಎತ್ತರ ಬಹಳವಾಗಿದೆ. ಆಲ್ಟರ್ನೇಟಿವ್ ಪ್ರಪೋಸಲ್ಲಿನಿಂದ ಇಷ್ಟು ಎಕರೆಗೆ ನೀರನ್ನೊದಗಿಸಬಹುದೆಂದು ನಮ್ಮ ತಜ್ಞರು ಅಭಿಪ್ರಾಯಪಟ್ಟಿರುವುದರಿಂದ ಆಲ್ಟರ್ನೇಟಿವ್ ಪ್ರಪೋಸಲ್ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಟಿ. ಶಾಮಯ್ಯಗೌಡ.—ತಜ್ಞರ ಮಾತು ಬಿಡಿ. ತಾವು ವಾರಾಹಿ ಮತ್ತು ಮಾಲತಿ ಯೋಜನ ತೆಗೆದುಕೊಂಡರೆ ತಜ್ಞರಿಗೆ ಅವಕಾಶ ಕೊಡದೆ ಎಷ್ಟು ಬೆಲೆ ಬಾಳುವ ವರ್ಜಿನ್ ಫಾರೆಸ್ಟ್ ಮತ್ತು ಮಲೆನಾಡು ಮುಳುಗಬಹುದು ಎಂಬ ವಿಚಾರದಲ್ಲಿ ಯೋಚಿಸಿ ತಾವೇ ಸಲಹೆ ಮಾಡುವುದು ಸೂಕ್ತವಲ್ಲವೇ. ?

Sri D. PARAMESWARAPPA.—We are not technical people. We are guided by technical opinion given by engineering experts.

Sri G. V. ANJANAPPA.—Sir, how can the Hon. Minister say that the Ministers as a whole are not technical people? Take the case of the Finance Minister.

Sri D. PARAMESWARAPPA.—So far as engineering is concerned we are not technical people. We go by the report of the technical people.

ಶ್ರೀ ಎಂ. ಟಿ. ಶ್ರೀಕಂಠಯ್ಯ.—ಟೆಕ್ನಿಕಲ್ ಪೀಪಲ್ ಇಂಜನಿಯರುಗಳು ಅಂತ ಅಂದರು, ಈಗ ಪಾರ್ಕಟ್ಟಿನ ಹತ್ತಿರ ಅಂಡರ್‌ಗ್ರೌಂಡ್ ಸರ್ವೇ ಮಾಡಿಸಿದ್ದು ಇದೇ ಟೆಕ್ನಿಕಲ್ ಪೀಪಲ್‌ಗಳ ಅಡ್ವೈಸ್ ಮೇಲೆ ಒಂದು ವರ್ಷದಿಂದ ಕೆಲಸ ಮಾಡುತ್ತಾ ಇದ್ದುದನ್ನೆಲ್ಲಾ ಇವತ್ತು ಮುಚ್ಚಿ ಓವರ್ ಬ್ರಿಡ್ಜ್ ಕಟ್ಟುವುದಕ್ಕೆ ವಿಚಾರ ಮಾಡುತ್ತಾ ಇದ್ದಾರೆ. ಇಂಜಿನಿಯರುಗಳು ಒಂದೊಂದು ಸಾರಿ ಒಂದೊಂದು ಬದಲಾವಣೆ ಮಾಡುತ್ತಾರೆಯಲ್ಲಾ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೆಯೆ?

Sri D. PARAMESWARAPPA.—Should I answer the supplementary? It does not pertain to the main question.

ಶ್ರೀ ಎಂ. ಟಿ. ಶ್ರೀಕಂಠಯ್ಯ.—ದುಡ್ಡು ಎಷ್ಟು ಹಾಳಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಡವೇ?

ಶ್ರೀ ಡಿ. ಪರಮೇಶ್ವರಪ್ಪ.— ಯಾವುದಾದರೂ ನಿರ್ದಿಷ್ಟವಾದ ನಿದರ್ಶನವನ್ನು ನಮ್ಮ ಗಮನಕ್ಕೆ ತಂದರೆ ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬಹುದೇ ಹೊರತು ಅನಿರ್ದಿಷ್ಟವಾಗಿ ಹೇಳಿದರೆ ಏನೂ ಮಾಡುವುದಕ್ಕಾಗುವುದಿಲ್ಲ.

Sri C. S. BALAKRISHNA GOWDA.—On a point of order. I want to know whether several supplementaries put by my learned friend Sri M. T. Srikantaiah, had any relevance to the question put up? The other day an unhappy situation arose in my case.

ಉಪಸಭಾಪತಿಯವರು.—ಯಾವುದಾದರೂ ಪಾಯಿಂಟ್ ಆಫ್ ಆರ್ಡರ್ ಎತ್ತುವುದಾದರೆ ಅದನ್ನು ಇಂತಹ ರೂಲ್ ಪ್ರಕಾರ ಸಭೆಯ ಗಮನಕ್ಕೆ ತರುತ್ತಾ ಇದ್ದೇನೆ ಎಂದು ಹೇಳಬೇಕು, ಹಾಗಿದ್ದರೂ ಸಹ ಮಾನ್ಯ ಸದಸ್ಯರು ಈಗ ಪಾಯಿಂಟ್ ಆಫ್ ಆರ್ಡರ್ ಅಂತ ಹೇಳಿ ತಿಳಿಸುತ್ತಾ ಇರುವುದು ಅಷ್ಟು ಸಮಂಜಸವಲ್ಲವೇನೋ ಎಂದು ಅನಿಸುತ್ತಾ ಇದೆ. ಲೋಕ ಸಭೆಯ ರೂಲಿಂಗ್ ಓದುತ್ತೇನೆ.

"While formulating his point of order a member should quote the specific rule or the provision of the Constitution relating to the procedure of the House which might have been ignored or neglected or violated. No member should rise or speak either standing or sitting when the Speaker is on his feet. The Speaker should be heard in silence and any member wanting to speak should rise only after the Speaker has sat down or called the member to speak. Matters on which the Speaker cannot give any relief should not be the subject matter of a point of order. Should a member desire to have a clarification from a Minister or object to any statement which a Minister

might have made, he should do so in the House with the permission of the Speaker and should not raise it in the garb of a point of order."

In view of this, if a member does not quote a relevant rule or constitutional provision in support of the point of order, the Chair is perfectly in order in not taking cognisance of it.

Sri C. S. BALAKRISHNA GOWDA.—That ruling is not before me. I have very carefully heard the Chair but I raised my point of order under the practice prevalent in this House.

Mr. DEPUTY CHAIRMAN.—There is no point of order since the hon. Member has not quoted any rule or constitutional provision.

Sri C. S. BALAKRISHNA GOWDA.—The other day the Chair was pleased to rule that my supplementary question had no bearing to the original question. Then I was not allowed to speak and I accepted the ruling of the Chair. Now a similar situation has arisen. The ruling of the Chair in force in this House has not been violated by me. If the previous ruling given by the same Chair is to be overruled, then I have nothing to say. Here also it has been ruled that the supplementary put by the hon. Member Sri Srikantiah has no bearing to the main question.

Mr. DEPUTY CHAIRMAN.—The Chair has held that there is no point of order.

Sri D. RAJAGOPAL.—Sir, I rise on a point of order. Under article 154 of the Constitution, the executive power vests in the Council of Ministers which includes the Deputy Minister. Can the Deputy Minister disown his responsibility and shelve the responsibility to the experts as he did while answering a supplementary question?

Mr. DEPUTY CHAIRMAN.—There is no point of order.

Sri C. S. BALAKRISHNA GOWDA.—I did not expect a ruling except guidance for the future in regard to putting supplementaries.

Mr. DEPUTY CHAIRMAN.—The hon. Member may meet me in my Chamber.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಈಗ ದಕ್ಷಿಣ ಕನ್ನಡ ಜಿಲ್ಲೆಯಿಂದ ಸರ್ಕಾರಕ್ಕೆ ಮೋಟಾರ್ ವೆಹಿಕಲ್ಸ್, ಟ್ಯಾಕ್ಸ್ ಇನ್‌ಕಂ, ಟ್ಯಾಕ್ಸ್ ಮತ್ತು ಎಕ್ಸೈಜು ಟಾಕ್ಸ್ ಬರುತ್ತಾ ಇದೆ. ಈ ಹಾಲಾಡಿ ಪ್ರಾಜಕ್ಟನ್ನು ವಿನಿಯೋಗ ಮಾಡಿಕೊಂಡು ಕೃಷ್ಣಾ, ಗೋದಾವರಿ ನದಿಗಳ ಹೆಸರನ್ನು ಹೇಳುತ್ತಾ ಈ ಯೋಜನೆಯನ್ನು ಕೈಬಿಡುತ್ತೀರೆಂಬುದಾಗಿ ಜನರ ಮನಸ್ಸಿಗೆ ಬಂದಿದೆ, ಹಳೆಯ ಯೋಜನೆಯನ್ನು ಇಂಪ್ಲಿಮೆಂಟ್ ಮಾಡುವ ಮನಸ್ಸನ್ನು ಸರ್ಕಾರದವರು ಮಾಡುವುದಕ್ಕೆ ಈಗಲಾದರೂ ಆಶ್ವಾಸನೆಯನ್ನು ಕೊಡುತ್ತಾರೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಹಳೆಯ ಮದ್ರಾಸ್ ಯೋಜನೆಯನ್ನು ಇಂಪ್ಲಿಮೆಂಟ್ ಮಾಡುವ ಪ್ರಶ್ನೆಯಿಲ್ಲ. Since the alternative scheme is being investigated, there is no point in urging that the old scheme as envisaged by the Madras Government should be implemented. I quite agree with my friend when he says that it should be expedited.

ಶ್ರೀ ಪಿ. ವಿ. ಆಂಜನಪ್ಪ.—ಈಗ ಈ ಅಲ್ಟರ್ನೇಟಿವ್ ಪ್ರೊಪೋಸಲ್ ಇದ್ದಲ್ಲಿ, ಈ ಯೋಜನೆ ಪ್ರಕಾರ ಎಷ್ಟು ಎಕರೆ ಭೂಮಿ ಸಾಗು ಆಗುತ್ತದೆ, ಮತ್ತು ಅಂದಾಜು ವೆಚ್ಚವೆಷ್ಟು ?

3-30 P.M.

ಶ್ರೀ ಡಿ. ಪರಮೇಶ್ವರಪ್ಪ.—ಈ ವರಾಹಿ ಯೋಜನೆಯ ಸ್ಕೀಮ್ ಪ್ರಕಾರ ಫಸ್ಟ್ ಸ್ಟೇಜ್‌ನಲ್ಲಿ 5 ಸಾವಿರ ಎಕರೆ ನೀರಾವರಿಯಾಗುತ್ತದೆ. ವರಾಹಿ ಹೈಡ್ರೋ ಎಲೆಕ್ಟ್ರಿಕ್ ಪ್ರೊಜೆಕ್ಟ್ ಕೈಕೊಂಡ ನಂತರ ಒಂದು 30 ಸಾವಿರ ಎಕರೆ ಇರಬಹುದು. ಒಟ್ಟಿಗೆ 35 ಸಾವಿರ ಎಕರೆಯಾಗುತ್ತದೆ. ಮತ್ತು ಖರ್ಚು ಸಾಧಾರಣ 262 ಲಕ್ಷ ರೂಪಾಯಿಯಾಗುತ್ತದೆ.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಈಗ ಯಾವ್ಯಾವ ಪ್ರದೇಶದಲ್ಲಿ ಅಣೆಕಟ್ಟು ಕಟ್ಟುತ್ತಾರೆ, ಅದು ಆ ಪ್ರದೇಶದಲ್ಲಿ ಬರತಕ್ಕ ಉತ್ಪತ್ತಿಯಿಂದ ಕಟ್ಟುತ್ತೀರಾ, ಅಥವಾ ಇಡೀ ದೇಶದ ಹಣದಿಂದ ಕಟ್ಟುತ್ತೀರಾ ? ಉದಾಹರಣೆಗೆ ಮಂಗಳೂರಿಂದ ಹೆಚ್ಚು ಟ್ರಾನ್ಸ್‌ಪೋರ್ಟ್ ಮತ್ತು ಇತರ ಅಸೆಸ್‌ಮೆಂಟಿನಿಂದ ಹೆಚ್ಚು ಉತ್ಪತ್ತಿ ಬರುತ್ತದೆಂದು, ಹಾಗೆ ಈ ಹಾರಾಡಿ ಪ್ರೊಜೆಕ್ಟ್ ಏಕೆ ಕಟ್ಟಬಾರದೆಂದು ಕೇಳಿದ್ದಾರೆ. ಹಾಗೆ ಮಾಡುತ್ತೀರಾ ಎಂದು ಹೇಳಬೇಕು.

Sri D. PARAMESWARAPPA.—That is not the policy of Government.

Licenced Liquor Shops in the State and High Licensing Fees

195. Sri K. T. SHAMAIAH GOWDA (Local Authorities' Constituency).—

Will the Minister for Finance, Planning and Youth Welfare be pleased to state:—

(a) the number of licensed liqourshop wholesale and retail in the State (Districtwise and talukwise) information may be furnished); for the years 1968-69 and 69-70 ;

(b) whether the decrease in the number of wholesale and retail liquor shops in mofussil districts and taluks is due to the abnormal high licensing fees and increase of smuggled Indian liquors being sold by some licensed dealers in the market ?

Sri RAMAKRISHNA HEGDE (Minister for Finance, Planning and Youth Welfare).—

(a)	*Wholesale*	*Retail*
1968–69	45	193
1969–70	42	200

The Districtwise and the talukwise details may be seen in the enclosed statement appended.

(b) No.

STATEMENT

Sl. No.	Name of the District	Name of the Taluk	For 1968-69 Wholesale Licence	For 1968-69 Retail of Licence	For 1969-70 Wholesale Licence	For 1969-70 Retail of Licence
1	2	3	4	5	6	7
1	Bangalore District	Bangalore North and South.	25	49	24	54
		Nelamangala Taluk ...	...	1	...	1
		Kanakapur Taluk ...	...	1	...	1
		Total ...	25	51	24	56
2	Belgaum District	Belgaum Taluk ...	4	9	4	11
		Gokak Talnk ...	...	1	...	1
		Total ...	4	10	4	12
3	Bijapur District	Bijapur Taluk ...	...	2	...	2
		Mudhol Taluk ...	...	1	...	1
		Bagalkot Taluk ...	...	2	...	2
		Total ...	...	5	...	5
4	Bellary District	Bellary Taluk ...	1	5	1	5
		Hospet Taluk ...	...	5	...	5
		Siruguppa Taluk ...	...	1	...	1
		Total ...	1	11	1	11
5	S.K. Mangalore	Mangalore Taluk ...	2	10	2	6
		Udipi Taluk ...	...	3	...	3
		Puttur Taluk ...	...	1	...	1
		Total ...	2	14	1	10
6	Dharwar District	Dharwar Taluk ...		4	...	4
		Hubli Taluk ...	5	7	4	7
		Gadag Taluk ...	....	2	...	2
		Haveri Taluk ...	...	1	...	1
		Ranebennur Taluk ...	...	3	...	3
		Total ...	5	17	4	17

(Sri Ramakrishna Hegde)

1	2	3	4	5	6	7
7	Raichur District	Raichur Taluk	1	8	1	8
		Manvi Taluk	...	1	...	1
		Sindhanoor	...	1	...	
		Gangavathi Taluk	...	2	...	2
		Lingasugur	...	1	...	1
		Total	1	13	1	13
8	Gulbarga District	Gulbarga Taluk	1	6	1	6
		Aland Taluk	...	1	...	1
		Shahabad Taluk	...	3	...	3
		Yadgiri Taluk	...	2	...	2
		Shorapur Taluk	...	2	...	2
		Shahapur Taluk	...	1	...	1
		Chitapur Taluk	...	1	...	1
		Sedam Taluk	...	1	...	1
		Total	1	17	1	17
9	Shimoga District	Shimoga Taluk	...	5	...	5
		Thirthahalli Taluk	...	1	...	1
		Bhadravathi Taluk	...	3	...	3
		Sagar Taluk	...	...	...	1
		Hosanagar Taluk	...	...	...	1
		Total	...	9	...	11
10	Mandya District	Mandya Taluk	...	1	...	1
		Maddur Taluk	...	1	...	1
		Malavalli Taluk	...	1	...	1
		Total	...	3	...	3
11	Chitradurga District	Chitradurga Taluk	1	1	1	1
		Harihar Taluk	...	1	...	1
		Davanagere Taluk	...	7	...	8
		Challakere Taluk	...	1	...	1
		Total	1	10	1	11

1	2	3	4	5	6	7
12	Tumkur District	Tumkur Taluk	1	1	...	1
		Total ...	1	1	...	1
13	Kolar District	Kolar Taluk ...	...	2	...	2
		Bangarpet Taluk ...	...	1	...	1
		Chickballapur Taluk ...	...	1	...	1
		Chintamani Taluk ...	...	1	...	1
		Total ...	...	5	...	5
14	Chickmagalur District	Chickmagalur Taluk ...	...	...	1	...
		Koppa Taluk ...	...	1	...	2
		Total ...	...	1	1	2
15	Coorg District	Mercara Taluk ...	2	7	2	7
		Total ...	2	7	2	7
16	Mysore District	Mysore Taluk ...	2	4	1	4
		Gundlupet Taluk ...	...	1	...	1
		Total ...	2	5	1	5
17	Hassan	Hassan Taluk ...	...	2	...	2
		akalespur Taluk ...	...	1	...	1
		Belur Taluk ...	...	1	...	1
		Arsikere Taluk ...	...	1	...	1
		Channarayapatna ...	...	1	...	1
		Total ...	...	6	...	6
18	N. K. Karwar District	Yellapura Taluk ...	...	1	...	1
		Total ...	...	1	...	1
19	Bidar District	Bidar Taluk ...	...	7	...	7
		Total ...	...	7	...	7

ಶ್ರೀ ಕೆ. ಟಿ. ರಾಮಯ್ಯಗೌಡ.—ಈ ಹೋಲ್‌ಸೇಲ್ ಮತ್ತು ರೀಟೈಲ್ ಷಾಪಿಗೆ ಈಗ ಫೀಸ್ ಎಷ್ಟು ಮಾಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಹೋಲ್‌ಸೇಲ್ 3 ಸಾವಿರ ಇದ್ದುದನ್ನು 5ಸಾವಿರ ಮಾಡಿದ್ದೇವೆ. ರಿಟೈಲ್‌ಗೆ 7 ಸಾವಿರ ಇದ್ದುದನ್ನು 10 ಸಾವಿರ ಮಾಡಿದ್ದೇವೆ.

ಶ್ರೀ ಕೆ. ಟಿ. ರಾಮಯ್ಯಗೌಡ.—ಈಗ ತಾಲ್ಲೂಕುಗಳಲ್ಲಿ ಹೊರಗಿಂದ ಬಂದ ಲಿಕರ್‍ಸ್ ಮಾರಾಟವಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅಲ್ಲಿ ಅರಕ್ ಷಾಪ್ಸ್ ಇವೆ, ಅದರಿಂದ ತೆಗೆದುಕೊಂಡು ಹೋಗುತ್ತಾರೆ.

ಶ್ರೀ ಕೆ. ಟಿ. ರಾಮಯ್ಯಗೌಡ.—ಈಗ ಚಿಕ್ಕಮಗಳೂರು ಪ್ಲಾಂಟೇಷನ್ ಏರಿಯಾ, ಅಲ್ಲಿಯೂ ಒಂದೇ, ನಾರ್ತ್ ಕೆನರಾ ಅಲ್ಲಿಯೂ ಒಂದೇ, ಬೆಂಗಳೂರಲ್ಲಿಯೂ ಒಂದೇ ಮತ್ತು ತಾಲ್ಲೂಕಿಗೂ ಒಂದೇ ಮಾಡಿದ್ದೀರಿ. ಡ್ರಿಂಕಿಂಗ್ ಪಾಪ್ಯುಲೇಷನ್ ಲೆಕ್ಕಕ್ಕೆ ತೆಗೆದುಕೊಂಡು ಮಾಡಿದರೆ ಸ್ಮಗ್ಲ್‌ಡ್ ಆರ್ಟಿಕಲ್ಸ್ ಮಾರಿದಂತೆ ಆಗುತ್ತದೆ. ಅದನ್ನು ಯೋಚನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಡ್ರಿಂಕಿಂಗ್ ಪಾಪ್ಯುಲೇಷನ್ ಅದರ ಬಗ್ಗೆ ಸೆನ್ಸಸ್ ತೆಗೆದುಕೊಳ್ಳಬೇಕಾಗುತ್ತದೆ. ಆ ಸೆನ್ಸಸ್ ಮಾಡುವುದು ಯಾವಾಗ ? ಅದು ಸಾಧ್ಯವಾಗುವುದಿಲ್ಲ. That is not practicable. In the beginning we were giving licences freely. We thought of restricting it on the basis of population, but later on wherever there was additional demand we have been granting licences. I do not think this policy of giving licence has anything to do with the small number of shops.

ಶ್ರೀ ಎಂ. ವಿ. ವೆಂಕಟಪ್ಪ.—ರಾಜ್ಯದ ಕೆಲವು ತಾಲ್ಲೂಕುಗಳಲ್ಲಿ ಅಂದರೆ, ಜಮಖಂಡಿಯಲ್ಲಿ ಈ ಹೋಲ್‌ಸೇಲ್ ಮತ್ತು ರಿಟೈಲ್ ಪ್ರಾರಂಭ ಮಾಡದೆ ಇರುವುದಕ್ಕೆ ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ.—ಮಾಡದೆ ಇರುವುದಕ್ಕೆ ಕಾರಣವೇನೆಂದರೆ, ಜನರಿಂದ ಬೇಡಿಕೆ ಇಲ್ಲ. ಬೇಡಿಕೆ ಇದ್ದರೆ ವ್ಯಾಪಾರಸ್ಥರು ಲಾಭಕ್ಕಾಗಿ ಆದರೂ ಪ್ರಾರಂಭ ಮಾಡುತ್ತಾರೆ.

ಶ್ರೀ ಎ. ಎಚ್. ಶಿವಾನಂದ ಸ್ವಾಮಿ.—ಸ್ವಾಮಿ ಸಾವಿರಾರು ಸಂಚಾರಿ ಅಂಗಡಿಗಳಿಂದ ಮದ್ಯ ಮಾರಾಟ ನಡೆಯುತ್ತಿದೆ. ಎತ್ತಿನ ಗಾಡಿಗಳಲ್ಲಿ, ವಾಹನಗಳಲ್ಲಿ, ರಸ್ತೆಯಲ್ಲಿ ಮದ್ಯಮಾರಾಟವಾಗುತ್ತಿದೆ. ಸುಮಾರು 200—300 ಗಜಗಳಿಗೆ ಒಂದೊಂದು ಸಂಚಾರಿ ಮದ್ಯದ ಅಂಗಡಿಗಳಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ, ಆ ರೀತಿ ಅವರು ಮಾರಾಟ ಮಾಡುವುದಕ್ಕೆ ಲೈಸೆನ್ಸ್ ತೆಗೆದುಕೊಂಡಿದ್ದಾರೆಯೇ ಹೇಗೆ ?

ಶ್ರೀ ರಾಮಕೃಷ್ಣ ಹೆಗಡೆ.—ಸಂಚಾರಿ ಮದ್ಯದ ಅಂಗಡಿಗಳಿಗೆ ಲೈಸೆನ್ಸ್ ಕೊಟ್ಟಿಲ್ಲ. ಎಲ್ಲಿ ಆ ತರಹ ಇವೆಯೆಂಬುದನ್ನು ತಿಳಿಸಿದರೆ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ವಿ. ಗೌಡ.—ಗಾಂಧಿ ಶತಾಬ್ದಿಯ ವರ್ಷವಾದ ಈ ವರ್ಷದಿಂದ ಪಾನನಿರೋಧವನ್ನು ಇಡೀ ದೇಶದಲ್ಲಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಗಾಂಧಿ ಶತಾಬ್ದಿಯ ದಿವಸವಾದ ಅಕ್ಟೋಬರ್ ಎರಡನೆಯ ತಾರೀಖು ಇಡೀ ನಮ್ಮ ರಾಜ್ಯಾದ್ಯಂತವಾಗಿ ಮದ್ಯಪಾನನಿಷೇದವನ್ನು ಆಚರಿಸಲಾಗುತ್ತದೆ.

ಶ್ರೀ ಬಿ. ಚನ್ನಬೈರೇಗೌಡ.—ಮದ್ಯ ಮಾರಾಟದ ಲೈಸೆನ್ಸ್ ಶುಲ್ಕವನ್ನು ಹೋಲ್‌ಸೇಲ್ ಮಾರಾಟಗಾರರಿಗೆ 5 ಸಾವಿರ ರೂಪಾಯಿಗಳನ್ನೂ, ರೀಟೈಲ್ ಮಾರಾಟಗಾರರಿಗೆ 10 ಸಾವಿರ ರೂಪಾಯಿಗಳನ್ನೂ ಇಟ್ಟಿರುವುದರಿಂದ ಬಹಳ ಕಡಿಮೆ ಜನ ಲೈಸೆನ್ಸ್ ತೆಗೆದುಕೊಂಡಿದ್ದಾರೆ. ಆದ್ದರಿಂದ ಲೈಸೆನ್ಸ್ ಫೀಜನ್ನು ಕಡಿಮೆ ಮಾಡಿ, ಸಂಚಾರಿ ಅಂಗಡಿಗಳಿಗೂ ಮದ್ಯ ಮಾರಾಟ ಮಾಡುವುದಕ್ಕೆ ಲೈಸೆನ್ಸ್ ಕೊಟ್ಟರೆ ಅದರಿಂದ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತದೆ ಅಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಲೈಸೆನ್ಸ್ ಫೀಜು ಹೆಚ್ಚಾಗಿದೆ ಎಂದು ಯಾವ ರೀತಿಯಿಂದಲೂ ದೂರು ಬಂದಿಲ್ಲ. ಲೈಸೆನ್ಸ್ ಫೀಜನ್ನು ಬಹಳ ಕಡಿಮೆ ಇಡುವುದು ತಪ್ಪು. ಯಾರು ಯಾರೋ ಬಂದು ಲೈಸೆನ್ಸ್ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ವಿ. ವೆಂಕಟಪ್ಪ.—ಮುಂದಿನ ತಿಂಗಳು ಎಂದರೆ ಅಕ್ಟೋಬರ್ ಎರಡನೆಯ ತಾರೀಖಿನಿಂದ ಹಂತ ಹಂತವಾಗಿ ಪಾನ ನಿರೋಧವನ್ನು ಜಾರಿಗೆ ತರುವುದಕ್ಕೆ ಸರ್ಕಾರದವರು ಯೋಚನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈ ಬಗ್ಗೆ ನಾನು ಅನೇಕ ಸಲ ಹೇಳಿದ್ದೇನೆ. ಈಗ ಪಾನನಿರೋಧವನ್ನು ಹಂತ ಹಂತವಾಗಿ ಕಾರ್ಯಗತಗೊಳಿಸುವ ಯೋಚನೆ ಸರ್ಕಾರಕ್ಕೆ ಇಲ್ಲ. ಈಗ ಬೇರೆ ರಾಜ್ಯಗಳವರು ಪಾನನಿರೋಧವನ್ನು ಸಡಿಲ ಮಾಡುತ್ತಿದ್ದಾರೆ. ಆದ್ದರಿಂದ ವ್ಯವಹಾರಿಕ ದೃಷ್ಟಿಯಿಂದಲೂ ನಾವು ನೋಡಬೇಕಾಗುತ್ತದೆ.

ಶ್ರೀ ಸಿ. ಬಂದೀಗೌಡ.—ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾರೂ ಕುಡಿಯುವುದಿಲ್ಲ. ಆದ್ದರಿಂದ ಅಲ್ಲಿ ಅನಧಿಕೃತವಾಗಿ ಪಾನನಿರೋಧ ಯಶಸ್ವಿಯಾಗಿದೆಯಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಅಲ್ಲಿ ಒಬ್ಬರೂ ಕುಡಿಯುವುದಿಲ್ಲ ಎಂದು ನಾನು ಹೇಳಲಿಲ್ಲ. ಕಳೆದ ಸಲ ಅಲ್ಲಿ ಅರಕ್ ಮತ್ತು ಟಾಡಿ ಹರಾಜು ಎಂದು ಹೇಳಿದೆ. ಅಲ್ಲ ಕುಡಿಯುವವರ ಸಂಖ್ಯೆ ಬಹಳ ಕಡಿಮೆ ಇದೆ.

ಶ್ರೀ ಎಂ. ಟಿ. ಶ್ರೀಕಂಠಯ್ಯ.—ಈಗ ಬೆಂಗಳೂರಿನಲ್ಲಿ 20 ಲಕ್ಷ ಪ್ರಜಾ ಸಂಖ್ಯೆ ಇದೆ. ಇಲ್ಲಿ 200 ಅಂಗಡಿಗಳಿಗೆ ಮಾತ್ರ ಮದ್ಯವನ್ನು ಮಾರಾಟಮಾಡಲು ಲೈಸೆನ್ಸ್ ಕೊಟ್ಟಿದ್ದೀರಿ, ಇದನ್ನು ಯಾವ ಆಧಾರದಮೇಲೆ ಕೊಟ್ಟಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—200 ಅರೆಕ್ ಮತ್ತು ಸೇಂದಿ ಅಂಗಡಿಗಳಿಗೆ ಕೊಟ್ಟಿದೆ. ಅದರ ಜೊತೆಗೆ 40-50 ಬಾರ್‌ಗಳು ಇವೆ.

ಶ್ರೀ ಕೆ. ಟಿ. ಶ್ಯಾಮಯ್ಯಗೌಡ.—(ಅ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಲೈಸನ್ಸ್ ಫೀಯನ್ನು 10 ಸಾವಿರಕ್ಕೆ ಹೆಚ್ಚಿಸಿರುವುದರಿಂದ ಚಿಲ್ಲರೆ ಮಾರಾಟದ ಮದ್ಯದ ಅಂಗಡಿಗಳ ಸಂಖ್ಯೆ ಕಡಿಮೆಯಾಗಿರುವುದಕ್ಕೆ ಕಾರಣವಾಗಿದೆ. ಮತ್ತು ಯಾರೂ ಮುಂದೆ ಬರುತ್ತಿಲ್ಲ. ಫೀಜನ್ನು ಕಡಿಮೆ ಮಾಡಿದರೆ ಹೆಚ್ಚಿನ ಜನ ಮುಂದೆ ಬರುತ್ತಾರೆ. ಮತ್ತು ಸುಂಕ ಕೊಡದೆ ಕಳ್ಳತನದಿಂದ ಸಾಗಿಸಿದ ದೇಶೀಯ ಮದ್ಯದ ಮಾರಾಟ ಮಾಡುತ್ತಿರುವುದನ್ನು ತಪ್ಪಿಸುವುದಕ್ಕೆ ಅವಕಾಶವಾಗುತ್ತದೆ. ಆದಕಾರಣ ಲೈಸನ್ಸ್ ಫೀಯನ್ನು ಕಡಿಮೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಿಗೆ ಈ ವಿಚಾರದಲ್ಲಿ ಎಷ್ಟು ಅನುಭವ ಇದೆಯೋ ನನಗೆ ಗೊತ್ತಿಲ್ಲ. ಈ ಬಗ್ಗೆ ಯಾರು ವ್ಯಾಪಾರ ಮಾಡುತ್ತಿದ್ದಾರೋ, ಅವರಿಂದ ಯಾವ ಒಂದು ದೂರೂ ಸಹ ಬಂದಿಲ್ಲ. ವ್ಯಾಪಾರ ಮಾಡುತ್ತಿರುವವರು ನಮಗೆ ತೊಂದರೆಯಾಗಿದೆ ಎಂದು ಕೇಳಿಕೊಂಡ ನಂತರ ವಿಚಾರ ಮಾಡಬಹುದು. ಈಗ ಡಿಸ್ಟಿಲರಿ ಲೈಸನ್ಸ್ ದರವನ್ನು 25 ಸಾವಿರಕ್ಕೆ ಹೆಚ್ಚು ಮಾಡಿದ್ದೇವೆ. ಮತ್ತು ಅದು ಒಂದು ಲಕ್ಷ ರೂಪಾಯಿಗಳವರೆಗೂ ಹೋಗುತ್ತದೆ. ಡಿಸ್ಟಿಲರಿ ಲೈಸೆನ್ಸ್ ಪಡೆಯಲು ಅನೇಕ ಜನ ಮುಂದೆ ಬರುತ್ತಾರೆ. ನಾವು ಅವರ ಹಿಂದಿನ ಅನುಭವ, ಯೋಗ್ಯತೆ ಮತ್ತು ಹಣಕಾಸಿನ ವ್ಯವಸ್ಥೆಯನ್ನು ನೋಡಿಕೊಂಡು ಲೈಸನ್ಸ್ ಕೊಡುತ್ತೇವೆ. ಆದಕಾರಣ ನಾವು ಎಲ್ಲರಿಗೂ ಲೈಸನ್ಸ್ ಕೊಡುವುದಕ್ಕಾಗುವುದಿಲ್ಲ. ಈಗ ಲೈಸನ್ಸ್ ಪಡೆದಿರುವವರು ತಮಗೆ ಫೀ ವಿಚಾರದಲ್ಲಿ ತೊಂದರೆಯಾಗಿದೆ ಎಂದು ತಿಳಿಸಿದರೆ ನಾವು ಮತ್ತೆ ಯೋಚನೆ ಮಾಡುತ್ತೇವೆ.

Mr. DEPUTY CHAIRMAN.—Question Nos. 92 and 211 may be taken up together.

Dairy Project at Raipur in Dharwar District

92. Sri V. S. HIREGOWDAR (Local Authorities' Constituency).—

Will the Minister of State for Veterinary Services, Animal Husbandry and Dairy Development be pleased to state :—

(a) whether it is a fact that the Dairy project at Rayapur in Dharwar District is mismanaged and the volume of milk processed and distributed is coming down day by day ;

(SRI V. S. HIREGOWDAR)

(b) if so, action taken by the Government to set right the matter and ensure regular supply of milk;

(c) whether bcttling of milk was stopped for a long time on account of the breakdown of the machines;

(d) if so, the action taken to ensure its proper and regular working;

(e) whether the Dairy Project set up under the Hubli-Dharwar Milk Supply Scheme is intended to cover Gadag City also and if so, when it is proposed to be started there;

(f) the pattern of co-ordination between the working of the Hubli-Dharwar Milk Supply Scheme and the Dairy Co-operative Societies at the Taluka level and village level;

(g) the pattern of financial and technical assistance to be extended by the Government under the said programme?

SRI G. B. SHANKAR RAO (Minister of State for Veterinary Services, Animal Husbandry and Dairy Development).—

(a) No.

(b) Does aot arise.

(c) No.

(d) Action is being taken.

(e) No.

(f) In procurement of Milk priority is being given to the Co-operative Societies both at Taluka and village level.

(g) Loans are being sanctioned to the Co-operative Societies for the purchase of good buffaloes. Besides, the Societies are Supplied with Milk testing equiqment Chemical, Bicycles, Milk cans etc.

Dairy Plant at Rayapur

211. SRI Y. S. PATIL (Graduates' Constituency).—

Will the Minister of State for Veterinary Services, Animal Husbandry and Dairy Development be pleased to state:—

(a) the date on which the equipment to the Dairy Plant at Rayapur in Hubli-Dharwar Municipal Corporation area was installed;

(b) the person to whom the Contract was given;

(c) whether the equipment has been received in working order;

(d) if so, why the bottling work has not been commenced;

(*e*) if it was not received in working order, whether complete payment has been made to the Company that supplied the materials ;

(*f*) whether any action has been taken against the Officer who was responsible for the payment, if payment has been made already ?

Sri G. B. SHANKAR RAO (Minister of State for Veterinary Services, Animal Husbandry and Dairy Development).—

(*a*) 31st December 1968.

(*b*) Contract for erection of the plant was let out to M/s. Vulcan Laval Ltd., Poona.

(*c*) Yes. Subject to minor adjustments to be noticed after erection.

(*d*) For want of adequate supply of good water and minor defects which could be set right only when the Machine is used.

(*e*) The Bottle washer was supplied under the Swedish Credit and it was purchased through the State Trading Corporation. Erection charges have been paid to M/s. Vulcan Laval Ltd., Poona.

(*f*) Does not arise.

ಶ್ರೀ ವೈ. ಎಸ್. ಪಾಟೀಲ್.—ಕಂಟ್ರಾಕ್ಟ್ ಪಡೆದ ವ್ಯಕ್ತಿಗೆ ಎಷ್ಟು ಹಣ ಕೊಡಲಾಗಿದೆ ?

Sri B. RACHAIAH.—I require notice.

Sri Y. S. PATIL.—Sir, that is my main question.

Sri B. RACHAIAH.—The information is not available with me now.

Sri Y. S. PATIL.—if so, my Question may be taken up tomorrow.

Sri B. RACHAIAH.—I shall try to get the information.

ಶ್ರೀ ವಿ. ಎಸ್. ಹೀರೇಗೌಡರ್.—(೨೮) ಪ್ರಶ್ನೆಗೆ ಉತ್ತರವಾಗಿ ಹಾಲನ್ನು ಪಡೆದುಕೊಳ್ಳುವಲ್ಲಿ ತಾಲ್ಲೂಕ್ ಮತ್ತು ಗ್ರಾಮಗಳ ಹಂತಗಳೆರಡರಲ್ಲಿನ ಸಹಕಾರ ಸಂಘಗಳಿಗೆ ಆಧ್ಯತೆ ನೀಡಲಾಗುತ್ತಿದೆ ಎಂದು ಹೇಳಲಾಗಿದೆ. ಆದರೆ ವಸ್ತುಸ್ಥಿತಿ ಆ ರೀತಿ ಇಲ್ಲ. ಡೈರಿ ಸಹಕಾರ ಸಂಘಗಳು ಚೆನ್ನಾಗಿ ಸಂಘಟನೆಯಿಂದ ಕೆಲಸ ಮಾಡುತ್ತಿವೆ. ಈ ಸಂಘಗಳು ರೈತರಿಗೆ ಒಳ್ಳೆಯ ಎಮ್ಮೆ ಹಸುಗಳನ್ನು ಹಂಚಿ, ಅವರಿಂದ ಹಾಲನ್ನು ಪಡೆಯುತ್ತಿದ್ದಾರೆ. ಆದರೆ ಡೈರಿಯ ಅಧಿಕಾರಿಗಳು ಇಂತಹ ಸಹಕಾರ ಸಂಘಗಳನ್ನು ಹೊರತುಪಡಿಸಿ ಕೆಲಸ ಮಾಡುತ್ತಿದ್ದಾರೆ. ಆ ಅಧಿಕಾರಿಗಳಿಗೆ ಸರಿಯಾದ ನಿರ್ದೇಶನ ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಕೊಡುತ್ತೇವೆ.

ಶ್ರೀ ಎಂ. ವಿ. ವೆಂಕಟಪ್ಪ.—ಒಳ್ಳೆಯ ಎಮ್ಮೆ ಮತ್ತು ಹಸುಗಳನ್ನು ಕೊಂಡುಕೊಳ್ಳುವ ಸಲುವಾಗಿ ಸಹಕಾರಸಂಘಗಳಿಗೆ ಸಾಲ ಕೊಡುತ್ತೇವೆ ಎಂದು ಹೇಳಿದ್ದೀರಿ. ಆ ರೀತಿ ಸಾಲ ಕೊಡುವ ಬದಲು ಮಿಲ್ಕ್ ಕಾಲೋನಿಗಳಿಂದ ಹಸು ಮತ್ತು ಎಮ್ಮೆಗಳನ್ನು ತರಿಸಿ ಸಪ್ಲೈ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಈಗ ಸಾಲವನ್ನು ಕೋ-ಆಪರೇಟಿವ್ ಇಲಾಖೆಯವರು ಕೊಡುತ್ತಿದ್ದಾರೆ. ಸಹಕಾರ ಸಂಘದವರು ಆ ರೀತಿ ಸಾಲಪಡೆದು ಹಣವನ್ನು ಪಶುಸಂಗೋಪನಾ ಇಲಾಖೆಯವರಿಗೆ ಕೊಟ್ಟರೆ ಅವರು ತರಿಸಿಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ. ವಿ. ವೆಂಕಟಪ್ಪ.—ಕೆಲವರು ಸಾಲ ಪಡೆದು ಮದುವೆ ಮುಂಜಿಗಳಿಗೆ ಖರ್ಚು ಮಾಡಿಕೊಳ್ಳುತ್ತಿದ್ದಾರೆ. ಆದಕಾರಣ ನೀವೇ ಹಸುಗಳನ್ನು ಮತ್ತು ಎಮ್ಮೆಗಳನ್ನು ತರಿಸಿ ಹಂಚುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಈಗ ಕೋ-ಆಪರೇಟಿವ್ ಇಲಾಖೆಯವರು ಹಸು ಮತ್ತು ಎಮ್ಮೆ ಕೊಳ್ಳಲು ಸಾಲ ಕೊಡುತ್ತಿರುವುದು. ಇಲ್ಲಿಂದ ಸಾಲ ಪಡೆದು ಪಶುಸಂಗೋಪನ ಇಲಾಖೆಗೆ ಡೆಪಾಜಿಟ್ ಮಾಡಿದರೆ ಅವರು ತರಿಸಿಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎ. ಕೆ. ಸುಬ್ಬಯ್ಯ.—ಉತ್ತರ (ಈ)ನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಇದೆ. ಆದರೆ (ಅ) ಪ್ರಶ್ನೆಗೆ ಸರಕಾರ ಕೈಗೊಂಡ ಕ್ರಮವೇನು ಎಂದು ಕೇಳಿದುದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಇವರಲ್ಲಿ ಯಾವುದು ಸರಿ ?

ಶ್ರೀ ಬಿ. ರಾಚಯ್ಯ.—ಡೈರಿಯನ್ನು 31-12-1968ರಲ್ಲಿ ಎರೆಕ್ಟ್ ಮಾಡಲು ಮೆಷನರಿಯನ್ನು ಸ್ವೀಡನ್ನಿನಿಂದ ತರಿಸಿದ್ದೆವು. ಇದರಲ್ಲಿ ಒಂದು ಪಾರ್ಟು ಸಿಗದೇ ತೊಂದರೆಯಾಗಿತ್ತು. ಈಚೆಗೆ ಪಾರ್ಟು ತರಿಸಿ ಮೆಷಿನ್ ಎರೆಕ್ಟ್ ಮಾಡಲಾಗಿದೆ.

Sri Y. S. PATIL.—Sir, I wanted to know to whom the contract was given, for how much amount and how much he was paid ?

Sri B. RACHAIAH.—Sir, I get the information now. The contract was given, to M/s. Vulcan Laval Ltd., Poona and the erection charges paid is Rs. 1.06 lakhs.

ಶ್ರೀ ಎಂ. ವಿ. ವೆಂಕಟಪ್ಪ.—ಡೈರಿಯಲ್ಲಿ ಸೀಸೆ ತೊಳೆಯುವ ಯಂತ್ರ ಬಹು ಮುಖ್ಯವಾದುದು ಇಲ್ಲದೆ ಇದ್ದರೆ ಹಾಲು ಕೆಟ್ಟು ಹೋಗುತ್ತೆ. ಬೆಂಗಳೂರು ಡೈರಿಯಲ್ಲೂ ಕೂಡ ಸೀಸೆ ತೊಳೆಯುವ ಯಂತ್ರ ಸರಿಯಾಗಿಲ್ಲ. ಇದಕ್ಕಾಗಿ ಸರಕಾರ ಒಂದು ಸ್ಪೇರ್ ಸೀಸೆ ತೊಳೆಯುವ ಮೆಷೀನನ್ನು ಹೆಚ್ಚಾಗಿ ಇಲ್ಲಿಡುವಂತೆ ಏಕೆ ಮಾಡಬಾರದು ?

ಶ್ರೀ ಬಿ. ರಾಚಯ್ಯ.—ಇದು ಸ್ವಿಸ್ ಏಡ್ ಮೂಲಕ ತರಿಸಿದ್ದು ಮತ್ತು ಇದರ ಮೆಷಿನರಿಗಳೆಲ್ಲ ಅವರಿಂದ ಬಂದದ್ದು. ಆದರೆ ಇವರಿಂದ ಬಂದ ಮೆಷಿನರಿ ಸರಿಯಾಗಿದೆಯೇ ಇಲ್ಲವೇ ಎಂದು ನೋಡಿ ತೆಗೆದುಕೊಳ್ಳಲಾಗಲಿಲ್ಲ. ಏಕೆಂದರೆ ಇದು ಸಹಾಯವಾಗಿ ಬಂತು. ಈಚೆಗೆ ಇವನ್ನು ಸರಿಮಾಡಲಾಗಿದೆ. However that is a suggestion for action.

ಶ್ರೀ ವೈ. ಎಸ್. ಪಾಟೀಲ್.—ಇಲ್ಲಿನ ಕಂಟ್ರಾಕ್ಟರಿಗೆ ಪೂರ್ಣವಾಗಿ ಹಣ ಕೊಡಲಾಗಿದೆಯೇ ?

ಶ್ರೀ ಬಿ. ರಾಚಯ್ಯ.—ಇದು ಕಂಟ್ರಾಕ್ಟರ ತಪ್ಪಲ್ಲ. ಡೈರಿ ಎಕ್ವಿಪ್‌ಮೆಂಟು ಮೆಷಿನರಿ ಎರಡು ವರ್ಷಗಳ ಹಿಂದೆ ಬಂತು. ಒಂದು ಸ್ವಿಸ ಸರಕಾರದ ಮೂಲಕ ಸಹಾಯವಾಗಿ ಬಂತು. ಇದಕ್ಕೆ ವಲ್ಕನ ಲಾವಲ್ ಇವರು ಏಜಂಟರು. ಇವರ ಮೂಲಕ ತರಿಸಲಾಯಿತು. ಇನ್ನೊಂದು ಡೇನಿಷ್ ಸರಕಾರದ ಮೂಲಕ ಬಂತು. ಅದಕ್ಕೆ ಲಾರ್ಸನ ಅಂಡ್ ಟೂಬ್ರೊ ಏಜಂಟರು. ಅವರ ಮೂಲಕವೇ ಯಾವುದಾದರೂ ಮೆಷಿನರಿ ಪಾರ್ಟುಗಳನ್ನು ಬೇಕಾದರೂ ತರಿಸಿಕೊಳ್ಳಬೇಕು. ಬೇರೆ ಯಾರಿಂದಲೂ ಇದರ ಪಾರ್ಟುಗಳನ್ನು ತರಿಸಿಕೊಳ್ಳಲು ಅವಕಾಶವಿಲ್ಲ.

ಶ್ರೀ ಸಿ. ಬಂದೀಗೌಡ.—ಉತ್ತರದಲ್ಲಿ ಒಳ್ಳೆಯ ನೀರಿನ ಪೂರೈಕೆ ಸಾಕಷ್ಟು ಇಲ್ಲದಿರುವುದರಿಂದ ಎಂದು ಹೇಳಿವೆ. ಸಾಕಷ್ಟು ನೀರು ಪೂರೈಕೆ ಇಲ್ಲದೇ ಇರುವಾಗ ಇದನ್ನು ಏಕೆ ಮಾಡಲು ಪ್ರಾರಂಭಮಾಡಬೇಕಾಯಿತು ?

ಶ್ರೀ ಬಿ. ರಾಚಯ್ಯ.—ಒಂದು ಲಕ್ಷದ ಹತ್ತು ಸಾವಿರ ರೂಪಾಯಿಗಳ ವೆಚ್ಚದಲ್ಲಿ ಒಂದು ದೊಡ್ಡ ಬಾವಿಯನ್ನು ತೆಗೆಯಲಾಗಿದೆ. ಮಳೆ ಬಂದಾಗ ಸ್ವಲ್ಪ ನೀರು ಹೆಚ್ಚು ಬರುತ್ತಿದೆ. ಆದರೆ ಬೇಸಿಗೆಯಲ್ಲಿ ನೀರು ಇಲ್ಲದೆ ಬತ್ತಿ ಹೋಗುತ್ತಿತ್ತು. ಇದಕ್ಕಾಗಿ ಇಲ್ಲಿರುವ ಡೈರಿಗೆ ಬೇಕಾಗುವ ನೀರನ್ನು ಬೇರೆ ಕಡೆಯಿಂದ ಟ್ರಕ್ಕುಗಳ ಮೂಲಕ ತರಿಸಿ ಉಪಯೋಗ ಮಾಡುತ್ತಿದ್ದರು.

ಶ್ರೀ ಬಸವರಾಜ ಕಟ್ಟೀಮನಿ.—ಒಳ್ಳೆಯ ನೀರು ಪೂರೈಕೆ ಆಗದೇ ಇರುವುದರಿಂದ ಎಂದರೆ ಹಾಲಿಗೆ ನೀರು ಸೇರಿಸಲು ಆಗುತ್ತಿಲ್ಲ ಎಂದರ್ಥವೇ ?

ಶ್ರೀ ಬಿ. ರಾಚಯ್ಯ.—ಇಲ್ಲಿ ಬೇರೆ ಬಾವಿಯಿಂದ ನೀರು ತಂದು ಉಪಯೋಗ ಕೊಡುತ್ತಿದ್ದಾರೆ.

ಶ್ರೀ ವೈ. ಎಸ್. ಪಾಟೀಲ್.—ಹಾಲು ಪರ್ಚೇಸ್ ಮಾಡುವ ಕಸ್ಟಮರ್ಸಿನಿಂದ ಅವರಿಗೆ ಬಾಟಲ್ ಸಿಸ್ಟಂ ಇಂಟ್ರಡ್ಯೂಸ್ ಮಾಡುತ್ತೇವೆಂದು ಹೇಳಿ ಕಲೆಕ್ಟ್ ಮಾಡಿರುವ ಹಣವೆಷ್ಟು ಎಂದು ಹೇಳುತ್ತೀರಾ ?

Sri B. RACHAIAH.—I require notice.

Administrative Officer of the Rayapur Dairy

214. Sri Y. S. PATIL (Graduates' Constituency).—

Will the Minister of State for Veterinary Services, Animal Husbandry and Dairy Development be pleased to state :—

(a) the reasons for combining the post of the Administrative Officer in Rayapur Dairy, Hubli-Dharwar Municipal Corporation area with the post of Project Officer, Intensive Cattle Development Programme ;

(b) the time of the officer that is being devoted for the dairy work and for the I. C. D. P.;

(c) the progress of the I. C. D. P. after it was started at Dharwar ?

Sri B. RACHAIAH (Minister for Agriculture).—

(a) In the interest of better administration.

(b) The officer being common he devotes equal attention and time for both the functions.

(c) Started on 7th January 1969 and making steady progress.

ಶ್ರೀ ವೈ. ಎಸ್. ಪಾಟೀಲ್.—ಡೈರಿಯ ನಿರ್ವಹಣಾಧಿಕಾರಿ ಮತ್ತು ಹುದ್ದೆ, ಪಶು ಅಭಿವೃದ್ಧಿ ವಿಸ್ತರಣಾಧಿಕಾರಿ ಹುದ್ದೆ ಈ ಎರಡು ಕಾರ್ಯಗಳನ್ನೂ ಒಬ್ಬರಿಗೇ ಕೊಟ್ಟಿದ್ದೀರಿ. ಈ ರೀತಿ ಒಬ್ಬರಿಗೇ ಕೊಟ್ಟಿದ್ದರಿಂದ ಎರಡೂ ಕೆಲಸಗಳೂ ಸರಿಯಾಗಿ ಆಗದೇ ಇರುವುದರಿಂದ ಸಾರ್ವಜನಿಕರಿಗೆ, ಹಾಸ್ಪಿಟಲ್‌ಗಳಿಗೆ ಹಾಲು ಸಾಕಷ್ಟು ಸಪ್ಲೈ ಆಗುತ್ತಿಲ್ಲ. ಆದುದರಿಂದ ಇವೆರಡಕ್ಕೂ ಬೇರೆ ಬೇರೆಯವರನ್ನು ಅಪಾಯಿಂಟ್ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

† ಶ್ರೀ ಬಿ. ರಾಚಯ್ಯ.—ಮೊದಲು ಪ್ರಾಜೆಕ್ಟ್ ಆಫೀಸರು ಯಾರು ಇದ್ದರು ಅವರು ಕ್ಲಾಸ್ 2 ಆಫೀಸರು. ಅವರು ಮುಂದೆ ಬೆಳಗಾಂ ಡೈರಕ್ಟರ್, ಡೈರಕ್ಟ್ ಕಂಟ್ರೋಲ್‌ನಲ್ಲಿ ಇದ್ದರು. ಕ್ಲಾಸ್ 1 ಆಫೀಸರು ಇದೇ ಜಿಲ್ಲೆಯಲ್ಲಿರುವುದರಿಂದ ಅವರ ಕೈಕೆಳಗೆ 4 ಜನ ಕ್ಲಾಸ್ 2 ಆಫೀಸರು ಇದ್ದಾರೆ. ಒಬ್ಬೊಬ್ಬರೂ ಬೇರೆ ಬೇರೆ ವಿಭಾಗಗಳನ್ನು ನೋಡಿಕೊಂಡು ಹೋಗುತ್ತಾರೆ. Now the Class I Officer can co-ordinate the work efficiently.

ಶ್ರೀ ವೈ. ಎಸ್. ಪಾಟೀಲ್.—ಇಷ್ಟಾದರೂ ಕೂಡ ಹಾಲಿನ ಪೂರೈಕೆ ಸಾರ್ವಜನಿಕರಿಗೆ ಹಾಸ್ಪಿಟಲ್‌ಗೆ ಸರಿಯಾಗಿ ಆಗದೇ ಇರುವುದಕ್ಕೆ ಕಾರಣ ಏನು ?

ಶ್ರೀ ಬಿ. ರಾಚಯ್ಯ.—ಮಳೆಗಾಲದಲ್ಲಿ ಹಾಲು ಜಾಸ್ತಿ ಸಿಕ್ಕುತ್ತದೆ. ಬೇಸಿಗೆ ಕಾಲದಲ್ಲಿ ಹಾಲು ಅಷ್ಟು ಸಪ್ಲೈ ಆಗುವುದಿಲ್ಲ. ಇದು 17 ವರ್ಷದಿಂದಲೂ ಕೂಡ ಹೀಗಿದೆ.

ಶ್ರೀ ವೈ. ಎಸ್. ಪಾಟೀಲ್.—(ಸಿ)ಗೆ ಉತ್ತರವಾಗಿ Started on 7-1-1969 and making steady progress ಎಂದು ಹೇಳಿದ್ದೀರಿ. May I know how much money has been invested in the I.C.D.P. and what are the returns from this ?

ಶ್ರೀ ಬಿ. ರಾಚಯ್ಯ.—ಈಗ ಸೊಸೈಟಿಗಳ ಮುಖಾಂತರವಾಗಿ ಹಸುಗಳನ್ನು ಕೊಂಡು ಕೊಳ್ಳುವುದಕ್ಕಾಗಿ ಮೂರು ತಿಂಗಳಿಂದೀಚೆಗೆ ಸುಮಾರು 85 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. Incentive to cattle development and insemination centres ನಲ್ಲಿ ಹಸುಗಳನ್ನು ಕೊಂಡುಕೊಳ್ಳತಕ್ಕವರಿಗೆ ಹಣ ಕೊಡತಕ್ಕದ್ದು ಇದೆ. ಈ ಎಲ್ಲಾ ಕೆಲಸಕಾರ್ಯಗಳಲ್ಲೂ ಕೂಡ ಅವರು ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದಾರೆ.

Construction of Railway Underbridge at Davanagere and Harihar

232. Sri A. H. SHIVANANDA SWAMY (Elected by L.A.).—

Will the Minister for Public Works be pleased to state :—

(*a*) when the proposal for construction of Railway underbridge at Davangere and Harihar was initiated ;

(*b*) the budget provision made in the State Budget for that work ;

(*c*) whether the Davangere City Municipality has agreed to give its share for the construction of the underbridge at Davangere ;

(*d*) when it will be take up for construction ?

Sri K. LAKKAPPA (Minister for Public Works).—

(*a*) During 1966-67.

(*b*) Rs. 40,000 for the work of approaches to the underbridge at Davangere.

Rs. 50,000 for the work of approaches to underbridge at Harihar.

(*c*) Yes.

(*d*) It will be taken up, after it is included in the works programme of the Southern Railways.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ದಾವಣಗೆರೆ ನಗರಸಭೆಯವರು ಸರ್ಕಾರ ಕೇಳ ತಕ್ಕಂಥ ಎಲ್ಲ ಹಣವನ್ನೂ ಕೊಡುವುದಕ್ಕೆ ಒಪ್ಪಿದ್ದರೂ ಕೂಡ ಈ ಅಂಡರ್ ಬ್ರಿಜ್ ಕಟ್ಟದೆ ಇರುವುದಕ್ಕೆ ಕಾರಣವೇನು ?

ಶ್ರೀ ಕೆ. ಲಕ್ಕಪ್ಪ.—ಅಂಡರ್ ಬ್ರಿಜ್ ಕಟ್ಟಬಾರದು ಎನ್ನುವ ಉದ್ದೇಶವಿಲ್ಲ. ದಾವಣಗೆರೆ ಮುನಿಸಿಪಾಲಿಟಿಯವರು ಜುಲೈ ತಿಂಗಳಿನಲ್ಲಿ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಅವರು ಒಪ್ಪಿಗೆ ಯನ್ನು ಕೊಟ್ಟಮೇಲೆ ನಾವು ರೈಲ್ವೆ ಅಥಾರಿಟೀಸ್ ಸಂಗಡ ಪತ್ರ ವ್ಯವಹಾರ ಮಾಡಬೇಕಾಯಿತು. ಇದಕ್ಕೆ ಸಂಬಂಧಪಟ್ಟ ಹಾಗೆ ಎಸ್ಟಿಮೇಟ್, ಪ್ಲಾನ್ ಇತ್ಯಾದಿಗಳನ್ನು ಮಾಡುವುದರ ಬಗ್ಗೆ ನಾವು ರೈಲ್ವೆಯವರಿಗೆ ಬರೆಯುವುದರಲ್ಲಿದ್ದೇವೆ. ಅವರಿಂದ ಉತ್ತರ ಬಂದಮೇಲೆ, ವರ್ಕ್ ಪ್ಲಾನನಲ್ಲಿ ಸೇರಿಸಿದಮೇಲೆ ಕಾರ್ಯಗತ ಮಾಡುವುದಕ್ಕೆ ಪ್ರಾರಂಭ ಮಾಡುತ್ತೇವೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—1963ನೇ ಇಸವಿಯಲ್ಲಿ ಅಪ್ರೋಚ್ ರೋಡ್ಸ್ ಮತ್ತು ಇತರ ಎಲ್ಲ ವಿಧವಾದ ಪ್ಲಾನುಗಳನ್ನೂ ತಯಾರು ಮಾಡಿ ಮುನಿಸಿಪಾಲಿಟಿಯವರು ಅದಕ್ಕೆ ಬೇಕಾದ ಹಣವನ್ನು ಕೊಡುವುದಾಗಿ ಒಪ್ಪಿಕೊಂಡು ಬರೆದಿರಲಿಲ್ಲವೇ ?

ಶ್ರೀ ಕೆ. ಲಕ್ಕಪ್ಪ.—ಮುನಿಸಿಪಾಲಿಟಿಯವರು ಒಪ್ಪಿಗೆ ಕೊಡದೆ ಇದ್ದ ಕಾರಣದಿಂದ ನಿಧಾನ ವಾಗಿದೆ. ಅವರು ಜುಲೈ ತಿಂಗಳಿನಲ್ಲಿ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ರೈಲ್ವೆಯವರೊಡನೆ ವ್ಯವಹರಿಸಿ ಸೂಕ್ತ ಕ್ರಮ ತೆಗೆದುಕೊಂಡು ಸೇತುವೆ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಮಾನ್ಯ ಮಂತ್ರಿಗಳು ಸತ್ಯಕ್ಕೆ ದೂರವಾದ ವಿಷಯ ವನ್ನು ಹೇಳುತ್ತಿದ್ದಾರೆ. 1963ನೇ ಇಸವಿಯಲ್ಲಿ ನಾನು ಆ ನಗರಸಭೆಯ ಅಧ್ಯಕ್ಷನಾಗಿ ಇದ್ದಾಗ ಒಪ್ಪಿಗೆಯನ್ನು ಕೊಡಲಾಗಿದೆ. ಆದುದರಿಂದ ಈ ವಿಷಯವನ್ನು ಪರಿಶೀಲನೆ ಮಾಡಿ ಇನ್ನಾದರೂ ಕೂಡಲೇ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಕೆ. ಲಕ್ಕಪ್ಪ.—ರೈಲ್ವೆ ಅಥಾರಿಟೀಸ್ ಉದ್ದೇಶವಾದರೂ ಈಗ ಇರುವ ಲೆವೆಲ್ ಕ್ರಾಸಿಂಗ್ ಮುಚ್ಚಿ ಬೇರೆಯಾದ ಬ್ರಿಜ್ ಮಾಡುವುದಕ್ಕೆ ಮಾತ್ರ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಮುನಿಸಿ ಪಾಲಿಟಿಯವರು ಹಿಂದೆ ಹೇಳಿರುವುದರಲ್ಲಿ ಲೆವೆಲ್ ಕ್ರಾಸಿಂಗ್ ಮುಚ್ಚದೆ ಅಂಡರ್ ಬ್ರಿಜ್ ಮಾಡ

ಬೇಕೆಂದು ಕೇಳಿದ್ದಾರೆ. ಲೆವೆಲ್ ಕ್ರಾಸಿಂಗ್ ಇರಬೇಕು, ಅಂಡರ್ ಬ್ರಿಜ್ ಸಹ ಆಗಬೇಕು ಎನ್ನುವ ವಾದವನ್ನು ಮಾಡಿಕೊಂಡು ಕುಳಿತುಕೊಂಡ ಕಾರಣದಿಂದ ಇಲ್ಲಿಯವರೆಗೂ ಕಾರ್ಯಗತವಾಗಲಿಲ್ಲ. ಈವಾಗ 50 ಪರ್ಸೆಂಟ್ ಖರ್ಚನ್ನು ಕೊಡುವುದಕ್ಕೆ ಮುನಿಸಿಪಾಲಿಟಿಯವರು ಒಪ್ಪಿದ್ದಾರೆ. ಇನ್ನು ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

Revision of Land Revenue

235. Sri A. H. SHIVANANDASWAMY (Elected by L. A.).—

Will the Minister for Revenue be pleased to state :—

(a) whether the revision of land revenue is taking place in various districts on receipt of complaints ;

(b) the number of districts and taluks that are subjected to such revision ;

(c) the nature of complaints and their stage of disposal ?

Sri H. V. KOUJALGI (Minister for Revenue).—

(a) Provision has been made under Section 122 B of the Mysore Land Revenue Act enabling the Deputy Commissioners to pass order varying assessments after considering the objections preferred by the parties in response to the notices issued under Section 122 A of the Mysore Land Revenue Act. The orders can be passed only after notices are served and objections are preferred.

(b) Government have not yet notified where fresh revision settlement will be held by virtue the provision under Section 114 A of the Mysore Land Revenue Act.

(c) This information can be given only after the notices are served and objections preferred are considered by the Deputy Commissioners.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಭೂ ಕಂದಾಯವನ್ನು ಪುನರ್ವಿಮರ್ಶೆ ಮಾಡುತ್ತೇವೆಂದು ಈ ಸದನದಲ್ಲಿ ಹೇಳಿದ್ದಾರೆ. ಅದರ ಪ್ರಕಾರ ಎಷ್ಟು ಅರ್ಜಿಗಳು ಬಂದಿವೆ, ಯಾವ ಯಾವ ಜಿಲ್ಲೆಯಿಂದ, ಯಾವ ಯಾವ ತಾಲ್ಲೂಕಿನಿಂದ ಬಂದಿವೆ ಎಂದು ಕೇಳಿದರೆ ಅದಕ್ಕೆ ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ಯಾವ ಯಾವ ಜಿಲ್ಲೆ ಮತ್ತು ತಾಲ್ಲೂಕುಗಳಿಂದ ಕಂದಾಯದ ಪುನರ್ವಿಮರ್ಶೆ ಮಾಡಬೇಕೆಂದು ಅರ್ಜಿಗಳು ಬಂದಿವೆ ಎನ್ನುವುದನ್ನು ಈಗಲಾದರೂ ದಯವಿಟ್ಟು ತಿಳಿಸುತ್ತಾರೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಸೆಕ್ಷನ್ಸ್ 122 ಮತ್ತು 1114 ಪ್ರಕಾರ ಪ್ರತಿಯೊಬ್ಬ ಹೋಲ್ಡರಿಗೂ ನೋಟೀಸ್ ಕೊಡಬೇಕಾಗುತ್ತದೆ. ನೋಟೀಸ್ ಕೊಟ್ಟನಂತರ ಅವರ ಆಕ್ಷೇಪಣೆಗಳು ಏನಾದರೂ ಇದ್ದರೆ ಬರುತ್ತದೆ. ಈ ಮುಂಚಿತವಾಗಿ ಹೇಳಿದಂತೆ ನೋಟೀಸ್ ಇನ್ನೂ ಕೊಟ್ಟಿಲ್ಲ. ನೋಟೀಸ್ ಫಾರಂ ವಗೈರೆ ಎಲ್ಲ ಪ್ರಿಂಟ್ ಆಗಿ ಸಂಬಂಧಿಸಿದ ಅಧಿಕಾರಿಗಳ ಕಡೆಗೆ ಹೋಗಿವೆ. ನೋಟೀಸ್ ಕೊಟ್ಟು ನಂತರ ಎಷ್ಟು ತಕರಾರುಗಳು ಬರುತ್ತವೆ ಎಂದು ಹೇಳಬಹುದು.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ನೋಟೀಸ್ ಕೊಡುತ್ತೀರಲ್ಲ, ಪುನರ್ವಿಮರ್ಶಿತ ಕಂದಾಯವನ್ನು 1965ನೇ ಇಸವಿಯಿಂದ ಜಾರಿಗೆ ಕೊಡುತ್ತೀರೋ ಅಥವಾ ನೋಟೀಸ್ ಕೊಟ್ಟ ವರ್ಷಕ್ಕೆ ಅದು ರಿವಿಜನ್ ಆಗುತ್ತದೆಯೋ ?

ಶ್ರೀ ಎಚ್. ವಿ. ಕೌಜಲಗಿ.—1964-65 ರಲ್ಲಿ ರೀಸೆಟಲ್‌ಮೆಂಟ್ ಆಗಿದೆ. ನೋಟೀಸ್ ಕೊಟ್ಟ ನಂತರ ಏನಾದರೂ ಹೆಚ್ಚು ಕಡಮೆಯಾದರೆ ಆ ತಾರೀಖಿಗೆ ಬರುತ್ತದೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಪ್ರತಿಯೊಬ್ಬ ಪಟ್ಟಾದಾರರಿಗೂ ಭೂಕಂದಾಯ ವ್ಯತ್ಯಾಸವಾಗಿರುವುದರ ಬಗ್ಗೆ ನೋಟೀಸ್ ಕೊಡುವುದರಲ್ಲಿ ಸರ್ವೆಸೆಟಲ್‌ಮೆಂಟ್ ಕಾಲಕ್ಕೆ ಮಾಡಿದ ಹಾಗೆ ಗೆಜೆಟಿನಲ್ಲಿ ಪ್ರಕಟಣೆ ಮಾಡಲಾಗುವುದೇ ಹೇಗೆ ?

ಶ್ರೀ ಎಚ್. ವಿ. ಕೌಜಲಗಿ.—ಈ ತಿದ್ದುಪಡಿ ಕಾಯಿದೆ ಮಾನ್ಯ ಮನೆಯಲ್ಲಿ ಬಂದಾಗ ಹೇಳಿದ್ದೇನೆ, ಸುಪ್ರೀಂಕೋರ್ಟ್ ತೀರ್ಮಾನದ ಪ್ರಕಾರ ಪ್ರತಿಯೊಬ್ಬರಿಗೂ ನೋಟೀಸ್ ಕೊಡಬೇಕಾಗುತ್ತದೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ನೋಟೀಸ್ ಕೊಟ್ಟಾಗ ಪ್ರತಿಯೊಬ್ಬರಿಂದಲೂ ಸಹಿ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ನೋಟೀಸ್ ಯಾವರೀತಿ ಕೊಡಬೇಕು ಎನ್ನುವುದು ಲ್ಯಾಂಡ್ ರೆವೆನ್ಯೂ ಕೋಡಿನಲ್ಲಿದೆ ಆ ಪ್ರಕಾರ ಕೊಡುತ್ತೇವೆ.

4-00 P.M.

ಶ್ರೀ ಎ. ಕೆ. ಸುಬ್ಬಯ್ಯ.— ನೋಟೀಸನ್ನು ಎಲ್ಲಾ ಜಿರ್ಲೆಗಳವರಿಗೂ ಕೊಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಪ್ರತಿಯೊಬ್ಬರಿಗೂ ಕೊಡುತ್ತೇವೆ.

ಶ್ರೀ ಎ. ಕೆ. ಸುಬ್ಬಯ್ಯ.—ಕೊಡಗಿನ ಬಗ್ಗೆ ಕಾನೂನು ಆಗಿಲ್ಲವೇ ?

ಶ್ರೀ ಎಚ್. ವಿ ಕೌಜಲಗಿ.— 114 ನೇ ಕಲಮಿನ ಪ್ರಕಾರ ಸರಕಾರಕ್ಕೆ ಎಲ್ಲಿ ಅನ್ಯಾಯವಾಗಿದೆಯೆಂದು ಕಂಡುಬರುವುದೋ ಅಲ್ಲಿ ರೀಸೆಟ್ಲ್‌ಮೆಂಟ್ ಇಂಟ್ರೊಡ್ಯೂಸ್ ಮಾಡಿ ರೀವಿಷನ್ ಮಾಡಿ ನೋಟೀಸ್ ಕೊಡಲಾಗುವುದು. ಮತ್ತು 172 ನೆಯ ಕಲಮಿನ ಪ್ರಕಾರ ಪ್ರತಿಯೊಬ್ಬರಿಗೂ ಡಿ. ಸಿ. ಕೊಡುವರು.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಪುನಃ ಭೂ ಕಂದಾಯದ ರಿವಿಷನ್ ಮಾಡಬೇಕು, ಅನ್ಯಾಯವಾಗಿದೆ ಎಂದು ಆಪಾದನೆ ಬಾರದಿರುವ ಹಾಗೆ ಲ್ಯಾಂಡ್ ರೆವನ್ಯೂ ಆಕ್ಟ್ ಪ್ರಕಾರ ಅಥವಾ ಲ್ಯಾಂಡ್ ರೆವೆನ್ಯೂ ಕೋಡ್ ಪ್ರಕಾರ ನೋಟೀಸು ಕೊಡುವಾಗ ಆಯಾ ಪಟ್ಟಾದಾರರ ಸಹಿ ತೆಗೆದುಕೊಳ್ಳುವಂತೆ ತಿಳಿಸುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ನೋಟೀಸು ಕೊಡಬೇಕಾದರೆ ಸಹಿ ತೆಗೆದುಕೊಳ್ಳಬೇಕು ಮನೆಯಲ್ಲಿ ಯಾರೂ ಇಲ್ಲದಿದ್ದರೆ ಬಾಗಿಲಿಗೆ ನೋಟೀಸನ್ನು ಹಚ್ಚಬೇಕು. ದೊಡ್ಡವರು ಯಾರ ಮನೆಯಲ್ಲಿ ಹಾಜರಿರುವರೋ ಅವರಿಗೆ ಕೊಡಬೇಕು ಎಂದಿದೆ. ಆ ಪ್ರಕಾರ ಮಾಡುತ್ತಾರೆ.

ಉಪಸಭಾಪತಿಯವರು.—ಪ್ರಶ್ನೋತ್ತರಗಳ ಕಾಲ ಮುಗಿಯಿತು. ಈಗ ಸಭೆ ಎದ್ದು ಮತ್ತೆ ನಾಲ್ಕೂವರೆಗಂಟೆಗೆ ಸೇರುವುದು.

The House rose for Tea at Three Minutes past Four of the Clock and reassembled at Thirty-five Minutes past Four of the Clock.

[MR. DEPUTY CHAIRMAN in the Chair]

Replies to Questions to be expedited by Government

ಶ್ರೀ ಬಿ. ಚನ್ನಬೈರೇ ಗೌಡ.—ನನ್ನ ಪ್ರಶ್ನೆ 28 ನೇ ತಾರೀಖು ಒಂದು ಷಾರ್ಟ್‌ನೋಟೀಸ್ ಪ್ರಶ್ನೆ ಕೊಟ್ಟಿದ್ದೆ ಇದುವರೆಗೂ ಉತ್ತರ ಬರಲಿಲ್ಲ. ಅದೇ ರೀತಿ ಇನ್ನೂ ಅನೇಕ ಪ್ರಶ್ನೆಗಳಿಗೆ ಉತ್ತರ

ಬರಲಿಲ್ಲ. ಅಲ್ಪಕಾಲಾವಧಿ ಪ್ರಶ್ನೆ ಬೆಂಗಳೂರು ನಗರದಲ್ಲಿ ಮಾರ್ಕೆಟ್ ಹತ್ತಿರ ಇರುವ ಸಬ್‌ವೇಗೆ ಸಂಬಂಧಪಟ್ಟದ್ದಾಗಿದೆ, ಈ ರೀತಿ ಆದರೆ ಏನು ಮಾಡುವುದು ?

ಉಪಸಭಾಪತಿಯವರು.—ತಾವು ಹೇಳತಕ್ಕ ವಿಚಾರಗಳನ್ನು ಸರ್ಕಾರದವರಿಗೆ ಆಗಾಗ್ಗೆ ತಿಳಿಸುತ್ತಾ ಇದ್ದೇವೆ.

ಶ್ರೀ ಬಿ. ಚನ್ನಬೈರೇ ಗೌಡ.—ಉತ್ತರ ಬಂದರೆ ಒಳ್ಳೆಯದು. ಎಲೆಕ್ಟ್ರಿಸಿಟಿ ಬೋರ್ಡಿನ ಮೇಲೆ ಅರ್ಧಗಂಟೆ ಕಾಲ ಚರ್ಚೆಗೆ ಅವಕಾಶ ಕೇಳಿದ್ದೆ, ಅದೂ ಬರಲಿಲ್ಲ ಮತ್ತು, ಕಾವೇರಿ ಬೇಸಿನ್‌ನಲ್ಲಿ ಆಗಬೇಕಾದ ಕಾಂಗಾರಿಗಳ ವಿಷಯ ಇದೆ, ಅದರ ಚರ್ಚೆ ಯಾವಾಗ ಬರುತ್ತದೆ ?

Debate on the sharing of the Cauvery Waters—Permission for allowance

Same is the case with regard to allegations Nos. 10 and 11. But, I would like to point out one thing about allegation No. 11, which again, as I said, establishes multiplicicity of standards in making selections. We have known Dr. Pampapathi Rao and Dr. Naganna with their brilliant academic qualifications. Here, Prof. G. Parameshwarappa, Head of the Department of Electrical Engineering, was an Assistant Professor in the Regional College of Engineering, Surathkal. on a pay of Rs. 940 p.m. in the scale of Rs. 700-1,250. He has taken the M.S. degree from the Virginia Tech., (U.S.A.) with very good grades. What are those grades, whether A plus or B plus or B minus or C or D, we do not know. But, they have not told us whether he has passed his B.E., in what Class, etc. They say that out of the 14 years of his previous teaching experience, nearly 11 years was in the capacity of Assistant Professor Reader; he also officiated as Head of the Department of Electrical Engineering at the Regional Engineering College, Surathkal in 1961-62. The Head of the Department might have gone on leave for one or two months and he might have officiated. That does not establish any standard qualifications. It shows how the University has miserably failed in establishing its own point of view or trying to justify a wrong selection made. They say that post-graduate course in Electrical Engineering was due to be started......... So, a third Class B. E., with a Second Classs M. S., without any doctorate has been appointed as professor of Electrieal Engineering.

I come to allegation No. 12. It is as follows :—

> "The Registrar's son-in-law, Mr. Divyananda, a second Class B. E. was not only appointed as lecturer, but allowed to put in term for M. E. and to top this, the dates of examination and the examiners changed. Should the whole University machinery be invoked for the sake of one official power" ?

As I already stated, when we are holding offices of position, we have to doubly make sure that no allegations are passed against us when we make appointments of relatives. I do not say that our relatives should not be appointed, because we hold positions. But, when we make such appointments, we must make sure that no allegations of any sort are thrown on us. But here what has been done ? I would like to state according to the University records themselves. They say :

> "The statement that Sri B. Divyanada is only as ordinary II Class B.E. and was appointed as Lecturer in Mechanical Engineering only because he is son-in-law of the Registrar is not correct. Out of the 15 persons who applied for the post of Lecturar in Mechanical Engineering (under-Graduate Course) none was an M. E. and none of them also held I Class B. E. in Mechanical Engineering".

What about hundreds of first Class people who are without appointment? There are nearly 5,000 Engineering Graduates, out of whom 600 to 700 First Classe, who are not having appointments till today. Can we believe that only 15 condidates without any first Class applied for the post ? What were the manoeuvres done by the Registrar to see that first Class boys did not come to the post. I am not worried about the other part of giving him a chance to go to M. E. They have stated that similar chances have been given to other teaching staff for higher studies. But I would like to make one pertinent issue, namely, that the University has stated that there were none holdidg M. E. degree and also none of them held first class B. E. (Mechanical). But the University has also stated :

> "The qualifications of all these was B. E. II Class excepting Sri C. S. Chandrasehkara Murthy who was the only candidate holding M. E. Degree but who had applied for the post of Lecturer in Mechanical Engineering (post-Graduate Course) and was selected."

I want to know from the Government, why the University did not appoint this M. E. candidate to that post ?
This point cannot be overlooked by anybody.

In regard to allegation No. 13 there is not much to say. Here also the University authorities have not furnished the equivalent qualifications of other candidates.

Coming to allegation 14 in regard to determination of seniority, Sir, it is alleged that:

> "The rules of seniority have been overlooked and Proof. K. V. Gundu Rao has been appointed Head of Department of Mechanical Engineering. This is not correct."

The University has justified by saying :

> "The appointment of Prof. Gundu Rao has been made in accordance with the Ordinances of the Universisy in this behalf Dr. Lingiah moved the Court of Law against this appointment and his Petition was dismissed. It is not correct to say in the face of his fact that the appointment was untenable."

In this connection I would like to ask whether qulifications and experience are not essential to promote a person to the post of Head of the Department ?

Sri K. V. SHANKARA GOWDA.—The highest judicial authority has examined this question and has dismissed the petition of Dr. Lingiah. What more could we do in the matter ?

Sri D. RAJAGOPAL.—I would like to know here whether the preliminary issue, *i.e.*, the relative seniority has been taken into consideration ?

(SRI D. RAJAGOPAL)

Then, in regard to the poit about the Dean what the students have alleged is not quite clear and I will not touch that point.

Then coming to allegation No. 16, I would like to say that the lack of integrity is not only there in dealing with the appointment of lecturers and professors but also with the appointments of menial staff. In this case also students have alleged that about 22 persons have been appointed, but the University has mentioned the names of only about seven persons. The students were not clever enough to say, ever since the Registrar was appointed, how many such menials were appointed.

I have nothing to comment about allegation No. 17.

In allegation No. 18 it is alleged that Sri P. Mallikarjunappa, when he was acting Vice-Chancellor appointed a number of persons to various posts who were belonging to his community. Is this not misuse of power ? The University has not given any details in this behalf and we cannot come to any conclusion in this matter.

I now come to allegation No. 19 which deals with the rules governing the award of loans to the employees of the University. The students are not aware fully of these matters and there is nothing to be discussed.

In conclusion, I would like to say, Sir, that whatever the University has stated, in paras 17 and 18 of this note with reference to the Board of Examiners, is not correct.

Sir, we all know when the Hon. Education Minister went to the University, the students received him with due respect and when there was untoward incident they have brought him back. It shows they have the highest regard for the Education Minister. Nobody need be told about this. It is a matter of common knowledge. But here on pages 17 and 18, I see some mischievous facts. The University authorities have tried to elaborate this fact in detail. But, in some important factors, they have not elaborated but simply given some sentences. But in this case they have elaborated it to two and half pages. I do not want to explain in detail about this because of shortage of time. It clearly goes to show that the University Authorities want to see that no enquiry is held so far as this matter is concerned. The demands of the students would certainly be established. If a judicial enquiry is held but I must say what a judicial enquiry is. The concept of judicial enquiry is not properly understood by them. A judicial enquiry is always constituted when the authority enquiring into it demands certain papers and certain witnesses and when such witnesses and papers are provided. But here there is no need to call the enquiry as judicial enquiry. What the students really want is that there should be an enquiry presided over by a man with judicial experience. I do not think the Government can have any objection to institute an enquiry when there is a *prima facie* case.

Secondly, two other points are also raised which do not come within the purview of the discussion. Thank you, Sir.

SRI K. T. SHAMIAH GOWDA.—There are some notes here on which the names of the Senate Members are mentioned. There are five senate members here. It is better to hear them about these charges. If we hear them, I think, we can come to some conclusion.

SRI K. V. SHANKARA GOWDA.—Yesterday, we had discussion for about 1 hour and 20 minutes and today we had discussion for about 1 hour and 15 minutes and the total comes to about 2 hours and 35 minutes. I want to know whether the Chair would extend the time for this subject.

MR. DEPUTY CHAIRMAN.—The Chair gave an assurance to the Hon. Member Sri Shivanandaswamy that he would be given an apportunity to express his views about the so called attrocities of the Police. After Sri Shivanandasway finishes, one or two members may be allowed.

SRI K. V. SHANKARA GOWDA.—In that case, I would like to know what more time the Chair would like to give for this matter.

SRI C. S. BALAKRISHNA GOWDA.—The prime mover has taken nearly 2½ hours. The Hon'ble Chair cannot be so strict in giving time to others. The students Council has asked for judicial enquiry. We want to argue and make out a case.

MR. DEPUTY CHAIRMAN.—The Hon. Member Sri Rajagopal has exhausted all the points. Those points need not be repeated. I would like to know from the Leader of the House till what time should we sit and discuss this matter. I have promised to give time to Sri Shivanandaswamy.

SRI K. V. SHANKARA GOWDA.—I have no objection to give an opportunity to Sri Shivanandaswamy on this occasion. What I wanted to know is what is the total time you are going to allot, is it 10 or 15 minutes, so that we may finish within that time. Allotment of time is left to the Chair.

SRI K. PUTTASWAMY (Minister for Law, Labour and Parliamentery Affairs).—The rule is very definite. As per rule the time should not exceed 2½ hours. We have already exceeded the time limit. The Hon. Members want to speak on this subject. The only way is to suspend the operation of the rule, otherwise the business of the House would not be in order. By suspending the rule and by fixing up the time limit, we can discuss, otherwise I am afraid it may not be to the point.

MR. DEPUTY CHAIRMAN.—Yes. That is a good suggestion. Is it the pleasure of the House to suspend Rule 59 so that some more time may be given to Hon. Members to speak ?

HON. MEMBERS.—Yes.

MR. DEPUTY CHAIRMAN.—The rule is suspended.

Sri K. V. SHANKAR GOWDA.—I suggest that time limit should be there.

Sri C. S. BALAKRISHNA GOWDA.—The prime mover has taken sufficient time. We must also be given sufficient time to have our say on legal aspects. I may be given half-an-hour.

6-00 P.M.

ಶ್ರೀ ಎಂ. ವಿ. ವೆಂಕಟಪ್ಪ.—ಒಂದು ಕ್ಲಾರಿಫಿಕೇಷನ್. ಸೆನೇಟಿಗೆ ಈ ಸಭೆಯಿಂದ ಯಾರನ್ನು ಕಳಿಸಿದ್ದಾರೋ ಅವರ ಅಭಿಪ್ರಾಯವನ್ನು ತಿಳಿದುಕೊಳ್ಳೋಣ ಎಂದು ಶ್ರೀ ಶಾಮಯ್ಯಗೌಡರು ಹೇಳಿದರು. ಇಲ್ಲಿಂದ ಶ್ರೀಯುತರುಗಳಾದ ಆಂಜನಪ್ಪ, ಶಿವಾನಂದಸ್ವಾಮಿ, ನಾನು, ರಾಜಣ್ಣ ಮತ್ತು ಶ್ರೀಮತಿ ಅಬ್ಬಾಸಿಯಾ ಬೇಗಂ ಮೊಕ್ಕೆ ಮುಂತಾದ ಸದಸ್ಯರು ಸೆನೇಟಿಗೆ ಹೋಗಿದ್ದೇವೆ. ನಾವು 6 ತಿಂಗಳಿಂದೀಚೆ ಚುನಾಯಿತರಾಗಿ ಹೋಗಿರುವುದು. ಆದರೆ ವಿಶ್ವವಿದ್ಯಾನಿಲಯದಲ್ಲಿ ಹುದ್ದೆಗಳಿಗೆ ನೇಮಕವಾಗಿರುವುದು ಒಂದು ವರ್ಷದ ಹಿಂದೆ. ಆಗ ಶ್ರೀ ವಿ. ವೆಂಕಟಪ್ಪನವರು ಮತ್ತು ಶ್ರೀ ಆಂಜನಪ್ಪನವರು ಸಿಂಡಿಕೇಟ್ ಸದಸ್ಯರಾಗಿದ್ದರು, ಅವರ ಕಾಲದಲ್ಲಿ ಪ್ರತಿಯೊಂದು ಹುದ್ದೆಗೂ ನೇಮಕವಾಗಿರಬೇಕು. ನಾವು 6 ತಿಂಗಳಿಂದೀಚೆಗೆ ಸೆನೇಟ್ ಸದಸ್ಯರಾಗಿರುವುದರಿಂದ ನಮಗೆ ಹೆಚ್ಚು ಗೊತ್ತಿಲ್ಲ ಎಂದು ತಿಳಿಸುತ್ತೇನೆ.

Sri K. V. SHANKARA GOWDA.—Instead of wasting time on this conversation, I would humbly request the Chair to fix up a time limit within which we should finish the subject.

Mr. DEPUTY CHAIRMAN.—Shall we sit till 7 P.M. and finish this subject? That seems to be reasonable.

Sri K. PUTTASWAMY.—The Suggestion of the Chair seems to be reasonable. That should be the outer-limit.

Sri M. LINGANNA.—Sir, while making his speech the mover of the motion made reference to some list of allegations and charges. I do not have a copy of that. I am now in a difficulty whether discussion should centre round those charges or allegations or whether it relates to the subsequent developments regarding students strike, police firing and so on. If speeches are made referring to the allegations and charges in the list, some of us who do not possess a copy of those charges will not be able to follow, particularly when certain numbers are referred to. I think it would be fair to request that copies of that document may be made available to us for reference and I also request that any member who goes beyond the ambit of those charges may be called to order because we do not have much time at our disposal.

Sri D. RAJAGOPAL.—Sir, I may say for the information of the House that I have notice of this motion on the 28th August but it came up for discussion only yesterday. In between there was plenty of time available for the Government and they could have supplied the necessary literature to members. In the absence of any pertinent literature supplied by Government, we have to rely on what literature we had with us and that should not be objected to. If the hon. Member wants a copy, we may perhaps supply it.

†ಶ್ರೀ ಎ. ಎಚ್. ಶಿವಾನಂದಸ್ವಾಮಿ (ವಿಧಾನಸಭಾ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಈ ಸದನದಲ್ಲಿ ಇಂದು ಬಹಳ ಪ್ರಾಮುಖ್ಯವಾದ ಮತ್ತು ಬಹಳ ದುರದೃಷ್ಟಕರವಾದ ಒಂದು ಘಟನೆಯನ್ನು ಚರ್ಚೆ ಮಾಡುತ್ತಿದ್ದೇವೆ. ಈ ದೇಶದಲ್ಲಿ ಕಾರ್ಯ ನಡೆಸುವವರಿಗೆ ಅರ್ಥವಾಗದಿರುವ ರೀತಿಯಲ್ಲಿ ನಾವು ನಮ್ಮ ಆಗುಹೋಗುಗಳನ್ನು ಮುಂದುವರೆಸುತ್ತಿದ್ದೇವೆ. ಇಂದು ನಮಗೆ ಗೊತ್ತಿರುವ ಪ್ರಕಾರ ಪೋಲೀಸಿನವರು ತಮ್ಮ ಎಲ್ಲೆಯನ್ನು ಮೀರಿ ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ನಡೆಸಿದ್ದಾರೆ, ಇದನ್ನು ಬಹಳ ಕಟುವಾಗಿ ಖಂಡಿಸುತ್ತಿದ್ದೇನೆ. ಏಕೆಂದರೆ ಪೋಲೀಸ್ ಖಾತೆಗಿರುವ ಅಧಿಕಾರವನ್ನು ಮೀರಿ ನಡೆಯುವುದಕ್ಕೆ ಇಂದು ಅವಕಾಶವಾಗಿದೆ. ಕಾನೂನು ಪರಿಪಾಲನೆಯ ನೆಪದಲ್ಲಿ ಅವರೇನು ಬೇಕಾದರೂ ಮಾಡುವುದಕ್ಕೆ ಅವಕಾಶವಿದೆ. ನಮಗಿರುವ ಮೂಲಭೂತ ಹಕ್ಕುಗಳನ್ನು ಸಂಪೂರ್ಣವಾಗಿ ಕಸಿದುಕೊಳ್ಳುವುದಕ್ಕೆ ಅವಕಾಶವಾಗಿದೆ. ಇಂಥ ಅತ್ಯಂತ ಅಧಿಕಾರ ಹೊಂದಿರುವ ಪೋಲೀಸು ಅಧಿಕಾರಿಗಳಮೇಲೆ ದೊಡ್ಡ ಆರೋಪವಿದೆ, ಅವರು ವರ್ತಿಸಿರುವುದನ್ನು ನೋಡಿ ಬಹಳ ವಿಷಾದವಾಗುತ್ತಿದೆ. ಇಂದು ಘಟನೆಯಲ್ಲಿ ಕೊಟ್ಟಿರುವ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವುದಕ್ಕೆ ಅವರಿಗೆ ಅವಕಾಶವಿದೆ. ಕಾನೂನು ಪರಿಪಾಲನೆ ಮತ್ತು ಜಾರಿ ಮಾಡುವ ವಿಧಾನದಲ್ಲಿ ಈ ರೀತಿ ಮಾಡುವುದಕ್ಕೆ ಅವಕಾಶವಿದೆ. ನಿನ್ನೆ ಪೋಲೀಸರು ಅನೇಕ ಕೃತ್ಯಗಳನ್ನು ಮಾಡಿದ್ದಾರೆ. ಅದರ ಬಗ್ಗೆ ನಾನು ನಿಲುವಳಿ ಸೂಚನೆ ಕಳಿಸಿ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಒತ್ತಾಯಮಾಡಿದ್ದೇನೆ. ಯಾವುದನ್ನು ಕಂಡುಹಿಡಿಯುವುದಕ್ಕಾಗದಿರುವ ರೀತಿಯಲ್ಲಿ ವರ್ತಿಸಿದ್ದಾರೆ. ಉದಾಹರಣೆಗೆ ಹಾಸ್ಟಲಿಗೆ ಹೋಗಿ ವಿದ್ಯಾರ್ಥಿಗಳನ್ನು ಹೊಡೆದಿದ್ದಾರೆ. ಅವರು ತಪ್ಪು ಮಾಡಿದ ವಿದ್ಯಾರ್ಥಿಗಳನ್ನು ಅರೆಸ್ಟ್ ಮಾಡಲು ಹೋಗಿದ್ದೆವೆಂದು ಹೇಳಬಹುದು, ಹಾಗೆ ಕರ್ತವ್ಯ ನಿರ್ವಹಣೆಯಲ್ಲಿ ಅವರು ಹೇಳುವುದಕ್ಕೆ ಸಾಧ್ಯವಿದೆ. ಹಾಗೆ ಹೋಗಿ ಬಾಗಿಲುಗಳನ್ನು ಪೋಲೀಸರು ಮುರಿದಿದ್ದಾರೆ ಮತ್ತು ವಿದ್ಯಾರ್ಥಿಗಳನ್ನು ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಹಾಗೆ ಹೊಡೆದವರನ್ನು ಕೇಸಿನಲ್ಲಿ ಸೇರಿಸದೆ ಬಿಟ್ಟಿದ್ದಾರೆ, ಕೆಲವರು ಓಡಿ ಹೋಗಿದ್ದಾರೆ. ಎರಡನೆಯ ಮಹಡಿಗೆ ಕೆಲವರು ಪೋಲೀಸರು ಹೋಗಿದ್ದಾರೆ. ಇಂಥ ಪರಿಸ್ಥಿತಿ ಇದೆ. ಅಲ್ಲದೆ ಸರಕಾರದ ಆಸ್ತಿಪಾಸ್ತಿಗಳನ್ನು ನಷ್ಟಮಾಡಿದ್ದಾರೆ, ಇದು ಪೋಲೀಸರು ಮಾಡಿರುವುದು. ಆಮೇಲೆ ವಿದ್ಯಾರ್ಥಿಗಳ ಮನೋಭಾವ ಯಾವರೀತಿ ಇದೆ, ಅವರು ಉದ್ವೇಗದಲ್ಲಿರುವಾಗ ಹೇಗೆ ಸಮಾಧಾನಮಾಡಬೇಕು ಎಂದು ಯಾವ ಯೋಚನೆಯನ್ನೂ ಮಾಡದೆ ಪೋಲೀಸರು ಸಿಕ್ಕಾಪಟ್ಟೆ ವಿದ್ಯಾರ್ಥಿಗಳನ್ನು ಹೊಡೆದಿದ್ದಾರೆ. ಇದು ಬಹಳ ದುರಾದೃಷ್ಟಕರವಾದ ಸಂಗತಿಯಾಗಿದೆ. ಅಲ್ಲದೆ ವಿದ್ಯಾರ್ಥಿಗಳಲ್ಲಿ ಕೆಲವರು ಉಪವಾಸಮಾಡುತ್ತಿದ್ದಾರೆ, ಅವರನ್ನು ಪೋಲೀಸರು ಅಮಾನುಷಕರವಾಗಿ ನಡೆಸಿಕೊಂಡಿದ್ದಾರೆ. ಅವರ ಬಗ್ಗೆ ಕರುಣೆ ತೋರಿಸಿಲ್ಲ. ಇದನ್ನು ಹೇಳುವಾಗ ವಿದ್ಯಾರ್ಥಿಗಳೇನು ಮಾಡಿದರೂ ಸರಕಾರ ಸುಮ್ಮನಿರಬೇಕೆಂದು ಹೇಳುವುದಿಲ್ಲ. ಘಟನೆಯ ಪ್ರಕಾರ ನಮಗೆ ರಕ್ಷಣಾ ಬದ್ಧವಾಗಿ ರಕ್ಷಣೆ ನೀಡಿದ್ದರೆ, ಹಾಗೆ ನೀಡುವುದನ್ನು ಕಲಿತಿದ್ದರೆ ಪ್ರಜಾಪ್ರಭುತ್ವವನ್ನು ಉಳಿಸಿ ಬೆಳೆಸುವುದಕ್ಕಾಗುವುದಿಲ್ಲ. ಇಂದು ಪೋಲೀಸರ ದೌರ್ಜನ್ಯ ಎಲ್ಲೆ ಮೀರಿದೆ, ವಿದ್ಯಾರ್ಥಿಗಳೂ ಕೂಡ ತಮ್ಮ ಎಲ್ಲೆ ಮೀರಿ ನಡೆಯಬಾರದು. ಈ ಸಂದರ್ಭದಲ್ಲಿ ತತ್ವವೇನಿದೆ ಎಂಬುದನ್ನು ಕೂಲಂಕಷವಾಗಿ ವಿಚಾರಮಾಡಬೇಕು. ಇಂದು ವಿದ್ಯಾರ್ಥಿಗಳ ಬೇಡಿಕೆಯೇನಿವೆ ಅದನ್ನು ಸರಕಾರ ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕು. ತಮ್ಮ ವಿದ್ಯಾಭಿವೃದ್ಧಿಗೆ ಬೇಕಾದ ಬೇಡಿಕೆಗಳನ್ನು ಅವರು ಸಲ್ಲಿಸಿದ್ದಾರೆ, ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಲಕ್ಷಗಟ್ಟಲೆ ವಿದ್ಯಾರ್ಥಿಗಳಿದ್ದಾರೆ, ಅವರ ಅಭಿವೃದ್ಧಿಗಾಗಿ ಹೋರಾಟಮಾಡುವಾಗ, ತ್ಯಾಗಮಾಡುವುದಕ್ಕೆ ತಯಾರಾಗಿರುವಾಗ ಅವರ ಬೇಡಿಕೆಗಳನ್ನು ಮನ್ನಿಸದೆ ಅವರನ್ನು ತೊಂದರೆಗೆ ಗುರಿಮಾಡುವುದು ಯೋಗ್ಯವಲ್ಲ.

ವಿದ್ಯಾರ್ಥಿಗಳೂ ಕೂಡ ಎಲ್ಲೆಯನ್ನು ಮೀರಿ ನಡೆಯಬಾರದು. ಸೆನೇಟ್ ಹಾಲ್‌ಗೆ ಕಲ್ಲು ಹೊಡೆದಿದ್ದಾರೆ, ಪ್ರಾಪರ್ಟಿ ಡ್ಯಾಮೇಜ್ ಮಾಡಿದ್ದಾರೆ, ಬೆಂಕಿ ಹಾಕಿದ್ದಾರೆ. ಇದನ್ನು ತಡೆಗಟ್ಟುವುದಕ್ಕೆ ಪೋಲೀಸರ ರಕ್ಷಣೆ ಬೇಕು ನಿಜ. ಆದರೆ ಅವರು ನಡೆಸಿರತಕ್ಕ ದೌರ್ಜನ್ಯ ಏನಿದೆ ಅದು ಸಲ್ಲದು ಎಂದು ಹೇಳುತ್ತೇನೆ. ಯಾವ ವಿದ್ಯಾರ್ಥಿ ಮುಖಂಡರು ಚಳುವಳಿಗೆ ಕರೆ ಕೊಟ್ಟಿದ್ದಾರೋ ಅವರ ಹತೋಟಿಯನ್ನು ಮೀರಿ ಚಳುವಳಿ ನಡೆಯುತ್ತಿದೆ. ಈ ಚಳುವಳಿಯನ್ನು ಮುಂದುವರಿಯುವುದಕ್ಕೆ ಬಿಟ್ಟರೆ, ಸರಿಯಾದ ಮಾರ್ಗದರ್ಶನ ಮಾಡದಿದ್ದರೆ ಏನು ಪರಿಣಾಮವಾಗುತ್ತದೆ ಎಂಬುದು ಗೊತ್ತಾಗುತ್ತಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಬಿನ್ನಹ ಮಾಡಿಕೊಳ್ಳುತ್ತೇನೆ. ಯಾರಿಗೆ ಸಾವಿರಾರು ರೂಪಾಯಿ ಸಂಬಳ ಬರುತ್ತಿದೆ, ಹೆಚ್ಚು ಸುಖ ಸೌಲಭ್ಯವಿದೆ, ಅಂತಹ ಪ್ರೊಫೆಸರುಗಳು ಯಾರಿದ್ದಾರೆ, ಅವರಿಗಿಂತ ಹೆಚ್ಚು ಪಡೆಯುವುದಕ್ಕೆ ಯಾರಿಗೆ ಒಂದು ಅವಕಾಶ ಸಿಕ್ಕಲಿಲ್ಲವೋ ಅಂಥವರ ಕೈವಾಡ ಇದ

(ಶ್ರೀ ಎ. ಎಚ್. ಶಿವಾನಂದಸ್ವಾಮಿ)

ರಲ್ಲಿರಬೇಕು ಎಂದು ಅನುಮಾನ ಬಂದಿದೆ. ಇದನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ. ಹಾಸ್ಟೆಲ್‌ನಲ್ಲಿ ಜಾಗ ಇಲ್ಲ. ಸ್ಕೂಲುಗಳಿಗೆ ಪ್ರವೇಶ ದೊರೆಯುತ್ತಾ ಇಲ್ಲ, ಸ್ಕೂಲು ಫೀಜು ವಿಪರೀತ ಜಾಸ್ತಿಯಾಗಿದೆ. ಪಠ್ಯಪುಸ್ತಕಗಳು ಸಿಕ್ಕುತ್ತಿಲ್ಲ, ಓದುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ, ಎಂಬ ಬಗ್ಗೆ ಹೋರಾಟ ವಿದ್ಯಾರ್ಥಿಗಳಿಗೆ ಅತಿಮುಖ್ಯವಾಗಿದೆ. ಆದರೆ ಇಂಥಾದ್ದರ ಬಗ್ಗೆ ಏನೂ ಚಳುವಳಿ ನಡೆಯುತ್ತಿಲ್ಲ. ವಿದ್ಯಾರ್ಥಿಗಳಿಗೆ ಸರಿಯಾದ ಮಾರ್ಗದರ್ಶನ ಇಲ್ಲ, ಸರಿಯಾದ ಮಾರ್ಗದರ್ಶನ ಮಾಡಬೇಕೆಂದು ಕಳಕಳಿಯಿಂದ ಬಿನ್ನಹ ಮಾಡಿಕೊಳ್ಳುತ್ತೇನೆ. ಈ ವಿದ್ಯಾಭ್ಯಾಸದ ಪದ್ಧತಿ ಹೇಗೆ ಇದೆ ಎಂದರೆ ವಿದ್ಯೆ ಓದುವುದರಿಂದ ಸಾವಿರ ರೂಪಾಯಿ ಸಂಬಳ ಬರುತ್ತದೆ ಒಳ್ಳೆಯ ದರ್ಜೆ ಬರುತ್ತದೆ, ಅಥವಾ ಸುಖವಾಗಿ ಇರಬಹುದು ಎಂದು ಹೇಳಿ ವಿದ್ಯಾರ್ಥಿಗಳಲ್ಲಿ ಒಂದು ಭಾವನೆ ಸುಖಲೋಲುಪ್ತತೆಯ ಕಡೆಗೆ ಹೋಗುತ್ತಾ ಇದೆ. ಅಪಾಯಿಂಟ್‌ಮೆಂಟ್‌ಗಳನ್ನು ಮಾಡಿದಾಗ ಏನು ಒಂದು ಅನ್ಯಾಯ ನಡೆದಿದೆ ಎಂದು ಹೇಳುತ್ತಾರೆ. ಅದನ್ನು ಸರಿಪಡಿಸುವ ಬಗ್ಗೆ ಆಗಲೇ ಹೋರಾಟ ಮಾಡಬೇಕಾಗಿತ್ತು. ಈ ಕಾಲದಲ್ಲಿ ಅದು ಏಕೆ ಬಂತು ಅಂತ ಅನುಮಾನ ಬರುತ್ತಾ ಇದೆ. ಸಿಂಡಿಕೇಟ್ ಇದೆ, ಸೆನಟ್ ಇದೆ ಅಲ್ಲೆಲ್ಲಾ ಇದು ಚರ್ಚೆಗೆ ಬಂದು ನಂತರ ಒಂದು ತೀರ್ಮಾನ ಆಗಬೇಕು. ಇಂದಿನ ಹೋರಾಟ ಸಮಾಜವಾದದ ತಳಹದಿಯ ಮೇಲೆ ಈ ರಾಷ್ಟ್ರವನ್ನು ಕಟ್ಟಬೇಕು ಎಂಬುದಾಗಿದೆ. ಹೀಗಿರುವಾಗ ವಿದ್ಯಾರ್ಥಿ ಮುಖಂಡರು ತಮ್ಮ ಬೇಡಿಕೆಯನ್ನು ಸರ್ಕಾರಕ್ಕೆ ಒಪ್ಪಿಸಿದ್ದಾರೆ, ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಸರ್ಕಾರದವರು ಹೇಳಿದ್ದಾರೆ. ಈ ಚಳುವಳಿ ಮುಂದುವರಿಯದ ಹಾಗೆ ವಿದ್ಯಾರ್ಥಿಗಳಿಗೆ ಸಮಾಧಾನಪಡಿಸಬೇಕಾದ್ದು ಅತಿಮುಖ್ಯವಾಗಿದೆ, ಇದನ್ನು ಸರ್ಕಾರ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಜಾತಿಯ ಪ್ರಶ್ನೆ ಈಗ ಎಲ್ಲೆಲ್ಲೂ ಬರುತ್ತಾ ಇದೆ. ಇದು ಕೇಂದ್ರಸರ್ಕಾರದಲ್ಲೂ ಇದೆ, ರಾಜ್ಯ ಸರ್ಕಾರದ ಎಲ್ಲ ಡಿಪಾರ್ಟ್‌ಮೆಂಟುಗಳಲ್ಲೂ ಸಹ ಒಂದು ಜಾತಿಯವರು ಹೆಚ್ಚಾಗಿದ್ದಾರೆ ಒಂದು ಜಾತಿಯವರು ಕಡಿಮೆ ಇದ್ದಾರೆ ಎಂಬ ಆಪಾದನೆ ಬರುತ್ತಾ ಇದೆ, ಇದು ಸಹಜವಾದದ್ದೆ. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಒಂದುವೇಳೆ ಆ ರೀತಿ ನಿಜವಾಗಿಯೂ ಇದ್ದ ಪಕ್ಷದಲ್ಲಿ ಅಂತಹ ಆಪಾದನೆ ಬರದಂತೆ ನೋಡಿಕೊಳ್ಳಬೇಕು. ರಾಜ್ಯಾಂಗದ ಪ್ರಕಾರವಾಗಿಯೂ ಕೂಡ ಜಾತಿಯ ಆಧಾರದಮೇಲೆ ಯಾವ ವಿಧವಾದ ಅಪಾಯಿಂಟ್‌ಮೆಂಟ್ ಆಗಲಿ, ಕಾರ್ಯಕ್ರಮವನ್ನಾಗಲಿ ನಡೆಸಕೂಡದು ಎಂದು ನಿಗದಿಯಾಗಿದೆ. ಅಲ್ಲದೆ ಅಂಥಾ ಜಾತಿಯವನು ಇವನು, ಆದ್ದರಿಂದ ಇವನಿಗೆ ಈ ಕೆಲಸ ಸಿಕ್ಕಬಾರದು ಎಂದು ಕೂಡ ಎಲ್ಲೂ ಹೇಳಿಲ್ಲ. ಆದರೆ, ಇಂಥಹದ್ದು ಮಾಡಿದರೆ ತಪ್ಪು ಎಂದು ರಾಜ್ಯಾಂಗದಲ್ಲಿ ಹೇಳುತ್ತಾ ಇದೆ. ಜಾತೀಯತೆಯನ್ನು ಇವತ್ತು ರಾಜಕೀಯಕ್ಕೆ ಉಪಯೋಗಿಸಿಕೊಂಡರೆ ಚುನಾವಣೆಗಳ ಪರಿಸ್ಥಿತಿ ಎಲ್ಲಿಗೆ ಹೋಗುತ್ತದೆಯೋ ಗೊತ್ತಿಲ್ಲ, ಭಯಾನಕವಾದ ಪರಿಸ್ಥಿತಿಯಲ್ಲಿ ಇವತ್ತು ನಾವು ಇದ್ದೇವೆ. ಆದ್ದರಿಂದ ಈ ಒಂದು ಸಮಸ್ಯೆಯನ್ನು ವಿದ್ಯಾರ್ಥಿ ಮುಖಂಡರು ಸಮಾಧಾನಚಿತ್ತದಿಂದ ವಿಚಾರ ಮಾಡುವುದರ ಜೊತೆಗೆ ಸರ್ಕಾರದವರೂ ಸಹ ಈ ಒಂದು ಜಟಿಲವಾದ ಪ್ರಶ್ನೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ವಿದ್ಯಾರ್ಥಿಗಳು ಕೂಡ ಸರಿಯಾದ ರೀತಿಯಲ್ಲಿ ನಡೆದುಕೊಳ್ಳುವುದಕ್ಕೆ ಸಹಾಯ ಮಾಡಬೇಕು. ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಬೇಕು, ಇಲ್ಲದೇ ಹೋದರೆ ಬಹಳ ತ್ವರಿತಗತಿಯಲ್ಲಿ ಸರ್ವಾಧಿಕಾರತ್ವ ಬರುವುದಕ್ಕೆ ಅಥವಾ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವ ರೀತಿಯಲ್ಲಿ ನಾವು ಮತ್ತೊಂದು ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಆದ್ದರಿಂದ ಸರ್ಕಾರದವರು ತಮ್ಮ ಪೋಲೀಸ್ ಅಧಿಕಾರಿಗಳಿಗೆ ಸೂಕ್ತ ತಿಳುವಳಿಕೆ ಕೊಟ್ಟು ಅವರು ತಮ್ಮ ಎಲ್ಲೆ ಮೀರಿಹೋಗದಂತೆ, ಅನ್ಯಾಯ ಮಾಡದಂತೆ ನೋಡಿಕೊಳ್ಳಬೇಕು. ವಿದ್ಯಾರ್ಥಿ ಮುಖಂಡರೂ ಕೂಡ ತಮ್ಮ ನಿಲುವನ್ನು ಬದಲಾವಣೆ ಮಾಡಿಕೊಂಡು ಸಹಕರಿಸಬೇಕು. ಈಗ ಆಗಿರತಕ್ಕ ನೇಮಕಗಳ ಬಗ್ಗೆ ತನಿಖೆ ಮಾಡಿ ಸರಿಪಡಿಸುವುದಕ್ಕೆ ಕೂಡಲೇ ಪ್ರಯತ್ನ ಮಾಡಿದ್ದೇ ಆದರೆ ವಿದ್ಯಾರ್ಥಿಗಳಿಗೆ ಸಮಾಧಾನವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಸ್ವಾಮಿ, ನಾನು ಮೊದಲೇ ತಮಗೆ ಅರಿಕೆ ಮಾಡಿಕೊಂಡಿದ್ದೆ ನನಗೆ ಈ ಸೂಚನೆಯ ಮೇಲೆ ಮಾತನಾಡುವುದಕ್ಕೆ ಅರ್ಧ ಘಂಟೆ ಸಮಯವನ್ನು ಕೊಡಬೇಕೆಂದು. ಆದರೆ ನನಗೆ ತಾವು ಚರ್ಚೆಯ ಕೊನೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡುವುದಾದರೆ, ಆ ಅರ್ಧ ಗಂಟೆಯ ಕಾಲದಲ್ಲಿ ಖೋತಾ ಆಗಬಾರದೆಂದು ಕೇಳಿಕೊಳ್ಳುತ್ತೇನೆ.

Sri K. V. SHANKARA GOWDA.—It is left to the Chair to give time or not.

Mr. DEPUTY CHAIRMAN.—The House has agreed to finish this business by 7 P.M.

†ಶ್ರೀ ಕೆ. ಸೂರ್ಯನಾರಾಯಣ ಅಡಿಗ (ಸ್ಥಳೀಯಪ್ರಾಧಿಕಾರಿ ಕ್ಷೇತ್ರ).—ಅಧ್ಯಕ್ಷರೇ, ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನನಗೆ ಬಹಳ ವ್ಯಸನವಾಗುತ್ತಿದೆ; ಹಾಗೂ ತುಂಬಾ ವ್ಯಥೆಯಾಗುತ್ತಿದೆ. ಈ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಚಳವಳಿಯಲ್ಲಿ ಯಾರೋ ಕೆಲವು ರಾಜಕಾರಿಣಿಗಳು ಸೇರಿಕೊಂಡು ಆ ವಿದ್ಯಾರ್ಥಿಗಳನ್ನು ಸಂಶೋಧನೆಯ ಪಶುಗಳನ್ನಾಗಿ ಉಪಯೋಗಿಸುತ್ತಿದ್ದಾರೆ. ಇದು ನನಗೆ ತುಂಬಾ ವ್ಯಸನವನ್ನುಂಟುಮಾಡಿದೆ. ನಾನೂ ಕೂಡ ವಿದ್ಯಾರ್ಥಿದೆಶೆಯಲ್ಲಿದ್ದಾಗ ಚಳವಳಿಗಳಲ್ಲಿ ಭಾಗವಹಿಸಿರುವುದಷ್ಟೇ ಅಲ್ಲ. ಈ ಚಳವಳಿಗಳಿಗೆ ಮೂಲ ಸಂಸ್ಥಾಪಕನೂ ಆಗಿದ್ದೆ. ಪ್ರಪ್ರಥಮವಾಗಿ 1931 ರಲ್ಲಿ ಅಖಿಲಭಾರತದ ವಿದ್ಯಾರ್ಥಿಗಳ ಮುಷ್ಕರವನ್ನು ಮಂಗಳೂರಲ್ಲಿ ಪ್ರಾರಂಭ ಮಾಡಿದವನೇ ನಾನು. ಆದುದರಿಂದ ನಾನು ವಿದ್ಯಾರ್ಥಿಗಳು ಚಳವಳಿಗಳನ್ನು ನಡೆಸಬಾರದೆಂದು ಹೇಳತಕ್ಕವನಲ್ಲ. ಆದರೆ ಅದಕ್ಕೆ ಒಂದು ತೂಕ ಇರಬೇಕು. ಈ ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಾರಂಭೋತ್ಸವವನ್ನು ಮಾಡಿದವರು ಒಳ್ಳೆಯ ಶುಭಮುಹೂರ್ತವನ್ನು ನೋಡಿ ಇದನ್ನು ಸ್ಥಾಪನೆ ಮಾಡಿದಂತೆ ಕಂಡುಬರುವುದಿಲ್ಲ. ಆದುದರಿಂದಲೇ ಇಲ್ಲಿ ಪದೇ ಪದೇ ಹೀಗೆ ಎರಡು ವರ್ಷಗಳಿಗೊಮ್ಮೆ ವಿದ್ಯಾರ್ಥಿಗಳು ಪೆಟ್ಟುತಿಂದು ಕಾಲು ಮುರಿದುಕೊಂಡು ವ್ಯಥೆಗೊಳಗಾಗುತ್ತಿದ್ದಾರೆ. ಈ ಹಿಂದೆ ಎರಡನೇ ವರ್ಷದಲ್ಲೂ ಇದೇ ರೀತಿ ಇಲ್ಲಿ ಚಳವಳಿ ಎದ್ದಿತ್ತು. ಮತ್ತೆ ಎರಡು ವರ್ಷಗಳು ಕಳೆದನಂತರ ಈಗ ಚಳವಳಿ ಎದ್ದಿದೆ. ಆದ್ದರಿಂದ ಇದನ್ನು ಒಳ್ಳೆ ಘಳಿಗೆಯಲ್ಲಿ ಪ್ರಾರಂಭಮಾಡಿದಂತೆ ಕಾಣುತ್ತಿಲ್ಲ. ಈ ದಿವಸ ಅನೇಕ ವಿದ್ಯಾರ್ಥಿಗಳು ಕಾಲೇಜಿಗೆ ಹೋಗಿ ತಮ್ಮ ಅಭ್ಯಾಸವನ್ನು ಮುಂದುವರಿಸೋಣ ಎನ್ನತಕ್ಕ ಆಕಾಂಕ್ಷೆಯುಳ್ಳವರಾಗಿದ್ದರೂ ಅವರಿಗೆ ಅವಕಾಶವಿಲ್ಲ. ಚೆನ್ನಾಗಿ ಓದಿ ಉತ್ತಮ ದರ್ಜೆಯಲ್ಲಿ ಪಾಸ್ ಮಾಡಬೇಕೆಂದಿದ್ದ ವಿದ್ಯಾರ್ಥಿಗಳಿಗೆ ಈ ಚಳವಳಿಗಳಿಂದ ತುಂಬಾ ತೊಂದರೆಯಾಗುತ್ತಿದೆ. ಅಷ್ಟೇ ಅಲ್ಲ ನಾಳೆ ಅವರು ನೌಕರಿಗಳಿಗೆ ಸೇರತಕ್ಕ ವೇಳೆಯಲ್ಲಿಯೂ ಕೂಡ ಅವರಿಗೆ ಒಂದು ಉತ್ತಮ ಮಟ್ಟದ ಕ್ವಾಲಿಫಿಕೇಷನ್ ಇಲ್ಲದಿದ್ದರೆ ಅವರು ತೊಂದರೆಪಡತಕ್ಕ ಸಂದರ್ಭಗಳೂ ಉಂಟು. ಆ ವಿದ್ಯಾರ್ಥಿಗಳಿಗಾದರೂ ಅಷ್ಟೆಲ್ಲಾ ಚಳವಳಿ ನಡೆಸುವುದಕ್ಕೆ ಹಣದ ಸಹಾಯ ಎಲ್ಲಿಂದ ಬರಬೇಕು ? ಅವರಿಗೆ ಆ ಸಹಾಯವನ್ನು ಯಾರು ಮಾಡುತ್ತಿದ್ದಾರೆ ! ಏನೋ ಅಂತೂ ಆ ವಿಶ್ವವಿದ್ಯಾನಿಲಯದ ವಾತಾವರಣ ಕಲುಷಿತವಾಗುತ್ತಿದೆ. ಅಲ್ಲಿಯ ಪರಿಸ್ಥಿತಿ ಕೆಡುತ್ತಿದೆ. ಈ ವಿಚಾರದಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಆದರೆ ಆ ವಿದ್ಯಾರ್ಥಿಗಳು ಚಳವಳಿಯನ್ನು ಹೂಡಲಿಕ್ಕೆ ಕಾರಣವಾದರೂ ಏನಿದೆ ಎಂಬುದರ ಬಗ್ಗೆ ಶ್ರೀ ರಾಜಗೋಪಾಲರವರು ಕೆಲವೊಂದು ಪಟ್ಟಿಗಳನ್ನು ಇಲ್ಲಿ ಓದಿ ಹೇಳಿದರು. ಅದರ ಸಾರಾಂಶ ಕೆಲವೊಂದು ಬೇಡಿಕೆಗಳನ್ನು ಆ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದವರ ಮುಂದೆಯೂ ಹಾಗೂ ಸರ್ಕಾರದವರ ಮುಂದೆಯೂ ಮಂಡಿಸಿದ್ದರೆಂದೂ ಅವುಗಳನ್ನು ಇವರು ಈಡೇರಿಸಲಿಲ್ಲವೆಂದೂ ಅದಕ್ಕಾಗಿ ಈಗ ಮುಷ್ಕರ ಹೂಡಿದ್ದಾರೆಂದು ಹೇಳಲಾಗುತ್ತಿದೆ. ಆದರೆ ಈ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯವು ಒಂದು ಅಟಾನಮಸ್ ಬಾಡಿಯಾಗಿರುವುದರಿಂದ ಅದರ ಆಡಳಿತದಲ್ಲಿ ಸರ್ಕಾರದವರು ನೇರವಾಗಿ ಕೈಹಾಕಬಹುದೇ ಇಲ್ಲವೇ ಎಂಬ ಒಂದು ಪ್ರಶ್ನೆ ಉದ್ಭವಿಸುವುದೂ ಸಹಾ ಸಹಜವಾದದ್ದೇ. ಇಂಥ ಸಂದರ್ಭದಲ್ಲಿ ಸರ್ಕಾರದವರು ಏನು ಮಾಡಬಹುದು ಏನು ಮಾಡಬಾರದು ಎಂಬುದು ವಿವೇಚನೆಗೊಳಪಟ್ಟ ವಿಚಾರ. ಆದರೆ ಈಗಾಗಲೇ ಶ್ರೀ ರಾಜಗೋಪಾಲ್ ರವರು ಏನು ಹೇಳಿದ್ದಾರೆ ಆ ಆಪಾದನೆಗಳ ಬಗ್ಗೆ ಪರ ಮತ್ತು ವಿರೋಧಗಳೆರಡರ ಬಗ್ಗೆಯೂ ಕೂಡ ಬೇಕಾದಷ್ಟು ವಾದ ಮಾಡಲಿಕ್ಕೆ ಅವಕಾಶವಿದೆ. ಅದು ಅವರವರ ದೃಷ್ಟಿಕೋಣಕ್ಕೆ ಸಂಬಂಧಪಟ್ಟ ವಿಷಯ. ನಾನು ಜನರಿಗೆಲ್ಲಾ ಬಿಳಿಯ ಟೋಪಿಯ ಮೇಲೆ ಪ್ರೀತಿ ಜಾಸ್ತಿ ಎಂದರೆ ಶ್ರೀಮಾನ್ ಲಿಂಗಣ್ಣನವರು ಇಲ್ಲ—ಜನರ ಪ್ರೀತಿ ಬೇರೊಂದು ಬಣ್ಣದ ಟೋಪಿಯ ಮೇಲಿದೆ ಎಂದು ಹೇಳಬಹುದು. ಹೀಗೆ ಇದು ಒಬ್ಬೊಬ್ಬರ ದೃಷ್ಟಿಕೋಣ ಹೇಗೆ ಹೋಗುತ್ತದೋ ಹಾಗೆ ವಾದ ಮಾಡುವುದಕ್ಕೆ ಅವಕಾಶವುಂಟು. ಸರ್ಕಾರದವರ ಮುಂದೆ ಆ ವಿದ್ಯಾರ್ಥಿಗಳು ತಮಗೆ ಅಗತ್ಯವಿಲ್ಲದಂಥ ಬೇಡಿಕೆಗಳನ್ನು ಎತ್ತಿಕಟ್ಟಿದ್ದರು ಎಂದು ವಾದಮಾಡುವುದಕ್ಕೂ ಇಲ್ಲಿ ಅವಕಾಶವಿದೆ. ಆ ವಿದ್ಯಾರ್ಥಿಗಳಿಗೂ ಸೈಡ್ ಬೈ ಸೈಡ್ ರಾಜಕೀಯದ ಅನುಭವವನ್ನೂ ಉಂಟುಮಾಡಿದರೆ ಒಳ್ಳೆಯದಾಗಬಹುದೆಂದು ಅವರಿಗೆ ಒಂದು ಅವಕಾಶವನ್ನು ಕೊಟ್ಟ ಕಾರಣ, ನಾವಿಲ್ಲಿ ಶಾಸನ ಸಭೆಗಳನ್ನು ನಡೆಸತಕ್ಕ ಮಾದರಿಯಲ್ಲಿ ಆ ವಿದ್ಯಾರ್ಥಿಗಳು ಅಲ್ಲಿ ಮಾಕ್ ಪಾರ್ಲಿಯಮೆಂಟನ್ನು ಮಾಡಿಕೊಂಡು ಅಧಿವೇಶನದ ಕಾರ್ಯಕಲಾಪಗಳನ್ನು ಅಣಕಿಸುತ್ತಿದ್ದಾರೆ. ಹೀಗೆ ಒಂದು ಆಡಳಿತದಲ್ಲಿ ಅವರಿಗೆ ಸಡಿಲ ಬಿಡುವುದಕ್ಕೆ ಪ್ರಾರಂಭ ಮಾಡಿದ್ದರಿಂದ ಈ ದಿವಸ ಹುಡುಗರು ಈ ಮಟ್ಟಕ್ಕೆ ಬಂದಿದ್ದಾರೆ. ಆದರೆ ಅವರು ತಮ್ಮ ಕುಂದುಕೊರತೆಗಳನ್ನು ರೆಪ್ರೆಸೆಂಟ್ ಮಾಡಬಾರದೆಂದು ನಾನು ಹೇಳುತ್ತಿಲ್ಲ. ದೊಡ್ಡವರಾದ ನಾವು ಇಲ್ಲಿ, ಮತ್ತು ಮನೆಗಳಲ್ಲಿ ತಂದೆತಾಯಿಗಳು ಏನೇನು ವಿಚಾರಗಳನ್ನು ಮಾತನಾಡಿಕೊಳ್ಳು

(ಶ್ರೀ ಕೆ. ಸೂರ್ಯನಾರಾಯಣ ಅಡಿಗ)

ತ್ತಿದ್ದಾರೋ ಅದೆಲ್ಲಾ ಹುಡುಗರ ತಲೆಯಲ್ಲಿ ಬಿದ್ದು, ಅವರನ್ನು ಆ ವಿಷಯಗಳೂ ಆಗಾಗ್ಗೆ ಕಾಡುತ್ತಿರಬಹುದು. ಒಹೋ ನಮ್ಮ ವಿಶ್ವವಿದ್ಯಾನಿಲಯದ ಉಪಾಧ್ಯಾಯರ ವಿಚಾರದಲ್ಲಿ ಮನೆಯಲ್ಲಿ ನಮ್ಮ ಹಿರಿಯರೆಲ್ಲಾ ಹೀಗೆ ಮಾತನಾಡುತ್ತಿದ್ದಾರಲ್ಲಾ ನಮ್ಮ ಆ ಉಪಾಧ್ಯಾಯರನ್ನು ಅಯೋಗ್ಯರೆಂದು ಹೇಳುತ್ತಿದ್ದಾರೆ. ಅಂಥ ಅಯೋಗ್ಯನ ಕೈಲಿ ಪಾಠ ಕಲಿತರೆ ನಾವೂ ಅಯೋಗ್ಯರೇ ಆಗುತ್ತೇವೋ ಏನೋ ಎಂಬ ಶಂಕೆ ಆ ವಿದ್ಯಾರ್ಥಿಗಳಲ್ಲಿ ಮೂಡಿ ಅವರು ಇಂಥ ಬೇಡಿಕೆಗಳನ್ನು ಸರ್ಕಾರದವರ ಮುಂದಿಟ್ಟಿದ್ದರೂ ಇಟ್ಟಿರಬಹುದು. ಇಂಥ ಸಭೆಯಲ್ಲೇ ಒಮ್ಮೊಮ್ಮೆ ಸಿಸ್ತೇ ಇರುವುದಿಲ್ಲ. ನಮ್ಮ ಮನಗಳಲ್ಲೂ ಅಷ್ಟೇ. ಇಂಥ ಸನ್ನಿವೇಶಗಳಲ್ಲಿ ಹೀಗಾಗುವುದು ಸ್ವಾಭಾವಿಕ. ಆದರೆ ವಿಶ್ವವಿದ್ಯಾನಿಲಯದಲ್ಲಿ ಆಗತಕ್ಕ ಅಪಾಯಿಂಟ್‌ಮೆಂಟ್‌ಗಳೇನಿವೆ ಅವುಗಳನ್ನು ಅಲ್ಲಿ ಭರ್ತಿಮಾಡತಕ್ಕ ಕಾಲದಲ್ಲಿ ಒಂದೊಂದು ದರ್ಜೆಯ ಅಧಿಕಾರಿಗಳನ್ನು ನೇಮಕ ಮಾಡತಕ್ಕ ಬಗ್ಗೆ ಒಂದೊಂದು ಪ್ರತ್ಯೇಕ ಕಮಿಟಿಗಳಿರುತ್ತವೆ. ಅದಕ್ಕೆ ಅಂದರೆ ಆ ಕಮಿಟಿಗಳಿಗೆ ಹೊರಗಡೆಯಿಂದ ಎಕ್ಸ್‌ಪರ್ಟುಗಳು ಬರುತ್ತಾರೆ. ಡೀನುಗಳು ಬರುತ್ತಾರೆ. ಸಾಮಾನ್ಯವಾಗಿ ಆ ವೈಸ್‌ಛಾನ್ಸಲ್ಲರು ಎಲ್ಲಾ ಕಮಿಟಿಗಳಿಗೂ ಅಧ್ಯಕ್ಷರಾಗಿರುತ್ತಾರೆ. ಆದರೆ ಅಲ್ಲಿ ಅಪಾಯಿಂಟ್‌ಮೆಂಟುಗಳನ್ನು ಭರ್ತಿಮಾಡತಕ್ಕ ಅಧಿಕಾರ ಅಲ್ಲಿರತಕ್ಕ ರಿಜಿಸ್ಟ್ರಾರ್‌ರಿಗಾಗಲಿ ಅಥವಾ ವೈಸ್‌ಛಾನ್ಸಲರಿಗೊಬ್ಬರಿಗೇ ಆಗಲಿ ಇರುವುದಿಲ್ಲ. ನನಗೆ ಈ ಎಲ್ಲದರಲ್ಲೂ ಚೆನ್ನಾಗಿ ಅನುಭವ ಇದೆ. ನಾನೂ ಅಲ್ಲಿ ಕೆಲಸಮಾಡಿದ್ದೇನೆ. ಹಿಂದೆ ಒಂದಾವರ್ತಿ ಅಲ್ಲಿ ಒಂದು ಹುದ್ದೆಗೆ ಒಬ್ಬ ಎಕ್ಸ್ ಎಂಬುವನನ್ನು ಅಪಾಯಿಂಟ್ ಮಾಡತಕ್ಕ ಸಂಭವವಿದ್ದಾಗ ಆತನಿನ್ನೂ ಮೈನರ್ ಎಜಿನವನೆಂದು ಆತನನ್ನು ಕೈಬಿಡಲಾಯಿತು. ಹಾಗೆ ಕೈಬಿಟ್ಟನಂತರ ಇನ್ನೊಮ್ಮೆ ಆ ಕ್ಯಾಂಡಿಡೇಟನ್ನು ರೀಡರ್ ಪೋಸ್ಟಿಗೂ ಕೂಡ ಅನ್‌ಫಿಟ್ ಎಂದು ಹೇಳಿ ಕೈಬಿಟ್ಟರು. ಆ ಸಂದರ್ಭದಲ್ಲೇನೋ ಹಾಗೆ ನಡೆಯಿತು. ಒಂದೊಂದು ಸಂದರ್ಭದಲ್ಲಿ ಒಂದೊಂದು ರೀತಿ ಹೀಗೆ ಆಗುವುದೂ ಉಂಟು. ಆದರೆ ನಾವು ಒಬ್ಬ ಜಡ್ಜಿಗೆ ಅಧಿಕಾರವನ್ನು ಕೊಟ್ಟಮೇಲೆ ಅವನು ಕೊಡತಕ್ಕ ತೀರ್ಮಾನ ನ್ಯಾಯವೋ ಅನ್ಯಾಯವೋ ಅದನ್ನು ನಾವು ಒಪ್ಪಿಕೊಳ್ಳಲೇಬೇಕು. ಇಲ್ಲಿ ವಿಶ್ವವಿದ್ಯಾನಿಲಯದ ಅಪಾಯಿಂಟ್‌ಮೆಂಟುಗಳಲ್ಲಿ ಯಾರಿಗೆ ಅನ್ಯಾಯವಾಗಿದೆಯೋ ಅವರು ಹೈಕೋರ್ಟಿಗೆ ರಿಟ್ ಹೋಗಬಹುದು. ಅದರಲ್ಲಿ ವಿದ್ಯಾರ್ಥಿಗಳಿಗಾದ ತೊಂದರೆಯೇನು.....

ಶ್ರೀ ಡಿ. ರಾಜಗೋಪಾಲ್.—ಮಕ್ಕಳು ತಮ್ಮ ಜೀವಮಾನವನ್ನು ಹಾಳುಮಾಡಿಕೊಂಡು ಅವರು ಕೋರ್ಟುಗಳಿಗೆ ತಿರುಗುತ್ತಿರಬೇಕೆಂದು ತಾವು ಸಲಹೆ ಮಾಡುತ್ತೀರಾ ?

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಯಾರಿಗೆ ಅನ್ಯಾಯವಾಗಿದೆಯೋ ಅಂಥವರು ಕೋರ್ಟಿಗೆ ಹೋಗೇ ಹೋಗುತ್ತಾರೆ. ಯಾರೂ ಸುಮ್ಮನಿರುವುದಿಲ್ಲ. ಅಪಾಯಿಂಟ್‌ಮೆಂಟ್‌ಗಳು ನ್ಯಾಯವಾದ ರೀತಿಯಲ್ಲಿ ಆಗಲಿಲ್ಲ ಎನ್ನುವುದರಲ್ಲಿ ವಿದ್ಯಾರ್ಥಿಗಳ ಪಾತ್ರವೇನು ? ಆದರೆ ಅಲ್ಲಿನ ಪ್ರತಿಯೊಂದು ವಿಷಯಗಳನ್ನೂ ಇಲ್ಲಿ ಕೂಲಂಕಷವಾಗಿ ಚರ್ಚೆಮಾಡುವುದಕ್ಕೆ ನಮಗೆ ಅಗತ್ಯವಾದ ಅಂಕೆಅಂಶಗಳಿಲ್ಲ. ಅಲ್ಲಿ ಏನು ಬೋರ್ಡಿನವರು ಒಂದು ಅಪಾಯಿಂಟ್‌ಮೆಂಟ್ ಮಾಡುತ್ತಾರೋ ಅದೇ ಫೈನಲ್. ಆ ಅಪಾಯಿಂಟ್‌ಮೆಂಟ್ ಆಗಿದ್ದ ಪರಿಸ್ಥಿತಿಗೆ ಅನುಗುಣವಾಗಿ ಮಾಡಿರತಕ್ಕದ್ದಾಗಿರುತ್ತದೆ. ಸಿಂಡಿಕೇಟ್ ಫೈನಲ್ ಅಥಾರಿಟಿ. ಸಿಂಡಿಕೇಟ್ ಮಾಡಿರುವ ಅಪಾಯಿಂಟ್‌ಮೆಂಟ್ಸ್ ತಪ್ಪು, ಅದನ್ನು ಸರಿಮಾಡಬೇಕು. ಎಂದರೆ, ಅದು ಎಂತಹ ಪರಿಸ್ಥಿತಿ ಹಿನ್ನೆಲೆಯಲ್ಲಿ ಆಗಿದೆಯೆಂದು ತಿಳಿಯಬೇಕು. ಹೊರಗಿನ ವಾತಾವರಣದಲ್ಲಿ ಅವು ಸರಿಯಾಗಿಲ್ಲವೆಂದು ಕೆಲವರು ಆಡಿದ ಮಾತನ್ನು ನಂಬಿಕೊಂಡು ವಿದ್ಯಾರ್ಥಿಗಳು ಬಿಸಿ ರಕ್ತದಿಂದ ಕೂಡಿರುವುದರಿಂದ ನಾವು ಹೇಳಿದ ಕೂಡಲೇ ಅದನ್ನು ಕೇಳಬೇಕೆಂದು ಮುಂದೆ ಬಂದಿದ್ದಾರೆ ಮತ್ತು ಆ ರೀತಿಯಾಗಿ ಸರ್ಕಾರಕ್ಕೆ ಕೇಳಿದ್ದಾರೆ. ಈಗ ವಿದ್ಯಾರ್ಥಿಗಳು ಹೇಳಿರುವ ಕೆಲಸಕ್ಕೆ ಸರ್ಕಾರ ಕೈಹಾಕಬೇಕೆಂದರೆ......

6-30 P.M.

ಶ್ರೀ ಸಿ. ಎಸ್. ಬಾಲಕೃಷ್ಣ ಗೌಡ.—ಇದು ಅಡಗಲಜ್ಜಿಕತೆ ಆಯಿತು.

Sri K. V. SHANKAKA GOWDA.—Sir, I am sorry for the remarks that he has made.

Mr. DEPUTY CHAIRMAN.—Rule 257 is very clear. It says:

> "While the Council is sitting, a member shall not interrupt any member while speaking by disorderly expression or noises or in any other disorderly manner"

I do not want to elaborate it.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಈ ವಿಧಾನ ಸೌಧವನ್ನೇ ತೆಗೆದುಕೊಂಡರೆ, ಅದನ್ನು ಕಟ್ಟಿಸಿದಂಥ ಮಾನ್ಯ ಶ್ರೀ ಹನುಮಂತಯ್ಯನವರ ಬಗ್ಗೆ ಎನ್‌ಕ್ವೈರಿ ಮಾಡಬೇಕೆಂದು ಹೇಳಿದ್ದಾರೆ. ಪ್ರಾಮಾಣಿಕತೆ ವಿಷಯ ಬರುತ್ತದೆ. ಪ್ರಾಮಾಣಿಕತೆಯಲ್ಲಿ ತಪ್ಪಾಗಿದೆಯೆಂದು ಕೆಲವರು ಹಿರಿಯರು ಹಾಗೂ ಕಿರಿಯರು ಹೇಳಿರಬಹುದು. ಅದು ಆಗಿಹೋಯಿತು. ಅದರ ಪ್ರಾಮಾಣಿಕತೆಯ ವಿಷಯಕ್ಕೆ ಸರ್ಕಾರ ಈಗ ಹೋಗುವುದು ಅಷ್ಟು ಸರಿಯಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರದ ಕೈಹಾಕಿದೆ ಎಂದು ಹೇಳಿದರೆ ಹೇಗೆ? ಈಗ ಯೂನಿವರ್ಸಿಟಿಯವರು ಆಟಾನಮಸ್ ಆಗಿರುವುದರಿಂದ ಅದಕ್ಕೆ ಕೈಹಾಕಬಾರದೆಂದು ಹೇಳುವವರು ಇದ್ದಾರೆ. ಆದರೆ ಸರ್ಕಾರ ನಕಾರಣವಾಗಿ ಕೈಹಾಕಲಿಕ್ಕೆ ಹಿಂಜರಿಯಬಾರದು. ನಿಮ್ಮ ಪಬ್ಲಿಕ್ ಸರ್ವಿಸ್ ಕಮಿಷನ್ ಮಾಡಿರುವ ಅಪಾಯಿಂಟ್‌ಮೆಂಟ್‌ಗಳ ಮೇಲೆ ಅಪಾದನೆಗಳು ಉಂಟು. ಆಗ ಪಬ್ಲಿಕ್‌ಸರ್ವಿಸ್ ಕಮಿಷನ್ ಮಾಡಿರುವ ನೇಮಕಗಳನು ಕಿತ್ತು ಹಾಕಿ ರೀ ಅಪಾಯಿಂಟ್‌ಮೆಂಟ್ ಮಾಡುತ್ತೀರೇ ಎಂಬ ಪ್ರಶ್ನೆ ಬರುತ್ತದೆ. ಈಗಿನ ಸೆಟಪ್‌ನಲ್ಲಿ ಅದು ಹೇಗೆ ಆಗುತ್ತದೆ? ಈ ಹಿನ್ನೆಲೆಯಲ್ಲಿ ಸರ್ಕಾರ ಏನು ಮಾಡಬೇಕೆಂಬುದು ಮುಖ್ಯ. ಇವತ್ತು ಹುಡುಗರ ಉಪಾಧ್ಯಾಯರ ನೇಮಕದಲ್ಲಿ ತಪ್ಪಾಗಿದೆ ಎಂದು ಹೇಳಬಹುದು ಮತ್ತು ಉಪಾಧ್ಯಾಯರು ಇಂತಹವರೇ ಬೇಕು ಎಂಬುದಾಗಿ ಹೇಳಬಹುದು. ಆದರೆ ಒಂದುಸಾರಿ ಉಪಾಧ್ಯಾಯರನ್ನು ಅಪಾಯಿಂಟ್‌ಮೆಂಟ್ ಮಾಡಿದಮೇಲೆ, ಅವರನ್ನು ತೆಗೆದುಹಾಕುವ ಅಧಿಕಾರ ಯಾರಿಗೂ ಇಲ್ಲ. ಇವತ್ತು ಆ ರಿಜಿಸ್ಟ್ರಾರ್ ಹೋಗಲಿ ಎಂದು ಹೇಳುತ್ತಾರೆ. ಸರ್ಕಾರ ಹೇಗೆ ಅದರ ಬಗ್ಗೆ ಹಸ್ತಕ್ಷೇಪ ಮಾಡುವುದು? ನಾಳೆ ಬೆಳಗ್ಗೆ ಅವರು ಹೈಕೋರ್ಟಿಗೆ ಹೋಗಿ ಒಂದು ಸ್ಟೇ ಆರ್ಡರನ್ನು ತರಬಹುದು. ಸರ್ಕಾರದವರು ಏನು ಹೇಳಿದ್ದಾರೆಂದರೆ, ಹುಡುಗರು ಈಗಿನ ಪರಿಸ್ಥಿತಿಯನ್ನು ಇನ್ನೂ ಹದಗೆಡಿಸಬಾರದು ಮತ್ತು ದೇಶದ ಆಸ್ತಿಯನ್ನು ಹಾಳುಮಾಡಬಾರದೆಂದು ಹೇಳಿದ್ದಾರೆ. ಆದ್ದರಿಂದ ವಿದ್ಯಾರ್ಥಿಗಳು ಹಿಂದಕ್ಕೆ ಹೋಗಬೇಕು. ಈ ವಿಚಾರವನ್ನು ಸರ್ಕಾರ ತನಿಖೆಮಾಡಬೇಕು. ಜುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಹೇಳಿರುವ ಉದ್ದೇಶ ಮಂತ್ರಿಗಳು ಹಸ್ತಕ್ಷೇಪ ಮಾಡಬಾರದೆಂಬುದೇ ಆಗಿದೆ. ಹಾಗಿದ್ದರೂ ಕೂಡ ಸರ್ಕಾರದವರು ವಿದ್ಯಾರ್ಥಿಗಳು ಕೇಳಿದ್ದಕ್ಕಿಂತ ಮುಂದೆ ಹೋಗಿದ್ದಾರೆ. ಇದರ ಬಗ್ಗೆ ವಿಚಾರಣೆ ಮಾಡಲು ಯು.ಜಿ.ಸಿ. ಅವರಿಂದ ಒಬ್ಬರನ್ನು ನೇಮಕಮಾಡಬೇಕೆಂದು ಹೇಳಿದ್ದಾರೆ. ನಾವು ಇದನ್ನು ಮೆರಿಟ್‌ಮೇಲೆ ನೋಡಬೇಕು. ಜುಡಿಷಿಯಲ್ ಆಫೀಸರ್ ಮೈಸೂರು ಸಂಸ್ಥಾನದವರು ಇದ್ದಾರೆ. ಆದರೆ ಯು. ಜಿ. ಸಿ. ಅವರು ಹೊರಗಿನವರು. ಅವರು ಅದರ ಬಗ್ಗೆ ಬೇಕಾದಷ್ಟು ವಿಚಾರಣೆ ಮಾಡಲಿ. ಅಂದ ಮೇಲೆ ಇನ್ನು ವಿದ್ಯಾರ್ಥಿಗಳ ಬೇಡಿಕೆ ಬಗ್ಗೆ ಚರ್ಚೆಯನ್ನು ಮುಂದುವರಿಸಬಾರದು. ಅವರ ಬಗ್ಗೆ ನಾನು ಸಹಾನುಭೂತಿ ಇದ್ದವನು. ಅವರು ಶಾಲೆಗೆ ಹೋಗಲಿ, ಸ್ಟ್ರೈಕ್ ಮಾಡಬಾರದು. ಸರ್ಕಾರದವರು ಹಸ್ತಕ್ಷೇಪ ಮಾಡುವುದು ಸರಿಯಲ್ಲವೆಂಬ ಸ್ಥಿತಿ ಇದ್ದರೂ, ಅದರ ಬಗ್ಗೆ ಒಂದು ಕಮಿಷನ್‌ನ್ನನ್ನು ನೇಮಕಮಾಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಅದನ್ನು ವಿದ್ಯಾರ್ಥಿಗಳು ಒಪ್ಪಬೇಕು. ವಿದ್ಯಾಮಂತ್ರಿಗಳಿಗೆ ವಿದ್ಯಾರ್ಥಿಗಳ ಬಗ್ಗೆ ಒಳ್ಳೆಯ ಅಭಿಮಾನವಿದೆ ಹಾಗೂ ಸಹಾನುಭೂತಿ ಇದೆ. ನಮ್ಮ ಹುಡುಗರು ಮುಂದಿನ ಜನಾಂಗ. ನಮ್ಮ ಹುಡುಗರು ಹೆಚ್ಚಿಗೆ ಹಾದಿ ತಪ್ಪಬಾರದೆಂಬ ದೃಷ್ಟಿಯಿಂದ ಸರ್ಕಾರ ಇದನ್ನು ವಿಚಾರಮಾಡುವುದು ತಪ್ಪಲ್ಲ. ಅದನ್ನು ಮಾಡಬೇಕೆಂದು ನನಗನ್ನಿಸುತ್ತದೆ. ನಮ್ಮ ಹುಡುಗರು ಶಾಲೆ ಬಿಟ್ಟು ಹಾಳಾಗುವುದಕ್ಕೆ ಹತ್ತಿದ್ದಾರೆ. ಆದ್ದರಿಂದ ವಿದ್ಯಾರ್ಥಿಗಳು ಪುನಃ ಹಿಂದಕ್ಕೆ ಶಾಲೆಗಳಿಗೆ ಹೋಗಬೇಕು. ಸರ್ಕಾರವೂ ಕೂಡ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಕಾನೂನು ದೃಷ್ಟಿಯಿಂದ ಹಸ್ತಕ್ಷೇಪ ಮಾಡುವ ಬಗ್ಗೆ ಯೋಚಿಸಬೇಕು. ಅದರಲ್ಲಿ ಸತ್ಯಾಂಶವೇನೆಂಬ ಬಗ್ಗೆ ಪರಿಶೀಲಿಸಿ ಪರಿಶೋಧನೆಮಾಡುವುದು ಅವಶ್ಯಕತೆ ಇದೆ. ವಿದ್ಯಾರ್ಥಿಗಳು ಏನೋ ಮಾಡಿದರೆಂಬ ಭಾವನೆಯಿಂದ ಇರಬಾರದು. ಇದರಲ್ಲಿ ಜಾತೀಯತೆ ಪ್ರವೇಶ ಮಾಡುವ ಪರಿಸ್ಥಿತಿ ಇದೆ. ಮಾನ್ಯ ಶ್ರೀ ಶಿವಾನಂದಸ್ವಾಮಿಯವರು ಹೇಳಿದಹಾಗೆ ಇದನ್ನು ಒಂದು ದೊಡ್ಡ ಚಳುವಳಿಯಾಗಿ ಮಾಡಬಾರದು. ಇದರಲ್ಲಿ ತಪ್ಪೂ ಇರಬಹುದು. ನಮ್ಮ ವಿದ್ಯಾರ್ಥಿಗಳು ಹಾಳು ದಾರಿ ಹಿಡಿಯಬಾರದು, ಉದಾಹರಣೆಗೆ ಹೇಳುವುದಾದರೆ, ಒಬ್ಬ ಮಗ ತಪ್ಪುಮಾಡಿದರೆ ಅವನು ಯಾವರೀತಿ ತಪ್ಪು ಮಾಡಿದ್ದಾನೆಂಬುದನ್ನು ತನಿಖೆಮಾಡಿ ನೋಡುತ್ತಾನೆ. ಆ ರೀತಿಯಾದ ಪರಿಸ್ಥಿತಿ

(ಶ್ರೀ ಕೆ. ಸೂರ್ಯನಾರಾಯಣ ಅಡಿಗ)

ಈಗ ಈ ಸರ್ಕಾರಕ್ಕೆ ಬಂದಿದೆ. ಆದ್ದರಿಂದ ಸರ್ಕಾರದವರು ಕೊಟ್ಟ ಆಶ್ವಾಸನೆಗೆ ಮನ್ನಣೆ ಕೊಟ್ಟು ವಿದ್ಯಾರ್ಥಿಗಳು ಹಿಂದಕ್ಕೆ ಹೋಗಿ ಶಾಲೆಗೆ ಸೇರಬೇಕು. ಸರ್ಕಾರದವರೂ ಸಹ ಇದನ್ನು ಪೂರ್ಣವಾಗಿ ಪರಿಶೀಲಿಸಿ ಮುಂದಿನ ಕಾರ್ಯಕ್ರಮವನ್ನು ಕೈಗೊಳ್ಳುವ ಭಾರವನ್ನು ಹೊತ್ತಿದ್ದಾರೆ. ಅಷ್ಟರೊಳಗೆ ವಿದ್ಯಾರ್ಥಿಗಳು ಶಾಲೆಗೆ ಹೋಗುವುದಕ್ಕೆ ತೀರ್ಮಾನಮಾಡಿದ್ದರೆ ಒಳ್ಳೆಯದೆಂದು ನನಗನ್ನಿಸುತ್ತದೆ ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY CHAIRMAN.—I now call upon the Leader of the House to reply.

(Sriyuths C. S. Balakrishna Gowda and M. T. Srikantiah rose)

Sri C. S. BALAKRISHNA GOWDA.—Sir, I am extremely sorry; I must be given a chance.

Mr. DEPUTY CHAIRMAN.—The hon. Member cannot exhibit temper.

Sri C. S. BALAKRISHNA GOWDA.—I thought the Chair would use its discretion and give me a chance. It is my personal right to speak here on the motion. There are still twenty minutes more and I am extremely sorry for the attitude taken by the Chair. I again plead with the Chair to allow a humble lawyer like myself to make out a case when the entire student population has urged for judicial enquiry. I must be allowed to make out a case and say a few words in this regard, however little may be the time that you may give.

Sri K. V. SHANKARA GOWDA.—I would make one appeal to you, Sir. Both Mr. Balakrishna Gowda and Mr. Anjanappa may be given 5 or 6 minutes each.

Mr. DEPUTY CHAIRMAN.—Unwillingly the Chair will have to concede this request by the Leader of the House. The hon. Members must know that a lion's share of the time for the debate was allotted to the Opposition. The Chair did not allow many members of the ruling Party to speak. I am very sorry the hon. Member Sri Balakrishna Gowda did not say a word when I allowed 2 hours to the hon. Member Sri Rajagopal. Is it fair on the part of the hon. Member to say like this now? However the Chair concedes the request on condition that whatever time is allotted by the Chair will have to be strictly adhered to by the hon. Member.

Sri K. V. SHANKARA GOWDA.—Mr. Balakrishna Gowda may be given 10 minutes.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಮಾನ್ಯ ಸಭಾಪತಿಯವರೇ, ಈ ದಿವಸ ನಮ್ಮ ಇಡೀ ದೇಶದಲ್ಲಿ ನೋಡುತ್ತಿದ್ದೇವೆ. ಈ ಕಾಲೇಜಿನ ವಿದ್ಯಾರ್ಥಿಗಳು ಯಾವುದಾದರೂ ಒಂದು ಕಾರಣವನ್ನು ತೆಗೆದುಕೊಂಡು ಆಂದೋಳನವನ್ನು ಮಾಡುತ್ತಿರುತ್ತಾರೆ. ಇವರು ಮಾಡಿದ್ದು ಯಾವ ರೀತಿಯಲ್ಲಿದೆಯೆಂಬುದನ್ನು ಎರಡು ಉದಾಹರಣೆಗಳಿಂದ ಹೇಳುತ್ತೇನೆ. ವಿದ್ಯಾರ್ಥಿಗಳಿಗೆ ಈ ಬೇಡಿಕೆಗಳನ್ನು ಸಲ್ಲಿಸುವುದಕ್ಕೆ ಸರ್ವಾಧಿಕಾರವಿದೆ ಎಂದು ಹೇಳಬೇಕಾಗಿದೆ. ಅವರು ದೇಶದ ಇತರ ಸಮಸ್ಯೆಗಳ ಬಗ್ಗೆ ಏನೂ ಹೇಳುತ್ತಾ ಇಲ್ಲ. ಅವರೇ ಕಲಿಯುತ್ತಿರುವ ವಿಶ್ವವಿದ್ಯಾನಿಲಯದಲ್ಲಿ ನಡೆಯತಕ್ಕ ಕಮ್ಯೂನಾಲಿಸಂ ಫೇವರಿಟಿಸಂ ಬಗ್ಗೆ ತಿಳಿವಳಿಕೆಯಾದಾಗ, ಅಥವಾ ಮೇಲಧಿಕಾರಿಗಳು ಮಾಡಿರತಕ್ಕ ಅನ್ಯಾಯಗಳನ್ನು ನೋಡಿದಾಗ ಅವರ ಮನಸ್ಸಿಗೆ ನೋವು ಉಂಟಾದರೆ,

ಈ ಪ್ರೌಢ ವಿದ್ಯಾರ್ಥಿಗಳಾದಂತವರು ತಮ್ಮ ಬೇಡಿಕೆಗಳನ್ನು ಸಲ್ಲಿಸುವುದರಲ್ಲಿ ಏನೂ ತಪ್ಪು ಇಲ್ಲ. ಇವರು ಹಾಗೆ ಮಾಡಬಾರದು, ರಾಜಕೀಯಕ್ಕೆ ಬರಬಾರದು ಎಂದು ಹೇಳಿದರೆ ಸರಿಯಲ್ಲ. ಫ್ರಾನ್ಸಿನಲ್ಲಿ ಡಿಗಾಲೆಯನ್ನೇ ವಿದ್ಯಾರ್ಥಿಗಳು ಕೆಳಗೆ ಇಳಿಸಿದ್ದಾರೆ. ಆಂಧ್ರ ಪ್ರದೇಶದಲ್ಲಿ ಇಂಥ ಸಮಸ್ಯೆ ಬಂದಿದೆ, ಮತ್ತು ದೇಶದ ಇತರ ಕಡೆಗಳಲ್ಲೂ ಇಂಥ ಸಮಸ್ಯೆಗಳು ಬಂದಿವೆ. ಸರ್ಕಾರದವರು ಇದಕ್ಕೆ ಕೂಲಂಕಷವಾದ ಗಮನವನ್ನು ಕೊಡಬೇಕಾಗಿತ್ತು. ಇವತ್ತು ಅವರ ಸಂಖ್ಯೆ 10 ಸಾವಿರ ಇರಬಹುದು. ನಾಳೆ ಇದಕ್ಕೆ ಹೈಸ್ಕೂಲು ಮಕ್ಕಳೂ ಸೇರಿ ಒಂದು ಲಕ್ಷವಾಗಬಹುದು. ಬೆಂಗಳೂರಿನಲ್ಲಿ ಇವತ್ತು ಲಕ್ಷಾಂತರ ವಿದ್ಯಾರ್ಥಿಗಳು ಇದ್ದಾರೆ. ಹೀಗೆ ಅನೇಕ ಮಕ್ಕಳು ಇನ್ನೊಸೆಂಟ್ ಆಗಿರತಕ್ಕವರು ಪೋಲೀಸ್ ದೌರ್ಜನ್ಯಕ್ಕೆ ಗುರಿಯಾಗುವ ಸಂಭವ ಇದೆ. ಈ ಸದನ ನಡೆಯುತ್ತಿರುವಾಗ ಇಂಥ ಆಂದೋಳನಕ್ಕೆ ಒಂದು ಅಂತ್ಯರೂಪವನ್ನು ಕೊಡದಿದ್ದರೆ, ಈ ಚಳವಳಿಯು ಇನ್ನು ಯಾವ್ಯಾವ ರೂಪವನ್ನು ತಾಳಬಹುದೋ ಎಂದು ಕಳಕಳಿಯಿಂದ ಹೇಳುತ್ತೇನೆ. ಇದರಲ್ಲಿ ಬಹಳ ಮುಖ್ಯವಾದ 19 ಕಾರಣಗಳನ್ನು ಕೊಟ್ಟಿದ್ದಾರೆ. ಅವರು ಮೂಲಭೂತವಾಗಿ ಹೇಳುವುದು ಇಷ್ಟೇ. ಇಲ್ಲಿ ಕಮ್ಯೂನಲ್ ಡಾಮಿನೇಶನ್ ರಿಕ್ರೂಟ್‌ಮೆಂಟ್ ಮಾಡುವಾಗ ಇದೆ ಎಂದು ಹೇಳುತ್ತಾರೆ. ಇದರಲ್ಲಿ ಫೇವರಿಟಿಸಂ, ಕಮ್ಯೂನಲಿಸಂ ಇದೆ. ಅವರು ತಮ್ಮ ಕರ್ತವ್ಯವನ್ನು ಎಷ್ಟು ಸಾಧನೆ ಮಾಡಿದ್ದಾರೆಂಬುದನ್ನು ಹೇಳುತ್ತೇನೆ. ಮೊಟ್ಟಮೊದಲನೆಯದಾಗಿ ನಾಲ್ಕು ನೇಮಕಗಳ ಬಗ್ಗೆ ಹೇಳುತ್ತೇನೆ. ನನ್ನ ದೃಷ್ಟಿಯಲ್ಲಿ ಲೀಗಲಾಗಿ ಮೂರು ಬೇಡಿಕೆಗಳು ಇವೆ. ನಿನ್ನೆ ಒಂದು ಸ್ಪೈನ್ ಇಲ್ಲದಿರತಕ್ಕ ಸರ್ಕ್ಯೂಲರ್ ಬಗ್ಗೆ ಹೇಳಿದ್ದಾರೆ. ಅದನ್ನು ಸೆನೇಟ್ ಸದಸ್ಯರಿಗೆ ಎಲ್ಲಾ ಹಂಚಿದ್ದಾರೆ. ಇದನ್ನು ವಿದ್ಯಾರ್ಥಿಗಳ ಬೇಡಿಕೆಗೆ ಪ್ರತ್ಯುತ್ತರವಾಗಿ ಕೊಟ್ಟಿದ್ದಾರೆಂದು ನಾನು ತಿಳಿಯುತ್ತೇನೆ. ಇದರಲ್ಲಿ ಎರಡು ಮೂರು ನೇಮಕಗಳ ಬಗ್ಗೆ ಹೇಳುತ್ತೇನೆ. ಈಗ ಬೋರ್ಡ್ ಆಫ್ ಎಗ್ಸಾಮಿನರ್ಸ್‌ನ್ನು ಮುಖ್ಯವಾಗಿ ನೇಮಕ ಮಾಡುವ ಉದ್ದೇಶವೇನೆಂದರೆ, ಅಡ್ವಟೈಸ್‌ಮೆಂಟ್‌ನಲ್ಲಿ ಯಾವ ರೀತಿ ಕರೆಯುತ್ತಾರೆ, ಆ ವಿಷಯಕ್ಕೆ ಮಾತ್ರ ನೇಮಕ ಮಾಡಬೇಕೇ ವಿನಹ ಯಾವ ಕ್ವಾಲಿಫಿಕೇಷನ್ ಪ್ರಿಸ್ಕ್ರೈಬ್ ಮಾಡಿದ್ದಾರೆ, ಆ ಕ್ವಾಲಿಫಿಕೇಷನ್ ಇಲ್ಲದಿರತಕ್ಕ ಅಭ್ಯರ್ಥಿಯನ್ನು ಅವರು ನೇಮಕ ಮಾಡಿರುವುದು ಸರಿಯಲ್ಲ. ಇದು ಸ್ವಜನ ಪಕ್ಷಪಾತವಲ್ಲದೆ ಮತ್ತೇನು? ಮೊಟ್ಟಮೊದಲನೆಯದಾಗಿ ಹೇಳುವುದಾದರೆ ಡಾ. ಲಕ್ಷ್ಮಣ ಅವರ ಕೇಸ್ ತೆಗೆದುಕೊಳ್ಳೋಣ. ಪ್ರೊಫೆಸರ್ ಆಫ್ ಎಕನಾಮಿಕ್ಸ್ ಮಾಡಬೇಕಾದರೆ ಏನು ಕಂಡಿಷನ್ ಕೊಟ್ಟಿದ್ದಾರೆಂದರೆ ಅರ್ಜಿ ಹಾಕುವವನು, ಫಸ್ಟ್ ಕ್ಲಾಸ್ ಎಂ.ಎ. 10 ವರ್ಷ ಟೀಚಿಂಗ್ ಅನುಭವ ಇತ್ಯಾದಿ...ಎಂದು ಹೇಳಿದ್ದಾರೆ. ಅಗ ಅರ್ಹತೆ ಇಲ್ಲದಿರತಕ್ಕವರಿಗೆ ಏಕೆ ಗಮನ ಕೊಡಬೇಕು ? ಡಾ. ಲಕ್ಷಣ ಎಂಬವರಿಗೆ ಮೂರು ವರ್ಷ ಮಾತ್ರ ಟೀಚಿಂಗ್ ಅನುಭವ ಇದೆ.

ಎಂ. ಎ. ಫಸ್ಟ್‌ಕ್ಲಾಸ್ ಮತ್ತು 10 ವರ್ಷಗಳ ಟೀಚಿಂಗ್ ಎಕ್ಸ್‌ಪೀರಿಯನ್ಸ್ ಆ ಪೋಸ್ಟಿಗೆ ಇರಬೇಕೆಂದು ನಿಗದಿ ಮಾಡಿರುವಾಗ ಡಾ. ಲಕ್ಷ್ಮಣ್ ಅವರು ಆರ್ಡಿನರಿ ಥರ್ಡ್‌ಕ್ಲಾಸ್ ಎಂ.ಎ. ಪಾಸು ಮಾಡಿದ್ದರೂ, ಅವರಿಗೆ 10 ವರ್ಷ ಟೀಚಿಂಗ್ ಎಕ್ಸ್‌ಪೀರಿಯನ್ಸ್ ಇಲ್ಲದೇ ಇದ್ದರೂ ಕೂಡ ಅವರನ್ನು ಎರಡನೇ ಪ್ಲೇಸಿಗೆ ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನವರು ರೆಕಮೆಂಡ್ ಮಾಡಿದ್ದಾರೆ. ಹೀಗಿರುವಾಗ ಅವರ ಬೆಲೆ ಏನೆಂಬುದನ್ನು ದೇಶದ ಜನತೆ ನಿರ್ಧಾರ ಮಾಡಬೇಕು. ಆದ್ದರಿಂದ ಈ ಬಗ್ಗೆ ವಿಚಾರಣೆ ಮಾಡಲು ಒಳ್ಳೆಯ ಅನುಭವವಿರತಕ್ಕ ಜಡ್ಜ್ ಅವರನ್ನು ನೇಮಕ ಮಾಡಿ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕು ಎಂದು ನಾನು ಹೇಳುತ್ತೇನೆ. ಎಂ.ಎ. ಫಸ್ಟ್ ಕ್ಲಾಸ್ ಅಥವಾ 10 ವರ್ಷ ಟೀಚಿಂಗ್ ಎಕ್ಸ್‌ಪೀರಿಯನ್ಸ್ ಯಾವ ಒಂದು ಕ್ವಾಲಿಫಿಕೇಷನ್ನೂ ಇಲ್ಲದೆ ಇರುವಾಗ ಡಾ. ಲಕ್ಷ್ಮಣ್ ಅವರ ಅಪ್ಲಿಕೇಷನ್‌ಅನ್ನು ಏತಕ್ಕೆ ಕನ್‌ಸಿಡರ್ ಮಾಡಬೇಕಾಗಿತ್ತು, ಅವರ ಅಪ್ಲಿಕೇಷನ್‌ಅನ್ನು ಏತಕ್ಕೆ ರಿಜೆಕ್ಟ್ ಮಾಡಲಿಲ್ಲ. ಎಂಬುದನ್ನು ವಿಶದೀಕರಿಬೇಕು. ಅದು ಅನಾವಶ್ಯಕವಾಗಿ ಒಂದು ರೆಕಮೆಂಡೇಷನ್ ಮಾಡಿದ ಹಾಗೆ ಆಗಲಿಲ್ಲವೇ ಎಂದು ನಾನು ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಡಾ. ನಾಗಣ್ಣ, ಅವರು ಜಿಯಾಲಜಿ ಸಬ್ಜೆಕ್ಟಿನಲ್ಲಿ ಪ್ರಪಂಚದಲ್ಲಿರತಕ್ಕ 10 ಜನ ಜಿಯಾಲಜಿಸ್ಟ್‌ಗಳ ಪೈಕಿ ಬೆಸ್ಟ್ ಕ್ಯಾಂಡಿಡೇಟ್. ಅಂಥವರಿಗೆ ಜಿಯಾಲಜಿ ಪ್ರೊಫೆಸರ ಹುದ್ದೆಯನ್ನು ಕೊಡದೆ ಅದನ್ನು ಬೇರೆಯವರಿಗೆ ಕೊಟ್ಟಿದ್ದಾರೆ. ಹಾಗೆಯೇ ಕೆಮಿಸ್ಟ್ರಿ ಪ್ರೊಫೆಸರ ಹುದ್ದೆಗೆ ಅಡ್ವರ್ಟೈಜ್ ಮಾಡಿದ್ದರು. ಅದಕ್ಕೆ ಅಪ್ಲಿಕೇಷನ್ ಹಾಕಿದ್ದವರ ಪೈಕಿ ಡಾ. ಕೆ. ಎಂ. ಶಿವಾನಂದಯ್ಯ ಮತ್ತು ಡಾ. ನಾರಾಯಣರೆಡ್ಡಿ ಇಬ್ಬರೂ ಇಂಟರ್‌ವ್ಯೂಗೆ ಬಂದಿದ್ದರು. ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್‌ನವರು ಇಬ್ಬರನ್ನು ರೆಕಮೆಂಡ್ ಮಾಡಿದ್ದರು. ಅದನ್ನು ಹೇಗೋ ಮಾಡಿ ಸೆಂಟ್ರಲ್ ಕಾಲೇಜಿಗೆ ಒಬ್ಬರನ್ನೂ, ಮತ್ತು ಇಂಜನಿಯರಿಂಗ್ ಕಾಲೇಜಿಗೆ ಒಬ್ಬರನ್ನೂ ನೇಮಕ ಮಾಡಿದರು. ಇದರಲ್ಲಿಯೂ ಸ್ವಜನ ಪಕ್ಷಪಾತ ನಡೆದಿದೆ. ಹೀಗೆ ಅನೇಕ ಹುದ್ದೆಗಳಿಗೆ ನೇಮಕ ಮಾಡುವಾಗ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನವರು ತಮ್ಮ ಒಂದು ವರ್ಚಸ್ಸನ್ನು ಬೀರಿ ತಮಗೆ ಬೇಕಾದವರಿಗೆ ರೆಕಮೆಂಡೇ

(ಶ್ರೀ ಸಿ. ಎಸ್. ಬಾಲಕೃಷ್ಣ ಗೌಡ)

ಷನ್ ಮಾಡಿದ್ದಾರೆ. ಬೆಂಗಳೂರು ಯೂನಿವರ್ಸಿಟಿ, ಮೈಸೂರು ಯೂನಿವರ್ಸಿಟಿ ಮತ್ತು ಕರ್ನಾಟಕ ಯೂನಿವರ್ಸಿಟಿ ಈ ಮೂರು ಯೂನಿವರ್ಸಿಟಿಗಳು ಒಳ್ಳೊಳ್ಳೆಯ ಹಿನ್ನೆಲೆಗಳನ್ನು ಹಾಕಿಕೊಂಡು ಒಂದು ಆದರ್ಶವಾದ ಆಡಳಿತವನ್ನು ನಡೆಸುವುದಕ್ಕೆ ಬದಲಾಗಿ ದುರಾಡಳಿತವನ್ನು ನಡೆಸುವುದು ಸರಿಯಲ್ಲ.

ಡಾ. ಶಿವಶಂಕರ್ ಎನ್ನುವವರಿಗೆ ಒಂದು ಸೂಪರಿನ್‌ಟೆಂಡೆಂಟ್ ಪೋಸ್ಟ್ ಕ್ರಿಯೇಟ್ ಮಾಡಿ ಕೊಟ್ಟಿದ್ದಾರೆ. ಆ ಪೋಸ್ಟಿಗೆ ಅಡ್ವರ್ಟೈಜ್ ಮಾಡದೆ ಹಾಗೆಯೇ ಡೈರೆಕ್ಟಾಗಿ ಅವರನ್ನು ನೇಮಕ ಮಾಡಿದ್ದಾರೆ. ಅವರು ನನ್ನ ಊರಿನವರು. ಅವರ ಯೋಗ್ಯತೆಯ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಬೋರ್ಡ್ ಅಫ್ ಅಪಾಯಿಂಟ್‌ಮೆಂಟಿನವರು ತಮಗೆ ಬೇಕಾದವರು ಯಾರು ಇದ್ದಾರೆ ಎನ್ನುವುದನ್ನು ತಿಳಿದುಕೊಂಡು ಅಣ್ಣಾಮಲೆ ಯೂನಿವರ್ಸಿಟಿಯಲ್ಲಿ 800 ರೂಪಾಯಿಗಳ ಸಂಬಳಕ್ಕೆ ಇದ್ದವರನ್ನು ಇಲ್ಲಿ 300 ರೂಪಾಯಿಗಳ ಸಂಬಳಕ್ಕೆ ತೆಗೆದುಕೊಂಡಿದ್ದಾರೆ. ಅವರು 800 ರೂಪಾಯಿಗಳ ಸಂಬಳಕ್ಕೆ ಇದ್ದವರು 300 ರೂಪಾಯಿಗಳ ಸಂಬಳಕ್ಕೆ ಇಲ್ಲಿಗೆ ಬರಬೇಕಾದರೆ ನಾನು ಮುಂದೆ ಇನ್ನೂ ದೊಡ್ಡ ಹುದ್ದೆಗೆ ಏರುತ್ತೇನೆ ಎನ್ನುವ ಆಶ್ವಾಸನೆ ಇಲ್ಲದೆ ಅವರು ಆ ಹುದ್ದೆಗೆ ಸೇರಿಕೊಂಡಿದ್ದಾರೆಯೇ ! ಯಾವ ಪೋಸ್ಟ್ ಇಲ್ಲದೇ ಇದ್ದರೂ ಹೊಸದಾಗಿ ಒಂದು ಪೋಸ್ಟ್ ಕ್ರಿಯೇಟ್ ಮಾಡಿ ಅದಕ್ಕೆ ಅಡ್ವರ್ಟೈಜ್ ಕೂಡ ಮಾಡದೆ, ಅಪ್ಲಿಕೇಷನ್ ಕರೆಯದೆ ಡಾ. ಶಿವಶಂಕರ್ ಅವರನ್ನು ಡೈರೆಕ್ಟಾಗಿ ನೇಮಕ ಮಾಡಿದ್ದಾರೆ. ಇದಕ್ಕೆ ಕಾರಣವೇನು ? 20, 25, 30 ವರ್ಷಗಳ ಸರ್ವೀಸಾಗಿರತಕ್ಕ ಒಳ್ಳೆಯ ಅನುಭವ ಇರುವ ಉಪಾಧ್ಯಾಯರನ್ನು ಇದೇ ರೀತಿ ಪ್ರೊಫೆಸರ್ ಹುದ್ದೆಗೆ ಏತಕ್ಕೆ ತೆಗೆದುಕೊಳ್ಳಬಾರದಾಗಿತ್ತು ? ಇದು ಸ್ವಜನ ಪಕ್ಷಪಾತವಲ್ಲದೇ ಮತ್ತೇನು ! ಹಾಗೆಯೇ ಶ್ರೀ ಉಮರ್ಜಿಯವರಿಗೆ ಅರ್ಹತೆ ಇಲ್ಲವೆಂದು ತಿಳಿದೂ ಕೂಡ ಅವರಿಗೆ ಸ್ಟ್ಯಾಟಿಸ್ಟಿಕ್ಸ್ ಪ್ರೊಫೆಸರ್ ಹುದ್ದೆಯನ್ನು ಕೊಟ್ಟಿದ್ದಾರೆ. ಅವರು ಮಂಗಳೂರು ಮತ್ತು ಬೆಂಗಳೂರು ಸರ್ಕಾರಿ ಕಾಲೇಜುಗಳಲ್ಲಿ ಪ್ರಿನ್ಸಿಪಾಲ್ ಆಗಿದ್ದರಿಂದ ಅವರು ಯಾವ ರಿಸರ್ಚ್ ವರ್ಕ್ ಮಾಡಿರಲಿಲ್ಲ. ಅವರಿಗೆ ಯಾವ ರಿಸರ್ಚ್ ಕ್ವಾಲಿಫಿಕೇಷನ್ ಇರಲಿಲ್ಲ. ಅವರು 1973ನೇ ಇಸವಿಗೆ ರಿಟೈರ್ ಆಗುತ್ತಾರೆ ಎಂದು ಗೊತ್ತಿದ್ದರೂ ಕೂಡ ಅಂಥವರನ್ನು The experts thought that he had the necessary academic attainments and administrative and organising experience ಎಂದು ಹೇಳಿದ್ದಾರೆ. ಈ ಸ್ಟ್ಯಾಟಿಸ್ಟಿಕಲ್ ಪ್ರೊಫೆಸರ್ ಹುದ್ದೆಗೆ ಅಡ್ವರ್ಟೈಜ್ ಮಾಡಿದಾಗ ಅದಕ್ಕೆ 5 ಜನಗಳು ಅರ್ಜಿ ಹಾಕಿದ್ದರು. ಅದರಲ್ಲಿ ಇಬ್ಬರು ಇಂಟರ್‌ವ್ಯೂಗೆ ಬಂದಿದ್ದರು. ಈ ಹುದ್ದೆಗೆ ಅಡ್ವರ್ಟೈಜ್ ಮಾಡುವಾಗ ಆರ್ಗನೈಜಿಂಗ್ ಎಕ್ಸ್‌ಪೀರಿಯನ್ಸ್ ಬೇಕು ಎಂದು ಅದರಲ್ಲಿ ಹೇಳಿರಲಿಲ್ಲ. ಇಂಟರ್‌ವ್ಯೂ ಮಾಡುವಾಗ ಏನೇನೋ ನೆಪಗಳನ್ನು ಹುಡುಕಿ ಮಗುಂ ಆಗಿ ಅವರನ್ನು ಕೈ ಬಿಟ್ಟರು. ಕೆಲವಾರು ರೀಜನ್ಸ್ ಕೊಟ್ಟು ಡಾ. ಉಮರ್ಜಿಯವರನ್ನು ಸ್ಟ್ಯಾಟಿಸ್ಟಿಕಲ್ ಪ್ರೊಫೆಸರ್ ಆಗಿ ನೇಮಕ ಮಾಡಿದ್ದಾರೆ. ರಿಟೈರ್ ಆಗುವ ವ್ಯಕ್ತಿ. ಅವರು ಇದುವರೆಗೂ ಯಾವ ರಿಸರ್ಚ್ ಮಾಡದೇ ಇದ್ದರೂ ಇನ್ನು ಮುಂದೆ ರಿಸರ್ಚ್ ವರ್ಕ್ ಮಾಡುತ್ತಾರೆ ಎಂದು ಭಾವಿಸಿ ಅವರಿಗೆ ಆ ಪ್ರೊಫೆಸರ್ ಹುದ್ದೆಯನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಆಮೇಲೆ ಹಾಗೆಯೇ ಡಾ. ಲಿಂಗಯ್ಯ ಎನ್ನುವವರಿಗೆ ಕೊಡಬೇಕಾಗಿದ್ದಂತಹ ಹುದ್ದೆಯನ್ನು ಡಾ. ಗುಂಡೂರಾವ್ ಅವರಿಗೆ ಕೊಟ್ಟು ಅವರನ್ನು ಮೆಕ್ಯಾನಿಕಲ್ ಇಂಜಿನಿಯರಿಂಗ್ ಇಲಾಖೆಯ ಮುಖ್ಯಸ್ಥರನ್ನಾಗಿ ನೇಮಕ ಮಾಡಿದ್ದಾರೆ. ಇದಕ್ಕೆ ಏನೇನೋ ಕಾರಣಗಳನ್ನು ಕೊಟ್ಟಿದ್ದಾರೆ. ಅದು ನನಗೆ ಬೇಕಾಗಿಲ್ಲ.

ಇಲ್ಲಿ ಲಿಂಗಯ್ಯ ಎನ್ನುವವರನ್ನು ತಜ್ಞರು ಎಂಬುದನ್ನು ಒಪ್ಪಿಕೊಂಡಿದ್ದಾರೆ. ಆದರೆ ಅವರನು ನೇಮಕ ಮಾಡಿಕೊಳ್ಳದೆ ಗುಂಡೂರಾವ್ ಎನ್ನುವವರನ್ನು ನೇಮಕ ಮಾಡಿಕೊಂಡಿದ್ದಾರೆ. ತಾರೀಖು 18-8-1968ರಲ್ಲಿ ಗುಂಡೂರಾವ್ ಅವರು ಪ್ರೊಫೆಸರ್ ಆಫ್ ಮೆಕ್ಯಾನಿಕಲ್ ಇಂಜಿನಿಯರ್ ಅವರಿಗೆ ಬರೆದ ಒಂದು ಪತ್ರವನ್ನು ಸ್ವಲ್ಪ ಮಾತ್ರ ಓದುತ್ತೇನೆ.

> "For the second year according to the existing schemes there are a few subjects, which I may have to handle But, I am surprised to find, as put up by you, machine design cannot be handled by me as it is not my subject and I will not be able to do justice,"

7-00 P. M.

ಅಂದಮೇಲೆ ಇವರು ಮಿಷಿನ್ ಡಿಸೈನ್ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವುದಕ್ಕಾಗುವುದಿಲ್ಲ ಎಂದು ಅರ್ಥವಾಯಿತು. ಡಿ. ಎಸ್. ರಂಗನಾಥನ್, ಎಂ. ಇ., ಫಸ್ಟ್‌ಕ್ಲಾಸ್ ಮತ್ತು ಮಿಷಿನ್ ಡಿಸೈನ್‌ನಲ್ಲಿ ಎಕ್ಸ್‌ಪರ್ಟ್ ಆದವರು. ಇವರು ಸಹ ಇದೇ ಪೋಸ್ಟ್‌ಗೆ ಅಪ್ಲಿಕೇಷನ್ ಹಾಕಿದ್ದರೂ ಕೂಡ ಇವರಿಗೆ ಇಂಟರ್‌ವ್ಯೂ ಸಹ ಕಳಿಸದೆ ಗುಂಡೂರಾವ್ ಅವರನ್ನೇ ನೇಮಕ ಮಾಡಿಕೊಂಡಿದ್ದಾರೆ. ಮಾನ್ಯ ವಿದ್ಯಾ ಮಂತ್ರಿಗಳು ಇದಕ್ಕೆ ಉತ್ತರ ಹೇಳಬೇಕು."

ಶ್ರೀ ಕೆ. ವಿ. ಶಂಕರಗೌಡ.—ಅದು ನಮಗೆ ಸಂಬಂಧಪಡುವುದಲ್ಲ.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಸರ್ಕಾರಕ್ಕೆ ಸಂಬಂಧಪಡುವುದಿಲ್ಲವೆಂದು ಇದೇ ರೀತಿ ಅಲ್ಲಿ ನಡೆಯುವುದಕ್ಕೆ ಅವಕಾಶ ಕೊಟ್ಟರೆ ಮುಂದೆ ರಕ್ತ ಕ್ರಾಂತಿಯಾಗಬಹುದು. ಸರ್ಕಾರಕ್ಕೆ ವಿದ್ಯಾರ್ಥಿಗಳ ಬಗ್ಗೆ ಮಮತೆ ಇದ್ದರೆ ಈ ಬಗ್ಗೆ ಕೂಡಲೇ ತನಿಖೆ ನಡೆಸಬೇಕು.

ಶ್ರೀ ಕೆ. ವಿ. ಶಂಕರಗೌಡ.—ವಿದ್ಯಾರ್ಥಿಗಳ ಬಗ್ಗೆ ಮಾನ್ಯ ಸದಸ್ಯರಿಗೆ ಎಷ್ಟು ಮಮತೆ ಇದೆಯೋ ಅದಕ್ಕಿಂತ ಹೆಚ್ಚಿನ ಮಮತೆ ನಮಗೂ ಇದೆ.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಅರ್ಹರಾದಂಥ ವಿದ್ಯಾರ್ಥಿಗಳಿಗೆ ಇಂಟರ್‌ವ್ಯೂ ಕಳಿಸದೆ ಅನರ್ಹರಾದಂಥದರನ್ನು ನೇಮಕ ಮಾಡಿಕೊಂಡಿದ್ದಾರೆ. ಈ ವಿಚಾರದಲ್ಲಿ ಸರಿಯಾದ ಕ್ರಮ ಕೈಕೊಳ್ಳಬೇಕು. ಒಟ್ಟಿನಲ್ಲಿ ಹೇಳುವುದಾದರೆ ವಿಶ್ವವಿದ್ಯಾನಿಲಯದಲ್ಲಿ ಸ್ವಜನಪಕ್ಷಪಾತ ಎಂಬುದು ತಾಂಡವಾಡುತ್ತಿದೆ. ವಿಶ್ವವಿದ್ಯಾನಿಲಯದ 7 ಇಲಾಖೆಯಲ್ಲಿ ಒಂದೇ ಜಾತಿಗೆ ಸೇರಿದವರು ಈಗ ಮುಖ್ಯಸ್ಥರಾಗಿದ್ದಾರೆ. ಅಲ್ಲಿ ತಪ್ಪು ನಡೆದಿದೆ ಎಂದು ಹೇಳಿದರೂ ಕೂಡ, ರುಜುವಾತು ಸಾಕ್ಷಿಗಳು ಇದ್ದರೂ ಕೂಡ ಸರ್ಕಾರ ಆ ಬಗ್ಗೆ ಏನೂ ಮಾಡುವುದಕ್ಕೂ ಆಗುವುದಿಲ್ಲವೆಂದು ಹೇಳುವುದು ವಿಶಾದ ಕರವಾದ ಸಂಗತಿ. ಪ್ರಜಾಪ್ರಭುತ್ವದಲ್ಲಿ ಯಾರ ಮೇಲಾದರು ಶಂಕೆ ಬಂದರೆ, ಅವರು ತಪ್ಪು ಮಾಡಿದ್ದರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದು ಒಂದು ಸಂಪ್ರದಾಯ. ಈ ಕಾರಣ ದಿಂದ ಸರ್ಕಾರದವರು ಕೂಡಲೆ ಒಂದು ಜ್ಯುಡಿಷಿಯಲ್ ಎನ್‌ಕ್ವೈರಿಯನ್ನು ನೇಮಕ ಮಾಡಬೇಕು. ಮತ್ತು ಇಡೀ ದೇಶಕ್ಕೆ ಒಂದು ಮಾದರಿಯಾಗಬೇಕು. ಈ ರೀತಿ ಮಾಡದಿದ್ದರೆ ನೂರಾರು ಮಕ್ಕಳನ್ನು ಬಲಿ ಕೊಟ್ಟಂತಾಗುತ್ತದೆ. ಇಂತಹ ವಿಚಾರಗಳಲ್ಲಿ ರಾಜಕೀಯವನ್ನು ಬೆರೆಸಬಾರದು. ಶೀಘ್ರದಲ್ಲಿ ಒಂದು ತನಿಖಾ ಮಂಡಳಿಯನ್ನು ನೇಮಕ ಮಾಡಬೇಕೆಂದು ಸರ್ಕಾರದವರನ್ನು ಕೇಳಿ ಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎ. ಕೆ. ಸುಬ್ಬಯ್ಯ (ಪದವೀಧರರ ಕ್ಷೇತ್ರ).—ಸ್ವಾಮಿ, ಈ ತಿಂಗಳು ಎರಡನೇ ತಾರೀಖಿನಿಂದ 8ನೇ ತಾರೀಖಿನವರೆಗೆ ವಿದ್ಯಾರ್ಥಿಗಳ ಮುಷ್ಕರ ಶಾಂತ ರೀತಿಯಿಂದ ನಡೆಯಿತು. ವಿದ್ಯಾರ್ಥಿಗಳು ಮಾಡುತ್ತಿದ್ದ ಮುಷ್ಕರದಲ್ಲಿ ನ್ಯಾಯ ಇರಲಿ, ಇಲ್ಲದಿರಲಿ ಒದಗಿಬಂದಂಥ ಪರಿಸ್ಥಿತಿಯನ್ನು ಹತೋಟಿಗೆ ತರುವ ಕಾರ್ಯದಲ್ಲಿ ಸರ್ಕಾರದವರು ಅಸಮರ್ಥರಾದರು ಎಂಬತಕ್ಕಂಥ ಆಪಾದನೆಯನ್ನು ಈ ಸಂದರ್ಭದಲ್ಲಿ ಸರ್ಕಾರದಮೇಲೆ ಹೊರಿಸುವುದಕ್ಕೆ ಇಷ್ಟಪಡುತ್ತೇನೆ. ಶಾಂತರೂಪದಲ್ಲಿ ನಡೆಯುತ್ತಿದ್ದ ಮುಷ್ಕರ 9ನೇ ತಾರೀಖಿನ ದಿವಸ ವಿಧ್ವಂಸಕ ರೂಪವನ್ನು ತಾಳಿತು. ವಿದ್ಯಾರ್ಥಿಗಳ ದೌರ್ಜನ್ಯ ಏನು ಎಂಬುದು ಎಲ್ಲರಿಗೂ ಗೊತ್ತಿದೆ. ಸರ್ಕಾರದವರು ಹೇಳುತ್ತಾರೆ, ಸಾರ್ವಜನಿಕರ ಆಸ್ತಿಪಾಸ್ತಿಗಳನ್ನು ಸಂರಕ್ಷಿಸಲು ಮತ್ತು ಸಾರ್ವಜನಿಕರ ಹಿತವೃಷ್ಟಿಯಿಂದ ಪೋಲೀಸರು ಎಷ್ಟು ಬೇಕೋ ಅಷ್ಟುಮಾತ್ರ ಕ್ರಮವನ್ನು ವಿದ್ಯಾರ್ಥಿಗಳಮೇಲೆ ತೆಗೆದುಕೊಂಡಿದ್ದಾರೆಂದು. ಆದರೆ ಅದನ್ನು ನಾನು ಒಪ್ಪುವುದಿಲ್ಲ. ವಿದ್ಯಾರ್ಥಿಗಳನ್ನು ಅಟ್ಟಿಸಿಕೊಂಡು ಹೋಗಿ ಪೋಲೀಸರು ಹೊಡೆದಿದ್ದಾರೆ.ಹಾಸ್ಟಲ್‌ನಲ್ಲಿದ್ದ ವಿದ್ಯಾರ್ಥಿಗಳನ್ನು ಪೋಲೀಸರು ಬಾಗಿಲು ಒಡೆದು ತಪ್ಪುಮಾಡದಿದ್ದರೂ ಕೂಡ ಹೊಡೆದಿದ್ದಾರೆ. ವಿದ್ಯಾರ್ಥಿಗಳ ಮುಷ್ಕರದಲ್ಲಿ ನ್ಯಾಯ ಇರಲಿ, ಇಲ್ಲದಿರಲಿ ಒಂದು ಪಕ್ಷ ರಾಜಕೀಯ ಕೈವಾಡ ಇದ್ದರೂ ಕೂಡ ಪೋಲೀಸರು ವಿದ್ಯಾರ್ಥಿಗಳನ್ನು ಆರೀತಿ ಹೊಡೆಯಬಾರದಿತ್ತು. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಇದರಲ್ಲಿ ಏನಾದರೂ ರಾಜಕೀಯ ಕೈವಾಡವಿದ್ದರೆ, ಅದು ಆಳುವ ಪಕ್ಷದವರ ಕೈವಾಡವಾಗಿದೆ ಎಂದು ಹೇಳಬಹುದು. ಒಂದು ಗುಂಪಿನ ವಿದ್ಯಾರ್ಥಿಗಳು ಮುಷ್ಕರ ಪ್ರಾರಂಭ ಮಾಡಿದಾಗ ಆಳುವ ಪಕ್ಷದವರೇ ವಿದ್ಯಾರ್ಥಿಗಳ ಇನ್ನೊಂದು ಗುಂಪನ್ನು ಎತ್ತಿಕಟ್ಟಿ ಅವರವರಲ್ಲಿಯೇ ಇಲ್ಲದ ಕಲಹ ಉಂಟುಮಾಡಿಸಿದರು. ವಿದ್ಯಾರ್ಥಿಗಳ ಒಂದು ಗುಂಪನ್ನು ಕೆಡಿಸಲು ಇನ್ನೊಂದು ಗುಂಪಿಗೆ ಸರ್ಕಾರದವರೇ ಪ್ರೋತ್ಸಾಹ ಕೊಟ್ಟಿದ್ದಾರೆಂಬುದು ನನಗೆ ಮನವರಿಕೆಯಾಗಿದೆ. ಇದಕ್ಕೆ ಕಾರಣ ಹೇಳುವುದಾದರೆ, ಪೋಲೀಸರು ಒಂದು ಗುಂಪಿನವರ ಮಾತನ್ನು ಕೇಳಿಕೊಂಡು ಇನ್ನೊಂದು ಗುಂಪಿನವರನ್ನು ಅಟ್ಟಿಸಿಕೊಂಡು ಹೋಗಿ ಹೊಡೆದಿದ್ದಾರೆ. ಪೋಲೀಸರು ರೂಮಿಗೆ

(ಶ್ರೀ ಎ. ಕೆ. ಸುಬ್ಬಯ್ಯ)

ಸಂಗ್ಗ ವಿದ್ಯಾರ್ಥಿಗಳನ್ನು ಹೊಡೆಯುವುದಕ್ಕೆ ಒಂದು ಗುಂಪಿನ ವಿದ್ಯಾರ್ಥಿಗಳು ಸಹಕಾರ ನೀಡಿದ್ದಾರೆ. ಒಂದು ಗುಂಪಿನ ವಿದ್ಯಾರ್ಥಿಗಳು ಮುಷ್ಕರ ಪ್ರಾರಂಭ ಮಾಡಿದಾಗ ಅದನ್ನು ಶಾಂತ ಮಾಡುವ ಬದಲು ಸರ್ಕಾರದವರೇ ವಿದ್ಯಾರ್ಥಿಗಳ ಇನ್ನೊಂದು ಗುಂಪನ್ನು ಬಾಡಿಗೆಗೆ ಪಡೆದು, ಅವರಿಗೆ ಪ್ರಚೋದನೆ ಮಾಡಿ ಪಿತೂರಿ ನಡೆಸುವ ಕಾರ್ಯದಲ್ಲಿ ಸರ್ಕಾರದವರು ತೊಡಗಿದ್ದಾರೆ. ಆಳುವ ಪಕ್ಷದ ಗುಂಪುಗುಳಿತನದಿಂದಾಗಿ ಒಂದು ವರ್ಗದ ವಿದ್ಯಾರ್ಥಿಗಳು ಚಟ್ನಿಯಾಗಿದ್ದಾರೆ. ಕಲ್ಲಪ್ಪ ಗುಂಡಪ್ಪ ಜಗಳದಲ್ಲಿ ಒಂದು ಭಾಗದ ವಿದ್ಯಾರ್ಥಿಗಳು ಮೆಣಸಪ್ಪ ಆಗಿದ್ದಾರೆ. ಇನ್ನು ಮುಂದೆಯಾದರೂ ಕೂಡ ಸಮಾಜಕ್ಕೆ ಕಳಂಕವಾಗದ ರೀತಿಯಲ್ಲಿ, ಮುಂದಿನ ಭವಿಷ್ಯಕ್ಕೆ ಕುಠಾರ ಪ್ರಾಯವಾಗದ ರೀತಿಯಲ್ಲಿ ಸರ್ಕಾರದವರು ವರ್ತಿಸಬೇಕು. ಮತ್ತು ಇಂತಹ ಪರಿಸ್ಥಿತಿ ಬರದಂತೆ ನೋಡಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಒಳ್ಳೆಯ ಮಾರ್ಗದರ್ಶನ ನೀಡಬೇಕು. ಪೋಲೀಸರ ಕೆಲಸ ವನ್ನು ನಾನು ಉಗ್ರವಾಗಿ ಖಂಡಿಸುತ್ತೇನೆ. ನಿರಪರಾಧಿ ವಿದ್ಯಾರ್ಥಿಗಳಮೇಲೆ ಪೋಲೀಸರು ಕೋರ್ಟಿನಲ್ಲಿ ಕೇಸ್ ಹಾಕಿದ್ದಾರೆ. ಕೆಲವರನ್ನು ಹೊಡೆದಿದ್ದಾರೆ. ಸರ್ಕಾರದವರು ಅನ್-ಕಂಡೀಷನಲಿ ಆ ಕೇಸ್‌ಗಳನ್ನು ಕೂಡಲೇ ವಾಪಸ್ ತೆಗೆದುಕೊಳ್ಳಬೇಕು. ಅದರಂತೆ ವಿದ್ಯಾರ್ಥಿಗಳು ಕೂಡ ಮುಷ್ಕರವನ್ನು ವಾಪಸ್ ತೆಗೆದುಕೊಂಡು ಶಾಂತವಾದ ವಾತಾವರಣದಲ್ಲಿ ಸರ್ಕಾರದೊಡನೆ ಮಾತ ನಾಡಬೇಕು ಮತ್ತು ಕಾಲೇಜುಗಳಿಗೆ ಹೋಗಬೇಕು ಎಂದು ಅವರಿಗೂ ವಿನಂತಿ ಮಾಡಿಕೊಂಡು ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ಟಿ. ಶ್ರೀಕಂಠಯ್ಯ (ವಿಧಾನಸಭಾ ಕ್ಷೇತ್ರ).—ಸ್ವಾಮಿ, ನೆನ್ನೆಯಿಂದ ಇದು ವರೆಗೆ ಈ ವಿಚಾರದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಮತ್ತು ಮಾತನಾಡಿದ ಸದಸ್ಯರು ಸಾಕಷ್ಟು ಸಾಕ್ಷಿ ಸಾಹಿತ್ಯಗಳನ್ನು ಒದಗಿಸಿದ್ದಾರೆ. ಒಂದು ಮಾತನ್ನು ಹೇಳಬೇಕಾದರೆ, ಮಹಾತ್ಮಗಾಂಧಿಯವರ ಶತಮಾನೋತ್ಸವವನ್ನು ನೆರವೇರಿಸತಕ್ಕಂಥ ಈ ವರ್ಷದಲ್ಲಿ ಸರ್ಕಾರದವರು ಯಾರನ್ನೂ ಪ್ರಶ್ನೆ ಕೇಳಬೇಕಾಗಿಲ್ಲ. ನಿಮ್ಮ ಆತ್ಮಸಾಕ್ಷಿಯನ್ನು ಕೇಳಿಕೊಂಡರೆ ಸಾಕು. ವಿದ್ಯಾರ್ಥಿಗಳು ಎರಡು ವರ್ಷಗಳ ಹಿಂದೆ ಕೂಡ ಚಳುವಳಿ ಮಾಡಿದ್ದರು ಈಗಲೂ ಕೂಡ 19 ಪಾಯಿಂಟ್‌ಗಳ ಬಗ್ಗೆ ಚಳುವಳಿ ಮಾಡುತ್ತಿದ್ದಾರೆ. ಅವರು ಕೇಳಿರುವ ಪಾಯಿಂಟ್‌ಗಳಲ್ಲಿ ಸತ್ಯ ಇದೆಯೋ ಇಲ್ಲವೋ ಅನ್ನುವುದನ್ನು ತಾವೇ ತಮ್ಮ ಆತ್ಮಸಾಕ್ಷಿಯನ್ನು ಕೇಳಿಕೊಳ್ಳಿ. ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯ ಸಂಪಾದನೆ ಮಾಡುವಾಗ ಸರಕಾರ ಯಾವ ರೀತಿ ಇರಬೇಕು ಎಂದು ಆಶಿಸಿದ್ದರು ಎಂದರೆ ರಾಮರಾಜ್ಯದ ಒಂದು ಆದರ್ಶವನ್ನು ತರಬೇಕು ಎಂದು ಇದ್ದರು. ರಾಮಾಯಣದಲ್ಲಿ ನಮಗೆಲ್ಲ ತಿಳಿದಿರುವಂತೆ ಸೀತಾ ಮಾತೆಯ ಮೇಲೆ ಒಂದು ಕ್ಷುಲ್ಲಕವಾದ ಅಪವಾದ ಬಂದಕೂಡಲೇ ಶ್ರೀರಾಮನು ಆಕೆಯನ್ನು ಅಗ್ನಿ ಪರೀಕ್ಷೆಗೆ ಗುರಿಪಡಿಸಿ ಎಲ್ಲ ಜನರಿಗೂ ಹೇಗೆ ಪ್ರೀತಿಪಾತ್ರರಾದರು ಎನ್ನುವುದು ಎಲ್ಲರಿಗೂ ತಿಳಿದ ಅಂಶವಾಗಿದೆ. ಅಗ್ನಿಪರೀಕ್ಷೆಯಾದ ಮೇಲೆ ಶ್ರೀರಾಮ ಸೀತಾಮಾತೆಯನ್ನು ಕರೆದುಕೊಂಡರು. ಇದೇ ಆದರ್ಶವನ್ನೇ ಮಹಾತ್ಮ ಗಾಂಧಿಯವರು ಅನುಸರಿಸಬೇಕೆಂದು ಆಸೆ ಪಡುತ್ತಿದ್ದರು ಸರಕಾರ ಆತ್ಮಸಾಕ್ಷಿಯಿಂದ ಕೆಲಸ ಮಾಡಬೇಕು ಮತ್ತು ಇದನ್ನು ಅಕ್ಷರಶಃ ಪ್ರತಿಪಾದನೆ ಮಾಡಬೇಕು. ಇದಿಲ್ಲದೆ ಹೋದರೆ ನಿಮಗೆ ಅಧಿಕಾರ ಮಾಡಲಾಗುವುದಿಲ್ಲ. ಮಹಾಭಾರತದಲ್ಲಿ ಕುರುಕ್ಷೇತ್ರದಲ್ಲಿ ಏನಾಯಿತು ಎನ್ನುವುದನ್ನು ನೋಡಿ. ದ್ರೌಪದಿಯ ಮಾನಭಂಗವಾದಾಗ ಕೌರವರ ಪಕ್ಷದಲ್ಲಿದ್ದ ಭೀಷ್ಮ; ದ್ರೋಣಾದಿಗಳಿಗೆಲ್ಲ ಇದು ತಪ್ಪು ಎಂದು ಗೊತ್ತಿತ್ತು. ಆದರೆ ಅವರು ಕುರು ಸಾರ್ವಭೌಮನ ಆಶ್ರಯದಲ್ಲಿದ್ದವರು, ಅವರು ಸರಿಯಾಗಿ ಕೌರವನಿಗೆ ಬುದ್ಧಿ ಹೇಳಿದ್ದರೆ ರಕ್ತಪಾತವಾಗುವುದು ತಪ್ಪುತ್ತಿತ್ತು. ಅವರು ಹಾಗೆ ಮಾಡದೇ ಹೋದುದರಿಂದ ದುಶ್ಯಾಶನನು ಮಾಡಿದ ಮಾನಭಂಗದಿಂದಾಗಿ ಮುಂದೆ ಕುರುಕ್ಷೇತ್ರದಲ್ಲಿ ಯಾವ ರೀತಿಯ ರಕ್ತಪಾತವಾಯಿತು ಎನ್ನುವುದನ್ನು ನಮ್ಮ ಸರಕಾರದವರೂ ಮನಸ್ಸಿನಲ್ಲಿಟ್ಟುಕೊಂಡು ಯೋಚನೆ ಮಾಡಬೇಕು. ಇಲ್ಲಿ ಅನ್ಯಾಯಗಳಾಗುತ್ತಿವೆ ಎಂದು ಮನರಿಕೆಯಾಗಿರುವಾಗ ತಮಗೆ ಅಧಿಕಾರವಿಲ್ಲದಿದ್ದರೂ ನೀವು ಇಲ್ಲಿ ಅಗ್ನಿಪರಿಕ್ಷಗೆ ಒಂದು ಅವಕಾಶ ಮಾಡಿಕೊಡಬೇಕು. ಇದರಲ್ಲಿ ಏನೂ ತಪ್ಪಾಗುವುದಿಲ್ಲ. ಇದು ಜಾತೀಯವಾದದ ಪ್ರಶ್ನೆಯಲ್ಲ. ಜನತೆಯ ಪ್ರಶ್ನೆ, ಇವೊತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ವಾತವರಣ ಕಲುಷಿತವಾಗಿದೆ ಮತ್ತು ಇಲ್ಲಿನ ಅಧಿಕಾರವನ್ನು ಯಾವ ರೀತಿ ಪರಿಪಾಲಿಸಬೇಕೋ ಆ ರೀತಿ ಪಾಲಿಸುತ್ತಿಲ್ಲ ಎಂದು ಸರಕಾರದವರಿಗೆ ದೂರು ಬಂದಿದೆ. ಮಾನ್ಯ ವಿದ್ಯಾ ಸಚಿವರಾದ ಶ್ರೀಮಾನ್ ಶಂಕರ ಗೌಡರು ನಿಷ್ಠೆಗೆ ಹೆಸರಾದವರು ಮತ್ತು ಉನ್ನತವಾದ ವ್ಯಕ್ತಿಗಳ ಮಟ್ಟದಲ್ಲಿ ಹೆಸರು ಪಡೆದಿದ್ದಾರೆ. ಇದನ್ನು ಉಳಿಸಿಕೊಳ್ಳಬೇಕಾದರೆ ಇದರ ಬಗ್ಗೆ ಒಂದು ಎನಕ್ವೈರಿಮಾಡಿ ಎಂದು ಏನು ಕೇಳುತಿದ್ದಾರೆ ಅದನ್ನು ಮಾಡಿ. ಇದರಲ್ಲೇನೂ ಪ್ರಪಂಚ ಮುಳುಗಿಹೋಗುವುದಿಲ್ಲ. ಇದರಲ್ಲಿ ಉತ್ತೀರ್ಣರಾದರೆ

ನಿಮಗೇ ಒಳ್ಳೆಯ ಹೆಸರು ಬರುತ್ತದೆ. ಇದನ್ನು ಮಾಡದೇ ಇರುವುದರಿಂದ ಇಂದು ಇಷ್ಟು ವಾದ ವಿವಾದಗಳಿಗೆಲ್ಲಾ ಅವಕಾಶವಾಗಿದೆ. ಅದರಲ್ಲೂ ಪೋಲೀಸಿನವರು ಬಹಳ ಹದ್ದುಮೀರಿ ವರ್ತಿಸಿದ್ದಾರೆ. ಹಾಸ್ಟಲ ಒಳಗೆ ಇದ್ದ ಹುಡುಗರನ್ನು ಎಳೆದು ಹೊಡೆದಿದ್ದಾರೆ. ಮಲೇಶಿಯದಿಂದ ಒಬ್ಬ ಹುಡುಗ ಇಲ್ಲಿ ವ್ಯಾಸಂಗಕ್ಕಾಗಿ ಬಂದು ಹಾಸ್ಟೆಲ್ಲಿನಲ್ಲಿ ಸುಮ್ಮನೆ ಇದ್ದರೆ, ಅವನನ್ನು ಎಳೆದು ಹೊಡೆದಿದ್ದಾರೆ. ಇದನ್ನು ಯಾರೋ ಪ್ರಚೋದನೆ ಮಾಡಿ ಬೇಕೆಂತಲೇ ಮಾಡಿದ್ದಾರೆ ಎನ್ನುವುದು ಅಕ್ಷರಶಃ ನಿಜ. ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಸುಬ್ಬಯ್ಯನವರು ಹೇಳುವುದನ್ನು ನಾನೂ ಒಪ್ಪುತ್ತೇನೆ. ಇದರಲ್ಲಿ ಒಂದು ಪಂಗಡದವರನ್ನು ಪೋಲೀಸಿನವರು ಹಾಗೆ ಬಿಟ್ಟು ಅವರು ಹೇಳಿದಂತೆ ಕೇಳಿಕೊಂಡು ಇನ್ನೊಂದು ಪಂಗಡದವರನ್ನು ಬೇಕೆಂತಲೇ ಹೊಡೆದಿದ್ದಾರೆ. ಇದರಿಂದಾಗಿ ಪರಿಸ್ಥಿತಿ ವಿಕೋಪಕ್ಕೆ ತೆರಳಿ ಇಷ್ಟೆಲ್ಲಾ ಆಗಿದೆ. ಇದರಲ್ಲಿ ನಿಮ್ಮ ಮಕ್ಕಳೇ ಆಗಲೀ ಇಲ್ಲವೇ ಬೇರೆ ಯಾರ ಮಕ್ಕಳೇ ಆಗಲೀ ಅವರನ್ನು ಹೆತ್ತ ತಂದೆ ತಾಯಿಗಳಿಗೆ ವಿನಾಕಾರಣ ತಮ್ಮ ಮಕ್ಕಳನ್ನು ಹೊಡೆದರು ಎಂದು ಕೇಳಿದಾಕ್ಷಣ ಕೋಪ ಬರುತ್ತದೆ. ಅದಕ್ಕೆ ಆಗ ಅವರು ಯಾರು ಹೊಡೆದರೋ ಅವರನ್ನು ಪೂರ್ತಿ ಮಟ್ಟ ಹಾಕಬೇಕು ಎಂದು ಹೋಗುತ್ತಾರೆ ಮತ್ತು ಇದರಿಂದ ಪರಿಸ್ಥಿತಿ ಹದಗೆಡುತ್ತದೆ. ಇದಕ್ಕಾಗಿ ನಾನು ಸರಕಾರದವರಲ್ಲಿ ಪ್ರಾರ್ಥನೆ ಮಾಡುವುದು ಇದರ ಬಗ್ಗೆ ಒಂದು ತನಿಕೆ ಮಾಡಿ. ಒಬ್ಬ ಅಧಿಕಾರಿಯ ಮೇಲೆ ಇಷ್ಟೊಂದು ಆಕ್ಷೇಪಣೆಗಳು ಬಂದಿರುವಾಗ, ಸರಕಾರ ಎಷ್ಟೋ ಕಡೆಗಳಲ್ಲಿ ಯಾವುದಾದರೂ ದೂರು ಬಂದ ಕೂಡಲೇ ಒಂದೇ ನಿಮಿಷದಲ್ಲಿ ನಿಮ್ಮ ಅಧಿಕಾರಿಗಳನ್ನು ಟ್ರಾನ್ಸಫರು ಮಾಡಿರುವ ಸಂದರ್ಭಗಳು ಎಷ್ಟೋ ಇವೆ. ಹಾಗೆ ಇದರಲ್ಲೂ ಕೂಡ ಒಬ್ಬ ವ್ಯಕ್ತಿಯ ಮೇಲೆ ದೂರುಗಳು ಬರುವಾಗ ಅವರನ್ನು ಟ್ರಾನ್ಸಫರು ಮಾಡಿದರೆ ಅದರಿಂದೇನೂ ಆಗುವುದಿಲ್ಲ. ಆ ರೀತಿ ಮಾಡಿದರೆ ತಾವು ಅವರ ಮೇಲೆ ಶಿಕ್ಷೆ ಮಾಡಿದಂತಾಗುವುದಿಲ್ಲ. ಇದು ಒಂದು ಸುಲಭವಾಗಿ ಪರಿಹಾರವಾಗುವ ಪರಿಸ್ಥಿತಿ. ಇದರಲ್ಲಿ ಯಾವುದೋ ಒಂದು ರೀತಿಯ ಹಠದ ಭಾವನೆ ಇಟ್ಟುಕೊಂಡು ಒಂದು ಪ್ರತಿಷ್ಠೆಯ ಮೇಲೆ ವರ್ತಿಸುವುದು ಬೇಡ. ದೇಶದ ಹಿತದೃಷ್ಟಿಯಿಂದ ನಿಮ್ಮ ಆತ್ಮಸಾಕ್ಷಿಯಾಗಿ ನಡೆದುಕೊಂಡು ಸರಕಾರ ಒಂದು ಎನಕ್ವೈರಿ ಕಮಿಟಿ ಮಾಡಿ ಇದರಲ್ಲಿ ಏನೇನು ಆರೋಪಗಳು ಬಂದಿವೆ ಅದನ್ನು ಆ ಕಮಿಟಿಗೆ ಒಪ್ಪಿಸಿ ಬಿಡಿ. ಅವರು ಪರಿಹಾರಗಳನ್ನು ಸೂಚಿಸಬಹುದು ಎಂದು ನಾನು ಇಲ್ಲಿ ಮತ್ತೊಮ್ಮೆ ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ವೈ. ಎಸ್. ಪಾಟೀಲ್ (ಪದವೀಧರರ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಇದರ ಬಗ್ಗೆ ಹೆಚ್ಚಿಗೆ ಹೇಳಬಯಸುವುದಿಲ್ಲ. ಇದರ ಬಗ್ಗೆ ಎಲ್ಲರೂ ಈಗಾಗಲೇ ಅನೇಕ ವಿವರಗಳನ್ನು ತಿಳಿಸಿದ್ದಾರೆ. ಇಂತಹ ಪ್ರಸಂಗ ಏಕೆ ಆಯಿತು ಮತ್ತು ಇದರಿಂದೇನಾಯಿತು ಎನ್ನುವುದನ್ನು ಸರಿಯಾಗಿ ವಿಚಾರ ಮಾಡಬೇಕು. ಇಂತಹ ಪ್ರಸಂಗಗಳ ಪ್ರ ಯೊಂದು ಕಡೆಯಲ್ಲೂ ನಡೆಯುತ್ತಿವೆ. ಇಂದು ವಿದ್ಯಾರ್ಥಿಗಳು ಮುಷ್ಕರ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳ ಚಳುವಳಿಗೆ ಕಾರಣ ಏನು ಎನ್ನುವುದನ್ನು ಸರಿಯಾಗಿ ಅರಿಯಬೇಕು, ಇಲ್ಲಿರುವ ಒಬ್ಬರು ಅಧಿಕಾರಿಗಳನ್ನು ಬೇರೆ ಕಡೆಗೆ ಕಳುಹಿಸಕೆಬೇಂದು ಕೇಳುತ್ತಿದ್ದಾರೆ. ಇದನ್ನು ಸರಕಾರ ಚೆನ್ನಾಗಿ ಅರಿತು ಬೇರೆ ಕಡೆಗೆ ಅವರನ್ನು ಕಳುಹಿಸಿದ್ದರೆ ಇಂತಹ ಒಂದು ಪ್ರಶ್ನೆ ಇಲ್ಲಿ ಬರುತ್ತಿರಲಿಲ್ಲ. ಇಂತಹ ವಾತಾವರಣದಲ್ಲಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು ವಿದ್ಯಾರ್ಥಿಗಳಿಗೆ ಸರಿಯಾಗಿ ತಿಳಿಯುವಂತೆ ಹೇಳಬೇಕಾಗಿತ್ತು. ಎರಡನೆಯದಾಗಿ, ವಿದ್ಯಾರ್ಥಿಗಳಲ್ಲಿ ನನ್ನದೊಂದು ವಿನಂತಿ. ಇಂತಹ ವಾತಾವರ್ಣದಲ್ಲಿ ವಿದ್ಯಾರ್ಥಿಗಳು ತಾವು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ತಮ್ಮ ಸಮಸ್ಯೆಗಳನ್ನು ಕೂಲಂಕಷವಾಗಿ ಚರ್ಚಿಸಿ ತಮ್ಮ ಕುಂದುಕೊರತೆಗಳನ್ನು ಬಗೆಹರಿಸಬಹುದಾಗಿತ್ತು. ಮತ್ತು ವಿದ್ಯಾರ್ಥಿಗಳು ತಮ್ಮ ಮುಷ್ಕರವನ್ನು ಮಾಡಬೇಕೆಂದರೆ ಅದನ್ನು ಶಾಂತಿಯಾಗಿ ಮಾಡಬೇಕು ಎಂದು ಅವರಲ್ಲಿ ಕಳಕಳಿಯಿಂದ ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

† Smt. M R. LAKSHAMMA (Graduates' Constituency).—Mr. Chairman Sir, first of all I would like to say a few words about the so-called police excesses. As a mother, I had been to see Sri Gangaraj who was on fast. I have made enquiries about the police excesses. I do feel sorry that this young man Gangaraj had been on a fast though an assurance was given that the matter would be solved. I was very sorry to hear that a number of boys who were residing in the University Hostel building where beaten by the Police. Though one of the Officers of the Police Department was shouting that the boys should not be beaten,

(SMT. M. R. LAKSHAMMA)

the boys were beaten by the subordinate police people. The boys were beaten even in the Police vans. I do not agree with the view that one group has charged the police that they have beaten only one group of the students. The boys of all groups have been beaten by the Police. For example, the boys of Sri C. R. Basappa, the congressman and the boy of Sri Keshava Murthy, a non-congressman were beaten. There fore, the rumour that only one group of boys is beaten is not correct. Here we must remember the appeal of the Prime Minister that the law and order authorities should use maximum restraint in dealing with children. I appeal to the Police that this appeal should be followed word to word.

I do not want to go in detail into the nineteen Charges because all these charges have been dealt with by various Hon. Speakers here. There is only one thing about which I have got a doubt. I do not know how the students have come to know about the administrative details, administrative orders and administrative regulations. Take for instance charge No. 7. It is like this :

> " .. The Government raised objection against the sanction of such advance increments. The Registrar made requests to the Government repeatedly to drop the objection in the case of a Reader in the Department of Economics. In some cases the salary is not only protected but also increments above it are sanctioned, in other cases, it is not so, why ?"

how is it that the students got all these details? Even the correspondence and the details about it are known to the students.

Unless the proceedings of the Syndicate are made available to the students, they would not know about it. My feeling is, that there is an unseen hand behind this and there are political elements behind this movement. I would have been very glad had Sri Gangaraj asked for other facilities, like sports facilities, laboratory facilities, library facilities or canteen facilities. There is not a single word in this document about these matters. All the fuss is made about the matter of appointments, promotions and other things which are strictly within the domain of the Board of Appointments. I am not going to accuse the students of their being very vehement about it. I feel that they have been misled. And I would like the agency, whichever it is appointed to go into this affair to look into this matter. I am not a judge. The facts that have been set forth in these papers are not facts which would enable us to pronounce a judgement. There must be other facts and without knowing those facts in full, we would be wrong in forming the judgement. I am speaking for myself. That person who will be entitled to enquire into this, let him do so. I welcome the enquiry. I wish it was pronounced earlier. May I go a step further and say I wish it was pronounced earlier. I am not going to pronounce any judgements because facts in their entirety are not before us.

One other thing I would like to say. We are claiming autonomy about the University. In regard to these appointments, the Board of Appointments is there. Finally, there is the Syndicate which has got to ratify. We have got to give very serious thought to our student community. They are very frustrated. A large majority of them go out of the B.Sc. and B.A. and they do not get jobs. Naturally they are in a very frustrated mood. Therefore, we see student unrest. I do not want to take much time because I am already transgressing the limits of time given to me. I feel the time has arrived when we have to make a thorough study of the causes of this frustration to see how best we can solve this problem of over-crowding, unemployment and inadequate library facilities. These points are contained in this book. I can submit this book for perusal. This book is published by the Institute of Constitutional and Parliamentary Studies and deals with student unrest. They have also given very valuable suggestions in regard to all the measures which are to be undertaken in respect of students and their welfare. There was a suggestion made by the Vice-Chancellors to the University Grant Commission Chairman, Dr. Kothari that students council should be formed and students grievances should be heard, so that ultimately the students may be elected to the University bodies like the Senate and the Syndicate. There was a suggestion made by Dr.Gokak that Students Council should be constituted and students should be given certain facilities. And I should say that Dr. Gokak was the First Vice Chancellor to give recognition to the Students Council and he says that the students voice should prevail. A begining has been made. Unfortunately, we have got into a muddle and several unhappy instances have taken place. It is very necessary at this juncture, I appeal to all the political parties to enter into a gentleman's agreement to withdraw if they have had any sort of connection with the students. Let us try, all of us including myself, to see that students are given a fair deal. They are given all the amenities, all the facilities that are possible. In the enquiry that is going to be held, I am sure truth will come out.

Sir, I thank you the Members of the opposition and my own Party for having given me this opportunity.

SRI D. RAJAGOPAL.—The whole point of bringing forward this motion was that there should be dispassionate approach to the entire problem. Politics either from the students' point or from the University authorities' point of view should not be brought into it. We should all see how best students should get proper education and what best education they can get, whether they are getting it or not. But much to my disappointment all sorts of political and communal considerations have come into the discussion. That is why I request the Hon. Minister to confine himself only to matters relating to students and their welfare.

ಶ್ರೀ ಕೆ. ವಿ. ಶಂಕರಗೌಡ (ವಿದ್ಯಾ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ನಾನು ಒಪ್ಪಿಕೊಂಡಾಗ ಈ ಚರ್ಚೆ ಈ ರೀತಿ ನಡೆಯುತ್ತದೆ ಎಂದು ನಾನು ಭಾವಿಸಿಕೊಂಡಿರಲಿಲ್ಲ. ಇದಕ್ಕಿಂತಲೂ ಹೆಚ್ಚಿನ

(ಶ್ರೀ ಕೆ. ವಿ. ಶಂಕರಗೌಡ)

ಮಟ್ಟದಲ್ಲಿ ಚರ್ಚೆ ಆಗಬಹುದು ಎಂದು ನಾನು ನಿರೀಕ್ಷಿಸಿದ್ದೆ. ಈ ಒಂದು ರೀತಿಯಲ್ಲಿ ನನಗೆ ಆಶಾ ಭಂಗವಾಗಿದೆ. ಇದನ್ನು ಚರ್ಚೆ ಮಾಡುವಾಗ ಯೂನಿವರ್ಸಿಟಿ ಆಂತರಿಕ ವಿದ್ಯಮಾನಗಳ ಬಗ್ಗೆ ಕೈ ಹಾಕುವುದಿಲ್ಲ ಎಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಅನೇಕ ಮಾನ್ಯ ಸದಸ್ಯರು ನಮ್ಮ ಮುಂದೆ ಪೂರ್ಣವಾದ ವಿವರಗಳು ಇಲ್ಲದೇ ಇರತಕ್ಕಂಥ ಕೆಲವು ಆಂತರಿಕವಾದ ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ಇದು ದುರದೃಷ್ಟಕರ. ಈ ಒಂದು ಮಾತು ಮಾತ್ರ ಈ ಸಭೆಯಲ್ಲಿ ಹೇಳು ತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಡಿ. ರಾಜಗೋಪಾಲ್‌ರವರು ತಮ್ಮ ನಿಲುವನ್ನು ಸಮರ್ಥನೀಯವಾಗಿ ಇಟ್ಟಿದ್ದಾರೆ. ಆದರೆ ಒಂದು ರೀತಿಯಲ್ಲಿ ಅವರು ಗೊಂದಲದಲ್ಲಿ ಸಿಕ್ಕಿಹಾಕಿಕೊಂಡಿ ದ್ದಾರೆ ಎಂದು ಹೇಳದೆ ಗತ್ಯಂತರವಿಲ್ಲ. ಅವರು ಮೊದಲು ಎತ್ತಿದಂಥ ವಿಷಯ, ಉಪಕುಲಪತಿಗಳು ಗಂಗರಾಜ್ ಅವರನ್ನು ಕರೆಸಿ ಒಂದು ಹೇಳಿಕೆಗೆ ಸಹಿ ಹಾಕಿಸಿಕೊಂಡರು ಅದು ಅವರ ಯೋಗ್ಯತೆಗೆ ಸರಿಯಾಗಿದೆಯೇ ಎಂದು ಪ್ರಶ್ನೆ ಮಾಡಿದರು. ಮೊದಲು ಬಂದಂಥ ಹೇಳಿಕೆಯಲ್ಲಿ ಕೆಲವು ಅವಹೇಳನ ಕರವಾದ ವಿಷಯಗಳು ಬಂದುದರಿಂದ ಗಂಗರಾಜ್ ಅವರ ಹಿತಕ್ಕಾಗಿ ಉಪಕುಲಪತಿಗಳು ಅವರನ್ನು ಕರೆಸಿ ಕೇಳಿದರು, ಆಗ ಹೇಳಿಕೆಗೆ ಒತ್ತಾಯವಾಗಿ ಸಹಿ ಹಾಕಿಸಿಕೊಂಡರು ಎಂದು ಗಂಗರಾಜ್ ಅವರು ಹೇಳುತ್ತಾರೆ, ಇದರಲ್ಲಿ ಏನು ತಪ್ಪಿದೆಯೋ ನನಗೆ ಅರ್ಥವಾಗುತ್ತಿಲ್ಲ. ಈ ರೀತಿ ಮಾಡಿದ್ದು ತಪ್ಪು ಎಂದು ಶ್ರೀ ರಾಜಗೋಪಾಲ್ ಅವರು ಆಪಾದಿಸಿದ್ದಾರೆ.

7-30 P.M.

ಇನ್ನೂ ಮುಂದೆ ಹೋಗಿ ವಿದ್ಯಾರ್ಥಿಗಳು ಕೊಟ್ಟಿರತಕ್ಕ 19 ವಿಷಯಗಳ ಬಗ್ಗೆ, ವಿಶ್ವ ವಿದ್ಯಾಲಯದವರು ಕೊಟ್ಟಿರತಕ್ಕ ಉತ್ತರದ ಬಗ್ಗೆ ಸುದೀರ್ಘವಾಗಿ ಪ್ರಸ್ತಾಪ ಮಾಡಿದ್ದಾರೆ. ಅನೇಕ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ಹೇಳಿರತಕ್ಕದು ಮೇಲನೋಟಕ್ಕೆ ಹುಚ್ಚು ಮಾತು ಎಂದು ಕಾಣಿಸುತ್ತದೆ ಎಂದು ಸೂಚನೆ ಮಾಡಿದ್ದಾರೆ. ಆದರೆ ಆ ವಿಷಯಗಳನ್ನು ಅಷ್ಟು ದೀರ್ಘವಾಗಿ ಪ್ರಸ್ತಾಪ ಮಾಡಬಾರದಾಗಿತ್ತು ಎಂದು ನನ್ನ ಭಾವನೆ. ಅದೆಲ್ಲವೂ ವಿಶ್ವವಿದ್ಯಾಲಯದ ಆಂತರಿಕ ವ್ಯವಹಾರಗಳಿಗೆ ಸಂಬಂಧಪಟ್ಟಂಥ ವಿಷಯಗಳು. ಏನೇನು ವಿಷಯಗಳು ನಡೆದಿವೆ ಎನ್ನುವುದು ಪೂರ್ಣವಾಗಿ ನಮ್ಮ ಮುಂದೆ ಇಲ್ಲ. ವಿದ್ಯಾರ್ಥಿಗಳು ಆಪಾದನೆ ಮಾಡಿದ್ದು ನಿಜ, ವಿಶ್ವವಿದ್ಯಾ ಲಯದವರು ಕೆಲವು ವಿವರಗಳನ್ನು ಕೊಟ್ಟಿರುವುದೂ ನಿಜ. ಆದರೆ ಆಪಾದನೆಗಳಲ್ಲಾಗಲೀ, ವಿವ ರಣೆಗಳಲ್ಲಾಗಲೀ, ವಿಶ್ವವಿದ್ಯಾಲಯದ ಮುಂದೆ ಇರತಕ್ಕ ಎಲ್ಲ ವಿಷಯಗಳೂ ಅಲ್ಲಿ ಅಡಕವಾಗಿಲ್ಲ. ಕೆಲವು ವಿಷಯಗಳನ್ನು ವಿಶ್ವವಿದ್ಯಾಲಯದವರು ಕೊಟ್ಟಿರತಕ್ಕ ವಿವರಣೆಯಲ್ಲಿ ಉಲ್ಲೇಖಿಸಿರಬಹುದು. ಆದರೆ ಒಬ್ಬ ಮನುಷ್ಯನಿಗೆ ಒಂದು ಹುದ್ದೆಯನ್ನು ಕೊಡುವಾಗ ಏನೇನು ನಡೆಯಿತು ಎನ್ನುವ ವಿವರಗಳು ಅದರಲ್ಲಿ ಇರುವುದಿಲ್ಲ. ವಿಶ್ವವಿದ್ಯಾಲಯದ ನಿಯಮಗಳ ಪ್ರಕಾರ ಒಬ್ಬ ಅಧಿಕಾರಿ ಯನ್ನು ನೇಮಿಸತಕ್ಕ ಸಂಪೂರ್ಣ ಅಧಿಕಾರ ಕೊನೆಯದಾಗಿ ಸಿಂಡಿಕೇಟಿಗೆ ಇದ್ದರೂ ಕೂಡ ಅವರು ಒಂದು ಸತ್ಸಂಪ್ರದಾಯವನ್ನು ಅನುಸರಿಸಿಕೊಂಡು ಬಂದಿದ್ದಾರೆ. ಆ ಸತ್ಸಂಪ್ರದಾಯವೇನೆಂದರೆ ಬೋರ್ಡ್ ಆಪ್ ಅಪಾಯಿಂಟ್‌ಮೆಂಟ್ಸ್‌ನವರು ಏನು ಸಿಫಾರಸು ಮಾಡುತ್ತಾರೆ, ಅದನ್ನು ಸಾಮಾ ನ್ಯವಾಗಿ ಒಪ್ಪಿಕೊಳ್ಳಬೇಕು ಎನ್ನುವ ನಿಯಮ. ಪ್ರತಿಯೊಂದು ಅಪಾಯಿಂಟ್‌ಮೆಂಟಿನಲ್ಲಿಯೂ ಕೂಡ ಬೋರ್ಡ್ ಆಪ್ ಅಪಾಯಿಂಟ್‌ಮೆಂಟ್‌ನವರು ಏನು ಸಿಫಾರಸು ಮಾಡಿದ್ದಾರೆ ಅದನ್ನು ವಿಶ್ವ ವಿದ್ಯಾಲಯದ ಸಿಂಡಿಕೇಟ್ ಒಪ್ಪಿಕೊಳ್ಳುತ್ತ ಬಂದಿದೆ. ಇದು ತಪ್ಪು ಎಂದು ಹೇಳುವುದಾದರೆ ಇದಕ್ಕೆ ಏನು ಹೇಳಬೇಕೋ ನನಗೆ ಅರ್ಥವಾಗುತ್ತಿಲ್ಲ? ಹಾಗೆ ಮಾಡದೆ, ಬೋರ್ಡ್ ಆಪ್ ಅಪಾಯಿಂಟ್‌ ಮೆಂಟ್ಸ್ ಏನು ರೆಕಮೆಂಡ್ ಮಾಡಿರುತ್ತಾರೆ ಅದನ್ನು ಮಾಡದೆ, ಸಿಂಡಿಕೇಟಿನವರು ಅಪಾಯಿಂಟ್ ಮಾಡುವುದಕ್ಕೆ ಹೊರಟರೆ, ಆ ಸಬ್ಜೆಕ್ಟ್ ವಿಷಯದ ತಜ್ಞರಿಗೆ ಅಲ್ಲಿ ಅವಕಾಶ ಸಿಕ್ಕುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ವಿಶ್ವವಿದ್ಯಾಲಯದ ಸಿಂಡಿಕೇಟಿನಲ್ಲಿರುವವರೆಲ್ಲರೂ ಶಿಕ್ಷಣ ತಜ್ಞರಿದ್ದಾರೆ ಎಂದು ಹೇಳುವುದಕ್ಕಾಗುವುದಿಲ್ಲ ಮತ್ತು ಆಯಾ ವಿಷಯದಲ್ಲಿ ಪಾಂಡಿತ್ಯವನ್ನು ಪಡೆದವರಿರುತ್ತಾ ರೆಂದು ಹೇಳುವುದಕ್ಕಾಗುವುದಿಲ್ಲ. ಅಲ್ಲದೆ ಅವರು ಹುದ್ದೆಗೆ ಬರುವವರಿಗೆ ಇಂಟರ್‌ವ್ಯು ಮಾಡುವವ ರಲ್ಲ. ಈ ಬೋರ್ಡ್ ಇಂಟರ್‌ವ್ಯು ಮಾಡುವಾಗ ಏನೇನು ಪೇಪರ್ಸ್ ಪಬ್ಲಿಷ್ ಮಾಡಿದ್ದಾರೆ, ಏನೇನು ಪುಸ್ತಕಗಳನ್ನು ಬರೆದಿದ್ದಾರೆ, ಈ ಎಲ್ಲ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಂಡು ಸಿಫಾರಸು ಮಾಡುತ್ತದೆ. ಮತ್ತೆ ಈ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ಸ್‌ನಲ್ಲಿರುವವರು ಯಾರು? ರಾಷ್ಟ್ರದ ವಿವಿಧ ಭಾಗಗಳಿಂದ ಬಂದಿರತಕ್ಕ ಜನ. ಅವರಿಗೆ ಇನ್‌ಫ್ಲುಯೆನ್ಸ್ ಮಾಡಿ ಸಿಫಾರಸು ಮಾಡುವ ಹಾಗೆ ಮಾಡುತ್ತಾರೆ ಎಂದು ಕೆಲವು ಜನ ಆಪಾದನೆ ಮಾಡಿದ್ದಾರೆ. ಇದು

ಫಾರ್‌ಫೇಜ್ ವಿಷಯ ಎಂದು ಹೇಳುವ ಹಾಗೆ ಇದೆ. ಎಲ್ಲರನ್ನೂ ಇನ್‌ಫ್ಲುಯನ್ಸ್ ಮಾಡಿ ಅಪಾಯಿಂಟ್‌ಮೆಂಟ್ಸು ಮಾಡಿಸುವುದಕ್ಕಾಗುವುದಿಲ್ಲ. ಬರುವವರೆಲ್ಲ ಇನ್‌ಫ್ಲುಯೆನ್ಸ್‌ಗೆ ಜಗ್ಗುತ್ತಾರೆಂದೂ ಹೇಳುವುದಕ್ಕಾಗುವುದಿಲ್ಲ. ಹೀಗೆ ಹೇಳಿದರೆ ಅವರಿಗೆ ಆವಮಾನ ಮಾಡಿದಹಾಗೆ ಆಗುತ್ತದೆ. ಎಲ್ಲ ವಿಷಯಗಳನ್ನೂ ಕೂಲಂಕಷವಾಗಿ ವಿಚಾರ ಮಾಡಿ, ಇಂಟರ್‌ವ್ಯೂ ಮಾಡಿ ಬೋರ್ಡಿನವರು ಸಿಫಾರಸು ಮಾಡುತ್ತಾರೆ. ಆ ಸಿಫಾರಸಿಗೆ ಅನುಗುಣವಾಗಿ ಬಹುತೇಕ ಎಲ್ಲ ಸಂದರ್ಭಗಳಲ್ಲಿಯೂ ಸಿಂಡಿಕೇಟಿನವರು ಅದನ್ನು ಅನುಸರಿಸಿಕೊಂಡು ಬಂದಿದ್ದಾರೆ. ಅದಕ್ಕೆ ಅವರಿಗೆ ಶಹಭಾಸಗಿರಿ ಕೊಡಬೇಕೇ ಹೊರತು ಅವರು ಮಾಡಿರುವುದು ತಪ್ಪು ಎಂದು ಹೇಳುವುದು ಸರ್ವಥಾ ಸರಿಯಲ್ಲ ಎಂದು ನನ್ನ ಭಾವನೆ, ವಿಶ್ವವಿದ್ಯಾಲಯದವರು ಒಂದು ಸಂಪ್ರದಾಯವನ್ನು ಆನುಸರಿಸಿಕೊಂಡು ಬಂದಿದ್ದಾರೆ. ಅದೇನೆಂದರೆ ಬೋರ್ಡ್ ಆವ್ ಅಪಾಯಿಂಟ್‌ಮೆಂಟ್ಸ್ ಏನು ಸಿಫಾರಸು ಮಾಡುತ್ತಾರೆಯೋ ಅದರಂತೆ ನಡೆದುಕೊಂಡು ಹೋಗತಕ್ಕದು. ಹೀಗೆ ಮಾಡುವಾಗ ಒಂದೊಂದು ಕೇಸಿನಲ್ಲ ಒಂದೊಂದು ರೀತಿಯ ನೀತಿಯನ್ನು ಪಾಲಿಸಿಕೊಂಡು ಬಂದಿದ್ದಾರೆ ಎಂದು ಶ್ರೀ ಡಿ. ರಾಜಗೋಪಾಲ್ ಅವರು ಸೂಚಿಸಿದರು. ಇದು ಮೇಲನೋಟಕ್ಕೆ ಒಪ್ಪತಕ್ಕ ಸೂಚನೆಯಾಗಿ ಕಾಣುತ್ತದೆ. ದೀರ್ಘವಾಗಿ ಯೋಚನೆ ಮಾಡಿ ನೋಡಿದರೆ ಸರಿಯಾಗಿ ಕಾಣಿಸುವುದಿಲ್ಲ. ಪ್ರತಿಯೊಂದು ಹುದ್ದೆಗೂ ಕೂಡ ಇಂಥದೇ ನಿಯಮವಿರಬೇಕು ಎಂದು ಹೇಳುವುದಕ್ಕಾಗುವುದಿಲ್ಲ. ಆ ಹುದ್ದೆಗೆ ಇಂಟರ್‌ವ್ಯೂಗೆ ಬರುವವರ ಅರ್ಹತೆ, ಪ್ರಾವೀಣ್ಯತೆ ಇದನ್ನೆಲ್ಲ ಅನುಸರಿಸಿಕೊಂಡು ಕೆಲವು ವೇಳೆ 10 ವರ್ಷ ಉಪಾಧ್ಯಾಯರಾಗಿರುವವರು ರೀಡರ್, ಪ್ರೊಫೆಸರ್ ಆಗಬಹುದು; 20 ವರ್ಷ ಸರ್ವಿಸ್ ಆಗಿದ್ದರೂ ಕೂಡ ರೀಡರ್ ಆಗುವುದಕ್ಕೆ, ಪ್ರೊಫೆಸರ್ ಆಗುವುದಕ್ಕೆ ಅರ್ಹತೆ ಇಲ್ಲದೆ ಇರಬಹುದು. ಈ ರೀತಿ ಇಂಟರ್‌ವ್ಯೂನಲ್ಲಿ ಇವೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಬೋರ್ಡ್ ಆವ್ ಅಪಾಯಿಂಟ್‌ಮೆಂಟ್ಸ್‌ನವರು ಒಂದೊಂದು ಕೇಸಿನಲ್ಲಿ ಒಂದೊಂದು ರೀತಿಯಲ್ಲಿ ತೀರ್ಮಾನ ಮಾಡಿದರೆ ಅವರು ಯಾವ ಸ್ಟ್ಯಾಂಡರ್ಡ್‌ನಿಂದ ಹಾಗೆ ಮಾಡಿದರು ಎಂದು ಹೇಳಲು ನಮಗೆ ಗೊತ್ತಾಗುವುದಿಲ್ಲ; ಅವರು ಹಾಗೆ ಮಾಡುವುದಕ್ಕೆ ಆಗುವುದೂ ಇಲ್ಲ. ಪ್ರತಿಯೊಂದು ಕೇಸಿನ ವಿದ್ಯಮಾನಗಳೂ ಬೇರೆ ಬೇರೆ ಇರುವುದರಿಂದ ಅದಕ್ಕೆ ಅನುಸಾರವಾಗಿ ಹುದ್ದೆಗಳನ್ನು ಭರ್ತಿ ಮಾಡಿಕೊಂಡು ಬಂದಿದ್ದಾರೆ.

ವಿಶ್ವವಿದ್ಯಾಲಯದವರು ಕೊಟ್ಟಿರತಕ್ಕ ವಿವರಣೆಗಳೇನಿವೆ ಅದರ ಜೊತೆಗೆ ಇನ್ನೂ ಅನೇಕ ವಿವರಣೆಗಳನ್ನು ನಾನು ಪಡೆದುಕೊಂಡಿದ್ದೇನೆ. ಅವರು ಮಾಡಿರತಕ್ಕ ಅಪಾದನೆಗಳನ್ನು ಕೂಲಂಕಷವಾಗಿ ನಾನು ನಿಷ್ಪಾಕ್ಷಿಕವಾಗಿ, ನಿಷ್ಪಕ್ಷಪಾತವಾಗಿ ವಿಚಾರ ಮಾಡಿದ್ದೇನೆ. ಈ ಸಂದರ್ಭದಲ್ಲಿ ಯಾರನ್ನಾದರೂ ಬೆನ್ನಿಗೆ ಹಾಕಿಕೊಂಡು ರಕ್ಷಿಸಬೇಕೆಂಬ ಆಸೆ ನನಗೆ ಖಂಡಿತವಾಗಿ ಇಲ್ಲ. ಆತ್ಮಸಾಕ್ಷಿಯಾಗಿ ಕೆಲಸ ಮಾಡಿ ಎಂದು ಶ್ರೀ ಮಾನ್ ಶ್ರೀಕಂಠಯ್ಯನವರು ಅಪ್ಪಣೆ ಕೊಡಿಸಿದರು. ಸ್ವಲ್ಪಮಟ್ಟಿಗೆ ಆತ್ಮಸಾಕ್ಷಿಯಾಗಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳುವುದಕ್ಕೆ ಹೆಮ್ಮೆ ಪಡುತ್ತೇನೆ. ನಾನು ಆತ್ಮಸಾಕ್ಷಿಗೆ ವಿರೋಧವಾಗಿ ಕೆಲಸ ಮಾಡತಕ್ಕ ಹೆಡ್ಡನಲ್ಲ. ಯಾರನ್ನಾದರೂ ರಕ್ಷಿಸಬೇಕೆಂಬ ಉದ್ದೇಶ ನನಗಿಲ್ಲ. ಯಾರಾದರೂ ತಪ್ಪು ಮಾಡಿದ್ದರೆ ಅವರನ್ನು ಶಿಕ್ಷಿಸುವುದರಲ್ಲಿ ನಾನು ಮೊಟ್ಟಮೊದಲನೆಯವನಾಗುತ್ತೇನೆ ಎಂಬ ಆಶ್ವಾಸನೆಯನ್ನು ಕೊಡುತ್ತೇನೆ. ನಾನು ಎಲ್ಲ ವಿಷಯಗಳನ್ನೂ ತರಿಸಿಕೊಂಡು ವಿಚಾರ ಮಾಡಿದೆ. ಆದರೂ ಇದರಲ್ಲಿ ಬಂದಿರತಕ್ಕ ಸಂದೇಹವನ್ನು ನಿವಾರಣೆ ಮಾಡಬೇಕೆಂಬ ಸದುದ್ದೇಶದಿಂದ ವಿಶ್ವವಿದ್ಯಾಲಯದ ಪ್ರತಿಷ್ಠೆಗೆ, ಗೌರವಕ್ಕೆ ಕುಂದು ಬಂದರೂ ಚಿಂತೆ ಇಲ್ಲ, ನನ್ನ ಕಾರ್ಯ ದಕ್ಷತೆಗೆ ಕುಂದು ಬಂದರೂ ಚಿಂತೆ ಇಲ್ಲ ಎಂದು ಯೋಚನೆ ಮಾಡಿ ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್ನಿಗೆ ವಿಚಾರಣೆಗಾಗಿ ವಹಿಸಬೇಕೆಂದು ಕೂಡ ತೀರ್ಮಾನ ಮಾಡಿದ್ದೇನೆ. ಈ ನಿರ್ಧಾರ ಸಾಮಾನ್ಯವಾದ ನಿರ್ಧಾರವಲ್ಲ. ಅದನ್ನು ಮಾನ್ಯ ಸಭಾಸದಸ್ಯರು ಶ್ಲಾಘಿಸಬೇಕೆಂದು ನಾನು ನಿರೀಕ್ಷಣೆ ಮಾಡಿರುತ್ತೇನೆ. ಈ ತರಹ ತೀರ್ಮಾನದಿಂದ ವಿಶ್ವವಿದ್ಯಾಲಯದ ಪ್ರತಿಷ್ಠೆಗೆ, ಗೌರವಕ್ಕೆ ಕುಂದು ಬರುತ್ತದೆ, ಸರ್ಕಾರದ ಗೌರವಕ್ಕೆ ಕುಂದು ಬರುತ್ತದೆ. ಆದರೂ ಕೂಡ ಇದರಲ್ಲಿ ಏನಾದರೂ ಇದ್ದರೆ ಅದು ಹೊರ ಬರಲಿ ಎನ್ನುವ ದೃಷ್ಟಿಯಿಂದ ನಾನು ಇದನ್ನು ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್ನಿಗೆ ಒಪ್ಪಿಸುವುದಕ್ಕೆ ತೀರ್ಮಾನಿಸಿದ್ದೇನೆ. ಯೂನಿವರ್ಸಿಟಿ ಗ್ರ್ಯಾಂಟ್ಸ ಕಮಿಷನ್ ಈ ದೇಶದಲ್ಲಿ ಅತ್ಯುಚ್ಚವಾದ ಅಧಿಕಾರವುಳ್ಳ ಸಂಸ್ಥೆ. ಮೈಸೂರು ದೇಶಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರು ಅಲ್ಲಲ್ಲ, ಪ್ರೊಫೆಸರ್ ಗೋಕಾಕ್ ಅವರಿಗೆ ಸಂಬಂಧಪಟ್ಟ ಅಧಿಕಾರಿಗಳು ಯಾರು ಇಲ್ಲ, ರಿಜಿಸ್ಟ್ರಾರ್ ಅವರಿಗೆ ಸಂಬಂಧಪಟ್ಟ ಅಧಿಕಾರಿಗಳು ಯಾರೂ ಇಲ್ಲ. ಅಂಥವರು ಇದನ್ನು ವಿಚಾರಣೆ ಮಾಡಬೇಕೆಂದು ತೀರ್ಮಾನ ಮಾಡಿರುವುದರಿಂದ ಇದು ಸರ್ವರಿಗೂ ಸಮ್ಮತವಾಗುತ್ತದೆಂದು ನಿರೀಕ್ಷಣೆ ಮಾಡುತ್ತೇನೆ. ವಿದ್ಯಾರ್ಥಿಗಳು ಕೂಡ ಈ ಒಂದು ನನ್ನ ಆಶ್ವಾಸನೆಯನ್ನು ಸ್ವೀಕರಿಸಿ ತಮ್ಮ ಮುಷ್ಕರವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ಇಚ್ಛೆಪಡುತ್ತೇನೆ.

(ಶ್ರೀ ಎ. ಎಚ್. ಶಿವಾನಂದಸ್ವಾಮಿ)

ಇದರ ಬಗ್ಗೆ ಸರಿಯಾದ ಬಂದೋಬಸ್ತು ಮಾಡಬೇಕು. ಈ ರೀತಿ ತಪ್ಪಿಸಿಕೊಳ್ಳುವುದಕ್ಕೆ ಪೆನಾಲ್ಟಿ ಹಾಕುತ್ತೇವೆ, ಪೆನಾಲ್ಟಿ ಎಷ್ಟು ಹಾಕಬೇಕು, ಅದನ್ನು ವಸೂಲು ಮಾಡುವ ವಿಧಾನ ಹೇಗಿರಬೇಕು ಎಂಬ ವಿಚಾರದಲ್ಲಿ ಬಿಲ್ಲನ್ನು ತಂದಿದ್ದೇವೆ ಎಂದು ಮಂತ್ರಿಗಳು ಹೇಳಿದರು. ಇದುವರೆಗೆ ತೆರಿಗೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿದ್ದುದನ್ನು ತಪ್ಪಿಸಿ ಹಾಗೆ ತಪ್ಪಿಸಿಕೊಂಡಾಗ ದಂಡ ವಿಧಿಸುವುದಕ್ಕೆ ಈ ತಿದ್ದುಪಡಿ ವಿಧೇಯಕವನ್ನು ತಂದಿದ್ದಾರೆ. ಇದರ ಪ್ರಕಾರ ತೆರಿಗೆ ತಪ್ಪಿಸಿಕೊಳ್ಳುವ ಸಂದರ್ಭದಲ್ಲಿ ಮಾಲನ್ನು ವಶಪಡಿಸಿಕೊಂಡರೆ ಅದನ್ನು ಸುರಕ್ಷಿತವಾಗಿಡಲು ಚೆಕ್‌ಪೋಸ್ಟುಗಳಲ್ಲಿ ವೇರ್‌ಹೌಸ್ ಇರಬೇಕು. ಅದಕ್ಕೇನು ವ್ಯವಸ್ಥೆ ಮಾಡುವರೋ ಗೊತ್ತಿಲ್ಲ. ಅದಕ್ಕೆ ವಿವರಣೆ ಕೊಟ್ಟಿಲ್ಲ. ಹೀಗೆ ಕಾಂಪ್ಲಿಕೇಟ್ ಮಾಡಿ ಇರುವ ಸಮಸ್ಯೆಯನ್ನು ಬೃಹದಾಕಾರವಾಗಿ ಬೆಳೆಸುವುದರಿಂದ ಹೆಚ್ಚು ಲಂಚರುಷುವತ್ತಿಗೆ ಅವಕಾಶವಾಗುವುದು. ಮೊದಲು ಚೆಕ್ ಪೋಸ್ಟುಗಳಲ್ಲಿ ಅವ್ಯವಹಾರ ತಡೆಗಟ್ಟಬೇಕು. ಅದನ್ನು ಮಾಡುವವರೆಗೆ ಸರ್ಕಾರಕ್ಕೆ ಆದಾಯ ಸರಿಯಾಗಿ ಬರುವುದಿಲ್ಲ. ಅದಕ್ಕಾಗಿ ಸರ್ಕಾರದವರು ಈ ಬಗ್ಗೆ ಒಂದು ಸರಿಯಾದ ರೀತಿಯಲ್ಲಿ ಇದನ್ನು ನಡೆಸಿಕೊಂಡು ಹೋಗುವುದಕ್ಕೆ ತಕ್ಕ ವಿಧಾನವನ್ನು ಕಂಡುಹಿಡಿಯಬೇಕೆಂದು ನಾನು ಸೂಚಿಸಬಯಸುತ್ತೇನೆ. ಏಕೆಂದರೆ, ಈಗಿರುವ ಸೇಲ್ಸ್‌ಟ್ಯಾಕ್ಸ್ ವಸೂಲು ಮಾಡುವ ವಿಧಾನವೇನಿದೆಯೋ ಅದು ಡಿಪಾರ್ಟ್‌ಮೆಂಟಿನಲ್ಲಿ ಸರಿಯಿಲ್ಲ. ಅಲ್ಲಿ ಸರಿಯಾದ ರೀತಿಯಲ್ಲಿ ನಡೆಯುವುತಿಲ್ಲವೆಂದು ಅರ್ಥವಾಗುತ್ತದೆ. ಮುನಿಸಿಪಲ್ ಆಕ್ಟ್ರಾಯಿ ಕೊಟ್ಟು ಯಾವ್ಯಾವ ಟ್ಯಾಕ್ಸಬಲ್ ಕಮಾಡಿಟೀಸ್ ಹೋಗುತ್ತವೋ ಅವುಗಳ ಬಗ್ಗೆ ಕ್ರಾಸ್ ರೆಫರೆನ್ಸಸ್ ಇದ್ದರೆ ಅವುಗಳನ್ನು ನೋಡಿಕೊಂಡು ತೆರಿಗೆ ವಸೂಲು ಮಾಡಿದರೆ ಟ್ಯಾಕ್ಸ್ ಎವೇಡಿಂಗ್ ಆಗುವುದು ಅದರಿಂದ ತಪ್ಪು ಹೋಗುತ್ತದೆಂದು ನಾನು ಹೇಳುತ್ತೇನೆ. ಈಗ ಚೆಕ್‌ಪೋಸ್ಟ್ ಇರುವ ಕಡೆ ಟ್ಯಾಕ್ಸ್ ಎವೇಡ್ ಮಾಡುವುದಕ್ಕೆ ಸಾಧ್ಯವಿರುವವರು ಅವರೇ ಸಲೀಸಾಗಿ ಹಣ ಕೊಟ್ಟು ಮುಂದೆ ಹೋಗುತ್ತಾರೆ. ಆದ್ದರಿಂದ ಸ್ಪೆಷಲ್ ಸೆಲ್ ಮಾಡಿ ಕ್ರಾಸ್ ರೆಫರೆನ್ಸಸ್ ಬರುವ ಹಾಗೆ ಮಂತ್ರಿವರ್ಯರು ಮಾಡಬೇಕೆಂದು ನಾನು ಹೇಳುತ್ತೇನೆ.

ಅಲ್ಲದೆ ತೆರಿಗೆ ಕೊಡದೆ ಇರುವುದಕ್ಕೆ ಪೆನಲ್ಟಿ ಹಾಕಿ ಮಾಲನ್ನು ಇಟ್ಟುಕೊಳ್ಳುವ ವಿಧಾನ ಬಹಳ ತಪ್ಪು. ಇದಕ್ಕೆ ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ. ಇದಕ್ಕಾಗಿ ವೇರ್‌ಹೌಸ್ ಮಾಡಬೇಕು. ಪೆನಲ್ಟಿ ವಸೂಲು ಮಾಡುವ ಬಗ್ಗೆ ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ವಸೂಲು ಮಾಡುವಂತಹ ವಿಧಾನವನ್ನು ಅನ್ವಯಿಸಬೇಕೆಂದು ಹೇಳುತ್ತೇನೆ.

ಇಷ್ಟು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಟಿ. ಶಾಮಯ್ಯಗೌಡ.—ಸಭಾಪತಿಗಳೇ, ನಮ್ಮ ಮುಂದೆ ಇರತಕ್ಕ ಈ ಸೇಲ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್ಲನ್ನು ಈಗ 8 ಗಂಟೆ ರಾತ್ರಿಯಲ್ಲಿ ಮುಗಿಸಬೇಕೆಂದು ಹೇಳಿದರೆ ಅದು ನನಗೆ ಸರಿಯೆಂದು ಕಾಣುವುದಿಲ್ಲ. ಸರ್ಕಾರದವರಿಗೆ ಈ ಮಾರಾಟ ತೆರಿಗೆಯಿಂದ 35 ಕೋಟಿ ರೂಪಾಯಿಗಳು ಬಂದರೂ ಅದನ್ನು ಕೊಡತಕ್ಕವರಿಗೇ ಆಗಲೀ ಅಥವಾ ಅದನ್ನು ಯಾರ ಮೇಲೆ ಹೊರಿಸುತ್ತೀರೋ ಅವರಿಗಾಗಲೀ ಅನುಕೂಲತೆಗಳನ್ನು ಮಾಡಿಕೊಡಬೇಕೆಂದು ಹೇಳಿದರೆ ಅತ್ತಕಡೆಗೆ ಸರ್ಕಾರ ಏನೂ ಗಮನ ಕೊಡುತ್ತಾ ಇಲ್ಲ.

ನಾನು ಚೆಕ್‌ಪೋಸ್ಟ್ಸ್ ವಿಷಯ ಹೇಳಬೇಕಾಗಿದೆ. ಅಡಿಕೆ ವಿಷಯ ತೆಗೆದುಕೊಂಡರೆ, ನಾಲ್ಕು ಚೆಕ್‌ಪೋಸ್ಟುಗಳಲ್ಲಿ ತೆರಿಗೆ ಕೊಡಬೇಕು. ರೆಸಿಪ್ರೋಕಲ್ ವ್ಯವಸ್ಥೆ ಇಟ್ಟುಕೊಂಡಿಲ್ಲ. ನಮ್ಮಲ್ಲಿಂದ ಆಂಧ್ರಕ್ಕೆ ಅಥವಾ ಮದ್ರಾಸಿಗೆ ಅಡಿಕೆ ಕಳುಹಿಸಬೇಕಾದರೆ, ನಾಲ್ಕು ಕಡೆ ಬಿಲ್ಲುಗಳನ್ನು ತೋರಿಸಬೇಕು. ಅದು ಎಲ್ಲರಿಗೂ ಒಪ್ಪುವಂತೆ ಒಂದೇ ನಮೂನೆಯಾಗಿದ್ದರೆ ವ್ಯಾಪಾರಸ್ಥರಿಗೆ ಅದರಿಂದ ತೊಂದರೆ ತಪ್ಪುತ್ತದೆ. ಇದನ್ನು ಮಾಡಬೇಕೆಂದು ಎಷ್ಟು ಹೇಳಿದರೂ ಇದುವರೆಗೆ ಅದರ ಕಡೆ ಗಮನ ಕೊಟ್ಟಿಲ್ಲ. ಈಗ ಟ್ಯಾಕ್ಸ್ ಬೇರೆ ಜಾಸ್ತಿಯಾಗಿದೆ. ಮದ್ರಾಸಿಗೆ ಹೋಗುವಾಗ ಮಲ್ಟಿಪಲ್ ಪಾಯಿಂಟ್ಸ್‌ನಲ್ಲಿ ಟ್ಯಾಕ್ಸ್ ಹಾಕುವುದರಿಂದ ಇನ್ನೂ ಜಾಸ್ತಿ ತೆರಿಗೆ ಕೊಡಬೇಕಾಗಿ ಬರುತ್ತದೆ. ಈಗ ಹೈಕೋರ್ಟಿನಲ್ಲಿ ಕಾಮೆಂಟ್ ಬಂತು ಎಂದು ಹೇಳಿ ಒಂದು ಬಿಲ್ ತಂದಿದ್ದಾರೆ. ಆದರೆ ತೆರಿಗೆ ಕೊಡತಕ್ಕವರ ಹಿತದೃಷ್ಟಿಯಿಂದ, ಕನ್‌ಸ್ಯೂಮರ್ಸ್ ಹಿತದೃಷ್ಟಿಯಿಂದ ಯೋಚನೆಮಾಡಿ ಒಂದು ಕಾಂಪ್ರಹೆನ್ಸಿವ್ ಬಿಲ್ ತಂದರೆ ಒಳ್ಳೆಯದು. ಮಾನ್ಯ ಶ್ರೀ ಶಿವಾನಂದಸ್ವಾಮಿಯವರು ಹೇಳಿದ ಹಾಗೆ ಚೆಕ್ ಪೋಸ್ಟ್ಸ್ ಮಾಡುವುದರಿಂದ ಸುಖವಿಲ್ಲ. ಒಂದು ಪ್ರಿಂಟೆಡ್ ಫಾರಂನಲ್ಲಿ ಒಂದು ಬಿಲ್ ಬರೆಯಬೇಕಾದರೆ, ಅದು ತಮಿಳಿನಲ್ಲಿ, ತೆಲುಗಿನಲ್ಲಿ, ಕನ್ನಡದಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ಪ್ರಿಂಟಾಗಿ ಇರಬೇಕು. ಇಲ್ಲದಿದ್ದರೆ ಚೆಕ್ ಪೋಸ್ಟ್‌ನಲ್ಲಿರುವವರು ಅದನ್ನು ಒಪ್ಪುವುದಿಲ್ಲ. ಇದ

ಬಗ್ಗೆ ನೀವೇನಾದರೂ ಕೇರಳದವರೊಡನೆ ಅಥವಾ ಆಂಧ್ರದವರೊಡನೆ ಮಾತುಕತೆ ನಡೆಸಿದ್ದೀರಾ? ಒಂದೇ ತರಹ ಬಿಲ್ ಫಾರಂ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆಂದು ಹೇಳಿ ನಾಲ್ಕು ವರ್ಷಗಳಾದುವು. ಇದುವರೆಗೂ ಏನೂ ಮಾಡಲಿಲ್ಲ. ಆದ್ದರಿಂದ ವ್ಯಾಪಾರಸ್ಥರಿಗೆ ನ್ಯಾಯವಾಗಿದ್ದರೆ ತೆರಿಗೆ ಕೊಡುವವರಿಗೆ ನ್ಯಾಯವಾಗಿದ್ದರೆ ಮಾತ್ರ ಇಂತಹ ಮಸೂದೆಯನ್ನು ಜಾರಿಗೆ ತರಬೇಕು.

ಇನ್ನು ಹದಿನಾಲ್ಕನೆ ವಿಷಯ. ಲಾರಿಯಲ್ಲಿ ಮೂಟೆ ಬರುತ್ತದೆ. ಅದನ್ನು ಚೆಕ್‌ಪೋಸ್ಟ್‌ನಲ್ಲಿ ಒಂದು ಸಾರಿ ಅನ್‌ಲೋಡ್ ಮಾಡಿದರೆ 20 ರೂಪಾಯಿಗಳವರೆಗೂ ಖರ್ಚಾಗುತ್ತದೆ. ಅಂದಮೇಲೆ ಮೂರು ಚೆಕ್ ಪೋಸ್ಟ್‌ಗಳು ಇವೆಯೆಂದರೆ, ಒಂದೊಂದು ಸಾರಿ ಲೋಡಿಂಗ್ ಮತ್ತು ಅನ್‌ಲೋಡಿಂಗಿಗೆ 20 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ನಮ್ಮಲ್ಲಿ ಲೂಪ್‌ಹೋಲ್ಸ್ ಇರುತ್ತದೆ. ಅದನ್ನು ಸರಿಪಡಿಸಿಕೊಂಡರೆ ಯಾವ ಚೆಕ್‌ಪೋಸ್ಟ್‌ಗಳು ಬೇಕಿಲ್ಲ. ಆದ್ದರಿಂದ ಸರ್ಕಾರಕ್ಕೆ ಏನು ಹೇಳುತ್ತೇನೆಂದರೆ ವ್ಯಾಪಾರಸ್ಥರು ಏನು ಕುಂದುಕೊರತೆಗಳನ್ನು ಹೇಳಿದ್ದಾರೋ ಅವನ್ನು ನಿವಾರಿಸುವುದಕ್ಕೆ ಪ್ರಯತ್ನ ಪಡಬೇಕು. ಇಲ್ಲದಿದ್ದರೆ ಆಂಧ್ರ, ಮದ್ರಾಸ್, ಕೇರಳ ಮತ್ತು ಮೈಸೂರುಗಳಲ್ಲಿರತಕ್ಕ ನಾಲ್ಕು ಚೆಕ್ ಪೋಸ್ಟ್‌ಗಳಿಂದ ಬಹಳ ತೊಂದರೆ ಪಡಬೇಕಾಗುತ್ತದೆ. ಈಗ ಏನಾಗಿದೆಯೆಂದರೆ, ಲಾರಿಯವರಿಗೆ ಬಿಲ್‌ಕೊಟ್ಟು ಟ್ಯಾಕ್ಸ್‌ಕೊಟ್ಟು, ಲೋಡಿಂಗ್ ಮತ್ತು ಅನ್‌ಲೋಡಿಂಗ್ ಚಾರ್ಜಸ್ ಎಲ್ಲವನ್ನೂ ಕೊಟ್ಟು ಕಳುಹಿಸುತ್ತಿದ್ದಾರೆ. ಆದ್ದರಿಂದ ಆದಷ್ಟು ಜಾಗ್ರತೆಯಾಗಿ ಈ ನಾಲ್ಕು ಸಂಸ್ಥಾನಗಳವರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಒಂದೇ ತರಹವೇ ಬಿಲ್ ಇರುವಂತೆ ಏರ್ಪಾಡು ಮಾಡಬೇಕು, ಇನ್ನು ಅಸಿಸ್ಟೆಂಟ್ ಸೇಲ್ಸ್‌ಟ್ಯಾಕ್ಸ್ ಆಫೀಸರ ವಿಷಯ ಹೇಳಿದ್ದಾರೆ. ಅರ್ಧರಾತ್ರಿ ಯಾದರೂ ಬಿಲ್ ಕೊಟ್ಟಮೇಲೆ ಸೆಕ್ಷನ್ 28 (ಬಿ) ಪ್ರಕಾರ ಅವರು ಹೇಳಿದಂಥ ರಿಕಾರ್ಡ್ಸ್‌ನ್ನು ತಂದುಕೊಡಬೇಕು. ಒರಿಜಿನಲ್ ಬಿಲ್ಲನ್ನು ಮೈಸೂರಿನವರು, ಅಂಧ್ರದವರು, ಕೇರಳದವರು ಮತ್ತು ಮದ್ರಾಸಿನವರು ಕೇಳಿದರೆ ಎಷ್ಟು ಒರಿಜಿನಲ್ ಬಿಲ್‌ಗಳನ್ನು ಕಳುಹಿಸುವುದಕ್ಕೆ ಸಾಧ್ಯ? ಅದರಿಂದ ಬಹಳ ತೊಂದರೆಗಳಿವೆ. ಅದಕ್ಕಾಗಿ ಸರ್ಕಾರದವರು ಇದನ್ನು ಕೂಲಂಕಷವಾಗಿ ಪರಿಶೀಲನೆಮಾಡಿ ಅವರ ತೊಂದರೆಗಳನ್ನು ಆದಷ್ಟು ಜಾಗ್ರತೆ ನಿವಾರಣೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

8.00 P.M.

† ಕೆ. ಸೂರ್ಯನಾರಾಯಣ ಅಡಿಗ.—ಸ್ವಾಮಿ, ನಾನು ಹೆಚ್ಚೇನು ಮಾತನಾಡುವುದಿಲ್ಲ. ನಮ್ಮ ಮಂಗಳೂರು ಜಿಲ್ಲೆಯಲ್ಲಿ ಈ ಟ್ಯಾಕ್ಸ್‌ಗಳು ಎಲ್ಲಾ ಸೋರಿ ಹೋಗುತ್ತಿತ್ತು. ಈಗ ಅಲ್ಲಿ ಚೆಕ್ ಪೋಸ್ಟುಗಳನ್ನು ಹಾಕಿದ ಮೇಲೆ ಸರ್ಕಾರಕ್ಕೆ ಆದಾಯವೂ ಜಾಸ್ತಿಯಾಗಿ ಬರುತ್ತಿದೆ. ಮಂಗಳೂರಿನಲ್ಲಿ ಯಾವ ರೀತಿಯಲ್ಲಿ ಮಾಡಿದ್ದಾರೋ, ಅದೇ ರೀತಿಯಲ್ಲಿ ಇತರ ಕಡೆಗಳಲ್ಲಿಯೂ ಎಲ್ಲೆಲ್ಲಿ ಹೀಗೆ ಸರ್ಕಾರಕ್ಕೆ ಬರುವಂತಹ ಅದಾಯಗಳು ಸೋರಿ ಹೋಗುತ್ತವೆ ಆದನ್ನು ತಡೆಗಟ್ಟಲು ಜನರಿಗೆ ತೊಂದರೆಯಾಗದ ರೀತಿಯಲ್ಲಿ ಚೆಕ್‌ಪೋಸ್ಟ್‌ಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಮಾತ್ರ ನಾನು ಹೇಳಬಯಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ಮೇಲೆ ಮಾತನಾಡುವಂತಹ ಸಮಯದಲ್ಲಿ ಮಾನ್ಯ ಸದಸ್ಯರೆಲ್ಲ ಉಪಯುಕ್ತವಾದ ಸಲಹೆಗಳನ್ನು ಕೊಟ್ಟು ಪರಿಶೀಲನೆ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಸರ್ಕಾರದವರು ಪರಿಶೀಲನೆ ಮಾಡಿ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಲು ಸರ್ಕಾರದವರು ಒಂದು ಸಮಿತಿ ಕೂಡ ಮಾಡಿದ್ದಾರೆ. ಮತ್ತು ಈ ತೆರಿಗೆಯನ್ನು ವಸೂಲು ಮಾಡುವಾಗ ಸುಲಭವಾಗಿ ವಸೂಲು ಮಾಡಬೇಕೆನ್ನುವುದು ಒಳ್ಳೆಯ ಉಪಯುಕ್ತವಾದ ವಿಚಾರವಾಗಿದೆ. ಆದರೆ ಅದು ಹೇಗೆ ಎಂದು ಹೇಳುವುದು ಕಷ್ಟ. ಅದಕ್ಕೆ ಈ ಸಮಿತಿಯನ್ನು ಮಾಡಿದ್ದಾರೆ. ಅದು, ಬಹುಶಃ ಮಾನ್ಯ ಸದಸ್ಯರು ಹೇಳಿದಂತಹ ಸಲಹೆಗಳನ್ನು ಪರಿಶೀಲನೆ ಮಾಡುತ್ತದೆ ಎನ್ನುವ ಭರವಸೆಯನ್ನು ಕೊಡುತ್ತೇನೆ. ಮಾನ್ಯ ಶಾಮಯ್ಯಗೌಡರು, ನಾಲ್ಕು ಕಡೆ ಒರಿಜಿನಲ್ ಬಿಲ್ ಕೇಳುತ್ತಾರೆಂದು ಹೇಳಿದರು. ನಾನಾದರೂ ಹೇಳುತ್ತೇನೆ, ನಮ್ಮ ವ್ಯಾಪಾರಸ್ಥರು ಹಾಗೆ ಕೊಡಲು ಸಮರ್ಥರಿದ್ದಾರೆ, ನಾಲ್ಕು ಕಡೆ ಒರಿಜಿನಲ್ ಬಿಲ್ ಕೊಡಬಲ್ಲರು. ನಾವು ಎಷ್ಟೇ ಗಮನ ಕೊಟ್ಟು ಶ್ರೀಮಾನ್ ಶಾಮಯ್ಯಗೌಡರು ಹೇಳಿದಂತಹ ಸಲಹೆಗಳನ್ನು ಪಡೆದು ಕಾನೂನು ಮಾಡಿದರೂ, ತಪ್ಪಿಸಿಕೊಂಡು ಹೋಗುವವರು, ರಂಗೋಲೆ ಕೆಳಗೂ ತಪ್ಪಿಸಿಕೊಂಡು ಹೋಗುತ್ತಾರೆ. ಅದು ನ್ಯಾಷನಲ್ ಕ್ಯಾರಕ್ಟರಿಗೆ ಸಂಬಂಧಪಟ್ಟ ವಿಷಯವಾಗಿದೆ. ಅದು ಕಾಲಕ್ರಮೇಣ ಸರಿಹೋಗುತ್ತದೆಂದು ನಾನು ಭಾವಿಸುತ್ತೇನೆ. ನಮ್ಮ ಜನರು ಇಂದಲ್ಲ ನಾಳೆಯಾದರೂ

(ಶ್ರೀ ಕೆ. ಪುಟ್ಟಸ್ವಾಮಿ)

ತಾವು ನ್ಯಾಯವಾಗಿ ಕೊಡಬೇಕಾದ ತೆರಿಗೆಯನ್ನು ಯಾವ ಕಠಿಣವಾದ ಕ್ರಮವನ್ನೂ ತೆಗೆದು ಕೊಳ್ಳದೆ ಕೊಡತಕ್ಕ ಕಾಲ ಬರುತ್ತದೆ. ಇದರ ಬಗ್ಗೆ ಈಗತಾನೆ ಮಾನ್ಯ ಅಡಿಗರವರು ಹೇಳಿದರು, ಈಗ ಮಂಗಳೂರಿನಲ್ಲಿ ಚೆಕ್ ಪೋಸ್ಟ್ಸ್ ಹಾಕಿದರು, ಹಿಂದೆ ಅಲ್ಲಿ ಸೋರಿ ಹೋಗುತ್ತಿತ್ತು ಎಂದು. ಈಗ ಸರ್ಕಾರದವರು ಅದನ್ನು ವಸೂಲು ಮಾಡುತ್ತಿದ್ದಾರೆ. ಮತ್ತು ಶ್ರೀಮಾನ್ ಶಿವಾನಂದ ಸ್ವಾಮಿಯವರು ಹೇಳಿದರು, ಇಲ್ಲಿ ಲಂಚ ರುಷುವತ್ತು ಇವೆ ಎಂದು. ಪುನಃ ಆ ಮಾತು ಎತ್ತಿದರೆ, ನಾವು ನಮ್ಮ ರಾಷ್ಟ್ರ ನಡತೆಯ ವಿಚಾರ ಪ್ರಶ್ನೆ ಮಾಡಬೇಕಾಗಿದೆ. ಇದುವರೆಗೂ ಚೆಕ್ ಪೋಸ್ಟಿನಲ್ಲಿ ಕಮರ್ಷಿಯಲ್ ಟ್ಯಾಕ್ಸ್ ಇನ್ಸ್‌ಪೆಕ್ಟರ್ ಇದ್ದರು. ಇನ್ನು ಈ ಮಸೂದೆಯ ಪ್ರಕಾರ ಅಸಿಸ್ಟೆಂಟ್ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಮತ್ತು ಅವರ ಮೇಲೆ ಅಸಿಸ್ಟೆಂಟ್ ಕಮೀಷನರ್ ಆಫ್ ಕಮರ್ಷಿಯಲ್ ಟ್ಯಾಕ್ಸ್ ಆಫೀಸರು ಇರಬಹುದೆಂದು ಮಾಡಿದ್ದೇವೆ. ಆದರೆ ಚೆಕ್ ಪೋಸ್ಟುಗಳಲ್ಲಿ ಚೆಕ್ಸ್ ಅಂಡ್ ಕೌಂಟರ್ ಚೆಕ್ಸ್ ಇರಬೇಕು. ಮಾನ್ಯ ಸದಸ್ಯರು ಹೇಳಿರತಕ್ಕ ಅಪಾದನೆಗಳನ್ನು ಗಮನದಲ್ಲಿಟ್ಟುಕೊಂಡು, ಕಮರ್ಷಿಯಲ್ ಡಿಪಾರ್ಟ್‌ಮೆಂಟಿನವರು ಚೆಕ್ಸ್ ಅಂಡ್ ಕೌಂಟರ್ ಚೆಕ್ಸ್ ಇಟ್ಟುಕೊಂಡಿದ್ದಾರೆ. ಈಗ ನ್ಯಾಯವಾಗಿ ಬರಬೇಕಾದಂತಹ ತೆರಿಗೆ ಬರುವಂತೆ ಮಾಡುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ. ಮಾನ್ಯ ರಾಮಯ್ಯಗೌಡರು ಇದನ್ನು ಅರ್ಧ ರಾತ್ರಿಯಲ್ಲಿ ತಂದಿದ್ದಾರೆಂದು ಹೇಳಿದರು.

ಶ್ರೀ ಕೆ. ಟಿ. ರಾಮಯ್ಯ ಗೌಡ.—ಹಾಗೆ ಅಲ್ಲ, ಇದನ್ನು ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ, 8 ಗಂಟೆ ಸಮಯದಲ್ಲಿ ತಂದಿದ್ದೀರಿ ಎಂದು ಹೇಳಿದ್ದು.

ಶ್ರೀ ಕೆ. ಪುಟ್ಟಸ್ವಾಮಿ.—ಆಗಲಿ, ಮಾನ್ಯ ಸದಸ್ಯರು ಒಂದು ಸದಾಶಯದಿಂದ ಆ ರೀತಿಯ ಸಲಹೆ ಮಾಡಿದ್ದಾರೆ. ಅವನ್ನೆಲ್ಲಾ ಸರ್ಕಾರದವರು ಕೂಲಂಕಷವಾಗಿ ಪರಿಶೀಲನೆ ಮಾಡುತ್ತಾರೆಂದು ಭರವಸೆಯನ್ನು ಕೊಡುತ್ತೇನೆ. ಅದ್ದರಿಂದ ಈ ಸಭೆ ಈ ಮಸೂದೆಯನ್ನು ಒಪ್ಪಿಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY CHAIRMAN.—The question is :

"That the Mysore Sales Tax (Second Amendment) Bill, 1969, as passed by the Legislative Assembly be taken into consideration."

The motion was adopted.

CLAUSES

Mr. DEPUTY CHAIRMAN.—Now the Bill will be taken clause by clause.

The question is :

"That Clauses 2 and 3 do stand part of the Bill."

The motion was adopted.

Clauses 2 and 3 were added to the Bill.

Mr. DEPUTY CHAIRMAN.—The question is :

"That clause 1, the long Title and the enacting formula do stand part of the Bill."

The motion was adopted.

ಫಾರ್‌ಫೇಜ್ ವಿಷಯ ಎಂದು ಹೇಳುವ ಹಾಗೆ ಇದೆ. ಎಲ್ಲರನ್ನೂ ಇನ್‌ಫ್ಲುಯನ್ಸ್ ಮಾಡಿ ಅಪಾಯಿಂಟ್‌ಮೆಂಟ್ಸು ಮಾಡಿಸುವುದಕ್ಕಾಗುವುದಿಲ್ಲ. ಬರುವವರೆಲ್ಲ ಇನ್‌ಫ್ಲುಯೆನ್ಸ್‌ಗೆ ಜಗ್ಗುತ್ತಾರೆಂದೂ ಹೇಳುವುದಕ್ಕಾಗುವುದಿಲ್ಲ. ಹೀಗೆ ಹೇಳಿದರೆ ಅವರಿಗೆ ಅವಮಾನ ಮಾಡಿದಹಾಗೆ ಆಗುತ್ತದೆ. ಎಲ್ಲ ವಿಷಯಗಳನ್ನೂ ಕೂಲಂಕಷವಾಗಿ ವಿಚಾರ ಮಾಡಿ, ಇಂಟರ್‌ವ್ಯೂ ಮಾಡಿ ಬೋರ್ಡಿನವರು ಸಿಫಾರಸು ಮಾಡುತ್ತಾರೆ. ಆ ಸಿಫಾರಸಿಗೆ ಅನುಗುಣವಾಗಿ ಬಹುತೇಕ ಎಲ್ಲ ಸಂದರ್ಭಗಳಲ್ಲಿಯೂ ಸಿಂಡಿಕೇಟಿನವರು ಅದನ್ನು ಅನುಸರಿಸಿಕೊಂಡು ಬಂದಿದ್ದಾರೆ. ಅದಕ್ಕೆ ಅವರಿಗೆ ಶಹಭಾಸಗಿರಿ ಕೊಡಬೇಕೇ ಹೊರತು ಅವರು ಮಾಡಿರುವುದು ತಪ್ಪು ಎಂದು ಹೇಳುವುದು ಸರ್ವಥಾ ಸರಿಯಲ್ಲ ಎಂದು ನನ್ನ ಭಾವನೆ, ವಿಶ್ವವಿದ್ಯಾಲಯದವರು ಒಂದು ಸಂಪ್ರದಾಯವನ್ನು ಅನುಸರಿಸಿಕೊಂಡು ಬಂದಿದ್ದಾರೆ. ಅದೇನೆಂದರೆ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ಸ್ ಏನು ಸಿಫಾರಸು ಮಾಡುತ್ತಾರೆಯೋ ಅದರಂತೆ ನಡೆದುಕೊಂಡು ಹೋಗತಕ್ಕದ್ದು. ಹೀಗೆ ಮಾಡುವಾಗ ಒಂದೊಂದು ಕೇಸಿನಲ್ಲಿ ಒಂದೊಂದು ರೀತಿಯ ನೀತಿಯನ್ನು ಪಾಲಿಸಿಕೊಂಡು ಬಂದಿದ್ದಾರೆ ಎಂದು ಶ್ರೀ ಡಿ. ರಾಜಗೋಪಾಲ್ ಅವರು ಸೂಚಿಸಿದರು. ಇದು ಮೇಲನೋಟಕ್ಕೆ ಒಪ್ಪತಕ್ಕ ಸೂಚನೆಯಾಗಿ ಕಾಣುತ್ತದೆ. ದೀರ್ಘವಾಗಿ ಯೋಚನೆ ಮಾಡಿ ನೋಡಿದರೆ ಸರಿಯಾಗಿ ಕಾಣಿಸುವುದಿಲ್ಲ. ಪ್ರತಿಯೊಂದು ಹುದ್ದೆಗೂ ಕೂಡ ಇಂಥದೇ ನಿಯಮವಿರಬೇಕು ಎಂದು ಹೇಳುವುದಕ್ಕಾಗುವುದಿಲ್ಲ. ಆ ಹುದ್ದೆಗೆ ಇಂಟರ್‌ವ್ಯೂಗೆ ಬರುವವರ ಅರ್ಹತೆ, ಪ್ರಾವೀಣ್ಯತೆ ಇದನ್ನೆಲ್ಲ ಅನುಸರಿಸಿಕೊಂಡು ಕೆಲವು ವೇಳೆ 10 ವರ್ಷ ಉಪಾಧ್ಯಾಯರಾಗಿರುವವರು ರೀಡರ್, ಪ್ರೊಫೆಸರ್ ಆಗಬಹುದು ; 20 ವರ್ಷ ಸರ್ವಿಸ್ ಆಗಿದ್ದರೂ ಕೂಡ ರೀಡರ್ ಆಗುವುದಕ್ಕೆ, ಪ್ರೊಫೆಸರ್ ಆಗುವುದಕ್ಕೆ ಅರ್ಹತೆ ಇಲ್ಲದೆ ಇರಬಹುದು. ಈ ರೀತಿ ಇಂಟರ್‌ವ್ಯೂನಲ್ಲಿ ಇವೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ಸ್‌ನವರು ಒಂದೊಂದು ಕೇಸಿನಲ್ಲಿ ಒಂದೊಂದು ರೀತಿಯಲ್ಲಿ ತೀರ್ಮಾನ ಮಾಡಿದರೆ ಅವರು ಯಾವ ಸ್ಟ್ಯಾಂಡರ್ಡ್‌ನಿಂದ ಹಾಗೆ ಮಾಡಿದರು ಎಂದು ಹೇಳಲು ನಮಗೆ ಗೊತ್ತಾಗುವುದಿಲ್ಲ ; ಅವರು ಹಾಗೆ ಮಾಡುವುದಕ್ಕೆ ಆಗುವುದೂ ಇಲ್ಲ. ಪ್ರತಿಯೊಂದು ಕೇಸಿನ ವಿದ್ಯಮಾನಗಳೂ ಬೇರೆ ಬೇರೆ ಇರುವುದರಿಂದ ಅದಕ್ಕೆ ಅನುಸಾರವಾಗಿ ಹುದ್ದೆಗಳನ್ನು ಭರ್ತಿ ಮಾಡಿಕೊಂಡು ಬಂದಿದ್ದಾರೆ.

ವಿಶ್ವವಿದ್ಯಾಲಯದವರು ಕೊಟ್ಟಿರತಕ್ಕ ವಿವರಣೆಗಳೇನಿವೆ ಅದರ ಜೊತೆಗೆ ಇನ್ನೂ ಅನೇಕ ವಿವರಣೆಗಳನ್ನು ನಾನು ಪಡೆದುಕೊಂಡಿದ್ದೇನೆ. ಅವರು ಮಾಡಿರತಕ್ಕ ಅಪಾದನೆಗಳನ್ನು ಕೂಲಂಕಷವಾಗಿ ನಾನು ನಿಷ್ಪಾಕ್ಷಿಕವಾಗಿ, ನಿಷ್ಪಕ್ಷಪಾತವಾಗಿ ವಿಚಾರ ಮಾಡಿದ್ದೇನೆ. ಈ ಸಂದರ್ಭದಲ್ಲಿ ಯಾರನ್ನಾದರೂ ಬೆನ್ನಿಗೆ ಹಾಕಿಕೊಂಡು ರಕ್ಷಿಸಬೇಕೆಂಬ ಆಸೆ ನನಗೆ ಖಂಡಿತವಾಗಿ ಇಲ್ಲ. ಆತ್ಮಸಾಕ್ಷಿಯಾಗಿ ಕೆಲಸ ಮಾಡಿ ಎಂದು ಶ್ರೀ ಮಾನ್ ಶ್ರೀಕಂಠಯ್ಯನವರು ಅಪ್ಪಣೆ ಕೊಡಿಸಿದರು. ಸ್ವಲ್ಪಮಟ್ಟಿಗೆ ಆತ್ಮಸಾಕ್ಷಿಯಾಗಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳುವುದಕ್ಕೆ ಹೆಮ್ಮೆ ಪಡುತ್ತೇನೆ. ನಾನು ಆತ್ಮಸಾಕ್ಷಿಗೆ ವಿರೋಧವಾಗಿ ಕೆಲಸ ಮಾಡತಕ್ಕ ಹೆಡ್ಡನಲ್ಲ. ಯಾರನ್ನಾದರೂ ರಕ್ಷಿಸಬೇಕೆಂಬ ಉದ್ದೇಶ ನನಗಿಲ್ಲ. ಯಾರಾದರೂ ತಪ್ಪು ಮಾಡಿದ್ದರೆ ಅವರನ್ನು ಶಿಕ್ಷಿಸುವುದರಲ್ಲಿ ನಾನು ಮೊಟ್ಟಮೊದಲನೆಯವನಾಗುತ್ತೇನೆ ಎಂಬ ಆಶ್ವಾಸನೆಯನ್ನು ಕೊಡುತ್ತೇನೆ. ನಾನು ಎಲ್ಲ ವಿಷಯಗಳನ್ನೂ ತರಿಸಿಕೊಂಡು ವಿಚಾರ ಮಾಡಿದೆ. ಆದರೂ ಇದರಲ್ಲಿ ಬಂದಿರತಕ್ಕ ಸಂದೇಹವನ್ನು ನಿವಾರಣೆ ಮಾಡಬೇಕೆಂಬ ಸದುದ್ದೇಶದಿಂದ ವಿಶ್ವವಿದ್ಯಾಲಯದ ಪ್ರತಿಷ್ಠೆಗೆ, ಗೌರವಕ್ಕೆ ಕುಂದು ಬಂದರೂ ಚಿಂತೆ ಇಲ್ಲ, ನನ್ನ ಕಾರ್ಯ ದಕ್ಷತೆಗೆ ಕುಂದು ಬಂದರೂ ಚಿಂತೆ ಇಲ್ಲ ಎಂದು ಯೋಚನೆ ಮಾಡಿ ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್ನಿಗೆ ವಿಚಾರಣೆಗಾಗಿ ವಹಿಸಬೇಕೆಂದು ಕೂಡ ತೀರ್ಮಾನ ಮಾಡಿದ್ದೇನೆ. ಈ ನಿರ್ಧಾರ ಸಾಮಾನ್ಯವಾದ ನಿರ್ಧಾರವಲ್ಲ. ಅದನ್ನು ಮಾನ್ಯ ಸಭಾಸದಸ್ಯರು ಶ್ಲಾಘಿಸಬೇಕೆಂದು ನಾನು ನಿರೀಕ್ಷಣೆ ಮಾಡಿರುತ್ತೇನೆ. ಈ ತರಹ ತೀರ್ಮಾನದಿಂದ ವಿಶ್ವವಿದ್ಯಾಲಯದ ಪ್ರತಿಷ್ಠೆಗೆ, ಗೌರವಕ್ಕೆ ಕುಂದು ಬರುತ್ತದೆ, ಸರ್ಕಾರದ ಗೌರವಕ್ಕೆ ಕುಂದು ಬರುತ್ತದೆ. ಆದರೂ ಕೂಡ ಇದರಲ್ಲಿ ಏನಾದರೂ ಇದ್ದರೆ ಅದು ಹೊರ ಬರಲಿ ಎನ್ನುವ ದೃಷ್ಟಿಯಿಂದ ನಾನು ಇದನ್ನು ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್ನಿಗೆ ಒಪ್ಪಿಸುವುದಕ್ಕೆ ತೀರ್ಮಾನಿಸಿದ್ದೇನೆ. ಯೂನಿವರ್ಸಿಟಿ ಗ್ರ್ಯಾಂಟ್ಸ ಕಮಿಷನ್ ಈ ದೇಶದಲ್ಲಿ ಅತ್ಯುಚ್ಚವಾದ ಅಧಿಕಾರವುಳ್ಳ ಸಂಸ್ಥೆ. ಮೈಸೂರು ದೇಶಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರು ಅಲ್ಲಲ್ಲ, ಪ್ರೊಫೆಸರ್ ಗೋಕಾಕ್ ಅವರಿಗೆ ಸಂಬಂಧಪಟ್ಟ ಅಧಿಕಾರಿಗಳು ಯಾರು ಇಲ್ಲ, ರಿಜಿಸ್ಟ್ರಾರ್ ಅವರಿಗೆ ಸಂಬಂಧಪಟ್ಟ ಅಧಿಕಾರಿಗಳು ಯಾರೂ ಇಲ್ಲ. ಅಂಥವರು ಇದನ್ನು ವಿಚಾರಣೆ ಮಾಡಬೇಕೆಂದು ತೀರ್ಮಾನ ಮಾಡಿರುವುದರಿಂದ ಇದು ಸರ್ವರಿಗೂ ಸಮ್ಮತವಾಗುತ್ತದೆಂದು ನಿರೀಕ್ಷೆಣೆ ಮಾಡುತ್ತೇನೆ. ವಿದ್ಯಾರ್ಥಿಗಳು ಕೂಡ ಈ ಒಂದು ನನ್ನ ಆಶ್ವಾಸನೆಯನ್ನು ಸ್ವೀಕರಿಸಿ ತಮ್ಮ ಮುಷ್ಕರವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ಇಚ್ಛೆಪಡುತ್ತೇನೆ.

(ಶ್ರೀ ಕೆ. ವಿ. ಶಂಕರಗೌಡ)

ಇನ್ನು ರಿಜಿಸ್ಟ್ರಾರ ಅವರನ್ನು ಮನೆಗೆ ಕಳುಹಿಸಬೇಕೆಂಬ ವಿಚಾರ. ಇದು ಬಹಳ ಜಟಿಲವಾದ ಪ್ರಶ್ನೆ. ಇದು ಸಾಧಾರಣವಾದ ಒಂದು ಟ್ರಾನ್ಸ್‌ಫರ್‌ನಂತೆ ನಡೆಯುತಕ್ಕ ಕೆಲಸವಲ್ಲ. ಮೈಸೂರು ಯೂನಿವರ್ಸಿಟಿಯಿಂದ ಬೆಂಗಳೂರು ಯೂನಿವರ್ಸಿಟಿಯವರು ಎರವಲಾಗಿ ಪಡೆದಿರತಕ್ಕ ಅಧಿಕಾರಿಯಾದ ಅವರನ್ನು ವರ್ಗ ಮಾಡತಕ್ಕುದು, ಬಿಡತಕ್ಕುದು, ಯೂನಿವರ್ಸಿಟಿಗೆ ಸೇರತಕ್ಕ ವಿಚಾರ. ಇಂಥ ಆಪಾದನೆಗಳು ಬಂದಾಗ, ಆ ಆಪಾದನೆಗಳ ಮೇಲೆ ಅವರನ್ನು ವರ್ಗ ಮಾಡಿದರೆ ಏನು ಪರಿಣಾಮವಾಗುತ್ತದೆ ಎನ್ನುವುದನ್ನು ಊಹಿಸಿಕೊಳ್ಳಬೇಕೆಂದು ಮಾನ್ಯ ಸದಸ್ಯರಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ನಿರಪರಾಧಿಯಾಗಿದ್ದರೆ ಶಿಕ್ಷೆ ಮಾಡುವುದು ಸರಿಯಲ್ಲ. ಅವರು ನಿರಪರಾಧಿ ಎಂದು ತೀರ್ಮಾನ ಮಾಡಿದ್ದೇನೆ ಎಂದು ಭಾವಿಸಬೇಡಿ. ಅಪರಾಧಿ ಇದ್ದರೂ ಇರಬಹುದು. ಅದಕ್ಕಾಗಿಯೇ ಸಂಬಂಧಪಟ್ಟ ವಿಷಯಗಳನ್ನು ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ನಿಗೆ ವಹಿಸಬೇಕೆಂದು ನಿರ್ಧಾರ ಮಾಡಿದ್ದೇನೆ. ಒಂದು ವೇಳೆ ತಪ್ಪಿಸ್ಥರಾಗಿದ್ದಾರೆ ಎಂದು ತೀರ್ಮಾನ ಮಾಡಿದರೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆ; ವೈಸ್ ಛಾನ್ಸಲರು ತಪ್ಪಿಸ್ಥರಾಗಿದ್ದರೆ ಅವರ ಮೇಲೂ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆ, ಸಿಂಡಿಕೇಟ್ ತಪ್ಪು ಮಾಡಿದ್ದರೆ ಅವರ ಮೇಲೂ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ಹೀಗೆ ನಾನು ಪ್ರತಿಯೊಂದು ವಿಷಯದಲ್ಲಿಯೂ ಕೂಲಂಕಷವಾಗಿ ನಿಷ್ಪಕ್ಷಪಾತವಾಗಿ ವಿಚಾರ ಮಾಡಿ ಆ ವಿಷಯವನ್ನು ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ನಿಗೆ ರೆಫರ್ ಮಾಡಬೇಕೆಂದು ನಿರ್ಧರ ಮಾಡಿಕೊಂಡಿದ್ದೇನೆ.

ಇಲ್ಲಿ ಒಂದು ಮಾತನ್ನು ಹೇಳಬಹುದೋ, ಹೇಳಬಾರದೋ ಗೊತ್ತಿಲ್ಲ. ಸ್ವಾಭಾವಿಕವಾಗಿ ನಮ್ಮ ದೇಶದ ವಿದ್ಯಾರ್ಥಿಗಳು ಒಳ್ಳೆಯವರು. ಅವರ ವಿಚಾರವಾಗಿ ನನಗೆ ಹೆಮ್ಮೆ ಇದೆ. ಅನೇಕ ಸಭೆಗಳಲ್ಲಿ ನಾನು ಹೇಳಿದ್ದೇನೆ, ಎಷ್ಟೋ ವಿಷಯ ಪರಿಸ್ಥಿತಿಗಳಲ್ಲಾಗಲೀ ಶಾಂತಿಯಿಂದ ವರ್ತಿಸಿಕೊಂಡು ಬಂದಿದ್ದಾರೆ. ಇಲ್ಲಿಯೂ ಕಳೆದ ನಾಲ್ಕೈದು ದಿವಸಗಳಿಂದ ಶಾಂತಿಯಿಂದ ವರ್ತಿಸಿಕೊಂಡು ಬಂದಿದ್ದರು. ನಾನು ಅವರನ್ನು ಭೇಟಿ ಮಾಡುವುದಕ್ಕೆ ಹೋದ ದಿವಸ ನನ್ನ ಆತ್ಮ ಸಾಕ್ಷಿಯಾಗಿ, ಶ್ರೀಮಾನ್ ಶ್ರೀಕಂಠಯ್ಯನವರು ಹೇಳಿದ ಹಾಗೆ, ಕೆಲವು ರಾಜಕಾರಣಿಗಳು ಹತ್ತಾರು ತರುಣರನ್ನು ಪ್ರಚೋದಿಸಿ ನನ್ನ ಕಾರಿಗೆ ಕಲ್ಲು ಹೊಡೆಸಿದರು ಎಂದು ಧಾರಾಳವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ನೋಡಿದ್ದರಲ್ಲಿ ಶೇಕಡ 80 ಮಂದಿ ವಿದ್ಯಾರ್ಥಿಗಳು ಬಹಳ ಸೌಮ್ಯ ಸ್ವಭಾವದವರು, ಶಾಂತಿಯಿಂದ ವರ್ತಿಸುತ್ತಿದ್ದಾರೆ, ತೊಂದರೆ ಬಂದಿರುವುದು ಶೇಕಡ 10 ಮಂದಿ ವಿದ್ಯಾರ್ಥಿಗಳಿಂದ ಅವರನ್ನು ಸುಧಾರಿಸುವುದು ಕಷ್ಟವಿಲ್ಲ. ಈ ದಿವಸ ಶಾಂತಿ ಭಂಗವಾಗುತ್ತಿರಲಿಲ್ಲ. ವಿದ್ಯಾರ್ಥಿಗಳು ಇಂದು ಉದ್ರೇಕಗೊಳ್ಳುತ್ತಿರಲಿಲ್ಲ. ಆದರೆ ಕೆಲವು ರಾಜಕಾರಣಿಗಳು ಪ್ರಚೋದನೆ ಮಾಡಿದ್ದಾರೆ, ಒಬ್ಬಿಬ್ಬರು ಅಧ್ಯಾಪಕ ವರ್ಗದವರೂ ಕೂಡ ಪ್ರಚೋದನೆಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಈ ನನ್ನ ಅಭಿಪ್ರಾಯ ತಪ್ಪಿರಬಹುದು. ಇದು ನನಗೆ ಗೊತ್ತಾಗಿರುವ ವಿಷಯ. ಈ ರೀತಿ ಮಾಡುವುದು ಪಾಪಕರ ಎಂದು ಹೇಳುತ್ತೇನೆ. ವಿದ್ಯಾರ್ಥಿಗಳನ್ನು ಸನ್ಮಾರ್ಗದಲ್ಲಿ ಕರೆದುಕೊಂಡು ಹೋಗಲು ಪ್ರಯತ್ನ ಮಾಡಬೇಕು. ವಿದ್ಯಾರ್ಥಿಗಳು ಅವರ ವಿದ್ಯಾಭ್ಯಾಸದಲ್ಲಿ ಶ್ರದ್ಧೆ ಇಡಬೇಕೇ ಹೊರತು ಯೂನಿವರ್ಸಿಟಿಯ ಆಡಳಿತದಲ್ಲಿ ಕೈಹಾಕಬಾರದು. ಆದರೆ ವಿದ್ಯಾರ್ಥಿಗಳೂ ಆಡಳಿತದಲ್ಲಿ ಭಾಗವಹಿಸುವ ಕಾಲ ಬಂದಿದೆ, ಅವರು ಹಾಗೆ ಅದರಲ್ಲಿ ಭಾಗವಹಿಸಲು ಆಸಕ್ತಿ ತೋರಬಹುದು. ಆದರೆ ಸಂಯಮವಿರಬೇಕು. ಸ್ವಲ್ಪಮಟ್ಟಿಗೆ ವಿಮರ್ಶೆಮಾಡದೆ ದುಡುಕಿದ್ದಾರೆಂದು ಕಾಣುತ್ತದೆ. ಹಾಗೆ ಮಾಡಿದ್ದಾರೋ ಇಲ್ಲವೋ ಪರಿಶೀಲಿಸೋಣ. ಶಾಸನಸಭಾ ಸದಸ್ಯರು ಮತ್ತು ವಿದ್ಯಾರ್ಥಿಗಳ ತಂದೆತಾಯಿಗಳು ವಿದ್ಯಾರ್ಥಿಗಳ ಮುಷ್ಕರವನ್ನು ನಿಲ್ಲಿಸಿ ಶಾಂತಿ ಸ್ಥಾಪನೆ ಮಾಡಲು ಸಹಾಯಮಾಡಬೇಕು ಎಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಜಿ. ವಿ. ಅಂಜನಪ್ಪ.—ಕೆಲವರು ರಾಜಕಾರಣಿಗಳು ಇದರಲ್ಲಿ ಕೈಹಾಕಿದ್ದಾರೆ ಎಂದು ಮಾನ್ಯ ಸಚಿವರು ಹೇಳಿದರು. ಅವರು ಯಾರು ಎಂಬುದು ಗೊತ್ತಿದ್ದರೆ ಅವರ ಹೆಸರನ್ನು ಹೇಳುವುದಕ್ಕೆ ಏಕೆ ಹಿಂಜರಿಯುವುದು ? ಜನರ ಮುಂದೆ ದೇಶದ ಮುಂದೆ ಅಂಥವರ ಹೆಸರುಗಳನ್ನು ಇಟ್ಟರೆ ಒಳ್ಳೆಯದು.

ಶ್ರೀ ಕೆ. ವಿ. ಶಂಕರಗೌಡ.—ಕೆಲವರ ಕೈವಾಡವಿದೆಯೆಂದು ಹೇಳಿದೆ, ಹೆಸರು ಹೇಳುವುದು ಕಷ್ಟ, ಹೇಳುವುದು ಬೇಡ.

Mysore Sales Tax (Second Amendment) Bill, 1969
As passed by the Legislative Assembly
Motion to Consider

Mr. DEPUTY CHAIRMAN.—Now Bills for consideration.

Sri K. PUTTASWAMY.—Sir, on behalf of the Finance Minister, I beg to move.

> "That the Mysore Sales Tax (Second Amendment) Bill, 1969 as passed by the Legislative Assembly, be taken into consideration."

Mr. DEPUTY CHAIRMAN.—Motion moved.

> "That the Mysore Sales Tax (Second Amendment) Bill, 1969 as passed by the Legissative Assembly, be taken into consideration."

Sri K. PUTTASWAMY.—Sir, the necessity for this amendment arose as a result of decision of our High Court in Venkatachalapathy *vs.* Commercial Tax Inspector and others. The High Court while upholding the validity of Sub Sections (1), (2) and (3) of Section 28-A, have struck down the provisions of Sub-Sections (4) (5), (6) and (7), that necessiitated this amendment. This amendment seeks to uphold Sub-Sections (4), (5), (6) and (7) of Section 28-A and substituting the same by other Sub-Sections for leavy of penalty, the limits up to which the penalty may be levied, the procedure to be followed when the penalty is not paid, and an appeal by the aggrieved person. I am sure that the House knows that Section 28-A deals with the checkposts. These provisions are necessary and as I have already submitted the necessity has arisen on account of the decision of the High Court. I am sure the House will accord its unanimous approval for this Amending Bill.

† ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಮಾನ್ಯ ಸಭಾಪತಿಗಳೇ, ಈಗ 9 ಚೆಕ್ ಪೋಸ್ಟುಗಳನ್ನು ನಿರ್ಮಾಣಮಾಡಿದ್ದಾರೆ, ಮಂಗಳೂರಿನಲ್ಲಿ ಒಂದಿದೆ. ಇದರಿಂದ ಶೇಕಡ 50 ರಷ್ಟು ರೆವೆನ್ಯೂ ಜಾಸ್ತಿಯಾಗಿ ಬರುತ್ತಿದೆ, ಮಂಗಳೂರಿನಲ್ಲಿ ಹಾಗೆ ಬರುತ್ತಿದ್ದರೂ ಬೇರೆ ಕಡೆ ರೆವೆನ್ಯೂ ಹೆಚ್ಚಾಗಿಲ್ಲ. ಇದಕ್ಕೆ ಕಾರಣವೇನೆಂಬುದನ್ನು ಸರಕಾರ ಗಹನವಾಗಿ ವಿಚಾರಮಾಡಬೇಕು. ಇಲ್ಲಿಯವರೆಗೆ ಪೋಲೀಸು ಅಧಿಕಾರಿಗಳು ಅಲ್ಲಿ ಹಣ ವಸೂಲುಮಾಡುತ್ತಿದ್ದರು. ಇಂದು ಚೆಕ್ ಪೋಸ್ಟುಗಳಲ್ಲಿ ಮಾನ್ಯ ಸಚಿವರು ಸ್ಪೆಷಲ್ ಸೆಲ್ ಆದರೂ ಮಾಡಿ ಎಷ್ಟು ಹಣ ಪೋಲಾಗುವುದು ಎಂಬುದನ್ನಾದರೂ ಕಂಡುಹಿಡಿಯಬೇಕು. ಹಾಗೆ ಮಾಡಿ ಸರಕಾರಕ್ಕೆ ಬರಬೇಕಾದ ಹಣ ಪೋಲಾಗದಂತೆ ಸರಿಯಾಗಿ ಬರುವಂತೆ ನೋಡಿಕೊಳ್ಳಬೇಕು. ಕೆಲವರು ಸರಕುಗಳನ್ನು ತರುವಾಗ ಸೇಲ್ಸ್ ಟ್ಯಾಕ್ಸ್ ಕೊಡದೆ ತಪ್ಪಿಸಿಕೊಳ್ಳುತ್ತಿರುವುದರಿಂದ ಸರಕಾರದ ಹಣ ಪೋಲಾಗುತ್ತಿದೆ. ಆದುದರಿಂದ ಚೆಕ್‌ಪೋಸ್ಟುಗಳಲ್ಲಿ ಅವ್ಯವಹಾರವಿರುವುದನ್ನು ಬಹಳ ಜಾಗರೂಕತೆಯಿಂದ ಸರಕಾರ ನೋಡಬೇಕು ಮತ್ತು ಅದರ ಬಗ್ಗೆ ಪ್ರತಿವಾರ ತನಿಖೆಮಾಡಬೇಕು ಎಂಬ ಅಭಿಪ್ರಾಯವಿದೆ. ದವಸಧಾನ್ಯಗಳ ಬೆಲೆ ಹೆಚ್ಚು ಕಡಮೆಯಾದರೆ ಸೇಲ್ಸ್‌ಟ್ಯಾಕ್ಸ್ ಕೊಡದೆ ತಪ್ಪಿಸಿಕೊಳ್ಳುವುದಕ್ಕೆ ಅನೇಕ ವಿಧವಾದ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದಾರೆ. ಒಂದು ಲಾರಿ ಬಂದರೆ ಇಷ್ಟು ಹಣ ಕೊಡಬೇಕೆಂದು ಗೊತ್ತುಮಾಡಿಕೊಂಡಿದ್ದಾರೆ. ಚೆಕ್‌ಮಾಡುವಾಗ ಗಂಟೆಗಟ್ಟಲೆ ತಡಮಾಡುವುದರಿಂದ, ಕನಿಷ್ಠ 5 ರೂಪಾಯಿ ಕೊಡದಿದ್ದರೆ ಲಾರಿ ಬಿಡದಿರುವುದರಿಂದ ಜನರು ಹಣ ಕೊಟ್ಟು ತಮ್ಮ ಕೆಲಸವನ್ನು ಬೇಗ ಮಾಡಿಕೊಂಡು ಹೋಗುತ್ತಿದ್ದಾರೆ. ಚೆಕ್ ಪೋಸ್ಟುಗಳಲ್ಲಿ ಪ್ರತಿ ದಿವಸ ಕನಿಷ್ಠ 500 ರೂಪಾಯಿಗಳನ್ನು ವಸೂಲುಮಾಡುತ್ತಿದ್ದಾರೆ. ಈ ರೀತಿ ಕೆಲಸ ಕಡಿಮೆಮಾಡಿ ಆದಾಯ ಹೆಚ್ಚಾಗಿ ಪಡೆಯುತ್ತಿದ್ದಾರೆ ಮತ್ತು ಹೀಗೆ ಕೆಲವರು ಹೆಚ್ಚು ಟ್ಯಾಕ್ಸ್ ಕೊಡುವುದನ್ನು ತಪ್ಪಿಸಿಕೊಳ್ಳುತ್ತಿದ್ದಾರೆ.

(ಶ್ರೀ ಎ. ಎಚ್. ಶಿವಾನಂದಸ್ವಾಮಿ)

ಇದರ ಬಗ್ಗೆ ಸರಿಯಾದ ಬಂದೋಬಸ್ತು ಮಾಡಬೇಕು. ಈ ರೀತಿ ತಪ್ಪಿಸಿಕೊಳ್ಳುವುದಕ್ಕೆ ಪೆನಾಲ್ಟಿ ಹಾಕುತ್ತೇವೆ, ಪೆನಾಲ್ಟಿ ಎಷ್ಟು ಹಾಕಬೇಕು, ಅದನ್ನು ವಸೂಲು ಮಾಡುವ ವಿಧಾನ ಹೇಗಿರಬೇಕು ಎಂಬ ವಿಚಾರದಲ್ಲಿ ಬಿಲ್ಲನ್ನು ತಂದಿದ್ದೇವೆ ಎಂದು ಮಂತ್ರಿಗಳು ಹೇಳಿದರು. ಇದುವರೆಗೆ ತೆರಿಗೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿದ್ದುದನ್ನು ತಪ್ಪಿಸಿ ಹಾಗೆ ತಪ್ಪಿಸಿಕೊಂಡಾಗ ದಂಡ ವಿಧಿಸುವುದಕ್ಕೆ ಈ ತಿದ್ದುಪಡಿ ವಿಧೇಯಕವನ್ನು ತಂದಿದ್ದಾರೆ. ಇದರ ಪ್ರಕಾರ ತೆರಿಗೆ ತಪ್ಪಿಸಿಕೊಳ್ಳುವ ಸಂದರ್ಭದಲ್ಲಿ ಮಾಲನ್ನು ವಶಪಡಿಸಿಕೊಂಡರೆ ಅದನ್ನು ಸುರಕ್ಷಿತವಾಗಿಡಲು ಚೆಕ್‌ಪೋಸ್ಟುಗಳಲ್ಲಿ ವೇರ್‌ಹೌಸಸ್ ಇರಬೇಕು. ಅದಕ್ಕೇನು ವ್ಯವಸ್ಥೆ ಮಾಡುವರೋ ಗೊತ್ತಿಲ್ಲ. ಅದಕ್ಕೆ ವಿವರಣೆ ಕೊಟ್ಟಿಲ್ಲ. ಹೀಗೆ ಕಾಂಪ್ಲಿಕೇಟ್ ಮಾಡಿ ಇರುವ ಸಮಸ್ಯೆಯನ್ನು ಬೃಹದಾಕಾರವಾಗಿ ಬೆಳೆಸುವುದರಿಂದ ಹೆಚ್ಚು ಲಂಚರುಷುವತ್ತಿಗೆ ಅವಕಾಶವಾಗುವುದು. ಮೊದಲು ಚೆಕ್ ಪೋಸ್ಟುಗಳಲ್ಲಿ ಅವ್ಯವಹಾರ ತಡೆಗಟ್ಟಬೇಕು. ಅದನ್ನು ಮಾಡುವವರೆಗೆ ಸರ್ಕಾರಕ್ಕೆ ಆದಾಯ ಸರಿಯಾಗಿ ಬರುವುದಿಲ್ಲ. ಅದಕ್ಕಾಗಿ ಸರ್ಕಾರದವರು ಈ ಬಗ್ಗೆ ಒಂದು ಸರಿಯಾದ ರೀತಿಯಲ್ಲಿ ಇದನ್ನು ನಡೆಸಿಕೊಂಡು ಹೋಗುವುದಕ್ಕೆ ತಕ್ಕ ವಿಧಾನವನ್ನು ಕಂಡುಹಿಡಿಯಬೇಕೆಂದು ನಾನು ಸೂಚಿಸಬಯಸುತ್ತೇನೆ. ಏಕೆಂದರೆ, ಈಗಿರುವ ಸೇಲ್ಸ್‌ಟ್ಯಾಕ್ಸ್ ವಸೂಲು ಮಾಡುವ ವಿಧಾನವೇನಿದೆಯೋ ಅದು ಡಿಪಾರ್ಟ್‌ಮೆಂಟಿನಲ್ಲಿ ಸರಿಯಿಲ್ಲ. ಅಲ್ಲಿ ಸರಿಯಾದ ರೀತಿಯಲ್ಲಿ ನಡೆಯುವುದಿಲ್ಲವೆಂದು ಅರ್ಥವಾಗುತ್ತದೆ. ಮುನಿಸಿಪಲ್ ಆಕ್ಟ್ರಾಯಿ ಕೊಟ್ಟು ಯಾವ್ಯಾವ ಟ್ಯಾಕ್ಸಬಲ್ ಕಮಾಡಿಟೀಸ್ ಹೋಗುತ್ತವೋ ಅವುಗಳ ಬಗ್ಗೆ ಕ್ರಾಸ್ ರೆಫರೆನ್ಸಸ್ ಇದ್ದರೆ ಅವುಗಳನ್ನು ನೋಡಿಕೊಂಡು ತೆರಿಗೆ ವಸೂಲು ಮಾಡಿದರೆ ಟ್ಯಾಕ್ಸ್ ಎವೇಡಿಂಗ್ ಆಗುವುದು ಅದರಿಂದ ತಪ್ಪಿ ಹೋಗುತ್ತದೆಂದು ನಾನು ಹೇಳುತ್ತೇನೆ. ಈಗ ಚೆಕ್‌ಪೋಸ್ಟ್ ಇರುವಕಡೆ ಟ್ಯಾಕ್ಸ್ ಎವೇಡ್ ಮಾಡುವುದಕ್ಕೆ ಸಾಧ್ಯವಿರುವವರು ಅವರೇ ಸಲೀಸಾಗಿ ಹಣ ಕೊಟ್ಟು ಮುಂದೆ ಹೋಗುತ್ತಾರೆ. ಆದ್ದರಿಂದ ಸ್ಪೆಷಲ್ ಸೆಲ್ ಮಾಡಿ ಕ್ರಾಸ್ ರೆಫರೆನ್ಸಸ್ ಬರುವ ಹಾಗೆ ಮಂತ್ರಿವರ್ಯರು ಮಾಡಬೇಕೆಂದು ನಾನು ಹೇಳುತ್ತೇನೆ.

ಅಲ್ಲದೆ ತೆರಿಗೆ ಕೊಡದೆ ಇರುವುದಕ್ಕೆ ಪೆನಲ್ಟಿ ಹಾಕಿ ಮಾಲನ್ನು ಇಟ್ಟುಕೊಳ್ಳುವ ವಿಧಾನ ಬಹಳ ತಪ್ಪು. ಇದಕ್ಕೆ ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ. ಇದಕ್ಕಾಗಿ ವೇರ್‌ಹೌಸ್ ಮಾಡಬೇಕು. ಪೆನಲ್ಟಿ ವಸೂಲುಮಾಡುವ ಬಗ್ಗೆ ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ವಸೂಲುಮಾಡುವಂತಹ ವಿಧಾನವನ್ನು ಅನ್ವಯಿಸಬೇಕೆಂದು ಹೇಳುತ್ತೇನೆ.

ಇಷ್ಟು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಟಿ. ರಾಮಯ್ಯಗೌಡ.—ಸಭಾಪತಿಗಳೇ, ನಮ್ಮ ಮುಂದೆ ಇರತಕ್ಕ ಈ ಸೇಲ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್ಲನ್ನು ಈಗ 8 ಗಂಟೆ ರಾತ್ರಿಯಲ್ಲಿ ಮುಗಿಸಬೇಕೆಂದು ಹೇಳಿದರೆ ಅದು ನನಗೆ ಸರಿಯೆಂದು ಕಾಣುವುದಿಲ್ಲ. ಸರ್ಕಾರದವರಿಗೆ ಈ ಮಾರಾಟ ತೆರಿಗೆಯಿಂದ 35 ಕೋಟಿ ರೂಪಾಯಿಗಳು ಬಂದರೂ ಅದನ್ನು ಕೊಡತಕ್ಕವರಿಗೇ ಆಗಲೀ ಅಥವಾ ಅದನ್ನು ಯಾರ ಮೇಲೆ ಹೊರಿಸುತ್ತೀರೋ ಅವರಿಗಾಗಲೀ ಅನುಕೂಲತೆಗಳನ್ನು ಮಾಡಿಕೊಡಬೇಕೆಂದು ಹೇಳಿದರೆ ಅತ್ತಕಡೆಗೆ ಸರ್ಕಾರ ಏನೂ ಗಮನ ಕೊಡುತ್ತಾ ಇಲ್ಲ.

ನಾನು ಚೆಕ್‌ಪೋಸ್ಟ್ಸ್ ವಿಷಯ ಹೇಳಬೇಕಾಗಿದೆ. ಅಡಿಕೆ ವಿಷಯ ತೆಗೆದುಕೊಂಡರೆ, ನಾಲ್ಕು ಚೆಕ್‌ಪೋಸ್ಟ್‌ಗಳಲ್ಲಿ ತೆರಿಗೆ ಕೊಡಬೇಕು. ರೆಸಿಪ್ರೋಕಲ್ ವ್ಯವಸ್ಥೆ ಇಟ್ಟುಕೊಂಡಿಲ್ಲ. ನಮ್ಮಲ್ಲಿಂದ ಆಂಧ್ರಕ್ಕೆ ಅಥವಾ ಮದ್ರಾಸಿಗೆ ಅಡಿಕೆ ಕಳುಹಿಸಬೇಕಾದರೆ, ನಾಲ್ಕು ಕಡೆ ಬಿಲ್ಲುಗಳನ್ನು ತೋರಿಸಬೇಕು. ಅದು ಎಲ್ಲರಿಗೂ ಒಪ್ಪುವಂತೆ ಒಂದೇ ನಮೂನೆಯಾಗಿದ್ದರೆ ವ್ಯಾಪಾರಸ್ಥರಿಗೆ ಅದರಿಂದ ತೊಂದರೆ ತಪ್ಪುತ್ತದೆ. ಇದನ್ನು ಮಾಡಬೇಕೆಂದು ಎಷ್ಟು ಹೇಳಿದರೂ ಇದುವರೆಗೆ ಅದರ ಕಡೆ ಗಮನ ಕೊಟ್ಟಿಲ್ಲ. ಈಗ ಟ್ಯಾಕ್ಸ್ ಬೇರೆ ಜಾಸ್ತಿಯಾಗಿದೆ. ಮದ್ರಾಸಿಗೆ ಹೋಗುವಾಗ ಮಲ್ಟಿಪಲ್ ಯೂನಿಟ್ಸ್‌ನಲ್ಲಿ ಟ್ಯಾಕ್ಸ್ ಹಾಕುವುದರಿಂದ ಇನ್ನೂ ಜಾಸ್ತಿ ತೆರಿಗೆ ಕೊಡಬೇಕಾಗಿ ಬರುತ್ತದೆ. ಈಗ ಹೈಕೋರ್ಟಿನಲ್ಲಿ ಜಡ್ಜ್‌ಮೆಂಟ್ ಬಂತು ಎಂದು ಹೇಳಿ ಒಂದು ಬಿಲ್ ತಂದಿದ್ದಾರೆ. ಅದರ ತೆರಿಗೆ ಕೊಡತಕ್ಕವರ ಹಿತದೃಷ್ಟಿಯಿಂದ, ಕನ್‌ಸ್ಯೂಮರ್ಸ್ ಹಿತದೃಷ್ಟಿಯಿಂದ ಯೋಚನೆಮಾಡಿ ಒಂದು ಕಾಂಪ್ರಹೆನ್ಸಿವ್ ಬಿಲ್ ತಂದರೆ ಒಳ್ಳೆಯದು. ಮಾನ್ಯ ಶ್ರೀ ಶಿವಾನಂದಸ್ವಾಮಿಯವರು ಹೇಳಿದ ಹಾಗೆ ಚೆಕ್ ಪೋಸ್ಟ್ಸ್ ಮಾಡುವುದರಿಂದ ಸುಖವಿಲ್ಲ. ಒಂದು ಪ್ರಿಂಟೆಡ್ ಫಾರಂನಲ್ಲಿ ಒಂದು ಬಿಲ್ ಬರೆಯಬೇಕಾದರೆ, ಅದು ತಮಿಳಿನಲ್ಲಿ, ತೆಲುಗಿನಲ್ಲಿ, ಕನ್ನಡದಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ಪ್ರಿಂಟಾಗಿ ಇರಬೇಕು. ಇಲ್ಲದಿದ್ದರೆ ಚೆಕ್ ಪೋಸ್ಟ್‌ನಲ್ಲಿರುವವರು ಅದನ್ನು ಒಪ್ಪುವುದಿಲ್ಲ. ಇದೇ

ಬಗ್ಗೆ ನೀವೇನಾದರೂ ಕೇರಳದವರೊಡನೆ ಅಥವಾ ಆಂಧ್ರದವರೊಡನೆ ಮಾತುಕತೆ ನಡೆಸಿದ್ದೀರಾ? ಒಂದೇ ತರಹ ಬಿಲ್ ಫಾರಂ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆಂದು ಹೇಳಿ ನಾಲ್ಕು ವರ್ಷಗಳಾದುವು. ಇದುವರೆಗೂ ಏನೂ ಮಾಡಲಿಲ್ಲ. ಆದ್ದರಿಂದ ವ್ಯಾಪಾರಸ್ಥರಿಗೆ ನ್ಯಾಯವಾಗಿದ್ದರೆ ತೆರಿಗೆ ಕೊಡುವವರಿಗೆ ನ್ಯಾಯವಾಗಿದ್ದರೆ ಮಾತ್ರ ಇಂತಹ ಮಸೂದೆಯನ್ನು ಜಾರಿಗೆ ತರಬೇಕು.

ಇನ್ನು ಹೆನಾಲ್ಕು ವಿಷಯ. ಲಾರಿಯಲ್ಲಿ ಮೂಟೆ ಬರುತ್ತದೆ. ಅದನ್ನು ಚೆಕ್‌ಪೋಸ್ಟ್‌ನಲ್ಲಿ ಒಂದು ಸಾರಿ ಅನ್‌ಲೋಡ್ ಮಾಡಿದರೆ 20 ರೂಪಾಯಿಗಳವರೆಗೂ ಖರ್ಚಾಗುತ್ತದೆ. ಅಂದಮೇಲೆ ಮೂರು ಚೆಕ್ ಪೋಸ್ಟ್ಸ್ ಇವೆಯೆಂದರೆ, ಒಂದೊಂದು ಸಾರಿ ಲೋಡಿಂಗ್ ಮತ್ತು ಅನ್‌ಲೋಡಿಂಗಿಗೆ 20 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ನಮ್ಮಲ್ಲಿ ಲೂಪ್‌ಹೋಲ್ಸ್ ಇರುತ್ತದೆ. ಅದನ್ನು ಸರಿಪಡಿಸಿಕೊಂಡರೆ ಯಾವ ಚೆಕ್‌ಪೋಸ್ಟ್ಸ್ ಬೇಕಿಲ್ಲ. ಆದ್ದರಿಂದ ಸರ್ಕಾರಕ್ಕೆ ಏನು ಹೇಳುತ್ತೇನೆಂದರೆ ವ್ಯಾಪಾರಸ್ಥರು ಏನು ಕುಂದುಕೊರತೆಗಳನ್ನು ಹೇಳಿದ್ದಾರೋ ಅವನ್ನು ನಿವಾರಿಸುವುದಕ್ಕೆ ಪ್ರಯತ್ನ ಪಡಬೇಕು. ಇಲ್ಲದಿದ್ದರೆ ಆಂಧ್ರ, ಮದ್ರಾಸ್, ಕೇರಳ ಮತ್ತು ಮೈಸೂರುಗಳಲ್ಲಿರತಕ್ಕ ನಾಲ್ಕು ಚೆಕ್ ಪೋಸ್ಟ್ಸ್‌ಗಳಿಂದ ಬಹಳ ತೊಂದರೆ ಪಡಬೇಕಾಗುತ್ತದೆ. ಈಗ ಏನಾಗಿದೆಯೆಂದರೆ, ಲಾರಿಯವರಿಗೆ ಬಿಲ್‌ಕೊಟ್ಟು ಟ್ಯಾಕ್ಸ್‌ಕೊಟ್ಟು, ಲೋಡಿಂಗ್ ಮತ್ತು ಅನ್‌ಲೋಡಿಂಗ್ ಚಾರ್ಜಸ್ ಎಲ್ಲವನ್ನೂ ಕೊಟ್ಟು ಕಳುಹಿಸುತ್ತಿದ್ದಾರೆ. ಆದ್ದರಿಂದ ಆದಷ್ಟು ಜಾಗ್ರತೆಯಾಗಿ ಈ ನಾಲ್ಕು ಸಂಸ್ಥಾನಗಳವರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಒಂದೇ ತರಹ ವೇ ಬಿಲ್ ಇರುವಂತೆ ಏರ್ಪಾಡು ಮಾಡಬೇಕು. ಇನ್ನು ಅಸಿಸ್ಟೆಂಟ್ ಸೇಲ್ಸ್‌ಟ್ಯಾಕ್ಸ್ ಆಫೀಸರ ವಿಷಯ ಹೇಳಿದ್ದಾರೆ. ಅರ್ಧರಾತ್ರಿಯಾದರೂ ಬಿಲ್ ಕೊಟ್ಟಮೇಲೆ ಸೆಕ್ಷನ್ 28 (ಬಿ) ಪ್ರಕಾರ ಅವರು ಹೇಳಿದಂಥ ರಿಕಾರ್ಡ್ಸ್‌ನ್ನು ತಂದುಕೊಡಬೇಕು. ಒರಿಜಿನಲ್ ಬಿಲ್ಲನ್ನು ಮೈಸೂರಿನವರು, ಆಂಧ್ರದವರು, ಕೇರಳದವರು ಮತ್ತು ಮದ್ರಾಸಿನವರು ಕೇಳಿದರೆ ಎಷ್ಟು ಒರಿಜಿನಲ್ ಬಿಲ್‌ಗಳನ್ನು ಕಳುಹಿಸುವುದಕ್ಕೆ ಸಾಧ್ಯ? ಅದರಿಂದ ಬಹಳ ತೊಂದರೆಗಳಿವೆ. ಅದಕ್ಕಾಗಿ ಸರ್ಕಾರದವರು ಇದನ್ನು ಕೂಲಂಕಷವಾಗಿ ಪರಿಶೀಲನೆಮಾಡಿ ಅವರ ತೊಂದರೆಗಳನ್ನು ಆದಷ್ಟು ಜಾಗ್ರತೆ ನಿವಾರಣೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

8.00 P.M.

† ಕೆ. ಸೂರ್ಯನಾರಾಯಣ ಅಡಿಗ.—ಸ್ವಾಮಿ, ನಾನು ಹೆಚ್ಚೇನು ಮಾತನಾಡುವುದಿಲ್ಲ. ನಮ್ಮ ಮಂಗಳೂರು ಜಿಲ್ಲೆಯಲ್ಲಿ ಈ ಟ್ಯಾಕ್ಸ್‌ಗಳು ಎಲ್ಲಾ ಸೋರಿ ಹೋಗುತ್ತಿತ್ತು. ಈಗ ಅಲ್ಲಿ ಚೆಕ್ ಪೋಸ್ಟ್‌ಗಳನ್ನು ಹಾಕಿದ ಮೇಲೆ ಸರ್ಕಾರಕ್ಕೆ ಆದಾಯವೂ ಜಾಸ್ತಿಯಾಗಿ ಬರುತ್ತಿದೆ. ಮಂಗಳೂರಿನಲ್ಲಿ ಯಾವ ರೀತಿಯಲ್ಲಿ ಮಾಡಿದ್ದಾರೋ, ಅದೇ ರೀತಿಯಲ್ಲಿ ಇತರ ಕಡೆಗಳಲ್ಲಿಯೂ ಎಲ್ಲೆಲ್ಲಿ ಹೀಗೆ ಸರ್ಕಾರಕ್ಕೆ ಬರುವಂತಹ ಆದಾಯಗಳು ಸೋರಿ ಹೋಗುತ್ತವೆ ಅದನ್ನು ತಡೆಗಟ್ಟಲು ಜನರಿಗೆ ತೊಂದರೆಯಾಗದ ರೀತಿಯಲ್ಲಿ ಚೆಕ್‌ಪೋಸ್ಟ್‌ಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಮಾತ್ರ ನಾನು ಹೇಳಬಯಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ಮೇಲೆ ಮಾತನಾಡುವಂತಹ ಸಮಯದಲ್ಲಿ ಮಾನ್ಯ ಸದಸ್ಯರೆಲ್ಲ ಉಪಯುಕ್ತವಾದ ಸಲಹೆಗಳನ್ನು ಕೊಟ್ಟು ಪರಿಶೀಲನೆ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಸರ್ಕಾರದವರು ಪರಿಶೀಲನೆ ಮಾಡಿ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಲು ಸರ್ಕಾರದವರು ಒಂದು ಸಮಿತಿ ಕೂಡ ಮಾಡಿದ್ದಾರೆ. ಮತ್ತು ಈ ತೆರಿಗೆಯನ್ನು ವಸೂಲು ಮಾಡುವಾಗ ಸುಲಭವಾಗಿ ವಸೂಲು ಮಾಡಬೇಕೆನ್ನುವುದು ಒಳ್ಳೆಯ ಉಪಯುಕ್ತವಾದ ವಿಚಾರವಾಗಿದೆ. ಆದರೆ ಅದು ಹೇಗೆ ಎಂದು ಹೇಳುವುದು ಕಷ್ಟ. ಅದಕ್ಕೆ ಈ ಸಮಿತಿಯನ್ನು ಮಾಡಿದ್ದಾರೆ. ಅದು, ಬಹುಶಃ ಮಾನ್ಯ ಸದಸ್ಯರು ಹೇಳಿದಂತಹ ಸಲಹೆಗಳನ್ನು ಪರಿಶೀಲನೆ ಮಾಡುತ್ತದೆ ಎನ್ನುವ ಭರವಸೆಯನ್ನು ಕೊಡುತ್ತೇನೆ. ಮಾನ್ಯ ಶಾಮಯ್ಯಗೌಡರು, ನಾಲ್ಕು ಕಡೆ ಒರಿಜಿನಲ್ ಬಿಲ್ ಕೇಳುತ್ತಾರೆಂದು ಹೇಳಿದರು. ನಾನಾದರೂ ಹೇಳುತ್ತೇನೆ, ನಮ್ಮ ವ್ಯಾಪಾರಸ್ಥರು ಹಾಗೆ ಕೊಡಲು ಸಮರ್ಥರಿದ್ದಾರೆ, ನಾಲ್ಕು ಕಡೆ ಒರಿಜಿನಲ್ ಬಿಲ್ ಕೊಡಬಲ್ಲರು. ನಾವು ಎಷ್ಟೇ ಗಮನ ಕೊಟ್ಟು ಶ್ರೀಮಾನ್ ಶಾಮಯ್ಯಗೌಡರು ಹೇಳಿದಂತಹ ಸಲಹೆಗಳನ್ನು ಪಡೆದು ಕಾನೂನು ಮಾಡಿದರೂ, ತಪ್ಪಿಸಿಕೊಂಡು ಹೋಗುವವರು, ರಂಗೋಲೆ ಕೆಳಗೂ ತಪ್ಪಿಸಿಕೊಂಡು ಹೋಗುತ್ತಾರೆ. ಅದು ನ್ಯಾಷನಲ್ ಕ್ಯಾರೆಕ್ಟರಿಗೆ ಸಂಬಂಧಪಟ್ಟ ವಿಷಯವಾಗಿದೆ. ಅದು ಕಾಲಕ್ರಮೇಣ ಸರಿಹೋಗುತ್ತದೆಂದು ನಾನು ಭಾವಿಸುತ್ತೇನೆ. ನಮ್ಮ ಜನರು ಇಂದಲ್ಲ ನಾಳೆಯಾದರೂ

(ಶ್ರೀ ಕೆ. ಪುಟ್ಟಸ್ವಾಮಿ)

ತಾವು ನ್ಯಾಯವಾಗಿ ಕೊಡಬೇಕಾದ ತೆರಿಗೆಯನ್ನು ಯಾವ ಕಠಿಣವಾದ ಕ್ರಮವನ್ನೂ ತೆಗೆದು ಕೊಳ್ಳದೆ ಕೊಡತಕ್ಕ ಕಾಲ ಬರುತ್ತದೆ. ಇದರ ಬಗ್ಗೆ ಈಗತಾನೆ ಮಾನ್ಯ ಅಡಿಗರವರು ಹೇಳಿದರು, ಈಗ ಮಂಗಳೂರಿನಲ್ಲಿ ಚೆಕ್ ಪೋಸ್ಟ್ಸ್ ಹಾಕಿದರು, ಹಿಂದೆ ಅಲ್ಲಿ ಸೋರಿ ಹೋಗುತ್ತಿತ್ತು ಎಂದು. ಈಗ ಸರ್ಕಾರದವರು ಅದನ್ನು ವಸೂಲು ಮಾಡುತ್ತಿದ್ದಾರೆ. ಮತ್ತು ಶ್ರೀಮಾನ್ ಶಿವಾನಂದ ಸ್ವಾಮಿಯವರು ಹೇಳಿದರು, ಇಲ್ಲಿ ಲಂಚ ರುಷುವತ್ತು ಇವೆ ಎಂದು. ಪುನಃ ಆ ಮಾತು ಎತ್ತಿದರೆ, ನಾವು ನಮ್ಮ ರಾಷ್ಟ್ರ ನಡತೆಯ ವಿಚಾರ ಪ್ರಶ್ನೆ ಮಾಡಬೇಕಾಗಿದೆ. ಇದುವರೆಗೂ ಚೆಕ್ ಪೋಸ್ಟಿನಲ್ಲಿ ಕಮರ್ಷಿಯಲ್ ಟ್ಯಾಕ್ಸ್ ಇನ್‌ಸ್ಪೆಕ್ಟರ್ ಇದ್ದರು. ಇನ್ನು ಈ ಮಸೂದೆಯ ಪ್ರಕಾರ ಅಸಿಸ್ಟೆಂಟ್ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಮತ್ತು ಅವರ ಮೇಲೆ ಅಸಿಸ್ಟೆಂಟ್ ಕಮೀಷನರ್ ಆಫ್ ಕಮರ್ಷಿಯಲ್ ಟ್ಯಾಕ್ಸ್ ಆಫೀಸರು ಇರಬಹುದೆಂದು ಮಾಡಿದ್ದೇವೆ. ಆದರೆ ಚೆಕ್ ಪೋಸ್ಟು ಗಳಲ್ಲಿ ಚೆಕ್ಸ್ ಅಂಡ್ ಕೌಂಟರ್ ಚೆಕ್ಸ್ ಇರಬೇಕು. ಮಾನ್ಯ ಸದಸ್ಯರು ಹೇಳಿರತಕ್ಕ ಅಪಾದನೆ ಗಳನ್ನು ಗಮನದಲ್ಲಿಟ್ಟುಕೊಂಡು, ಕಮರ್ಷಿಯಲ್ ಡಿಪಾರ್ಟ್‌ಮೆಂಟಿನವರು ಚೆಕ್ಸ್ ಅಂಡ್ ಕೌಂಟರ್ ಚೆಕ್ಸ್ ಇಟ್ಟುಕೊಂಡಿದ್ದಾರೆ. ಈಗ ನ್ಯಾಯವಾಗಿ ಬರಬೇಕಾದಂತಹ ತೆರಿಗೆ ಬರುವಂತೆ ಮಾಡುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ. ಮಾನ್ಯ ಶಾಮಯ್ಯಗೌಡರು ಇದನ್ನು ಅರ್ಧ ರಾತ್ರಿಯಲ್ಲಿ ತಂದಿದ್ದಾರೆಂದು ಹೇಳಿದರು.

ಶ್ರೀ ಕೆ. ಟಿ. ಶಾಮಯ್ಯ ಗೌಡ.—ಹಾಗೆ ಅಲ್ಲ, ಇದನ್ನು ಧೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ, 8 ಗಂಟೆ ಸಮಯದಲ್ಲಿ ತಂದಿದ್ದೀರಿ ಎಂದು ಹೇಳಿದ್ದು.

ಶ್ರೀ ಕೆ. ಪುಟ್ಟಸ್ವಾಮಿ.—ಆಗಲಿ, ಮಾನ್ಯ ಸದಸ್ಯರು ಒಂದು ಸದಾಶಯದಿಂದ ಆ ರೀತಿಯ ಸಲಹೆ ಮಾಡಿದ್ದಾರೆ. ಅದನ್ನೆಲ್ಲಾ ಸರ್ಕಾರದವರು ಕೂಲಂಕಷವಾಗಿ ಪರಿಶೀಲನೆ ಮಾಡುತ್ತಾ ರೆಂದು ಭರವಸೆಯನ್ನು ಕೊಡುತ್ತೇನೆ. ಆದ್ದರಿಂದ ಈ ಸಭೆ ಈ ಮಸೂದೆಯನ್ನು ಒಪ್ಪಿಕೊಳ್ಳ ಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY CHAIRMAN.—The question is :

"That the Mysore Sales Tax (Second Amendment) Bill, 1969, as passed by the Legislative Assembly be taken into consideration."

The motion was adopted.

CLAUSES

Mr. DEPUTY CHAIRMAN.—Now the Bill will be taken clause by clause.

The question is :

"That Clauses 2 and 3 do stand part of the Bill."

The motion was adopted.

Clauses 2 and 3 were added to the Bill.

Mr. DEPUTY CHAIRMAN.—The question is :

"That clause 1, the long Title and the enacting formula do stand part of the Bill."

The motion was adopted.

Clause 1, the Title and the enacting formula were added to the Bill.

Motion to pass

SRI K. PUTTASWAMY.—I beg to move :

"That the Mysore Sales Tax (Second Amendment) Bill, 1969,as passed by the Legislative Assembly be passed."

MR. DEPUTY CHAIRMAN.—The question is :

"That the Mysore Sales Tax (Second Amendment) Bill, 1969, as passed by the Legislative Assembly, be passed."

The motion was adopted.

The House now adjourns and will meet at 8-30 a.m. tomorrow.

The House adjourned at Ten Minutes past Eight of the Clock to meet again at Thirty Minutes past Eight of the Clock on Friday the 12th September 1969.

WD 15633—GPL—600—30 6-1970